1949

1949

MISSING FILES

JAN - 1 APRIL

15 + 22 APRIL

6 MAY, 31 JUNE

8 JULY - 5 AUG.

9 SEPT - DECEM

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 48] ಕಾರ್ಕಳ 8—4—1949 [ಸಂಚಿಕೆ 14]

ಜಾತ್ಯತೀತ ಭಾರತದಲ್ಲಿ ಹಿಂದೂ ಸಂಸ್ಕೃತಿ

ಸರಕಾರದ ವಿರೋಧತ್ವವಿಲ್ಲ

ಗಾಂಧೀಜಿಯಿಂದ ಕಲಿಸಲ್ಪಟ್ಟ ತಾಳ್ಮೆಯ ತತ್ವ

"ಜಾತ್ಯಾತೀತ ಭಾರತದ ಉದ್ದೇಶವೇನೆಂಬುದರ ಕುರಿತು ಹಲವೆಡೆಗಳಲ್ಲಿ ತಪ್ಪು ಭಾವನೆಯು ಅಂಕುರಿಸಿರುತ್ತದೆ ಜಾತ್ಯಾತೀತ ರಾಷ್ಟ್ರದಲ್ಲಿ ಹಿಂದೂ ಸಂಸ್ಕೃತಿ ಧರ್ಮಗಳು ನಶಿಸಿ ಹೋಗುತ್ತವೆಂದೂ, ಆ ರಾಷ್ಟ್ರದ ಸರಕಾರ ಕೇವಲ ಲೌಕಿಕ ಅಭಿವೃದ್ಧಿಯತ್ತ ಹೆಜ್ಜೆನ ಗಮನ ಹಾಕುವಂತಹದಾಗಿ ಮಾನವ ಜೀವನದ ಉನ್ನತ ಪಾರಮಾರ್ಥಿಕ ಆಶೆ ಆಕಾಂಕ್ಷೆಗಳು ಮಣ್ಣಾಗೂಡುವುವೆಂದೂ, ಈ ಸಂಬಂಧವಾದ ದೊರುಗಳು ಕೇಳಿ ಬರುತ್ತವೆ ಜಾತ್ಯಾತೀತ ರಾಷ್ಟ್ರದ ಧ್ಯೇಯ ಪರಿಪೂರ್ಣತೆಯು ಹಿಂದೂ ಧರ್ಮ ಸಂಸ್ಕೃತಿಗಳ ರಕ್ಷಣೆ ಅಭಿವೃದ್ಧಿಯ ಮೂಲಕವೇ ಆಗಬೇಕೆಂಬುದನ್ನೂ, ಹಿಂದೂಧರ್ಮದ ಉದಾತ್ತ ತತ್ವಗಳನ್ನು ಕಾರ್ಯರೂಪಕ್ಕೆ ತಂದಾಗಲೇ ನಮ್ಮ ದೇಶವು ವಿಶ್ವ ಕೀರ್ತಿಗೆ ಅರ್ಹವಾಗುವುದೆಂದೂ ಆಗತಾನೆ ವಿಶ್ವ ಶಾಂತಿಯ ಉದ್ದೇಶವು ಸಾಧಿತವಾಗುವುದೆಂಬುದನ್ನು ಅವರು ಮರೆತಂತಿದೆ ''

ಹೀಗೆಂದು ನಾಗ್ಪುರ್ ಮಹಾ ವಿದ್ಯಾಲಯದ ಪ್ರೊಫೆಸರ್ ರಾಮನಾಥನ್ ಅವರು ಒರೆಯುತ್ತಾರೆ

ಸರಕಾರವು ಹೊರಗಿನ ಶತ್ರುಗಳಿಂದ ದೇಶವನ್ನು ರಕ್ಷಿಸಿ ಒಳಗಿನ ಪ್ರಜೆಗಳಿಗೆ ತಮ್ಮ ತಮ್ಮ ಧರ್ಮ ಸಂಸ್ಕೃತಿಗಳನ್ನು ಅನುಸರಿಸಿ ಅಭಿವೃದ್ಧಿ ಪಡಿಸಲು ಧ್ಯೇಯ ಬದ್ಧವಾಗಿರಬೇಕು ಪ್ರಜೆಗಳಲ್ಲಿ ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವದ ಪರಿಪೂರ್ಣ ವಿಕಾಸಕ್ಕೆ ಮುಟ್ಟುವಂತೆ ಅವನಿಗೆ ಬೇಕಾದ ಸ್ವಾತಂತ್ರ್ಯ ನೆಮ್ಮದಿಗಳು ದೊರೆಯುವಂತೆ ಮಾಡುವುದು ಪ್ರತಿಯೊಂದು ಸರಕಾರದ ಮೂಲ ಧ್ಯೇಯವಾಗಿರಬೇಕು ಹಾಗೆ ಪರಿಪೂರ್ಣತೆಯನ್ನು ಪಡೆಯಲು ವ್ಯಕ್ತಿಗೆ, ಅವನವನ ವಿಶ್ವಾಸದ ಧರ್ಮ ತತ್ವಗಳೇ ಸಾಧನಗಳಾಗಿರುತ್ತವೆ

ಇದರೆಲ್ಲಿ ಅಂತರೀಕ ಸ್ವಾತಂತ್ರ್ಯದ ಜೀವನ, ಮಾನವನ ಪ್ರತಿಭಾಶಕ್ತಿ ಸೃಜನಾಶಕ್ತಿಗಳನ್ನು ಉತ್ತೇಜಿಸುವುದು, ಕೊನೆಯಲ್ಲಿ ಅನಂತವಾದ ಪಾರಮಾತ್ಮ ಸಾನಿಧ್ಯವನ್ನು ಪಡೆಯಲೆಳೆಸುವುದು, ಇವೇ ಧರ್ಮ ಭಾವನೆಯ ತಿರುಳು ಮತ್ತು ಅಂತಿಮ ಧ್ಯೇಯಗಳಾಗಿವೆ. ಮನುಷ್ಯನನ್ನು ಸರಕಾರೀ ಕಾಯಿದೆಯ ಮೂಲಕ ನೀತಿವಂತನಾಗಿ ಮಾಡಲು ಸಾಧ್ಯವೇ ಇಲ್ಲ. ವ್ಯಕ್ತಿಯ ಮನಸ್ಸಿಗೆ ಒಪ್ಪುವ ಆಧ್ಯಾತ್ಮಿಕ ಧ್ಯೇಯಗಳೇ ಅವನನ್ನು ಧಾರ್ಮಿಕ ಭಾವನೆಯತ್ತ ಸಾಗಿಸಬಲ್ಲವು ಈ ಕುರಿತಾದ ಯಾವದೇ ಬಾಹ್ಯ ಬಲಂತ್ಕಾರ ಸಾಧನಗಳು ಅಧರ್ಮಿಕವೆಂದೆನಿಸಲ್ಪಡುವವು ಪಾತ್ರನಷ್ಟ, ಅವು ಅನಿಷ್ಟಕಾರಕವೂ ಆಗಿ ಪರಿಣಮಿಸವವು

ಧರ್ಮ ರಾಷ್ಟ್ರ

ಯಾವದಾದರೊಂದು ಧರ್ಮೀಕತತ್ವದ ಸ್ಫೂರ್ತಿಯಿಂದ ಆ ಧರ್ಮ ನಿರ್ದೇಶನ ಸಾರ ಸ್ಥಾಪಿಸಲ್ಪಟ್ಟ ಸರಕಾರದಡಿಯಲ್ಲಿ ಅನ್ಯ ಮತಸ್ಥರಿಗೆ ಜೀವನ ನಿರ್ವಹಿಸಲು ಅತ್ಯಂತ ಕಷ್ಟವಾಗಬಹುದು ಅಂಧಾ ರಾಷ್ಟ್ರವು ಇತರ ಧರ್ಮಾವಲಬಿಗಳಿಗೆ ರಕ್ಷಣೆ ಕೊಡುತ್ತದೆಂದು ಸಾರಿದರೆ ಅದು ಹೃತ್ಪೂರ್ವಕವಾಗಿದೂ ಅಲ್ಲಿ ವಿಶ್ವಾಸಾರ್ಹವೂ ಅಲ್ಲವೆಂದ ತಿಳಿಯಬೇಕು ನಡತೆಯಂತೆ ನಡೆಯಿರಬೇಕಾದರೆ ಒಂದು ರಾಷ್ಟ್ರವು ಧರ್ಮ ಭಾವನೆಯಲ್ಲಿ ಕೃಹಂಕದ ಜಾತ್ಯಾತೀತ ತತ್ವವನ್ನೇ ಅಪ್ಪಿಕೊಳ್ಳಬೇಕಾಗಿದೆ ಮತ್ತು ಹಾಗೆ ನಾಡಿದರೇನೆ ವಿಶ್ವ ಮಾನ್ಯತೆಯ ಆದರವೂ ದೊರಕುವವು

ಆದುದರಿಂದ ಭಾರತದ ಜಾತ್ಯಾತೀತತ್ವವು ಯಾವ ಧರ್ಮಕ್ಕೂ ವಿರೋಧವಾದುದಲ್ಲ ಸಂವಿಧಾನಕಾರಿಗಳಿಗೆ ಇದೇ ದೇಶದಲ್ಲಿ ಉದಯಿಸಿ ಅನೇಕ ಪತ್ಯೆಯನ್ನು ಪಡೆದ ವಿಶ್ವ ಧರ್ಮತತ್ವಗಳನ್ನೊಳಗೊಂಡಿದೆಂದು ಪ್ರತೀತಿಯಿರುವ ಹಿಂದೂ ಧರ್ಮವನ್ನು ಅಂತೂ ಇದು ಎಂದಿಗೂ ತಿರಸ್ಕಾರ ಭಾವದಿಂದ ಕಾಣಲು ಸಾಧ್ಯವಿಲ್ಲ ವ್ಯಷ್ಟಿಗೆ ಧಾರ್ಮಿಕ ಮತ್ತು ವ್ಯಾವಹಾರಿಕ ವಿಷಯಗಳಲ್ಲಿ ಸಂಪೂರ್ಣ ಸ್ವೇಚ್ಛೆಯನ್ನು ಕೊಡದಿದ್ದರೆ ಮತ್ತೆ ಅವನು ನಿಯಮ ಬದ್ಧ ಲೌಕಿಕ ಶಿಸ್ತಿಗೊಳಗಾಗಿ ವನ್ಯ ಜಂತು ವಿನೋಪಾಯ ಮೃಗೀಯ ಜೀವಿಯಾಗುತ್ತಾನೆ

ಅದೇ ಸಮಯಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಿಂದರೆ ಪರಮತ ದ್ವೇಷವೂ ಅಸಹಿಷ್ಣುತೆಯೂ ಅಲ್ಲ ವೆಂಬುದನ್ನು ನಾವು ಗಮನಿಸಬೇಕು ಹೀಗಾದರೆ ಇನ್ನೊಂದು ಅವಾಂತರಕ್ಕೆಡೆಯಾಗಿ ಧರ್ಮಗಳ ಮೂಲ ತತ್ವವಾದ ತಾಳ್ಮೆ ಅಹಿಂಸೆಗಳಿಗೆ ಕೊಡಲಿಬೀಳುವುದು, ಜಗತ್ತಿನ ಪ್ರತಿಯೊಂದು ರಾಷ್ಟ್ರವು ಒಂದಲ್ಲ ಒಂದು ನಿರ್ದಿಷ್ಟ ಧರ್ಮತತ್ವವನ್ನು ಸ್ವೀಕರಿಸಿ ತನ್ನ ಆಡಳಿತವನ್ನು ನಿರ್ವಹಿಸುವುದು ಕಂಡು ಬರುತ್ತದೆ ಆದರೆ ಯಾವ ಧರ್ಮಕ್ಕೂ ಒಳಪಡದ ನಿಷ್ಪಕ್ಷವಾತ ಆಡಳಿತ ನಿರ್ವಹಣೆಗೆ ಒಳಗಾದ ಒಂದೇ ರಾಷ್ಟ್ರ ಯಿಂದರೆ ಭಾರತವೆನ್ನಬೇಕು ಇವೆಲ್ಲಂದು ಧ್ಯೇಯವೇ ಭಾರತೀಯ ಸಂಸ್ಕೃತಿಯ ಶ್ರೇಷ್ಠತೆಯು ಸತೀಕವಾಗಿದೆಂಬ ಸಂಗತಿ ಸುವ್ಯಜಗತ್ತಿಗೆ ಸಾರುತ್ತದೆ.

ಹಿಂದೂ ಸಂಸ್ಕೃತಿಯೆಂದರೆ ಸಂಕುಚಿತ ಮನೋಭಿವೇಶವಲ್ಲ ಅದು ವಿಶಾಲವಾದ ಅಲದ ಮರದಂತೆ ಧಾರ್ಮಿಕವೆಂದಿಸಿಸುವ ಎಲ್ಲಾ ತತ್ವ ಧ್ಯೇಯಗಳಿಗೆ ತನ್ನಲ್ಲಿ ಆಶ್ರಯ ಕೊಡುವಂತಹದೆಂದು ನಮ್ಮ ಇತಿಹಾಸದ ಅಭ್ಯಾಸ ಮಾಡಿದವರಿಗೆಲ್ಲ ಸ್ಪಷ್ಟವಾಗಿ ತಿಳಿಯುತ್ತದೆ. ಆದಲ್ಲದೆ ಈಚೆಗೆ ಹಿಂದೂ ಧರ್ಮ ಸಂಸ್ಕೃತಿಗಳ ಉದ್ಧಾರಕರೆಂದು ಹೇಳಿಸಿಕೊಂಡವರಂತೆ ಅದರಲ್ಲಿ ಯಾವ ತರದ ಅನ್ಯಮತ ದ್ವೇಷಕ್ಕಾಗಲಿ, ಅವಿವೇಕದ ಆತುರಕ್ಕಾಗಿಯಾಗಲಿ ಎಡೆಯಿಲ್ಲ ಇದೇ ವಿಚಾರವನ್ನು ಮಹಾತ್ಮಾ ಗಾಂಧಿಯವರು ತಾಳ್ಮೆಯೆಂಬ ಒಂದು ನಾಣ್ಯದಲ್ಲಿ ಸಾರಿದರು ಎಲ್ಲರೂ ಅವರವರ ಧರ್ಮತತ್ವದ ನಿಜವಾದ ಸತ್ಯಸ್ಥಿತಿಯನ್ನು ತಿಳಿದು ನಡೆಸಿದರೆ ಯಾವ ದ್ವೇಷ ಭಾವನೆಗೂ ಆಸ್ಪದವಿಲ್ಲವೆಂದವರು ಸಾರಿದ್ದನ್ನು ನಾವು ಮನಗಾಣದಿರುವುದು ಜೀವಿತಕರ

ಹೊಸ ವರ್ಷದ ಅಭಿನಂದನೆ

ಮುಂಬಾಯಿಯ ಪ್ರಸಿದ್ಧ

ದೇವಕರಣ ನಾಥ್‌ಜಿ

ಜೀವನಿಮಾ ಕಂಪೆನಿಯ ಎಲ್ಲಾ ಪೊಲಿಸಿದಾರರಿಗೆ

ಮತ್ತು

ಕ್ಷೇತ್ರರಂಗದ ಕೆಲಸದಾರರಿಗೆ

❋ ಹೊಸ ವರ್ಷದ ❋

ಅಭಿವೃದ್ಧಿಯನ್ನು ಈ ಮೂಲಕ ಕೋರುತ್ತೇವೆ.

ಭೂಷಣ ಕುಮಾರ್ ಕೂಳೂರ್‌ಕಾರ್ ಮತ್ತು ಕಂಪೆನಿ

ದಕ್ಷಿಣ ಕನ್ನಡ, ಕೊಡಗು ಮತ್ತು ಕೊಡಗು ಪ್ರದೇಶಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ – ಮಂಗಳೂರು.

ಅಮೂಲ್ಯ ವಸ್ತುಗಳ ಕಳ್ಳ ಸಾಗಾಟ

ಕೆಲವು ಚತುರೋಪಾಯಗಳು

ಅಮೂಲ್ಯ ವಸ್ತುಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಒಯ್ಯಬೇಕಾದರೆ ತುಂಬಾ ಸುಂಕವನ್ನು ತೆರಬೇಕಾಗುವುದು. ಹಾಗೆ ಮಾಡಿದರೆ ಅವನ್ನು ಒಯ್ದು ಫಲವಿಲ್ಲದಾಗುವುದು. ಹೀಗೆ ಸುಂಕದ ಅಧಿಕಾರಿಗಳ ಕಣ್ಣಿಗೆ ಸುಣ್ಣ ಹಾಕಿ ವಂಚನೆ ಮಾಡಿ ಕಳ್ಳ ಸಾಗಾಟ ಮಾಡುವ ವೃತ್ತಿಯ ವರೇ ಜಗತ್ತಿನ ನಾನಾ ದೇಶಗಳಲ್ಲಿರುವರು ಆ ರೀತಿಯಲ್ಲಿ ವಸ್ತುಗಳನ್ನು ಸಾಗಿಸಲು ಪ್ರಯತ್ನಮಾಡಿ ಸಿಕ್ಕಿ ಬಿದ್ದ ಕೆಲವು ಘಟನೆಗಳು ಹೀಗಿವೆ:

ಇಂಗ್ಲೆಂಡಿನ ಪವನು ನೋಟುಗಳಿಗೆ ಇಟೆಲಿಯಲ್ಲಿ ಹೆಚ್ಚು ಮೌಲ್ಯ ಸಿಗುತ್ತದೆ. ಒಬ್ಬ ಆಂಗ್ಲ ಮಹಿಳೆಯು ತನ್ನ ಹೇಟಿನಲ್ಲಿ 30 ಪವನಿನ ನೋಟುಗಳನ್ನು ಹೊಲಿದು ಕೊಂಡಿದ್ದಳು ಅವಳಿಗೆ 65 ಪವನು ಜುಲ್ಮಾನೆ ವಿಧಿಸಲಾಯಿತು-ದೇಶದ ಹೊರಗೆ ಹಣ ಒಯ್ಯಲು ಪ್ರಯತ್ನಿಸಿದಕ್ಕೆ

ಪವನು ಮತ್ತು ಡೊಲರ್ ನೋಟುಗಳನ್ನು ಪರದೇಶಕ್ಕೆ ಒಯ್ಯಲು ಪೆಟ್ಟಿಗೆಗಳಿಗೆ ಎರಡೆರಡು ತಳ ಭಾಗವನ್ನು ಜೋಡಿಸುವರು, ಕೃತಕ ವುಸ್ತಕಗಳನ್ನು ಮಾಡುವರು. ಒಬ್ಬನು ತನ್ನ ದೇಹದ ಸುತ್ತಲು ಬಗ್ಗಿಸಿದ ತಗಡಿನ ನಳಿಗೆಗಳನ್ನು ತಗಲಿಸಿಕೊಂಡಿದ್ದ. ಅದರಲ್ಲಿ ಒಂದು ಗೆಲನ್ ಸುಂಕ ತೆರಬೇಕಾದ ಮಾದಕ ದ್ರವವಿತ್ತು

ಒಬ್ಬನು ಒಂದು ಮರದ ಕೈಯನ್ನು ಧರಿಸಿಕೊಂಡಿದ್ದ ಅದರಲ್ಲಿಳಿನಲ್ಲಿ ಕುಂಬ ಅಮೂಲ್ಯರತ್ನಾದಿಗಳಿದ್ದುವು ಯುದ್ಧದಲ್ಲಿ ನಿಜವಾಗಿ ಅವನ ಕೈ ಕತ್ತರಿಸಿ ಹೋಗಿತ್ತು ಮತ್ತೆ ಆತ ತನ್ನ ದುರ್ವಿಧಿಯಿಂದ ಒಳ್ಳೆ ಲಾಭವನ್ನೇ ಮಾಡಿದ ಒಂದೆರಡು ಸಲ ಅಧಿಕಾರಿಗಳು ಪರೀಕ್ಷಿಸಿ ನಿಜವಾಗಿ ಅವನಿಗೆ ಕೈಯೊಂದು ಇಲ್ಲವೆಂದು ಖಚಿತಗೊಂಡರು ಮತ್ತೆ ಹಲವು ಸಲ ಅವನು ಆ ಕಡೆ ಈ ಕಡೆ ಪ್ರಯಾಣ ಮಾಡುವಾಗ ಯಾರೂ ಅವನನ್ನು ಪರೀಕ್ಷಿಸುತ್ತಿರಲಿಲ್ಲ

ಒಬ್ಬ ಫ್ರೆಂಚ್ ಗೃಹಸ್ಥನು ಇಂಗ್ಲೆಂಡಿನಿಂದ ಹೊರ ಹೋಗುವಾಗ ತನ್ನ ಚಲ್ಲಣದೊಳಗೆ 96 ಬಂಗಾರದ ತಗಡುಗಳನ್ನೂ, 24 ಚಿನ್ನದ ಘಟ್ಟಿಗಳನ್ನೂ ಅಲ್ಲದೆ 1000 ಪವನಿನ ನೋಟುಗಳನ್ನು ಅಡಗಿಸಿಕೊಂಡಿದ್ದನೆಂಬ ಸಂಗತಿಯನ್ನು ನೀವು ನಂಬಲಿಕ್ಕಿಲ್ಲ. ಆದರೆ ಅವನು ಸಿಕ್ಕಿ ಬಿದ್ದ ಮೇಲೆ ಅದು ನಿಜವೆಂದು ತಿಳಿಯಿತು

ಸಾಬೂನು, ಹಲ್ಲು ಅಂಜನದೊಳಗೆ ಅಮೂಲ್ಯ ಆಭರಣಗಳನ್ನು ಅಡಗಿಸಿ ಒಯ್ಯುವುದು ಒಂದು ಕಾಲದಲ್ಲಿ ಸಾಮಾನ್ಯವಾಗಿತ್ತು. ಕೋಳಿಗಳ, ನಾಯಿ-ಮರಿಗಳ ಮತ್ತಿತರ ಪ್ರಾಣಿಗಳ ಹೊಟ್ಟೆಯಲ್ಲೂ ಅವನ್ನು ಒಯ್ಯುತಿದ್ದರು, ಆದರೆ ಈಗಿನ ಸುಂಕದ ಅಧಿಕಾರಿಗಳ ಬಳಿ ಇಂತಹ ಆಟ ನಡೆಯುವುದಿಲ್ಲ. ಅವರು ಪ್ರತಿಯೊಂದನ್ನೂ ಸೂಕ್ಷ್ಮವಾಗಿ ನೋಡುವರು.

ದೇಶ ವಿದೇಶ ವೃತ್ತ ವೈವಿಧ್ಯ

ಸಿಪಾಯಿಯ ಕರ್ತವ್ಯ ದಕ್ಷತೆ

ದಿಲ್ಲಿಯ ಗವರ್ನರ್ ಜನರಲ್ಲರ ದ್ವಾರಪಾಲಕನಾಗಿದ್ದ ಗಯಾ ಪ್ರಸಾದ್ ಎಂಬ ಸಿಪಾಯಿಯ ಕರ್ತವ್ಯ ದಕ್ಷತೆಯ ಕುರಿತು ಇಂದಲ್ಲಿ ತುಂಬಾ ಶ್ಲಾಘನಾಯುಕ್ತವಾಗಿ ಮಾತನಾಡಲ್ಪಡುತ್ತದೆ. ಕೆಲ ದಿನಗಳ ಹಿಂದೆ ಗವರ್ನರ್ ಜನರಲ್ ರಾಜಾಜಿಯವರ ಮೋಟಾರು ಸರಕಾರಿ ಭವನದಿಂದ ಹೊರ ಹೋಗುವಾಗ ಸಿಪಾಯಿ ಗಯಾ ಪ್ರಸಾದನು ಶಿಸ್ತಿನಿಂದ ಬಂದೂಕನ್ನೆತ್ತಿ ಗೌರವ ಸಲ್ಲಿಸಿದನು. ಆ ಸಮಯದಲ್ಲಿ ಅವನ ಕಾಲಿಗೊಂದು ವಿಷದ ಹಾವು ಸುತ್ತಿಕೊಂಡಿತ್ತು ಪ್ರಾಣಕ್ಕಿಂತ ಕರ್ತವ್ಯ ನಿರ್ವಹಣೆಯೆ ಹೆಚ್ಚಿನದೆಂದು ಅವನು ಹಾವು ಕಾಲಿಗೆ ಸುತ್ತಿಕೊಂಡು ಇದ್ದ ಹಾಗೇ ತಾನು ಭಾರತದ ಅತ್ಯುನ್ನತ ಆಡಳಿತಾಧಿಕಾರಿಗೆ ಸಲ್ಲಿಸ ಬೇಕಾದಗೌರವವನ್ನು ಸಲ್ಲಿಸಿದನು ರಾಜಾಜಿಯ ಮೋಟಾರು ಹಾದುಹೋದ ನಂತರ ಅವನು ಹಾವನ್ನು ಕೈಯಿಂದ ಹಿಡಿದು ಎಳೆದನು. ಆಗ ಅದು ಕೈಗೆ ಸುತ್ತು ಹಾಕಿತು ಮತ್ತೆ ಹೇಗೂ ಅದನ್ನು ತೆಗೆದು ಬೆಸಾಡಿ ಬಿಟ್ಟನು ಜರ್ಜರಿತವಾದ ಹಾವು ಹತ್ತಿರದ ತೋಟದ ಬಿಲವನ್ನು ಸೇರಿತು. ತನ್ನ ಕಾವಲಿನ ಅವಧಿ ಮುಗಿಯುವ ತನಕವೂ ಗಯಾ ಪ್ರಸಾದನು ಅಲ್ಲಿ ನಿಂತಿದ್ದನು. ಅವನ ಕೈಗೆ ಹಾವು ಕಚ್ಚಿದ ಘಟನೆಗಳಿದ್ದುವು ಸಂಗತಿ ತಿಳಿದ ಇತರ ಸಿಪಾಯಿಗಳು ಅವನನ್ನು ಆಸ್ಪತ್ರೆಗೆ ಸೇರಿಸಿ ಈಗ ಅವನು ಗುಣಮುಖನಾಗುತಿದ್ದಾನೆ

ಪಾಕಿಸ್ತಾನ – ಅಫಘಾನ್ ಘರ್ಷಣೆ

ಪಾಕಿಸ್ತಾನ ಮತ್ತು ಅಫಘಾನಿಸ್ತಾನದ ಗಡಿಗಳ ನಡುವೆಇರುವ ಕೆಲ ಗುದ್ದಲಾಡು ಪಂಗಡಗಳ ಪ್ರದೇಶವನ್ನು "ಪಾಕಿಸ್ತಾನದ ಸೊತ್ತೆಂದು" ಗವರ್ನರ್ ಜನರಲ್ ಜಿನ್ನಾ ಮುದ್ದೀನರು ಸಿರಾಸಿದ ದನ್ನು ಕಾಬೂಲಿನ ಸರಕಾರಿ ಪತ್ರಿಕೆ ಖಂಡಿಸಿದೆ ಈ ಪ್ರದೇಶಗಳನ್ನು ಸ್ವತಂತ್ರ ನೆಂದಾಗಿ ಗಣಿಸಲಾಗುವುದೆಂದು 1948ರಲ್ಲಿ ಮಿ। ಜಿನ್ನರು 1947ರಲ್ಲಿ ಬ್ರಿಟಿಷ್ ಸರಕಾರದ ಪ್ರತಿನಿಧಿಗಳೂ ಹೇಳಿದ್ದನ್ನು ಆ ಪತ್ರಿಕೆ ಪ್ರಕಟಿಸಿ ಪಾಕಿಸ್ತಾನ ಸರಕಾರದ ಈಗಿನ ವರ್ತನೆಯು ವಿಶ್ವಶಾಂತಿಗೆ ಕಾರಣವೆಂದೂ ಉದ್ದಟತನದೆಂದೂ ಟೀಕಿಸಲಾಗಿದ ಸದ್ಯದಲ್ಲಿ ಈ ಕುರಿತಾದ ವ್ಯಾಜ್ಯವೊಂದು ಯುಕ್ತ ರಾಷ್ಟ್ರ ಸಂಘದಲ್ಲಿ ಹೋಗಲಿದೆಯೆಂದೂ ಹೇಳಲಾಗಿದೆ

ಕಳ್ಳ ಸಂತೆಯ ರೇಶನ್ ಕಾರ್ಡುಗಳು

ಸ್ವೀಡನ್ ದೇಶದ ಸಂಗತಿ

ಸ್ವೀಡನ್ ದೇಶದ ಪ್ರಜೆಗಳು ಇಂದು ಉಪಯೋಗಿಸುವ ಎಲಿಯಾಂತರ ರೇಶನ್ ಕಾರ್ಡುಗಳು ಕಳ್ಳ ಸಂತೆಯಲ್ಲಿ ಪದಕೊಂಡ ಕಚ್ಚಾ ಪದಾರ್ಥಗಳಿಂದ ತಯಾರಿಸಲ್ಪಟ್ಟವುಗಳಾಗದದ ಮೇಲೆ ಅಚ್ಚು ಹಾಕಲ್ಪಟ್ಟವೆಂದು ತಿಳಿದುಬರುತ್ತದೆ ಒಂದು ತರದ ಧರ್ಮ ಸಂಕಟದಲ್ಲಿ ಸಿಲುಕಿದಾಗ ತಾವು ಇದನ್ನು ಹೀಗೆ ತಯಾರಿಸಬೇಕಾಯಿತೆಂದು ಆ ಕಾರ್ಡುಗಳನ್ನು ತಯಾರಿಸಿದ ಕಾರ್ಖಾನೆಯವರು ವಿಷಾದ ಸೂಚಿಸಿದರು ಒಂದು ಕಡೆಯಿಂದ ನಿರ್ದಿಷ್ಟ ಅವಧಿಯಲ್ಲಿ ಅವನ್ನು ಸಿದ್ಧ ಮಾಡಿ ಕೊಡಬೇಕೆಂಬ ಸರಕಾರದ ಒತ್ತಾಯ. ಹಾಗೆ ಕೊಡದಿದ್ದನೆ ಇಡೀ ರೇಶನ್ ವ್ಯವಸ್ಥೆಯೇ ಅಸ್ತವ್ಯಸ್ತವಾಗುವುದು. ಇನ್ನೊಂದು ಕಡೆಯಿಂದ ಆ ಸಮಯದಲ್ಲಿ ಸ್ವೀಡನ್ ದೇಶದಲ್ಲಿ ಕಾಗದ ತಯಾರಿಸುವ ಕಚ್ಚಾ ಪದಾರ್ಥಗಳ ಕೊರತೆ ಇತ್ತು. ಆ ಪದಾರ್ಥಗಳು ಸರಕಾರದ ಕಂಟ್ರೋಲ್ ಬೆಲೆಗೆ ಸಿಗುತ್ತಿರಲಿಲ್ಲ. ಹೀಗಾಗಲು ಸರಕಾರದ ಕೆಲವು ಬಿಗುವಾದ ಕಾಯಿದೆಗಳೇ ಕಾರಣವಾಗಿದ್ದುವು. "ಆದ್ದರಿಂದ ಕಳ್ಳಸಂತೆಯನ್ನು ನಿರ್ಮೂಲಿಸಲು ಎಲ್ಲಾ ದೃಷ್ಟಿಕೋನಗಳಿಂದಲೂ ಜಾಗರೂಕತೆ ವಹಿಸಬೇಕಾಗುತ್ತದೆಂದು ಇದರಿಂದ ತಿಳಿಯುವುದು" ಹೀಗೆಂದು ಅಲ್ಲಿನ ಪತ್ರಿಕೆಯೊಂದು ಬರೆಯುತ್ತದೆ

ಹರಿಜನರಿಗೆ ದೇವಾಲಯ ಪ್ರವೇಶದಲ್ಲಿ ವಂಚನೆ

ದಕ ಜಿಲ್ಲೆಯಲ್ಲಿನ ಒಂದು ನಿದರ್ಶನ

ಮದ್ರಾಸಿನ ಒಂದು ಪ್ರಮುಖ ಪತ್ರಿಕೆಯಲ್ಲಿ ಸ್ವಾಮಿ ಆನಂದ ತೀರ್ಥ ಎಂಬವರು ಹೀಗೆ ಬರೆದಿದ್ದಾರೆ

ಹರಿಜನರಿಗೆ ಸರಕಾರದವರು ಎಷ್ಟೊ ಕಾಯಿದೆಗಳನ್ನು ಮಾಡಿರುವರಾದರೂ ಇನ್ನೂ ಕೆಲವು ಕಡೆ ಹರಿಜನರಿಗೆ ನ್ಯಾಯವಾದ ಹಕ್ಕು ಬಾಧ್ಯತೆಗಳು ಸಿಕ್ಕಾಕರಿಸಲ್ಪಡುತ್ತದೆ ದಕ್ಷಿಣ ಕನ್ನಡ ಜಿಲ್ಲೆಯ ರಾವಳವಿಲ್ಲವ ಎಂಬ (ಕಾಸರಗೋಡು ತಾಲೂಕಿನ) ದೇವಸ್ಥಾನದಲ್ಲಿ ಹರಿಜನ ಪ್ರವೇಶ ಸಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳು ತೋರಿಸಿದ ಉಪೇಕ್ಷೆಯನ್ನು ಕಂಡು ನಾನು ಉಪವಾಸವನ್ನು ಕೈಕೊಳ್ಳಬೇಕಾಯಿತು ಹರಿಜನರು ಉತ್ಸವಕಾಲದಲ್ಲಿ ಹೊರತು ಇತರ ಸಮಯದಲ್ಲಿ ದೇವಳ ಪ್ರವೇಶ ಮಾಡಬಹುದೆಂಬ ಅಭಿಪ್ರಾಯವನ್ನು ಸ್ಥಳೀಯ ಜನರೂ ಪ್ರಾತ್ರವಲ್ಲ ಕೆಲ ಕಾಂಗ್ರೆಸ್ ಮುಖಂಡರೂ ಕಡಿಮೆ ಸಿಟ್ಟುಪಡಿಸಿದರು ಆದರೆ ಕೊನೆಗೆ ಜನರಿಂದ ಕಂಗೆಟ್ಟ ಕರಾವಳಿಯವರು ಒತ್ತಾಯವನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರಕಟಿಸಲಾಗಿದೆ ಉತ್ಸವ ಕಾಲದಲ್ಲಿ ಅವರ ಬಿಡಿರ ಚಾಪಗಳನ್ನು ಧರ್ಮಾರ್ಥ ಕೇಳಬೇಕೆಂದೂ ಅಜ್ಞೆಯಿಸಲಾಗಿದೆ

ಹರಿಜನರಿಗೆ ಕಣ್ಣುಕಟ್ಟುವ ಗಾಡಲೆಂಬಂತೆ ಒಂದು ದಿನ ಅವರಿಗೆ ಒಂದು ಕಡೆಯನ್ನು ದೇವಸ್ಥಾನ ಬಳಸುತ್ತಿನ ಸ್ಥಾನದ ತನಕ ಕೊಂಡೊಯ್ಯಲಾಯಿತು ಅಲ್ಲಿ ಹೊರಗಿನಿಂದಲೆ ಅವರಿಗೆ ಪ್ರಸಾದವನ್ನು ಹಂಚಲಾಯಿತು ಮತ್ತೆ ಅಲ್ಲಿಂದಲ್ಲೇ ಭಂಡಾರಕ್ಕೆ ಸಾಕಷ್ಟು ಕಾಣಿಕೆ ಹಣವನ್ನೂ ವಡೆಯಲಾಯಿತು ಆನಂತರ ಒಂದು (ಅದು ಕೂಡ ಕಣ್ಣುಕಟ್ಟಿನದು!) "ಶುದ್ಧಿ ಸಮಾರಂಭ' ನೆರವೇರಿಸಲಾಯಿತು ಇನ್ನು ಮುಂದೆ ಹರಿಜನರು ದೇವಾಲಯ ಪ್ರವೇಶದ ಕುರಿತು ಸೆಲ್ಲೆತ್ತಬಾರದೆಂದು ಅವರಿಗೆ ಹೇಳಲಾಯಿತಂತೆ ಈ ಕುರಿತ ಸರಕಾರದವರು ತನಿಖೆಯೊಂದನ್ನು ನಡೆಸಬಾರದೆ?

ಇನ್ನೊಂದು ಅನಿಷ್ಟ ಅಂತ್ಯವಾಯಿತು

ಬಿಳಿಯರಿಗೆ ವಿಶೇಷ ಹಕ್ಕುಗಳಿಲ್ಲ

ಬ್ರಿಟಿಷ್ ದಾಸ್ಯತ್ವ ಇದ್ದಾಗ ಖುಸಿ ಅವಾದನೆಗಳಿಗೊಳಗಾದ ಬಿಳಿಯರಿಗೆ (ಐರೋಪ್ಯ, ಅಮೇರಿಕನ್ನರಿಗೆ) ವಿಶೇಷ ಸೌಕರ್ಯಗಳು ಇದ್ದುವು. ಅವರನ್ನು ಪ್ರತ್ಯೇಕ ಸ್ಥಳದಲ್ಲಿ ಬಂಧಿಸಿಡುವುದು, ಅವರ ವಿಚಾರಣೆ ಬಿಳಿಯ ನ್ಯಾಯಾಧೀಶರಿಂದಲೇ ಜರಗಿಸುವುದು ಇತ್ಯಾದಿ. ಮೊನ್ನೆ ನಮ್ಮ ಪಾರ್ಲಿಮೆಂಟಿನಲ್ಲಿ ಸರ್ದಾರ್ ಪಟೇಲರು ಈ ವಾತ್ಸಲ್ಯದ ಧೋರಣೆ ಈಗ ಅವಶ್ಯವಿಲ್ಲ, "ನ್ಯಾಯವು ಎಲ್ಲರಿಗೂ ಸಮಾನವಾಗಿರಬೇಕು ಆದರಲ್ಲಿ ಜಾತಿ, ಮತ, ವರ್ಣ ಭೇದಕ್ಕೆಡೆಯಿರಬಾರದು" ಎಂದು ಒಂದು ಮಸೂದೆಯನ್ನು ಮಂಡಿಸಿದರು ನಾಲ್ಕೇ ಮಿನಿಟುಗಳಲ್ಲಿ ಅದು ಮಂಜೂರಾಯಿತು. ಬಿಳಿಯರಿಗಿದ್ದ ಈ ವಿಶೇಷ ಸೌಕರ್ಯ ರದ್ದತಿಯಿಂದ ಸಾಮ್ರಾಜ್ಯಶಾಹಿ ಅಳಿಕೆಯು ಅನಿಷ್ಟಗಳಲ್ಲೊಂದು ಅಂತ್ಯಗೊಳಿಸಿದಂತಾಯಿತು

ಗದ್ದೆ ಉಳಲು ಆನೆಗಳು

ಡಾ। ಕುಮಾರಪ್ಪನವರ ಸಲಹೆ

ಇತ್ತೀಚೆಗಿನ ಹರಿಜನ ಪತ್ರಿಕೆಯಲ್ಲಿ ಡಾ। ಜೆ. ಸಿ. ಕುಮಾರಪ್ಪನವರು ಗದ್ದೆ ಉಳಲು ವಿದೇಶದ ಯಂತ್ರಗಳನ್ನು ಹೆಚ್ಚು ಬೆಲೆ ಕೊಟ್ಟು ತರಿಸುವುದಕ್ಕಿಂತಲೂ ಆನೆಗಳನ್ನು ಈ ಕೆಲಸಕ್ಕೆ ಉಪಯೋಗಿಸುವುದು ಉತ್ತಮವೆಂದು ಸೂಚಿಸುತ್ತಾರೆ

ಕೃಷಿಮಾಡಲು ಯೋಗ್ಯವಾದ ಬಂಜರು ಪ್ರದೇಶಗಳನ್ನು ಹೇಗೆ ಫಲಭರಿತವಾಗಿ ಮಾಡಬಹುದು ಎಂಬುದೇ ಈಗಿನ ಕಠಿಣ ಸಮಸ್ಯೆಗಳಲ್ಲಿ ಒಂದು ಅವುಗಳನ್ನು ಉಳುವುದಕ್ಕೆ ಬೇಕಾದ ಜಾನುವಾರುಗಳು ನಮ್ಮಲ್ಲಿಲ್ಲ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಈ ಕಾರ್ಯಕ್ಕಾಗಿ ಕೋಟಿಗಟ್ಟಲೆ ಮೌಲ್ಯದ ಯಂತ್ರೋಪಕರಣಗಳನ್ನುಕೊಂಡುಕೊಳ್ಳಲೇರ್ಪಡಿಸಿರುವರು ಈ ಯಂತ್ರಾದಿಗಳನ್ನು ನಿರತ ಕಾರ್ಯಗೆಯ್ಯುವಂತೆ ಇಡಲು ತುಂಬಾ ಖರ್ಚೂ ಅಪಾರ ಎಣ್ಣೆಯೂ ಬೇಕಾಗುವುದ ಇದ ಖರ್ಚಿಗೆ ಇನ್ನೊಂದು ದಾರಿ

ಆನೆಗಳ ಸಹಾಯ

ನಮ್ಮ ಸರಕಾರಿ ಅಧಿಕಾರಿಗಳು ಸಹಾಯಕ್ಕಾಗಿ ಆನೆಗಳನ್ನು ತರಿಂಗಿದರೆ ಈಗಿನ ದರವನ್ನೆ ಸಲ್ಲಿಸಬೇಕಾಗುಹುದು ಈ ವಿಷಯವಿಷಯಗಳು ನಮ್ಮ ಅನೇಕ ದೇಶರಾಜಕಾರಿಗಳ ಮತ್ತು ಜನಿಸ್ಟರುಗಳ ಒಳ್ಳೆ ತುಂಬಾ ಸಹಾಯವಾಗಿವೆ ಈಗ ಈ ರಂಜದುರುಗಳ ಉದಾರ ಮನೋಭಾವಕ್ಕೆ ಕಡಿಮೆಯಾಗಿರುವುದರಿಂದ ಆನೆಗಳನ್ನು ಅವರು ಬಿಟ್ಟುಕೊಡಲು ಸಿದ್ಧರಿದ್ದಾರೆ

ತಮಿಳುನಾಡಿನಲ್ಲಿ ಸಾಕಷ್ಟು ಆನೆಗಳಿದ್ದು ಅವುಗಳಲ್ಲಿ ಕೆಲವು ಅತ್ಯಂತ ಪಳಗಿದವು ಆದರೆ ಯಂತ್ರಚಾಲಕರಿಗಿಂತ ಇವರು ಅನೇಕ ಪಾಲಷ್ಟು ಕೆಲಸ ಮಾಡಿ ತಗ್ಗಿಸುತ್ತವೆ ಯಂತ್ರಗಳ ಮೂಲಕ ಮಾಡುವ ಎಲ್ಲಾ ಕೆಲಸವನ್ನೂ ಆನೆಗಳು ಮಾಡಬಲ್ಲವು ಅವುಗಳ ಕಾರ್ಯ ವೇಗವು ಸ್ವಲ್ಪ ಕಡಿಮೆಯಿರಬಹುದು ಆದರೆ ನಮ್ಮ ಆರ್ಥಿಕ ಪರಿಸ್ಥಿತಿಗೆ ಅದು ಸರಿಹೋಗುವುದು

ನಮ್ಮ ಕೃಷಿ ಇಲಾಖೆಗಳಲ್ಲಿ ಪ್ರತಿಭಾವಂತ ಜಾತಾರ್ಜ್ಞಕ್ಕೆ ತುಂಬಾ ಕೊರತೆಯಿರುವುದೇ ನಮ್ಮ ಸಂಕಷ್ಟಗಳ ಹೆಚ್ಚಳಕ್ಕೂ ಕಾರಣವೆನ್ನಬಹುದು ಆನೆಯಿಂದ ಗದ್ದೆ ಉಳಿಸಲು ಆಗುವ ನೀಗಿಲು ಇತ್ಯಾದಿ ಉಪಕರಣಗಳನ್ನು ನಾವು ಸಿದ್ಧಗೊಳಿಸಿಲ್ಲ ನಮ್ಮ ಸುತ್ತಮುತ್ತಲಿನ ಅನುಕೂಲತೆಗಳನ್ನು ಬಳಸಿಕೊಳ್ಳಲು ನಾವು ತಸ್ಮ ಪ್ರಯತ್ನಮಾಡಿ ನೋಡಿದರೆ ಪಾಶ್ಚಾತ್ಯ ದೇಶಗಳಿಂದ ಇತರ ಆವಶ್ಯಕ ವಸ್ತುಗಳನ್ನು ತರಿಸಲು ನಾವು ಹೆಚ್ಚಿನ ಧನಸಂಚಯವನ್ನು ಮಾಡಬಹುದಾಗಿದೆ

ಗಾಂಧೀ ತತ್ವಜ್ಞಾನ ಪರಿಪೂರ್ಣತೆಯು ಸಾಧಕರು

ಭಾರತದ ಪುನರುಜ್ಜೀವನಕ್ಕೆ ರಾಜಾಜಿ ಗೈಯ್ದ ಸೇವೆ

ದಕ್ಷಿಣ ಭಾರತದಲ್ಲಿನ ಅವರ ಕಾರ್ಯಕಲಾಪ

ತಮಗೆ ಕೊಡಲ್ಪಡುವ ಯಾವುದೇ ಹುದ್ದೆಯಲ್ಲಿ ಅಡಗಿರುವ ಎಲ್ಲಾ ಶಕ್ತಿ ಮತ್ತು ಸಾಧಕ ಸಂದರ್ಭಗಳನ್ನು ಪರಿಪೂರ್ಣ ಹೊರತೆಗೆದು ಅವನ್ನು ಸತ್ಕಾರ್ಯಕ್ಕೆ ಬಳಸಿಕೊಳ್ಳುವ ಅಸಾಮಾನ್ಯ ಸಾಮರ್ಥ್ಯ ಪ್ರತಿಭೆಗಳು ರಾಜಾಜಿಯಲ್ಲಿವೆ. ತಮಿಳುನಾಡಿನಲ್ಲಿ ಒರ್ವ ರಚನಾತ್ಮಕ ಕಾರ್ಯಕರ್ತರಾಗಿರಲಿ ಇಲ್ಲವೆ ಬಂಗಾಳದ ಗವರ್ನರರಾಗಿರಲಿ ಅಥವಾ ಮದ್ರಾಸು ಪ್ರಧಾನರಾಗಲಿ ಇಲ್ಲವೆ ಗವರ್ನರ್ ಜನರಲ್ಲರಾಗಿರಲಿ ಅವರು ನೂತನವಾದ ಉಜ್ವಲ ಕಾರ್ಯಧರ್ಮವನ್ನು ಕಲ್ಪಿಸಿ ದೇಶದ ನುತ್ತು ದೇಶ ಭಾಂಧವರ ಸರ್ವತೋಮುಖ ಅಭಿವೃದ್ಧಿಗೆ ಅವರು ತಮ್ಮದೇ ಆದ ಮತ್ತು ಅದರಣೀಯ ಆದರ್ಶದ ಮಾರ್ಗವನ್ನು ಕಲ್ಪಿಸಿದ್ದಾರೆ. ವಿವಿಧ ಕಾರ್ಯಕ್ಷೇತ್ರದಲ್ಲಿ ಅವರು ಮಾಡಿದ ಸೇವೆಯು ಚಿರಸ್ಮರಣೀಯವೂ ಅತ್ಯಂತ ಶ್ರೇಷ್ಠವೂ ಅಭಿಮಾನಾಸ್ಪದವೂ ಆಗಿದೆ. ಇಂದು ಕೂಡ ಸ್ವತಂತ್ರ ದೇಶದಲ್ಲಿನ್ನತೋನ್ನತ ಅಧಿಕಾರದಲ್ಲಿ ರೂಢರಾಗಿದ್ದು ಕೂಡ ಅವರು ಗೆಯ್ಯುತ್ತಿರುವ ಕಾರ್ಯವು ಅತ್ಯಪೂರ್ವವೂ ಅಸದೃಶ್ಯವೂ ಆಗಿದೆ.

ಸಮರ್ಥ ನಾಯಕರು

ಮಹಾತ್ಮಾ ಗಾಂಧಿಯವರ ತತ್ವಗಳನ್ನು ಸಂಪೂರ್ಣತೆಗೊಳಿಸಲು ಅವರು ಹೊತ್ತ ಹೊಣೆ, ಒಗತೆಯ ಸೃಷ್ಟಿಕ ಮಟ್ಟಿನನ್ನು ಉನ್ನತೀಕರಿಸಲು ಅವರು ಶ್ರಮಿಸಿದ ರೀತಿ, ವಿಚ್ಛೇದಿತ ನಂತರದಿಂದ ಟಾದ ಅಸಹ್ಯ ರಿಂಸ್ಫೋಟನವನ್ನ ಶಮನಿಸಿದ ಮಾದರಿ ಮುಂತಾದ ಇತಿಹಾಸವು ಕೃತಜ್ಞತೆಯಿಂದ ಸ್ಮರಿಸಲ್ಪಡುವಲ್ಲಿ ಸಂದೇಹವಿಲ್ಲ. ಅವರು ಈಗ ಆಲಂಕರಿಸಿರುವ ಗವರ್ನರ್ ಜನರಲ್ ಪದವಿಯು ಸಂವಿಧಾನಬದ್ಧವಾಗಿದ್ದರೆ ಕೇವಲ ವೋ ಮೆ ಕೆಲಸ ಮಾತ್ರದ ಅಧಿಕಾರವನ್ನು ನವಾಗಿತ್ತು. ಆದರೆ ಕಿಷ್ಟವೂ ಸೊಂಪೂರ್ಣ ಮಾಡಿ ಈ ಸರ್ಕಾರಿ ಕ ಸೆಯನ್ನವರು ಸಾಧ್ಯವಾದ ಅದರ ಅಭಿವೃದ್ಧಿಗಳ ಅತ್ಯುನ್ನತಿಗೆ ಪರಿವರ್ತಿಸಿಕೆ. ತದ್ವಿರುದ್ಧ ಸೊಂಡಿದರೆ ಯಂತಹರನ್ನಾದರೂ ವೆರಗುಗೊಳಿಸದಿರದ

ಇವುಗಳನ್ನು ತಿಳಿಕೊಳ್ಳಲು ಅವರು ಇತ್ತೀಚೆಗಿನ ತಮ್ಮ ದಕ್ಷಿಣ ಭಾರತ ಸಂಚಾರ ಕಾಲದಲ್ಲಿ ಇತ್ತ ಭಾಷಣಗಳನ್ನು ಪರಿಶೀಲಿಸಿದರೆ ತಿಳಿಯುವುದು.

ಮೈಸೂರಿನಲ್ಲಿ ಒಂದು ಭಾಷಣದಲ್ಲಿ ಅವರು ಹೀಗೆಂದಿದ್ದರು

"ಪ್ರಾಮಾಣಿಕರಾಗಿದ್ದು ಕಷ್ಟಪಟ್ಟು ದುಡಿಯಿರಿ ಎಂದು ಜನರಿಗೆ ಹೇಳುತ್ತಾ ಹೋಗುವುದರಿಂದಲೇ ನಾನು ಸ್ವೀಕರಿಸಿದ ಈ ಉನ್ನತ ಪದವಿಯ ಕರ್ತವ್ಯವು ಪರಿಪೂರ್ಣಗೊಳಿಸಿದಂತಾಗುವುದು ಜನರಿಗೆ ಪ್ರಾಮಾಣಿಕರಾಗಿರಿ ಮತ್ತು ಸಶ್ರಮದಿಂದ ದುಡಿಯಿರಿ ಎಂದು ಹೇಳುವುದಕ್ಕಿಂತ ಹೆಚ್ಚಿನ ಅಧಿಕಾರವೇನೂ ನನಗೆ ಬೇಕಾಗಿಲ್ಲ."

ಈ ಕರ್ತವ್ಯವನ್ನು ರಾಜಾಜಿಯವರು ಹಲವು ವಿಧಗಳಿಂದಲೂ ಮಾಡುತ್ತಲಿದ್ದಾರೆ ತಮ್ಮ ಸಂದೇಶದಿಂದ ಅವರು ನಮ್ಮ ರಾಷ್ಟ್ರಸಸ್ಥೆಗೆ, ದೇಶಭಕ್ತಿಗೆ ಹೊಸ ಹುರುಪನ್ನು ಕೊಡುತಿದ್ದಾರೆ ಅವರು ಹೇಳಿದ್ದರು

"ಈಗ ಆದ ಬದಲಾವಣೆಯನ್ನು ಜನರು ಸಂತೋಷದಿಂದ ಸ್ವೀಕರಿಸಬೇಕಾದರೆ ನೀವು ಕಷ್ಟಪಟ್ಟು ದುಡಿಯಬೇಕು ನಮ್ಮ ರಾಷ್ಟ್ರಭಕ್ತಿ ಹಿಂದಿನಂತೇ ಇದ್ದರೆ ಸಾಲದು. ನಾವು ತುಂಬಾ ಶ್ರದ್ಧೆಯಿಂದ ಯೋಜನೆಗಳನ್ನು ಮಾಡಬೇಕು. ನಮ್ಮ ವಚನಗಳನ್ನು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ನಾವು ಪ್ರಾಮಾಣಿಕರಾಗಿ ದುಡಿಯಬೇಕು ಮಾತ್ರವಲ್ಲ ಅಳವಾಗಿ ವಿಚಾರ ಮಾಡಬೇಕು"

ಶ್ರಮದ ದುಡಿತ

ಮದ್ರಾಸ್ ವಿಶ್ವವಿದ್ಯಾಸಿಲಯದ ಭಾಷಣದಲ್ಲಿ ಅವರು ಹೀಗೆಂದಿದ್ದರು

"ನಮ್ಮಲ್ಲಿ ಪ್ರತಿಯೊಬ್ಬನು ಫಲದಾಯಕವಾದ ಕೆಲಸ ಮಾಡಿದರೆ ಮಾತ್ರ ನಮ್ಮ ಹೊಸ ಪರಿಸ್ಥಿತಿಯು ಶುಭಕರವಾಗುವುದು ನಮ್ಮಲ್ಲಿ ಪ್ರತಿಯೊಬ್ಬನು ಅವನೆಷ್ಟು ಕನಿಷ್ಟನೇ ಇರಲಿ, ಬಿಡದೆ ಶ್ರಮಪಟ್ಟು ತನ್ನ ತನ್ನ ಕಾರ್ಯಕ್ಷೇತ್ರದಲ್ಲಿ ದುಡಿದನೆಂದರೆ ನಾವು ಸಾಫಲ್ಯ ಹೊಂದುನೆವು ಕೆಲಸವೇ ನಮ್ಮ ಮಂತ್ರವಾಗಿರಬೇಕು. ಕೆಲಸವು ಸಂಪತ್ತಾಗಿದೆ. ಸೇವೆಯು ಸಂತೋಷದಾಯಕವಾದುದು. ಇದರಷ್ಟು ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ."

ಆಲಸ್ಯವು ಮಹಾಪಾಪ

ಮತ್ತೊಂದು ಕಡೆ ಅವರು ಹೀಗೆ ವಿದ್ಯಾರ್ಥಿಗಳಿಗೆ ಉಪದೇಶಿಸಿದ್ದರು

"ನಮ್ಮ ದೇಶದಲ್ಲಿ ದೊಡ್ಡ ಪಾತಕವೆಂದರೆ ಆಲಸ್ಯದ್ದು. ಆಲಸ್ಯವನ್ನು ನಾವು ನಿರ್ಮೂಲ ಮಾಡಿದರೆ ನಮ್ಮೆಲ್ಲ ಸಂಕಷ್ಟಗಳು ನೀಗುವವು ಒರ್ವ ಪೋಲಿಸನಿರಲಿ ಇಲ್ಲವೆ ಉನ್ನತ ಅಧಿಕಾರಿಯಿರಲಿ, ವ್ಯಾಪಾರಿ ಇರಲಿ ಔದ್ಯೋಗಿಕ ವರ್ಗದವರಿರಲಿ, ರೈತನಿರಲಿ, ಎಲ್ಲರೂ ರಾಷ್ಟ್ರಕ್ಕೆ ಸಲ್ಲಕ್ಕೆ ಕರ್ತವ್ಯವನ್ನು ನಿರ್ವಹಿಸಲೇಬೇಕು ಪ್ರಾಮಾಣಿಕತನದಿಂದ ದುಡಿಯುವುದೇ ದೇಶದ ಅಭಿವೃದ್ಧಿಗೆ ಅಸ್ತಿವಾರ"

ಗಣ್ಯೇಶನ ಸಾಮ್ಯ

ಕರ್ತವ್ಯದ ಇನ್ನೊಂದು ಅವಲೋಕನವನ್ನು ಪ್ರಜೆಗಳ ಮುಂದಿಡುತ್ತ ರಾಜಾಜಿಯವರು ಗಾಂಧೀಜಿಯವರ ಕರ್ಮತತ್ವವಾದ ತಾತ್ಪರ್ಯವು ಕುರಿತು ಬೆಂಗಳೂರಿನ ಒಂದು ಭಾಷಣದಲ್ಲಿ ಹೀಗೆಂದರು

"ನಮ್ಮ ಸ್ವಾತಂತ್ರ್ಯವು ಕೇವಲ ಬಂಧವಿಮೋಚನೆಯು ಕುರುಹಲ್ಲ, ಅದು ಕರ್ತವ್ಯ ನಿರ್ವಹಣದ ಸಂಕೇತವೂ ಆಗಿದೆ ಹೊಸ ಸೃಷ್ಟಿಸ್ಥಿತಿಯಲ್ಲಿ ನಮ್ಮ ಪ್ರಾಚೀನ ಸಂಸ್ಕೃತಿಯು ನಮ್ಮನ್ನು ಸುಖ ಸಂತೃಪ್ತಿಯತ್ತ ಒಯ್ಯಬಲ್ಲುದೆಂದೆಂಬುದನ್ನು ನಾವು ಮನಗಾಣಬೇಕು ಭಾರತಮಾತೆಯ ಈ ಪವಿತ್ರ ಭೂಮಿಯಲ್ಲಿ ಬೇರೆ ಬೇರೆ ಜನಾಂಗಗಳೂ, ಧರ್ಮಗಳೂ ಭಾಷೆಗಳೂ ಐಕ್ಯಮತ್ಯದಿಂದ ಜಾಳಬಲ್ಲುವು. ಇದನ್ನು ನಾವು ತೋರಿಸಿಕೊಡಬೇಕು"

"ಇಂದು ಚಿಲ್ಲರೆ ವ್ಯಾಪಾರ ಮಾಡುವ ಸಾಮಾನ್ಯ ಅಂಗಡಿಕಾರನೂ ಭಾರತದ ಅಧ್ಯಕ್ಷನಾಗಬಲ್ಲ. ಅವನು ಅಧ್ಯಕ್ಷನಾದ ಕೂಡಲೆ ನಾವು ಅವನಿಗೆ ಸಲ್ಲತಕ್ಕ ಸಕಲ ಆದರಗಳನ್ನು ಸಲ್ಲಿಸಬೇಕು. ಅವನೊಬ್ಬ ಸಾಮಾನ್ಯನಾಗಿದ್ದನೆಂಬ ಸಂಗತಿಯನ್ನು ಮರೆತು ಬಿಡಬೇಕು. ನಾವು ಕಾಲಿನಿಂದ ತುಳಿಯುವ ಮಣ್ಣಿನಿಂದಲೇ ಗಣೇಶ ದೇವರ ವಿಗ್ರಹವನ್ನು ಮಾಡಲಿಕ್ಕಾಗುವುದಿಲ್ಲವೆ? ಅಂಥಾ ಮೂರ್ತಿಯ ಎದುರು ನಾವು ಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ ಪೂಜೆಯ ನಂತರ ಆ ವಿಗ್ರಹವನ್ನು ನೀರಲ್ಲಿ ಹಾಕುತ್ತಾರೆ ನಮ್ಮ ಮಂತ್ರಿಗಳಾದರೂ ಗಣಪತಿಯ ವಿಗ್ರಹಗಳಂತೆ ನಾವು ಗಣಪತಿಯನ್ನು ಪೂಜಿಸದಿದ್ದರೆ ನಮ್ಮ ರಾಷ್ಟ್ರವು ಕುಸಿದು ಕುಪ್ಪಳಿಸಿ ಹೋಗುವುದು."

ಗಾಂಧೀಜಿಯನ್ನು ಜೀವಂತವಿರಿಸಿರಿ

ಮಹಾತ್ಮಾಜಿಯವರ ಧ್ಯೇಯವಾದವನ್ನು ಸಾರ್ವಜನರಲ್ಲಿ ರಾಜಾಜಿ ಒಂದಿಷ್ಟೂ ಆಯಾಸವನ್ನು ಪಡುವುದಿಲ್ಲ ಅವುಗಳನ್ನು ಅದೆಷ್ಟು ಉದಾತ್ತ ಸರಳತೆಯಿಂದವರು ನಿರೂಪಿಸುತ್ತಾರೆ! ಬೆಂಗಳೂರಲ್ಲಿ ಅವರೆಂದಿದ್ದರು

"ಮಹಾತ್ಮಾ ಗಾಂಧಿಯವರನ್ನು ಜೀವಂತವಿರಿಸುವುದು ನಮ್ಮ ಕರ್ತವ್ಯ. ಅವರನ್ನು ಸಜೀವ ಇಲ್ಲವೆ ನಿರ್ಜೀವ ಗೊಳಿಸುವ ಶಕ್ತಿ ನಮ್ಮಲ್ಲಿದೆ ನೀವು ಯಾರನ್ನಾದರೂ ದ್ವೇಷಿಸುವುದಾದರೆ ನೀವು ಮಹಾತ್ಮಾಜಿಯವರನ್ನು ಕೊಲ್ಲುತ್ತೀರಿ ನಿಮಗೆ ಹಾನಿ ಮಾಡಿದವರಿಗೆ ನೀವು ಕ್ಷಮಿಸದಿದ್ದರೆ ಗಾಂಧಿಜಿಯು ಎದೆಗೆ ನೀವು ಇನ್ನೊಂದು ಗುಂಡನ್ನು ಇಕ್ಕಿದ ಹಾಗಾಗುವುದು"

"ನಿಸ್ಸಹ್ಯಲ್ಲಿ ಇಷ್ಟಿವ ನಿಷ್ಠರುಗಳಲ್ಲಿ ಮಹಾತ್ಮರು ಜೀವಿಸಿರುತ್ತಾರೆಂಬುದು ತಪ್ಪು ಗಾಂಧೀಜಿ ಮೈಲ್ಲರಲ್ಲೂ ಜೀವಿಸುತ್ತಾರೆ ಒಂದಿಷ್ಟು ಉನ್ನತ್ಯನ್ನು ಸೀರ್ಲ್ಲಿ ಹಾಕಿದರೆ ಆ ಸೀರಿಲ್ಲಿ ಉನ್ನತ್ಯಗುವುದು ಮಹಾತ್ಮಾ ಗಾಂಧಿಯವರು ಉಪ್ಪು ನೀರೆಂ ನೀರು"

ವಿವೇಕ ವಚನಗಳು

ರಾಜಾಜಿಯವರ ಮಾತುಗಳಲ್ಲಿ ಸ್ಫೂರ್ತಿದಾಯಕ ವಿವೇಕವಿದೆ ಉಪಮೆಗಳನ್ನು ಕೊಡುವುದರಲ್ಲಿ ಅವರನ್ನು ಕಾಳಿದಾಸ ಕವಿಗೆ ಹೋಲಿಸಬಹುದು. ವಿದ್ಯಾರ್ಥಿಗಳಿಗೆ ಅವರೆಂದಿದ್ದರು. "ಶಾಲೆಗಳು ನಿಮ್ಮ ಅಡಿಗೆ ಬರಬೇಕೆಂದು ಬಗ್ಗಿಸಿ ಹಿಡಿಯಬೇಡಿರಿ ನೀವೇ ಶಾಲೆಗಳ ಅಡಿಗಳನ್ನು ಸೇರಿರಿ" ನಮ್ಮ ಮಹಿಳೆಯರಿಗೂ ನಮ್ಮ ಹಿಂದೀ ಪ್ರಚಾರಕರಿಗೂ ಇತರರಿಗೂ ಅವರು ಅದೇ ರೀತಿ ಅವರು ತಮ್ಮ ಬೋಧಾಮೃತವನ್ನಿತ್ತಿದರು

ರಾಜಾಜಿಯ ಭಾಷಾಶೈಲಿ ಅತ್ಯಂತ ಸರಳ ಅದು ನೇರವೂ ಆಗಿದ್ದು ಸುಲಭ ಗ್ರಾಹ್ಯವಾಗಿದೆ ಅವರು ಉಪಯೋಗಿಸುವ ಸಾಮ್ಯಗಳು ಪ್ರತಿಯೊಬ್ಬನ ಸಾಮಾನ್ಯ ಅನುಭವದವುಗಳು. ಬಡವ ಬಲ್ಲಿದರಿಗೆ ಏಕಕಾಲದಲ್ಲಿ ಹರುಷವನ್ನುಂಟುಮಾಡುವ ಮೇದಾವಿಗಳು ಅವರೊಬ್ಬರೆ ಆಗಿದ್ದಾರೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಡೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨½
ಳಿಂದ ೫ ತಿಂಗಳು ,, ,, ೨¾

ರೂ. ೧೦೦೦೦ಕ್ಕಿಂತ ಕಡಮೆಯಿಲ್ಲದ ರೂ ೧೦,೦೦೦ಗಳ ಕೆಳಗೆ ರೂ ೫೦೦೦ ಗುಣಕದ ರೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

ಹೆಡ್ ಆಫೀಸು.—ಬಾವಟೆಗುಡ್ಡೆ, ಮಂಗಳೂರ

ಇತರ ಶಾಖೆಗಳು - ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

ಸ್ವದೇಶಾಭಿಮಾನಿ

ತಾರೀಕು 8—4—1949

ಎಪ್ರಿಲ್ ತಾ. 6–13.

ಎಪ್ರಿಲ್ ತಿಂಗಳ ಆರನೇ ತಾರೀಕು ಭಾರತದ ಇತಿಹಾಸದಲ್ಲಿ ಪವಿತ್ರವಾದ ದಿನ.

1919ನೇ ಇಸ್ವಿಯಲ್ಲಿ ಎಪ್ರಿಲ್ ತಾರೀಕು ಆರನೇ ದಿನ ಭಾರತದಲ್ಲಿ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹ ತತ್ವದ ಉದಯವಾಗಿತ್ತು.

ಮೊದಲ ಬಾರಿ ಮಹಾತ್ಮಾ ಗಾಂಧಿಯವರ ಮೇರೆ ಉಪದೇಶದಂತೆ ಆ ದಿನ ಅಖಿಲ ಭಾರತವು ಉಪವಾಸ ಮತ್ತು ಪ್ರಾರ್ಥನೆಗಳಲ್ಲಿ ಕಳೆಯಿತು

ಅಖಿಲ ಭಾರತದಲ್ಲಿ ಸತ್ಯಾಗ್ರಹದ ಜನ್ಮ ದಿನವಾಗಿ ಆಚರಿಸಲು ವಿನಂತಿ ಮಾಡಿಕೊಂಡ ಆ ದಿನಕ್ಕೆ ಒಂದು ವಾರ ಮುಂಚಿತವಾಗಿಯೇ ಢಿಲ್ಲಿ ಮೊದಲಾದ ಕೆಲವು ಕಡೆ ಇನ್ನೂ ಸತ್ಯಾಗ್ರಹ ಶಿಸ್ತಿನ ಪರಿಚಯವಿಲ್ಲದ ಜನರು ಉದ್ವೇಗಗೊಂಡು ಕೆಲವು ಗಲಭೆಗಳು ನಡೆದವು

ಆಗ ಬೊಂಬಾಯಿಯಲ್ಲಿದ್ದ ಮಹಾತ್ಮಾ ಗಾಂಧಿಯವರು ಶಾಂತಿ ಸ್ಥಾಪನೆಯ ಉದ್ದೇಶದಿಂದ ಗಲಭೆಯಾದ ಸ್ಥಳಗಳಿಗೆ ಹೊರಡಲು ಅಲ್ಲಿಗೆ ಹೋಗಲಾಗದೆಂದು ಅವರ ಮೇಲೆ ನಿಷೇಧಾಜ್ಞೆ ಕೊಡಲಾಯಿತು ಅರ್ಧ ದಾರಿಯಲ್ಲಿ ರೈಲಿನಲ್ಲಿದ್ದ ಅವರನ್ನು ಬಂಧಿಸಿ ಪುನಃ ಬೊಂಬಾಯಿಗೆ ತಂದು ಬಿಡಲಾಯಿತು

ಗಾಂಧೀ ಬಂಧನದ ವಾರ್ತೆ ಅಮೃತಸರ ಮೊದಲಾದ ಪಂಜಾಬಿನ ಹಲವು ಸ್ಥಳಗಳಲ್ಲಿ ಜನರು ಇನ್ನಷ್ಟು ಅತ್ಯಾಚಾರ ಮಾಡಲು ಕಾರಣವಾಯಿತು

ಈ ಪಂಜಾಬು ಗಲಭೆಗಳ ಪರಿಣಾಮವಾಗಿ ಜಾಲಿಯಾನ್‌ವಾಲಾ ಬಾಗಿನಲ್ಲಿ ಅದೇ ಎಪ್ರಿಲ್ ತಾರೀಕು 13ನೇ ದಿನ ಜನರಲ್ ಡಾಯರಿನಿಂದ ನಡೆಸಲ್ಪಟ್ಟ ಭಯಂಕರ ಹತ್ಯಾಕಾಂಡ

ಅಖಿಲ ಭಾರತವು ಒಮ್ಮನಸ್ಸಿನಿಂದ ಎಚ್ಚರಗೊಂಡು ಆಚರಿಸಿದ ಆ ಮೊದಲ ದಿನ–ಸತ್ಯಾಗ್ರಹದ ಜನ್ಮದಿನವಾದ ಎಪ್ರಿಲ್ ತಾರೀಕು 6ರಿಂದ ಜಾಲಿಯಾನ್‌ವಾಲಾ ಬಾಗಿನ ಹತ್ಯಾಕಾಂಡದಲ್ಲಿ ಸಾವಿರಾರು ಮುಂದಿ ಹಿಂದೂ ಮುಸ್ಲಿಮ ಮೊದಲಾದ ಸಕಲ ಜಾತಿಯ ಆಬಾಲವೃದ್ಧ ಸ್ತ್ರೀಪುರುಷರ ರಕ್ತದ ಹೊಳೆ ಹರಿದ ಎಪ್ರಿಲ್ ತಾರೀಕು 13ರವರೆ ತನಕದ ಒಂದು ಸಪ್ತಾಹವನ್ನು ಪವಿತ್ರ ರಾಷ್ಟ್ರೀಯ ಸಪ್ತಾಹವೆಂದು ಭಾರತವು ಅಂದಿನಿಂದ ಪ್ರತಿವರ್ಷವೂ ಆಚರಿಸುತ್ತ ಬಂದಿರುತ್ತದೆ.

ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಈ ಪವಿತ್ರ ರಾಷ್ಟ್ರೀಯ ಸಪ್ತಾಹವು ನಿಧಾಯಕ ಕಾರ್ಯಕ್ರಮವನ್ನು ಬಲಪಡಿಸುವ ಉದ್ದೇಶವುಳ್ಳ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಡುತ್ತಿತ್ತು.

ಅಂದು ಜನ್ಮಕ್ಕೆ ಬಂದ ಗಾಂಧೀ ಸತ್ಯಾಗ್ರಹ ತತ್ವವು ಭಾರತದ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸುವುದರಲ್ಲಿ ಜಯಶೀಲರಾಗಿ ಈಗ ದೇಶವು ಸ್ವತಂತ್ರವಾಗಿರುತ್ತದೆ.

ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯಾಗಿದೆಯೆಂಬುದರಿಂದ ಈ ಇತಿಹಾಸ ಪ್ರಸಿದ್ಧ ಪವಿತ್ರ ರಾಷ್ಟ್ರೀಯ ಸಪ್ತಾಹದ ಆಚರಣೆ ಇನ್ನು ಅಗತ್ಯವಿಲ್ಲವೆಂದು ತಿಳಿಯುವುದು ಸರಿಯಲ್ಲ.

ಯಾವ ಬಗೆಯ ಸ್ವರಾಜ್ಯ ಸಾಧನೆಯ ಉದ್ದೇಶವಿಟ್ಟುಕೊಂಡು ಸತ್ಯಾಗ್ರಹವು ಜನ್ಮಕ್ಕೆ ಬಂದಿತೊ ಆ ಸ್ವರಾಜ್ಯ ಇನ್ನೂ ಪ್ರಾಪ್ತಿಯಾಗಿಲ್ಲವೆಂದು ಪ್ರತ್ಯೇಕ ಹೇಳುವ ಆವಶ್ಯಕತೆ ಇಲ್ಲ ಯಾವ ವಿಧಾಯಕ ಕಾರ್ಯಕ್ರಮಕ್ಕಾಗಿ ಈ ರಾಷ್ಟ್ರೀಯ ಸಪ್ತಾಹ ವಿನಾಸಲಾಗಿ ಇರಿಸಲ್ಪಡುವ ವಾಡಿಕೆ ಇತ್ತೊ ಆ ವಿಧಾಯಕ ಕಾರ್ಯಕ್ರಮ ಬಲವತ್ತರವಾಗಿ ಮುಂದೊತ್ತುವುದರಿಂದ ಮಾತ್ರ ಆ ನೈಜ ಸ್ವರಾಜ್ಯ ಸಿದ್ಧಿಸಾಧ್ಯ

ದೇಶದ ರಾಜಕೀಯ ಸ್ವಾತಂತ್ರ್ಯ ಆ ವಿಧಾಯಕ ಕಾರ್ಯಬಲವಾಗಿ ಮುಂದೊತ್ತಲು ಅತ್ಯಂತ ಅನುಕೂಲಪರಿಸ್ಥಿತಿಯನ್ನು ತಂದುಕೊಟ್ಟಿರುತ್ತದೆ ಈ ಪರಿಸ್ಥಿತಿಯಲ್ಲಿ ಆ ಸಪ್ತಾಹದ ಆಚರಣೆ ಇನ್ನಷ್ಟು ಆವಶ್ಯಕತೆ ಎಂದರೆ ಅತಿಶಯೋಕ್ತಿ ಇಲ್ಲ

ನಮ್ಮ ವಿಧಾಯಕ ಕಾರ್ಯಕರ್ತರಲ್ಲಿಯೂ ಕಾಂಗ್ರೆಸ್ ಕಮಿಟಿಗಳಲ್ಲಿಯೂ ಸಾಕಷ್ಟು ಜೀವಕಳೆ ಇದ್ದಲ್ಲಿಲ್ಲ ಈ ರಾಷ್ಟ್ರೀಯ ಸಪ್ತಾಹ ಅತ್ಯಂತ ಉತ್ಸಾಹದಲ್ಲಿ ಆಚರಿಸಲ್ಪಡುವುದೆಂಬುದರಲ್ಲಿ ಸಂಶಯಬೇಡ

ಮಹಾತ್ಮಾ ಗಾಂಧೀಯವರ ಸೇವೋಮದ ಶಿಷ್ಯರಿಂದ ಕೂಡಿರುವ ಸರ್ವೋದಯ ಸಮಾಜದವರು ತಮ್ಮ ವಾರ್ಷಿಕ ಮೇಳಗಳನ್ನು ಮುಂದೆ ಈ ರಾಷ್ಟ್ರೀಯ ಸಪ್ತಾಹದ ದಿನಗಳಲ್ಲಿ ನಡೆಸಲು ನಿರ್ಣಯ ಮಾಡಿದರು

ದೇಶದ ಮುಂದಿರುವ ಪ್ರಶ್ನೆಗಳ ಅರಿವು ಸಕಲ ಜನರಲ್ಲಿ ಉಂಟಾಗಿ ಇತಿಹಾಸ ಪ್ರಸಿದ್ಧವಾದ ಈ ಪವಿತ್ರ ರಾಷ್ಟ್ರೀಯ ಸಪ್ತಾಹ ರಾಷ್ಟ್ರಜೀವನದ ಅಸೆಮಂತೆ ಸರ್ವತ್ರ ಭಾರತ ತಲ್ಲಣ ಆಚರಿಸಲ್ಪಡುವ ದಿನಗಳು ಬೇಗನೆ ಬರುವಂತಾಗಲೆಂದು ಹಾರೈಸೋಣ

ಶ್ರೀ ಎಚ್. ಎಸ್. ಹುಸೇನ್ ಸಾಹೇಬರ ಹೇಳಿಕೆ

ಈ ಜಿಲ್ಲೆಯ ಪರವಾಗಿ ಇದೇ ನೀರಾವರಿ ಕಾಮಗಾರಿಯ ಕುರಿತು ಶ್ರೀ ಎಚ್. ಎಸ್. ಹುಸೇನ್ ಸಾಹೇಬರು ಮಾತಾಡುತ್ತ ದಕ್ಷಿಣ ಕನ್ನಡ ಅಸಡ್ಡೆಗೀಡಾದ ಕ್ಷೇತ್ರ, ಅಧಿಪತ್ಯದಲ್ಲಿನ ದೊಡ್ಡ ದೊಡ್ಡ ಯೋಜನೆಗಳನ್ನು ಬಾಕಿ ಇರಿಸಿ ಸಣ್ಣ ಪುಟ್ಟ ಯೋಜನೆಗಳನ್ನು ಕೈಕೊಳ್ಳಿ ಸಣ್ಣ ಪುಟ್ಟ ನೀರಾವರಿ ಕಾಮಗಾರಿ ಕೆಲಸ ಕಾರ್ಯಗಳನ್ನು ರೆವಿನ್ಯೂ ಇಲಾಖೆಯಿಂದ ವರ್ಕ್ಸ್ ಇಲಾಖೆಗೆ ವರ್ಗಾಯಿಸಿ, ಹಾಳೇ ಬಾವಿಗಳನ್ನು ತೋಡಿಸಲು ಕೊಡಲಾಗುವ ಗ್ರಾಂಟುಗಳ ಹಣವನ್ನೂ ಅತ್ತ ವರ್ಗಾಯಿಸಿ ಎಂದರು.

ಟೀಕೆ–ಟಿಪ್ಪಣಿಗಳು

ಮಾನ್ಯ ಶ್ರೀ ಕುಮಾರಸ್ವಾಮಿರಾಜರ ಹೊಸ ಮಂತ್ರಿ ಮಂಡಲ

ಇದನ್ನು ಬರೆವ ದಿನ ಮಾನ್ಯ ಶ್ರೀ ಕುಮಾರಸ್ವಾಮಿರಾಜರ ಹೊಸ ಮಂತ್ರಿ ಮಂಡಲದ ಹತ್ತು ಮಂದಿ ಮಂತ್ರಿಯವರು ಅಧಿಕಾರ ಸ್ವೀಕರಿಸಿದ ವಾರ್ತೆ ಬಂದಿರುತ್ತದೆ.

ಶ್ರೀ ಕುಮಾರಸ್ವಾಮಿರಾಜ, ಶ್ರೀ ಸಂಜೀವ ರೆಡ್ಡಿ ಮತ್ತು ಶ್ರೀ ಪರಮೇಶ್ವರಮ್ ಈ ಮೂರು ಮಂದಿ ಮಾತ್ರ ಹೊಸಬರು. ಕಳೆದ ವರ್ಷದ ಮಂತ್ರಿಗಳಲ್ಲಿ ಶ್ರೀಗಳಾದ ಭಕ್ತವತ್ಸಲಮ್, ಮಾಧವ ಮೆನೊನ್, ಚಂದ್ರವಳ್ಳಿ, ಸೀತಾರಾಮು ರೆಡ್ಡಿ, ಎ ಬಿ. ಶೆಟ್ಟಿ, ಗೋಪಾಲ ರೆಡ್ಡಿ ಮತ್ತು ಡಾಕ್ಟರ್ ಟಿ ಎಸ್ ಎಸ್ ರಾಜನ್ ಈ ಏಳು ಮಂದಿಯನ್ನು ಪುನಃ ಸೇರಿಸಿಕೊಳ್ಳಲಾಗಿದೆ

ಶ್ರೀಗಳಾದ ಅವಿನಾಶ ಲಿಂಗಮ್ ಚೆಟ್ಟಿಯಾರರು, ಗುರುಪಾದಮ್ ಮತ್ತು ಕೂರ್ಮಯ್ಯ ಈ ಮೂರು ಮಂದಿಯ ಮಂತ್ರಿತ್ವದ ಸುಕ್ಕಾಯುವಾಗಿರುತ್ತದೆ

ಇದಿಷ್ಟು ಇಂದಿನ ವಾರ್ತೆಯ ಸಾರಾಂಶ ಇದರ ಅರ್ಥ ಹತ್ತೆಯು ಅಂದರೆ ಕಳೆದ ವರ್ಷದ ಮಂತ್ರಿ ಮಂಡಲವೇ ಒಂದೆರಡು ಕೆದಲಾವಣೆಗಳೊಡನೆ ಹೊಸ ಧುರೀಣತ್ವದಲ್ಲಿ ನಡೆಯುವ ನಿರ್ಧಾರವಾಗಿದೆಯೆಂಬದು

ಮಂತ್ರಿ ಮಂಡಲದ ಕಳೆದ ವರ್ಷದ ಧೋರಣೆಯಲ್ಲಿ ಒಳಹೊಟ್ಟಿನ ಯಾವುದೇ ಬದಲಾವಣೆಯಾಗಲಿ ಸಂಭವವಿಲ್ಲವೆಂದು ಪ್ರತ್ಯೇಕ ಹೇಳುವ ಅಂಶ ಉಳಿದಿಲ್ಲ

ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ಕುಮಾರಸ್ವಾಮಿರಾಜರು ಆರಿಸಲ್ಪಟ್ಟ ಸಂದರ್ಭಗಳನ್ನು ಪರಿಶೀಲಿಸುವುದು ಅಗತ್ಯ ಆ ಸಭೆಗೆ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಹಾಜರಿದ್ದರು ಡಾ ಸುಬ್ಬರಾಯನರಿಗೆ 89 ಮತಗಳೂ ಶ್ರೀ ಕುಮಾರಸ್ವಾಮಿರಾಜರಿಗೆ 105 ಮತಗಳೂ ಸಿಕ್ಕಿ ರಾಜರು ಹದಿನಾರು ಮತಗಳ ಬಹುಮತದಿಂದ ಆರಿಸಲ್ಪಟ್ಟರು

ಶ್ರೀ ಕುಮಾರಸ್ವಾಮಿರಾಜರಿಗೆ ಮತ ಕೊಟ್ಟವರು ಕಳೆದ ವರ್ಷದ ಸರಕಾರೀ ಧೋರಣೆಯನ್ನು ಹೆಚ್ಚು ಕಡಮೆ ಸಮರ್ಥಿಸುವವರೆಂದೂ ಈ ಧೋರಣೆ ಕಾಂಗ್ರೆಸ್ ಪಕ್ಷದ ಸುಮಾರು 89 ಮಂದಿ ಸದಸ್ಯರಿಗೆ ಒಪ್ಪಿಗೆ ಇಲ್ಲವೆಂದೂ ಇದರ ಅರ್ಥವೆಂದು ಹೇಳಬಹುದು

ಪ್ರಜಾಪ್ರಭುತ್ವದ ಕ್ರಮದಂತೆ ಬಹುಮತವಿದ್ದ ಧೋರಣೆಯನ್ನು ಮುಂದೊತ್ತುವುದೇ ವಾಡಿಕೆ ಆದರೂ ಈ ಪಕ್ಷದ ಇತ್ಯಂಗಳೊಳಗೆ ಮೂಲತತ್ವಗಳ ಕುರಿತಾದ ಮತ ಭೇದವಿರುವುದು ಶಕ್ಯವಿಲ್ಲ. ಯಾಕೆಂದರೆ ಕಾಂಗ್ರೆಸ್ ಪಕ್ಷದ ಮೂಲ ತತ್ವಗಳು ಸ್ವಪ್ನವಾಗಿ ಸರ್ವ ಸಮ್ಮತವಾಗಿಯೇ ಇರುವಂಥವುಗಳು ಅವುಗಳನ್ನು ಜಾರಿಗೆ ತರುವ ವಿಧಿ ವಿಧಾನಗಳ ಕುರಿತು ಮತ ಭೇದವಿರುವುದು ಸಾಧ್ಯ. ಈ ವಿಧಿ ವಿಧಾನಗಳನ್ನೇ ಕೈಕೊಂಡು ಇತ್ತಂಡಕ್ಕೂ ಒಪ್ಪಿಗೆಯಾಗುವ ಬಗೆಯ ಮಂತ್ರಿ ಮಂಡಲ ರಚಿಸಿಕೊಳ್ಳುವುದು ಉತ್ತಮವಿತ್ತೆಂದು ಅನೇಕರಿಗೆ ತೋರುತ್ತಿದೆ.

ಆದರೆ ಪಕ್ಷದ ನಾಯಕರಾಗಿ ಆರಿಸಲ್ಪಟ್ಟವರು ಇದು ಶಕ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಿರುವರೆಂಬುದು ಸ್ಪಷ್ಟ

ಅಂತೂ ರಚಿತವಾದ ಮಂತ್ರಿ ಮಂಡಲ ತಮ್ಮ ದಾರಿಯಲ್ಲಿಯಾದರೂ ಜನ ಸೇವೆ ಸಾಧಿಸುವುದರಲ್ಲಿ ಕೃತ ಕೃತ್ಯವಾಗಲೆಂದು ಹಾರೈಸುತ್ತೇವೆ

ತಿರುವಾಂಕೂರು – ಕೊಚ್ಚಿ ಒಕ್ಕೂಟ

ಐಕ್ಯ ಕೇರಳದ ಮೊದಲು ಮೆಟ್ಟಲಾಗಿ ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಒಕ್ಕೂಟವಾಗಲು ಸಿದ್ಧರಿಸಿರುವ ವಾರ್ತೆ ಸಂತೋಷಕರವಿರುತ್ತದೆ ಕೇಂದ್ರ ಸರಕಾರದ ಸಂಸ್ಥಾನ ಖಾತೆಯವರು ಈ ಒಕ್ಕೂಟ ರಚನೆಗೆ ಒಪ್ಪಿಗೆ ಕೊಟ್ಟಿರುತ್ತಾರೆ

ದಿಲ್ಲಿಯಲ್ಲಿ ಈ ಕುರಿತು ಸೇರಿದ ಕೇರಳಿಗರ ಒಂದು ಸಭೆಯಲ್ಲಿ ತಿರುವಾಂಕೂರಿನ ಮುಖ್ಯ ಮಂತ್ರಿ ಶ್ರೀ ಟಿ ಕೆ ನಾರಾಯಣ ಪಿಳ್ಳೆಯವರೂ ಕೊಚ್ಚಿಯ ಮುಖ್ಯ ಮಂತ್ರಿ ಶ್ರೀ ಇಕ್ಕಾಂಡ ವಾರಿಯರವರೂ ಇಡೀ ಐಕ್ಯ ಕೇರಳ ಸ್ಥಾಪನೆಯ ಪ್ರಧಾನ ಸೋಪಾನವಾಗಲೆಂದು ಹಾರೈಸಿದರು

ತಿರುವಾಂಕೂರು ಕೊಚ್ಚಿ ಮದ್ರಾಸಿಗೂ ಮೂರು ವಾರು ಸೇರಿ ಕೇರಳ ಪ್ರಾಂತ್ಯ ರಚನೆ ಮಾಡಲು ಕೇಂದ್ರ ಸರಕಾರ ಬಗೆಗೆ ಒಪ್ಪಿಗೆ ಕೊಡಬೇಕೆಂದು ಒಪ್ಪಣ್ಣಿಯವೂ ತಿಳಿಸಿತ

ಕೇರಳ ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಇವೆರಡು ಸಂಸ್ಥಾನಗಳು ಈ ಒಕ್ಕೂಟವು ಅವರಲ್ಲಿ ಲವಲವಿಕೆ ಸಿದ್ಧವಿದೆ ಎಂಬುದೆ ಈ ನಿರ್ಣಯದ ಅರ್ಥ ಎರಡು ಸಂಸ್ಥಾನಗಳಲ್ಲಿ ವ್ಯಾಪಕ ಸಾಂಸ್ಕೃತಿಕ ಸಾಮ್ಯವಿರುವುದೆ ಬುದ್ಧಿಯಂದರ ಅರ್ಥವೆಂದರೆ ತಪ್ಪಿಲ್ಲ

ಮೈಸೂರು ಕನ್ನಡಿಗರೂ ಆಸಕ್ತಿಯಿಂದ ಇವರೂ ಈ ಕೇರಳಿಗರಿಂದ ಸ್ವಲ್ಪ ಪಾಠ ಕಲಿತರೆ ಉಪಯುಕ್ತವಾಗಬಹುದು

ಅಟ್ಲಾಂಟಿಕ್ ಒಪ್ಪಂದವೂ ಬೇಡ ಪೆಸಿಫಿಕ್ ಒಪ್ಪಂದವೂ ಬೇಡ

ಭಾರತ ಸರಕಾರದ ಪ್ರಧಾನ ಸಚಿವ ಪಂಡಿತ ಜವಾಹರಲಾಲ್ ನೆಹರು ಅವರು ಭಾರತದ ವಿದೇಶಾಂಗ ನೀತಿಯನ್ನು ಪುನಃ ಸ್ಪಷ್ಟವಾಗಿ ಹೀಳಿತ್ತ ನಾವು ಅಟ್ಲಾಂಟಿಕ ಒಪ್ಪಂದಕ್ಕಾಗಲಿ ಇನ್ನೊಂದು ಪಸಿಫಿಕ್ ಒಪ್ಪಂದಕ್ಕಾಗಲಿ ಸೇರುವುದಿಲ್ಲವೆಂದು ಸಾರಿದರು

ರಸ್ಯಾ ಸರಕಾರಕ್ಕೆ ಪಂಡಿತ ಜವಾಹರಲಾಲರ ಈ ಮಾತುಗಳಿಂದ ತೃಪ್ತಿಯಾಗಿರಬೇಕು ಯಾಕಂದರೆ ಇಂಥ ಒಪ್ಪಂದಗಳನ್ನು ರಸ್ಯಾ ಸರಕಾರ ಅತ್ಯಂತ ಕಠಿಣವಾಗಿ ದೂರುತ್ತಾ ಇದೆ ಇದು ಕೃತಿಯ ಮಹಾಯುದ್ಧದ ಸನ್ನಾಹವೆಂದೂ ಸಂಯುಕ್ತ ರಾಷ್ಟ್ರಗಳ ಸಂಘಕ್ಕೆ ಈ ಒಪ್ಪಂದ ವಿರೋಧವೆಂದೂ ರಸ್ಯಾ ಸಾರುತ್ತ ಇದೆ

ಮೂರನೆ ಮಹಾಯುದ್ಧವಾಗದಂತೆ ತಡೆ

ಗಟ್ಟುವುದೇ ತನ್ನ ಉದ್ದೇಶವೆಂದು ಅಟ್ಲಾಂಟಿಕ ಒಪ್ಪಂದದವರು ಸಾಧಿಸುತ್ತಿದ್ದಾರೆ.

ಅಮೇರಿಕ ರಸ್ಯಾಗಳಿಬ್ಬರ ಮುಂದಾಳ್ತನವೂ ನನಗೆ ಬೇಡವೆಂದೂ ಭಾರತವು ತನ್ನದೇ ಆದ ದಾರಿಯಲ್ಲಿ ನರ್ತಿಸಲಿಚ್ಛಿಸುತ್ತಿರುವೆಯೆಂದೂ ವಂಡಿತ ಜವಾಹರಲಾಲರ ಅಭಿಪ್ರಾಯವಿದ್ದು ಅವರ ಹೇಳಿಕೆಯು ಈ ಮೂಲ ತತ್ವಕ್ಕೆ ಅನುಗುಣವಾಗಿಯೇ ಇದೆ.

ಬ್ರಿಟನು ಭಾರತ ಸಂಬಂಧ

ಬ್ರಿಟಿಷ್ ಕಾಮನ್‌ವೆಲ್ತಿನ ರಾಷ್ಟ್ರಗಳ ಪ್ರಧಾನ ಸಚಿವರುಗಳ ಪರಿಷತ್ತು ಇದೇ ತಿಂಗಳಲ್ಲಿ ಲಂಡನಿನಲ್ಲಿ ಸೇರಲಿದೆಯೆಂದೂ ಭಾರತ ಹಾಗೂ ಪಾಕಿಸ್ತಾನದ ಪ್ರಧಾನ ಸಚಿವರುಗಳು ಇದಕ್ಕೆ ತೆರಳಲಿರುವರೆಂದೂ ಪ್ರಕಟವಾಗಿರುತ್ತದೆ.

ಬ್ರಿಟನು ಭಾರತ ಸಂಬಂಧ ಹೇಗಿರಬೇಕೆಂಬ ಪ್ರಶ್ನೆಯ ತೀರ್ಮಾನದಲ್ಲಿ ಈ ಪರಿಷತ್ತು ಇನ್ನೊಂದು ಮೆಟ್ಟಲಾಗುವುದೆಂಬುದು ಸ್ಪಷ್ಟ.

ಭಾರತದ ಪೂರ್ಣ ಸ್ವಾತಂತ್ರ್ಯಕ್ಕೆ ಯಾವುದೇ ರೀತಿಯ ಚ್ಯುತಿ ಇಲ್ಲದೆ ಬ್ರಿಟಿಷ್ ಕಾಮನ್‌ವೆಲ್ತಿನ ಸಂಬಂಧ ಇಟ್ಟುಕೊಳ್ಳಲು ಸಾಧ್ಯವಾಗುವ ದಾರಿ ಕಂಡು ಹಿಡಿದರೆ ಅದರಂತೆ ನರ್ತಿಸಲು ಭಾರತವು ಸಂತೋಷದಿಂದ ಒಪ್ಪುತಕ್ಕದ್ದು ಎಂಬುದು ಪಂಡಿತ ಜವಾಹರಲಾಲರ ಘೋರಣೆ ಇದಕ್ಕೆ ಅಡಿಪಾಯ ಭಾರತ ಒಸ್ಕೃತಿದೆಯೆಂಬುದಕ್ಕೆ ಸಂಶಯವಿಲ್ಲ

ಭಾರತದ ಶಾಂತಿ ಸುದೇಶವನ್ನು ಜಗತ್ತಿಗೆ ಸಾರಲು ಬ್ರಿಟನ ಸಂಬಂಧ ಉಳಿಯುಕ್ಕೆಂಬ ವಿಶ್ವಾಸ ಬಹಳಂಗತ ಗೋಪಿಲೆಯಿಂದ ಹಿಡಿದು ಮಹಾತ್ಮಾ ಗಾಂಧಿಯವರ ತನಕ ಅನೇಕ ಗಾಷ್ಟ್ರೀಯ ನಾಯಕರುಗಳಲ್ಲಿದ್ದ ಸಂಬಿಕೆ ಪಂಡಿತ ಜವಾಹರಲಾಲರು ಈ ವಿಶ್ವಾಸದಿಂದಲೇ ಮುಂದರಿಸುತ್ತಿರುವುದು ಸಜವಾಗಿಯೂ ಕೃಪ್ತಿಕರವೇ ಇರುತ್ತದೆ.

ಜಿಲ್ಲಾ ಬೋರ್ಡು ಚುನಾವಣೆಗಳು

ಈಗ ಇದ್ದ ನುತದಾರ ಪಟ್ಟಿಗಳನ್ನೇ ಉಪಯೋಗಿಸಿ ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳನ್ನು ನಡೆಸಲು ಮದ್ರಾಸು ಸರಕಾರವು ಕಟ್ಟಕಡೆಗೆ ನಿರ್ಣಯ ಮಾಡಿರುತ್ತದೆ ಹೊಸತಾಗಿ ಚುನಾಯಿಸಲ್ಪಡುವ ಸದಸ್ಯರು ಇದೇ ಜುಲ್ಯಾ ತಾ 2ಕ್ಕೆ ಅಧಿಕಾರಕ್ಕೆ ಬರಬೇಕೆಂದು ಸರಕಾರದವರು ಪ್ರಕಟಿಸಿರುತ್ತಾರೆ ಮಂತ್ರಿಮಂಡಲದ ಬದಲಾವಣೆಯಿಂದ ಈ ನಿರ್ಧಾರ ಬದಲಾಗಲಿಕ್ಕಿಲ್ಲವೆಂದ. ಎಣಿಸಿದರೆ ತಪ್ಪಾಗಲಾರದು

ಅಂತೂ ಮೇಲಿನ ಅಜ್ಞೆಯಂತೆ ಬೋರ್ಡು ಚುನಾವಣೆಗಳು ಅನತಿ ದೂರದಲ್ಲೆ ನಡೆಯಲಿವೆಯೆನ್ನಬೇಕು ಇದರ ಕಾರ್ಯಕ್ರಮ ಇನ್ನೂ ಪ್ರಕಟವಾಗಿಲ್ಲವೆಂಬುದೊಂದು ಜೋಡ್ಯ.

ಮುನಿಸಿಪಲ್ ಚುನಾವಣೆಗಳಲ್ಲಿ ನಮ್ಮಲ್ಲಿಯ ಕಾಂಗ್ರೆಸ್ ಪಕ್ಷದವರು ಪಕ್ಷವಾಗಿ ಭಾಗವಹಿಸಲಿಲ್ಲ. ಅದೇ ಧೋರಣೆಯಿಂದ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿಯೂ ಕಾಂಗ್ರೆಸ್ ಪಕ್ಷವು ತನ್ನ ಉಮೇದ್ವಾರರನ್ನು ನಿಲ್ಲಿಸುವಂತಿಲ್ಲ.

ಇತ್ತಂಡಕ್ಕೂ ನಾಚಿಕೆಗೇಡು

ದೇವಸ್ಥಾನವು ಒಂದೇ ವರ್ಗದವರ ಸಂಸ್ಥೆಯೆಂದರೆ ಏನೆಂಬುದು ನಮಗೆ ಸ್ಪಷ್ಟವಾಗಿದೆವುದಿಲ್ಲ ದೇವರಂತೂ ಒಂದೇ ವರ್ಗಕ್ಕೆ ಸೇರಿದವನೆಂಬ ಅಭಿಪ್ರಾಯ ಇರಲಿಕ್ಕಿಲ್ಲವಸ್ಸೆ? ದೇವಸ್ಥಾನದ ಕಟ್ಟಡ, ಇದಕ್ಕೆ ಸಂಬಂಧಪಟ್ಟ ಆಸ್ತಿ, ಚಿನ್ನಬೆಳ್ಳಿ, ಹಣಕಾಸು, ಇವೆಲ್ಲ ಒಂದೇ ವರ್ಗದವರದೆಂಬ ಅಭಿಪ್ರಾಯವಿರಬಹುದೆಂದೇ ಇಟ್ಟುಕೊಳ್ಳೋಣ ಇದನ್ನೆಲ್ಲ ಸಂಗ್ರಹಿಸಿಟ್ಟುದರ ಉದ್ದೇಶವೇನು? ದೇವಸ್ಥಾನವು ಸರಿಯಾಗಿ ನಡೆದು ಬರಬೇಕೆಂಬುದೇ ಉದ್ದೇಶವಿರಬೇಕು ದೇವಸ್ಥಾನವು ನಡೆಯುವುದಾದರೂ ಏತಕ್ಕೆ? ದೇವರ ಆರಾಧನೆಗಾಗಿ ಇರಬೇಕು ದೇವರ ಆರಾಧನೆಯನ್ನು ಇಲ್ಲಿ ಒಂದೇ ವರ್ಗದವರು ಮಾತ್ರ ಮಾಡಬೇಕೆಂಬುದಕ್ಕೆ ಟಿಟಿಕ್ಕೆ ಸಿರುತ್ತದೆಯೆ? ದೇವರು ಒಂದೇ ವರ್ಗದವನೆಂದು ಸಿರಲಾರನು ಇಲ್ಲಿ ಇತರ ವರ್ಗದವರೂ ಆರಾಧಿಸಕೂಡದೆಂಬುದೇತಕ್ಕೆ? ಈ ಸಂಕುಚಿತ ಬುದ್ಧಿಯ ಮೂಲವೆಲ್ಲಿ?

ದೇವಸ್ಥಾನಕ್ಕೆ ಸಂಬಂಧಪಟ್ಟ ಆಸ್ತಿ ಹಣ ವಗೈರೆಯಾವ ಸಂಪತ್ತಿನ ಉಪಯೋಗ ಅದನ್ನು ಸಂಗ್ರಹಿಸಿದ ವರ್ಗಕ್ಕೆಗೆ ಸೇರಿಸಿಕೊಂಬುದು ಇದರ ಅಭಿಪ್ರಾಯವಿರಬೇಕು ಈ ಸಂಪತ್ತಿನ ನಿಜವಾದ ಉದ್ದೇಶ ಅಂದರೆ ದೇವರ ಆರಾಧನೆಯಿಂದಾದರೆ ಅದನ್ನು ಒಂದೇ ವರ್ಗಕ್ಕೆ ಸಲವೆಕೆಂದು ವಾದಿಸಲು ಕಾರಣವಿಲ್ಲ ಆ ಸಂಪತ್ತಿನ ಇತರ ಉಪಯೋಜನಗಳು ಅಂದರೆ ಅಗಿಂದಾಗ ನಡೆಯುವ ಸವಸಾಂಧನೆ ಖರ್ಚು ಇತ್ಯಾದಿಗಳು ಇತರರಿಗಿಲ್ಲ ತಮಗೇನೆ ಸಿಕ್ಕಬೇಕೆಂದು ವಾದಿಸಿದರೆ ಸ್ವಲ್ಪ ಅರ್ಥವಿರುತ್ತದ

ಸರಿಯಾಗಿ ಪರಿಶೀಲಿಸಿದರೆ ಈ ಎಲ್ಲಿಯ ವಾದವೆ ಪರಿಣಾಮನುನ್ಯವೆಂದು ಇದಕ್ಕೆ ಸಂಬಂಧ ಪಟ್ಟವರು ಸ್ವಲ್ಪವಾದರೂ ಯೋಚಿಸುವುದಿಲ್ಲವೆಂಬುದು ದುಃಖಕರವಾದ ವಿಷಯ ದೇವಸ್ಥಾನಗಳ ಸಂಪತ್ತಿನ ಉಪಯೋಗ ಇಲ್ಲಿ ಎಂದಾದರೆ ಅದನ್ನು ಆದಷ್ಟು ಬೇಗನೆ ಸರಕಾರವೇ ಸ್ವಾಧೀನ ಪಡಿಸಿಕೊಳ್ಳುವುದು ಉತ್ತಮವೆಂಬ ಅಭಿಪ್ರಾಯಕ್ಕೆ ಬರಲಿಂದ ಪೂರ್ಣ ಬಲ ಕೊಟ್ಟಂತಾಗುತ್ತದೆಯೆಂಬುದನ್ನು ತಿಳಿಯಲು ಹೆಚ್ಚು ಕಷ್ಟವಿಲ್ಲ

ಕಾಲದ ಪರಿಸ್ಥಿತಿಯನ್ನಾದರೂ ಯೋಚಿಸುವಷ್ಟು ಜಾಣ್ಮೆಯೂ ಇವರಲ್ಲಿಲ್ಲವೆ? ದೇವಸ್ಥಾನಗಳ ಕುರಿತು ಸಂಕುಚಿತ ಬುದ್ಧಿಯನ್ನು ಕಟ್ಟಿಕೊಂಡರೆ ಆಗುವ ಸಮಸ್ಯೆಯ ಪರಿಣಾಮವೆಂದರೆ ಆ ದೇವಸ್ಥಾನಗಳ ಮುಕ್ತಾಯ. ಈ ಕುರಿತು ಮೂರೂ ಸಂಶಯ ಪಡುವುದು ಬೇಡ.

ದೇವಸ್ಥಾನದ ಆಡಳಿತೆ ತಮ್ಮ ಕೈಯಲ್ಲೇ ಇರಿಸಬೇಕೆಂದು ವಾದಿಸುವುದಾದರೆ ಅಕ್ಷೇಪವಿಲ್ಲ. ತಮ್ಮ ಹಿರಿಯರಿಂದ ಬಂದ ಸಂಸ್ಥೆ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ತಮ್ಮದೆಂದು ವಾದಿಸಿದರೆ ಸ್ವಲ್ಪವಾದರೂ ಅರ್ಥವಿದೆ. ಜವಾಬ್ದಾರಿ ಹೊರುವ ವಿಷಯದಲ್ಲಿ ತರ್ಕಿಸಬಹುದು, ಹಕ್ಕುಗಳನ್ನೂ ಲಾಭಾಂಶಗಳನ್ನೂ ಹಿಡಿದು ವಾದಿಸಿದರೆ ಹಾಸ್ಯಾಸ್ಪದವಾಗುವುದು.

ಆಡಳಿತೆಯ ಜವಾಬ್ದಾರಿಬೇಕೆಂದು ವಾದಿಸಿದರೂ ಇಲ್ಲಿ ದೇವರನ್ನು ಆರಾಧಿಸುವ ಹಕ್ಕು ತಮಗೆ ಮಾತ್ರವೆಂದು ಖಂಡಿತವಾಗಿಯೂ ಹೇಳಬಾರದು. ಈ ದೇವಸ್ಥಾನಗಳನ್ನು ಇಡುತನಕ ನಡೆಸಿಕೊಂಡ ಹಿರಿಯರು ಎಂದೂ ಈ ತತ್ವ ಕಟ್ಟಿಕೊಂಡಿಲ್ಲ ದೇವಸ್ಥಾನದಲ್ಲಿ ಇತರ ವರ್ಗದ ಭಜಕರಿಗೆ ಅಧಿಕಾರಿಸಲು ಬಿಡುವುದಿಲ್ಲವೆ? ಇದುವರೆಗೆ ಬಿಟ್ಟಿಲ್ಲವೆಂದರೆ ಅಸ್ಪೃಶ್ಯರಿಗೆ ಮಾತ್ರ ಇತರ ಎಲ್ಲಾ ವರ್ಗದವರಿಗೆ ಬಿಟ್ಟಿದ್ದಾರೆ ಈಗ ಇದು ತಮಗೆ ಮಾತ್ರ ಸೇರಿದ್ದೆಂದು ವಾದಿಸುವುದು ಸರಿಯಲ್ಲ.

ಅಸ್ಪೃಶ್ಯರನ್ನು ಬಿಡಬೇಕಾಗುತ್ತದೆಂಬುದರಿಂದಲೇ ಈ ಬಗೆಯ ತರ್ಕಸಾಧನೆ ಕಟ್ಟಿಕೊಳ್ಳಲಾಗಿದೆಯೆಂಬುದು ಸ್ಪಷ್ಟವಿರುತ್ತದೆ.

ಅಸ್ಪೃಶ್ಯತೆ ನಿಜವಾಗಿಯೂ ಹಿಂದೂ ಧರ್ಮವೆ? ಅಥವಾ ಮಹಾತ್ಮಾಗಾಂಧಿಯವರು ಸಾರಿದಂತೆ ಅದು ಹಿಂದೂ ಧರ್ಮದ ಮೇಲಿನ ಅತೀ ದೊಡ್ಡ ಕಳಂಕವೇ ಇದು ನಿಜವಾಗಿ ತೀರ್ಮಾನಿಸತಕ್ಕ ಪ್ರಶ್ನೆ

ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಈ ಪ್ರಶ್ನೆಯ ಪರಿಶೀಲನೆ ಧರ್ಮದ ಉಪದೇಶದಂತೆ ಜೀವಿಸುವುದರಿಂದ ಮಾತ್ರ ಸಾಧ್ಯ ಅಸ್ಪೃಶ್ಯತೆ ಧರ್ಮವೆಂದು ಭಾವಿಸುವವರು ತಂದೆ ಎಷ್ಟರ ಮಟ್ಟಿಗೆ ಹಿಂದೂ ಧರ್ಮದ ಕುದಶತ್ವ ತತ್ವಗಳಂತೆ ವರ್ತಿಸುತ್ತಿರುವರೆಂದು ಆತ್ಮ ಪರಿಶೀಲನ ಮಾಡಿಕೊಳ್ಳಲಿ. ಮಹಾತ್ಮಾಗಾಂಧಿಗಿಂತಲೂ ಉತ್ತಮ ಜೀವನ ತಾವು ನಡೆಸುತ್ತಿರುವೆವೆಂಬುದರ ಕುರಿತು ತಮ್ಮ ಮನಸ್ಸಾಕ್ಷಿಯನ್ನೇ ಕೇಳಿಕೊಳ್ಳಲಿ ಈ ಪ್ರಶ್ನೆಯ ತೀರ್ಮಾನ ಹೇಳಲು ಗಾಂಧೀಜಿಗೆ ಇದ್ದ ಅಧಿಕಾರ ಇನ್ನಾವ ಈ ಯುಗದ ಇನ್ನಾವ ಹಿಂದುವಿಗೂ ಇಲ್ಲವೆಂಬುದನ್ನು ಅವರೇ ಆಗ ತಿಳಿಯುವರು.

ಅಂತೂ ಈ ಪ್ರಶ್ನೆಯ ಕುರಿತು ಸಾಮಾನ್ಯ ಹಿಂದುಗಳಲ್ಲಿ ಸರಿಯಾದ ಜ್ಞಾನ ಪ್ರಚಾರ ಮಾಡಿ ಅವರ ಹೃದಯ ಪರಿವರ್ತನ ಸಾಧಿಸುವುದು ಹರಿಜನ ಸೇವಾಸಂಘದ ಮುಖ್ಯ ಕಾರ್ಯಕ್ರಮ ಈ ಸಂಘದವರು ಒಂದಿದೆಯೆಂದ ಹರಿಜನರ ಸ್ಥಿತಿ ಸುಧಾರಿಸಲು ಅನಶ್ಯವುಳ್ಳ ಕೆಲಸಗಳನ್ನು ಮಾಡುವಾಗ ಇತರ ಹಿಂದುಗಳಲ್ಲಿಯೂ ಅಜ್ಞಾನ ಹೋಗಲಾಡಿಸಲು ಯತ್ನಿಸಬೇಕು ಸಮಾಜದಲ್ಲಿ ಹಲವು ಕಾಲದಿಂದ ಬಂದ ಮೂಢನಂಬಿಕೆ ಹೋದರೆ ಹರಿಜನರ ಸ್ಥಿತಿ ಸುಧಾರಣೆಗೆ ಬಹಳ ಸಹಾಯವಾಗುವುದು.

ದೇವಸ್ಥಾನ ಪ್ರವೇಶ ಬಲಾತ್ಕಾರದಿಂದ ಸಾಧಿಸಿಗತಕ್ಕ ವಿಷಯವೆಂದಿಗೂ ಅಲ್ಲ. ಪೋಲೀಸು ಸಹಾಯದಿಂದ ಇವರು ದೇವಸ್ಥಾನಕ್ಕೆ ಹೋದರೆಂಬ ವಾರ್ತೆಯಲ್ಲಿ ತಲಮಾತ್ರ ಸತ್ಯಾಂಶವಿದ್ದರೆ ಇದು ಖಂಡಿತವಾಗಿಯೂ ನಾಚಿಕೆಗೇಡು ಮಹಾತ್ಮಾ ಗಾಂಧಿಯವರ ಅತ್ಯದ್ಭುತ ಶಾಂತಿಯನ್ನು ಭಂಗಪಡಿಸಲು ಇದಕ್ಕೂ ಹೆಚ್ಚಿನ ಕೆಲಸ ಬೇಕಾಗಿಲ್ಲ.

ಹರಿಜನ ಸೇವಾಸಂಘದ ಕಾರ್ಯದರ್ಶಿಯವರು ತಮ್ಮ ಮೇಲಿನ ಈ ಆರೋಪದ ನಿರಸನವನ್ನು ಮಹಾಜನರ ಎದುರು ಇಡುವುದು ಅವರ ಕರ್ತವ್ಯವಿರುತ್ತದೆ.

ಎಸೆಂಬ್ಲಿಯಲ್ಲಿ ದಕ್ಷಿಣ ಕನ್ನಡ ನೀರಾವರಿ ಕಾಮಗಾರಿಗಳ ಅಭಿವೃದ್ಧಿ

ನಮ್ಮ ಸಚಿವ ಶ್ರೀಭಕ್ತವತ್ಸಲಂ ಅವರು ಮದ್ರಾಸ್ ಎಸೆಂಬ್ಲಿಯಲ್ಲಿ ಮಾತಾಡುತ್ತ ಹೀಗೆಂದರು:—

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಕಾಮಗಾರಿಗಳ ಸೌಕರ್ಯಗಳು ಸಾಲವೆಂದು ಆ ಜಿಲ್ಲೆಯ ಸಭಾಸದಸ್ಯರು ದೂರು ತಿದ್ದಾರೆ; ಅವೆಲ್ಲವೂ ಹಿಂದಿನವರು ಅಸಡ್ಡೆ, ಅಶ್ರದ್ಧೆಯ ಫಲವಾಗಿದ್ದು, ಆ ಹಿಂದಿನ ಅಲಕ್ಷ್ಯಕ್ಕಾಗಿ ಈ ಸರಕಾರದ ಮೇಲೆ ಆರೋಪ ಹೊರಿಸಲಾಗದು; ಅದರ ಬದಲಾಗಿ ಈ ಸರಕಾರ, ಬಹಳ ವ್ಯಯಸಾಧ್ಯವಾದ, ಕಾಸರಗೋಡು ತಾಲೂಕಿನ ಶರಿಯಾರಿನ ಯೋಜನೆಯನ್ನಾಗಲೇ ಕೈಗೆತೆಗೆದುಕೊಂಡು ಬಜೆಟಿನಲ್ಲಿ ೩ ಲಕ್ಷ ರೂ ಪಾಯಿಗಳನ್ನು ತೆಗೆದಿಟ್ಟಿದೆ. ಈ ದಿನ ನಾವು ದಕ್ಷಿಣ ಕನ್ನಡಕ್ಕಾಗಿ ಇನ್ನೊಂದು ಯೋಜನೆಯನ್ನೂ ಮಂಜೂರು ಮಾಡುತ್ತೇವೆ, ಅದರ ಹೆಸರು ಚಂದ್ರಮಧಗ ಯೋಜನೆ ಎಂದು. ಇದು ಪೂರ್ಣವಾದಾಗ ಸುಮಾರು ೩೦೦ ಎಕ್ರೆ ಭೂಮಿಗೆ ಕಾಲಿವೆ ನೀರಿನ ಸೌಕರ್ಯವೊದಗುವುದು'' ಎಂದರು

ಸತ್ಕಾರಕೂಟ

ಹೈದರಾಬಾದಿನ ನೆಟರ್ನರಿ ಸರ್ಜನರಾಗಿದ್ದು ಹೆಸರುಗಳಿಸಿ ಸದ್ರಿ ಸರಕಾರದಿಂದ ವಿದೇಶ ನೇತನವನ್ನೆಡೆದು ಇಂಗ್ಲೆಂಡಿಗೆ ಹೋಗಿ ಬೆಕ್ಟೀರಿಯೋಲೋಜಿಯಲ್ಲಿ ಪಿ. ಎಚ್. ಡಿ ಪದವಿ ಪಡೆದು ಹಿಂತಿರುಗಿದ ಡಾ। ಕೆ ಶಾಮ್ರಾಯ ಶೆಟ್ಟಿಯವರನ್ನು ಈಚೆಗೆ "ಸರ್ವೋದಯ" ಪತ್ರಿಕೆಯ ಕಚೇರಿಯಲ್ಲಿ ಸತ್ಕಾರಕೂಟದಿಂದ ಸನ್ಮಾನಿಸಲಾಯಿತು. ನಗರದ ಹಲವು ಆಡ್ಯರು ಬಾಗವಹಿಸಿದ್ದರು.

ನಾರಿನ ಕೈಗಾರಿಕೆ ತರಬೇತಿಗೆ

ನಾರಿನ ಕೈಗಾರಿಕೆಯಲ್ಲಿ ಉಚ್ಚ ತರ ಬೇತಿಯನ್ನು ಹೊಂದಲು ಬೈಪೂರದಲ್ಲಿರುವ ಸರಕಾರಿ ನಾರಿನ ಕೆಲಸದ ಶಾಲೆಗೆ ಒಬ್ಬ ಉಪಾಧ್ಯಾಯರನ್ನು ಬೋ. ಹಾ ಎ ಶಾಲೆಯಿಂದ ಕಳುಹಿಸಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನ ವಿಶೇಷ ಅಧಿಕಾರಿಗಳಾದ ಶ್ರೀ ಎನ್ ಸಿ ಥೋಮಸರು ಇತ್ತೀಚೆಗಿನ ಸಭೆಯಲ್ಲಿ ನಿಶ್ಚೈಸಿರುವರು.

ಮೋಟಾರು ಅವಘಡ

ಕಳೆದ ತಾ ೨೯ರಂದು ಬೆಳಿಗ್ಗೆ ಇಲ್ಲಿಯ ಪಾಂಡೇಶ್ವರದ ಆಡ್ಡದಾರಿಯಲ್ಲಿ ಒಂದು ಸೈಕಲ್ ಮತ್ತು ಒಂದು ಮೋಟರುಗಳ ಘರ್ಷಣೆಯಾಗಿ ಸೈಕಲ್ ನಡೆಸುತ್ತಿದ್ದ ರು ಜಾರಿಯೊ ಶಾಲೆಯ ಡಿಸೋಜನೆಂಬ ವಿದ್ಯಾರ್ಥಿಗೆ ತಲೆ ಪೆಟ್ಟಾಯಿತೆಂದೂ, ಸೈಕಲನ್ನು ತಪ್ಪಿಸಲು ತಿರುಗಿಸಲ್ಪಟ್ಟ ಕಾರು ಪಕ್ಕದಲ್ಲಿದ್ದ ಬಾಲಕೃಷ್ಣನೆಂಬ ಅದೇ ಶಾಲೆಯ ಇನ್ನೊಬ್ಬ ಹುಡುಗನನ್ನು ಜಖಂಗೊಳಿಸುವಂತಾಯಿತೆಂದೂ, ಇವರೂ ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದು, ಕೆ ಮಹಮ್ಮದ್ ಎಂಬ ಡ್ರೈವರನನ್ನು ಕೈದು ಮಾಡಿ ಜಾಮೀನಿನ ಮೇಲೆ ಬಿಡಲಾಗಿದೆಂದೂ ತಿಳಿದುಬರುತ್ತದೆ.

ಮುನಿಸಿಪಲ್ ಸಭೆ–ನಿರ್ಣಯಗಳು

ಕಳೆದ ತಾ ೨೬ರಂದು ಜರಗಿದ ಮಂಗಳೂರು ಮುನಿಸಿಪಲ್ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳಾದುವು.

ನೀರಿನ ಸರಬರಾಯಿಯ ಪೂರ್ವ ತಯಾರಿಕೆಗೆ ಬೇಕಾದ ರೂ. ೩,೧೫೦೦೦ಗಳ ಅರ್ಧ ಗ್ರೆಂಟನ್ನು ಕೊಡಬೇಕೆಂದೂ, ಉಳಿದರ್ಧವನ್ನು ಮುನಿಸಿಪಾಲಿಟಿಯ ವಶವಿರುವ ನೀರು ಸರಬರಾಯಿ ಚರಂಡಿ ನಿಧಿಯಿಂದ ಭರ್ತಿ ಮಾಡಲಾಗುತ್ತದೆಂದೂ ಸರಕಾರಕ್ಕೆ ತಿಳಿಸುವುದೆಂದಾಯಿತು.

ಮಾರ್ಕೇಟು ರಸ್ತೆಗೆ ತಾರು ಹಾಕುವರೆ ಕೆಲಸವನ್ನು ಸುರು ಮಾಡುವಂತೆ ಪರವಾನಗಿ ಕೊಡಲ್ಪಟ್ಟಿತು

ಮುನಿಸಿಪಲ್ ಸಿಬ್ಬಂದಿಗೆ ಇನ್ನೊಂದು ವರ್ಷಕ್ಕೆ ಮುನೆಬಾಡಿಗೆ ಬತ್ತೆಕೊಡುವುದು

ಕಟ್ಟೋಣಗಳ ಲಗ್ತಿಯಿಲ್ಲದೆ ಕೃಷಿಗೂ ಉಪಯೋಗಿಸಲ್ಪಡುವ ಖಾಲಿ ಸ್ಥಳಗಳ ಮೇಲೆ ಒಕ್ಕೋಬರ್ ೧,೧೯೪೯ರ ನಂತರ ಹೊರಿಸಲ್ಪಟ್ಟ ಹೆಚ್ಚಿನ ದರದ ಸ್ಥಳತೆರಿಗೆಯನ್ನು ಕೊಡುವುದು ಅಗತ್ಯವಿಲ್ಲವೆಂಬ ರಾಯವನ್ನು ಮಂಜೂರು ಮಾತಲ್ಲಾತು

ಈ ಸ್ಥಳಗಳ ಮೌಲ್ಯದ ಮೇಲೆ ಎಪ್ರಿಲ್ ೧, ೧೯೪೯ ರಿಂದ ಸ್ಥಳತೆರಿಗೆ ಹಾಕಬೇಕೆಂದೂ, ಸ್ಥಳತೆರಿಗೆಯ ಶೇಕಡಾ ೨೫ರಷ್ಟು ವಿದ್ಯಾತೆರಿಗೆಗೆ ಕೊಡಬೇಕೆಂದೂ ತಿಳಿಸುವ ಸರಕಾರಿ ಅಪ್ಪಣೆ ದಾಖಲು ಮಾಡಲಾಯಿತು.

ಮುನಿಸಿಪಲ್ ಆಫೀಸ್ ಕಟ್ಟಡಕಟ್ಟಲು ಜೆಪ್ಪಿನಮೊಗ್ರು ಸರಕಾರಿ ಸ್ಥಳವು ಮೂಲೆಯಾಯಿತು, ಡಿಸ್ಟ್ರಿಕ್ಟ್ ಬೋರ್ಡಿನ ಯುಹೆಡ್ ಪೋಸ್ಟ್ ಆಫೀಸಿನ ಎದುರಿನ ಸ್ಥಳಗಳಲ್ಲಿ ಒಂದನ್ನು ಅದಕ್ಕೆ ಕೊಡಿಸುವಂತೆ ಕಲೆಕ್ಟರರಿಗೆ ಕೇಳಿಕೊಳ್ಳಲಾಯಿತು

ಪಳ್ಳೀರು ಕಂಕನಾಡಿ ರಸ್ತೆಯನ್ನು ಆಗಲ ಮಾಡಲು ಮಾರ್ಗದ ಬದಿಯ ಕೆಲವು ಸ್ಥಳಗಳನ್ನು ಸ್ವಾಧೀನಪಡಿಸಿಕೊಳ್ಳುವುದೆಂದಾಯಿತು

ಮಂಗಳೂರಿನೊಳಗಿನ ಗೂಡಿನ ಅಂಗಡಿಗಳನ್ನು ತೆಗೆಸಿ ಮುನಿಸಿಪಾಲಿಟಿಯ ಖರ್ಚಿನಿಂದಲೇ ಹೊಸದನ್ನು ತಯಾರಿಸಿ ಏಲಂ ಮೂಲಕ ಬಾಡಿಗೆಗೆ ಕೊಡಬೇಕೆಂದು ಈ ಮುಂಜೆಸ್ಟ್ಷೆಯಿದನ್ನು ಇನ್ನೊಮ್ಮೆ ಪರಾಮ್ಶಲೋಚನೆಗಾಗಿ ಮುಂದೆ ಕಾಕಲಂಯಿತು

ಸದ್ಯಕ್ಕೆ ಅಂತಹ ಅಂಗಡಿಗಳನ್ನು ಅದೇ ಬಾಡಿಗೆಗೆ ಮುಂದುವರಿಯಬಿಡುವುದೆ ದಾಯಿತು

~~ಚೆಪ್ಪು ಮಾರ್ಕೆಟ್ ವಿಸ್ತರಣೆಗೆ, ಹೆಲ್ತ್~~ ಲೋರಿಗಳ ಗೆರೇಜ್ ಕಟ್ಟಲಿಕ್ಕೆ, ಕದ್ರಿ ಮಾರ್ಕೇಟಿನಲ್ಲಿ ಶೆತ್ತು ಒಂದನ್ನು ಕಟ್ಟಲಿಕ್ಕೆ ಸ್ಮಶಾನ ಕಟ್ಟಡದ ರಿಪೇರಿಗೆ ಹಣ ಮಂಜೂರಾಯಿತು

ನೇಮಕ

ಜನಾಬ್ ಮಹಮ್ಮದ್ ಶನ್ಮಾಡರ ನಿಧನದಿಂದಾಗಿ ಖಾಲಿಬಿದ್ದಿದ್ದ ಕಾಸರಗೋಡು ರಿಲೀಜಿಯಸ್ ಎಂಡೋಮೆಂಟ್ಸ್ ಕಮಿಟಿಯ ಸದಸ್ಯತ್ವಕ್ಕೆ ಜನಾಬ್ ಎಚ್ ಎಚ್ ಶಮ್ಮಾಡರನ್ನು ನಮ್ಮ ಜಿಲ್ಲಾ ಜಡ್ಜರು ನೇಮಿಸಿರುತ್ತಾರೆ

ಅಕ್ಕಿ ಬತ್ತಗಳ ಒಪ್ಪಿಸುವಿಕೆಯ ಅವಧಿ

ದ ಕ ಜಿಲ್ಲಾ ಕಲೆಕ್ಟರರು ಎರಡನೆ ಬೆಳೆಯ ಮಿಗಿತಾಯದ ಅಕ್ಕಿಯನ್ನು ಸ್ಟೋರುಗಳಿಗೆ ಒಪ್ಪಿಸಬೇಕಾದ ಅವಧಿಯನ್ನು ತಾ 15–4–49ರ ತನಕ ಮುಂದರಿಸಿರುವರು ಅನಂತರ ಒಪ್ಪಿಸಲಾಗುವ ಅಕ್ಕಿಯ ಬೆಲೆಯಲ್ಲಿನ ಕಡಿತದ ವಿವರಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.

ಹೊಸ ವಾರಪತ್ರಿಕೆ – ಸುವಾಸಿನಿ

ಕಳೆದ ಶುಕ್ರವಾರ ಇಲ್ಲಿಯ 'ಪ್ರಭಾತ್ ಪ್ರಿಂಟರ್ಸ್' ಅವರ ಕಚೇರಿಯಲ್ಲಿ ಸುವಾಸಿನಿ ಎಂಬ ಹೊಸ ವಾರಪತ್ರಿಕೆಯೊಂದರ ಪ್ರಕಟಣ ಸಮಾರಂಭವು ಜರಗಿಸಲ್ಪಟ್ಟಿತು ಮಹಿಳಾ ವರ್ಗದಲ್ಲಿ ಸಾಹಿತ್ಯಾಭಿರುಚಿಯನ್ನುಂಟು ಮಾಡುವುದು ಈ ಪತ್ರಿಕೆಯ ವಧಿನ ಧ್ಯೇಯಗಳಲ್ಲಿ ಒಂದಾಗಿದೆ ಹಿಂದಿ ಇದೇ ಹೆಸರಿನ ಮಾಸ ಪತ್ರಿಕೆಯೊಂದನ್ನು ಶಿಬೋಳಾರ ಪರಿಲಂಬಿಯರು ಹೊರಡಿಸುತ್ತಿದ್ದರ ಶ್ರೀಮತಿಗಳಾದ ಬಿ ಪೋಡಿಸಿ ದೆಪಿ ಮತ್ತವಾಲ ಶಾಪಿ ಹೊಸ ಪತ್ರಿಕೆಯ ಸಂಪಾದಕವರ್ಗದಲ್ಲಿರುವರು.

ಹೊಸ ಕೊಂಕಣಿ ಪತ್ರಿಕೆ

'ಕೊಂಕ್ಣಿ ಮೊವಕ್' ಎಂಬ ಹೆಸರಿನ ಹೊಸ ಕೊಂಕಣಿ ಧರ್ಮಪ್ರಸಾರಕ ಮಾಸಪತ್ರಿಕೆಯೊಂದು ಶೀ ಜೋರ್ಜ್ ಎಂ ಫೆರ್ನಾಂಡೀಸರ ಸಂಪಾದಕತ್ವದಲ್ಲಿ ಪ್ರಾರಂಭವಾಗಲಿದೆಯೆಂದು ತಿಳಿದು ಬರುತ್ತದೆ ಕೊಂಕ್ಣಿ ಮೊವಕ್' ಪ್ರಕಟಣೆಗಳಲ್ಲಿ ಆಸಕ್ತಿಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು

ಕಳವಿಗೆ ಸಜೆ

ಕೆಲ ಸಮಯ ಹಿಂದೆ ಶೀ ಪ್ರತ್ಯಂಸೆಟ್ಟರ ಶ್ರೀ ಲಕ್ಷ್ಮೀನಾರಾಯಣ ಪೈ ವಸ್ಥಾನದಿಂದ ಕಳವಾದ ಕಂಪೆಕೆ ಚಪ್ಪಲಿ ಇತ್ಯಾದಿಗಳನ್ನು ಪತಕೊಂಡ ಕೋಟ್ಯಾನ್ ಬ್ಯಾರಿ ಎಂಬಾತನಿಗೆ ೨ ವರ್ಷದ ಶಿಕ್ಷೆಯಾಗಿದೆ

ಸತ್ಕಾರ ಕೂಟ

ಮೊಗವೀರ ಲಿಟರರಿ ಅಸೋಸಿಯೇಷನ ಆಶ್ರಯದಲ್ಲಿ ಈಚೆಗೆ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯೂ ಆಗಿದ್ದು ಈಚೆಗೆ ಗೌರವ ಬೆಂಚ್ ಮೆಜಿಸ್ಟ್ರೇಟರಾಗಿರುವ ಶ್ರೀ ಎಚ್. ಶಿಂಗಾಯರಿಗೂ ನಿವೃತ್ತ ಪಿಶರಿಸ್ ಆಫೀಸರ್ ಶ್ರೀ ಎಂ. ಡಿ. ಕೆಮ್ಮೂರರಿಗೂ ಮತ್ತು ದ ಕ. ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಶ್ರೀ ಎಂ ಕೆ. ಬಸಪ್ಪನವರಿಗೂ ಸನ್ಮಾನದ ಸತ್ಕಾರ ಕೂಟವೊಂದನ್ನು ವಿರ್ವಹಿಸಲಾಗಿತ್ತು

ಮದ್ಯ ವಿಧಿಗಳ ಉಲ್ಲಂಘನೆ

ವಣಂಬೂರು ಶೇಕಾಲಿ ಬ್ಯಾರಿ ವಶ ೨ ಡ್ರಾಂ ಶರಾಬು ಇದ್ದದ್ದಕ್ಕೆ; ರೂ ೫೦, ಕುಡ್ಪಿ ಸೋಮ ಪೂಜಾರಿ ಎಂಬವರು ೮ ಡ್ರಾಂ ಶರಾಬನ್ನು ಸೈಕಲ್ ಟ್ಯೂಬಿನಲ್ಲಿ ಒಯ್ಯಲು ಯತ್ನಿಸಿದಕ್ಕೆ ರೂ ೭೫ ಜುಲ್ಮಾನೆ ವಿಧಿಸಲ್ಪಟ್ಟಿದೆ

ಬೋಳೂರಿನ ಅಜೀಜಂ ಬೀಬಿ ಎಂಬ ಮುಸ್ಲಿಂ ಹೆಂಗಸಿನ ವಶ ೨೪ ಡ್ರಾಂ ಕಳ್ಳಿನ ಬೆಲ್ಲದ ಶರಾಬನ್ನು ಪ್ರೊ। ಸ। ಇನ್ಸ್‌ಪೆಕ್ಟರ್ ಶ್ರೀ ಸಿ ಕರುಣಾಕರನ್ ಇವರ ಹಿಡಿದಿದ್ದು ಆಕೆಗೆ ರೂ ೧೫೦ ಜುಲ್ಮಾನೆ ತಪ್ಪಿದರೆ ೬ ವಾರಗಳ ಸಜೆ ವಿಧಿಸಲಾಗಿದೆ

ಟಪ್ಪಾಲಿನ ವ್ಯವಸ್ಥೆ

ರೈಲ್ವೆ ಸಮ್ಮೆ ಬದಲಾವಣೆಯಾದ ದಿನಾಗ ದಿಂದ ಮತ್ತು ಟಪ್ಪಾಲು ಪಟ್ಟಿಗಳಿಂದ ಟಪ್ಪಾಲನ್ನು ತೆಗೆಯುವ ವ್ಯವಸ್ಥೆ ತಕ್ಕಂತೆ ಮಾಡಲಾಗುವುದು ಪೋಸ್ಟ್ ಆಫೀಸಿನ ಟಪ್ಪಾಲು ಪಟ್ಟಿಗಳಲ್ಲಿ ವೆಳಿಗ್ಗೆ ೬–೩೦ ರವರೆಗೆ ಸ್ವೀಕೃತಗಳನ್ನು ಹಾಕಿ ಹುದು ಕೆಲವು ಕಡೆಗಳಲ್ಲಿ ದಿನ ಈ ಜಿಲ್ಲೆಗೆ ಬರುವ ಎಲ್ಲಾ ಟಪ್ಪಾಲು ಮಧ್ಯಾಹ್ನ ೧ ಗಂಟೆಗೆ ಒಳಗಾಗಿ ಎಲ್ಲರಿಗೆ ಸಿಗುತ್ತದೆ ಎಂಬ ಸಲುವಾಗಿ ಕುತ್ತರ ದಕ್ಷಿಣ ಭಾಗಗಳಿಗೆ ಕಳುಹಿಸುವಂಥ ಟ್ರೈನ್ಗಳನ್ನು ಕೆಲವು ಮುಖ್ಯ ಟಪ್ಪಾಲಿನ ಹೆಸರಿನ ಟಪ್ಪಾಲು ವಿಮಾನಕ್ಕೆ ಸಂಬಂಧಿಸಿದಂತೆ ಮಾಡಲಾಗಿದೆ ಮಂಗಳೂರಿನ ಮಧ್ಯಾಹ್ನ ೩ ಗಂಟೆಯ ಟ್ರೈಲ್ ಕಳುಹಿಸಲಾಗುವುದು ಹೀಗೆ ಹೆಚ್ಚಾಗಬೇಕಾದ ಪತ್ರಗಳನ್ನು ಎಲ್ಲಿ ಟಪ್ಪಾಲು ಪೆಟ್ಟಿಗೆಗಳಲ್ಲಿಯೂ ಮಧ್ಯಾಹ್ನ ೧ ಗಂಟೆಯ ವರೆಗೂ ಹಾಕಬಹುದು ಎಂದು ಪೋಸ್ಟಲ್ ಡಿಪಾರ್ಟ್‌ಮೆಂಟ್ ಪ್ರಕಟಣೆ

ಟಪ್ಪಾಲು ವಿತರಣೆಗೆ ವಿಳಂಬವೇಕೆ?

ಈಗ ರೈಲ್ವೆ ಸಮಯ ಬದಲಾವಣೆಯಾದರೂ ಮಂಗಳೂರು ನಗರದ ಹೆಡ್ ಪೋಸ್ಟಾಫೀಸಿನಲ್ಲಿ ಬಟ್ಟಾಡೆಯಾಗುವ ವ್ಯವಸ್ಥೆಯು ಮೊದಿನ ಮಧ್ಯಾಹ್ನಾನಂತರ ವ್ಯಾಪಾರವಾಗಲಿ ಹತ್ತಿದೆ ಮುಂಚೆಯಲ್ಲಾ ರಾತ್ರೆ ೨ಕ್ಕೆ ಎದ್ದು ತ್ತಿರುವಾಗಲೂ ಬಳಿಗ್ಗೆ ೬–೩೦ ಗಂಟೆಗೆ ವಿತರಣೆಗೆ ಪೋಸ್ಟ್‌ಮೇನರು ಒಯ್ಯುತ್ತಿದ್ದರು ಕೊಡಿಯಾಲ್‌ಬೈಲ್ ಸಬ್ ಪೋಸ್ಟ್ ಆಫೀಸಿನ ನಗರದ ಕೆಲ ಭಾಗಗಳಿಗೆ ವಿತರಣೆ ವಿವಾದಿಸಿ ವ್ಯವಸ್ಥೆ ಮಾಡಲ್ಪಟ್ಟಿದ್ದರಿಂದ ಕೆಲಮಂದಿ ಸಿಬಂದಿಯನ್ನು ಆ ಕಡೆ ಕಳುಹಿಸಿರುತ್ತದೆ ಆದರೆ ಅದೇ ದಾಮಾಶಯದಲ್ಲಿ ಹೆಡ್‌ಪೋಸ್ಟ್ ಆಫೀಸಿನ ಟಪ್ಪಾಲು ಪ್ರಮಾಣವೂ ಕಡಿಮೆಯಾಗಿರಬೇಕಷ್ಟೆ ಒಂದು ಸುವ್ಯವಸ್ಥೆಯನ್ನು ಮಾಡುವಾಗ ಎರಡು ದುರ್ವ್ಯವಸ್ಥೆಗಳುಂಟಾಗದಂತೆ ನೋಡಿಕೊಳ್ಳುವುದು ಅವಶ್ಯವಿರುತ್ತದೆ ಈಗಾಗುವ ವಿಳಂಬವನ್ನು ಶೀಘ್ರದಲ್ಲೇ ಟಪ್ಪಾಲಾಧಿಕಾರಿಗಳು ಸರಿಪಡಿಸುವರೆಂದು ಹಾರೈಸಲಾಗಿದೆ – ಹೀಗೆಂದೊಂದು ಬಾಕ್ಸಿ


ಮಗುವಿನ ಮೃದು ಚರ್ಮಕ್ಕೆ
ಹೆಚ್ಚು ರಕ್ಷಣೆಬೇಕು
ಕುಟಿಕುರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ. ಅದಮ್ಮ ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡುತ್ತದೆ ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ.
554
Cuticura SOAP MEDICINAL TOILET
ಕುಟಿಕೂರಾ ಸಾಬೂನು
CUTICURA SOAP

ಹಿಂದೂ ಧರ್ಮಸಂಸ್ಥೆಗಳ ಉಂಬಳಿ ನಿಯಂತ್ರಣ ಮಸೂದೆ

ಅದರ ಕುಂದು ಕೊರತೆಗಳು

ಉಡುಪಿ ಮಠಾಧಿಪರ ಅಭಿಪ್ರಾಯ

ಹಿಂದೂಧರ್ಮ ಸಂಸ್ಥೆಗಳ ಉಂಬಳಿ ನಿಯಂತ್ರಣ ಮಸೂದೆಯ ಪರಿಶೀಲನಾ ಸಮಿತಿಯವರ ಅವಗಾಹನೆಗೆ ತಮ್ಮ ಶಿಷ್ಟ ವರ್ಗದ ಪರವಾಗಿ ಉಡುಪಿಯ ಶೀ ಕೃಷ್ಣಾಪುರ ಮಠದ ಸ್ವಾಮೀಜಿಯವರಾದ ಶ್ರೀಮದ್ ವಿದ್ಯಾರತ್ನ ತೀರ್ಥ ಶ್ರೀ ಪಾರಂಗಳವರು ಕಳುಹಿಸಿದ ಮೆಮೊರೆಂಡಮಿನ ಸಾರಾಂಶ ಹೀಗಿದೆ

ಈಗ ಯೋಜಿಸಲ್ಪಟ್ಟಿ ಈ ಮಸೂದೆಯು ಪಾಂತ್ಯದ ಪ್ರಜೆಗಳ ಸದಿಚ್ಛೆಗೆ ಒದ್ದೆ ವಿರುದ್ಧವಾದುದು ಇದನ್ನು ಪತಿಕೆಗಳೂ, ನ್ಯಾಯತಜ್ಞರೂ ಮತ್ತು ಅನೇಕ ಜನತಾ ದುರೀಣರೂ ಖಂಡಿಸಿರುವರು ಪ್ರಜೆಗಳ ಇಚ್ಛೆಯ ವಿರುದ್ಧ ಶಾಸನ ಹೊರಿಸಲು ಯಾವ ಸರಕಾರವೂ ಅಧಿಕೃತವಾಗಿಲ್ಲ

ನೂತನ ಸಂಸ್ಥೆಗಳ ಏ ಬೆಂಗಾವಲಿ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿದ್ದ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡ್ ಇದರ ವರ್ಚಿಗೇ ಧರ್ಮ ಸಂಸ್ಥೆಗಳ ವಿಧಿಯ ಬಹು ಪಿ ಶವು ಪ್ರಯೋಗಗೊತ್ತದೆಂಬುದಕ್ಕೆ ಸಂಶ್ಯೆ ಬಲಿ ಬಂಡುಬಂತಿಗಳಿವೆ ನಮ್ಮ ನುರವು ಪಂಪೇಜಲ ತೀರ್ಥಮು ಶ್ರೀ ಮದ್ವಾಡಿಯರ್ಜರ ಪೀಠವಾಗಿದೆ ಸಂವ್ರ ಕಳೆವ ಸಲ ಸಮಾಜಮುಖಿಯಾಗಿ ಬಾಗ ವಿಲೆಗಳಿಸಿದ ವಿದುಬಂಧವರೂ ಕಟೂಂಲ್ಲ, ದೇಶನ ರಲ್ಲಿಲ್ಲ ಆದರೆ ಹೆಚ್ಚು ವಿಲೆಗಳ ಪರಿಣಾಮದಿ ದ ಪರ್ಯಾಯವಿನಿಯ ಇರ್ಚಿಗೆ ಮುರದ ಉತ್ಪತ್ತಿಯು ಸಾಕಾಗದೆ ಸಾಲಮಾಡಬೇಕಾಯಿತು ಇದು ಪರ್ಯಾಯ ವಹಿಸುವ ಪತಿಯೊಂದು ಮೊದಲ ಸಾಮಾನ್ಯ ಅನುಭವ ಆಗಿದೆ ಇದರ ಯಥಾರ್ಥತೆಯನ್ನು ಸ್ಪಷ್ಟ ಕೌನ್ಸಿಲಿನ ನ್ಯಾಯಾಧೀಶರೂ ಒಪ್ಪಿರುತ್ತಾರೆ ನಮ್ಮ ಪೂರ್ವ ಪೀಠಸ್ಥರು ಕಟ್ಟಿಡ ರಚನೆಗಾಗಿ ಸುಮಾರು 85 ಸಾವಿರ ಸಾಲ ಮಾಡಿದ್ದು ನಮ್ಮ ಕಾಲದಲ್ಲಿ ಪರ್ಯಾಯ ವಹಿಸುವಿಕೆ ಬಿಡುವಿಕೆಗಳಿಂದ ಅದು ಇನ್ನೂ ಹೆಚ್ಚಾಯಿತು ಆದರೆ ಎಂಡೋಮೆಂಟಿನವರು ಈ ಸಾಲಗಳ ಅವಶ್ಯಕತೆಯನ್ನು ಪರ್ಯಾಲೋಚಿಸುವ ಶ್ರಮವಹಿಸದಾದರು ಅವರು ಬೇರೊಂದು ಯೋಜನೆಯನ್ನು ತಯಾರಿಸಲು ಸಿದ್ಧತೆಮಾಡಿದರು ಒಂದು ವರ್ಷದೊಳಗೆ ಒರ್ವ ಯೋಗ್ಯ ಮೇನೆಜರನನ್ನು ನೇಮಿಸಬೇಕೆಂದು ಬೋರ್ಡಿನವರು ನಮಗೆ ಸೂಚಿಸಿದರು ಆದರೆ ಕೇವಲ ಆರು ತಿಂಗಳಲ್ಲೇ ಒರ್ವ ಪ್ರಭಾವಿತ ಶ್ರೀಮಂತನೂ ಕೊಂಗ್ರೆಸ್ ವಿರೋಧಿಯೂ ಎನಿಸಿದವರೊಬ್ಬರ ಪುಸಲಾವಣೆಯಿಂದ ಅವರ ಮಗಂದಿರೊಬ್ಬರು ಎಕ್ಸಿಕ್ಯೂಟಿವ್ ಆಫಿಸರರಾಗಿ ನೇಮಕಹೊಂದಿದರು

ಅಂದಿನಿಂದ ಇಂದಿನ ತನಕ ಮೊದಲಿಂದ ಹೊರಗೆ ಸಲ್ಲತಕ್ಕ ಹಣದ ಲೆಕ್ಕವು ಇತ್ಯರ್ಥಗೊಳಿಸಲ್ಪಡದೆ ಹಾಗೇ ಉಳಿದಿದೆ ಅಷ್ಟೆ ಅಲ್ಲದೆ, ಮೊದಲ ದಿನನಿತ್ಯದ ಪೂಜೆಗಳಿಗೂ ಮತ್ತು ಕಾಲಾವಧಿ ಉತ್ಸವ ಹಬ್ಬ ಇತ್ಯಾದಿ ವಿಶೇಷ ಕಾರ್ಯಕ್ರಮಗಳಿಗೂ ಅವಶ್ಯವಿರುವ ಖರ್ಚೂ ಸದ್ರಿ ಎಕ್ಸಿಕ್ಯೂಟಿವ್ ಆಫೀಸರರ ಕಡೆಯಿಂದ ಕೊಡಲ್ಪಡುವುದಿಲ್ಲವಾಗಿದೆ ಮತ್ತೆ ಅವರ ನಮ್ಮನ್ನು ಹಲವು ರೀತಿಯಲ್ಲಿ ಕಾಡಿಬೇಡುವ ಕಿರುಕುಳಗಳು ಸಹನಾತೀತವಾಗಿವೆ ಮೂರು ಮಂದಿರಗಳಂತಹ ಸಾಂಸ್ಕೃತಿಕ ಕೇಂದ್ರಗಳನ್ನು ಸರಕಾರ ವಶ ಕೊಡುವುದರ ದುರ್ವಿಧಿ ಇದು ಧರ್ಮ ಸಂಸ್ಥಗಳಿಗೆ ಇದರಿಂದ ತುಂಬಾ ಹಾನಿ ತಟ್ಟಬಹುದು ಸರಕಾರದ ಉದ್ದೇಶ ವಾದರೂ ಇದೆ ಆಗಿದೆಯೇನು? ಸಾರ್ವಜನಿಕರ ಮೇಲೆ ಅದೆಂತಹ ಪತಿಕ್ರಿಯೆ ಇದರಿಂದಾಗುವುದೆಂದು ಸರಕಾರ ಪರಿಗಣಿಸಿದೆಯೆ?

ಜಾತ್ಯಾತೀತ ರಾಜ್ಯ ಪಟ್ಟನಿಗೂ ಧಾರ್ಮಿಕ ಸಂಸ್ಥಗಳನ್ನು ಭಗ್ನಗೊಳಿಸುವುದು ಸರಕಾರದ ಉದ್ದೇಶವಿರಬಹುದೆ

ಈ ಸಂದೆಯು ಅನಾವಶ್ಯಕದ್ದೂ, ಅಧಿಕ ಪ್ರಸಂಗತನದ್ದೂ, ಅನ್ಯಾಯದ್ದೂ ಅವಿವೇಕದ್ದೂ ಆಗಿದೆಂದು ಅವುಗಳ ವರವಾಗಿ ರೂಪಿಸಲ್ಪಟ್ಟ ಅಭಿಪ್ರಾಯಗಳ ನರಿಶೀಲನೆಯಿ ದ ಸ್ಪಷ್ಟವಾಗುತ್ತದೆ

ಮೊದಲಿಗೆ ಅತ್ಯಪ್ತಿಯನ್ನುಪರ್ಯಾಯ ಗೊಳಿಸಿದ ಸಂಸ್ಥೆಗಳ ಬಾಡಿಯಲ್ಲಿ ನಮ್ಮ ಮೊದಲ ಹೆಸರೂ ಇದೆ ಇದನ್ನು ನಾವು ಸರಕಾರದ ಮಜಬೂತಿಗೆ ದಾಖಲೆಗಳಿಂದ ಪ್ರತಿಪಾದಿಸಿ ಆ ಕ್ರಿಯಾವಾದ ಸರ್ದೋಷತ್ವವನ್ನು ಸಿದ್ಧಾಂತವಾಗಿ ತೋರಿಸಲು ಸಮರ್ಥರಿದ್ದೇವೆ ಇತಿಹಾದೇ ಸನಾತನ ಆರೋಪವೊಂದು ಹೈಕೋರ್ಟಿನ ಮುಂದೆ ವಿಚಾರಣಾವಸ್ಥೆಯಲ್ಲಿದೆ. ಮದ್ರಾಸ್ ಸರಕಾರವು ತಯಾರಿಸಿದ ಈ ಯಾದಿಯಲ್ಲಿ ನಮ್ಮಂತೆ ಇತರ ಅನೇಕ ನಿರ್ದೋಷಿ ಸಂಸ್ಥೆಗಳೂ ಬಲಿಯಾಗಿವೆಂದು ನಮ್ಮ ದೃಢ ವಿಶ್ವಾಸವಿದೆ

ಸದ್ರಿ ಮಸೂದೆಯ ಇನ್ನೊಂದು ಕುಂದುಕೊರತೆಗಳನ್ನು ಬಲ್ಲ ಸಿಲೆಕ್ಟ್ ಕಮಿಟಿಯವರು ಅದರ ರದ್ದತಿಯನ್ನು ಶಿಫಾರಸು ಮಾಡಬೇಕಾದುದು ಯುಕ್ತವಾಗಿದೆ ಅಧಿಕಾರದಲ್ಲಿರುವ ರಾಜಕೀಯ ಪಕ್ಷಗಿಂತಲೂ ಸಾರ್ವಜನಿಕ ಅಭಿಪ್ರಾಯವು ಹೆಚ್ಚು ಶಕ್ತಿಯುಕ್ತವಾದುದೆಂದು ನಮ್ಮ ನಂಬಿಕೆಯಿದೆ.

ಜರ್ಮನಿಯ ವಿಸ್ ಬೇಡನ ನಗರದಲ್ಲಿ ಒಬ್ಬ ಅರ್ಧ ಜರ್ಮನ್ ಅರ್ಧ ನಿಗ್ರೊ ರಕ್ತದ ಒಬ್ಬ ನೋಟರಿ ಡ್ಯೂಮರಸಿದ್ದಾನೆ ಆರ್ಥರ್ ಸಮಾನ ಎಂಬವನ ಹೆಸರು. ಸ್ವಾಯ 28 ಈತ ಆಫ್ರಿಕದ 10 ಲಕ್ಷ ಕಾಡು ಜನರ ರಾಣಿಯೊಬ್ಬಳ ಮಗನಂತೆ ಅವನ ತಂದೆ ಅಲ್ಲಿ ಶಿಕಾರಿಗೆ ಹೋದಾಗ ಈ ರಾಣಿಯು ಸಂಪರ್ಕದಿಂದ ಅವನು ಜನಿಸಿದ ಈಗ ರಾಣಿ ಬಳಲಿ ತಾನು ರಾಜ್ಯಕಿಯಾಗಿರುವೆನೆಂದು ಘೋಷಿಸಿದ್ದಾಳೆ ಆರ್ಥರನು ಅವಳ ಪಟ್ಟಕ್ಕೆ ಹಕ್ಕುದಾರಿಯಾದ ಉತ್ತರಾಧಿಕಾರಿ ಸದ್ಯದಲ್ಲೇ ಅವನು ಆಫ್ರಿಕಕ್ಕೆ ಹೋಗುವನು

✠

ಭಾರತದಲ್ಲಿ ಸಜ್ಜಾಗಿ ಉತ್ಪನ್ನ ಮಾಡಿ ಸಂಗ್ರಹಿಸಲ್ಪಡುವ ಪತಿ 28 ಸಾವಿರ ಟನ್ನು ಸೋಡಿಯಿಂದ 1 ಕೋಟಿ ರೂಪ್ಯಾಯ ವಿದೇಶಿ ಹಣ ಸಂಚಯವನ್ನು ಉಳಿಸಬಹುದು

✠

ದೇಶದ ವಿವಿಧ ಕಡೆಗಳಲ್ಲಿ ಹೊಸದಾಗಿ ಕೃಷಿ ಭೂಮಿಯಿಂದ ಸಂಪರ್ಕವನ್ನು ಮಾಡಲ್ಪಟ್ಟ ಟ್ರೈಕ್ಟರ್ ಉಳುವ ಯಂತ್ರಗಳಿಂದ ಪ್ರತಿ ದಿನ 675 ಬಂಜರು ಸ್ಥಳವು ಉಳಲ್ಪಡುವುದು

✠

ಬಿಳಿ ಇಲಿಗಳ ಜೂಜು ಈಜಿಗೇಜಿಗೆ ಹೊಲಿವುಡ್ಡಿನಲ್ಲಿ ಅತೀವ ಜನಪ್ರಿಯತೆ ಪಡೆಯುತಿದೆ ಈ ಜೂಜಿನಲ್ಲಿ ಸಾವಿರಾರು ರೂಪಾಯಿಗಳನ್ನು ಜುಗಾರಿ ಕಟ್ಟುವುದೂ ಇದೆ.

✠



ಇನಫ್ಲುಯೆಂಜಾ ಶೀತ ಮತ್ತಿತರ ಕಂರ ಬೇನೆ ಗುಣಪಡಿಸುವರೆ ಪೆಪ್ಸು ಅಗತ್ಯ.

ಪಿಚಿಕರವಾದ ಒಂದು ಪೆಪ್ಸ್ ಮಾತ್ರೆಯನ್ನು ಕೊಂಡುಕೊಳ್ಳಿರಿ ಅದರಿಂದ ಹೊರಡುವ ಔಷಧೀಯ ಎಸೆನ್ಸು ಶ್ವಾಸಕೋಶಗಳ ವ್ಯಾಧಿಯನ್ನು ಪರಿವಾರಿಸಿ ಗುಣಪಡಿಸುವುದು

PEPS

ಪೆಪ್ಸ್ ಕಂರ ಮತ್ತು ಶ್ವಾಸಕೋಶ ಬಾಧೆಗಳಿಗೆ ರಾಮಬಾಣ.

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶ್ಯಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿನಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶ್ಯಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶ್ಯಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ದೆ ಕೊಯಮುತ್ತೂರಲ್ಲಿರುವ ಸರ್ಕಾರಿ R. T O ರವರು ಸೆಂಕ್ಷನ್ ಮಾಡಿ, ಅದು ಕೂಡಾ ಗ್ಯಾಸು ಬಸ್ಸುಗಳಿಂದಲೇ ಓಡಿಸಬೇಕಾಗಿ ನಿರ್ಭಂದವಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದ್ದೆ ಸ್ಪೆಶ್ಯಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
22-12-48

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs 2,000/- and over are now accepted at all Offices of the Bank at the following rates:—

3 & 4 months . . . at 2½% p. a.
5 & 6 months . . . . at 2¾% p. a.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಉಕ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಜೇಳು ವಿಷಮುಂತಾದ ಬೇನೆ, ಪಕ್ಕವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾನುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ತ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರೊವ್ವರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟಿರುವ ವಿಶೇಷ ಔಷಧಿ. ಗರ್ಭಕೋಶದ ಬೇನೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡಿಮೆಗೊಳಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ತಲೆಸುತ್ತು, ಕ್ಷಯ, ಶೀತಜಾಡ್ಯ ಇತ್ಯಾದಿ ಪುರುಷ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ಶಾರೀಕು 29—4—1949 [ಸಂಚಿಕೆ 17]

ಮಂಗಳೂರು ಬಂದರಿನ ಉಜ್ವಲ ಮಹತ್ವ

★ ಸರ್ವತೋಮುಖ ಅಭಿವೃದ್ಧಿಯ ಭವಿಷ್ಯ ★

ನೂರಕ್ಕೆ ಬೇರೂ ಹೇಗೋ ಹಾಗೆ ಮಂಗಳೂರಿಗೆ ಬಂದರು ಬೇರು ಕಡಿಯಿರಿ ಮರ ಕೆಡಹುತ್ತದೆ ಬಂದರು ಬೇರೆ ಕಡೆ ಮಾಡಿದ್ದರೆ ಮಂಗಳೂರು ಕೆಡುತಿತ್ತು ಬಂದರು ಇದ್ದರೆ ವ್ಯಾಪಾರ ಉಂಟ ವ್ಯವಹಾರ ಉಂಟು ಅದಿಲ್ಲದಿದ್ದರೆ ಎಲ್ಲವೂ ಶೂನ್ಯ ವ್ಯಾಪಾರ ಉದ್ಯೋಗಗಳಿಂದ ನಗರ ಬೆಳೆಯುತ್ತದೆ ನಗರದಿಂದ ನಾಡು ಅಭಿವೃದ್ಧಿ ಹೊಂದುತ್ತದೆ ನಾಡಿನಿಂದ ನಾಗರೀಕತೆ ಶೋಭಿಸುತ್ತದೆ ಒಂದರಿಲ್ಲದ ಮಂಗಳೂರು ಕಣ್ಣಿಲ್ಲದ ಎತ್ತಿನಷ್ಟು ನಿರರ್ಥಕವಾಗುತಿತ್ತು

ಈ ಕಣ್ಣನ್ನು ಕುಕ್ಕಲು ನೋಡಿದವರಿದ್ದಾರೆ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರನ್ನಾಗಿ ನುಲ್ಪೆಯನ್ನು ಮಾಡಿರಿ, ಭಟ್ಕಳವನ್ನು ಮಾಡಿರಿ ಎಂದು ಅದೆಷ್ಟು ಜನ ಕಾತರಿಸಿಲ್ಲ ಅವರಲ್ಲೊಬ್ಬರಾದರೂ ಮಂಗಳೂರಿನ ಅವಸ್ಥೆ ವಿನಾದೇತೆಂದು ಗ್ರಹಿಸಲು ಕಸ್ಟವಡಲಿಲ್ಲ ರಾವಣನ ಅನ್ನ ತೆಗೆದು ಕೊಮ್ಮುಗೆ ಕೊಟ್ಟರೆ ಬಮ್ಮನ ಭಾಗ್ಯವೇನು ಬಂದರು ಸಣ್ಣದೇನೋ ನಿಜ, ಆದರೆ ಅದಾದರೂ ಇರುವಲ್ಲಿ ಮಾಡಬೇಕೂ ಇಲ್ಲದಲ್ಲಿ ನೂಡಬೇಕೂ ಇದ್ದುದನ್ನು ರದ್ದುಮಾಡಿ ಇಲ್ಲದನ್ನು ಪ್ರಬುದ್ಧವಾಗಿ ಹೇಗೆ ಮಾಡಬರುತ್ತದೆ? ಮಲ್ಪೆ ಮಾಡಿದ್ದರೆ, ಭಟ್ಕಳ ಮಾಡಿದ್ದರೆ ಒಳ್ಳೆದಿತ್ತು ಅದರೆ ಮಂಗಳೂರನ್ನು ನೂಡದಿರುತಿದ್ದರೆ ಮಾತ್ರ ಕೇಡಿತ್ತು

ಅಂತೂ ಈಗ ಮಾಲೆ ಮಂಗಳೂರಿಗೇ ಬಿತ್ತು ಇದೊಂದು ಸ್ವಯಂವರದಂತೇ ನಡೆಯಿತು. ಬಂದರು ನಾರಿ ಯೋಗ್ಯ ರನ್ನು ಹುಡುಕಿ ಅಳೆದಾಡುತಿದ್ದಳು ಕನ್ಯಾ ರ್ಥಿಯಾಗಿ ಕೊರಳು ಮುಂದು ನೀಡಿದುವು ಮಲ್ಪೆ, ಭಟ್ಕಳ, ಕಾರವಾರಗಳು ಬೆಂಗಳೂರಿನವರಿಗೆ ಭಟ್ಕಳ ಆಗದ್ದರೆ ಚೆನ್ನಾಗಿತ್ತು, ಧಾರವಾಡದವರಿಗೆ ಕಾರವಾರವಾಗಿದ್ದರೆ ಚೆನ್ನಾಗಿತ್ತು, ಮತ್ತೆ ಉಡ್ಡಿಯವರಿಗೆ ನುಲ್ಪೆಯಾದರೆ ಅನುಕೂಲ, ಎಂದಿತ್ತು. ಮಂಗಳೂರಿನವರಿಗೂ ಬೇರೆ ಯಾವುದಾದರೂ ಆಮಂಗಳವೆಂದಿತ್ತು. ಈಗೆಲ್ಲವೂ ಸುಖಾಂತ್ಯವಾಗಿಯೇ ಸಂಭವಿಸಿತು ಇನ್ನೂ ನಾವು ನಮ್ಮ ನಗರದ ಭೂತ ಭವಿಷ್ಯಗಳನ್ನು ಸ್ವಲ್ಪ ಸಿಂಹಾವಲೋಕನ ಮಾಡೋಣ

ಬಂದರಲ್ಲದೆಯೇ ಮಂಗಳೂರು ವಿಶ್ವ ವಿಖ್ಯಾತಿ ಪಡೆದಿದೆ ಇದು ಚಿಕ್ಕದಂದರೂ ಸ್ವಂತ ಬೆಳಕಿನಿಂದ ಮಿನುಗುವ ನಕ್ಷತ್ರದಂತೆ ದೊಡ್ಡವನಾದ ಬಂದ್ರನಾದರೂ ಪರಾವಲಂಬಿಯಲ್ಲವೆ? ಈಗ ಹವಳಕ್ಕೆ ಜಿನ್ನದ ಚೌಕಟ್ಟು ಕಟ್ಟಿದಂತಾಯಿತು

ಜಗತ್ತಿನ ಅದೆಷ್ಟು ಕಡೆಗಳಲ್ಲಿ ಜನರು ಮಂಗಳೂರು ಹಂಚಿನ ಅಡಿಯಲ್ಲಿ ಆಶ್ರಯ ಮಾಡುತ್ತಿಲ್ಲ ಇಲ್ಲಿಯ ಗೇರು ಬೀಜಗಳು ಲಂಡನ್ ನ್ಯೂಯೋರ್ಕಿನ ನಾಗರೀಕರು ಸವಿ ನೋಡುತ್ತಿರುವರಲ್ಲವೆ? ಇಲ್ಲಿಯ ಹುರಿಹಗ್ಗಗಳಿಗೆ ಅದೆಷ್ಟೊ ಉದ್ಯೋಗಗಳು ನೇತಾಡುತ್ತಿವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಮತ್ತೆ ಕಾಡು ಉತ್ಪತ್ತಿಗಳು ನಾಡು ಉತ್ಪತ್ತಿಗಳು ದೇಶದೆಲ್ಲಾ ಕಡೆಗೂ ಪೂರೈಸಲ್ಪಡುತ್ತವೆ ಪಟ್ಟಗಳಲ್ಲಾ ಗುವುದಾದರೂ ಕಾಫಿಯು ಮಂಗಳೂರು ಮಜೂರ ಹೆಂಗಸರಿಂದ ಪರಿಶುದ್ಧಸಲ್ಪಡಬೇಕು ಅಚ್ಚು ಕಾಲಸಕ್ಕೆ ಮಂಗಳೂರೇ ಒಂದು ಕೂಲದಲ್ಲಿ ಪ್ರಥಮ ಸ್ಥಾನ ಪಡೆದಿತ್ತೆಂದರೆ ಆತ್ಮ ಪ್ರತಿಷ್ಠೆಯೆನಿಸದು ಇಂದೂ ಆ ಉದ್ಯಮದಲ್ಲಿ ಅದು ಮದ್ರಾಸ್ ಬೊಂಬಾಯಿಗಳೊಡನೆ ಭುಜಕ್ಕೆ ಭುಜ ಕೊಡಬಲ್ಲದು

ಇನ್ನು ಮಂಗಳೂರು ಬೀಡಿ ನಸ್ಯಗಳು ದೇಶ ವಿಶಾಲದಲ್ಲೆಲ್ಲವೆರೆಲ್ಲ ಬಾಯಿ ಮೂಗಿನ ಮಾತೆನ್ನಬಹುದು ಒಂದು ಜಿಲ್ಲೆಯಿಂದ ಹತ್ತಿಪ್ರತ್ತರಷ್ಟು ಒ ಸಿ ಎಸ್ ಮಂದಿಗಳು ದೇಶದ ಆಡಳಿತದ ಉನ್ನತ ಸ್ಥಾನಗಳಲ್ಲಿದ್ದಾರೆಂದರೆ, ನಮ್ಮವರು ಅಮೇರಿಕದಲ್ಲಿ ,ರಾಜಭಾರಿಗಳಾಗಿಯೂ ಇದ್ದರೆಂದರೆ ಇಲ್ಲಿಯ ಶಿಕ್ಷಣದ ಕುರಿತು ಹೇಳಿದಂತಾಗುವುದು ಸಾಹಿತ್ಯವೊ? ಆಸ್ಥಾನ ಕವಿಗಳೇ ಮಂಗಳೂರು ಗೂಳಿಂದ ಪ್ರಯವರೆಂದರೆ ಯಾರೂ ಮರುಮಾತೆತ್ತುವಂತಿಲ್ಲ

ಇಲ್ಲದಿದ್ದರೂ ಈಚೆಗೆ ಮಂಗಳೂರಿಗೆ ಬುದ್ಧನ ದೆಶೆಯೆ ಹಿಡಿದಿದಯೆನ್ನೆಂಕು ವಾಯರ್ಲೆಸ್ ಸ್ಟೇಶನು ಮಾಡುತ್ತಾರೆ ಇಲ್ಲಿ ಎನ್ನುವುದರೊಳಗೆ ವಿಮಾನ ನಿಲ್ದಾಣ ರಚನೆಯೂ ಆಗುವುದೆಂದಾಯಿತು ವಿಮಾನ ನಿಲ್ದಾಣದ ಸಂತೋಷ ಮುಗಿಯುವುದರೊಳಗೆ ಹಡಗು ನಿಲ್ದಾಣದ ನಿರ್ಧಾರ ಹೊರಬಿತ್ತು ನೆದುನೆ ಮಾಡಿಕೊಡುವುದು ಹೆಚ್ಚಿನವರ ಕರ್ತವ್ಯ, ಮುಂದಿನ ಭಾಗ್ಯ ವಧುವಿನ ವಿಧಿಯನ್ನು ಹೊಂದಿಕೊಂಡು ಉಂಟು ಸರಕಾರದವರು ಬಂದರನ್ನು ಮಾಡಿ ಕೊಡುತ್ತಾರೆ ಅದನ್ನು ಸುಗಮವಾಗಿ ಅಭಿವೃದ್ಧಿ ಮಾಡುವುದು ವ್ಯಾಪಾರಿಗಳ ಪಾಲಿಗೆ ಸೇರಿದ್ದು, ನಗರ ಸಭೆಗೆ ಸೇರಿದ್ದು ಸೂರ್ಯೋದಯವಾದೊಡನೆ ಕಮಲಗಳು ತನ್ನಷ್ಟಕ್ಕೆ ಅರಳುವುವಲ್ಲವೆ? ಬಂದರಾದೊಡನೆ ಮಂಗಳೂರು ವಿಕಸಿತವಾಗುವುದು ಅದರೊಡನೆ ನಮ್ಮ ಮಾರ್ಗದ ಧೂಳು ಹೆಚ್ಚುಹಾರದಿರಲಿ, ನಮ್ಮ ಚರಂಡಿಗಳು ಹೆಚ್ಚು ಕೆಲಕಾಗದಿರಲಿ, ಆನೆ ಕಾಲಿನ ವ್ಯಾಧಿಗಳೊಂದಿಗೆ ಕುದುರೆ ಕುತ್ತಿಗಳು ಜೊನುವಾರು ಜಾಡ್ಯಗಳು ಒಳೆಯದಿರಲಿ ಮನುಷ್ಯ ಬೆಳೆದಂತೆ ಜ್ವಾಸಿಯಾಗುವಂತೆ ಬೆಳೆಯುವ ಮಂಗಳೂರು ಸುಸೌಕರ್ಯಗಳ, ಸವ್ಯವಸ್ಥೆಗಳ ಭಾಗ್ಯದಿಂದ ಬೆಳಗಲಿ

ಬಂದರಾದುದರಿಂದ ಮಂಗಳೂರಿಗೆ ಅದರ ಹಿಂದಿನ ಕೀರ್ತಿಗೆ ಕಳೆಯೇರಿತು ನಮ್ಮ ನದಿ ಕಡಲ ತೀರದಲ್ಲಿ ಈ ಸುಸಮಯವನ್ನು ನಿರೀಕ್ಷಿಸಿ ಹಂಚಿನ ಕಾರ್ಖಾನೆಗಳ ಹೊಗೆ ನಳಿಗೆಗಳು ತಮಸ್ಕಾಚರಣೆಗೆ ಸಿದ್ಧರಂತೆ ಊರ್ಧ್ವಮುಖಿಗಳಾಗಿ ನಿಂತಿದ್ದುವು ಹಲ್ಲು ಹೋದ ಹಾವಿನಂತಾಗಿರುವ ಸುಲ್ತಾನ ಬತ್ತೇರಿಯು ನೀರಲ್ಲಿ ನಿಂತು ಧ್ಯಾನ ಮಾಡುತ್ತಿರುವಂತೆ ತೋರುತ್ತದೆ. ಒಂದು ಕಾಲದಲ್ಲಿ ನಮ್ಮ ಈ ಬಂದರಿಗೆ ಬೆಳಕು ತೋರುತಿದ್ದ ಬಾವಟೆ ಕಂಭವು ಕಣ್ಣು ಹೋದ ವೃದ್ಧನಂತೆ ತನ್ನ ಎದೆಯಲ್ಲಿ ಗ್ರಂಥ ಭಂಡಾರವನ್ನೇ ಧರಿಸಿ ಮಂತ್ರಪರನ ಮಾಡುವಂತೆ ಭಾಸವಾಗುತಿತ್ತು. ಸ್ವತಃಕ್ಷ ಮಂಗಳಾದೇವಿಯು ಸತ್ಯಾಗ್ರಹ ತೆಪ್ಪು ಸಾಂಪ್ರದಾಯಿಕವಾದ ತನ್ನ ಬಲಿ ತೆಗೆದು ಕೊಳ್ಳುವಿಕೆಯನ್ನು ನಿಲ್ಲಿಸಿದ್ದಳು. ಇಂದು ಇವರೆಲ್ಲರ ಬಯಕೆ ಹೂಬಿಟ್ಟಂತಾಯಿತಲ್ಲವೆ?

THE

UNITED INDIA LIFE ASSURANCE CO., LTD.

(H O MADRAS.)

ANNOUNCEMENT

We have great pleasure in announcing that our Branch Office for S. Kanara, Malabar, and Coorg, now functions at our premises at K. S. Rao Road, Mangalore.

THE BRANCH MANAGER.

"ಗಾಂಧೀ ತತ್ವವೇ ಬಂಡೇಯಾದ ನರಿ ಮೊಗ್ಗೆವು ಹೇಗೆ?" ಎಂಬ ವಿಷಯದ ಮೇಲೆ ಸ್ಥಾನಿಕದ ಗೃಹ ನಿರ್ಮಾಣ ಪಂಡಿತ್ ಮಿಶ್ರಾ ಅವರು ಸೇವಾಗ್ರಾಮದ ನಮ್ಮ ತಾಯಿ ಸಂಘದ ವಾರ್ಷಿಕೋತ್ಸವ ಭಾಷಣದಲ್ಲಿ ತಿಳಿಸಿದರು:

ವಿಜ್ಞಾನಿಗಳ ಗಮನವು ಇಂದು ಲೌಕಿಕ ವಿಷಯಗಳಿಂದ ಅಧ್ಯಾತ್ಮಿಕ ವಿಷಯಗಳ ಪರಿವರ್ತನೆಹೊಂದಿದೆ. ಭೌತಿಕ ಶಾಸ್ತ್ರದಿಂದ ಅವರಿಂದು ಮನೋ ಶಾಸ್ತ್ರದತ್ತ ತಿರುಗುತ್ತಿದ್ದಾರೆ. ಲೌಕಿಕ ವಿಷಯಗಳೇ ಎಲ್ಲಾ ಸುಖಗಳ ಪ್ರಾರಂಭವೂ ಅಂತ್ಯವೂ ಎಂದು ಭಾವಿಸಲ್ಪಡುವುದಿಲ್ಲ. ಲೌಕಿಕ ವಿಷಯವು ಮನಸ್ಸಿನ ಒಂದು ಆಪೇಕ್ಷೆಯ, ಅದಕ್ಕೆ ತಗಲುವ ಒಂದು ಕೊಳೆ ಎಂದು ತಿಳಿಕೊಳ್ಳಲಾಗುತ್ತದೆ. ಕಳೆದ ಕೆಲವು ವರ್ಷಗಳಿಂದ ಉಂಟಾದ ಒಂದು ಅಪೂರ್ವ ಬದಲಾವಣೆಯಲ್ಲಿ ಹಿಂದಿನ ವಿಜ್ಞಾನ ಪಾಠಪುಸ್ತಕಗಳ ಪ್ರಾಧಾನ್ಯ ಹಿಂದಕ್ಕೆ ಹೋಗಿದೆ. ಕಾರ್ಲ್ ಮಾರ್ಕ್ಸನ ಕಮ್ಯುನಿಸ್ಟ್ ಸಿದ್ಧಾಂತದ ಅವಸ್ಥೆಯಾದರೂ ಅದೇ ರೀತಿಯಲ್ಲಿದೆ. ಅದು 19ನೇ ಶತಮಾನದ ಪರಿಸ್ಥಿತಿಗಳ ಗಣನೆಯ ಅಸ್ಥಿವಾರದ ಮೇಲೆ ತಪ್ಪಲ್ಪಟ್ಟದ್ದು. ಲೌಕಿಕವಾದ ವಿಜ್ಞಾನ ಶಾಸ್ತ್ರಗಳೇ ಅದಕ್ಕೆ ಆಧಾರಶಿಲೆಯಾಗಿದ್ದುವು. ಇಂದಿನ ಪರಿಸ್ಥಿತಿಯಲ್ಲಿ ಇವುಗಳು ಕೂಡ ಸ್ಥಿರತೆಯಿಂದ ನಿಲ್ಲಲಾರವಾಗಿವೆ.

ಕಳವಳ-ಗಲಿಬಿಲಿ

ದುರಾದೃಷ್ಟ ವಶಾತ್ ನಾವಿದನ್ನು ಕಾಣಲಾರೆವು. ಸ್ವಾತಂತ್ರ್ಯಾ ನಂತರವೂ ನಮ್ಮ ದಾಸ್ಯ ಮನೋಭಾವ ನಮ್ಮನ್ನು ಬಿಟ್ಟು ಕೊಲಗಿಲ್ಲ. ಅದು ಇನ್ನೂ ನಮ್ಮಲ್ಲಿ ಒತ್ತಿ ಕಾಣಿಸಿಕೊಳ್ಳುತ್ತಿದೆ. ಯುರೋಪಿನಲ್ಲಿ ಎಂದೊ ಕಳಚಿಹಾಕಿದ ವೇಷಭೂಷಣಗಳನ್ನೂ ನಾವು ಅಪ್ಪಿ ಹಿಡಿದು ನೆರಿಯುತ್ತಿದ್ದೇವೆ. ಅವನ್ನೇ ದಿವ್ಯಾದರ್ಶವಾಗಿ ನಾವು ಪ್ರದರ್ಶಿಸುತ್ತೇವೆ. ನಮ್ಮಲ್ಲಿನ ಸದ್ಗುಣವನ್ನು ವಿರೋಧಿಸರು ಕಂಡು ಹಿಡಿಯುವ ತನಕ ನಾವು ಅವನ್ನು ಕಾಣಲು ಅಸಮರ್ಥರಾಗುತ್ತೇವೆ.

ಇಂದಿನದು ತನ್ನ ವಿಶ್ವಾಸವನ್ನು ಕಳೆದು ಕೊಂಡ ಯುಗ. ಪ್ರತಿಯೊಂದು ಅಸಿಶ್ಚಿತತೆಯಿಂದ ಕೂಡಿದೆ. ಪ್ರತಿಯೊಂದು ವಿಷಯದಲ್ಲೂ, ಗಲಿಬಿಲಿಗಳು ಕಾಣುತ್ತವೆ. ವಿದೇಶಗಳಿಂದ ತರಿಸಿಕೊಂಡ ಪರಸ್ಪರ ವಿರೋಧ ಘರ್ಷಣೆಯ ವಿಚಾರಗಳು ಈ ಗಲಿಬಿಲಿಯನ್ನು ಇನ್ನಷ್ಟು ಕಳವಳಾಸ್ಪದವಾಗಿ ಮಾಡುತ್ತವೆ. ಜಗತ್ತು ಇಂದು ದ್ವೇಷಾಸೂಯೆ ಮತ್ತು ಹಿಂಸೆಯ ಹೋರಾಟದ ಭೀಕರಾಗ್ನಿಯಲ್ಲಿ ಬೇಗುದಿಗೊಳ್ಳುತ್ತಿದೆ. ಇದರ ಪರಿಹಾರವು ಭಾರತೀಯ ವಿಧಾನದಿಂದಲೆ ಸಾಧ್ಯವು. ಈ ನಿಧಾನದ ಇತ್ತೀಚೆಗಿನ ನಿರೂಪಣೆ ಗಾಂಧೀ ತತ್ವಜ್ಞಾನ.

ಮಾನವ ಸಮಾನತೆ

ಕಮ್ಯೂನಿಸಮ್ ಸಮತಾವಾದ ಮತ್ತು ಸೋಶಲಿಸ್ಮ್ ಸಮಾಜವಾದಗಳನ್ನು ಮಾರ್ಕ್ಸನು 1848ರಲ್ಲಿ ಬೋಧಿಸಿದನು. ಅಂದಿನ ಜಗತ್ತಿನ ರಾಷ್ಟ್ರಗಳ ಗೊತ್ತುಗುರಿಯಲ್ಲಿ ಆಗಾಧವಾದ ಸ್ಥಿತ್ಯಂತರವು ಉಂಟಾಗಿನೆ. ಆ ಬದಲಾದ ಪರಿಸ್ಥಿತಿಯಲ್ಲಿ ಮಾರ್ಕ್ಸನ ವಿಚಾರ ಸರಣಿಯು ಹೊಂದಿಕೊಳ್ಳಲು ಆಯೋಗ್ಯವಾಗಿದೆ. ಹಾಗಾದರೆ ಇದಕ್ಕೆ ಸರಿಯಾದ ಪರಿಹಾರವು ಯಾವುದು? ನನ್ನ ಅಭಿಪ್ರಾಯದಲ್ಲಿ ಗಾಂಧೀವಾದವೇ ತಕ್ಕುದಾದುದು ಎಂದಿದೆ.

ಗಾಂಧೀವಾದವು ಈ ಮಾರ್ಪಾಟು ಹೊಂದಿದ ಪರಿಸ್ಥಿತಿಯ ಫಲವಾಗಿದೆ. ಅದು ಕೇವಲ ರಾಜಕೀಯ ದೃಷ್ಟಿಯಿಂದ ಮಾತ್ರ ಕ್ರಾಂತಿಕಾರಕವಾದುದಲ್ಲ, ಸಾಮಾಜಿಕ ದೃಷ್ಟಿಯಿಂದಲೂ, ಅದು ಮಹಾ ವರ್ಚಸ್ಸು ಉಳ್ಳದ್ದಾಗಿದೆ. ಪರಸ್ಪರ ಮಾನವ ಮಾನವರೊಳಗೆ ಅದು ಸಮಾನತೆಯನ್ನು ಸಾರುವುದರಿಂದ ಅದು ಎಲ್ಲಾ ತರದ ಸಮಾನತೆಗಳಿಗಾಗಿ ಪ್ರಯತ್ನಿಸುವಂತಹದಾಗಿದೆ. ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಅದು ಸಮಾನತೆಯನ್ನು ಬಯಸುತ್ತದೆ. ಸಂಪತ್ತು ಯಾರಲ್ಲೂ ಅಪಾರವಾಗಿ ಒಟ್ಟುಗೂಡಬಾರದೆಂದು ಅದು ಬೋಧಿಸುತ್ತದೆ. ಇದಕ್ಕಿಂತಲೂ ಮೇಲಾದುದು ಇನ್ನೇನಿದೆ.

ಈಗಿನ ಯುಗದಲ್ಲಿ ಮಾರ್ಕ್ಸನ ಸಿದ್ಧಾಂತಕ್ಕೆ ಸ್ಥಾನವಿಲ್ಲ

ಕಮ್ಯೂನಿಸಮ್ ಮತ್ತು ಅಣುಶಕ್ತಿ

ಗಾಂಧೀ ತತ್ವವಾದವೇ ಸರಿಯಾದ ದಾರಿ

ಚರ್ಮ ವ್ಯಾಧಿಗಳಿಂದ
ಶೀಘ್ರ ಗುಣಹೊಂದಲಿಕ್ಕೆ
ತ್ವರೆಯ ಮುಲಾಮು

ಔಷಧಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ಸ್ಥಿತಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳಜೀನಿಯಂನ್ನು ದೂರಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮು
CUTICURA OINTMENT



ಶಮನಿಸಿ, ರಕ್ಷಿಸಿ, ಪರಿಹರಿಸಲ್ಪಡುವವು.

ಅತೀ ಹೆಚ್ಚಿನ ರಕ್ಷಣೆಗಾಗಿ ಸುಟ್ಟ ಘಾಯವನ್ನು ಜಾಂಬಕು ತಾಗಿಸಿದ ಬಟ್ಟೆ ಚೂರಿನಿಂದ ಮುಚ್ಚಿರಿ. ಜಾಂಬಕಿನೊಳಗಿನ ಶುದ್ಧೀಕೃತ ಔಷಧಿ ಎಣ್ಣೆಗಳು ಘಾಯವನ್ನು ತಂಪಾಗಿರಿಸಿ, ಊದುವಿಕೆಯನ್ನು ತಡೆಸಿ ವಿಷಹಾರಿ ರಕ್ಷಣೆಯನ್ನು ಕೊಡುವುದು. ಚರ್ಮ ಒಡೆದಿದ್ದರೆ ಜಾಂಬಕು ಅದನ್ನು ಶೀಘ್ರ ಗುಣವಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ.

Zam-Buk

ನಿಶ್ಚಜಾತಿಯ ವನಸ್ಪತಿ ಮುಲಾಮು.

ಖಂಡಿತ ಪ್ರಾಣಿಕೊಡು ರಹಿತವಾದುದು.

CANARA HIGH SCHOOL

MANGALORE.

The preliminary list of voters for election of three representatives of Old Boys to the Canara High School Council has been put up on the Notice Board of the Canara High School Main on 24-12-1948. Objections are invited till 31-5-1949 after which a final list will be prepared.

The following dates have been fixed in connection with the election of three members of the Canara High School Council from the Old Boys' Constituency.

Day of nomination-11th July 1949.

Nominations to be received by the Headmaster, Canara High School, Main.

Time of scrutiny-5 p. m. on 12th July 1949.

Time for withdrawal-5 p. m. on 14 July 1949.

Voting papers to be issued by-14-8-1949.

Last day for receipt of voting papers—1-10-1949.

Counting of votes and declaration of result-Commencing at 5-30 p. m. on 3-10-1949.

All nomination papers have to be accompanied by a non-returnable deposit of Rs. 10/- (Rupees ten) only.

Mangalore 26-4-1949 } M. MADHAVA RAU Manager, Canara High School.

LEASE OF TILE FACTORY

Auction Notice

It is hereby informed that the Mangalore Tile Company in Bolar will be leased out as per orders of court for the manufacture of tiles from 1st of July, 1949 to 30th June 1950 to the highest bidder at the auction to be held at 11 A. M. on 16-5-1949 at the office of the administrator in K. S. Rao Road, Mangalore.

Intending bidders are expected to inspect the factory and the materials contained therein before hand and the bidders shall be deemed to have full knowledge of the conditions and the terms of lease now subsisting and also conditions of lease shown in proclamation of lease by auction available at the administrator's office.

The lessee will have to pay ground rent, municipal and other taxes. Further he has to insure the factory and the machinery for a sum of at least Rs. 50,000/- (fifty thousand) against all risk including fire etc.

Mangalore 24th Apr. 49 } M. K. Devaraj Administrator Appointed in O. S. No. 79/1944 By the Sub Court, S. K.

ಬಣ್ಣಗಳ ರೋಗ ನಿವಾರಕ ಶಕ್ತಿ

ನಮ್ಮ ಪ್ರಾಚೀನರ ಅದ್ಭುತ ಶೋಧನೆ

ಬೆಳಕಿನ ಜೀವದಾನ ಪ್ರಭಾವ

ನಾವು ವಾಸಿಸುವ ಜಗತ್ತು ಪಂಚ ಭೂತಾತ್ಮಕವಾದುದು. ಬೆಳಕು, ಗಾಳಿ, ನೀರು, ಬೆಂಕಿ, ವಾತಾವರಣಗಳು ಈ ಸೃಷ್ಟಿಯೊಳಗಿನ ಪ್ರತಿಯೊಂದು ವಸ್ತುವಿನ ಮೇಲೆ ಪ್ರಭಾವವನ್ನೂ ಬೀರುವವು. ಅಂತೇ ನಾವು ನೋಡುವ ಹಲವು ಮನೋಹರವಾದ ಬಣ್ಣಗಳು ಕೂಡ ಮಾನವನ ಶರೀರ ಮನಸ್ಸುಗಳ ಮೇಲೆ ಅತ್ಯದ್ಭುತದ ಪರಿಣಾಮವನ್ನು ಉಂಟುಮಾಡುತ್ತವೆ. ಬಣ್ಣಗಳ ಈ ಅಸಾಮಾನ್ಯ ಪರ್ಚಸ್ಸಿನ ಕುರಿತು ಡಾ। ರೊಬರ್ಟ್ ಹಂಟರ್ ಎಂಬವರು ಒಂದು ಸಾರಸ್ಯವಾದ ಲೇಖನದಲ್ಲಿ ಹೀಗೆ ಬರೆಯುತ್ತಾರೆ

ಬಣ್ಣಗಳು ಮನುಷ್ಯನ ಚಟುವಟಿಕೆಗಳು, ಮನೋಸ್ಥಿತಿಗಳ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡುತ್ತವೆ ಅವುಗಳಲ್ಲಿ ಜೀವಸೃಷ್ಟಿಯ ಮತ್ತು ಧಾರಣೆಯ ಚೈತನ್ಯವಿದೆ ನಮ್ಮ ಸ್ವಭಾವ, ಆರೋಗ್ಯ ಮತ್ತು ಧಾರಣೆಯ ಚೈತನ್ಯವಿದೆ ನಮ್ಮ ಸ್ವಭಾವ, ಆರೋಗ್ಯ ಮತ್ತು ಸುಸ್ಥಿತಿಗಳ ಮೇಲೆ ಬಣ್ಣಗಳಿಗೆ ನೇರವಾದ ಹೊಂದಿಕೆ ಇದೆ ಅವು ಶಾರೀರಿಕ ಮತ್ತು ಮಾನಸೀಕವಾದ ಎರಡು ತರದ ಕೃತ್ಯಗಳನ್ನೂ ನಿವಾರಿಸಬಲ್ಲದು ಮನಸ್ಸಿನ ಅಗಾಧ ಶಕ್ತಿಯನ್ನು ಹತ್ತಿಕ್ಕುವ ಶಕ್ತಿ ಒಂದು ಮರಣಕ್ಕ ಮಾತ್ರ ಇದೆ, ಮತ್ತೆ ಮನಸ್ಸನ್ನು ಪ್ರಭಾವಿತಗೊಳಿಸಲು ಶಕ್ತಿಯುಳ್ಳ ಬಣ್ಣಗಳು ಮಾತ್ರ ಕೆಲವು ವೇಳೆ ಅವುಗಳಿಂದ ಒಳಿತೂ, ಕೆಲವು ವೇಳೆ ಕೆಡುಕೂ ಸಹ ಆಗಬಲ್ಲದು ದೋಷಗುಣಗಳನ್ನು ಬಣ್ಣಗಳು ಹೆಚ್ಚು ಕಡಿಮೆ ಮಾಡಬಲ್ಲವು ಅವುಗಳಿಂದ ಮಾನವ ಮನಸ್ಸು ಕೆಲವೊಂತಕವನ್ನು ಗಮ್ಯಕೂಲ ಕೂಡ ದಾರಿಮಾಡಲ್ಪಡಬಹುದು. ಇನ್ನೊಂದು ಕಡೆಯಿಂದ ಅವು ಮನುಷ್ಯನ ಮನಸ್ಸನ್ನು ಲೌಕಿಕ ಜಗತ್ತಿನ ಮಾಯಾ ಬಂಧನದಿಂದ ಮುಕ್ತನಾಗಿ ಮಾಡಿ ಅದನ್ನು ಉನ್ನತವಾದ ಅಧ್ಯಾತ್ಮಿಕ ನೆಲೆಗೆ ಏಯ್ದಬಹುದು

ನಿವಾರಕ ಶಕ್ತಿ

ಬಣ್ಣಗಳು ಚಟುವಟಿಕೆವನ್ನು ಉದ್ದೀಪನಗೊಳಿಸುತ್ತವೆ ಅವು ಅಲಸ್ಯದ ಪ್ರವೃತ್ತಿಯನ್ನು ಉಂಟುಮಾಡಬಲ್ಲವು ಒಬ್ಬನನ್ನು ಅವು ಸುಖಿಯನ್ನಾಗಿಯೂ ದುಃಖಿಯನ್ನಾಗಿಯೂ ಮಾಡಬಲ್ಲವು ಅಷ್ಟು ನಮ್ಮಲ್ಲಿ ಸಕ್ರಿಯತೆಯನ್ನು ಪ್ರಚೋದಿಸಬಲ್ಲವು ಕಾಮನ ಬಿಲ್ಲಿನಲ್ಲಿರುವ ಆ ಏಳು ಬಣ್ಣಗಳು ಪ್ರಾಚೀನ ಪವಿತ್ರ ಶಾಸ್ತ್ರಗಳಲ್ಲಿ ರಹಸ್ಯವಾದ ದೈವಿಕ ಶಕ್ತಿಯೊಡನೆ ಸಂಬಂಧ ವಿರುವಂತಹವಾಗಿ ಹೇಳಲ್ಪಟ್ಟಿವೆ ಖಂಡಿತವಾಗಿಯೂ ಇದು ನಿಜ ಸಂಗತಿಯಾಗಿದೆ

ಪ್ರಾಚೀನ ನಾಗರೀಕತೆಗಳು ವರ್ಣ ಮಹಾತ್ಮ್ಯ ಜ್ಞಾನದಿಂದ ವಿವೇಕವನ್ನೂ ಪಡೆದಿದ್ದವು ಪ್ರಾಚೀನ ಈಜಿಪ್ತ್ ದೇಶದಲ್ಲಿ ಹೆಲಿಯೊಪೊಲಿಸ್ ಎಂಬ ಬೆಳಕು ಮತ್ತು ಬಣ್ಣಗಳ ದೇವ ಮಂದಿರವೊಂದಿತ್ತು ಅದನ್ನು ಸಂದರ್ಶಿಸಿದರೆ ಅನೇಕ ರೋಗರುಜಿನಗಳು ನಿವಾರಣೆ ಹೊಂದುತಿದ್ದುವಂತೆ. ವಿವೇಕ ಪರವಾದ ಚೀನ ಮತ್ತು ಭಾರತೀಯರ ಹಳೆ ನಾಗರೀಕತೆಗಳು ಬಣ್ಣಗಳ ಈ ನಿವಾರಕ ಶಕ್ತಿಯ ಕುರಿತು ತುಂಬಾ ಗೌರವನಿಷ್ಠವುಗಳಾಗಿದ್ದುವು. ಗ್ರೀಕ್ ನಾಗರೀಕತೆಯ ಸುವರ್ಣಯುಗದಲ್ಲೂ ಬಣ್ಣದ ಕಂವನ ಮತ್ತು ಅಲೆಗಳ ಶ್ರೇಷ್ಠಮೌಲ್ಯವು ತಿಳಿದಿತ್ತಿತು. ಮಹಾ ಜ್ಞಾನಿಗಳಿಗೆ ಮಾನವನ ಜೀವಾತ್ಮ ಪರಮಾತ್ಮ ಸಂಬಂಧಕ್ಕೆ ಬಣ್ಣಗಳು ಅದೆಷ್ಟು ಸಹಾಯಕಾರಿಯಾಗಿವೆ ಎಂಬುದನ್ನು ತಿಳಿದಿದ್ದರು.

ಸ್ಫೂರ್ತಿಗೆ ಮೂಲ

ವರ್ಣ ವಿಜ್ಞಾನದ ಮಹಾ ಪರಿಶೋಧಕನೂ ಮಧ್ಯಕಾಲದ ಪ್ರಮುಖ ವರ್ಣಚಿತ್ರ ಗಾರನೂ ಆದ ಲಿಯನಾರ್ಡೊ ಡಾವಿನ್ಸಿಯು ಬಣ್ಣಗಳಲ್ಲಿನ ನೇರಳೆ ಕಿರಣಗಳಿಗೆ ಧ್ಯಾನದ ಶಕ್ತಿಯನ್ನು ಅಧಿಕರಿಸುವ ಶಕ್ತಿಯಿದೆ ಎಂಬ ವಿಶ್ವಾಸವುಳ್ಳವನಾಗಿದ್ದನು. ಅಲೌಕಿತವಾದ ಸಂಗೀತರಂಗಗಳನ್ನು ನಿರ್ಮಿಸುತಿದ್ದ ವಿಶ್ವವಿಖ್ಯಾತ ಜರ್ಮನ್ ಸಂಗೀತ ರಂಗಗಳನ್ನು ನಿರ್ಮಿಸುತ್ತಿದ್ದ ವಿಶ್ವ ವಿಖ್ಯಾತ ಜರ್ಮನ್ ಸಂಗೀತಜ್ಞ ನಾಂದ ವೆಗ್ನರನು ತನ್ನ ಸೂಕ್ತಿಗಾಗಿ ಕೋಣೆಯನ್ನು ನೇರಳೆ ಬಣ್ಣದ ಬಟ್ಟೆಗಳಿಂದ ಅಲಂಕರಿಸಿದ್ದನು ಅಧುನಿಕ ವರ್ಣವಿಜ್ಞಾನಿಗಳು ಕೂಡ ನೇರಳೆ ಬಣ್ಣವೇ ಶ್ರೇಷ್ಠವಾದ ಎಲ್ಲಾ ಕಲಾ ಸಂಹಿತ್ಯಕೃತಿಗಳಿಗೆ ಸ್ಪರ್ತಿಯ ಮೂಲವಾಗಿತ್ತೆಂಬ ಸಂಗತಿಯನ್ನು ಸ್ಥಾಪಿಸಿವೆ ಎಂತೀಕರಿಸಿದ್ದಾರೆ ಮಿದುಳಿಗೆ ನೇರಳೆ ಬಣ್ಣದ ರಶ್ಮಿಗಳು ಪೋಷಣೆಯನ್ನು ಕೊಡುತ್ತವೆ ಯಂತೆ ಹೀಗೆ ಆ ಕಿರಣಗಳಿಂದ ದೊರಕುವಿಕೆಯಾದ ಮಿದುಳು ಅತ್ಯುತ್ತಮ ಮಾನಸಿಕ ಧ್ಯೇಯ ಸಾಧನೆಗೂ ಮತ್ತು ಉದಾತ್ತ ಸ್ಫೂರ್ತಿಗೂ ಸೃಷ್ಟಿಗಳಿಗೂ ಕಲಾಜ್ಞಾನಿಯೂ ಕೆಲವು ಹೇಳಲ್ಪಟ್ಟಿವೆ

ಹಸುರು ಬಣ್ಣವು ಸಾಮಾನ್ಯಸ್ಥಿತಿಕವಾದ ಕಾಪಸಗಳನ್ನುಂಟುಮಾಡುತ್ತದೆ ಅದರಿಂದ ಮನಸ್ಸಿಗೆ ದೃಢತೆಯನ್ನೂ ಶಾಂತಿಯನ್ನೂ ಅದು ಉಂಟುಮಾಡುತ್ತದೆ. ಅಲ್ಲದೆ ಅದು ನರ ಶಕ್ತಿಗಳನ್ನು ಅದು ಶಮನಿಸುತ್ತದೆ ಹಸುರು ಪ್ರಕೃತಿಯ ಬಣ್ಣ – ಎಲೆ ಹುಲ್ಲುಗಳಲ್ಲಿ ಅದು ತನ್ನ ಅಗಾಧತೆಯನ್ನು ಬೀರಿದೆ ನಸುಗಪ್ಪು ಮತ್ತು ತುಸು ಗೆಂಪು ಬಣ್ಣಗಳನ್ನೆ ಯಾವಾಗಲೂ ನೋಡುತ್ತ ತಮ್ಮ ಜೀವನ "ಹೋರಾಟ" ವನ್ನು ನಿರ್ವಹಿಸುವ ದಣಿದ ನಗರವಾಸಿಗಳ ನಿರ್ಬಲ ನರ ಶಕ್ತಿಯನ್ನು ಹಸುರು ಬಣ್ಣವು ನಿವಾರಿಸುತ್ತದೆ.

ಹಳದಿ ಬಣ್ಣದ ಕಿರಣಗಳು ವ್ಯಾಮುಷ್ಯಾಗಿ ಮನಸ್ಸಿನ ವಿಚಾರ ಶಕ್ತಿಯನ್ನು ವಿಕಸಿಸುತ್ತದೆ ತಾಪಕ್ರಯಗಳಿಂದ ಸಿರುತ್ಪಾಹಗೊಂಡ ಮನಸ್ಸನ್ನು ಕಿತ್ತಳೆ ಬಣ್ಣವು ಪ್ರಸನ್ನಗೊಳಿಸುತ್ತದೆ ಆದುದರಿಂದಲೇ ನಾನಾನ ಜೀವನದಲ್ಲಿ ಒಂಗಾರದ ಬಣ್ಣಗಳಿಗೆ ಅಪಾರವಾದ ಬೆಡಗು ಕಂಡುಬರುವುದು

ಮನೆ, ಚಿಕಿತ್ಸಾಲಯಗಳಲ್ಲಿ

ಕೆಂಪು ಬಣ್ಣವನ್ನು ನೋಡಿದಾಗ ಶರೀರದಲ್ಲಿ ರಕ್ತಚಲನೆಯನ್ನು ತೀಕ್ಷ್ಣಗೊಳಿಸುವ ರಸಗಳು ಅವುಗಳ ಗ್ರಂಥಿಗಳಿಂದ ಹೆಚ್ಚಾಗಿ ಉಂಟುಮಾಡಲ್ಪಡುತ್ತವೆ ಅದರಪರಿಣಾಮದಿಂದ ಶಾರೀರಿಕ ಚಟುವಟಿಕೆಯು ಹೆಚ್ಚುತ್ತದೆ ಮಿದುಳನ್ನು ಅದು ಕ್ರಿಯಾತ್ಮಕ ಕೃತ್ಯಗಳಲ್ಲಿ ಉತ್ತೇಜಿಸುತ್ತದೆ ಕೆಂಪುಬಣ್ಣವು ಜನಸಾಂಕಪ ಮನಸ್ಸನ್ನು ಕದತಿ ಖಾಸಿಕಾಂಕ ಪ್ರವೃತಿಯಲ್ಲಿ ಸ್ಪರೀಪಿಸುತ್ತದೆ

ಅತೀವವಾದ ಮನೋ ವೇದನೆಯಿಂದ ಬಳಲಿದ್ದು ನರಶಕ್ತಿ ನಷ್ಟ ಗೊಂಡವರಿಗೆ ನೀಲ ಬಣ್ಣವು ಶಾಂತಿ ಸ್ಥಿರತೆಯನ್ನುಂಟು ಮಾಡುತ್ತದೆ. ಶುದ್ಧ ನೀಲಾಕಾಶವು ಮನಸ್ಸಿನ ನೆಮ್ಮದಿಯನ್ನು ದೃಢವಡಿಸುತ್ತದೆ. ವರ್ಣಭಾವವಿದ್ದವರಿಗೆ ಇದರಿಂದ ಆಧ್ಯಾತ್ಮಿಕ ಸತ್ಯದ ನಿತ್ಯ ದರ್ಶನವನ್ನುಂಟುಮಾಡ ಬಹುದು

ಒಣ್ಣಗಳಿಂದ ಶಾರೀರಿಕ ಮತ್ತು ಮಾನಸಿಕ ವ್ಯಾಧಿಗಳನ್ನು ನಿವಾರಿಸುವುದರ ಕುರಿತು ಅನೇಕ ಸ್ಥಂಗತಿಗಳು ಸಂಭವಿಸುವುದನ್ನು ನಾವು ತಿಳಿದುಕೊಳ್ಳಬಹುದು ತಜ್ಞ ವೈದ್ಯರೆಲ್ಲರಿಗೆ ವರ್ಣ ಮಹಾತ್ಮ್ಯದ ನಿಶ್ಚಯ ಜ್ಞಾನವಿದೆ ಕುಷ್ಠ ರೋಗವು ಹಳದಿ ಕಿರಣಗಳಿಂದ ಗುಣವಾಗಬಲ್ಲುದಂತೆ ಶ್ವಾಸಕೋಶದ ಅವ್ಯವಸ್ಥೆಗಳು ನೀಲ ಬಣ್ಣದಿಂದ ನಿವಾರಣೆಗೊಳ್ಳಬಲ್ಲುವು ನೇರಳೆ ಬಣ್ಣವು (Indigo) ಮನಸ್ಕಾದ ಕಣ್ಣುಗಳನ್ನು ಪರಿಪೂರ್ಣ ದೃಷ್ಟಿಗೆ ಹೊಂದಿಸಬಲ್ಲದು. ಬಣ್ಣಗಳಿಂದ ಗಾಳಿ, ದ್ರವ ಪದಾರ್ಥಗಳ ಆಹಾರ ವಸ್ತುಗಳು ಶಕ್ತಿಯುಕ್ತವಾಗಿ ಮಾಡಲ್ಪಡಬಹುದು ಜಗತ್ತಿನ ಹಲವು ಕಡಗಳಲ್ಲಿ ಮನೋವಿಕಾರದ ವ್ಯಕ್ತಿಗಳನ್ನು ಗುಣಪಡಿಸಲು ವೈದ್ಯರು ಬಣ್ಣಗಳನ್ನು ಒಳಸುತ್ತಾರೆ

ಆಕರ್ಷಕ ಶಕ್ತಿ

ಔದ್ಯೋಗಿಕ ಕಂಪೆನಿಗಳಲ್ಲಿ ಬಣ್ಣದ ಶಕ್ತಿಯು ಉಪಯುಕ್ತವಾಗಿ ಬಳಸಲ್ಪಡುವುದು ಬಣ್ಣಗಳಿಂದ ಉತ್ಪಾದನೆ ಹೆಚ್ಚಿಸಿ ಮಜೂರಿ ಮೊತ್ತಕಾರಿಗೆ ಒಳಿತಾಗಿದೆ ಕಾರ್ಖಾನೆ ಕೆಲಸಗಾರರಿಗೆ ಅದರಿಂದ ಆನಂದವನ್ನುಂಟುಮಾಡಲಾಗುತ್ತದೆ ಇದರಿಂದ ಕೆಲಸದ ಹೊರುವು ಹೆಚ್ಚುತ್ತದೆ ಕೆಲವೊಂದು ಹಿಂದಿ ಹೊಸ್ಟೆಲ್ ಕಾರ್ಖಾನೆಯಲ್ಲಿ ಕೆಲಸಗಾರರ ಆಕೀ ಹೆಚ್ಚು ಕೆಂಪು ಮೈಯ್ಯ ಹಳದಿ ಬಣ್ಣವನ್ನು ಸೋಡಿದವರಾಗಿ ಆಗಿದ್ದಾಗ್ಗ ಜಗಳ ಗುಟಿತನದಲ್ಲಿ ನಿರತರಾಗುತಿದ್ದರು ತಜ್ಞರ ಸಲಹೆಯಿಂದ ಮತ್ತೆ ಅವರ ವಾತಾವರಣ ಬಣ್ಣಗಳಲ್ಲಿ ತಕ್ಕ ಸ್ವತ್ಯಾಸ ಮಾಡಲಾಗಿ ಕೆಲಸಗಾರರಲ್ಲಿ ಸಾಮರಸ್ಯವುಂಟಾಯಿತು.

ಬಣ್ಣದ ಅಲೆಗಳು ಈ ವಿಶ್ವದೊಳಗಿನ ಪ್ರತಿಯೊಂದು ವಸ್ತುವಿನ ಮೇಲೆ ಪರಿಣಾಮವನ್ನುಂಟುಮಾಡುತ್ತವೆ ಸೆಕೆಂಡಿಗೆ 75000 ಕಿಲೋಮೀಟರುಗಳಷ್ಟು ವೇಗದಲ್ಲಿ ಚಲಿಸುವ ಬೆಳಕಿನ ಕಿರಣಗಳಲ್ಲಿ ಒತ್ತಡವಿದೆ ಪ್ರತಿ ವಸ್ತುವಿನ ಮೇಲೆ ಒತ್ತಡವಿದೆ ಬೆಳಕು ಸೆಕೆಂಡಿಗೆ 1x6 ಮಾಪಿರ ಮೈಲು ವೇಗದಲ್ಲಿ ತೆರಳುತ್ತದೆ. ಕೇವಲ 20 ನಿಮಿಷಗಳಲ್ಲಿ ಸೂರ್ಯನು ಬಿಸಿಲು ಸೀರನ್ನು ಶಕ್ತಿಯುಕ್ತವಾಗಿ ನೂಡುತ್ತದೆ ಕೆಲವು ದಿನ ಲೋಕವು ಕತ್ತಲೆಯಲ್ಲಿ ಮುಳುಗಲಿ-ಆಗ ಎಲ್ಲಾ ತರಾತರ ವಸ್ತುಗಳು ನಿರ್ಜೀವವಾಗುತ್ತವೆ ಮಾನವ ಮನಸ್ಸು ಲೌಕಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಸ್ವಲ್ಪ ವಾಗುತ್ತದೆ. ಖಂಡಿತವಾಗಿಯೂ ಬಣ್ಣಗಳಿಗೆ ಎಷ್ಟಂ ಶಕ್ತಿಯಿದೆ!

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ 1

ಮೂಲಧನ (ತೆತ್ತದ್ದು) ರೂ 10,00,000

ಜೀವವಿಮೆಯ ಫಂಡು ರೂ. 12,00,000 (ಮಿಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ 5-0 0ರಂತೆ ರಿವರ್ಸನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಪಲಿತಾಂಶದ ಬಗ್ಗೆ ಇವರ ಡ್ಯಾರೆಕ್ಟರರನ್ನೂ, ಆಡಳಿತೆ ಮಂಡಳಿಯನ್ನೂ ಅಭಿನಂದಿಸುತ್ತೇನೆ ಅವರ ದೂರದರ್ಶತ್ವದ ನಿಪುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವದೆಂದು ಹೇಳುತ್ತೇನೆ.

ವಿ. ಎಚ್. ಪೋರಾ, F I A

ಚಟುವಟಿಕೆಯುಳ್ಳ ಮತ್ತು ಉತ್ಸಾಹ ಜನರ ವಿಜಸ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಾಕುಮಾರ್ ಕೂಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

ಕೆನರಾ ಹ್ಯಾಸ್ಕೂಲು ಪ್ರವೇಶ ವಿವರ

ವ್ಯಾಧಿಮಿಕ ಶಾಲೆಗಳಿಂದ ಬಂದು ಮೇಲ್ಯಂಡ ಶಾಲೆಯಲ್ಲಿ ಪ್ರವೇಶ ಪಡೆಯಲಿಚ್ಛಿಸುವವರು ಇದೇ ಬರುವ ಮೇ ತಾ ೨೨ ರಂದು ಬೆಳಿಗ್ಗೆ ೧೦ ಗಂಟೆಗೆ ಈ ಶಾಲೆಯಲ್ಲಿ ಜರಗುವ ವರೀಕ್ಷೆಗೆ ಕುಳಿತುಕೊಂಡರೆ ಜೂನಿನಲ್ಲಿ ತಮ್ಮ ತಮ್ಮ ಶಾಲೆಗಳು ತೆರೆದೊಡನೆ ಸರ್ಟಿಫಿಕೇಟುಗಳನ್ನು ತಂದು ಇಲ್ಲಿನ ತರಗತಿಗೆ ಸೇರಲಿಕ್ಕಾಗುವುದು.

ಸ್ವದೇಶಾಭಿಮಾನಿ

ತಾರೀಕು 29—4—1949

ನಾನ್‌ಕಿಂಗ್ ಪತನ

ಚೀನದ ರಾಜಧಾನಿ ನಾನ್‌ಕಿಂಗ್ ನಗರವು ಕಮ್ಯೂನಿಸ್ಟರ ಧಾಳಿಯೆದುರು ಯುದ್ಧ ಮಾಡಬಾರದ ಚೀನಾ ಸರಕಾರದಿಂದ ತ್ಯಜಿಸಲ್ಪಟ್ಟಿತು. ಕಮ್ಯೂನಿಸ್ಟರು ನಗರ ಪ್ರವೇಶ ಮಾಡಿದರು. ಶಾಂಘೈ ನಗರದ ಗತಿಯೂ ಇಷ್ಟಕ್ಕೇನಿ ಬರುತ್ತಿದೆಯೆಂದು ತಿಳಿದುಬರುತ್ತಿದೆ.

ಯಾಂಗ್ಸ್ ನದಿಯ ಉತ್ತರ ದಡದಲ್ಲಿ ಮುಂದಿನ ವಿಜಯಕ್ಕೆ ಸನ್ನಾಹಮಾಡಿಕೊಂಡಿದ್ದ ಕಮ್ಯೂನಿಸ್ಟರು ಈ ನದಿಯನ್ನು ೮೫೦ ಮೈಲುಗಳ ಅಗಲಕ್ಕೆ ದಾಟುವುದರಲ್ಲಿ ಸಮರ್ಥರಾದರು. ಅಲ್ಲಿಂದ ಮುಂದೊತ್ತಿ ಬಂದುದರಿಂದಲೇ ನಾನ್‌ಕಿಂಗ್ ನಗರ ಅವರ ಕೈಗೆ ಬಿದ್ದಿತು.

ಇನ್ನು ಚೀನಾದಲ್ಲಿ ಸರಕಾರೀ ಪಕ್ಷದವರು ಕಾದುವುದು ಸಾಧ್ಯವೇ ಇಲ್ಲವೆಂಬುದು ಅಮೇರಿಕನ್ ತಜ್ಞರ ಅಭಿಪ್ರಾಯವಿರುತ್ತದೆ. ಈ ರೀತಿ ಸರಕಾರೀ ಪಕ್ಷದ ಸೋಲಿಗೆ ಚಿಯಾಂಗ್ ಕೈಶೇಕ್ ಸರಕಾರದ ಅವಗುಣಗಳೇ ಕಾರಣವೆಂದು ಅಮೇರಿಕದಲ್ಲಿಯ ಅಭಿಪ್ರಾಯ. ಅಮೇರಿಕದವರು ದ್ವಿತೀಯ ಮಹಾ ಯುದ್ಧ ಮುಕ್ತಾಯವಾದ ಬಳಿಕ ಚೀನಾ ಸರಕಾರೀ ಪಕ್ಷಕ್ಕೆ ಒದಗಿಸಿದ ಸಹಾಯ ೩,೦೦೦,೦೦೦,೦೦೦ ಡಾಲರುಗಳು. ಇಷ್ಟು ಹಣ ಕೊಡಾಬಟ್ಟಿ ಖರ್ಚು ಮಾಡಿದ್ದೆಲ್ಲದೆ ಈ ಸರಕಾರ ಇನ್ನಾವುದಕ್ಕೂ ಸಮರ್ಥವಿರಲಿಲ್ಲ.

ಮುಂದೆ ಇದೀ ಚೀನ ಕಮ್ಯೂನಿಸ್ಟರ ವಶಕ್ಕೆ ಸೇರಲು ಯಾವ ಅಡ್ಡಿಯೂ ಇಲ್ಲ. ಜನರೆಲ್ಲ ಈ ವಿಜಯದಿಂದ ಸಂತೃಪ್ತರಿದ್ದಂತೆಯೂ ಸರಕಾರೀ ಪಕ್ಷದವರ ಅಡಳಿತೆಯ ಕಡುಕುಗಳಿಂದ, ಬಿಡುಗಡೆಯಾಯಿತೆಂದು ಭಾವಿಸುತ್ತಿದ್ದಾರೆಂದು ತಿಳಿದುಬರುತ್ತದೆ. ಸರಕಾರೀ ವಂಗಡದ ಸೈನಿಕ ಮುಂದಾಳುಗಳು ಕಮ್ಯುನಿಸ್ಟ ಪಂಗಡಕ್ಕೆ ಸೇರಿದ್ದರಿಂದಲೇ ಯಾಂಗ್ಸೇ ನದಿಯನ್ನು ಇಷ್ಟು ಸುಲಭದಲ್ಲಿ ಇವರಿಗೆ ದಾಟಲಿಕ್ಕೆ ಸಹಾಯವಾಯಿತಂತೆ.

ಚೀನದ ಮುಂದಿನ ಸರಕಾರದ ಸ್ವರೂಪ ಹೇಗೆ ನಿಂತೀತೆಂದು ಈಗಲೆ ಸ್ಪಷ್ಟವಾಗಿ ಹೇಳುವುದು ಕಷ್ಟ. ಬಿಳಿಯರಾಷ್ಟ್ರದವರಿಗೆ ಇನ್ನು ಚೀನದಲ್ಲಿ ಯಾವ ಹಕ್ಕುಗಳೂ ಉಳಿಯುವಂತಿಲ್ಲವೆಂಬುದು ಸ್ಪಷ್ಟ ವಿಚಾರ. ಇವರೊಡನೆ ಚೀನಾ ಸರಕಾರ ಮಾಡಿಕೊಂಡ ಒಪ್ಪಂದಗಳೆಲ್ಲ ರದ್ದು ಮಾಡತಕ್ಕದ್ದೆಂದು ಕಮ್ಯೂನಿಸ್ಟ್ ನಾಯಕರು ಮೊದಲಿಂದ ಹೇಳುತ್ತ ಬಂದಿದ್ದಾರೆ.

ಚೀನಾದಲ್ಲಿ ಮುಂದೆ ಶ್ರೀಮಂತ ವರ್ಗಗಳಿಗೂ ಉಳಿಗಾಲವಿರುವಂತಿಲ್ಲವೆಂಬುದೂ ಸ್ಪಷ್ಟ. ಕಮ್ಯೂನಿಸ್ಟ ತತ್ವಗಳೆಲ್ಲ ಒಂದೊಂದಾಗಿ ಜಾರಿಗೆ ಬರಲಿವೆ.

ಆದರೂ ಚೀನದಲ್ಲಿ ರಸ್ಯದ ಪೂರ್ಣ ಕಾರ್ಯಕ್ರಮ ಜಾರಿಗೆ ಬೆಂದೀತೆಂದು ಹೇಳುವಂತಿಲ್ಲ. ಚೀನದ ಪರಿಸ್ಥಿತಿ ಭಿನ್ನವಿರುವುದರಿಂದ ಇಲ್ಲಿಯ ಕಮ್ಯೂನಿಸ್ಟ್ ಧ್ಯೇಯ ರಾಷ್ಟ್ರೀಯ ಭಾವನೆ ಬಿಟ್ಟುಕೊಡದೆ ಕಮ್ಯೂನಿಜಮನ್ನು ಇಲ್ಲಿ ರೂಪಾಂತರಗೊಳಿಸುವುದು ಅಗತ್ಯವೆಂಬುದು ಅಲ್ಲಿಯ ಕಮ್ಯೂನಿಸ್ಟ್ ನಾಯಕರ ಅಭಿಪ್ರಾಯ. ಅಂದರೆ ವಿದೇಶಾಂಗ ಧೋರಣೆಯ ಮಟ್ಟಿಗೆ ರಸ್ಯಾವನ್ನೇ ಅನುಸರಿಸಿ ಆಂತರಿಕ ಆಡಳಿತೆ ಮಟ್ಟಿಗೆ ಅದನ್ನು ಏಶಿಯಾಖಂಡದ ಹಿಂದುಳಿದ ಜನರಿಗೆ ಸರಿಯಾಗುವಂತೆ ರೂಪಿಸಲಾಗುವುದಂತೆ.

ಮುಂದಿನ ಚೀನ ರಸ್ಯಾ ಹೇಳಿದಂತೆ ಕೇಳುವ ರಾಷ್ಟ್ರವಾಗುವುದೆಂದು ಹೇಳಬರುವುದಿಲ್ಲ. ಮಾರ್ಷಲ್ ಟಿಟೋನಂತೆ ರಸ್ಯಾದಿಂದ ಸ್ವತಂತ್ರ ನಿಲ್ಲುವುದೆಂದು ಹೇಳಲಿಕ್ಕೂ ಬರುವುದಿಲ್ಲ.

ಕಮ್ಯೂನಿಸ್ಟ್ ಚೀನಾದ ಉದಯದಿಂದ ಎಲ್ಲ ಏಸಿಯಾ ದೇಶಗಳ ಮುಂದಿನ ಇತಿಹಾಸ ಮಾರ್ಪಾಡುವಂತಾಗುವುದರ ಮಟ್ಟಿಗೆ ಯಾವ ಸಂಶಯವೂ ಇಲ್ಲ

ಭಾರತದ ಮೇಲೆ ಇದರ ಪರಿಣಾಮ ಏನಾದೀತೆಂದು ಈಗ ಹೇಳುವಂತಿಲ್ಲ. ಭಾರತದಲ್ಲಿಯೂ ಸಮತಾವಾದವೊ ಕಮ್ಯೂನಿಜಮೊ ಜಾಗಿಗೆ ಬಾರದೆ ಇರಲಾರದೆಂದೇ ಹೇಳಬೇಕಾಗುತ್ತದೆ. ಈ ಧ್ಯೇಯಗಳು ಶಾಂತಿಯಿಂದಲೇ ಸಾಧ್ಯವಾಗಲೆಂದು ಆಶಿಸಬೇಕಾಗಿದೆ.

ಕೊಡವೂರು

ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಸುಮಾರು ೪೦ ವರ್ಷಗಳಿಂದ ತಡೆ ಹಿಡಿಯಲ್ಪಟ್ಟಿದ್ದ, ದಿವಂಗತ ಎಂತಾರು ಶ್ರೀನಿವಾಸರಾಯರ ಮರಣ ಶಾಸನದಂತೆ ನಡೆಯಬೇಕಾಗಿದ್ದ ೭ ಮಂದಿಯ ಮೃಷ್ಟಾನ್ನ ಸಂತರ್ಪಣೆಯ ಯೋಜನೆಯು ಸರಕಾರಿ ತೀರ್ಮಾನದ ನ್ಯಾಯಸಮ್ಮತ ವ್ಯವಹರಣೆಯ ಪರಿಣಾಮವಾಗಿ ಈ ತಿಂಗಳ ತಾ ೧೩ರಿಂದ ವೈದಿಕ ವಿಧಾನಗಳಿಂದ ಪುನಃ ಆರಂಭಿಸಲ್ಪಟ್ಟಿದೆ.

ಶಿರಿಯ ಬೋರ್ಡು ಎಲಿಮೆಂಟರಿ ಶಾಲೆ

ಕಾಸರಗೋಡು ತಾಲೂಕು—ಈ ಶಾಲೆಯ ವರ್ಧಂತಿ ಸಮಾರಂಭವು ಇದೇ ತಾ. ೨೪—೪—೪೯ನೇ ಆದಿತ್ಯವಾರ ಕಾಸರಗೋಡು ತಾಲೂಕು ತಹಶಿಲ್ದಾರ್ ಶ್ರೀ. ಬಿ. ಗಣೇಶ್, ಬಿ. ಎ. ಅವರ ಸನ್ನಾಸ್ಯ ಅಧ್ಯಕ್ಷತೆಯಲ್ಲಿ ಜರಗಿತು.

ವಿಚಿತ್ರ ತೀರ್ಮಾನ

ಗುಂಟೂರು ಮೆಡಿಕಲ್ ಎಸೋಸಿಯೇಶನಿನ ವಾರ್ಷಿಕ ಸಭೆಯಲ್ಲಿ ಭಾಷಣಮಾಡುತ್ತ ಅಲ್ಲಿನ ಜಿಲ್ಲಾ ಮೆಡಿಕಲ್ ಆಫಿಸರಾದ ಡಾ। ಸುಂದರ್‌ರಾಜನ್ ಅವರು ಅಲ್ಲಿನ ಸರಕಾರಿ ಆಸ್ಪತ್ರೆಗೆ ಬಂದ ೭½ ವರ್ಷ ವಯಸ್ಸಿನ ಒಂದು ಹೆಣ್ಣು ಮಗುವಿನ ವಿಚಿತ್ರ ಶರೀರ ರಚನೆಯನ್ನು ವಿವರಿಸಿದರು. ಆ ಮಗುವಿಗೆ ಪ್ರಾಪ್ತ ವಯಸ್ಕಳಾದ ತರುಣಿಯೊಬ್ಬಳಿಗಿರುವಂತೆ ಸ್ತನ ಭಾಗಗಳಿದ್ದುವು, ಮಾತ್ರವಲ್ಲ ಮಾಸಿಕ ಅವಧಿಯ ಋತುಮತಿತ್ವವೂ ಆ ಮಗುವಿನಲ್ಲಿ ಕಂಡು ಬಂದಿತ್ತಂತೆ.

ಟೀಕೆ-ಟಿಪ್ಪಣಿಗಳು

ಚೀನಾದಲ್ಲಿ ಬ್ರಿಟಿಷರ ಅವಸ್ಥೆ

ಯಾಂಗ್ಸೆ ನದಿಯ ಯುದ್ಧವಾಗುವಾಗ ಆ ನದಿಯಲ್ಲಿ ಸಿಕ್ಕಿಬಿದ್ದ ಬ್ರಿಟಿಷ ಹಡಗಗಳ ಮೇಲೆ ಕಮ್ಯೂನಿಸ್ಟ್ ಪಂಗಡದವರು ಗುಂಡು ಹಾರಿಸಿದ್ದುದರ ಪರಿಣಾಮವಾಗಿ ಹಲವು ಬ್ರಿಟಿಷರು ಸತ್ತರು; ಅನೇಕರಿಗೆ ಜಖಮಾಗಿದೆ. ಬ್ರಿಟಿಷ್ ಸರಕಾರವು ಈ ಕುರಿತು ಸಿಟ್ಟಿನಿಂದ ಕುದಿಯುತ್ತಿದೆ. ಬಲವಾದ ಆಕ್ಷೇಪಗಳನ್ನು ಹೇಳುತ್ತಿದೆ. ಆದರೆ ಕಾರ್ಯರೂಪದಲ್ಲಿ ಅಸಹಾಯತೆಯನ್ನೇ ತೋರಿಸುತ್ತಿದೆ. ಹೊಂಗ್‌ಕೊಂಗ್ ಮೊದಲಾದೆಡೆಗಳಲ್ಲೆಲ್ಲಿಯೂ ಇದಿಗೆ ಇದೇ ಗತಿ ಪ್ರಾಪ್ತವಾದರೆ ಆಶ್ಚರ್ಯವಿಲ್ಲ

ಅಮೇರಿಕನ್ ರಾಯಭಾರಿಯ ಮೇಲೆ ಆಕ್ರಮಣ

ನಾನ್‌ಕಿಂಗ್ ನಗರದ ಪತನದಲ್ಲಿ ಅಲ್ಲಿ ಅರಾಜಕತೆಯಾಗಿ ಜನರಲ್ಲಿ ವಿಪರೀತ ಸಂಕಷ್ಟ ಪಡುತ್ತಿರುವ ಕಾಲದಲ್ಲಿ ಅಮೇರಿಕನ್ ರಾಯಭಾರಿ ಅಲ್ಲಿಂದ ಹೊರಡಲಿಲ್ಲ ಕಮ್ಯೂನಿಸ್ಟ್ ಸೈನಿಕರು ಇವರ ಮನೆಯೊಳಗೆ ನುಗ್ಗಿ ಅಲ್ಲಿದ್ದ ಸೊತ್ತುಗಳನ್ನೆಲ್ಲ ಪರಿಶೀಲಿಸಿ ಇದೆಲ್ಲ ಜನರಿಗೆ ಸೇರುವ ಸೊತ್ತುಗಳೆಂದು ಹೆದರಿಸಿ ಹೋಗಿರುವರು ಅಮೇರಿಕನ್ ಸರಕಾರ ಈ ಕುರಿತು ಬಲವಾದ ಆಕ್ಷೇಪವನ್ನು ಅಲ್ಲಿಯ ಕಮ್ಯೂನಿಸ್ಟ್ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಅಲ್ಲಿರುವ ಅಮೇರಿಕನ್ ಜನರ ರಕ್ಷಣೆಯ ವ್ಯವಸ್ಥೆಮಾಡಿ ತಮ್ಮ ರಾಯಭಾರಿ ಆಲೋಚನೆ ಮಾಡಲು ಅಮೆರಿಕಕ್ಕೆ ಬಂದು ಹೋಗುವಂತೆ ಆಜ್ಞೆಯಾಗಿದೆ

ಲಂಡನ್ನಿನಲ್ಲಿ ನೆಹರು

ಭಾರತ ಸರಕಾರದ ಪ್ರಧಾನ ಸಚಿವ ಪಂಡಿತ ಜವಾಹರಲಾಲ ನೆಹರುರವರು ಲಂಡನ್ನಿಗೆ ಹೋಗಿರುವರಸ್ಟೆ ಬ್ರಿಟಿಷ್ ಕಾಮನ್‌ವೆಲ್ತಿನ ರಾಷ್ಟ್ರಗಳ ಪ್ರಧಾನ ಸಚಿವರುಗಳ ಪರಿಷತ್ತು ಭರದಾಂದ ನಡೆಯಾತ್ತಿದೆಯೆಂದು ಇದರಲ್ಲಿ ನೆಹರುರವರೇ ಮುಖ್ಯ ಭಾಗ ವಹಿಸುತ್ತಿದ್ದಾರೆಂದೂ ತಿಳಿದುಬರುತ್ತಿದೆ. ಈ ಬಾರಿಯೂ ಅವರು ಮೌಂಟ್ ಬೇಟನರ ಅತಿಥಿಯಾಗಿ ಆಗಾಗ ಅಲ್ಲಿ ನಿಲ್ಲುತ್ತಿದ್ದಾರೆ

ಭಾರತವು ಸ್ವತಂತ್ರ ರಿಪಬ್ಲಿಕ್ ರಾಷ್ಟ್ರವಾಗಿ ಇದ್ದು ಕಾಮನ್‌ವೆಲ್ತಿನಲ್ಲಿ ಸೇರಿಕೊಂಡಿರುವುದು ಎಷ್ಟರ ಮಟ್ಟಿಗೆ ಸಾಧ್ಯವೆಂದು ನಿರ್ಧರಿಸುವುದೇ ವರಿಷತ್ತಿನ ಧ್ಯೇಯವಿದ್ದು ಇದು ಸಾಧ್ಯವಾಗಲು ಪ್ರಯತ್ನಗಳು ನಡೆಯುತ್ತಿವೆ

ಭಾರತದ ರಾಜ್ಯಾಂಗ ಘಟನೆಯಲ್ಲಿ ಬ್ರಿಟಿಷ್ ರಾಜರಿಗೆಯಾವ ಸ್ಥಾನವೂ ಇಲ್ಲ. ಆದರೆ ಕಾಮನ್‌ವೆಲ್ತಿನ ನಟ್ಟಿಗೆ ಆದಕ್ಕೆ ಸೇರುವ ಎಲ್ಲ ರಾಷ್ಟ್ರಗಳ ಒಗ್ಗಟ್ಟಿನ ಚಿಹ್ನೆಯೆಂದು ಬ್ರಿಟಿಷ ರಾಜರನ್ನು ಮನ್ನಿಸಬೇಕು. ಈ ರೀತಿ ಭಾರತವು ಕಾಮನ್‌ವೆಲ್ತಿನೊಳಗೆ ಇರಬಹುದೆಂದು ಒಪ್ಪಿಗೆ ಯಾಗುತ್ತಿದೆ ಯಂತೆ.

ಮಾತ್ರವಲ್ಲ ಈ ರೀತಿ ಕಾಮನ್‌ವೆಲ್ತಿಗೆ ಸೇರಿದ ಮಾತ್ರಕ್ಕೆ ವಿದೇಶಾಂಗ ನೀತಿಯನ್ನು ಭಾರತವು ತನಗೆ ಬೇಕಾದಂತೆ ರೂಪಿಸಿಕೊಳ್ಳಲು ತನಗಿರುವ ಸ್ವಾತಂತ್ರ್ಯವನ್ನು ಸ್ವಲ್ಪವಾದರೂ ಬಿಟ್ಟು ಕೊಡಬೇಕಾಗುವುದಿಲ್ಲವಂತೆ.

ಭಾರತೆದ ಹಿತವು ಪಂಡಿತೆ ನೆಹರುಗಳ ಕೈಯಲ್ಲಿ ಭದ್ರವಾಗಿರುವುದೆಂಬ ಬಗ್ಗೆ ಯಾರಿಗೂ ಸಂಶಯವಿಲ್ಲ.

ಸಮಸ್ತ ಕೇರಳ ಸಾಹಿತ್ಯ ಪರಿಷತ್ತು

ಸಮಸ್ತ ಕೇರಳ ಸಾಹಿತ್ಯ ಪರಿಷತ್ತಿನ ಇಪ್ಪತ್ತನೇ ಅಧಿವೇಶನವು ನಿಲೇಶ್ವರದಲ್ಲಿ ತಾ 23, 24 ಮತ್ತು 25ನೇ ದಿನಗಳಲ್ಲಿ ಬಹಳ ಯಶಸ್ವಿಯೊಗಿ ಜರಗಿತು

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕು ತಮಗೆ ಸೇರಿದ್ದೆಂದು ಕೇರಳದವರು ಭಾವಿಸುತ್ತಾರೆ. ಕಾಸರಗೋಡಿನಲ್ಲಿ ಕಳೆದ ವರ್ಷ ಕರ್ನಾಟಕ ಸಾಹಿತ್ಯ ಸಮ್ಮೇಳನ ಜರಗಿಸಿದರಷ್ಟೆ ಇದಕ್ಕೆ ಉತ್ತರವಾಗಿ ಎಂಬಂತೆ ಕೇರಳ ಸಾಹಿತ್ಯ ಪರಿಷತ್ತು ಈ ಬಾರಿ ನಿಲೇಶ್ವರದಲ್ಲಿ ಜರಗಿಸಲ್ಪಟ್ಟಿತೆಂದು ಕಾಣುತ್ತದೆ

ಹೀಗೆ ಗಡಿನಾಡುಗಳಲ್ಲಿ ಪರಿಷತ್ತುಗಳನ್ನು ಜರಗಿಸಿ ತಮ್ಮ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಹೊರಟುದರಿಂದ ಹೆಚ್ಚಿನ ಹಾನಿಯಿಲ್ಲ.

ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಕೇರಳ ದಫರೂ ಕೇರಳ ಸಾಹಿತ್ಯ ಪರಿಷತ್ತಿಗೆ ಕನ್ನಡಿಗರೂ ಇನ್ನು ಹೆಚ್ಚು ಸಂಖ್ಯೆಯಿಂದ ಹೋಗಿದ್ದರೆ ನಿಜವಾಗಿ ಇದು ಹೆಚ್ಚು ಉಪಯುಕ್ತವೇ ಆಗುತ್ತಿತ್ತು

ಇತ್ತಂಡಗಳ ಸಾಹಿತ್ಯ ಸಂಸ್ಕೃತಿಗಳು ಒಂದೇ ಬಗೆಯವೆಂದು ತಿಳಿಯಲು ಅನುಕೂಲವಾಗುತ್ತಿತ್ತು. ಇತ್ತಂಡಗಳೊಳಗೆ ಕೇವಲ ಭಾಷೆ ಮಾತ್ರ ಭಿನ್ನವೆಂದು ಕಾಣಬಹುದಿತ್ತು ಈ ಭಾಷೆಗಳಲ್ಲಿಯೂ ಸಮಾನತೆ ಎಷ್ಟೊ ಇದ್ದು ಪರಸ್ಪರ ತಿಳಿದುಕೊಳ್ಳಲು ಯಾವ ಕಷ್ಟವೂ ಆಗುತ್ತಿಲ್ಲವೆಂಬುದು ಗೊತ್ತಾಗುತ್ತಿತ್ತು

ಈ ಗಡಿ ನಿರ್ಣಯದ ಪ್ರಶ್ನೆಯನ್ನು ಮನಸ್ಸಿದ್ದರೆ ಇತ್ತಂಡದವರು ರಾಜಿಯಿಂದ ತೀರ್ಮಾನಿಸಿಕೊಳ್ಳಲು ಯಾವ ತೊಂದರೆಯೂ ಇಲ್ಲ.

ಕಾಸರಗೋಡು ತಾಲೂಕಿನ ಹೊಸದುರ್ಗ ವಿಭಾಗ ಮಲಯಾಳೀ ಜನರದೇ ಪ್ರದೇಶವಿದ್ದು ಇದು ಕೇರಳಕ್ಕೆ ಸೇರತಕ್ಕದೆಂಬ ವಿಚಾರದಲ್ಲಿ ಯಾರಿಗೂ ಆಕ್ಷೇಪವಿದ್ದಂತೆ ಕಾಣುವುದಿಲ್ಲ. ಅಲ್ಲಿಂದ ಮುಂದೆ ಚಂದ್ರಗಿರಿ ಹೊಳೆಯು ತನಕ ಈ ಪ್ರಶ್ನೆಯನ್ನು ಜನಮತಗಣನೆಯಿಂದ ನಿರ್ಧರಿಸಬಹುದು ಚಂದ್ರಗಿರಿ ಹೊಳೆಗಿಂತ ಈಚೆಗೆ ಕೇರಳದವರು ಕೇಳಲು ಹೆಚ್ಚಿನ ಯಾವ ನ್ಯಾಯವೂ ಇರುವುದಿಲ್ಲ—

ಈ ಪರಿಸ್ಥಿತಿ ಇತ್ತಂಡದವರೂ ಒಪ್ಪಿಕೊಂಡು ಈ ಪ್ರಶ್ನೆ ತೀರ್ಮಾನಿಸುವುದು ಹಿತಕರವೆಂದು ಸೂಚಿಸಬೇಕಾಗಿದೆ.

ಪತ್ರಿಕೋದ್ಯಮಿಗಳ ಸತ್ಕಾರಕೂಟವಾದ ಬಳಿಕ ತಾ. 21ನೇ ದಿನ ಮಾನ್ಯ ಶ್ರೀ. ಸಂತಾನಮರು ಕೆಲವರಿಗೆ ಸಂದರ್ಶನವಿತ್ತರು

ಜಿಲ್ಲಾ ಅಭಿವೃದ್ಧಿ ಸಂಘದ ಕಾರ್ಯದರ್ಶಿ ರಿವ್. ಸಾಹೇಬರಂಗನಾಥ ಪೂಂಜರೇ ಮೊದಲಾದ ಕೆಲವು ಸದಸ್ಯರು ಮಿಸೆಸ್ ಶ್ರೇಷ್ಠ ಮತ್ತಿತರ ಕೆಲವು ನಾಗರಿಕರು ಮಾನ್ಯ ಮಂತ್ರಿಯವರನ್ನು ಕಂಡರು ಉಳ್ಳಾಲ ಸಂಕದಲ್ಲಿ ಇತರ ವಾಹನಗಳ ಸಂಚಾರಕ್ಕೆ ಅನುಕೂಲವಾಗುವ ರಸ್ತೆ ಬೇಕೆಂದರು. ಈಗ ಇರುವ ರೈಲು ಸಂಕದಲ್ಲಿ ಹೀಗೆ ರಸ್ತೆಮಾಡಲು ಸಾಧ್ಯವಾಗುವಂತಿಲ್ಲವೆಂಬುದು ಇಂಜಿನಿಯರ ಅಭಿಪ್ರಾಯವೆಂದು ಮಂತ್ರಿಯವರು ಸೂಚಿಸಿದರು.

ಹಂಚು ಕಾರ್ಖಾನೆಯವರ ಪರವಾಗಿ ಫೌಲರರು, ಎಸ್ ಎಕ್ಸ್. ಡಿ ಪಿಂಟೋ ಮತ್ತು ಜಿ ಎಸ್ ಪಂಡಿತರು ಮಂತ್ರಿಯವರನ್ನು ಕಂಡು ತಮ್ಮ ಕೈಗಾರಿಕೆಯ ಅಭಿವೃದ್ಧಿಗೆ ಕಲ್ಲಿದ್ದಲ್ಲು ತರಿಸಲು ಹಾಗೂ ಹಂಚು ಸಾಗಿಸಲು ರೈಲು ದರ ರಿಯಾಯತಿ ಕೇಳಿದರು ಪರಿಶೀಲಿಸಿ ನೋಡುವುದಾಗಿ ಉತ್ತರಿಸಿಕ್ಕಿತು

ಹೊಸ ಕಾರ್ಖಾನೆ

ಆ ಬಳಿಕ ಮರೋಳಿಯ ಕೆನರಾ ವರ್ಕ್‌ಶೋಪಿನ ಪವರ್‌ಹೌಸ್ ಮತ್ತು ಹೊಸಕಾರ್ಖಾನೆ ತೆರೆಯುವ ಸಮಾರಂಭವನ್ನು ಮಾನ್ಯಮಂತ್ರಿಯವರು ಜರಗಿಸಿದರು ಪೇಟೆಯಿಂದ ದೂರವಿದ್ದರೂ ಜನರು ತುಂಬಾ ಸೇರಿ ಈ ಸಮಾರಂಭವು ಬಹಳ ಯಶಸ್ವಿಯಾಗಿ ನಡೆಯಿತು

ಕೈಗಾರಿಕೆಗಳ ಅಭಿವೃದ್ಧಿಯು ಅವಶ್ಯಕತೆ ಒತ್ತಿ ಹೇಳಿ ಈ ಕಾರ್ಖಾನೆಯನ್ನು ತೆರೆದ ಬಗ್ಗೆ ವ್ಯವಸ್ಥಾಪಕರನ್ನು ಮಂತ್ರಿಯವರು ಅಭಿನಂದಿಸಿದರು.

ಬಂದರ ಪರಿಶೀಲನೆ

ಅಲ್ಲಿಂದ ಶ್ರೀ ಸಂತಾನಮರು ಮಂಗಳೂರು ಬಂದರವನ್ನು ಸಂದರ್ಶಿಸಿದರು. ಹೊಳೆಯಲ್ಲಿ ಉಳ್ಳಾಲ ಸಂಕದಿಂದ ಬೋಳೂರು ಬತೇರಿಯ ತನಕ ಹೋದರು

ಇದನ್ನು ದೊಡ್ಡ ಬಂದರವನ್ನಾಗಿ ಮಾರ್ಪಡಿಸಲು ಇರುವ ಸೌಕರ್ಯಗಳನ್ನೆಲ್ಲ ಇವರಿಗೆ ವಿವರಿಸಲಾಯಿತು.

ಸಾರ್ವಜನಿಕ ಸಭೆ

ಬಂದರದಿಂದ ಮರಳಿ ಬಂದವರು ಕೇಂದ್ರ ಮೈದಾನಲ್ಲಿ ಸೇರಿದ ಸಭೆಗೆ ಬಂದು ಸಾರ್ವಜನಿಕ ಭಾಷಣಮಾಡಿದರು.

1918ನೇ ಇಸ್ವಿಯಲ್ಲಿ ಮಹಾತ್ಮಾಗಾಂಧಿಯವರ ಜೊತೆಯಲ್ಲಿ ಅವರ ಅನುಯಾಯಿಯಾಗಿ ಇಲ್ಲಿಗೆ ಬಂದಿದ್ದು ಆಗ ಈ ದೇಶ ನಮ್ಮ ಜೀವಿತ ಕಾಲದಲ್ಲಿ ಸ್ವತಂತ್ರವಾಗುವುದೆಂದು ಯಾರು ಭಾವಿಸಿದ್ದರು? ಸ್ವಾತಂತ್ರ್ಯವೇನೋ ಬಂತು. ಆದರೆ ಗಾಂಧಿಯವರನ್ನು ಕಳೆದುಕೊಂಡೆವು. ಸಮಾಜದಲ್ಲಿದ್ದ ವಿಷ ಮೇಲಕ್ಕೆದ್ದು ಅವರು ಅದರ ಪರಿಹಾರಕ್ಕಾಗಿ ಬಲಿಯಾಗಬೇಕಾಯಿತು.

ಜ್ಞಾತೀಯತೆಯ ವಿಷ ಪೂರ್ಣ ಹೋಗಲಾಡಿಸುವುದು ನಮ್ಮ ಮೊದಲ ಕೆಲಸ.

ಮಾನ್ಯ ಶ್ರೀ ಸಂತಾನಮರ ಜಿಲ್ಲಾ ಪ್ರವಾಸ

ಅವರ ಅಹಿಂಸಾಧರ್ಮ ಮರೆಯದಿರುವುದೂ ಅಗತ್ಯ. ಸ್ವಾತಂತ್ರ್ಯ ಪ್ರಾಪ್ತಿ ಸಾಧಿಸಿದ ಅಹಿಂಸೆ ಸಮಾಜದಲ್ಲಿ ಅಗತ್ಯವಿರುವ ಬದಲಾವಣೆ ತಂದೊಡ್ಡಲೂ ಸಮರ್ಥವಿದೆ. ಇದಕ್ಕೆ ಹಿಂಸೆಬೇಕೆಂಬ ಕಮ್ಯೂನಿಸ್ಟರ ಮಾತಿಗೆ ಬೆಲೆ ಕೊಡಕೂಡದು

ಸಿಕ್ಕಿದ ಸ್ವರಾಜ್ಯ ಸಾರ್ಥಕವಾಗಬೇಕಾದರೆ ಎಲ್ಲರೂ ದುಡಿಯಬೇಕು ಕಳೆದ ಮುನಸ್ತು ವರ್ಷಗಳ ಮುಖ್ಯ ಧ್ಯೇಯ ದೇಶಕ್ಕಾಗಿ ತ್ಯಾಗವೆಂದಿತ್ತು. ನುಂದಿನ ಮುನಸ್ತು ವರ್ಷಗಳ ಮುಖ್ಯ ಧ್ಯೇಯ ದೇಶಕ್ಕಾಗಿ ಕೆಲಸವೆಂದರಿಬೇಕು

ಜಿಲ್ಲಾ ಪ್ರವಾಸ

ಮಾರನೆಯ ದಿನ ಬೆಳಿಗ್ಗೆ ಡಾ. ಯಂ. ಪಿ. ಮಲ್ಯ ಎಮ್ ಎಲ್. ಎ, ಶ್ರೀ ವಿ. ಎಸ್ ಕುಡ್ವ ಮೊದಲಾದವರೊಡನೆ ಶ್ರೀ ಸಂತಾನವರು ಮೂಲ್ಕಿ ಮಾರ್ಗವಾಗಿ ಉಡುಪಿಗೆ ಹೋದರು

ಮೂಲ್ಕಿಯಲ್ಲಿ ಸ್ಥಳೀಕ ಕಾಂಗ್ರೆಸ್ ಕಮಿಟಿಯ ಪರವಾಗಿ ಮಾನಪತ್ರ ಒಪ್ಪಿಸಲಾಯಿತು ಉತ್ತರಕೊಡುತ್ತ ಶ್ರೀ ಸಂತಾನಮರು ಕರಾವಳಿಯ ಹೊಳೆಗಳನ್ನು ಕಾಲುವೆಯ ಮೂಲಕ ಕೂಡಿಸಿದರೆ ಎಷ್ಟು ಅನುಕೂಲವಾಗುವುದೆಂದು ವಿವರಿಸಿದರು

ಮುಂದೆ ಪಡುಬಿದ್ರಿಯಲ್ಲಿಯೂ ಮಾನಪತ್ರ ಮತ್ತು ಮಂತ್ರಿಯವರ ಹಿತೋಕ್ತಿಯಾದವು

ಉಡುಪಿಯಲ್ಲಿ

ಉಡುಪಿ ನಗರ ಸಭಾಧ್ಯಕ್ಷ ಶ್ರೀ ಪಾಂಗಾಳ ಉಸೇಂದ್ರ ಶ್ರೀನಿವಾಸ ನಾಯ್ಕರೇ ಮೊದಲಾದವರ ಪ್ರಮುಖರು ಮಂತ್ರಿಯವರನ್ನು ಉದ್ಯಾನವನದಲ್ಲಿ ಇದಿರ್ಗೊಂಡು ಉಡುಪಿ ಕಾಂಗ್ರೆಸ್ ಕಚೇರಿಗೆ ಕರೆದೊಯ್ದರು. ಅಲ್ಲಿ ಕಾಂಗ್ರೆಸ್ ಸಮಿತಿಯ ಪರವಾಗಿಯೂ ಮಲ್ಪೆ ಒಂದರ ಅಭಿವೃದ್ಧಿ ಸಮಿತಿಯ ವರವಾಗಿಯೂ ಮಾನಪತ್ರಗಳನ್ನು ಕೊಡಲಾಯಿತು.

ಉತ್ತರ ಕೊಡುತ್ತ ಮಂತ್ರಿಯವರು ಕಾಂಗ್ರೆಸ್ ಕೆಲಸಗಾರರು ತಮ್ಮ ಕೆಲಸ ಮುಗಿಯಿತೆಂದು ತಿಳಿಯದೆ ಅವಶ್ಯವುಳ್ಳ ಪ್ರಚಾರಕ್ಕೆ ಕೊಳ್ಳಿಬೇಕೆಂದರು ಬಂದರದ ಮಟ್ಟಿಗೆ ತಜ್ಞರ ಕಮಿಟಿ ತೀರ್ಮಾನದಂತೆ ವರ್ತಿಸುವುದಾಗಿ ಹೇಳಿದರು

ಮಲ್ಪೆ ಬಂದರು ಪರಿಶೀಲನ

ಶ್ರೀ ಸಂತಾನವರು ಆ ಬಳಿಕ ಮಲ್ಪೆಗೆ ಹೋಗಿ ಅಲ್ಲಿಂದಲೂ ವಡಖಾಂಡೇಶ್ವರ ಬಂದರಲ್ಲೂ ಬಂದರ ಪರಿಶೀಲನ ಮಾಡಿ ಕೊಡವೂರು ಮಾರ್ಗವಾಗಿ ಉಡುಪಿಗೆ ಮರಳಿದರು.

ಶ್ರೀಕೃಷ್ಣ ದೇವಸ್ಥಾನವನ್ನು ಸಂದರ್ಶಿಸಿದರು.

ನಗರ ಸಭೆಯ ಮಾನ ಪತ್ರ

ಉಡುಪಿ ನಗರ ಸಭೆಯ ಮಾನ ಪತ್ರ ಅರ್ಪಣೆಯ ಸಮಾರಂಭ ಆಗ ಜರಗಿತು. ಅಧ್ಯಕ್ಷರು ಮಾನ ಪತ್ರ ಕೊಟ್ಟರು.

ಉತ್ತರ ಕೊಡುತ್ತ ಮಂತ್ರಿಯವರು ಉಡುಪಿ ಪ್ರಾಮುಖ್ಯತೆ ತನಗೆ ಗೊತ್ತಿದೆಯೆಂದರು. ಉಡುಪಿ ಮಂಗಳೂರು ರೈಲು ಹಾಕುವ ವಿಚಾರ ಎರಡು ಮೂರು ವರ್ಷಗಳ ಬಳಿಕ ವಿಚಾರಿಸಲು ಸಾಧ್ಯವಾದೀತೆಂದರು.

ಕಾರ್ಕಳದಲ್ಲಿ

ಮಂಗಳೂರಿಗೆ ಹಿಂತಿರುಗಿ ಬರುವಾಗ ಬೈಲೂರಲ್ಲಿ ಗಾಂಧೀ ಸ್ಮಾರಕ ಪುಸ್ತಕ ಭಂಡಾರವನ್ನು ತೆರೆದರು.

ಕಾರ್ಕಳದಲ್ಲಿ ಶ್ರೀ ವೆಂಕಟ್ರಮಣ ದೇವರ ಹಾಯರ್ ಎಲಿಮೆಂಟರಿ ಶಾಲಾ ವರಾರದಲ್ಲಿ ಮಹಾಜನರ ಸಭೆ ಜರಗಿ ಮಂತ್ರಿಯವರಿಗೆ ಮಾನಪತ್ರ ಒಪ್ಪಿಸಲಾಯಿತು ಮಂತ್ರಿಯವರು ಯೋಗ್ಯ ಉತ್ತರವಿತ್ತರು

ಮೂಡಬಿದರೆ

ಮುಂದಿನ ಮೂಡಬಿದ್ರಿದರೆಯಲ್ಲಿ ಕೇಂದ್ರ ಸರಕಾರದವರು ನಡೆಸುವ ತಾಳೆಬೆಲ್ಲ ತಯಾರಿಸುವರ ಶಿಕ್ಷಣ ಶಾಲೆ ಸಂದರ್ಶಿಸಿ ಕೈಗಾರಿಕೆಗಳ ಮೂಲಕ ಉತ್ಪತ್ತಿ ಹೆಚ್ಚಿಸುವ ಆವಶ್ಯಕತೆ ವಿವರಿಸಿದರು

ದ ಕ ಜಿಲ್ಲಾ ವಾಣಿಜ್ಯ ಸಂಘ ವಾರ್ಷಿಕ ದಿನಾಚರಣೆ

ಮಂಗಳೂರಿಗೆ ಮರಳಿ ಬಂದವರು ಆ ದಿನ ರಾತ್ರೆ ಕೆನರಾ ಹೈಸ್ಕೂಲು ವಠಾರದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕ ದಿನಾಚರಣೆ ಕಾರ್ಯದ ಅಧ್ಯಕ್ಷತೆ ವಹಿಸಿದರು

ವಾಣಿಜ್ಯ ಸಂಘದ ಅಧ್ಯಕ್ಷ ಶ್ರೀ. ವಿ ಎಸ್. ಕುಡ್ವರು ಸ್ವಾಗತ ಭಾಷಣಮಾಡಿದರು

ಶ್ರೀ ಸಂತಾನವರು ತಮ್ಮ ಭಾಷಣದಲ್ಲಿ ಬಂದರದ ಪ್ರಶ್ನೆ ತಜ್ಞರ ಸಮಿತಿಯ ತೀರ್ಮಾನದ ಮೇಲೆ ಜೊಂದಿಕೊಂಡಿರೆಯೆಂದರು.

ರೈಲು ವಿಸ್ತರಣೆ ಬಂದರದ ಪ್ರಶ್ನೆ ತೀರ್ಮಾನದ ಮೇಲೆ ಉಂಟೆಂದರು.

ಸಿದ್ಧುತ್ಪಾದನಾ ಶಕ್ತಿಯ ಆವಶ್ಯಕತೆ ಒಪ್ಪಿದರು. ಈ ಬಗ್ಗೆ ಕೇಂದ್ರ ಕಾಶನ ಸಭೆಯಲ್ಲಿ ಪ್ರಮುಖರಾದ ಕಾರ್ಯ ಈ ವ್ಯಾಪಾರಕ್ಕೆ ಅನ್ವಯಿಸುವಾಗ ಹೆಚ್ಚಿನ ಅನುಕೂಲತೆ ದೊರೆಯಬಹುದೆಂದರು

ಮಜೂರ ಸ್ಪಷ್ಟ ಬಿಡಿಸಲು ಮಜೂರರ ಉತ್ಪತ್ತಿ ಹೆಚ್ಚಾಗುವಂತೆ ಅವರಿಗೆ ಶಿಕ್ಷಣ ಕೊಡಬೇಕು ಮಾತ್ರವಲ್ಲ ದೇಶದ ಉತ್ಪತ್ತಿ ಹೆಚ್ಚಿಸಬೇಕೆಂದರು

ವ್ಯಾಪಾರಸ್ಥರನ್ನೂ ಕೈಗಾರಿಕೆಯ ಮ್ತಾಲಿಕರನ್ನೂ ಉದ್ದೇಶಿಸಿ ರಾಷ್ಟ್ರೀಯ ದೃಷ್ಟಿಯಿಂದ ತಮ್ಮ ಕಾರ್ಯ ಮಾಡುವ ಆವಶ್ಯಕತೆ ವಿವರಿಸಿದರು

ಮೈಸೂರಿಗೆ ಪ್ರಯಾಣ

ಮಾರನೆಯ ದಿನ ಶ್ರೀ ಸಂತಾನಮರು ಮುಡಿಕೇರಿ ಮಾರ್ಗವಾಗಿ ಮೈಸೂರಿಗೆ ತೆರಳಿದರು.

ದಾರಿಯಲ್ಲಿ ಪಾಣೆಮಂಗಳೂರು ಮತ್ತು ಪುತ್ತೂರಲ್ಲಿ ಸ್ವಲ್ಪ ಸಮಯ ನಿಂತು ಸಭೆಗಳು ಜರಗಿದವು.

ಕಾಲುವೆ ಯೋಜನೆಯ ಮಹತ್ವ

ಈ ರೀತಿ ಜರಗಿದ ಶ್ರೀ. ಸಂತಾನಮರು ಜಿಲ್ಲಾ ಸಂಚಾರದಲ್ಲಿ ಅವರು ಸೂಚಿಸಿದ ಕರಾವಳಿ ಕಾಲುವೆಯ ಸೂಚನೆ ಬಹಳ ಮಹತ್ವವುಳ್ಳದ್ದು. ಈ ಬಗ್ಗೆ ಕೇಂದ್ರ ಸರಕಾರ ನಡೆಸಲಿರುವ ಕಾರ್ಯಕ್ರಮದಲ್ಲಿ ಅವರು ಈ ಜಿಲ್ಲೆಯನ್ನು ಸೇರಿಸುವುದಾಗಿ ಹೇಳಿದರು. ಜಿಲ್ಲೆಯ ಜನರು ಈ ವಿಚಾರ ಮರೆಯದೆ ಇದಕ್ಕಾಗಿ ಯತ್ನಿಸಿದರೆ ತುಂಬ ಪ್ರಯೋಜನವಾದೀತು

ಸಿಹಿಸುದ್ದಿ ಸಂಗ್ರಹ

ಮಾರ್ಗದ ನಿಯಮ ಮೀರುವವರಿಗೆ ಜಪಾನಿನಲ್ಲಿ ಹೊಸ ಶಿಕ್ಷೆ ವಿಧಾನ ಅನುಸರಿಸಲಾಗಿದೆ ಒಬ್ಬ ಡ್ರೈವರನಿಗೆ ಅಲ್ಲಿನೊಬ್ಬ ಜಡ್ಜರು ಮಾರ್ಗದ ಅಪಾಯಗಳ ಕುರಿತು ಒಂದು ೧೦ ಪುಟಗಳ ಪ್ರಬಂಧ ಬರೆದು ಕೊಡಲು ವಿಧಿಸಿದರು. ಇನ್ನೊಬ್ಬನಿಗೆ ಶಾಲಾ ವಿದ್ಯಾರ್ಥಿಗಳಿಗೆ ಮಾರ್ಗನಿಯಮಗಳ ಕುರಿತು ಭಾಷಣ ಕೊಡಬೇಕೆಂದು ಆಜ್ಞಾಪಿಸಲಾಯಿತು

✠

ಡೆನ್ಮಾರ್ಕಿನಲ್ಲಿ ಓರ್ವ ಕೊಟ್ಟಿಯಂಗಡಿಯವ ಕದ್ದ ಸಕ್ಕರೆ ತೆಗೆದುಕೊಂಡನೆಂದು ಜುಲ್ಮಾನೆಗೊಳಗಾದ–ಸಕ್ಕರೆ ಅವನ ಅಂಗಡಿಯಿಂದಲೇ ಕದಿಯಲ್ಪಟ್ಟದ್ದು

✠

ಮನುಷ್ಯನ ಕಣ್ಣು ೧೭ ಸಾವಿರ ವಿವಿಧ ಬಣ್ಣ ಭೇದಗಳನ್ನು ಗುರುತಿಸಬಲ್ಲುದೆಂದು ಡಾ। ಮೆಕ್‌ಫೆಡನ್ ಎಂಬ ತಜ್ಞರು ತಿಳಿಸುತ್ತಾರೆ

✠

ಫುನಃ ಡೆನ್ಮಾರ್ಕಿನಲ್ಲಿ ಒಂದು ಕಳ್ಳರ ಕೂಟ ಹಿಡಿಯಲ್ಪಟ್ಟಾಯಿತು ಇದರಲ್ಲಿ ಅತೀ ಕಿರಿಯವನಿಗೆ ಆರೇ ವರ್ಷ ವಯಸ್ಸಾಗಿತ್ತು

✠

ತಾನು ತಂದೆಯಾದೆನೆಂದು ವರ್ತಮಾನ ಕೇಳಿದ ಬಹಿರ್ಯೋ ನಗರದ ಒಬ್ಬನು ಸಂತೋಷದಿಂದ ನೂರ್ಚಿ ಹೋಗಿ ಬಿದ್ದ ಪೆಟ್ಟಿಗೆ ತಲೆ ಒಡೆದು ಮೃತನಾದ.

✠

ಅಲಾಸ್ಕಾದ ಜನಸಂಖ್ಯೆ 40 ಸಾವಿರ ಗಂಡಸರೂ 20 ಸಾವಿರ ಹೆಂಗಸರು ಅಲ್ಲಿನ ಹೆಂಗಸರಲ್ಲಿ ಕೆಲವರು ಮದುವೆಯಾಗದೆ ಉಳಿಯಲು ಇಚ್ಛಿಸದುತ್ತಾರೆಂದು ಅವರನ್ನು ನಿರುತ್ಸಾಹಗೊಳಿಸಲು ಅಲ್ಲಿನ ಸರಕಾರದವರು ಅವರ ಮೇಲೆ ತೆರಿಗೆ ಹೊರಿಸಲು ನಿರ್ಧರಿಸಿದೆ

✠

ಲಂಡನ್ ಪತ್ರಿಕೆಯಲ್ಲಿ ಈಚೆಗೊಂದು ಜಾಹಿರಾತು ಪ್ರಕಟವಾಗಿತ್ತು "ಆಗಲಿಕ್ಕೆ ಸಭ್ಯ ಗೃಹಸ್ಥ, ಆದರೆ ಹೆಚ್ಚು ಬುದ್ಧಿಶಾಲಿಯಲ್ಲ, ನಂಬಲರ್ಹನಲ್ಲ ಅಲಸ್ಯವಂತ ಕೂಡ ಇಂಥವನಿಗೆ ತುಂಬಾ ಸಂಬಳದ ಕಮ್ಮಿ ಕೆಲಸವಿರುವ ಹುದ್ದೆ ಬೇಕಾಗಿದೆ ಯಾರು ಸಿದ್ಧರಿದ್ದಾರೆ?"

✠

ಕ್ರಿಸ್ಟೇಲ್ ಎಂಟೊನಿಯೊ ಎಂಬ ಮೆಸಿಡೋನಿಯದ ೭೩ ವರ್ಷದವಳೊಬ್ಬಳು ಅವಳಿಜವಳಿ ಮಕ್ಕಳನ್ನು ಹೆತ್ತಿದ್ದಾಳೆ. ಗಂಡನ ವಯಸ್ಸು ೭೭.

ಜಿಲ್ಲಾ ಸಮಾಚಾರ

ಮಂಗಳೂರು

ಇಲ್ಲಿಯ ಕೆನರಾ ಚೇಂಬರ್ ಆಫ್ ಕಾಮರ್ಸಿನ ಆಶ್ರಯದಲ್ಲಿ ಭಾವಚಿತ್ರ ಅನಾವರಣ ಸಮಾರಂಭವೊಂದು ಜರಗಿತು. ಚೇಂಬರಿನ ಮಾಜಿ ಅಧ್ಯಕ್ಷರುಗಳಾದ ದಿ ಮಣೇಲ್ ಅಣ್ಣಪ್ಪ ನಾಯಕ್ ಮತ್ತು ದಿ ಸಾಹುಕಾರ್ ಕಸ್ತೂರಿ ನಾಗೇಶ ಪೈಗಳ ಭಾವಚಿತ್ರಗಳನ್ನೂ ಶ್ರೀಮಾನ್ ವಕೀಲ್ ನೈಕುಂಜ ಬಾಳಿಗರು ಅನಾವರಣ ಮಾಡಿದರು. ಅಧ್ಯಕ್ಷ ಶ್ರೀ. ವಿ. ಎಸ್. ಕುಡ್ವರು ಸ್ವಾಗತಿಸಿದ್ದರು. ಶ್ರೀ. ಬಾಳಿಗರು ದಿವಂಗತರ ಗುಣಕೀರ್ತನ ಮಾಡುತ್ತ ಸಮಾರಂಭ ಜರಗಿಸಿದರು.

ನಾಟಕ ಸಭೆಯ ವರ್ಧಂತಿ

ಬೋಳೂರು ಕೆನರಾಟಕ ನಾಟಕ ಸಭೆಯ ಹತ್ತನೆಯ ವಾರ್ಷಿಕೋತ್ಸವವು ಈಚೆಗೆ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ. ಬಿ ಎಜ್. ಆಚಾರ್ಯರು ವರದಿಯೋದಿದರು ಅಧ್ಯಕ್ಷರು ಮತ್ತು ನೆರೆದ ಆಢ್ಯ ಮಹನೀಯರು ಸಭೆಗೆ ಯಶಸ್ಸು ಕೋರಿದರು

ನಾಟ್ಯ ಪ್ರದರ್ಶನ

ಶ್ರೀ ಯು. ಎಸ್ ಕೃಷ್ಣರಾವ್ ಮತ್ತು ಅವರ ಹಲವು ಮಂದಿ ಶಿಷ್ಯೆಯರ ಪ್ರೌಢ ನೀಯ ನಾಟ್ಯ ಪ್ರದರ್ಶನವೊಂದು ಜಿಲ್ಲಾ ಕಲೆಕ್ಟರ್ ಶ್ರೀ. ಕೈನಾರರ ಅಧ್ಯಕ್ಷತೆಯಲ್ಲಿ ಗಣಪತಿ ಹ್ಯಾಸ್ಕೂಲಿನಲ್ಲಿ ಜರಗಿತು ಇದೇ ಸಂದರ್ಭದಲ್ಲಿ ಪ್ರೋ। ಪುತ್ರನ್ ಮತ್ತು ಪ್ರೋ। ರಾಮಚಂದ್ರನ್ ಅವರ ಶಿಷ್ಯೆಯರ ಕತ್ತಿಯಾಟ, ಕುಸ್ತಿಪಂದ್ಯಾಟ, ಸ್ಥಾಯು ಬಲ ಇತ್ಯಾದಿಗಳ ಪ್ರದರ್ಶನವೂ ಇತ್ತು ಪ್ರದರ್ಶನಕರ್ತರು ಅಧ್ಯಕ್ಷರಿಂದ ಶ್ಲಾಘಿಸಲ್ಪಟ್ಟರು.

ವಿದಾಯ ಕೂಟ

ತಾ ೧೪ರಂದು ಅತ್ತಾವರ ಮುನಿಸಿಪಲ್ ಶಾಲಾ ಮಕ್ಕಳು ತಮ್ಮ ಅಧ್ಯಾಪಕರ ಸನ್ಮಾನಾರ್ಥ ಒಂದು ವಿದಾಯ ಸತ್ಕಾರ ಕೂಟವನ್ನೇರ್ಪಡಿಸಿದ್ದರು ಮುನಿಸಿಪಲ್ ಕಮಿಶನರ್ ಶ್ರೀ ತಳ್ಳಾರರು ಅಧ್ಯಕ್ಷತೆ ವಹಿಸಿದ್ದರು ಉಪಹಾರ, ಭಾವಚಿತ್ರ ತೆಗೆಯೋಣ, ವಿವಿಧವಿನೋದಾವಳಿಗಳಿದ್ದುವು

ಹೊಸ ಕಟ್ಟಡ ಪ್ರವೇಶ

ಬೋಳಾರ್ ಮುನಿಸಿಪಲ್ ಹಿಂದುಗರ ಶಾಲೆಯ ಹೊಸ ಕಟ್ಟಡ ಪ್ರವೇಶೋತ್ಸವವು ಇದೇ ಕಳೆದ ತಾ ೧೯ನೇ ಸಂಜೆ ನಗರ ಸಭಾಧ್ಯಕ್ಷ ಶ್ರೀ ವ್ಯಾಸರ ನೇತೃತ್ವದಲ್ಲಿ ಜರಗಿತು ಆಢ್ಯ ಮಹನೀಯರು ನೆರೆದಿದ್ದರು ನೆರೆಯ ಗೃಹಸ್ಥರೊಬ್ಬರಾದ ಶ್ರೀ ಸದಾನಂದ ಕಿಣಿಯವರು ಶಾಲೆಗೆ ಒಂದು ಧ್ವಜ ಸ್ತಂಭವನ್ನು ಕಟ್ಟಿಸಿ ಕೊಡಲು ವಾಗ್ದಾನ ಮಾಡಿದರು.

ವಿಮಾನ ತರಬೇತಿಗೆ

ಫ್ಲೈಯಿಂಗ್ ಆಫೀಸರ್ ಶ್ರೀ ವಿ. ಪ್ರಭಾಕರ್ ಹೆಗ್ಡೆ ಇವರನ್ನು ಇಂಡಿಯಾ ಸರಕಾರವು ತಮ್ಮ ವಿಮಾನ ತರಬೇತಿಯ ಯೋಜನೆಯ ಸಂಬಂಧ ಇಂಗ್ಲೆಂಡಿಗೆ ವಿಶೇಷ ತರಬೇತಿ ಬಗ್ಗೆ ಕಳುಹಿಸುವರೆ ಚುನಾಯಿಸಿರುವರು.

ಕೆಲಸಮಯದ ಹಿಂದೆ ಫ್ಲೈಟ್ ಆಫೀಸರ್ ಶ್ರೀ. ಸಿ. ಶ್ರೀನಿವಾಸ್ ಕಾಮತ್ ಎಂಬವರು ಇಂತಹ ತರಬೇತಿಯನ್ನು ಪಡೆದು ಬಂದಿದ್ದು, ಅವರು ಇನ್ನೂ ಹೆಚ್ಚಿನ ತರಬೇತಿಗಾಗಿ ಕೆನಡಕ್ಕೂ ಕಳುಹಿಸಲ್ಪಡಬಹುದೆಂದು ನಿರೀಕ್ಷಿಸಲಾಗಿದೆ.

ಬೀಳ್ಕೊಳ್ಳುವ ಸಮಾರಂಭ

೩೫ ವರ್ಷಗಳ ಅಧ್ಯಾಪಕ ವೃತ್ತಿಯ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿರುವ ಇಲ್ಲಿಯ ಗಣಪತಿ ಹ್ಯಾಸ್ಕೂಲಿನ ಉಪಾಧ್ಯಾಯರಾಗಿದ್ದ ಶ್ರೀ. ಪಣಂಬೂರು ಅನಂತಪದ್ಮನಾಭಯ್ಯನವರನ್ನು ಬೀಳ್ಕೊಳ್ಳುವರೆ ಸದ್ರಿ ಶಾಲಾ ಅಧ್ಯಾಪಕರಿಂದ ಒಂದು ಸತ್ಕಾರ ಕೂಟವು ಈಚೆಗೆ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಲ್ಪಟ್ಟಿತ್ತು. ಶ್ರೀ ಅನಂತಪದ್ಮನಾಭಯ್ಯನರ ಸೇವೆ, ಕಾರ್ಯದಕ್ಷತೆ, ವೃತ್ತಿ ಪ್ರೇಮಗಳನ್ನು ಶ್ಲಾಘಿಸಿ ಭಾಷಣಗಳಾದ ಮೇಲೆ ಅತಿಥಿಗಳು ಯಥೋಚಿತ ಭಾಷಿಸಿ ವಂದಿಸಿದರು

ಕಳ್ಳ ಹಿಡಿಯಲ್ಪಟ್ಟ

ಭವಂತಿ ಕೇರಿಯಲ್ಲಿರುವ ಶ್ರೀಗುಲ್ವಾಡಿ ಶಿವಾನಂದ ಭಟ್ಟಿಯರ ಠಾಮಮಾಂದಿರದಿಂದ ಕೆಲದಿನಗಳ ಹಿಂದೆ ದೇವರ ಡಬ್ಬಿಯು ಕಳವಾಗಿ ಹೋಗಿತ್ತು ಮಾಡಿನ ಹಂಚು ತೆಗೆಯುವುದರ ಮೂಲಕ ಕಳ್ಳತನವು ಸಾಧಿಸಲ್ಪಟ್ಟಿತ್ತು

ಮತ್ತು ಕಳೆದ ಆದಿತ್ಯವಾರ ದಿನ ಒಬ್ಬ ತರುಣ ಪ್ರಾಯದವನು ಬೀಗ ಹಾಕಿರದ ಸದ್ರಿ ಮಂದಿರವನ್ನು ಎದುರು ಬಾಗಿಲಿನಿಂದ ಲೇ ಹೊಕ್ಕು ಅಲ್ಲಿನ ಅಂಗಿಯೊಂದರಿಂದ ಪಾಕೀಟು ಒಂದನ್ನೂ ಮತ್ತೊಂದು ಸಣ್ಣ ಡಬ್ಬಿಯನ್ನೂ ತೆಗೆದುಕೊಂಡು ಹೊರಗೆ ವಾಗ ಮಂದಿರದಲ್ಲಿ ನಿವಾಸಿಗಳಾಗಿದ್ದು ಕಾಣಿಸದೆ ನಿಂತಿದ್ದವರೊಬ್ಬರು ಆತನನ್ನು ಸೊತ್ತು ಸಮೇತ ಹಿಡಿದರು ಈ ಪ್ರಸಂಗವು ನಡುಹಗಲಲ್ಲೇ ಜರಗಿತು ಆಪಾದಿತನನ್ನು ಪೋಲಿಸ್ ವಶಕ್ಕೆ ಕೊಡಲಾಗಿದೆ.

ಶಾಲಾ ವರ್ಧಂತಿ

ಕೊಂಚಾಡಿಯ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಕೆನರಾ ಹ್ಯಾಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀನಾನ್ ಜಿ ಅನಂತ ಪ್ರಭು ಬಿ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು ವರದಿ ವಾಚನ ಬಹುಮಾನ ವಿತರಣೆಗಳಾದ ಮೇಲೆ ಅಧ್ಯಕ್ಷರು ಶಾಲೆಯ ಅಭಿವೃದ್ಧಿ ಕೋರಿ, ಉಪಾಧ್ಯಾಯರ ಪರಿಶ್ರಮ ಶ್ಲಾಘಿಸಿ ಭಾಷಣ ಮಾಡಿ ಮಾಡಿದರು

ಹವಾಮಾನ

ಬೇಸಿಗೆಯ ತಾಪವು ಪರಮಾವಧಿಗೆ ಮುಟ್ಟಿದೆನ್ನಬಹುದು ನಗರದೊಳಗಣ ಶಾಲಾ ಕೋಲೇಜುಗಳು ಹೆಚ್ಚಾಗಿ ಬೇಸಿಗೆಯ ಕಾಲದ ರಜೆಯನ್ನು ಅನುಭವಿಸುತ್ತಿರುವವು

ಅವಧಿ ತಪ್ಪಿತ ಅಕ್ಕಿ ಭತ್ತ ಮುಟ್ಟಿಸುವಿಕೆಗೆ ಬೆಲೆ ಕಡಿತದ ವಿವರ

ಜಿಲ್ಲಾ ಕಲೆಕ್ಟರರು ಅವಧಿ ಮಿಕ್ಕಿ ಸ್ಥೋರುಗಳಿಗೆ ತಲುಪಿಸಿದ ಅಕ್ಕಿ ಬತ್ತಗಳ ಬೆಲೆ ಕಡಿತದ ವಿವರವನ್ನು ಹೀಗೆ ಪ್ರಕಟಿಸಿರುವರು

ಹಬ್ಬಿಗೆ ಕೋಟಿಶರೂರ್, ನಾಗೋಡಿ ಗ್ರಾಮಗಳವರು ೩೦-೬-೪೦ರೊಳಗೆ ಮುಟ್ಟಿಸಬೇಕು ಮತ್ತು ಅಲ್ಲಿ ೪-೬ ೪೦ರಿಂದ ೧೦-೬-೪೦ನೊಳಗೆ ಮುಟ್ಟಿಸುವವರಿಗೆ ಅಕ್ಕಿಯಲ್ಲಾದರೆ ಮುದಿಗೆ ೪ ಆಣೆ, ಬತ್ತಕ್ಕೆ ೨ ಆಣೆಯಂತೆ ಕಡಿಮೆ ಮಾಡಲಾಗುವುದು ೧೧-೬-೪೦ರಿಂದ ೧೫-೬-೪೦ರೊಳಗೆ ಮುಟ್ಟಿಸುವವರಿಗೆ ಅಕ್ಕಿ ಬತ್ತಗಳ ಮುಡಿಯಲ್ಲಿ ಕ್ರಮವಾಗಿ ೧೦ ಮತ್ತು ೫ ಆಣೆಗಳಷ್ಟು ಕಡಿಮೆ ಕೊಡಲಾಗುವುದು ೧೫ರ ನಂತರ ಅಕ್ಕಿ ಬತ್ತ ಮುಡಿಯ ಬೆಲೆಯಲ್ಲಿ ಕ್ರಮವಾಗಿ ರೂ. ೧, ಮತ್ತು ೬ ಆಣೆಗಳನ್ನು ಕಡಿಯಲಾಗುವುದು

ಕಾರ್ಕಳ ತಾಲೂಕಿನಲ್ಲಿ ೧೫-೫-೪೦ರ ತನಕ ಕಡಿತವಿಲ್ಲ ನಂತರ ೧೯ರಿಂದ ೨೫ರ ತನಕ ೪ ಮತ್ತು ಎರಡಾಣೆಯಂತೆ ೨೬ರಿಂದ ೧೦-೬-೪೦ರ ತನಕ ೧೦ ಮತ್ತು ೫ ಆಣೆಯಂತೆ, ೨-೬-೪೦ರ ನಂತರ ೧ ಮತ್ತು ॥ ರೂಪ್ಯಾಯಂತೆ ಅಕ್ಕಿ ಬತ್ತ ಮುಡಿಯ ಬೆಲೆಯಲ್ಲಿ ಕಡಿತ ಮಾಡಲಾಗುವುದು

ನಿಧನಗಳು

ಕೆಲ ದಿನಗಳ ಹಿಂದೆ ಇಲ್ಲಿಯ ಮಣ್ಣಗುಡ್ಡೆಯ ಶ್ರೀ ದಾಮೋದರ ಪ್ರಭು ಎಂಬ ವ್ಯಾಪಾರಿಗಳು ನಿಧನಹೊಂದಿದರು

ಹೂ ಮಾರ್ಕೆಟ್ ಬಳಿಯ ಸ್ಟೇಮ್ಸ್ ವಿಲಾಸ್ ಊಟದ ಹೋಟೆಲಿನ ಶ್ರೀ ಶಂಕರ ನಾರಾಯಣ ಕಿಣಿಯವರು ಕೆಲ ತಿಂಗಳ ವ್ಯಾಧಿಯ ನಂತರ ದಿವಂಗತರಾದರು

ಬಾಹ್ಮಣಕೇರಿಯಲ್ಲಿರುವ ಶ್ರೀ ಹನುಮಂತ ಹೆಗ್ಡೆಯವರ ಪುತ್ರರೊಬ್ಬರು ಜ್ವರ ಕಲಿಯುತ್ತಿದ್ದವರೊಬ್ಬರು ವಿಷನುಜ್ವರದಿಂದ ಮೃತಪಟ್ಟರು

ಪೊಲಿಟೆಕ್ನಿಕ್ ಶಾಲೆಯಲ್ಲಿ ಕಲಿಯುತ್ತಿದ್ದ ಶ್ರೀ ಚಿತ್ತರಂಜನ್ ರಾವ್ ಎಂಬ ತರುಣರು ಪಂಟ್ಲೆಂಡ್‌ನೀಯ ತಮ್ಮ ಮನೆಯಲ್ಲಿ ಮೃತಿಯನ್ನೈದಿದರು.

ಈ ವಿಷಯಕರ ಸಂಗತಿಯಲ್ಲಿ ನಮ್ಮ ಶೋಕ ಸಹಾನುಭೂತಿಯನ್ನು ಸೂಚಿಸಿ ಮೃತ ಆತ್ಮಗಳಿಗೆ ಶಾಂತಿ ಕೋರುವೆವು

ತೃತೀಯ ಕರ್ನಾಟಕ ಮಲೆನಾಡು ಪರಿಷತ್ತು

ಸುಬ್ರಹ್ಮಣ್ಯದಲ್ಲಿ ತಾ ೧೭ ೫-೪೦ ರಂದು ಜರಗುವುದು ಮದ್ರಾಸಿನ ಮಾಜಿ ಕಂದಾಯ ಮಂತ್ರಿಗಳಾದ ಶ್ರೀ ಕೆ ಆರ್ ಕಾರಂತರು ಪರಿಷತ್ತನ್ನು ಉದ್ಘಾಟಿಸುವರು ಕೊಡಗು ಜಿಲ್ಲಾ ಜಡ್ಜರಾದ ಶ್ರೀ ಎನ್ ಮುದ್ದಣ್ಣನವರನ್ನು ಅಧ್ಯಕ್ಷತೆ ವಹಿಸುವಂತೆ ಕೇಳಿಕೊಳ್ಳಲಾಗಿದೆ ಪರಿಷತ್ತಿನ ಸಮಯದಲ್ಲಿ ಮಲೆನಾಡು ಪ್ರದರ್ಶನವನ್ನು ಜರಗಿಸುವುದಾಗಿ ಸ್ವಾಗತ ಸಮಿತಿಯವರು ನಿರ್ಧರಿಸಿದ ಪ್ರಕಾರ ಈ ಕಾರ್ಯದಲ್ಲಿ ಸಹಕರಿಸುವಂತೆ ಸರಕಾರವನ್ನು ಕೇಳಿಕೊಳ್ಳಲಾಗಿದೆ ಎಂದು ಕರ್ನಾಟಕ ಮಲೆನಾಡು ಸುಧಾರಣಾ ಸಂಘದ ಅಧ್ಯಕ್ಷರು ತಿಳಿಸುತ್ತಾರೆ

ಸುಬ್ರಹ್ಮಣ್ಯ

ಶ್ರೀ ಸಂಪುಟ ನರಸಿಂಹ ಸ್ವಾಮಿ ಮರದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಮೇ ತಿಂಗಳ ತಾ ೧೧ರಿಂದ ೧೪ರ ವರೆಗೆ ನಡೆಯುವುದು

ಬೆಳ್ಳಾರೆ

ಪುತ್ತೂರಿನ ವಿದ್ಯಾರ್ಥಿ ನಾಟಕ ಮಂಡಲಿಯವರು ತಾ ೧೪ರಂದು ಇಲ್ಲಿಯ ಬೋರ್ಡು ಹಾ ಎ ಶಾಲೆಯಲ್ಲಿ 'ಸುಭಾಸ ದಿಗ್ವಿಜಯ' ಎಂಬ ಯಕ್ಷಗಾನ ಬಯಲಾಟವನ್ನು ಆಡಿ ತೋರಿಸಿದರು ಇದರಲ್ಲಿ ಬಂದ ಹಣವನ್ನು ಅಲ್ಲಿನ ಅಜರ್ಪಿಲ ಮಹಾಲಿಂಗೇಶ್ವರ ದೇವಾಲಯದ ಜೀರ್ಣೋದ್ಧಾರದ ಬಗ್ಗೆ ವಿನಿಯೋಗಿಸಲಾಗುವುದೆಂದು ತಿಳಿಯುತ್ತದೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಸೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧,೦೦೦ ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
ಳರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ ೧೦,೦೦೦ಗಳ ಕೆಳಗೆ ರೂ ೫೦೦ ರ ಗುಣಕದ ರೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

ಹೆಡ್ ಆಫೀಸು —ಬಾವಟೆಗುಡ್ಡೆ, ಮಂಗಳೂರ

ಇತರ ಶಾಖೆಗಳು -ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

ವಾರದ ವಿಜ್ಞಾನ ವರದಿಗಳು

ಹೊಸ ನೂಲು

ನ್ಯಾಲನ್ ಎಂಬ ಕೃತಕ ನೂಲಿಗಿಂತ ಉತ್ತಮವಾಗಿರುವ ಇನ್ನೊಂದು ನೂಲಿನ ಶೋಧೆಯನ್ನು ಒಂದು ಬ್ರಿಟಿಷ್ ಸಂಸ್ಥೆಯವರು ಪ್ರಕಟಿಸಿದ್ದಾರೆ. ಇದರ ಹೆಸರು ಟೆರಿಲಿನ್ ಎಂದು. ಇದು ನ್ಯಾಲನಿಗಿಂತ ಹೆಚ್ಚು ಉಷ್ಣ ಕಾವಾಡುವ ಗುಣವುಳ್ಳದ್ದೂ, ಅದಕ್ಕಿಂತ ಚೆನ್ನಾಗಿ ಬಳಸಲೂ, ನೇಯಲೂ ಹೊಲಿಯಲೂ ಆಗುವಂತಹದೂ ಆಗಿದೆಯಂತೆ. ಇದು ಕೆಲವು ರಸಾಯನಿಕ ಪದಾರ್ಥಗಳಿಂದ ಮಾಡಲ್ಪಡುತ್ತದೆ. ಸದ್ಯಕ್ಕೆ ಇದರ ವಿಷಯ ಪರ್ಯಾಲೋಚಿಸಲ್ಪಡುವ ವಿಷಯವೆಂದರೆ ಇದನ್ನು ತಯಾರಿಸಲು ಬೇಕಾಗುವ ಎಸಿಡನ್ನು ಅಗ್ಗದಲ್ಲಿ ತಯಾರಿಸಲಿಕ್ಕೆ ಆಗುತ್ತದೆಯೆ ಎಂಬುದು. ಬಟ್ಟೆ ವಿಜ್ಞಾನಿಗಳು ಟೆರಿಲಿನಿಗೆ ಉಜ್ವಲ ಭವಿಷ್ಯವಿದೆಯೆನ್ನುತ್ತಾರೆ.

ನೂತನ ದೀಪ

ವಿದ್ಯುತ್ ಪ್ರವಾಹದ ಸಂಬಂಧವಿಲ್ಲದೆ ಉರಿಯುವ ವಿದ್ಯುದ್ದೀಪವೊಂದ ಕಂಡು ಹಿಡಿಯಲಾಗಿದೆ. ಈ ದೀಪವು ಅಲ್ಲಾಡುತ್ತಲಿದ್ದರೆ ಅದರಲ್ಲಿ ತನ್ನಷ್ಟಕ್ಕೆ ಪ್ರಕಾಶವು ಆರಳುವುದು. ಇದಕ್ಕೆ ಕಾರಣ ಇದರೊಳಗೆ ಸೇರಿಸುವ ಕೆಲವು ಪ್ರಕಾಶನ ವಸ್ತು ವಿಶೇಷಗಳೇ ಆಗಿವೆ. ಬಯನ್ ಅಸಿಲಿಂದಲೂ ಪಾದರಸದಿಂದಲೂ ಇದು ತುಂಬಿಸಲ್ಪಟ್ಟಿದೆ. ನೋಟಾರು ವಾಹನಗಳ ದೀಪವನ್ನಾಗಿ ಮಾಡಲು ಇದು ಅತ್ಯಂತ ಉಪಯುಕ್ತವಾಗಿದೆಯೆನ್ನಲಾಗಿದೆ.

ಮೊಸಳೆಗಳ ಅದ್ಭುತ ಜೀರ್ಣ ಶಕ್ತಿ

ಕಬ್ಬಿಣವನ್ನು ಕರಗಿಸಬಲ್ಲುದು

ಮೊಸಳೆಯ ಕುರಿತು ಪರಿಶೋಧನೆ ಮಾಡಿದ ಪ್ರಾಣಿ ಶಾಸ್ತ್ರಜ್ಞರು ಅದರ ಅದ್ಭುತ ಪಚನೇಂದ್ರಿಯ ಕ್ರಿಯೆಯ ಕುರಿತು ವಿಸ್ಮಯಗೊಂಡಿರುವರು. ಅದೆಷ್ಟು ಶಿಸ್ತು ಮತ್ತು ಶಕ್ತಿಯುಕ್ತವೂ ಆಗಿದೆಯೆಂದರೆ ನುಂಗಲ್ಪಟ್ಟ ಪದಾರ್ಥಗಳು ಅದರ ಹೊಟ್ಟೆಯಲ್ಲಿ ಅರ್ಧ ಗಂಟೆಯಲ್ಲಿ ಕರಗಿ ಹೋಗುತ್ತವೆಯಂತೆ. ಪರಿಶೋಧಕರು ಒಂದು ಉಕ್ಕಿನ ಕೊಳ್ಳಿಯನ್ನು ಅದರ ಆಹಾರದೊಡನೆ ಸೇರಿಸಿ ಅದನ್ನು ಹೊಟ್ಟೆಗೆ ಹೋಗುವಂತೆ ಮಾಡಿದರು. ಅದೂ ಕೆಲವೇ ವಾರಗಳಲ್ಲಿ ಕರಗಿ ಹೋದುದು ಗಮನಕ್ಕೆ ಬಂತು. ಒಂದು ಮೊಸಳೆಯ ಬೆನ್ನಿಗೆ ಬೇಟೆಗಾರರಿಂದ ಚುಚ್ಚಲ್ಪಟ್ಟ ಕಬ್ಬಿಣದ ಈಟಿಯ ಒಂದು ತುಂಡು ಅದರ ಹೊಟ್ಟೆಯ ತನಕ ತಲುಪಿದ್ದು ಅದರಲ್ಲಿ ನಾಲ್ಕು ಇಂಚುಗಳಷ್ಟು ಸಂಪೂರ್ಣ ಕರಗಿ ಹೋಗಿದ್ದುದು ಕಂಡುಬಂದಿದೆ.

ಹಲ್ಲುಗಳ ಮಿರುಗು ನಾಶವಾಗುತ್ತದೆ

ಆಧುನಿಕ ದಂತಮಜ್ಜನಗಳಿಂದ

ಟೂತ್‌ಪೇಸ್ಟುಗಳಲ್ಲೂ, ಹಲ್ಲು ಹುಡಿಗಳಲ್ಲೂ ರಾಸಾಯನಿಕ ಧಾತುಗಳ ಚೂರ್ಣವು ಉಪಯೋಗಿಸಲ್ಪಡುವುದರಿಂದ ಅವುಗಳಿಂದ ಉಜ್ಜಲ್ಪಡುವ ಹಲ್ಲುಗಳು ತಮ್ಮ ಮಿರುಗನ್ನು ಕಳಕೊಳ್ಳುತ್ತವೆ–ಹೀಗೆಂದು ಇಂಡಿಯಾನ ವಿಶ್ವವಿದ್ಯಾಲಯದ ಶಾಸ್ತ್ರಜ್ಞರಾದ ಡಾ। ರಾಲ್ಫ್ ಫಿಲಿಪ್ ಅವರು ತಿಳಿಸುತ್ತಾರೆ. ಕೊಳೆಯು ಹಲ್ಲುಗಳಲ್ಲಿ ಆರ್ಟಿಕೊಳ್ಳಬಾರದೆಂದು ಅದಕ್ಕೆ ಪ್ರಕೃತಿದತ್ತವಾದ ಆ ಮಿರುಗು ಇರುತ್ತದೆ. ಅದು ಹಲ್ಲನ್ನು ಉಜ್ಜುವುದರಿಂದ ಕಳಕೊಳ್ಳುವುದಾದರೆ ಹಲ್ಲುಗಳ ಉದ್ದೇಶವೇ ಭಂಗವಾಗುವುದು ಎಂದನರ ಹೇಳಿಕೆ.

ಭೀಕರ ಶಸ್ತ್ರಾಸ್ತ್ರಗಳ ಪ್ರಯೋಗ

ಮುಂದಿನ ಯುದ್ಧದ ಭವಿಷ್ಯ

"ದೇವರು ಈ ಜಗತ್ತಿಗೆ ಯುದ್ಧ ತರಿಸುವುದು ಬೇಡ ಒಂದು ವೇಳೆ ಅದು ಅನಿವಾರ್ಯವಾಗಿ ಸಂಭವಿಸಿತೆಂದರೆ ಈ ಸಲ ಅದೆಂತ ಭೀಕರ ಅಸ್ತ್ರಗಳು ಉಪಯೋಗಿಸಲ್ಪಡುವುದೆಂದು ಹೇಳಬರುವುದಿಲ್ಲ "ಹೀಗೆಂದು ಬ್ರಿಟನಿನ ರಕ್ಷಣಾ ಖಾತೆಯ ಮಂತ್ರಿಗಳು ಶಸ್ತ್ರಾಸ್ತ್ರ ಯೋಜನೆಗಾಗಿ ಮಂಜೂರಾತಿಯನ್ನು ಪಡೆಯುವ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ತಿಳಿಸಿದರ "ನಮ್ಮ ಯುದ್ಧ ಸನ್ನಾಹವು ಸದಾ ಸಿದ್ಧವಾಗಿದೆ. ನಮ್ಮ ಯಂತ್ರ ಶಾಲೆಗಳು ವೈಜ್ಞಾನಿಕರು ಸಮರಸದಿಂದ ಕಾರ್ಯ ಗೈಯ್ಯುತ್ತಿರುವರು ಆದುದರಿಂದ ನಾವು ಯಾವ ಜನಾಂಗಕ್ಕೂ ಹಿಂದೆ ಬೀಳೆವು

ನೀರಿನೊಳಗೆ ಯುದ್ಧಗಳಾಗುವುವು

ಹೊಸ ಸಬ್‌ಮೇರಿನುಗಳ ರಚನೆ

ಮುಂದಿನ ಯುದ್ಧವು ನೆಲದ ಮೇಲೆ ಆಗುವುದೇ ಕದನಗಳ ಜಲದ ಒಳಗೂ ಆಗುವುವು ಎಂದು ಬ್ರಿಟಿಷ್ ನೌಕಾಖಾತೆಯ ಆರ್ಥಿಕ ಕಾರ್ಯದರ್ಶಿಗಳು ತಿಳಿಸುತ್ತಾರೆ ಆದಕ್ಕಾಗಿ ಹೆಚ್ಚು ಕಾಲ ನೀರಿನಲ್ಲಿ ಇರಬಹುದಾದ ಜಲಾ ತರ್ಗಾಮಿ ನೌಕೆಗಳನ್ನು ರಚಿಸಲಾಗುವುದಂತೆ ಈಗಾಗಲೇ ಸಿದ್ಧಪಡಿಸಲ್ಪಟ್ಟಿರುವ ಇಂತಹ ಸಬ್‌ಮೇರಿನುಗಳು ನಗರದ ತಳಗಳಲ್ಲಿ ಒಂದರಡು ಕಿಂಗಳು ಮೇಲಕ್ಕೆ ಬಾರದೇ ತಿರಿಸಬಲ್ಲುವಂತೆ ಅವುಗಳ ವೇಗವೂ ಕಣ್ಣು ಮೈಲಿಗೆ ಮಿಕ್ಕಿಯಿರುತ್ತದೆ

ದೇಶ ವಿದೇಶ ವೃತ್ತ ವೈವಿಧ್ಯ

ಹರಿಜನರೂ ಬದಲಾಗದ ಸಮಾಜವೂ

ಒಂದು ಭೀಕರ ಮುಷ್ಕೃತ್ಯ

ಹರಿಜನೋದ್ಧಾರದ ಕುರಿತು ಮಹಾತ್ಮಾ ಗಾಂಧಿಯವರು ಹಿಂದೂ ಸಮಾಜದ ಹೃದಯ ಪರಿವರ್ತನೆಯಾಗಬೇಕೆಂದು ಒತ್ತೊತ್ತಿ ಸಾರುತಿದ್ದರು. ಆದರೂ ಆ ಮಹಾತ್ಮರ ಅಮರ ಸಂದೇಶವು ಇನ್ನೂ ಅನೇಕ ಕಡೆಗಳಿಗೆ ತಲುಪಿಲ್ಲವೆಂಬುದಕ್ಕೆ ನಿದರ್ಶನವೊ ಎಂಬಂತೆ ಜಬ್ಬಲ್‌ಪುರದ ಬಳಿ ನಡೆದೊಂದು ಹೃದ್ರಾವಕ ಘಟನೆಯು ಸಾಕ್ಷಿಯಾಗಿದೆ

ಅಲ್ಲಿನ ಹಳ್ಳಿಯೊಂದರ ಸಟೇಲರ ಮನೆಯಲ್ಲಿ ಒಂದು ಔತಣ ಸಮಾರಂಭ ಜರಗಿತು ಒರ್ವ ಹರಿಜನ ಹೆಂಗಸು ತನ್ನ ಜಂತಿ ಮರೆಸಿ ಊಟದಲ್ಲಿ ಭಾಗವಹಿಸಿದಳು ಅವಳ ಜಾತಿ ನೀತಿ ತಿಳಿದೊಡನೆ ರೋಷಗೊಂಡ ಅಲ್ಲಿನ ಅಂಧ ಜನರು ಕೆಲವರು ತುಂಬಿ ಗರ್ಭಿಣಿ ಅನಸ್ಥೆಯಲ್ಲಿರುವ ಆ ಹೆಂಗುಸಿನ್ನು ಸಾಯುವ ತನಕ ಹೊಡೆದರು ಈ ಕುರಿತು ತೀವ್ರ ವಿಚಾರಣೆ ಕೈಕೊಳ್ಳಲು ಆ ಕಡಮ ಪತ್ರಿಕೆಗಳು ಸರಕಾರಕ್ಕೆ ಒತ್ತಾಯಪಡಿಸಿವೆ

ಸಿಂಧದಲ್ಲಿನ ಹಿಂದುಗಳ ದುಃಸ್ಥಿತಿ

ಪಾಕಿಸ್ಥಾನದ ರಾಜ್ಯಾಡಳಿತದ ಮಾದರಿ

ಹೈದರಾಬಾದವು ಹಿಂದೀ ಸೈನ್ಯ ಒತ್ತಡಕ್ಕೆ ಶರಣು ಹೊಡೆದಂದಿಂದ ಪಾಕಿಸ್ತಾನದ ಅನೇಕ ಕಡೆಗಳಲ್ಲಿ ಹಿಂದುಗಳನ್ನು ಸಿರಿ ಘಾರದ ಸಂಶಯದ ಮೇಲೆ ಬಂಧಿಸುವ ಒಂದು ಕಾರ್ಯಕ್ರಮವನ್ನು ಅನುಸರಿಸಲಂಗುತ್ತಿದೆಯೆಂದು ತಿಳಿದುಬರುತ್ತದೆ ಸಿಂಧದಲ್ಲಿ ಈ ಸಂಬಂಧ ಸುಮಾರು ೬೦೦ಕ್ಕೂ ಮಿಕ್ಕಿದ ಹಿಂದುಗಳು ಬಂಧಿಸಲ್ಪಟ್ಟಿದ್ದರು ಕೆಲ ಸಮಯದ ತನಕ ವಿನಾಕಾರಣ ಬಂಧನದಲ್ಲಿಟ್ಟು ಅವರಲ್ಲಿ ಕೆಲವರನ್ನು ಮತ್ತೆ ಬಿಡಲಾಯಿತು. ಇನ್ನು ಹೆಚ್ಚಿನವರು ಬಂಧನದಲ್ಲೇ ಇರುವರು.

ಜುಗಾರಿ ನಿರ್ಮೂಲನ

ಬೊಂಬಾಯಿ ಸರಕಾರದ ಉದ್ದೇಶ

ಕುದುರೆ ಜೂಜನ್ನು "ಜುಗಾರಿಗಳ ರಾಜ" ನೆಂದು ವರ್ಣಿಸುತ್ತ ಬೊಂಬಾಯಿಯ ಗೃಹ ಸಚಿವ ಮೊರಾರಜಿ ದೇಸಾಯಿಯವರು "ಸದ್ಯದಲ್ಲೇ ಎಲ್ಲಾ ತರದ ಜುಗಾರಿ ಆಟಗಳನ್ನು, ಶೇರ್ ಮಾರ್ಕೆಟ್ ಮೊದಲಾದ ಜುಗಾರಿ ಸ್ವೈಹಾರಗಳನ್ನು ನಿರ್ಮೂಲಿಸಲು ಸರಕಾರದವರು ಶಾಸ್ತ್ರೀಯವಲದ ಕಾರ್ಯಕ್ರಮಗಳನ್ನು ಕೈಕೊಳ್ಳುವುದು" ಎಂದು ತಿಳಿಸಿದರು ಈ ವಿಘಾತಕ ಆಟಗಳನ್ನು ನಿಲ್ಲಿಸುವ ಕಾರ್ಯಕ್ರಮದಿಂದ ಯಾರಿಗೂ ಯಾವ ತರದ ಧಕ್ಕೆಯೂ ಆಗದಂತೆ ಅವನ್ನೂ ನಿರ್ವಹಿಸಲಾಗುವುದಂತೆ

ನಿಜವೋ ಸುಳ್ಳೊ!

ತಪ್ಪಿತಸ್ಥ ತರುಣನ ಹೇಳಿಕೆ

ಈಚೆಗೆ ಬನಾರಸದಲ್ಲಿ ರೈಲು ಡಬ್ಬಿಯಿಂದ ಒಂದು ಬಟ್ಟೆ ಮೂಟೆಯನ್ನು ಕದಿಯುತಿದ್ದ ಒರ್ವ 20 ವರ್ಷದ ತರುಣನನ್ನು ಪೋಲೀಸರು ಹಿಡಿದರು ಅವನಿಗೆ ಬುದ್ಧಿ ಅಸ್ಥಿರವಿತ್ತೋ ಏನೊ "ಒಬ್ಬ ವಕೀಲನ ಕೈಕೆಳಗೆ ಕೆಲಸ ಮಾಡುವುದಕ್ಕಿಂತ ಕಳ್ಳರ ತಂಡವನ್ನು ಸೇರುವುದೇ ಲೇಸು" ಎಂದು ಅವನು ಪೋಲೀಸರಿಗೆ ಕೊಟ್ಟ ತನ್ನ ಹೇಳಿಕೆಯಲ್ಲಿ ತಿಳಿಸಿದನಂತೆ

✠

ವಿಷದ ಜಂತುಗಳಿಗೆಲ್ಲ ಅವುಗಳ ನೋಲಿನ ದವಡೆಗಳಲ್ಲಿ ನಂಜುಯಿರುವುದು. ಆದರೆ ಮೆಕ್ಸಿಕೋದ ವಿಷದ ಓತಿಗಳಿಗೆ ಕೆಳದವಡೆಯಲ್ಲಿ ನಂಜು ಇದೆ

✠

ಮಾನವ ಕೋಟಿಯಲ್ಲಿ ಮೂರು ವರ್ಗಗಳಿವೆ ದುಡಿದು ಸಾಯುವವರು, ಪೈಥೆಯಿಂದ ಸಾಯುವವರು, ಮತ್ತು ಕೆಲಸವಿಲ್ಲದೆ ಬೇಸರದಿಂದ ಸಾಯುವವರು.

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿವಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ರೆ ಕೊಯಮುತ್ತೂರಲ್ಲಿರುವ ಸರ್ಕಾರಿ R. T O ರವರು ಸೆಂಕ್ಷನ್ ಮಾಡಿ, ಅದು ಕೂಡಾ ಗ್ಯಾಸು ಬಸ್ಸುಗಳಿಂದಲೇ ಓಡಿಸಬೇಕಾಗಿ ನಿರ್ಭಂದವಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದ್ರೆ ಸ್ಪೆಶಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
22-12-48

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

THE CANARA BANKING CORPORATION LTD

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,90,000

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ತ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲಾ್ಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಬೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡಿಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮಠಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 13—5—1949 [ಸಂಚಿಕೆ 19]

ಆರ್. ಎಸ್. ಎಸ್. ಸಂಸ್ಥೆಯ ಘಟನಾ ಪತ್ರಿಕೆ

ಹಿಂದೂ ಸಮಾಜದ ಏಕ್ಯ-ಸಾಂಸ್ಕೃತಿಕ ಪುನರುದ್ಧಾರ

[ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಧ್ಯೇಯ ಧೋರಣೆಗಳ ಘಟನಾ ಪತ್ರವು ನವದಿಲ್ಲಿಯಲ್ಲಿ ಪರಿಶೀಲಿಸಲ್ಪಡುತ್ತಿದೆಯೆಂದು ತಿಳಿದುಬರುತ್ತದೆ ಸಂಘದ ಮೇಲಿನ ನಿರ್ಬಂಧವನ್ನು ತೆಗೆಯಲು ಗೃಹಮಂತ್ರಿ ಸರ್ದಾರ್ ಪಟೇಲರು ಸೂಚಿಸಿದ ಶರ್ತಗಳು ಆದರಲ್ಲಿ ಪೂರೈಸಲ್ಪಟ್ಟಿವೆಯೊ ಎಂದು ಮುಖ್ಯವಾಗಿ ಶಿಕ್ಷಾಸನ ನಡೆಯುತ್ತಿದೆ ಸಂಘಕ್ಕೆ ಒಂದು ಲಿಖಿತ ಧ್ಯೇಯ ಪತ್ರವಿರಬೇಕು, ಅದರ ಧ್ಯೇಯ ಧೋರಣೆಗಳು ಸ್ಪಷ್ಟವಾಗಿ ಅದರಲ್ಲಿ ಕಾಣಿಸಿರಬೇಕು, ಅದರ ಸದಸ್ಯರ ದಾಖಲೆ ಪುಸ್ತಕವೊಂದನ್ನು ಇಡಬೇಕು, ಇವೂ ಕೆಲವು ಮುಖ್ಯ ಶರ್ತಗಳಾಗಿದ್ದುವು "ಹಿಂದೂಸ್ವಾನ್ ಟ್ರಾಮ್ಸ್" ಪತ್ರಿಕೆಯ ವಿಶೇಷ ಬಾತ್ಮೀದಾರರೊಬ್ಬರು ಸಂಘದ ಘಟನಾ ಪತ್ರದ ಕುರಿತು ಈ ಕೆಳಗಿನಂತೆ ಲಭಿಪ್ರಾಯ ಸೂಚಿಸಿದ್ದಾರೆ]

ಸುಮಾರು ಮೂರು ಸಾವಿರ ಶಬ್ದಗಳ 25 ಕಲಮುಗಳಿರುವ ಈ ಘಟನಾ ಪತ್ರದ ಒಂದು ಸ್ವಾರಸ್ಯ ಸಂಗತಿಯೆಂದರೆ ಕೊಂಗ್ರೆಸ್ ಸಂಸ್ಥೆಯಂತೆ ಪ್ರಜಾಪ್ರಭುತ್ವದ ಆದರ್ಶವುಳ್ಳದ್ದಲ್ಲವಾದರೂ ಅದರಂತೆ ಕಾರ್ಯಕಾರಿ ಮಂಡಳಿಯಿಂದ ಗ್ರಾಮ ಸಮಿತಿಗಳ ತನಕ ವ್ಯವಸ್ಥಾ ವಿಭಾಗವುಳ್ಳದಾಗಿದೆ ಸಂಘವು ಸಾಂಸ್ಕೃತಿಕ ಉದ್ದೇಶದ್ದಿದೆ ರಾಜಕೀಯ ಸಂಸ್ಥೆಯಲ್ಲದಿದ್ದರು ಅದರ ಸಂಸ್ಥಾರಚನೆಯ ವಿಧಾನದಿಂದಾಗಿ ಸಂದರ್ಭಕ್ಕನುಗುಣವಾಗಿ ಕ್ಷಣಮಾತ್ರದಲ್ಲಿ ಆ ಸಂಸ್ಥೆಯನ್ನು ಸಾಂಸ್ಕೃತಿಕ ಚಟುವಟಿಕೆಯಿಂದ ರಾಜಕೀಯ ಚಟುವಟಿಕೆಗೆ ಪರಿವರ್ತಿಸಿಕೊಳ್ಳಬಹುದು. ಘಟನೆಯಲ್ಲಿ ತಿದ್ದುಪಡಿಗಳನ್ನು ಮಾಡುವಾಗ ಮೂಲ ಧ್ಯೇಯವನ್ನು ಮಾರ್ಪಡಿಸಬೇಕೆಂದಿಲ್ಲವೆಂಬ ನಿರ್ದೇಶವು ಅದರಲ್ಲಿ ಸೂಚಿತವಾಗಿರುವುದರಿಂದ ಈ ಸಂಗತಿಯು ಇನ್ನಷ್ಟು ದೃಢವಾಗುತ್ತದೆ ,

ಇಂತಿರುವ ಸಂಘದಘಟನಾ ಪತ್ರದಿಂದ ಒಂದು ಪ್ರಶ್ನೆ ಉದ್ಭವಿಸುತ್ತದೆ ಸಂಘವು ಬಹಿರಂಗವಾಗಿ ರಾಜಕೀಯ ಪಕ್ಷವೆಂದೇ ಘೋಷಿಸಿದರೆ ಏಕಾಗಬಾರದು? ಅದರಿಂದ ಹೆಚ್ಚಿನ ಸಾರ್ವಜನಿಕ ಹಿತಕ್ಷೇಮ ಸಾಧಿತವಾಗಬಹುದಲ್ಲವೆ? ತನ್ನ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಇದು ಬಲಪಕ್ಷದ ರಾಜಕೀಯ ಸಂಸ್ಥೆಯಾಗಿ ಸರ್ವಸಾಧಾರಣವಾದ ರಾಜಕೀಯ ವಿಧಾನಗಳನ್ನು ಬಳಸಿ ಅದು ಕಾರ್ಯರೂಪಕ್ಕೆ ಬರಬಾರದೇಕೆ?

ಸೇವಾ ಭಾವ

ಘಟನಾ ಕರಡಿನ ಪ್ರಸ್ತಾವನೆಯಲ್ಲಿ ಸಂಘದ ಪ್ರಾರಂಭ ಇತಿಹಾಸವಿದೆ "ರಾಷ್ಟ್ರೀಯ ಸ್ವಯಂಸೇವಕ ಸಂಘವೆಂದಿಸಿಸುವ ಈ ಸಂಸ್ಥೆಯು ವಿಕ್ರಮ ಸಂವತ್ಸರದ (1925 ಇಸವಿ) ವಿಜಯ ದಶಮಿ ದಿನ ದಿವಂಗತ ಡಾ। ಕೇಶವ್ ಬಾಲಿರಾವ ಹೆಡ್ಗೇವಾರರಿಂದ ಪ್ರಾರಂಭಿಸಲ್ಪಟ್ಟಿತು

ಮತ್ತೆ ಸಂಘದ ಉದ್ದೇಶಗಳ ಕುರಿತಾದ ಅಂಶಗಳು ಹೀಗಿವೆ

ದೇಶವು ಜರ್ಝರಿತ ಪರಿಸ್ಥಿತಿಯಲ್ಲಿದ್ದು ಹಿಂದೂಗಳಲ್ಲಿ ಜಾತಿ, ಮತ ಪಂಥಗಳ ವ್ಯತ್ಯಾಸದಿಂದಲೂ, ಮತ್ತು ರಾಜಕೀಯ, ಔದ್ಯೋಗಿಕ ವ್ಯಾಪಾರಿಕ ಮತ್ತು ಭೂಜಾವಾರು ವ್ಯತ್ಯಾಸಗಳಿಂದ ಉಂಟಾದ ಅನೈಕ್ಯತೆಯ ಪರಿಸ್ಥಿತಿಯನ್ನು ಹೋಗಲಾಡಿಸಿ ಅವರಲ್ಲಿ ಒಂದು ಸಂಪಟಿತ ಜೀವನ ವ್ಯವಸ್ಥೆಯುಂಟಾಗುವಂತೆಯೂ, ಹಿಂದೂ ಸಮಾಜದಲ್ಲಿ ವೃನರ್ತ್ಯೈತನ್ಯವುಂಟಾಗುವಂತೆಯೂ ಹಿಂದೂಗಳಲ್ಲಿ ಸೇವೆ ಮತ್ತು ಬಲಿದಾನದ ಭಾವನೆಯು ಉಂಟಾಗುವಂತೆ ಸಾಧಿಸುವುದು ಅವಶ್ಯಕ

ಶ್ರೀ ಮಾಧವ್ ಸದಾಶಿವ ಗೊಳ್ವಾಲಕರರು ಡಾ। ಹೆಡ್ಗೇವಾರರವರಿಂದ ತಮ್ಮ ಉತ್ತರಾಧಿಕಾರಿಯಾಗಿ ವಿಕ್ರಮ ಸಂವತ್ಸರದ 1997 (1940 ಇಸವಿ) ರಲ್ಲಿ ನೇಮಿಸಲಾಗಿದೆ

ಇದು ತನಕ ಸಂಘಕ್ಕೆ ಲೇಖಿ ಘಟನಾ ಪತ್ರವಿರಲಿಲ್ಲಿ. ಆದ್ದರಿಂದ ಈಗಿನ ಬದಲಾದ ಪರಿಸ್ಥಿತಿಯಲ್ಲಿ ಸಂಸ್ಥೆಯ ಧ್ಯೇಯ ಧೋರಣೆಗಳನ್ನು ಬರೆದಿಡುವುದಲ್ಲಿ ಸಿರೂಪಿಸುವುದು ಅವಶ್ಯವೆಂದು ತೋರಿಬಂದಿದೆ

ಸಂಘವು ಈ ಕೆಳಗಿನ ಘಟನೆಯನ್ನು ಸ್ವೀಕರಿಸುತ್ತದೆ

ಒಂದನೆ ಕಲಮುಗಳಲ್ಲಿ ಸಂಘದ ಹೆಸರು ಮತ್ತದರ ಕೇಂದ್ರ ಕಚೇರಿಗಳನ್ನು ಉಲ್ಲೇಖಿಸಲಾಗಿದೆ – ಇದು ನಾಗಪುರದಲ್ಲಿ ನಾಲ್ಕನೆ ಕಲಮಿನಲ್ಲಿ ಸಂಘದ ಧ್ಯೇಯವು ನಿರೂಪಿತವಾಗಿದೆ ಅದರ ವಿವರ ಇಂತಿದೆ

"ನಮ್ಮ ಮಾತೃಭೂಮಿಯಾದ ಭಾರತ ವರ್ಷದ ಸರ್ವತೋಮುಖ ಉನ್ನತಿಗಾಗಿ ಧರ್ಮ ಮತ್ತು ಸಂಸ್ಕೃತಿಗಳ ತಳಹದಿಯ ಮೇಲೆ ಹಿಂದೂ ಸಮಾಜವನ್ನು ಪುನರುಜ್ಜೀವನಗೊಳಿಸುವುದು ಅದಕ್ಕಾಗಿ ಹಿಂದೂ ಮತಕ್ಕೆ ಸೇರಿದ ವಿವಿಧ ಪಕ್ಷ ಪಂಥಗಳನ್ನು ಸಂಘಟಿಸುವುದು."

"ನಮ್ಮ ಮಾತೃಭೂಮಿಯಾದ ಭಾರತ ವರ್ಷದ ಸರ್ವತೋಮುಖ ಉನ್ನತಿಗೆಯ್ಯಲು " ಇತ್ಯಾದಿಗಳನ್ನು ಓದುವಾಗ ಇದರ ಉದ್ದೇಶಗಳು ಅದೆಷ್ಟು ವಿಶಾಲ ವ್ಯಾಪಕ ಅರ್ಥವುಳ್ಳದ್ದೆಂಬ ಸಂಗತಿಯು ತಿಳಿಯುತ್ತದೆ

ಧೋರಣೆಯ ಕುರಿತಂತೆ ನಿವರಣೆಯೂ ಮಹತ್ವದಿದೆ "ಸಂಘಕ್ಕೆ ಎಲ್ಲಾ ಜನರು ಮತ್ತು ಮತಧರ್ಮಗಳ ಕುರಿತು ಸಹಿಷ್ಣುತಾ ಭಾವನೆಯು ಇದೆ ಇದು ನಮ್ಮ ಸಾಂಸ್ಕೃತಿಕ ಸಾಂಪ್ರದಾಯವೆ ಆಗಿದೆ

"ಸಂಘವು ಸುವ್ಯವಸ್ಥಿತ ಸಮಾಜ ಕ್ರಾಂತಿಯ ಲ್ಲಿ ವಿಶ್ವಾಸವುಳ್ಳದ್ದಾಗಿದೆ ಆದುದರಿಂದ ಅದು ತನ್ನ ಧ್ಯೇಯ ಸಾಧನೆಗಾಗಿ ಎಲ್ಲಾ ತರದ ಶಾಂತಿಯುಕ್ತವೂ ನ್ಯಾಯಬದ್ಧವೂ ಆದ ವಿಧಾನಗಳನ್ನು ಅನುಸರಿಸಲಿಚ್ಛಿಸುವುದು

"ಆರ್. ಎಸ್ ಎಸ್ ಎಂಬೀ ಸಂಸ್ಥೆಗೆ ರಾಜಕೀಯ ವಿಚಾರವಾವುದೂ ಇಲ್ಲ. ಅದು ಶುದ್ಧ ಸಾಂಸ್ಕೃತಿಕ ಕಾರ್ಯಕ್ಕಾಗಿ ಮಾತ್ರ ಪ್ರತಿಜ್ಞಾಬದ್ಧವಾಗಿದೆ. ಸ್ವಯಂಸೇವಕರು ಇಚ್ಛೆಪಡುವ ರಾಜಕೀಯ ಪಕ್ಷಗಳನ್ನು ಸೇರಲು ಸ್ವತಂತ್ರರಿದ್ದಾರೆ."

ಇದು ಬಹಳ ಮಟ್ಟಿಗೆ ಕೃಸ್ಪಿಕರವಾಗಿದೆ. ಆರ್. ಎಸ್ ಎಸ್. ಸಂಸ್ಥೆಯು ರಾಜಕೀಯವಾದುದಲ್ಲ, ಅದರ ಸದಸ್ಯರು ಯಾವ ರಾಜಕೀಯ ಪಕ್ಷಕ್ಕೂ ಸೇರಬಹುದು.

ಧ್ವಜದ ಕುರಿತು

ಇತರ ರಾಜಕೀಯ ಪಕ್ಷಗಳಲ್ಲಿ ಅಧಿಕಾರಸ್ಥಾನಕ್ಕೆ ಚುನಾಯಿತರಾಗಿರುವವರು ಸಂ

(೨ನೇ ಪುಟ ನೋಡಿ)

THE

UNITED INDIA LIFE ASSURANCE CO., LTD.

(H. O. MADRAS.)

ANNOUNCEMENT

We have great pleasure in announcing that our Branch Office for S. Kanara, Malabar, and Coorg, now functions at our premises at K. S. Rao Road, Mangalore.

THE BRANCH MANAGER.

ಜಗತ್ತಿನ ಕೌತುಕದ ಉದ್ಯಮಗಳು

ವಾತರೋಗಕ್ಕೆ ಜೇನುಸೊಣ ಕಡಿಸುವವನು

ಗಿಳಿಗಿಳಿಗೆ ಮಾತು ಕಲಿಸುವವರು

ಇಂಗ್ಲೆಂಡಿನ ಕೊರ್ನ್‌ವಾಲ್ ಪ್ರಾಂತ್ಯದ ಒಬ್ಬ ಗೃಹಸ್ಥನು ತನ್ನ ವಿಚಿತ್ರ ಉದ್ಯಮದಿಂದ ಜಗತ್ತಿನ ದೃಷ್ಟಿಯನ್ನು ಸೆಳೆದ. ಕಪ್ಪುಗಳನ್ನು ಒಂದು ಕೈಪ ಪ್ರಯೋಗ ಶಾಲೆಗೆ ಪೂರೈಸಿಕೊಡುವುದು ಜೀವಜಾಲದ ವೈಶಿ. ವಾರಕ್ಕೆ ಹೇಗೆಂದರೂ ಅವನ ಕೊಳ್ಳೆ ೬ ಸಾವಿರ ಕಪ್ಪೆಗಳಾಗುವವು.

ವೇಲ್ಸ್ ಪ್ರಾಂತ್ಯದಲ್ಲಿ ಇನ್ನೊಬ್ಬ ವಿಚಿತ್ರ ದಂಧೆಯವನಿದ್ದಾನೆ. ಇಂಗ್ಲೆಂಡಿನ ಸಮುದ್ರ ಕರಾವಳಿಯಿಂದ ಕೆಲವು ಮೀನುಗಳು ವರ್ಷದ ಒಂದು ನಿರ್ದಿಷ್ಟ ಅವಧಿಯಲ್ಲಿ ನದಿಗಳ ಮೂಲಕ್ಕೆ ಒಳಪ್ರದೇಶವನ್ನು ಸೇರುತ್ತವೆ. ಅಂತಹ ಮೀನುಗಳಿಗೆ ತನ್ನ ಒಳ ಸಂಚಾರದ ಹಾದಿಯಲ್ಲಿ ಜಲಪಾತಗಳು ಸಿಕ್ಕಿದರೆ ಅವುಗಳನ್ನು ಹತ್ತಿಹೋಗಲು ಅ ಮನುಷ್ಯನು ತನ್ನ ಪ್ರಾವೀಣ್ಯತೆಯನ್ನುಪಯೋಗಿಸಿ ಸಹಾಯಮಾಡುವನು. ಇದರಿಂದ ಇದರಿಂದ ಅಲ್ಲಿನ ಮೀನುಗಾರಿಕೆಗೆ ತುಂಬಾ ಸಹಾಯವಾಗುವುದು ಅವನಿಲ್ಲದಿರುತ್ತಿದ್ದರೆ ಈಲ್ ಎಂಬ ರುಚಿಕರವಾದ ಮೀನು ಮರಿಗಳಿಗೆ ಅಲ್ಲಲ್ಲಿ ಜಲಪಾತಗಳನ್ನು ದಾಟುವುದು ಕಷ್ಟದ ಕೆಲಸವಾಗುತಿತ್ತು.

ಹೀಗೆ ಜಗತ್ತಿನಲ್ಲಿ ಹಲವು ಸ್ತ್ರೀಪುರುಷರು ಚಿತ್ರವಿಚಿತ್ರವಾದ ಉದ್ಯೋಗಗಳಲ್ಲಿ ನಿರತರಾಗಿ ಉದರಂಭರಣ ಗೈಯ್ಯುತ್ತಿರುವರು. ತೆಂಗಿನ ಚಿಪ್ಪು ಒಡೆಯುವ ನಿಪುಣರಿಂದ ಹಿಡಿದು ಆಸ್ಟ್ರಿಚ್ ಪಂಜರ ಮಾರುವವರ ಈ ವಿಚಿತ್ರ ಉದ್ಯೋಗಗಳ ಕ್ಷೇತ್ರವು ವ್ಯಾಪಿಸಿದೆ.

ಆಸ್ಟ್ರೇಲಿಯದ ಹಕ್ಕಿಗಳನ್ನು ಮಾರುವ ಒಂದು ಕಂಪೆನಿಯವರು ತಮ್ಮ ಕಚೇರಿಯಲ್ಲಿ ಗಿಳಿಗಳಿಗೆ ಮಾತು ಕಲಿಸುವ ತಜ್ಞರನ್ನೂ ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ. ಈ ತಜ್ಞರು ಜಗತ್ತಿನ ಹಲವು ಭಾಷೆಗಳನ್ನೂ ಬಲ್ಲವರಿದ್ದಾರೆ. ಆ ಸಂಸ್ಥೆಯವರು ಮಾತಾಡುವ ಗಿಳಿಗಳನ್ನು ಜಗತ್ತಿನ ಎಲ್ಲಾ ಕಡೆಗಳಿಗೂ ಕಳುಹಿಸುತ್ತಾರೆ ಅದುದರಿಂದ ಬೇರೆ ಬೇರೆ ದೇಶ ಭಾಷೆಗಳಲ್ಲಿ ಗಿಳಿಗಳು ಮಾತಾಡಬಲ್ಲವಾಗಿರಬೇಕು ಗಿಳಿಗಳಿಗೆ ಚೀನ ಭಾಷೆಯನ್ನು ಕಲಿಸುವ ಉದ್ಯಮಗಿಂತ ಸೋಜಿಗವಾದುದು ಬೇರೆಯಾವುದಾದರೂ ಇದೆಯೆ?

ಸ್ತ್ರೀಯರು ಕೂಡಾ ವಿಚಿತ್ರ ಕೆಲಸಗಳಲ್ಲಿ ಪ್ರವೃತ್ತರಾಗಿರುವುದು ತಿಳಿದು ಬಂದಿದೆ. ಒಂದು ಇಗ್ಲಿಷ್ ರಬ್ಬರ್ ಬೂಟ್ಸು ಕಂಪೆನಿಯವರು ಇರ್ವ ಮಹಿಳೆಯರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ ಅಲ್ಲಿ ತಯಾರಾಗುವ ಹೊಸ ಹೊಸ ಮಾದರಿಯ ಬೂಟ್ಸುಗಳನ್ನು ಧರಿಸಿ ಅವರು ದಿನಕ್ಕೆ 12 ಮೈಲುಗಳಷ್ಟು ಪ್ರಯಾಣ ಮಾಡಿದರೆ ಅವರ ಕರ್ತವ್ಯ ತೀರಿತು?

ಅಮೇರಿಕದಲ್ಲಿನ ಸ್ಥಾನದ ಮತ್ತು ಉಡುಪುಗಳನ್ನು ತಯಾರಿಸುವ ಒಂದು ಸಂಸ್ಥೆಯಲ್ಲಿ ನೇಮಿಸಲ್ಪಟ್ಟ ಇರ್ವ ತರುಣಿ ದಿನವೆಲ್ಲಾ ಕೆಲಸ ನೀರಿನಲ್ಲಿ, ಉಡುಪುಗಳು ನೀರಿನಲ್ಲಿ ಎಷ್ಟರ ತನಕ ಸಂಕೋಚ ಗೊಳ್ಳುತ್ತವೆ ಎಂದು ಅವಳು ವರದಿ ಮಾಡುವಳು

ಮತ್ತೆ ಒಬ್ಬಳಿಗೆ ಗೀಚುವ ಕೆಲಸ ಅವಳಿದುವುದು ಪಸ್ಸಲ್ ಕಾರ್ಖಾನೆಯಲ್ಲಿ ಹೊಸ ಹೊಸ ಪಸ್ಸ್‌ಗಳನ್ನು ಅವಳು ದಿನವೆಲ್ಲ ಗೀಚಿ ಪರೀಕ್ಷಿಸುತ್ತಿರಬೇಕು ಕಾಲ ಕಳೆಯುವಳು

ಜಗತ್ತಿನ ಅತೀ ವಿಸ್ಮಯಕಾರಕ ಉದ್ಯೋಗದಲ್ಲಿರುವವಳಿಗೆ ಇಂದು ಹೇಳಲು ಅಶಕ್ಯ ಕಷ್ಟಕ್ಕೆ ತರ ತಾಪ ಯಂತೆ ವಾತರೋಗಕ್ಕೆ ಔಷಧ ನ ಕಂಡು ಯಾಗಿ ಜೇನುಸೊಣಗಳನ್ನು ಕಚ್ಚಿಸಿ ಜ ನವಾದ ಮಾಡುವ ದ್ದಾನ ಷ್ಟಿನ ಕಡಲುನಾಣಗಳನ್ನು ಹಿಡಿದ ಪ ನಸ್ತ ವನ್ನೊಪ್ಪಿ ದ್ದಾನ ಪ್ರಾಮಾಣಿಕವಾಗಿ ಅತ್ಯಂತ ಕೌತುಕವನ್ನುಂಟುಮಾಡಿ ಸ ಎಂದರೆ ವಿಧವ ದ ದೆಗಳು ಈ ಜಗತ್ತಿನಲ್ಲಿರುವುದು. ಉದಾ: ವೈದ್ಯಶಾಸ್ತ್ರ ಕಲಿಯುವ ವಿದ್ಯಾರ್ಥಿಗಳಿಗೆ ಅಸ್ಥಿಪಂಜರಗಳನ್ನು ಮಾರಿ ಜೀವಿಸುವವರೇ ಕೆಲವರಿದ್ದಾರೆ. ಗಾಳಹಾಕುವವರಿಗೆ ಹುಳಗಳನ್ನು ಮಾರಿಯೇ ವರ್ಷಕ್ಕೆ 1000 ಪವನು ಸಂಪಾದಿಸುವವನೊಬ್ಬನಿದ್ದಾನೆ ಹಾಗೇ ಒಂದು ಜಾತಿಯ ಜೇಡರ ಹುಳಗಳನ್ನು ಔಷಧೀಯ ಕೆಲಸಕ್ಕಾಗಿ ಒಟ್ಟುಗೂಡಿಸಿ ಹೊಟ್ಟೆ ತುಂಬಿಸುವವನೊಬ್ಬನಿದ್ದಾನೆ ಇನ್ನೊಬ್ಬ ಜೇಡರ ಬಲೆಯ ದಾರಗಳನ್ನು ದುರ್ಬೀನು ತಯಾರಕರಿಗೆ ಪೂರೈಕೆ ಮಾಡುತ್ತಾನೆ. ಆ ದಾರಗಳಿಂದ ದುರ್ಬೀನಿನ ಕನ್ನಡಿಗಳಿಗೆ ಹಾಕುವ ಒಂದು ತರದ ನೂಲನ್ನು ಮಾಡುತ್ತಾರೆ

ಹುರಿಯುವ ಮಾಂಸವನ್ನು ತಿನ್ನುವುದು ಒಂದು ಒಳ್ಳೇ ಉದ್ಯಮ. ಹೋಟೇಲುಗಳಲ್ಲಿ ಮಾಂಸ ಹುರಿಯುವಾಗ ಅವು ಸುಟ್ಟು ಹೋಗದಂತೆ ನೋಡಿಕೊಳ್ಳುವುದು ಇವರ ಕೆಲಸ ಅಮೇರಿಕದಲ್ಲಿ ವಿದ್ಯಾರ್ಥಿಗಳು ಬಿಡುವಿನಲ್ಲಿ ದಂಧೆಯಾಗಿ ಈ ಕೆಲಸವನ್ನು ಮಾಡುತ್ತಾರೆ

ವಿಚಿತ್ರ ಕೆಲಸಗಳಿಗೆ ವಿಚಿತ್ರ ಹೆಸರುಗಳು ಇವೆ ಉದಾ ಕ್ಷಿಲೊಟೊಮಿಸ್ಟ್ ಎಂಬವನು ಸಂಕ್ಷ್ಮ ದರ್ಶಕದಲ್ಲಿ ಮರದ ಪದರುಗಳನ್ನು ಪರೀಕ್ಷಿಸುವನು ಡೆಂಡ್ರೊಕ್ರೊನಾಲಜಿಸ್ಟ್ ಎಂಬವನು ಮರದ ಮತ್ತು ಗಿಡಗಳ ವೃದ್ಧಿ ಪರೀಕ್ಷಣೆ ಮಾಡುವನು ಎಂಟೆರೊಪ್ಟಿಸ್ಟ್ ಎಂಬವನು ಮನುಷ್ಯನ ಶರೀರ ಭಾಗಗಳನ್ನು ಅಳತೆ ಮಾಡುವನು ಕಣ್ಣು ಕಿವಿ ಮತ್ತು ಗಂಟುವ್ಯಾಧಿಗಳಿಗೆ ಔಷಧ ಕಂಡುಹಿಡಿಯುವವನನ್ನು ದಂಧೆ ಅಷ್ಟಕ್ಕೆ ಮಿತವಾದ ವಿಸ್ತಾರವಾದರೂ ಅವರಿಗೆ ಸೈಕಿಯಾಟ್ರಿಸ್ಟ್ ಇನ್‌ಸ್ಪೆಕ್ಟರ್ ಎಂಬ ಹೆಸರಿನ ಒಬ್ಬ ಅಧಿಕಾರಿ ಮೇಲಿನಿಂದ ಕೆಳಗಿನವರೆಗೆ ಎಲ್ಲರ ಕೆಲಸವನ್ನು ಪರೀಕ್ಷಿಸುವನು. ಹೀಗೆ ಜಗತ್ತಿನಲ್ಲಿ ಹಲವು ಸ್ತ್ರೀಪುರುಷರು ಚಿತ್ರವಿಚಿತ್ರವಾದ ಉದ್ಯೋಗಗಳಲ್ಲಿ ನಿರತರಾಗಿ ಉದರಂಭರಣ ಗೈಯ್ಯುತ್ತಿರುವರು. ತೆಂಗಿನ ಚಿಪ್ಪು ಒಡೆಯುವ ನಿಪುಣರಿಂದ ಹಿಡಿದು ಆಸ್ಟ್ರಿಚ್ ಪಂಜರ ಮಾರುವವರ ಈ ವಿಚಿತ್ರ ಉದ್ಯೋಗಗಳ ಕ್ಷೇತ್ರವು ವ್ಯಾಪಿಸಿದೆ.

(೧೫ನೇ ಪುಟದಿಂದ)

ಭೆದ ಯಾವ ಅಧಿಕಾರ ಸ್ಥಾನಕ್ಕೂ ಚುನಾಯಿಸಲ್ಪಡಲು ಅರ್ಹರಾಗಿರ್ಪಿನೆಂದು ಇನ್ನೊಂದು ಕಲಮಿನಲ್ಲಿ ಹೇಳಲಾಗಿದೆ

ಮತ್ತೆ ಪೆನಃ, ಈ ಜನರು ಒಂದು ಸಂಸ್ಥೆಯನ್ನು ಬಿಟ್ಟು ಇನ್ನೊಂದು ಸಂಸ್ಥೆಯನ್ನು ಯಾವ ಕಷ್ಟವಿಲ್ಲದೆ ಅತೀ ಶೀಘ್ರದಲ್ಲಿ ಸೇರಬಲ್ಲರು

ಐದನೆ ಕಲಮಿನಲ್ಲಿ ಧ್ವಜದ ಕುರಿತಾಗಿ ಹೇಳಲ್ಪಟ್ಟಿದೆ "ರಾಷ್ಟ್ರ ಧ್ವಜವನ್ನು ಮನ್ನಿಸುವ ಸಂಚಿಕೆ ತನ್ನದೇ ಆದ ವ್ಯಾಚೀನ ಹಿಂದೂ ಸಂಸ್ಕೃತಿಯು ಸಂಚೀತವಾಗಿರುವ ಭಗ್ವಾ ಧ್ವಜವೂ ಇದ

ರಾಷ್ಟ್ರ ಧ್ವಜವನ್ನು ಅದು ಸ್ವೀಕರಿಸತ್ತೆಂದು ಈ ಕಲಮಿನಲ್ಲಿ ಸ್ಪಷ್ಟವಾಗಿ ತಿಳಿಸಲ್ಪಡುವುದಿಲ್ಲ ಅದಕ್ಕೆ ತಂದಿಸುವವಿಚಾರವೂ ಇಲ್ಲ ಈ ಹಿಂದೆ ಕೆಲವು ಆರ್ ಎಸ್ ಎಸ್ ಜನರು ರಾಷ್ಟ್ರ ಧ್ವಜಕ್ಕೆ ಅಗೌರವವನ್ನು ತೋರಿಸಿದ್ದರೆಂಬ ಆರೋಪವಿದ್ದುದರಿಂದ ಮುಂದೆ ಅಂತಹ ಅವಮಾರವು ಆಗದಂತೆ ಈ ತರದ ವಿವರಣೆಯನ್ನು ಕೊಟ್ಟರಬಹುದು

ಮತೆ ೨ಂದು ಕಲಮಿನಲ್ಲಿ ಎಲ್ಲಾ ತರದ ಸ್ವಯಂ ಸೇವಕರ ದಾಖಲೆಯನ್ನು ಎಲ್ಲಾ ಶಾಖೆಗಳವರು ಇಡಬೇಕೆಂದು ನಿರ್ದೇಶಿಸಲಾಗಿದೆ

ಸಂಘದ ಹೊಸ ಸದಸ್ಯರ ಸಂಖ್ಯೆ ಹಳೆ ಸದಸ್ಯರಿಗಿಂತ ಹೆಚ್ಚಾಗಿದ್ದರೂ ಅದರ ಹಳೇ ಮುಖಂಡರ ಪ್ರಭಾವವು ಕಡಿಮೆಯಾಗದಂತೆ ಹತ್ತನೆ ಕಲಮಿನ ವಿವರಣೆಯು ಕಟಿಸಲಾಗಿದೆ. ಉದಾ. ಅಖಿಲ ಭಾರತೀಯ ಸಂಘ ಕಾರ್ಯದರ್ಶಿಯ ಚುನಾಯಿತ ಇಲ್ಲವೆ ನೇಮಿತ ಅಧಿಕಾರ ಸ್ಥಾನವಿದ್ದವರಾಗಬೇಕಾದರೆ ಕನಿಷ್ಠ ಪಕ್ಷ ಆರು ವರ್ಷಗಳ ಅವಿಚ್ಛಿನ್ನ ಸದಸ್ಯತನದ ದಾಖಲೆಯಿರಬೇಕೆಂದು ಶರ್ತ ಹಾಕಲಾಗಿದೆ. ಪ್ರಾಂತಿಕ ಕ್ಷೇತ್ರದಲ್ಲಾದರೆ ಮೂರು ವರ್ಷ, ಸಂಘ ಚಾಲಕನಾಗಬೇಕಾದರೆ ಒಂದು ವರ್ಷ— ಹೀಗೆ ಅವಧಿ ನಿಯಮ ಹಾಕಲಾಗಿದೆ.

ಶಾರೀರಿಕ ಚಟುವಟಿಕೆಗಳು

ಸ್ವತಂತ್ರ ಸೇನೆಯೆಂದು ಸಂಘಕ್ಕೆ ಹೆಸರು ತರಿಸಿದ ಅದರ ಶಾರೀರಿಕ ಚಟುವಟಿಕೆಗಳ ಕಾರ್ಯಕ್ರಮವು ಹಿಂದಿನಂತೆ ಸಾಗಬೇಕೆಂದು ಉದ್ದೇಶಿಸಲಾಗಿದ ಇದಕ್ಕಿದೆ ಬೇರೊಂದು ಕಲಮಿನಲ್ಲಿ "ಸಂಘವು ತನ್ನ ಧ್ಯೇಯಸಾಧನೆಗಾಗಿ ನಿರ್ಬಹಿಸಲು ಸಂಧ್ಯ ವಿರುವ ಯಾವದೇ ಯೋಜನೆ ಇಲ್ಲವೆ ಚಟುವಟಿಕೆಗಳನ್ನು ಕೈಕೊಳ್ಳಬಹುದು" ಎಂದೂ ಕೂಡಿಸಲಾಗಿದೆ.

ಘಟನೆಯ ಉದ್ದೇಶದ ಕುರಿತಾದ ವಿವರಣೆಗಳನ್ನು ಕಂಡುವಲ್ಲಿ ಸಂಘದ ಕೇಂದ್ರ ಕಾರ್ಯಕಾರಿ ಮಂಡಳಿಗೇ ಕೊನೆಯ ಅಧಿಕಾರ ವಿದೆಯೆಂದೂ ಒಂದ ಕಲಮಿನಲ್ಲಿ ಹೇಳಲಾಗಿದೆ ನ್ಯಾಯಸ್ಥಾನಕ್ಕೆ ಸಂಬಂಧವ ಸಂಗವನ್ನೇ ಅಮಂತ್ರಿಸಲಾಗಿದೆ ಇದರ ಉದ್ದೇಶವೇನಿದೆ

ಸಂಘದ ಘಟನೆಯಲ್ಲಿ "ಗುರುಜಿ" ಅಸಾಮಾನ್ಯವಾದ ಸ್ಥಾನವನ್ನು ಕೊಡಲಾಗಿದೆ ಆದರೆ ಘಟನೆಯು ಶಿಥಿಲವಲ್ಲ ಈ ಶಬ್ದವನ್ನು ಉಪಯೋಗಿಸದೆ ಅದರ ಬದಲಿಗೆ ಸಾರ್ ಸಂಘ ಚಾಲಕ ಎಂದು ಸಂಬೋಧಿಸಲಾಗಿದೆ ಕೇಂದ್ರ ಕಾರ್ಯಕಾರಿ ಮಂಡಳಿಗೆ ಇರ್ವ ಪ್ರತ್ಯೇಕ ಅಧ್ಯಕ್ಷ ನಿರುವುದರಿಂದ ಸಾರ ಸಂಘ ಚಾಲಕನಿಗೆ ಪ್ರತ್ಯೇಕವಾದ ಘಟನಾತ್ಮಕ ಇಲ್ಲವೆ ಕಾರ್ಯ ನಿರ್ವಾಹಕತ್ವಕ ಅಧಿಕಾರವನ್ನು ಹೇಳಿಲ್ಲ ಅವನನ್ನು ಸಂಘದ ಮಾರ್ಗದರ್ಶಕನೂ ಹಿತಸಲಹೆ ಕೊಡುವವನೂ ಎಂದು ವಿವರಿಸಲಾಗಿದೆ ಅವನು ಇಚ್ಛೆಬಟ್ಟಾಗ ಯಾವ ಸಭೆಗೂ ಹಾಜರಾಗಬಹುದು, ಯಾವ ಪ್ರತಿನಿಧಿ ಇಲ್ಲವೆ ಇತರ ಸಭೆಗಳನ್ನೂ ಕರೆಯಬಹುದು.

ನಿರಂಕುಶಾಧಿಕಾರಿಗಳ ಭಾಷೆಯಲ್ಲಿ ಅವನೊಬ್ಬ ಸರ್ವಾಧಿಕಾರಿ ಪ್ರಜಾಪ್ರಭುತ್ವ ಭಾಷೆಯಲ್ಲಿ ಅವನೇ ಉನ್ನತ ವರಿಷ್ಠಮಂಡಳ ಇಲ್ಲವೆ ಹೈಕಮಾಂಡ್ ಇದ್ದ ಹಾಗೆ. ಈ ಮಹಾವರಿಷ್ಠನಿಗೆ ಒಬ್ಬ ಉತ್ತರಾಧಿಕಾರಿಯಿರಬೇಕಾಗುತ್ತದೆ. "ಸಾರ ಸಂಘ ಚಾಲಕನು ತನ್ನ ಉತ್ತರಾಧಿಕಾರಿಯನ್ನು ಅವಶ್ಯ ಬಿದ್ದಾಗ ತಾನೇ ನೇಮಿಸುವನು. ಇದಕ್ಕೆ ಕೇಂದ್ರ ಕಾರ್ಯಕಾರಿ ಸಮಿತಿಯ ಸಮ್ಮತಿಯೂ ಬೇಕು."

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ 1

ಮೂಲಧನ (ತೆತ್ತುದ್ದು) ರೂ 10,00,000

ಜೀವಸಿಮೆಯ ಫಂಡು ರೂ. 12,00,000 (ಮಿಕ್ಕಿದೆ)

~~ಮೊದಲಿನ ವರ್ಷದ ವಹೌಲ್ಯ ನಿರ್ಣಯ~~

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ತಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ. 5-0 0ರಂತೆ ರಿನರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನೂ, ಆಡಳಿತ ಮಂಡಳಿಯನ್ನೂ ಅಭಿನಂದಿಸುತ್ತೇನೆ ಅವರ ದೂರದರ್ಶತದ್ದ ನಿಪುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವದೆಂದು ಹೇಳುತ್ತೇನೆ

ವಿ. ಎಚ್ ವೋರಾ, F I. A.

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಭೂಷಣಕುಮಾರ್ ಕೂಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

ಭಾರತದ ನಿರ್ಣಯದಿಂದ ಬ್ರಿಟನಿಗೆ ಲಾಭ

ಕೊಮನ್‌ವೆಲ್ತಿನಲ್ಲಿ ಉಳಿಯುವುದೇಕೆ?

ವಸಾಹತು ಮಂತ್ರಿಗಳ ಪರಿಷತ್ತು ಲಂಡನ್ನಿನಲ್ಲಿ ಆರೇಳು ದಿನಗಳ ತನಕ ಜರಗಿತು. ಆ ಅವಧಿಯಲ್ಲಿ ಬ್ರಿಟನಿನ ಮತ್ತಿತರ ವಸಾಹತುಗಳಲ್ಲಿ ಪತ್ರಿಕೆಗಳೂ ಸಾರ್ವಜನಿಕರೂ ಮತ್ತು ಜನತಾ ದುರೀಣರೂ ಎಲ್ಲರೂ ಒಂದು ತರದ ಸಂದೇಹಾಸ್ಪದ ಮೌನವನ್ನು ತಾಳಿದ್ದರು ಮತ್ತೆ ಆ ಪರಿಷತ್ತಿನ ನಿರ್ಣಯಗಳ ಕುರಿತು ಅಧಿಕೃತ ಪ್ರಕಟಣೆಯು ಹೊರ ಬಿದ್ದಾಕ್ಷಣ ಎಲ್ಲಾ ಕಡೆಗಳಲ್ಲೂ ಒಂದು ಸಂಕಷ್ಟ ಪರಿಹಾರವನ್ನು ಸೂಚಿಸುವ ವಿಶ್ವಾಸವು ಬಿಡಲ್ಪಟ್ಟಿತು ಬ್ರಿಟನಿನ ಲ್ಲಿಂತೂ ಆ ನಿಶ್ವಾಸದಲ್ಲಿ ಒಂದು ತರದ ನಿಗೂಢ ಸಂತೋಷವು ತುಂಬಿದುದು ಗಮನಕ್ಕೆ ಬರುತ್ತಿತ್ತು.

ಭಾರತವು ಆಯರ್ಲೆಂಡಿನ ಆದರ್ಶವನ್ನು ಅನುಸರಿಸಿ ತಾನೊಂದು ಸಂಪೂರ್ಣವೂ ಸ್ವತಂತ್ರವೂ ಆದ ಪ್ರತ್ಯೇಕ ದೇಶವೆಂದು ಕೊಮನ್‌ವೆಲ್ತ್ ಬಾಂಧವ್ಯದಿಂದ ತಪ್ಪಿಸಿ ಕೊಳ್ಳುತ್ತಿದ್ದರೆ ಬ್ರಿಟನಿನಲ್ಲಿ ತುಂಬಾ ಹೃದಯ ವೇದನೆಯುಂಟಾಗುತ್ತಿತ್ತು. ಆದರೆ ಪಂಡಿತ್ ನೆಹರುಗಳ ರಾಜತಂತ್ರ ಜಾಣ್ಮೆಯಿಂದ ಹಿಂದೂಸ್ಥಾನವು ಕೊಮನ್‌ವೆಲ್ತಿನೊಳಗೆ ಉಳಿಯುವಂತಾಗಿ ಇತರ ವಸಾಹತುಗಳೊಡನೆಯೂ ಸಂಬಂಧ ಇಟ್ಟುಕೊಳ್ಳುವಂತಾದುದು ಬ್ರಿಟನಿನಲ್ಲಿ ಎಲ್ಲರಲ್ಲೂ ಭಾರತದ ಮತ್ತು ಅದರ ಮುಖ್ಯ ಪ್ರಧಾನರ ಕುರಿತು ಹೆಮ್ಮೆಯನ್ನುಂಟು ಮಾಡಿತು

ಬ್ರಿಟನಿನಲ್ಲಾದರೂ ಎಟ್ಲಿಯವರಂತಹ ದೂರ ದರ್ಶಿತ್ವದ ಮಂತ್ರಾಲೋಚಕರಿದ್ದಿರುವುದಿದ್ದರೆ ಮತ್ತು ಹಿಂದಿನಸರಂತೆ ಎಲ್ಲರೂ ಸಂಕೋಚ ಮನೋಬಾವನೆಯವರಾಗಿರುತಿದ್ದರೆ ಕಳೆದು ಹೋದ ಸಾಮ್ರಾಜ್ಯದ ಕುರಿತು ನಿರರ್ಥಕವಾದ ಒಣ ಹೆಮ್ಮೆ, ದರ್ಪಗಳು ತೋರಿಸಲ್ಪಡುತಿದ್ದುವು ವಸಾಹತು ಮುಖ್ಯ ಪ್ರಧಾನರ ಪರಿಷತ್ತು ಕೂಡಿ ಮುಟ್ಟುತ್ತಿರುವಾಗಲೇ ಹಿಂದೂಸ್ಥಾನದಿಂದ ಎಲ್ಲಾ ಬ್ರಿಟಿಷ್ ಆಡಳಿತ ಕಾಲದ ಯುದ್ಧ ಸ್ಮಾರಕಗಳನ್ನೂ, ಮೂರ್ತಿ ಮಂಟಪಗಳನ್ನೂ ತೆಗೆದು ಹಾಕಬೇಕೆಂಬ ನಿರ್ಣಯದ ಸುದ್ದಿಯು ಪ್ರಕಟವಾಯಿತು ಆಗಲೇ ಭಾರತ-ಬ್ರಿಟನ್ ಸಂಬಂಧವು ಸಂಪೂರ್ಣ ಕಡಿದು ಹೋಗುವುದೆಂದು ಎಲ್ಲಾ ನಿರಾಶಾವಾದಿಗಳು ಎಣಿಸಿದ್ದರು ಪ್ಲಾಸಿ ಮತ್ತಿತರ ಯುದ್ಧ ವಿಜಯಗಳ ಸ್ಮಾರಕವನ್ನು ತೆಗೆದು ಹಾಕುತ್ತಾರೆಂದು ಅನೇಕ ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ವೇದನೆಯಾಯಿತು ಆದರೆ ಈ ರೀತಿ ಮಾಡಲು ಪ್ರೇರೇಪಿತವಾದ ಸದುದ್ದೇಶಗಳನ್ನೂ ಬ್ರಿಟಿಷ್ ಸಾಮಾನ್ಯ ಜನತೆ ಸಹಾನುಭೂತಿಯಿಂದಲೂ ಅರ್ಥಮಾಡಿಕೊಂಡು ಹಿಂದೀ ಜನರ ಸ್ವಾಭಿಮಾನ ಪ್ರೀಯತೆಯ ಕುರಿತು ಮೆಚ್ಚಿಗೆಯನ್ನು ವ್ಯಕ್ತ ಪಡಿಸಿತು

ಬಿಚ್ಚು ಹೃದಯ

ಭಾರತದ ಜನತಾ ಪ್ರತಿನಿಧಿಯಾದ ಪಂಡಿತ್ ಜವಾಹರಲಾಲ್ ನೆಹರುಗಳ ಬಿಚ್ಚು ಹೃದಯದ ನಿವೇದನೆಯೆ ಇತರ ಬಲ್ಲ ರಾಜ ತರಿತ್ರ ಜಾಣ್ಮೆಗಿಂತ ಹೆಚ್ಚಾಗಿ ಪರಿಣಾಮಕಾರಿಯಾಯಿತು. ರಾಜನೊಬ್ಬನನ್ನು ಮಾನಿಸುವ ವಸಾಹತುಗಳಿಗೂ ರಾಜನಿಲ್ಲದ ಪ್ರಜಾವ್ಯಭುತ್ವಕ್ಕೂ ನಂಟು ಹೇಗೆ ಸಾಧ್ಯ! ಎಂಬುದೇ ಎಲ್ಲ ರಾಜಕೀಯ ತಜ್ಞರ ಪ್ರಶ್ನೆಯಾಗಿತ್ತು. ಆದರೆ ಎಲ್ಲಾ ವಸಾಹತು ಪ್ರತಿನಿಧಿಗಳೂ ವಿಶಾಲ ಹೃದಯದಿಂದ ಭಾರತದ ಸ್ಥಾನಮಾನಗಳನ್ನು ಗ್ರಹಿಸಿಕೊಂಡಿದ್ದರಿಂದ ಸಮಸ್ಯೆಯು ಸಂತೃಪ್ತಿಕರವಾಗಿ ಬಗೆಹರಿಯಿತು ಭಾರತವು ಸರ್ವಸ್ವತಂತ್ರ ಪ್ರಜಾವ್ಯಭುತ್ವವಾಗುವುದರ ಉದ್ದೇಶದ ಸದಾಶಯವನ್ನು ಎಲ್ಲರಿಗೂ ಮನವರಿಕೆಯಾಗಿತ್ತು ವಸಾಹತು ಮಂಡಳದೊಳಗೆ ರಿಪಬ್ಲಿಕ್ (ಪ್ರಜಾವ್ಯಭುತ್ವ ಬದ್ಧವಾದ) ಭಾರತವು ಉಳಿಯುವುದು ಅದೆಷ್ಟು ಅಸಮಂಜಸವೊ, ಅದೀ ರೀತಿ ವಿದೇಶಿ ಅರಸನೊಬ್ಬನಿಗೆ, ವಿರುದ್ಧ ಸಂಸ್ಕೃತಿ, ಇತಿಹಾಸಗಳುಳ್ಳ ಅರಸನಿಗೆ ಭಾರತವು ವಿಧೇಯವಾಗಿರುವ ಅಪ್ಪೇ ಅಸಮರ್ಪಕವೆನಿಸುವುದು ಬಿಟಿಷ್ ಸಾಂಪ್ರದಾಯ ಬದ್ಧವಾದ ವಸಾಹತುಗಳು ಇಂತಹದೇ ಪರಿಸ್ಥಿತಿಯಲ್ಲಿ ಒಬ್ಬ ಹಿಂದೀ ರಾಜನಿಗೆ ವಿಧೇಯತೆಯನ್ನು ಸಲ್ಲಿಸುವೇಕೆಂದೂ ಹೇಳಿದರೆ ಹೇಗಾಗುತ್ತಿತ್ತು ಎಂಬುದನ್ನು ಗ್ರಹಿಸಿದರೆ ಬಾರತದ ಕೇಳಿಕೆಯು ಸ್ಪಷ್ಟವಾಗುವುದ

ಈ ಸ್ವದೇಶದಲ್ಲೇ ವಸಾಹತು ಮಂಡಳದ ರಾಜ್ಯಸಂಬಂಧವೆಂಬ ಸಂಬಂಧನೆಗಳು ತಮ್ಮ ವಿಶಾಲಗೊಳಿಸಲರ್ಹವಾಗಿವೆ ಎಂಬ ತಮ್ಮ ಗುಣವನ್ನು ಪ್ರದರ್ಶಿಸಿದಂತಾಯಿತು ಎಲ್ಲರಿಗೂ ಸಂತೃಪ್ತಿಯನ್ನುಂಟುಮಾಡುವಂತೆ ವಸಾಹತುಗಳೆಲ್ಲಾ ಸರಸ್ಪರ ಸಂಬಂಧವೂ ಮತ್ತು ಅವುಗಳೆಲ್ಲವುಗಳೆಡೆಗಿನ ಬ್ರಿಟಿಷ್ ರಾಜರ ಸಂಬಂಧವೂ ನಿರ್ಣಯಿಸಲ್ಪಟ್ಟಿತು

1931ರಲ್ಲಿ ವಸಾಹತು ಮಂಡಳದ ಸಂಯುಕ್ತ ಸಂಸ್ಥಾನವು ಕೆಲವು ಸ್ಥಳವಾದ ಮೂಲತತ್ವ ಬಂಧನಗಳಲ್ಲಿ ರಚಿತವಾಯಿತು ಇವುಗಳ ವಿಶಾಲ ಅರ್ಥವನ್ನು ಚಾತುರ್ಯ ಪೂರ್ಣವಾದ ವಿವರಣೆಯಿಂದ ನಿರೂಪಿಸಿ ವಸಾಹತು ಮಂತ್ರಿಗಳ ಪರಿಷತ್ತಿನ ನಿರ್ಣಯವನ್ನು ವಿಶದ ಪಡಿಸಲಾಯಿತು ಇದೊಂದು ಗಣನೀಯ ಸಂಗತಿ

ವಸಾಹತು ಮಂಡಳದ ನಿಬಂಧನೆಗಳ ಪ್ರಕಾರ ಎಲ್ಲಾ ವಸಾಹತುಗಳೂ ಅರಸನಿಗೆ "ವಿಕಸಮಾನವಾದ ವಿಧೇಯತೆಯನ್ನು ಸಲ್ಲಿಸಬೇಕೆಂದಿದೆ" ಆದರೆ ಅದನ್ನು ಜಾಣ್ಮೆಯಿಂದ ವಿವರ್ತಿಸಿ ಅರಸನನ್ನು "ಸ್ವತಂತ್ರ ಸಂಘಟನೆ ಸಹಕಾರದ ಸಂಕೇತ" ವಾಗಿ ವಿವರಿಸಲಾಯಿತು ಪ್ರಜಾವ್ಯಭುತ್ವ ಭಾರತವನ್ನು ಈ ಮುಂಡಳದೊಳಗೆ ಸೇರಿಸಿಕೊಳ್ಳಬೇಕಾದರೆ ಅರಸನಿಗೆ ವಿಧೇಯತೆ ಸಲ್ಲಿಸುವ ಕಲಮನ್ನು ತೆಗೆದು ಹಾಕಲೇ ಬೇಕಾಗುವುದು ಕಾರಣ ಪ್ರಜಾವ್ಯಭುತ್ವದಲ್ಲಿ ದೇಶ ಪ್ರತಿನಿಧಿಗಳು ರಾಷ್ಟ್ರಾಧ್ಯಕ್ಷನಿಗೇ ವಿಧೇಯತೆಯನ್ನು ಸಲ್ಲಿಸಬೇಕಲ್ಲದೆ ಇನ್ನಿತರರಿಗೆ ಅಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಬ್ರಿಟೀಷ್ ಅರಸನನ್ನು ವಸಾಹತುಗಳ ಮುಖ್ಯ ಸ್ವನಂತಿರುವ ಸಂಕೇತವೆಂದು ಇತ್ಯರ್ಥಿಸಲಾಯಿತು

ಭಾರತಕ್ಕೆ ಸಹಾಯ

ಹಿಂದೂಸ್ಥಾನವ ವಿಶೇಷ ಪರಿಸ್ಥಿತಿಯಿಂದಾಗಿ ವಸಾಹತುಗಳ ಸಂಬಂಧ ವಿವರಣೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕಾಯಿತಾದರೂ ಇದರಿಂದ ವಸಾಹತುಗಳ ವ್ಯವಹಾರ ಸಹಕಾರಗಳ ಸಂಬಂಧದಲ್ಲಿ ಯಾವ ವ್ಯತ್ಯಾಸವೂ ಉಂಟಾಗಲಿಲ್ಲ ವಾಣಿಜ್ಯ ವ್ಯವಹಾರದಲ್ಲಿ ಭಾರತಕ್ಕೆ ಹಿಂದಿನಂತೆ ವಸಾಹತು ಸದಸ್ಯರಿಗೆ ಯೋಗ್ಯವಾದ ಎಲ್ಲಾ ತರದ ಸಹಾಯಗಳೂ ಕೊಡಲ್ಪಡುವವು ಹಿಂದೀ ಪ್ರಜೆಗಳಿಗೆ ಎಲ್ಲಾ ವಸಾಹತುಗಳಲ್ಲೂ ಸಮಾನ ನಾಗರಿಕ ಹಕ್ಕು ಬಾಧ್ಯತೆಗಳು ಕೊಡಲ್ಪಡುವವು.

ಎಟ್ಲಿ ನೆಹರು ಹೇಳಿಕೆಯಿಂದ ಬೇರೆ ಕೆಲವು ಸಂದೇಹಗಳು ಉತ್ಪನ್ನವಾಗಿವೆ. ಆ ಹೇಳಿಕೆಯಲ್ಲಿ ಭಾರತವು ವಸಾಹತು ಮಂಡಳದ ಸದಸ್ಯವಾಗಿಯೇ "ಮುಂದರಿಯುವುದು" ಎಂದಿದೆ ಇದರಿಂದ ಮುಂದೆ ಸ್ವಲ್ಪ ಸಮಯದ ತನಕವಾದರೂ ಆಯರ್ಲೆಂಡಿನಂತಹ ಮಾಜಿ ವಸಾಹತಿಗೆ ಪುನಃ ಈ ಮಂಡಳದಲ್ಲಿ ಸೇರಲು ಆಗುವದಿಲ್ಲ. ಇದು ತನಕ ಸದಸ್ಯ ವಸಾಹತಾಗಿ ಇರದ ಬೇರೆ ಯಾವ ರಾಷ್ಟ್ರವೂ ಈ ಮಂಡಳದೊಳಗೆ ಹೊಸದಾಗಿ ಸೇರಿಸಲ್ಪಡಲಿಕ್ಕೂ ಸಾಧ್ಯವಿಲ್ಲ ಆದರೆ ಈ ದಿಶೆಯಲ್ಲಿ ಬಾಗಿಲು ಮುಚ್ಚಿದಂತಾಗಿದ್ದರೂ ಅದು ಸಂಪೂರ್ಣ ಬೀಗವು ಜಿಗೆ ಒಳಗಾಗಿಲ್ಲವೆಂದು ಕೆಲವು ಪಟನಾಯಜ್ಞರ ಅಭಿವ್ಯಾಯವಿದ ಸದ್ಯದಲ್ಲೇ ಸ್ವತಂತ್ರವಾಗಲಿರುವ ಇತರ ಅನ್ಯ ಬ್ರಿಟಿಷ್ ವಸಾಹತು ದೇಶಗಳಿಗೆ ಈ ಹೊಸ ಮಂಡಳವು ಮುಕ್ತದ್ವಾರವಾಗಿದೆಂದು ಊಹಿಸಲಾಗುತ್ತದೆ

ಅರ್ಧ ವಿಧೇಯತ್ವ

ಕೆಲವು ಟೋರಿ ಪಕ್ಷದ ಪತ್ರಿಕೆಗಳು ಮಾತ್ರ ಭಾರತ ಬ್ರಿಟನಿನ ಈ ಹೊಸ ಸಂಬಂಧವನ್ನು ಸಂದೇಹಾಸ್ಪದ ಅಭಿವ್ಯಾಯದಿಂದ ಕಂಡವು ಟೈಮ್ಸ್ ಪತ್ರಿಕೆ ಮಾತ್ರ ಉಗ್ರ ಸಾಮ್ರಾಜ್ಯವಾದಿಗಳೂ ಹೃತ್ಪೂರ್ವಕ ಸ್ವಾಗತಿಸಿದ ಈ ಹೊಸ ವಿನ್ಯಾಸವನ್ನು ಅವರ ಪತ್ರಿಕೆಯೇ ಕೆಲ ಪತ್ರಿಕೆಗಳು ಟೀಕಿಸಿದುವು "ಇದು ಸ್ಪಲಿಂಗ್ ಹಣ ಪಡೆಕೊಳ್ಳುವರೆ ಭಾರತ ಮುತ್ಸದ್ದಿಗಳ ಉಪಾಯ" ವೆಂದು ಕೆಲವು, "ಇದು ಅರ್ಧ ವಿಧೇಯತ್ವದ ಒಪ್ಪಂದ" ವೆಂದು ಕೆಲವು ನಿರೂಪಿಸಿದವು ಆದರೆ ಪ್ರಗತಿಪರವೂ ವಿಚಾರಶೀಲವೂ ಆದ ಪತ್ರಿಕೆಗಳು "ಏನೂ ಇಲ್ಲದಿರುವುದಕ್ಕಿಂತ ಅರ್ಧ ವಿಧೇಯತ್ವವು ಮೇಲು" ಎಂದು ಸೂಚಿಸಿ ಮೆಚ್ಚುಗೆ ವ್ಯಕ್ತಪಡಿಸಿದುವು.

ಟೋರಿ ಪತ್ರಿಕೆಗಳು ಇನ್ನೊಂದು ಪ್ರಶ್ನೆಯನ್ನು ಕೇಳಿವೆ, "ಒಂದು ವೇಳೆ ಭಾರತದ ಮೇಲೆ ಯಾರಾದರೂ ಯುದ್ಧ ಮಾಡಿದರೆ ಇತರ ವಸಾಹತುಗಳು ಕೂಡಲೇ ಅದರ ಸಹಾಯಕ್ಕೆ ಬರುವವು. ಆದರೆ ಬೇರೆ ಯಾವದಾದರೊಂದು ವಸಾಹತು ಯುದ್ಧ ದಾಳಿಗೊಳಗಾದರೆ ಭಾರತವು ಇತರ ವಸಾಹತುಗಳೊಡನೆ ಸೇರಿ ಅದರ ಸಹಾಯಕ್ಕೆ ಬರುವುದೆ? ಭಾರತವು ಪ್ರಜಾವ್ಯಭುತ್ವದ ವರವಾಗಿ ಹೋರಾಡಲು ಯಾವಾಗಲೂ ಸಿದ್ಧವಾಗಿದೆಂದು ಎಷ್ಟೋ ಸಲ ಹೇಳಲ್ಪಟ್ಟಿದೆ. ಕೇವಲ ವಸಾಹತು ಸದಸ್ಯ ರಾಷ್ಟ್ರದ ವರವಾಗಿ ಮಾತ್ರವಲ್ಲ, ಪ್ರಜಾವ್ಯಭುತ್ವ ರಕ್ಷಣೆಗೆ ವಿಶ್ವದ ಯಾವ ಕಡೆಗೂ ಅದು ತನ್ನ ಸಾಧ್ಯವಿದ್ದ ಸಹಾಯವನ್ನು ಕೊಡಲು ಯಾವಾಗಲೂ ಸಿದ್ಧವಾಗಿದೆ. ಅಂದು ಏಬಿಸೀನಿಯವು ಫಾತಗೊಂಡಾಗ್ಯೂ ಪ್ರಜಾವ್ಯಭುತ್ವನಾದ ಸ್ವೈನು ಸರ್ವಾಧಿಕಾರಿಗಳಿಂದ ನೊಂದಾಗ ಚೀನವು ವಿದೇಶಿ ಸೇರಿಕ ದುಶ್ಯಕ್ತಿಗಳಿಂದ ದಾಳಿಗೊಳಗಾದಾಗ ಭಾರತವು ಒಂದಲ್ಲ ಒಂದು ತರದಲ್ಲಿ 'ತನ್ನ ಸಹಾಯ ಸಹಾನುಭೂತಿಗಳನ್ನು ವ್ಯಕ್ತಪಡಿಸಿತು ಆದುದರಿಂದ ಭಾರತದ ಈ ಉದ್ದೇಶದ ಕುರಿತು ಇತರ ಯಾವ ವಸಾಹತು ಪ್ರತಿನಿಧಿಗಳೂ ಬರಹ ಮೂಲಕ ಒಪ್ಪಿಗೆಯನ್ನು ಕೇಳಲಿಲ್ಲ. ಭಾರತದ ಸುಹೃದಯತೆಯ ಅದರಿಗೆ ಚೆನ್ನಾಗಿ ತಿಳಿದಿದೆ

ಕಳೆದ ಯುದ್ಧದಲ್ಲಿ ಬ್ರಿಟನಿನ ಅಪ್ತ ಮಿತ್ರ ನೆರೆಕರೆಯ ವಸಾಹತುಗಳಾದರೂ ಸಂಪೂರ್ಣ ಮನಸ್ಸಿನಿಂದ ಸಹಾಯ ನೀಡಿರುವನೆ? ದಕ್ಷಣ ಆಫ್ರಿಕವು ಒಂದೇ ಒಂದು ವೋಟಿನ ಬಹುಮತದಿಂದ ಯುದ್ಧದಲ್ಲಿ ಭಾಗವಹಿಸಲು ಒಪ್ಪಿತು. ಅಂದರೆ ಅಲ್ಲಿನ ಅರ್ಧಕ್ಕೆ ಅರ್ಧಂಕದಷ್ಟು ಜನರು ವಿರುದ್ಧವಾಗಿದ್ದರೆಂದು ಸ್ಪಷ್ಟವಾಗುತ್ತದೆ ಅತೀ ಸವಿಸಾದ ಅಯರ್ಲೆಂಡು ಬ್ರಿಟಿನಿನೊಡನೆ ಸೇರದೆ ತಾಟಸ್ಥ್ಯ ವಹಿಸಿತು ಅಂದಮೇಲೆ ಭಾರತದ ಕುರಿತು ಇವೆಲ್ಲಂದು ಆಸಕ್ತಿ ಏಕೆ? ಭಾರತದಲ್ಲಿ ವಿಪುಲವಾದ ಧನ, ಜನ ಶಕ್ತಿಯಿದೆಯೆಂದು ಎಲ್ಲರಿಗೂ ತಿಳಿದಿದೆ. ಅದು ಖಂಡಿತವಾಗಿ ಸಹಾಯಕ್ಕೆ ಸಿಕ್ಕಿದರೆ ನಿಶ್ಚಿಂತವಾಗಿರಬಹುದೆಂಬ ಉದ್ದೇಶದಿಂದ ಈ ಪ್ರಶ್ನೆ ಕೇಳಲಾಗುತ್ತಿದೆ ಆದರೆ ಆ ವಿಷಯ ಯಾರೂ ಕಳವಳಪಡಬೇಕಾಗಿಲ್ಲ ಶಾಂತಿಗಾಗಿ ಭಾರತವು ಸರ್ವಸ್ವವನ್ನು ಕೊಡಲು ಬದ್ಧ ಕಂಕಣವಾಗಿದೆಂದು ಯಾರೂ ಮರೆಯಬೇಕಿಲ್ಲ.

ಶೀಲ ಶಿಷ್ಟಾಚಾರದ ಫಲ

"ಬ್ರಿಟಿಷ್ ಸಾಮ್ರಾಜ್ಯದ ಗಂಟು ಸಡಿಲಾಯಿತೊ ಭಾರತವು ಸಂಪೂರ್ಣ ಕಳಚಿ ಬೀಳಿದಿರುವುದು ಸುಭಾಗ್ಯ"ವೆಂದು ಲಂಡನಿನ ಇವನಿಂಗ್ ಸ್ಟೆಂಡಾರ್ಡ್ ಪತ್ರಿಕೆ ಬರೆದುದರಲ್ಲಿ ತುಂಬಾ ಅರ್ಥವಿದೆ ಸಾಮ್ರಾಜ್ಯದ ವ್ಯವಹಾರಗಳು ಹಿಂದೆ ಕಾಯಿದೆ ಬದ್ಧವಾಗಿ ನಡೆಯುತಿದ್ದುವು. ಆದರೆ ಮುಂದೆ ಅವು ಸ್ನೇಹ ಸೌಹಾರ್ದದಿಂದ, ಸ್ವೇಚ್ಛೆಯಿಂದ ನಡೆಯುವವು.

ಈಪ ಯುದ್ಧ ಆರಂಭವಾದಾಗ ಬ್ರಿಟಿಷ್ ಆಡಳಿತಗಾರರು ಶಿಷ್ಟಾಚಾರವನ್ನು ನುರಿತುದರ ಫಲವಾಗಿ ಭಾರತ ಸಾಮ್ರಾಜ್ಯವನ್ನೇ ಕಳೆದುಕೊಳ್ಳುವಂತಾಯಿತು. ಆದರೆ ಅವನ್ನೂ ಸಂಪೂರ್ಣ ಬೇರ್ಪಡುವ ಮೊದಲು ಎಟ್ಲಿ ಪಕ್ಷದವರು ಮತ್ತೊಮ್ಮೆ ನಮ್ಮ ವಾದ ಶಿಷ್ಟಸಾಂಪ್ರದಾಯವನ್ನು ಪ್ರದರ್ಶಿಸಿ ಅದನ್ನು ಉಳಿಸಿಕೊಂಡರು ಹಿಂದಿನವರು "ದಯವಿಟ್ಟು ಯುದ್ಧದಲ್ಲಿ ಸೇರಿರಿ" ಎನ್ನುವ ಬದಲು "ಯುದ್ಧದಲ್ಲಿ ಸೇರಲೇಬೇಕೆಂದು" ಅಧಿಕಾರವಾಣಿಯಿಂದ ನುಡಿದರು. ಮತ್ತೆ ಯುದ್ಧದಲ್ಲಿ ಸಹಾಯ ತೆತ್ತರೂ "ಉಪಕಾರ"ವೆಂದು ಯಾರ ಬಾಯಿಯಿಂದಲೂ ಬರಲಿಲ್ಲ. ಎಟ್ಲಿಯವರಾದರೂ ಎಲ್ಲದಕ್ಕೂ ಸನ್ಯಾಸ ಸಮಾನತೆಯಿಂದ ವ್ಯವಹರಿಸಿದರು ಆದುದರಿಂದ ಭಾರತವು ಸಾಮ್ರಾಜ್ಯದಿಂದ ಬೇರ್ಪಟ್ಟರೂ ಸಹಾನುಭೂತಿಯಿಂದ, ಸ್ನೇಹದಿಂದ, ಸಹಕಾರದಿಂದ ದೂರವಾಗಲಿಲ್ಲ.

ಇದು ನೆಹರುಗಳ ಉಜ್ವಲ ವ್ಯಕ್ತಿತ್ವದ ಫಲ. ಭಾರತವು ಈ ಯಶಸ್ಸಿಗಾಗಿ ಅವರನ್ನು ನಿರಂತರವು ಕೊಂಡಾಡದಿರದು. ವಸಾಹತು ಪರಿಷತ್ತಿನ ನಿರ್ಣಯದಿಂದ ಶಾಂತಿ ಸಾಧಕ ಜಗತ್ತಿಗೇ ಸ್ನೇಹ ಸಹಕಾರದ ಹೊಸ ಹಾದಿ ಹಾಕಿಕೊಟ್ಟಂತಾಯಿತು.

ಸ್ವದೇಶಾಭಿಮಾನಿ

ತಾರೀಕು 13—5—1949

ಐ. ಎನ್. ಟಿ. ಯು. ಸಿ.

ಇಂಡಿಯನ್ ನೇಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸಿನ ನರ್ಷಾವಧಿ ಮಹಾಸಭೆ ಇಂಡೋರಿನಲ್ಲಿ ಮೂರು ದಿನಗಳ ತನಕ ನಡೆಯಿತು. ಸರ್ದಾರ ವಲ್ಲಭಭಾಯಿ ಪಟೇಲರು ಈ ಅಧಿವೇಶನಕ್ಕೆ ಬಂದಿದ್ದು ಭಾರತದ ಮಜೂರ ವರ್ಗಕ್ಕೆ ತಮ್ಮ ಹಿತೋಕ್ತಿಯನ್ನಿತ್ತರು.

ಮೆಹಾಸಭೆಯು ಮಂಜೂರು ಮಾಡಿರುವ ಹಲವು ಮುಖ್ಯ ನಿರ್ಣಯಗಳಲ್ಲಿ ಸಂಸ್ಥೆಯ ಉದ್ದೇಶವನ್ನು ವಿವರಿಸುವ ನಿರ್ಣಯವು ತುಂಬಾ ಮಹತ್ವವುಳ್ಳದ್ದು ಆ ನಿರ್ಣಯವು ಈ ರೀತಿ ಇರುತ್ತದೆ "ಸಮಾಜಹಿತಕ್ಕೆ ಭಂಗ ತರುವ ಸಂಪತ್ತಿನ ಕೇಂದ್ರೀಕರಣ ಅಥವಾ ಅಧಿಕಾರದ ಕೇಂದ್ರೀಕರಣ ಹಾಗೂ ಒಬ್ಬರನ್ನೊಬ್ಬರು ಸುಲಿಯುವಿಕೆ ಇಲ್ಲದ, ನ್ಯಾಯವಾದ ಮತ್ತು ಸುಖಮಯವಾದ ಸಾಮಾಜಿಕ ವ್ಯವಸ್ಥೆಯನ್ನು ಸೃಷ್ಟಿಸುವ ಉದ್ದೇಶವುಳ್ಳ ಗಾಂಧೀ ತತ್ವಗಳ ತಳಹದಿಯ ಮೇಲೆ ಭಾರತದಲ್ಲಿಯ ನವಜೀವನವನ್ನು ರೂಪಿಸುವುದು ಈ ಸಂಸ್ಥೆಯ ಮುಖ್ಯ ಧ್ಯೇಯವಿರುತ್ತದೆ"

ಮಹಾತ್ಮಾ ಗಾಂಧಿಯವರಿಗೆ ಮಜೂರ ಚಳವಳಗಳಲ್ಲಿ ವಿಶೇಷ ಆಸಕ್ತಿ ಇತ್ತು. ಅಹ್ಮದಾಬಾದಿನಲ್ಲಿ ಇವರು ಸ್ವತಃ ಮಜೂರ ಮುಂದಾಳಾಗಿ ದುಡಿದು ಮಜೂರ ವರ್ಗಕ್ಕೆ ನಿಜವಾದ ದಾರಿ ತೋರಿಸಿದ್ದರು. ಮೇಲಿನ ಮಜೂರ ಮಹಾಸಭೆಯ ನಿರ್ಣಯದ ನಿಜವಾದ ಅರ್ಥವೆಂದರೆ ಗಾಂಧೀಜಿಯವರು ಮಜೂರರಿಗೆ ಪ್ರತ್ಯಕ್ಷ ತಾನೇ ಕಲಿಸಿಕೊಟ್ಟ ಮಜೂರ ಚಳವಳದ ದಾರಿಯಲ್ಲಿ ಈ ಸಂಸ್ಥೆಯು ನಡೆಯಲು ನಿರ್ಧರಿಸಿರುತ್ತದೆಂಬುದೇ ಇರುತ್ತದೆ

ಸತ್ಯ ಮತ್ತು ಅಹಿಂಸಗಳ ದಾರಿಯಲ್ಲಿ ಮಜೂರರ ಹಿತ ಸಾಧನೆಯ ದಾರಿ ಕೇವಲ ಧ್ಯೇಯವಾದ ಮಾತ್ರವಿರದೆ ಪ್ರತ್ಯಕ್ಷ ವ್ಯವಹಾರದಲ್ಲಿಯೂ ಪರಿಣಾಮಕಾರಿಯಾಗಿತ್ತೆಂಬುದನ್ನು ಅಹ್ಮದಾಬಾದಿನಲ್ಲಿ ಗಾಂಧೀಜಿಯವರು ನಡೆಸಿದ ಮಜೂರ ಚಳವಳದ ಇತಿಹಾಸ ಓದಿದರೆ ಸ್ವಯಂವೇದ್ಯವಾಗುತ್ತದೆ. ಮಹಾಜೇಷ ಹೇಸಾಲಿಯವರು "ಧರ್ಮಯುದ್ಧ"ವೆಂಬ ಹೆಸರಲ್ಲಿ ಈ ಅಮೂಲ್ಯ ಇತಿಹಾಸವನ್ನು ಬರೆದಿಟ್ಟಿದ್ದಾರೆ. ಮಜೂರ ವರ್ಗದಲ್ಲಿ ಓದು ಬರಹ ಬಲ್ಲವರು ಅವಶ್ಯವಾಗಿ ಇದನ್ನು ಓದಬೇಕು.

ಸಾಮ್ಯವಾದಿಗಳೂ ಕಮ್ಯೂನಿಸ್ಟರೂ ತಮ್ಮ ತಮ್ಮ ಧ್ಯೇಯಗಳಂತೆ ಮಜೂರ ಸಂಘಟನೆಗಳನ್ನು ವ್ಯವಸ್ಥೆಗೊಳಿಸಿದ್ದಾರೆ. ಸಾಮ್ಯವಾದ ಹಾಗೂ ಕಮ್ಯೂನಿಜಮ್ ಎಂಬ ವುಗಳು ಗಾಂಧೀವಾದದಂತೆಯೇ ಜೀವನದ ರೀತಿಯನ್ನು ನಿರ್ದಿಷ್ಟ ರೀತಿಯಲ್ಲಿ ರೂಪಿಸುವ ಧ್ಯೇಯವುಳ್ಳವುಗಳಿರುವ ತತ್ವಗಳಿರುವುದರಿಂದ ಅವರವರ ಧ್ಯೇಯಗಳ ಕಡೆಗೆ ಮಜೂರ ವರ್ಗಗಳನ್ನು ಒಲಿಸಿಕೊಂಡು ಇಂಥ ವ್ಯವಸ್ಥೆಗಳನ್ನು ತಂದೊಡ್ಡಲು ಯತ್ನಿಸುವುದರಲ್ಲಿ ಅನ್ಯಾಯವೇನೂ ಇರುವುದಿಲ್ಲ.

ಮಜೂರರ ಸಂಸ್ಥೆಗಳು ಮಜೂರರ ಹಿತವನ್ನೇ ನೋಡಿಕೊಳ್ಳಬೇಕಲ್ಲದೆ ರಾಜಕೀಯ ವಿಚಾರಗಳಲ್ಲಿ ಕೈ ಹಾಕಬಾರದೆನ್ನುತ್ತಾರೆ. ರಾಜಕೀಯ ವಿಚಾರಗಳೂ ಮಜೂರ ಹಿತದ ದೃಷ್ಟಿಯಿಂದ ಮಹತ್ವದ ವಿಷಯಗಳೆಂಬ ವಿಚಾರ ಅಲ್ಲಗಳೆಯುವಂತಿಲ್ಲ. ಯಾವುದೇ ರಾಜಕೀಯ ಪಂಗಡದ ಮುಂದಾಳುಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಮಜೂರ ಚಳವಳಗಳನ್ನು ಉಪಯೋಗಿಸಲು ಬಿಡಲಾಗದೆಂದು ಹೇಳಿದರೆ ಅದು ಸರಿಯಾದ ಮಾತು ರಾಜಕೀಯ ವಿಚಾರವೇ ಮಜೂರರಿಗೆ ಬೇಡವೆಂದರೆ ಆ ಮಾತಿಗೆ ಹೆಚ್ಚು ಅರ್ಥವಿಲ್ಲ

ಈ ದೃಷ್ಟಿಯಿಂದ ಪರಿಶೀಲಿಸಿದರೆ ಕಾಂಗ್ರೆಸ್ ಸಂಸ್ಥೆಯವರು ತಮ್ಮ ಆಶ್ರಯದಲ್ಲಿ ಇಂಡಿಯನ್ ನೇಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ಸನ್ನು ವ್ಯವಸ್ಥೆಗೊಳಿಸಿರುವುದು ಸರಿ ಇರುತ್ತದೆ ಈ ಸಂಸ್ಥೆಗೆ ಹೆಚ್ಚಿನ ಮಜೂರ ಸಂಸ್ಥೆಗಳು ಸೇರಿರುತ್ತವೆಯೆಂಬುದೂ ಸಂತೋಷದ ಸಂಗತಿಯೂ ಇರುತ್ತದೆ

ದಕ್ಷಿಣ ಕನ್ನಡದಲ್ಲಿ ಮಜೂರ ಸಂಘಟನೆ ಆರಂಭಿಸಿದವರು ಸಾಮ್ಯವಾದಿಗಳೆಂದು ಒಪ್ಪಬೇಕು ಮತ್ತೆ ಇಲ್ಲಿಯ ಹೆಚ್ಚಿನ ಮಜೂರ ಸಂಸ್ಥೆಗಳು ಕಾರಣಾಂತರಗಳಿಂದ ಮುಖ್ಯವಾಗಿ ಕೆಲಸಗಾರರ ತಪ್ಪುಗಳಿಂದ ಕಮ್ಯೂನಿಸ್ಟರ ವಶಕ್ಕೆ ಹೋದವೆನ್ನಬಹುದು ಈಗ ಕಾಂಗ್ರೆಸ್ ಸಂಸ್ಥೆಯವರೂ ಈ ಪ್ರಶ್ನೆಯ ಕಡೆಗೆ ಹೆಚ್ಚಿನ ಗಮನ ಕೊಡುವ ಅವಶ್ಯಕತೆ ಕಾಣುತ್ತಿದ್ದಾರೆ ನಮ್ಮಲ್ಲಿಯ ಮಜೂರ ಸಂಸ್ಥೆಯವರು ಇತ್ತೀಚಿನವರೆಗೆ ಕೈಗಾರಿಕಾ ವಿವಾದಗಳನ್ನು ಸಾಮಾನ್ಯವಾಗಿ ತಮ್ಮ ಜೀವನದ ಧ್ಯೇಯಗಳನ್ನು ತಿಳಿವಳಿಕೆ ತಿಳಿಯಲು ಕಲಿತುಕೊಳ್ಳಬೇಕು ಮತ್ತು ತಮ್ಮ ದಾರಿಯನ್ನು ತಾವೇ ನಿರ್ಧರಿಸಿಕೊಳ್ಳಬೇಕು

ಅಸ್ಸಾಮದ ಅಮೂಲ್ಯ ವನಸ್ಪತಿಗಳು

ಶಾಸ್ತ್ರೀಯ ಪರಿಶೋಧನೆಯ ಯತ್ನ

ಅಸ್ಸಾಮು ವೈದ್ಯಕೀಯ ಸಂಸದ ಅಧ್ಯಕ್ಷರಾದ ಡಾ। ಪಿ ದಾಸರವರು ತಮ್ಮ ಸ್ವಾಂತ್ಯದ ಸರಕಾರಕ್ಕೆ ಒಂದು ವರದಿಯನ್ನು ಕಳುಹಿಸುತ್ತಾ, "ಅಸ್ಸಾಮದಲ್ಲಿ ಅಮೂಲ್ಯವಾದ ಔಷಧೀಯ ವನಸ್ಪತಿಗಳಿವೆ. ಅವುಗಳ ಕುರಿತು ಶಾಸ್ತ್ರೀಯ ಪರಿಶೋಧನೆಯನ್ನು ನಡೆಸುವುದಲ್ಲದೆ, ಶಾಸ್ತ್ರೀಯ ರೀತ್ಯಾ ಔಷಧಿಗಳನ್ನು ತಯಾರಿಸಿದರೆ ಸರಕಾರಕ್ಕೆ ಹೇರಳವಾದ ಆರ್ಥಿಕ ಉತ್ಪನ್ನವೂ ದೊರಕುವುದು" ಎಂದು ಸಲಹೆ ಕೊಟ್ಟಿದ್ದಾರೆ. ಅಲ್ಲಿ ಸರಕಾರವು ಈ ಕುರಿತು ಶೀಘ್ರದಲ್ಲೇ ಒಂದು ಕೋಟಿ ರೂಪಾಯಿಯ ಯೋಜನೆಯನ್ನು ತಯಾರಿಸುವುದು. ಆಗಾರ್ ಎಂಬ ಮರಗಳು ಅಸ್ಸಾಮದಲ್ಲಿ ಮಾತ್ರ ದೊರಕುತ್ತವೆ.

ಟೀಕೆ-ಟಿಪ್ಪಣಿಗಳು

ಡಚ್—ಇಂಡೋನೇಶಿಯಾ ರಾಜಿ

ಯುನ್ಯಾಟೆಡ್ ನೇಶನ್ಸ್ ಕಮಿಶನಿನ ಆಶ್ರಯದಲ್ಲಿ ಒಟ್ಟು ಸೇರಿದ ಡಚ್ಚರ ಹಾಗೂ ಇಂಡೋನೇಶಿಯಾ ಪ್ರತಿನಿಧಿಗಳೊಳಗೆ ನಡೆದು ರಾಜಿ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಹಾಕಿರುವುದು ಶುಭವಾರ್ತೆಯೆನ್ನಬೇಕು.

ಇಂಡೋನೇಶಿಯದ ರಿಪಬ್ಲಿಕನ್ ಸರಕಾರ ಜಾರಿಗೆ ತರಲಾಗಬೇಕು ಮತ್ತು ಈ ಸರಕಾರದ ಪ್ರತಿನಿಧಿಗಳು ಮತ್ತು ಡಚ್ಚ ಸರಕಾರದ ಪ್ರತಿನಿಧಿಗಳು ಮುಂದಿನ ಏರ್ಪಾಡುಗಳನ್ನು ದೊಂಡುವೇಜಿನ ಪರಿಷತ್ತು ಜರಗಿಸಿ ನಿರ್ಣಯಿಸಬೇಕು-ಇದು ರಾಜಿಯ ಮುಖ್ಯ ಸಾರಾಂಶ

ಇಂಡೋನೇಶಿಯ ಮುಂದಾಳುಗಳೆಲ್ಲರೂ ಇದಕ್ಕೆ ಒಪ್ಪುವರೆಂದು ನಿರೀಕ್ಷಿಸಬೇಕಾಗಿದೆ

ಡಚ್ಚ ಸರಕಾರ ಕೊನೆಗಾದರೂ ನ್ಯಾಯದ ದಾರಿಗೆ ಬಂದಿತೆಂಬುದು ತೃಪ್ತಿಕರವಿರುತ್ತದೆ

ಈ ರಾಜಿ ಸಾಧಿಸಲು ಯು ನ್ಯಾಟೆಡ್ ನೇಶನ್ಸ್ ಕಮಿಶನಿನಲ್ಲಿದ್ದ ಅಮೇರಿಕನ್ ಪ್ರತಿನಿಧಿಯಾದ ಮಿಸ್ಟರ್ ಕೆಂಟರವರು ಬಹಳ ನಯ ಮತ್ಸರದಿಂದ ವರ್ತಿಸಿ ಬರುತ್ತಿದೆ

ಜಫರುಲ್ಲಾರ್ ಚರ್ಚಿತ ಚರ್ವಣ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫರುಲ್ಲಖಾನರು ಹೈದರಾಬಾದಿನ ಪ್ರಶ್ನೆಯನ್ನು ಪುನಃ ಯು ನ್ಯಾಟೆಡ್ ನೇಶನ್ಸ್ ರು ವಿಚಾರಿಸುವೆಂಬ ಸುದ್ದಿಯನ್ನು ಪತ್ರಿಕೆಗಳಿಗೆ ಪತ್ರ ಕಳುಹಿಸಿದ್ದಾರಂತೆ ಈ ಸಮಯ ಮುಂದೆ ಪರರು ಕಾಲ ಹಿಸಿದ ಸೈನ್ಯಾಮರು ತನ್ನ ದರ್ಶನವನ್ನು ಹಿಂದಕ್ಕೆ ಪಡೆದು ಎಷ್ಟೋ ಕಾಲವಾಯಿತು ಹೈದರಾಬಾದಿನ್ನು ಪೊಸ ಆಡಳಿತ ಆರಂಭವಾಗಿ ಈಗ ಅಶಾಂತಿಯೆಲ್ಲಿ ಸಂಗಿ ಶಾಂತಿ ಸ್ಥಾಪನೆಯಾಗಿರುತ್ತದೆ ಈ ಪ್ರಶ್ನೆ ಈಗ ಪುನಃ ಎತ್ತಲಿಕ್ಕೆ ನಡೆಯುವ ಈ ಪ್ರಯತ್ನಕ್ಕೆ ಏನು ಹೇಳಬೇಕು?

ಹೈದರಾಬಾದಿನಲ್ಲಿ ಮುಸ್ಲಿಮರ ಪರಿಸ್ಥಿತಿ ತೀರ ಕೆಟ್ಟು ಹೋಗಿದೆಯೆಂದು ಜಫರುಲ್ಲಾರವರು ಉದ್ಗಾರವೆತ್ತುತ್ತಾರೆ ಹೈದರಾಬಾದಿನ ಮುಸಲ್ಮಾನರಾದರೊ ನಮ್ಮ ಹಿತ ನಾನೇ ನೋಡಿಕೊಳ್ಳುತ್ತೇನೆ, ನಮಗೀಗ ಕೊಂದರೆ ಇಲ್ಲ ದೂರವಲ್ಲಿ ನಿಂತು ಇತರರು ನಮ್ಮ ಹಿತಸಾಧನೆಗೆ ಬರಬೇಕಾಗಿಲ್ಲವೆಂದು ಇವರು ಜಫರುಲ್ಲಾರಿಗೆ ಉತ್ತರ ಕೊಟ್ಟಿರುತ್ತಾರೆ

ಪಾಕಿಸ್ತಾನ ಮತ್ತು ಭಾರತಗಳೊಳಗೆ ಮೈತ್ರಿ ಬೆಳೆಸುವ ಯತ್ನಗಳು ಹಿಂದೆಡೆಯಿಂದ ನಡೆಯುತ್ತಿರುವಾಗ ಪಾಕಿಸ್ತಾನದ ವಿದೇಶಾಂಗ ಮಂತ್ರಿಯವರು ಈ ರೀತಿ ಉಪಟಳ ಎಬ್ಬಿಸಹೋಗುವ ಈ ರಾಜನೀತಿ ವಿಚಿತ್ರವೆಂದರೆ ಸಾಕು.

ಹಿಂದೂ ಮಹಾಸಭೆ

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯವರು ತಮ್ಮ ಸಂಸ್ಥೆ ಪುನಃ ರಾಜಕೀಯ ರಂಗದಲ್ಲಿ ಭಾಗವಹಿಸಬೇಕೆಂದು ನಿರ್ಧಾರ ಮಾಡಿರುತ್ತಾರೆ.

ಮಾತ್ರವಲ್ಲ ಭಾರತವು ಕಾಮನ್‌ವೆಲ್ತಿನ ಸದಸ್ಯತನ ಇಟ್ಟುಕೊಂಡು ಮುಂದರಿಸಲು ಮಾಡಿರುವ ತೀರ್ಮಾನ ಬಹಳ ದೊಡ್ಡ ತಪ್ಪೆಂದೂ ಒಂದು ನಿರ್ಣಯ ಮಾಡಿರುತ್ತಾರೆ

ಮಹಾತ್ಮಾ ಗಾಂಧಿಯವರ ಕೊಲೆ ನಡೆದಾಗ ಜಾತೀಯ ಸಂಸ್ಥೆಗಳ ಮೇಲೆ ಪ್ರಜಾವರ್ಗ ರೇಗಿದ್ದಾಗ ಹಿಂದು ಮಹಾಸಭೆ ಬೇಗಬೇಗನೆ ಬಾಗಿಲು ಮುಚ್ಚಿ ತಾವು ಕೇವಲ ಸಾಂಸ್ಕೃತಿಕ ಚಳವಳದಿಂದ ತೃಪ್ತರಾಗುತ್ತೇವೆಂದರು ಈಗ ಚುನಾವಣೆಗಳ ಕಾಲ ಸನ್ನಿಹಿಸಿದಂತೆ ಇದರ ಮುಂದಾಳುಗಳಿಗೆ ಪುನಃ ರಾಜಕೀಯ ರಂಗಕ್ಕೆ ಬರುವ ಉತ್ಸಾಹ ಬಂದಿರುವುದು ಅಸ್ವಾಭಾವಿಕವಲ್ಲ

ಹಿಂದೂ ಮಹಾಸಭೆಯು ಈ ಜಾತೀಯ ರಾಜಕೀಯ ಚಳವಳ ಎಷ್ಟೇ ತಪ್ಪಿದ್ದರೂ ಅವರು ಎಲ್ಲಿಯ ತನಕ ದೇಶದ ಶಾಸನಗಳ ಒಳಗೆ ಕಾಯದೆ ಶಿರ ದಾರಿಯಿಂದ ನಡೆಯುವರೋ ಅಲ್ಲಿಯ ತನಕ ಅವರಿಗೆ ಅವರ ಅಭಿಪ್ರಾಯದಂತೆ ನರ್ತಿಸಲು ಬಿಡುವುದೇ ಪ್ರಶಸ್ತ ಕ್ರಮವಿರುತ್ತದೆ

ಅವರ ಧ್ಯೇಯಗಳನ್ನು ಅವರ ಕಾರ್ಯಕ್ರಮಗಳನ್ನು ಜನತೆಯೆದುರು ಬಿಚ್ಚಿಸಿ ಧ್ಯೇಯವಿಚಾರಗಳಲ್ಲಿ ಜನತೆಯು ತಪ್ಪು ಅಭಿಪ್ರಾಯಗಳಿಗೆ ಒಳಗಾಗದಂತೆ ನೋಡಿಕೊಳ್ಳಬೇಕಾದ ಕರ್ತವ್ಯ ಸರಕಾರದ್ದು

ಮತ್ತೆ ಒಂದು ತ್ಯಾಗದ ಬಲಿಯನ್ನು ಕೈಕೊಳ್ಳಬೇಕಾಗಿ ಬರುವಷ್ಟರ ಮಟ್ಟಿಗೆ ಯಾವುದೇ ಸಂಸ್ಥೆಯು ಸಂಘಟಿಸಲ್ಪಟ್ಟಿರಬಾರದು ಎಂಬ ಪ್ರಜ್ಞೆ ಸ್ಥಾಪಿತವಾಗಿರಬೇಕು ಎಂಬುದನ್ನು ಎಲ್ಲರೂ ತಿಳಿಯುವಂತೆ ಸಾಗಿಸಬೇಕಾದ ಅನಿವಾರ್ಯತೆ ಇಲ್ಲ

ಗಣಪತಿ ವಧೆ

ನಲಿಯಮೆಲ್ಲಿ ಎಸ್ ಆರ್ ಗಣಪತಿ ಎಂಬ ತನಿಳು ದೇಶದನರೊಬ್ಬರು ಮಜೂರ ಮುಂದಾ ಳಿದ್ದರು ಅಲ್ಲಿಯ ಕಾನೂನಿಗೆ ವಿರೋಧವಾಗಿ ಇವರ ಬಳಿ ಒಂದು ರಿವೋಲ್ವರ್ ಸಿಕ್ಕಿತಂತೆ ಈ ತಪ್ಪಿಗೆ ಅಲ್ಲಿ ಮರಣ ದಂಡನೆ ಶಿಕ್ಷೆಯಂತೆ ಗಣಪತಿಯವರಿಗೆ ಈ ಶಿಕ್ಷೆ ವಿಧಿಸಲಾಯಿತು

ಇವರ ಮೇಲಿನ ಆರೋಪ ಸರಿಯಾಗಿ ರುಜುವಾತಾಗಿದೆಯೋ ಇಲ್ಲವೊ ಸಂಶಯ. ಈ ಕುರಿತು ಸರಿಯಾದ ನಿಜಾರಣೆ ನಡೆಸಬೇಕೆಂದು ಭಾರತ ಸರಕಾರ ಕೇಳಿತು. ಅಲ್ಲಿಯ ಸುಲ್ತಾನನ ಸ್ಥಳೀಕ ಆಡಳಿತ ನಿಜವಾಗಿ ನಡೆಯುವುದು ಬ್ರಿಟಿಷ ಸರಕಾರದ ಬೆಂಬಲದಿಂದ ಎಂಬುದರಿಂದ ಇಲ್ಲಿ ನಡೆಯುವ ವಿದ್ಯಮಾನಗಳ ನಿಜವಾದ ಜವಾಬ್ದಾರಿಯಿರುವ ಬ್ರಿಟಿಷ ಸರಕಾರದ ಮೇಲೆ. ಹೀಗಾಗಿ ಭಾರತ ಸರಕಾರವು ಈ ಪ್ರಶ್ನೆಯ ಕುರಿತು ಬ್ರಿಟಿಷ್ ಸರಕಾರಕ್ಕೂ ವಿಚಾರಿಸುವಂತೆ ತಿಳಿಸಿತು

ಭಾರತ ಸರಕಾರದ ಈ ವಿನಂತಿಗಳು ನಡೆಯುತ್ತಿರುವಾಗಲೇ ಗಣಪತಿಯವರನ್ನು ಫಾಶಿಗೆ ಕೊಟ್ಟೂ ಆಯಿತು.

ತಂತಿ ಟಪ್ಪಾಲು ನೌಕರರ ಸಮ್ಮೇಳನ

ದಕ್ಷಿಣ ಜಿಲ್ಲೆಯ ಪೋಸ್ಟ್‌ಮೇನ್ ಮತ್ತು ಕೆಳ ನೌಕರರ ಸಂಘದ ವಾರ್ಷಿಕ ಸಮ್ಮೇಳನವೊಂದು ರುಜಾರಿಯೊ ಹ್ಯಾಸ್ಕೂಲಿನಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು.

ಈ ನೌಕರರ ಸಂಘದ ಅಧ್ಯಕ್ಷರೂ ಸಮ್ಮೇಳನದ ಸ್ವಾಗತ ಕಮಿಟಿಯ ಅಧ್ಯಕ್ಷರೂ ಆದ ಶ್ರೀ ಭಾಸ್ಕರ ರೈಯವರು ಸ್ವಾಗತ ಭಾಷಣ ಮಾಡಿದರು.

ಸಂಘದ ಕಾರ್ಯದರ್ಶಿ ರಾಬರ್ಟ ಸಿಕೇರರು ವರದಿ ಒಪ್ಪಿಸಿದರು. ಸಭಿಕರಲ್ಲಿದ್ದ ಶ್ರೀ ಬಿ. ಗಂಗಾಧರ ದಾಸರೂ ಹುರುಳಿ ಭೀಮ ರಾಯರೂ ಮೊದಲಾದವರು ಸಭಿಕರಿಗೆ ಹಿತೋಕ್ತಿ ಹೇಳಿದರು.

ಪೋಸ್ಟ್‌ಮೆನ್ನಿನವರ ಹಾಗೂ ಕೆಳ ನೌಕರರ ಹಲವು ತೊಂದರೆಗಳನ್ನು ವಿವರಿಸಿ ಅವುಗಳನ್ನು ಹೇಗೆ ನಿವಾರಿಸಬಹುದೆಂಬ ಬಗ್ಗೆ ಹಲವು ನಿರ್ಣಯಗಳು ಮಂಜೂರಾದವು

ಮುಂದಿನ ವರ್ಷಕ್ಕೆ ಶ್ರೀ ಭಾಸ್ಕರ ರೈಯವರ ಅಧ್ಯಕ್ಷತೆಯಲ್ಲಿಯೇ ಹೊಸ ಕಾರ್ಯಕಾರೀ ಸಮಿತಿಯ ಏರ್ಪಾಡು ಆಯಿತು

ಆ ಬಳಿಕ ತಂತಿ ಟಪ್ಪಾಲು ಇಲಾಖೆಯ ಮೇಲಿನ ನೌಕರರ ಸಮ್ಮೇಳನವೊಂದು ಅತ್ತಾವರ ಹಾಯರ್ ಎಲಿಮೆಂಟರಿ ಶಾಲಾವರಾಂಡದಲ್ಲಿ ಸೇರಿತು

ಮಂಗಳೂರಿನ ನಗರ ಸಭಾ ಉಪಾಧ್ಯಕ್ಷ ಶ್ರೀ ಬಿ. ಗಂಗಾಧರದಾಸರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು

ಕಾಮನ್‌ವೆಲ್ತಿನ ಸದಸ್ಯತನವನ್ನು ಮುಂದರಿಸಲು ಭಾರತವು ನಿರ್ಣಯಿಸಿರುವ ಈ ಸಂದರ್ಭದಲ್ಲಿ ಇಂಪ ದುರ್ಪಟನೆಯಾದುದು ವಿಷಾದಕರವೆನ್ನಬಹುದಲ್ಲವೆ ಮತ್ತೇನು ಹೇಳಬಹುದು?

ಜಾಗತಿಕ ಮಜೂರು ಸಂಸ್ಥೆಯವರು ಈ ಗಣನತಿ ವಧೆಯನ್ನು ನಿಷೇಧಿಸುತ್ತಾರೆ

ಪಂಡಿತ ನೆಹರುರವರು ಅಮೇರಿಕ ಸಂದರ್ಶಿಸುವರು

ಭಾರತದ ಪ್ರಧಾನ ಸಚಿವ ಪಂಡಿತ ಜವಾಹರಲಾಲ ನೆಹರುರವರನ್ನು ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷ ಟ್ರೂಮೆನರು ತಮ್ಮ ದೇಶಕ್ಕೆ ಬರುವಂತೆ ಅಮಂತ್ರಣ ಕೊಟ್ಟಿರುವರೆಂದೂ ಅವರಂತೆ ನೆಹರುರವರು ಯುನ್ಯಾಟೆಡ್ ಸ್ಟೇಟ್ಸಿಗೆ ತೆರಳಲಿರುವರೆಂದೂ ಪ್ರಕಟವಾಗಿರುತ್ತದೆ.

ವಿನ್ಯಾದಲ್ಲಿ ಕಮ್ಯೂನಿಸ್ಟರ ವ್ಯಾಪಾರ ಬೆಳೆಯುತ್ತಿರುವುದನ್ನು ಹೇಗೆ ತಡೆಗಟ್ಟಬಹುದೆಂಬ ಕ್ಷುಲ್ಲಿತು ಟ್ರೂಮೆನ್ನರು ವಿಚಾರವಿನಿಮಯ ಮಾಡಲು ಆತುರರಿದ್ದಾರೆಂದೂ ತಿಳಿದುಬರುತ್ತದೆ.

ಈ ಸಂದರ್ಶನದ ಪರಿಣಾಮವಾಗಿ ಭಾರತಕ್ಕೆ ಇಲ್ಲಿಗೆ ಕೈಗಾರಿಕೆಗಳನ್ನು ಬೆಳೆಸಲು ಅಮೇರಿಕದಿಂದ ಬೇಕಾದ ಸಹಾಯ ಸಿಕ್ಕುವ ಏರ್ಪಾಡೂ ಆಗುವ ಸಂಭವವಿರುತ್ತದೆ.

ಸ್ವಾಗತಾಧ್ಯಕ್ಷ ಶ್ರೀ ಕೇಶವ ಪೈಯವರು ಅತಿಥಿ ಅಭ್ಯಾಗತರಿಗೂ ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಪ್ರತಿನಿಧಿಗಳಿಗೂ ಸ್ವಾಗತವಿತ್ತರು.

ಮದ್ರಾಸು ಪ್ರಾಂತ್ಯದ ತಂತಿ ಟಪ್ಪಾಲು ಖಾತೆಯ ನೌಕರರ ಸಂಘದ ವ್ಯವಸ್ಥಾಪಕರಣದ ಶ್ರೀ ಬಿ ಕೆ. ಭುಜಂಗ ರಾಯರು ಸಮ್ಮೇಳನದ ಉದ್ಘಾಟನೆ ನಡೆಸಿದರು

ಇವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದರು. ಸದ್ಯದಲ್ಲಿಯೆ ಕರ್ನಾಟಕ ಪ್ರಾಂತ್ಯವಾದಾಗ ಆ ಪ್ರಾಂತ್ಯದಲ್ಲಿ ತಂತಿ ಟಪ್ಪಾಲು ಕೆಲಸಗಾರ ಸಂಘ ವ್ಯವಸ್ಥೆಗೊಳಿಸುವ ಮುಖ್ಯಭಾರ ದಕ್ಷಿಣ ಜಿಲ್ಲೆಯ ಕೆಲಸಗಾರರೇ ಹೊರಬೇಕಾಗುವುದು ಈಗ ಅಖಿಲ ಭಾರತದಲ್ಲಿ ತಮ್ಮ ಸಂಘದ ನೂರಾರಸ್ತು ಮಂದಿ ಮುಂದಾಳುಗಳನ್ನು ಸರಕಾರದವರು ಕೈದು ಮಾಡಿ ತನಖಿ ಇಲ್ಲದೆ ಜೈಲಿನಲ್ಲಿಟ್ಟಿದ್ದಾರೆ ಇವರಲ್ಲಿ 54 ಮಂದಿ ಬಂಗಾಳದಲ್ಲಿಯೇ ಇದ್ದು ಇವರ ವೈಕಿ 20 ಮಂದಿ ಸ್ತ್ರೀಯರೇ ಇದ್ದಾರೆ ಈ ರೀತಿ ಬಂಧಿವಾಸಕ್ಕೆ ಒಳಗಾದವರ ಕುಟುಂಬಗಳ ಅವಸ್ಥೆ ಶೋಚನೀಯವಾಗಿರುತ್ತದೆ

ಇವರೆಲ್ಲರನ್ನು ಸರಕಾರದವರು ಬಿಡುಗಡೆ ಮಾಡಿ ಅಗತ್ಯ ಕಂಡರೆ ನ್ಯಾಯವಾದ ಕೋರ್ಟುಗಳಲ್ಲಿ ಇವರನ್ನು ವಿಚಾರಣೆಗೆ ಒಳಪಡಿಸಬೇಕು

ನಮ್ಮ ಸಂಘ ಯಾವ ರಾಜಕೀಯ ವಿಚಾರಗಳಲ್ಲಿಯೂ ಕೈ ಹಾಕಲು ಬಯಸುವುದಿಲ್ಲ ಆದುದರಿಂದಲೆ ನಾವು ಯಾವ ಕೇಂದ್ರ ಮಜೂರ ಸಂಸ್ಥೆಗೂ ಸೇರಲಿಲ್ಲ

ಕೇಂದ್ರ ಸರಕಾರದವರು ತಮ್ಮ ನೌಕರರ ಯೋಗಕ್ಷೇಮ ಸತ್ಯವಾಗಿ ನೋಡಬೇಕೆಂದು ಮಾತ್ರ ತಮ್ಮ ಉದ್ಘೋಷವೆಂದರು

ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ ಶ್ರೀ ಗಂಗಾಧರ ದಾಸರು ಸರಕಾರದವರು ತಂತಿ ಟಪ್ಪಾಲು ನೌಕರರಿಗೆ ಧರ್ಮಾರ್ಥ ವೈದ್ಯಕೀಯ ಸಹಾಯ ಒದಗಿಸಬೇಕು ಇವರ ಮಕ್ಕಳಿಗೆ ಧರ್ಮಾರ್ಥವಿದ್ಯೆ ಕೊಡಬೇಕು ಇವರಿಗೆ ಉಳಿಕೊಳ್ಳಲಿಕ್ಕೆ ಮನೆ ಕಟ್ಟಿಕೊಡಬೇಕು ಟಪ್ಪಾಲು ಆಫೀಸುಗಳನ್ನು ಸ್ವಂತ ಕಟ್ಟಡಗಳಲ್ಲಿ ಇರಿಸಬೇಕು ಇತ್ಯಾದಿ ಹೇಳಿದರು

ತಮ್ಮ ಸಂಘದ ಮುಂದಾಳುಗಳ ಬಿಡುಗಡೆ ಮಾಡುವಂತೆ ನಿರ್ಣಯ ಮಾಡಿದರು. ಇವರ ಕುಟುಂಬಗಳ ಸಂಕಷ್ಟ ನಿವಾರಣೆ ನಿಧಿಗೆ ರೂ ೨೫೦೦ನ್ನು ಹೊಟ್ಟರು. ಈ ನೌಕರರ ಪರಿಸ್ಥಿತಿ ಸುಧಾರಣೆಯ ಕುರಿತು ಹಲವು ನಿರ್ಣಯಗಳನ್ನು ವಂಜೂರು ಮಾಡಿದರು.

ಕೊನೆಗೆ ಶ್ರೀ ಬಿ. ಗಂಗಾಧರ ದಾಸರನ್ನು ಅಧ್ಯಕ್ಷರನ್ನಾಗಿ ಇಟ್ಟುಕೊಂಡು ಹೊಸ ವರ್ಷದ ಬಗ್ಗೆ ಕಮಿಟಿ ರಚನೆಯಾಗಿ ಸಮ್ಮೇಳನವು ಕೊನೆಗೆಂಡಿತು.

ಇವೆರಡು ಸಮ್ಮೇಳನಗಳೂ ಯಶಸ್ವಿಯಾಗಿಯೇ ನಡೆದವೆನ್ನಬೇಕು.

ಕಾಣಿಯೂರು

ಮಂಗಳೂರು

ಜಿಲ್ಲಾ ಗಾಂಧೀ ಸ್ಮಾರಕ ನಿಧಿ

ಇದರ ಸಮಿತಿಯ ಸಭೆಯೊಂದು ಕೆಲ ದಿನಗಳ ಹಿಂದೆ ಶ್ರೀ ರಂಗಭವನದಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಈ ಜಿಲ್ಲೆಯಲ್ಲಿ ಕ್ಷಯರೋಗ ಅಧಿಕವಾಗುತ್ತಿರುವುದರಿಂದ ಇಲ್ಲಿಗೊಂದು ಆಧುನಿಕ ಉಪಕರಣಗಳ ಕ್ಷಯರೋಗ ಆಸ್ಪತ್ರೆ ಬೇಕಾಗಿದ್ದು ೯ ಲಕ್ಷ ವೆಚ್ಚ ತಗಲುವ ಕಟ್ಟಡದ ಅರ್ಧವನ್ನು ಸಾರ್ವಜನಿಕರು ಕೆತ್ತರೆ ಮದ್ರಾಸು ಸರಕಾರವು ೨೫೦ ಎಕ್ರೆ ಸ್ಥಳವನ್ನು ಉಳಿದ ಕಟ್ಟಡದ ವೆಚ್ಚವನ್ನೂ ರೂ ೬೫೦೦೦ ವಾರ್ಷಿಕ ಖರ್ಚನ್ನು ತಾನು ವಹಿಸುವುದಾಗಿ ಭರವಸೆ ಇತ್ತಿದೆ. ಆದ್ದರಿಂದ ಗಾಂಧೀ ಸ್ಮಾರಕ ನಿಧಿಯಿಂದ ಜಿಲ್ಲೆಗೆ ಬರುವ ಹಣವನ್ನೆಲ್ಲ ಈ ಆಸ್ಪತ್ರೆಗೆ ಉಪಯೋಗಿಸಿ ಗಾಂಧಿಜಿಯ ಹೆಸರನ್ನಿಡಬೇಕೆಂದು ಜಿಲ್ಲಾ ಹಾಗೂ ನಗರ ಸಮಿತಿಯು ನಿರ್ಣಯ ಮಾಡಿತಲ್ಲದೆ ತಾಲೂಕು ಸಮಿತಿಗಳಿಗೆ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ ತಾ ೨೪ರಂದು ಸೇರುವ ಸಮಿತಿಯ ಸಭೆಯಲ್ಲಿ ಈ ವಿಚಾರವು ಚರ್ಚಿಸಲ್ಪಡುವುದು

ಮೇ॥ ಜನರಲ್ ಬಿ. ಪಿ ಬಾಳಿಗರು

ಹಿಂದೂಸ್ಥಾನ ಸೈನ್ಯ ಖಾತೆಯು ಪಾಶ್ಚಿಮಾತ್ಯ ನಿಬಾಗದ ಮೆಡಿಕಲ್ ಸರ್ವಿಸಿನ ಡೆಪ್ಯುಟಿ ಡೈರೆಕ್ಟರರಾದ ಮೇ॥ ಜನರಲ್ ಬಿ ಪಿ ಬಾಳಿಗ,ಓ ಬಿ ಇ ಫ ಎಮ್. ಎಸ್ ಇವರು ಈಚೆಗೆ ಡಿಲ್ಲಿಯಿಂದ ಕೆಲ ದಿನಗಳ ಹಿಂದೆ ನಮ್ಮೂರಿಗೆ ಬಂದಿದ್ದರು.

ದ. ಕನ್ನಡಕ್ಕೆ ಹೊಸ ಯೋಜನೆಗಳು ಮದ್ರಾಸ್ ಸರಕಾರದ ನಿರ್ಧಾರ

ಮದ್ರಾಸ್ ಸಂಪತ್ತಿನುಂಡಳಿದ ಸ್ಥಾಯೀ ಆರ್ಥಿಕ ಸಮಿತಿಯವರು ಈ ಜಿಲ್ಲೆಗಾಗಿ ಈ ಕೆಳಗಿನ ಯೋಜನೆಗಳನ್ನೂ ಶಿಫಾರಸು ಮಾಡಿರುವರು.

ಮಂಗಳೂರಿನಲ್ಲಿ ಎಲ್ಲಾ ಸೌಕರ್ಯವುಳ್ಳ ಒಂದು ಸಾರ್ವಜನಿಕ ಆಸ್ಪತ್ರೆಯನ್ನು ಸ್ಥಾಪಿಸುವುದು

ಜೋಗಿಗುಂಡಿಯಲ್ಲಿ ವಿದ್ಯುಚ್ಛಕ್ತಿಯ ಸರಬರಾಜಿಗಾಗಿ ಒಂದು ಕಿರಿಯ ವಿದ್ಯುಚ್ಛಕ್ತಿ ಸ್ಥಾವರವನ್ನು ಸ್ಥಾಪಿಸುವುದು, ಇದು ಸ್ವಸ್ಥವಾದ ಈ ಜಿಲ್ಲೆಯ ಉದ್ಯೋಗಿಸಿ, ಸಂತೋಷಕ್ಕೆ ಕಾರಣವಾಗುವುದು

ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಜಿಲ್ಲಾ ಶಾಖೆಯ ರಚನೆ

ಮಕ್ಕಳ ಹಿತಕ್ಕಾಗಿ ಸಂಯುಕ್ತ ಜನಾಂಗಗಳ ಏಜನ್ಸಿಯೊಂದು ವ್ಯಕ್ತವಾಗಿದ್ದು ಇಡೀಯಾ ಸರಕಾರವು ಇದರಲ್ಲಿ ಭಾಗವಹಿಸಲು ನಿರ್ಧರಿಸಿದ ಅದಕ್ಕೆ ಅಖಿಲ ಭಾರತ, ವ್ಯಾಂತಿಕ ಜಿಲ್ಲಾ ಸಮಿತಿಗಳು ನಿರ್ಮಾಣವಾಗಿವೆ ಮಕ್ಕಳಿಗೂ ಗರ್ಭಿಣಿಯರಿಗೂ ಅವರ ಸಂಕಷ್ಟ ನಿವಾರಣೆಗಾಗಿ ಸಹಾಯ ನ್ಯಾಡುವುದಕ್ಕಾಗಿ ಧನ ಸಂಗ್ರಹಿಸಲಾಗುವುದು.

ಈ ಸಂಬಂಧದ ಒಂದು ಸಮಿತಿಯನ್ನು ನಮ್ಮ ಜಿಲ್ಲೆಗಾಗಿ ರಚಿಸಲು ಕಳೆದ ತಾ. ೪ರಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಮತ್ತು ಪುರ ಪ್ರಮುಖರ ಸಭೆಯೊಂದು ಕಲೆಕ್ಟರರ ಕಚೇರಿಯಲ್ಲಿ ಸೇರಿತ್ತು. ಕಲೆಕ್ಟರರು ಈ ಸಭೆಯ ಉದ್ದೇಶವನ್ನು ವಿವರಿಸಿದ ಬಳಿಕ ಒಂದು ಸಮಿತಿಯ ರಚನೆಯಾಯಿತು.

ಶ್ರೀಮತಿ ಎಸ್. ಆರ್. ಕೈವಾರರು ಅಧ್ಯಕ್ಷೆ; ಶ್ರೀ ಪಿ ಆರ್. ಆರ್. ಪೂಂಜರೂ, ಶ್ರೀ ವಿ. ಎಸ್. ಕುಡ್ವರೂ ಇದರ ಕಾರ್ಯದರ್ಶಿಗಳು; ತಾ. ೧೩ರ ಸುಮಾರಿಗೆ ಈ ಸಮಿತಿಯ ಸಭೆಯೊಂದು ಜರಗಲ್ಲಿದ್ದು ಆದರಲ್ಲಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲಾಗುವುದು. ಧನ ಸಂಗ್ರಹ ಕಾರ್ಯವೂ ಪ್ರಾರಂಭಿಸಲಾಗುವುದು. ತಾಲೂಕು ಉಪಸಮಿತಿಗಳೂ ರಚಿಸಲ್ಪಾಗುವುವು.

ಖೂನಿ ಆರೋಪ-ಟಾಪು ಶಿಕ್ಷೆ

ಉಚ್ಚಿಲ ವ್ಯಾಪ್ತಿಯ ಒಬಿದಾ ಕರ್ಕೇರಾ ಎಂಬಾತನನ್ನು ನಿನ್ನೆ ಮಧ್ಯಾಹ್ನ ಹೊತ್ತಿನಲ್ಲಿ ಚೂರಿಯಿಂದ ತಿವಿದು ಅವನ ಕೊಲೆಗೆ ಕಾರಣನಾದನೆಂದು ಅದೇ ಸ್ಥಳದ ದೇಜು ಪೂಜಾರಿಗೆ ನಮ್ಮ ಜಿಲ್ಲಾ ಸೆಶ್ಶನ್ ಜಡ್ಜರು ಜೀವಾವಧಿ ಟಾಪು ಶಿಕ್ಷೆಯನ್ನು ವಿಧಿಸಿರುವರು. ಮೃತನೂ ಆರೋಪಿಯೂ ನೆರೆಕರೆಯವರು. ಆರೋಪಿಯ ಕೋಳಿ ಕರ್ಕಡನ ಗದ್ದೆಯಲ್ಲಿನ ಬೀಜ ಕಿಂದುಹಾಕಿದ್ದಕ್ಕೆ ಮೃತನು ಕೋಳಿಯನ್ನು ಕೊಂದ. ಇದರಿಂದ ಕುಪಿತನಾದ ಪೂಜಾರಿ ಕರ್ಕಡನನ್ನು ಚೂರಿಯಿಂದ ತಿವಿದ

ಬಜ್ಪೆ ಖೂನಿ ಪ್ರಕರಣ-ಆರೋಪಿಗಳಿಗೆ ಬಿಡುಗಡೆ

ಬಜ್ಪೆ ಪಟೇಲರಾಗಿದ್ದ ಕುಂಞಣ್ಣ ಸೆಟ್ಟಿ ಎಂಬವರನ್ನು ಅವರ ಆಳಿಯಂದಿರೂ, ಅಣ್ಣ ತಮ್ಮಂದಿರೂ ಒಳಸಂಚಿನಿಂದ ವಿಷಹಾಕಿ ಕೊಂದರೆಂಬ ವಿಷಯದ ಕಟ್ಟಿ ಸೆಶ್ಶನ್ ಜಡ್ಜರಲ್ಲಿ ವಿಚಾರಣೆಯಾಗಿ ಆರೋಪಕ್ಕೆ ಸಾಕಷ್ಟು ಸಾಕ್ಷ್ಯಗಳು ದೊರೆಯದ್ದರಿಂದ ಆರೋಪಿಗಳಾದ ತ್ಯಾಂಪಣ್ಣ ಸೆಟ್ಟಿಯೆಂಬವರು ಬಿಡುಗಡೆ ಮಾಡಲ್ಪಟ್ಟರು

ನಾಲ್ಕುವರೆ ಆಣೆ ಸಾಲದ ಜಗಳ ಆಪಾದಿತರಿಗೆ ಶಿಕ್ಷೆ

ಬಜ್ಪೆಯ ಪೆಲಿಕ್ಸ್ ಮಸ್ ಪೆರ್ನಾಂಡೀಸ್ ಎಂಬಾತನಿಗೆ ಅಂತೋಣಿ ರೇಗೊ ಮತ್ತು ವಾಸ್ಸರ್ ಸೋಜಾ ಎಂಬವರು ಹೊಡೆದ ವಿಷಯದ ಪ್ರಾಮುಖ್ಯಗೊಳಿಸಿದ್ದರೆಂದು ರುಜುವಾತಾಗಿ ಆರೋಪಿಗಳಿಗೆ ಕ್ರಮವಾಗಿ ೬ ತಿಂಗಳ ಸಜೆ ಮತ್ತು ೫೦ ರೂ ಜುಲ್ಮಾನೆ ೨ ತಿಂಗಳ ಸಜೆ, ೨೫ ರೂ ಜುಲ್ಮಾನೆಗಳಾದುವು. ಫಿರ್ಯಾದುದಾರ ಪೆಲಿಕ್ಸ್ ಪೆರ್ನಾಂಡಿಸನು ಆರೋಪಿಯಾದ ವಾಸ್ಸರ್ ಸೋಜನ ಹೆಂಡತಿಗೆ ೪೫ ರೂಪಾಯಿ ಕೊಡುವುದಿತ್ತು. ಅದನ್ನು ಆಕೆ ಕೇಳಿದಾಗ ಮಾತಿಗೆ ಮಾತು ಬೆಳೆದು ಪಟ್ಟಿನಲ್ಲಿ ಅಂತ್ಯವಾಯಿತು

ಸುಳ್ಯಕ್ಕೆ ಹ್ಯಾಸ್ಕೂಲು

ಅಮರ ಸುಳ್ಯ ಮತ್ತು ಸುಬ್ರಹ್ಮಣ್ಯ ಪಾಣಚೆಗಳ ನಿವಾಸಿಕರ ಸಾರ್ವಜನಿಕ ಸಭೆಯೊಂದು ಕಳೆದ ವಾರ ಶ್ರೀ ಯಂ. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿ ಸುಳ್ಯಕ್ಕೆ ಒಂದು ಹೈಸ್ಕೂಲು ಅಗತ್ಯವೆಂದು ನಿರ್ಧಾರವಾಯಿತು. ಈ ಬಗ್ಗೆ ೨೫ ಜನರ ಒಂದು ಸಮಿತಿಯೂ ರಚಿಸಲ್ಪಾಮಿತು.

ಕನ್ನ ಕಳವಿಗೆ ಸಜೆ

ಬಟ್ಟಗುಡ್ಡೆ ಕೊರಗ ಪೂಜಾರಿ ಎಂಬಾತ ಬಿಜೈ ಏ. ಎಲ್. ರೇಗರ ಮನೆಯಲ್ಲಿ ಕನ್ನ ಕಳವು ಮಾಡಿದನೆಂದು ಅವನಿಗೆ ೨ ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ಜುಗಾರಿ ಆಟಕ್ಕಾಗಿ

ಉಳ್ಳಾಲದ (ಮೇಲಂಗಡಿ) ಸಾರ್ವಜನಿಕ ಸ್ಥಳದಲ್ಲಿ ದುಡ್ಡಿಟ್ಟು ಇಸ್ಪೀಟ್ ಧಿಡಿದ ರಂಬುದಕ್ಕೆ ಮೂರು ಮಾಪಿಳೈಯವರಿಗೆ ೧೦ ರೂಪಾ ಜುಲ್ಮಾನೆಯಾಗಿದೆ.

ಜಿಲ್ಲಾ ಆಹಾರ ಸಮಿತಿ

ಮೇಲ್ಕಂಡ ಸಮಿತಿಯು ಈ ಕೆಳಗಿನ ಸದಸ್ಯರಿಂದ ಪುನರ್ರಚಿತವಾಗಿದೆ: ಜಿಲ್ಲಾ ಕಲೆಕ್ಟರ್ ಅಧ್ಯಕ್ಷರು; ಜಿಲ್ಲಾ ಸರಬರಾಯಿ ಅಧಿಕಾರಿ-ಕಾರ್ಯದರ್ಶಿ, ಜಿಲ್ಲಾ ಕೃಷಿಯ ಧಿಕಾರಿ, ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರು, ಕುಂದಾಪುರ, ಮಂಗಳೂರು, ಪುತ್ತೂರು ರೆವೆನ್ಯೂ ಅಧಿಕಾರಿಗಳು, ಜಿಲ್ಲೆಯ ಎಂ. ಎಲ್. ಎ. ಮತ್ತು ಎಂ. ಎಲ್. ಸಿಯವರು, ಜಿಲ್ಲಾ ಆರೋಗ್ಯಾಧಿಕಾರಿ, ಪಶು ವೈದ್ಯಾಧಿಕಾರಿ, ಜಿ. ಕಾಂ. ಅಧ್ಯಕ್ಷ ಮತ್ತು ಇಂಜಿನಿಯರ್, ಇತರ ಸದಸ್ಯರು. ಕೆ. ಬಿ. ಜನರಾಜ ಹೆಗ್ಡೆ, ಎಚ್. ವಿ. ಅಡಪ್ಪ, ಜೆ. ಸಿ ಸಿಕೇರ. ವಿ. ಎಸ್. ಕುಡ್ವ, ಎಸ್. ಜಿ. ಸಾಲೆನ್ಸ್, ಮೇರಿ ಬ್ರಿಟೊ, ಎಂ. ಶಿವರಾವ್, ಕೆ. ಪಿ, ಎನ್. ದಾಸ್.

ತಾ. ೨೦ರಂದು ಸಮಿತಿಯ ಮೊದಲ ಸಭೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತ್ತು. ಅಧ್ಯಕ್ಷರು ಆಹಾರ ಪರಿಸ್ಥಿತಿ ವಿವರಿಸಿದ ನಂತರ ಚರ್ಚೆ ನಡೆಯಿತು. ೨೦,೦೦೦ ಟನ್ನುಗಳಷ್ಟು ಅಕ್ಕಿಯು ಹೊರಗಿನಿಂದ ತರಿಸಬೇಕಾಗಿ ಅಂದಾಜು ಮಾಡಲಾಯಿತು.

ಶ್ರೀ ಕೆ. ಆರ್ ಕಾರಂತರು ಈಗಿನ ಅಕ್ಕಿ ಭತ್ತ ಸಂಗ್ರಹಗಳಿಂದಾಗಿ ರೈತರಲ್ಲಿ ನಿರಾಶೆಯುಂಟಾಗಿದೆಯೆಂದರಲ್ಲದೆ ಗೇಣಿ ಒಕ್ಕಲುಗಳ ಹತ್ತಿರ ಧನಿಗೆ ಕೊಡತಕ್ಕ ಮತ್ತು ಕೃಷಿಯ ಖರ್ಚಿಗೆ ಇಟ್ಟು ಉಳಿದುದನ್ನು ತೆರಬೇಕೆಂದು ಸರಕಾರಕ್ಕೆ ತಿಳಿಸಬೇಕೆಂದರು ಅದನ್ನು ಸಮಿತಿ ಒಪ್ಪಿತು ಶ್ರೀ ಕಾರಂತರ ಸೂಚನೆ ಮೇರೆಗೆ ಅವಲಕ್ಕಿ ಮೇಲಿನ ನಿಯಂತ್ರಣ ತೆಗೆಯಬೇಕೆಂದು ಸರಕಾರಕ್ಕೆ ಕೇಳಲಾಯಿತು. ಅವಲಕ್ಕಿ ತಯಾರಿಸುವವರಿಗೆ ಲ್ಯಾಸೆನ್ಸು ಕೊಟ್ಟು ಕಾರ್ಡುಗಳ ಮೂಲಕ ಭತ್ತ ಪೂರೈಕೆ ಮಾಡಬೇಕೆಂದು ನಿರ್ಣಯಿಸಲಾಯಿತು ಇದಕ್ಕಾಗಿ ೩೫೦೦ ಟನ್ ಭತ್ತ ಪ್ರತ್ಯೇಕ ಇಡಬೇಕೆಂದೂ ಆಯಿತು

ಜಿ. ಕೆ. ಜಿಲ್ಲಾ ರಾಜಕೀಯ ಪರಿಷತ್ತು

ಅನಿರೀಕ್ಷಿತ ಕಾರಣಗಳಿಂದಾಗಿ ಪಾಣೆ ಮಂಗಳೂರಲ್ಲಿ ಜರಗಲಿರುವ ಮೇಲ್ಕಂಡ ಪರಿಷತ್ತನ್ನು ಇದೇ ತಾ. ೨೨ ಮತ್ತು ೨೩ಕ್ಕೆ ಮುಂದರಿಸಲಾಗಿದೆ. ಈ ತಾರೀಕುಗಳಲ್ಲಿ ಪರಿಷತ್ತು ತಪ್ಪದೆ ಜರಗುವುದೆಂದು ಪ್ರಕಟಿಸಲಾಗಿದೆ.

ತಾ. ೨೦ನೇ ಸಂಜೆ ಗಂಟೆ ೪ಕ್ಕೆ ಪರಿವತ್ತಿನ ಬಹಿರಂಗ ಅಧಿವೇಶನವು ದಾರವಾಡದ ಪ್ರಸಿದ್ಧ ಮುಖಂಡರೂ, ಕೇಂದ್ರ ಎಸೆಂಬ್ಲಿಯ ಮಾಜಿ ಸದಸ್ಯರೂ, ಗಣನೀಯ ಬರಿಹಗಾರರೂ ಆದ ಶ್ರೀ ಡಿ. ಸಿ. ಕರಮರಕರರ ಅಧ್ಯಕ್ಷತೆಯಲ್ಲಿ ನಡೆಯಲಿದೆ ತಾ ೨೩ರಂದು ವಿಧಾಯಕ ಕಾರ್ಯಕರ್ತರ ಸಮ್ಮೇಳನವು ಪ್ರಸಿದ್ಧ ವಿಧಾಯಕ ಕಾರ್ಯಕರ್ತರೂ ಕೇಂದ್ರ ಮತ್ತು ಬೊಂಬಾಯಿ ಸರಕಾರಗಳ ಪಾದಿ ಮತ್ತು ಗೃಹ ಕೈಗಾರಿಕೆಗಳ ಸಲಹೆಗಾರರೂ ಆದ ಶ್ರೀ ಕೆ ಎ. ವೆಂಕಟ್ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಜಿಲ್ಲಾ ಕೃಷಿಕ ಪರಿಷತ್ತಿಗೆ ಶ್ರೀ ಕೆ. ಆರ್. ಕಾರಂತರು ಅಧ್ಯಕ್ಷತೆ ವಹಿಸುವರು

ನಿರ್ಬಂಧಕಾಜ್ಞೆ

ಮೇ ದಿನಾಚರಣೆ ಸಂಬಂಧ ನಗರದಲ್ಲಿ ಶಾಂತಿ ಶಿಸ್ತು ಭಂಗವಾಗದಂತೆ ಜಿಲ್ಲಾಧಿಕಾರಿಗಳು ತಾ ೨೦ರಿಂದ ಒಂದು ವಾರದ ತನಕ ೧೪೪ನೇ ಪ್ರಕರಣವನ್ನು ಜಾರಿಮಾಡಿದ್ದರು ಈ ಸಂಬಂಧದಲ್ಲಿ ಕೆಲ ಸೋಶಲಿಸ್ಟರನ್ನು ಪೋಲಿಸರು ಕೈದು ಮಾಡಿದ್ದು ಸ್ವೇಶನಿಗೊಯ್ದು ಬಳಿಕ ಬಿಟ್ಟಿರುವರು. ೧೦ ಮಂದಿ ಕಮ್ಯುನಿಸ್ಟರನ್ನು ಬಂಧಿಸಲಾಗಿದ್ದು ಅವರಿಗೆ ೧೫ ದಿನಗಳ ರಿಮಾಂಡು ವಿಧಿಸಲಾಗಿದೆ.

ಅಖಿಲ ಭಾರತ ಪೋಸ್ಟ್‌ಮೇನ್ ಮತ್ತು ಕೆಳತರಗತಿಯ ನೌಕರರ ಸಂಘ

ಇದರ ಜಿಲ್ಲಾ ಶಾಖೆಯ ಮೂರನೇ ವಾರ್ಷಿಕ ಸಮ್ಮೇಳನ ಕಳೆದ ತಾ. ೧೫ರಲ್ಲಿ ರುಜಾರಿಯೋ ಹೈಸ್ಕೂಲಿನಲ್ಲಿ ಶ್ರೀ ಕೆ. ಎಸ್ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಬಿ ಎಸ್. ಭಾಸ್ಕರ ರೈಯವರು ಸ್ವಾಗತಿಸಿದರು ಕಾರ್ಯದರ್ಶಿ ರೋಬರ್ಟ್ ಶಿಕೇರರು ವರದಿಯೋದಿದರು. ಅಮಂತ್ರಿತರಲ್ಲಿ ಅನೇಕರು ಸಮಯೋಚಿತ ಭಾಷಣ ಮಾಡಿದರು ಅಧ್ಯಕ್ಷರು ಹಲವಾರು ಉಪಯುಕ್ತ ಸಲಹೆಗಳನ್ನಿತ್ತರು. ಕೆಲವು ರದ್ದಾವುಗಳೂ ಹೊಸ ಕಾರ್ಯಕಾರಿ ಮಂಡಳಿಯ ಚುನಾವಣೆಯೂ ಆಯಿತು. ಶ್ರೀ ರೈಗಳೇ ಪುನಃ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು

ಶಂಕರ ಜಯಂತಿ

ಅದ್ವೈತ ಸಮಿತಿಯ ಆಶ್ರಯದಲ್ಲಿ ತಾ. ೭ರಂದು ಶಂಕರ ಜಯಂತಿ ಉತ್ಸವಾರಂಭವು ಗಣಪತಿ ಹೈಸ್ಕೂಲಿನಲ್ಲಿ ಸ್ವಾಮಿ ವಿದ್ಯಾಭಾಸ್ಕರಾನಂದಜಿಯವರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಎಂ ಆರ್ ಭಟ್, ಅವರು, ಕೆ. ಎಸ್. ಕುಬಣ್ಣಾಯ ಇವರು ಶಂಕರಾಚಾರ್ಯರ ಅದ್ವೈತ ಸಿದ್ಧಾಂತ ಹಾಗೂ ಅವರ ಗ್ರಂಥಗಳ ಕುರಿತು ಪ್ರವಚನ ನೀಡಿದರು

ಮಂಗಳೂರು ಕೊಯಮತ್ತೂರುಗಳ ನಡುವೆ ರಾತ್ರಿ ರೈಲು

ಇವೆರಡು ನಗರಗಳ ನಡುವೆ ಒಂದು ರಾತ್ರಿ ಟ್ರೈನ್ ಸೇವೆ ಸನ್ನು ಒದಗಿಸುವ ಆಲೋಚನೆಯನ್ನು ಸ್ ಐ ರೈಲ್ವೆಯವರು ಮಾಡುತಿದ್ದಾರೆ

ಕಡಿತ ಘಾಯ ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಜೋಣಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ರೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
ಳಿರಿಂದ ೫ ತಿಂಗಳು ,, ,, ೨।

ರೂ. ೧೦೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ ೫೦೦ರ ಗುಣಕದ ರೇವಣಾತಗಳ ಮೇಲಿನ ಬಡ್ಡಿಯ ದರಗಳನ್ನು ನಿಜಾಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು —ಬಾವುಟೆಗುಡ್ಡೆ, ಮಂಗಳೂರ.

ಇತರ ಶಾಖೆಗಳು:—ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟ್ವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

ಚರ್ಮ ಮತ್ತು ತಲೆಭಾಗದ ವ್ಯಾಧಿಗಳು ವಿಶ್ವವಿಖ್ಯಾತ ಜಾಂಬಕಿನಿಂದ ನಿವಾರಿಸಲ್ಪಡುವುವು

ಜಾಂಬಕಿನಲ್ಲಿರುವ ಅದ್ಭುತ ಔಷಧ ಸತ್ವಗಳು ಚರ್ಮದೊಳಗೆ ಆಳಕ್ಕೆ ಹೀರಲ್ಪಡುತ್ತವೆ. ಜಾಂಬಕ್ಕು ತುರಿತವನ್ನೂ ಉರುಯುವಿಕೆಯನ್ನೂ ಶೀಘ್ರ ಶಮನಿಸಿ ಕೀವನ್ನು ನಿಲ್ಲಿಸಿ ವಿಷಾಣುಗಳನ್ನು ನಾಶಮಾಡಿ ಘಾತಗೊಂಡ ಚರ್ಮವನ್ನು ಗುಣವಡಿಸುವುದಕ್ಕೆ ಇದೇ ಕಾರಣ ಖಂಡಿತವಾಗಿ ಪ್ರಾಣಿಕೊಬ್ಬು ರಹಿತವಾದುದು.

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಚರ್ಮ ವ್ಯಾಧಿಗಳಿಗೂ, ಗಾಯಗಳಿಗೂ, ಅಲ್ಲದೆ ಕೈಬಿಟ್ಟ ಕೀಟ ಕಡಿತ, ನೋವಾಗುವ ಕಾಲು, ಮೂಲಂಡ ವೇದನೆ ಮತ್ತು ಶರೀರದಿಲ್ಲ ವೇದನೆಗಳಿಗೂ ಅತ್ಯುತ್ತಮ.

ಹೆಂಗಾಮಿ ಆಹಾರ ಕಾರ್ಯದರ್ಶಿ

ನಮ್ಮ ಜಲ್ಲೆಯವರಾಗಿರುವ ಶ್ರೀ ಯು. ಕುಮಾರಯ್ಯ ಅವರು ಸದ್ಯ ನಮ್ಮ ಪ್ರಾಂತ್ಯ ಆಹಾರ ಶಾಖೆಯ ಹಂಗಾಮಿ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟಿರುವರು. ಇವರು ಕ್ಯುರೇಕಾರ್ಯದರ್ಶಿಗಳಾಗಿದ್ದರು.

ಮದ್ಯ ವಿಧಿಗಳ ಉಲ್ಲಂಘನೆಗೆ

ಬಂಗ್ರಕೂಳೂರಿನ ಇಜಿತಾರ್ ಸೋಜ ಅಮಲು ಜೋರನಾಗಿದ್ದನೆಂದು ಅವನಿಗೆ ೬೦ ರೂ. ಜುಲ್ಮಾನೆ ತಪ್ಪಿದರೆ ೧ ತಿಂಗಳ ಸಜೆ, ಉಳ್ಳಾಲದ ರೈಮಂಡ ಮೊಂತೆರೊ ಎಂಬಾತನ ವಶ ೧ ಗೆಲನ್ ೧೮ ಡ್ರಾಂ ಶರಾಬು ಸಿಕ್ಕಿದಕ್ಕೆ ೪ ತಿಂಗಳ ಸಜೆ

ಪ್ರೊ॥ ಸಬ್ ಇನ್ಸ್‌ಪೆಕ್ಟರರ ಮೇಲೆ ಕೈ ಮಾಡಿದ ಆರೋಪ

ಕಂಕನಾಡಿ ಲೆಬೊರೆಟರಿಯ ಪ್ರೊಹಿಬಿಶನ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಅಚ್ಚುತನ್ ನಾಯರ ಮೇಲೆ ಅದೇ ಲೆಬರೇಟರಿಯಲ್ಲಿ ಪೇದೆಯಾಗಿದ್ದ ಶಂಕರನ್ ಎಂಬಾತಕೈ ಮಾಡಿದನೆಂಬ ಆರೋಪದ ಸಂಬಂಧ ವಿಚಾರಣೆಯಾಗಿ ಶಂಕರನಿಗೆ ೩ ತಿಂಗಳ ಶಿಕ್ಷೆಯಾಗಿದೆ.

ತೂಕದ ಅಳತೆ ಕಟ್ಟೆ

ತೂಕದ ಅಳತೆಯ ಕಲ್ಲುಗಳ ನಿಯಮವನ್ನು ಉಲ್ಲಂಘಿಸಿದುದಕ್ಕಾಗಿ ಸುರತ್ಕಲದ ಸೀನ ಭಂಡಾರಿಗೆ ರೂ ೧೫, ಮತ್ತು ಬಂದರದ ಮುಕುಂದ ಪೈಗೆ ರೂ ೧೨ರಜುಲ್ಮಾನೆ ಯಾಗಿದೆ.

ಸಿದ್ಧವನ ಗುರುಕುಲ ಸಂಸ್ಕೃತ ಶಾಲೆ ವರ್ಧಂತ್ಯುತ್ಸವ

ಉಚ್ಚಿಲ ಈ ಗುರುಕುಲದ ವರ್ಧಂತಿ ಉತ್ಸವವು ಇದೇ ತಾರೀಕು ೧೫ರಿಂದು ಆದಿತ್ಯವಾರ ಸಿ ಪಿ ಸಿ ಮೈನಜಿಂಗ್ ಡೈರೆಕ್ಟರ್ ಶ್ರೀ ವಿ ಎಸ್ ಕುಡ್ವರ ಅಧ್ಯಕ್ಷತೆಯಲ್ಲಿ ಜರಗುವುದು. ಬೆಳಿಗ್ಗೆ ಭಾಷಣ ಸ್ಪರ್ಧೆ ಇತ್ಯಾದಿಗಳೂ, ಅಪರಾಹ್ನ ಗಂಟೆ ೩ಕ್ಕೆ ಅಧ್ಯಕ್ಷರ ಸ್ವಾಗತ, ಬಹುಮಾನ ವಿತರಣ ಇತ್ಯಾದಿಗಳೂ, ರಾತ್ರಿ ೮-೩೦ರಿಂದ ನಾಟಕ, ಯಕ್ಷಗಾನ ಇತ್ಯಾದಿ ವಿವಿಧ ವಿನೋದಾವಳಿಗಳೂ ಇರುವುವು

ಉಡುಪಿ

ಇಲ್ಲಿಯ ಮುನಿಸಿಪಲ್ ಶಾಲೆಗಳ ಸಂಯುಕ್ತ ಸಮಾರಂಭವು ಕಳೆದ ತಿಂಗಳ ತಾ. ೫ರಿಂದ ತಾ ೧೧ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಿತು ಪೌರ ಪ್ರಮುಖರ ಭಾಷಣಗಳಿದ್ದುವು. ಮಕ್ಕಳ ವಾರ ಸ್ಪರ್ಧೆಗಳು ಜರಗಿದುವು. ಮಕ್ಕಳ ಚಟುವಟಿಕೆಯ ವಸ್ತು ಪ್ರದರ್ಶನವನ್ನು ಶ್ರೀ ಆರೂರು ಲಕ್ಷ್ಮೀನಾರಾಯಣ ರಾವುರಿಂದ ಉದ್ಘಾಟಿಸಲ್ಪಟ್ಟಿತು

ಉಡುಪಿ ಕೊಲೇಜು ಕನಿಟಿಯ ಸಭೆ ಕಳೆದ ತಾ ೩ರಿಂದು ಡಾ॥ ವಿತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಕೊಲೇಜು ಕ್ಲಾಸುಗಳನ್ನು ತೆರೆಯಲು ವಿಶ್ವವಿದ್ಯಾಲಯದ ಅನುಮತಿ ದೊರೆಯಲಿರುವುದರಿಂದ ಕಟ್ಟಡ, ಲ್ಯಾಬ್ರೆರಿ, ಸಿಬಂದಿ ಇತ್ಯಾದಿ ವ್ಯವಸ್ಥೆಯ ಕುರಿತು ತಕ್ಕ ವಿವಾರ್ಡು ಮಾಡಲು ನಿರ್ಧರಿಸಲ್ಪಟ್ಟಿತು.

ಗಾನಕೋಕಿಲೆ ಸುಬ್ಬುಲಕ್ಷ್ಮಿ ಜೊಂಜ್ಯಾಯಲ್ಲಿ ೧½ ಲಕ್ಷ ರೂ. ಸಂಗ್ರಹ

ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗಾಗಿ ಮುಂಬಯಿಯಲ್ಲಿ ಏರ್ಪಡಿಸಲ್ಪಟ್ಟ ಶ್ರೀಮತಿ ಸುಬ್ಬುಲಕ್ಷ್ಮಿಯವರ ಗಾಯನ ಕಚೇರಿಗೆ ಒಂದೂಕಾಲು ಲಕ್ಷ ರೂಪ್ಯಾ ಜಮೆಯಾಗಿದ್ದು, ಗಾಯನ ಕಚೇರಿಗಳ ಇತಿಹಾಸದಲ್ಲಿ ಇದೇ ಅತೀ ಹೆಚ್ಚಿನ ದಾಖಲೆಯೆಂದು ಹೇಳಲಾಗಿದೆ. ಸುಬ್ಬುಲಕ್ಷ್ಮಿಯು ತನ್ನ ಸುಶ್ರಾವ್ಯ ಗಾಯನ ನೈಪುಣ್ಯದಿಂದ ಭಾರತದ ಅತೀ ಶ್ರೇಷ್ಠ ದಂಪತಿಗಳಿಬ್ಬರ ಸ್ಮಾರಕಕ್ಕೆ ಅತಿ ಹೆಚ್ಚಾದ ದೈಯುಕ್ತಿಕ ಧನದಾನವನ್ನು ನೀಡಿದ ಕೀರ್ತಿಗೆ ಪಾತ್ರಳಾಗಿರುವಳು. ಕಸ್ತೂರ್ ಬಾ ನಿಧಿಗೂ ಆಕೆ ೧ ಲಕ್ಷ ಸಂಗ್ರಹಿಸಿಕೊಟ್ಟಿದ್ದಾಳೆ.

ಅಕ್ಕಿ ಬೆಲೆಯಲ್ಲಿ ಕಡಿತವಿಲ್ಲ

ಮದ್ರಾಸ್ ಸರಕಾರದ ಧೋರಣೆ

ಇತರ ಪ್ರಾಂತ್ಯಗಳ ಸರಕಾರಗಳು ಕೃಷಿ ಉತ್ಪನ್ನ ವಸ್ತುಗಳ ಬೆಲೆಯನ್ನು ಕಡಿಮೆ ಮಾಡಲು ಪರ್ಯಾಲೋಚಿಸುತ್ತಿರುವಾಗ ಮದ್ರಾಸ್ ಸರಕಾರವು ಸದ್ಯಕ್ಕೆ ಅಕ್ಕಿಯ ಬೆಲೆಯನ್ನು ಕಡಿಮೆ ಮಾಡಲಿಚ್ಚಿಸುವುದಿಲ್ಲವೆಂದು ವ್ಯಕ್ತವಾಗಿದೆ "ಕಾರ್ಖಾನೆ ತಯಾರಿತ ವಸ್ತುಗಳ ಬೆಲೆಯು ದ್ವಪೂರ್ವಕ್ಕಿಂತ 4-5 ಪಾಲು ಹೆಚ್ಚಿದೆ ಕೃಷಿ ಉತ್ಪನ್ನಗಳ ಬೆಲೆ 2-3 ಪಾಲಷ್ಟು ಮಾತ್ರ ಇರುವಂತೆ ನಿಯಂತ್ರಿಸಲಾಗಿದೆ ಇದಕ್ಕಿಂತ ಕಡಿಮೆ ಮಾಡಿದರೆ ಕೃಷಿಕನಿಗೆ ತಾನು ಕೊಳ್ಳುವ ವಿಲಾಸಿ ವಸ್ತುಗಳಿಗೆ ಹೆಚ್ಚು ಕೊಡಬೇಕಾದ ಸಂಕಷ್ಟ ಬರುವುದು "

ಕಮ್ಯೂನಿಸ್ಟ್ ಹೆಂಗಸರು

ಕಲ್ಕತ್ತಾ ಗಲಭೆಯ ಗೂಢ

ಕಮ್ಯೂನಿಸ್ಟರು ತಮ್ಮ ಶಸ್ತ್ರಸಜ್ಜಿತ ಯೋಜನೆಯಲ್ಲಿ ಹೊಸ ಉಪಾಯಗಳನ್ನು ಹುಡುಕುತ್ತಿದ್ದು ಗೆಯನಕ್ಕೆ ಬರುತ್ತಿದೆ ಕಲ್ಕತ್ತದಲ್ಲಿ ಈಚೆಗೆ ಸಂಭವಿಸಿದ ಗಲಭೆಗಳಲ್ಲಿ ಆಲ್ಲಿನ ಕಮ್ಯೂನಿಸ್ಟರು 144ನೇ ಪ್ರತಿಬಂಧಕಾಜ್ಞೆ ಮುರಿಯಲು ಅಲ್ಲಿ ಮೆರವಣಿಗೆಯನ್ನು ಒಮ್ಮುಖವಾಗಿ ಮುಂಗದಮಲ್ಲಿ ಹೆಂಗಸರನ್ನು ಹಿಂದಿನಿಂದ ಪುರುಷರ ಪಡೆ ನಡೆಯಿತ್ತು. ಪೋಲಿಸ್ ಗುಂಡು ಹಾರಿಸುವಿಕೆಯಲ್ಲಿ ಕೆಲವು ಸ್ತ್ರೀಯರೂ ಮಡಿದರು.

ಒಂದು ಗಣನೀಯ ಜೀವಹಾರಿ

ಮಲೇರಿಯದ ಕುರಿತಾದ ರಹಸ್ಯವು ಸಂಪೂರ್ಣ ಬೆಳಕಿಗೆ ಬಂದು ಇನ್ನೂ ಹೆಚ್ಚು ಕಾಲವಾಗಿಲ್ಲ. ನೀರು ನಿಲ್ಲುವ ಜವುಗು ಪ್ರದೇಶಗಳ ಸುತ್ತಮುತ್ತಲಿನ ವಾತಾವರಣದಲ್ಲಿ ಅಪಾಯಕಾರಕ ಶೀತಲವಾದ ಮಂಜು ಮುಸುಕಿದ್ದ ಪ್ರದೇಶಗಳಲ್ಲಿ ಉಂಟಾಗುವ ಈ ಮಲೇರಿಯದ ಕುರಿತು ಬಹುಕಾಲದಿಂದ ಜನರು ಪರಿಶೋಧಿಸಲು ಇಚ್ಛಿಸಿದ್ದರು. ಅಂತಹ ಆ ಜವುಗು ಪ್ರದೇಶದ ಕೆಟ್ಟ ಹವೆಗೆ (ಲೆಟಿನ್ ಭಾಷೆಯಲ್ಲಿ mal ari ಎನ್ನುವುದರಿಂದ) ಮಲೇರಿಯಾ ಎಂದು ಹೆಸರಾಯಿತು ಈ ಪ್ರದೇಶಗಳ ಸೊಳ್ಳೆಗಳಿಗೂ ಮಲೇರಿಯಾ ಜ್ವರಕ್ಕೂ ಯಾವುದಾದರೊಂದು ಸಂಬಂಧವಿರಬೇಕೆಂಬ ಶಂಕೆ ಕೆಲವು ಜನರಲ್ಲುಂಟಾಯಿತು 1880ರಲ್ಲಿ ಲೆವೆರನ್ ಎಂಬ ಫ್ರೆಂಚ್ ವೈದ್ಯ ತಜ್ಞನು ಆಲ್ಜೀರಿಯದ ಓರ್ವ ರೋಗಿಯ ರಕ್ತದಲ್ಲಿ ಮಲೇರಿಯಕ್ಕೆ ಸಂಬಂಧಪಟ್ಟಿರುವ ಅಣುಗಳ ರೂಪರೇಷೆಗಳನ್ನು ಕಂಡನು ಮತ್ತೆ ರಿಚಾರ್ಡ್ ಎಂಬವನಿಂದ 1882ರಲ್ಲಿ ಶೋಧೆಯು ನಿಜವೆಂದು ಸಿದ್ಧಾಂತೀಕರಿಸಲ್ಪಟ್ಟಿತು ಲೆವೆರನ್ನರ ಪರಿಶೋಧನೆಗಳು ತುಂಬಾ ಚರ್ಚೆಗೂ ವಿವಾದಕ್ಕೂ ಒಳಗಾದವು, ಹೀಗೆ ವ್ಯಾಪಿನ ಕಾಲದಿಂದಲೂ ಹೊಸತಾಗಿ ಕಂಡುಹಿಡಿಯಲ್ಪಡುವ ವಿಷಯಗಳು ಬಿರುಸಾದ ವಿರೋಧ ಅಭಿವ್ಯಾಯಗಳಿಗೆ ಒಳಗಾಗುವುವು

ಸ್ಪಷ್ಟವಾಗಿ ಕಂಡು ಬರುವ ಲೆವೆರೆನ್ನನು ಕಂಡುಹಿಡಿದಿರುವ ಮಲೇರಿಯದ ಕುರಿತು ಪ ಅಣುಗಳನ್ನು ಸ್ವರೂಪವನ್ನು ಕ್ರಮೇಣ ಎಲ್ಲ ವಜ್ಞರುವ ಒಪ್ಪಿಕೊಳ್ಳಲಾಯಿತು ಅವರ ಈ ಹೊಸ ಜೀವಾದಿ ರಚನೆಯು ಚೇತನ್ಯಗಳಿಂದ ರಕ್ತದ ಒಂದು ಪರಿಣಾಮ ವಸ್ತುವೆಂದು ಕಲನಶಾ ತರ್ಕಿಸಿದರು ಮಾರ್ಚ್ ಮಾಹಾವಾ ಮತ್ತು ಸೆಲ್ಲಿ ಎಂಬಿಬ್ಬ ತಜ್ಞರು ಈ ವಸ್ತುಗಳಲ್ಲಿ ಚಲನೆಯಿದೆಯೆಂದು ತೋರಿಸಿದ ನಂತರವೇ ಅವು ರೋಗಾಣುಗಳೆಂಬ ಲೆವೆರೆನ್ನನ ಸಿದ್ಧಾಂತವನ್ನು ಒಪ್ಪಲಾಯಿತು ನಂತರ ಜರ್‌ಹಾರ್ಡ್ ಎಂಬ ಪರಿಶೋಧಕನು ಈ ರೋಗಾಣುಗಳುಳ್ಳ ರಕ್ತವನ್ನು ಆರೋಗ್ಯವಂತನೊಬ್ಬನ ರಕ್ತದಲ್ಲಿ ಸೇರಿಸಿ ಜ್ವರವನ್ನುಂಟುಮಾಡಿದ ಮೇಲೆ ಈ ಶೋಧೆಗೆ ಹೆಚ್ಚಿನ ಬೆಂಬಲ ದೊರೆಯಿತು.

ಈ ಪರಿಶೋಧೆಗಳ ನಂತರ ಮನುಷ್ಯನಲ್ಲಿ ಮಲೇರಿಯದ ಕುರಿತು ಹೆಚ್ಚಿಚು ಜ್ಞಾನವು ಉಂಟಾಯಿತು. ಆದರೂ ಸರ್ ರೊನಾಲ್ಡ್ ರೋಸ್ ನೆಂಬ ಬ್ರಿಟಿಷ್ ಸೈನ್ಯ ವೈದ್ಯನು ಮಲೇರಿಯಾ ರೋಗಾಣುಗಳು ಸೊಳ್ಳೆಯಿಂದ ಒಯ್ಯಲ್ಪಡುತ್ತವೆ ಎಂದು ಸ್ವತಃ ಪ್ರಯೋಗಗಳಿಂದ ತೋರಿಸುವ ತನಕ ಮಲೇರಿಯದ ಕುರಿತಾದ ಜ್ಞಾನವು ಅಸ್ಪಷ್ಟವಾಗಿಯೇ ಇತ್ತು ಸರ್ ರೊನಾಲ್ಡ್ ರೋಸರು ಈ ಕುರಿತು ರಚಿಸಿದ ಶಾಸ್ತ್ರೀಯವಾದ ಸಿದ್ಧಾಂತವು ನಮ್ಮಲ್ಲಿ ಮಲೇರಿಯಾದ ಕುರಿತು ನಿರ್ದಿಷ್ಟವಾದ ಪರಿಚಯಮಂಟಾಗುವಂತೆ ಮಾಡಿತು

ಮಲೇರಿಯವು ಕ್ವಿನೀನ ಮೂಲಕ ನಿವಾರಣೆ ಮಾಡಲ್ಪಡುತ್ತದೆ ಆದೇ ಆ ವ್ಯಾಧಿಗೆ ಪರಿಣಾಮಕಾರಿಯಾದ ಪರಿಹಾರ ಹಿಂದಿನ ಲಿಂಗ್ ಆಸ್ ನೆಶ್ಶನ್ಸ ಮಲೇರಿಯಾ ತಜ್ಞರ ಅಭಿವ್ಯಾಯದಲ್ಲಿ ಹೀಗಿದೆ 5ರಿಂದ 7 ದಿನಗಳ ಅಲ್ಪ ಅವಧಿಯಲ್ಲಿ ದಿನಂಪ್ರತಿ 16ರಿಂದ 20 ಕಾಳುಗಳಷ್ಟು ಕ್ವಿನೀನನ್ನು ನೆವಿಸಿವುದರಿಂದ ಮಲೇರಿಯಾ ಜ್ವರವನ್ನು ನಿಲ್ಲಿಸಬಹುದು ಜ್ವರ ಪುನಃ ಬಂದರೆ ಮತ್ತೆ ಹಾಗೇ ಮಾಡುವುದು ರಕ್ಷಣೋಪಾಯವಾಗಿ ಮಲೇರಿಯಾ ಜ್ವರ ಋತುವಿನಲ್ಲಿ ದಿನಕ್ಕೆ ೩ ಕಾಳುಗಳಷ್ಟು ಕ್ವಿನೀನನ್ನು ನೆವಿಸಿ ಭದ್ರವಾಗಿರಬಹುದು

M No 62

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶ್ಯಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿವಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶ್ಯಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶ್ಯಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ರೆ ಕೊಯಮುತ್ತೂರಲ್ಲಿರುವ ಸರ್ಕಾರಿ R. T. O ದವರು ಸೆಂಕ್ಷನ್ ಮಾಡಿ, ಅದು ಕೂಡಾ ಗ್ಯಾಸು ಬಸ್ಸುಗಳಿಂದಲೇ ಓಡಿಸಬೇಕಾಗಿ ನಿರ್ಭಂದವಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದ್ರೆ ಸ್ಪೆಶ್ಯಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
22-12-48

ಜೊಯಿಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜೊಯಿಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves,	Rs. 8,90,000

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ತ ಉವದ್ರವ, ತಲೆ ಹುಣ್ಣು, ವೃಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಸ್ಥಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಿದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

* ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ತಮ ನಿಪುಣಾಗ್ರಗಣ್ಯರಿಂದ ತಯಾರಿಸಲ್ಪಟ್ಟ ಹುವ ದಿವ್ಯ ಔಷಧ. ಗರ್ಭಕೋಶದ ಪಿಡ ಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬು ವುದು. ಸೂತಿಕಾ ರೋಗಗಳನ್ನು ಕಡಿಗಿಟ್ಟು ವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಪಿತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳೆಲ್ಲವನ್ನು ಗುಣಪಡಿಸುವುದು.

ದಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 48] ಕಾರೀಕು 20—5—1949 [ಸಂಚಿಕೆ 20]

ಜರ್ಮನಿಯೂ ಶಕ್ತಿರಾಷ್ಟ್ರಗಳ ಧೋರಣೆಯೂ

ಉಕ್ಕಿನ ಪರದೆಯು ತೆಗೆದುಹಾಕಲ್ಪಟ್ಟಿತು

ಆ ದೇಶದ ಭವಿಷ್ಯ—ಶಾಂತಿ ಮತ್ತು ಕ್ರಾಂತಿ

ಜರ್ಮನಿಯಲ್ಲಿ ರಶ್ಯದ ಧೋರಣೆಯು ಏದಲಾಗುತ್ತಿದೆ ಎಂದು ಹರಡಿದ ಊಹಾಪೋಹೆಗಳು ನಿಜವಾದುವುಗಳೆಂದ ಸಿದ್ಧಾಂಕವಾಯಿತು ಈ ಕುರಿತು ಯು.ಕ್ರರಾಷ್ಟ್ರ ಸಂಘದ ರಶ್ಯನ್ ಮತ್ತು ಅಮೇರಿಕನ್ ಸ್ರತಿನಿಧಿಗಳ ಗುಪ್ತ ಮಾತುಕತೆಗಳನ್ನು ಸರಿಸುತಿದ್ದವು ಅವುಗಳ ಪರಿಣಾಮವಾಗಿ ರಶ್ಯವು ಜರ್ಮನಿಯ ಪೂರ್ವ ಗಡಿಯಲ್ಲಿ ಬಿಗುಗೊಳಿಸಿದ ನಿರ್ಬಂಧಗಳನ್ನು ಎತ್ತಿವುದೆಂದು ನಿರ್ಣಯವಾಗಿದೆ ಸದ್ಯದಲ್ಲೇ ನಾಲ್ಕು ಶಕ್ತಿ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳೂ ಪರಿಷತ್ತು ಸೇರಿ ಮುಂದಿನ ಶಾಂತಿ ನಾಯಕ ಕಾರ್ಯಕ್ರಮಗಳ ಕುರಿತು ಪರ್ಯಾಲೋಚಿಸಲಿರುವರೆಂದು ನಿರ್ಧರಿಸಲಾಗಿದೆ

ಜರ್ಮನಿಯಲ್ಲಿನ ಹಣ ಕಾಸಿನ ವ್ಯವಹಾರವು ಏಕ ಪ್ರಕಾರದ್ದಿರಬೇಕೆಂಬ ರಶ್ಯದ ಧೋರಣವು ಬದಲಾಗಲಿಲ್ಲ ಈ ಕುರಿತು ಮುಂಬರುವ ವಿದೇಶಾಂಗ ಮಂತ್ರಿ ಪರಿಷತ್ತಿನಲ್ಲಿ ಮುಹತ್ವದ ಚರ್ಚೆಯಾಗಲಿದೆ ಎಂದು ಶುಭ ಚಿಹ್ನೆಯೆಂದರೆ ಇದುವರೆಗೆ ರಶ್ಯವು ತಾನು ಹಾಕಿದ ನಿರ್ಬಂಧಗಳನ್ನು ತೆಗೆಯಬೇಕಾದರೆ ಅಲ್ಲಿನ ಹಣಕಾಸಿನ ಚಲಾವಣೆಯ ವ್ಯವಸ್ಥೆಯನ್ನು ಸರಿವಡಿಸಲು ಒಂದು ಸಂಯುಕ್ತ ಒಪ್ಪಂದವಾಗಬೇಕೆಂದು ಆಗ್ರಹ ಪೂರ್ವಕವಾದ ಶರ್ತ ಹಾಕಿತ್ತು ಆದರೆ ಈಚಿತ್ತಾಯವು ಸಕಾರಣವಾದುದಲ್ಲವೆಂದು ಈಗ ರಶ್ಯಕ್ಕೆ ಮನದಟ್ಟಾಗಿರಬೇಕು ಅಥವಲ್ಲದೆ ತನ್ನ ಆಡಳಿತ ಪ್ರದೇಶದಲ್ಲಿ ರಶ್ಯವು ಯಾವ ಉದ್ದೇಶದಿಂದ ನಿರ್ಬಂಧ ಹಾಕಿತ್ತೊ ಅದರಿಂದ ಯಾವ ಸಾರ್ಥಕವಾಗಲಿಕ್ಕಿಲ್ಲವೆಂದು ಈಗ ಅದರ ಮುತ್ಸದ್ಧಿಗಳಿಗೆ ಮನವರಿಕೆಯಾಗಿರಬೇಕು ಈ ನಿರ್ಬಂಧದ ನೆಪದಿಂದ ರಶ್ಯವು ಜರ್ಮನಿಯ ಆ ಕಡೆಯಲ್ಲಿ ಹೆಚ್ಚಿನ ಅನುಕೂಲವನ್ನು ಪಡೆಯಬಹುದೆಂದು ನೆನೆಸಿತ್ತು ಆದರೆ ಇತರ ರಾಷ್ಟ್ರಗಳು ಈ ತರದ ಒತ್ತಡಕ್ಕೆ ಬಲಿಲೀಳುವವರಲ್ಲ. ಇಲ್ಲಿ ರಶ್ಯದ ಒಂದು ತಂತ್ರವು ಅನರಿಣಾಮಕಾರಿಯಾಯಿತೆನ್ನಬಹುದು. ಇದೇ ರೀತಿಯಲ್ಲಿ ಹಿಂದೆ ಯುಕ್ತ ರಾಷ್ಟ್ರ ಸಂಸ್ಥೆದಲ್ಲೂ ರಶ್ಯದ ಅನೇಕ ಕುಯುಕ್ತಿಯ ವಾದಗಳು ನಿಷ್ಫಲವಾಗಿವೆ ಬ್ರಿಟಿಷರು ಮತ್ತು ಅಮೇರಿಕನ್ನರು ನಿರ್ಬಂಧಿತವಾದ ಪೂರ್ವ ಜರ್ಮನಿಯ ಪ್ರದೇಶದೊಳಗೆ ವಿಮಾನ ಸರಬರಾಯಿ ಮೂಲಕ ಆಹಾರ ವಸ್ತುಗಳನ್ನು ಯಶಸ್ವಿಯಾಗಿ ಪೂರೈಸಿದ್ದು ರಶ್ಯದ ಹೃದಯ ಪರಿವರ್ತನೆಯು ಮತ್ತೊಂದೂ ಕಾರಣವೂ ಆಗಿದೆ ಈ ವಿಮಾನ ಸರಬರಾಯಿ ವ್ಯವಸ್ಥೆಯು ಅದೆಷ್ಟು ಪರಿಪೂರ್ಣವಾಗಿತ್ತೆಂದರೆ ಜರ್ಮನಿಯು ಆ ಪ್ರದೇಶದೊಳಗಿನ ಜನರಿಗೆ ರಶ್ಯನ್ ನಿರ್ಬಂಧದಿಂದ ಒಂದಿಷ್ಟೂ ಅನಾನುಕೂಲತೆಯಾಗಲಿಲ್ಲ ಕರಿಣ ಕಾಲದಲ್ಲೂ ಈ ಪ್ರಯತ್ನವು ಒಂದಿಷ್ಟೂ ಆತಂಕವಿಲ್ಲದೆ ಸಾಗಿತ್ತು ವಿ ಎಟ್ಟಿಯವರು ಈಜೆಗೆ ಜರ್ಮನಿಗೆ ಹೋಗಿದಾಗ ಈ ವಿಮಾನ ಸಾಹಸಕ್ಕೆ ಅಮೋಘ ಪ್ರಶಸನೆಯನ್ನು ಸಲ್ಲಿಸಿ ರಶ್ಯದ ಆರ್ಥಿಕ ಮುಗಟ್ಟನ್ನು ಉಂಟು ಮಾಡುವ ನಿರ್ಬಂಧಾಸ್ತ್ರವು ಮೊಂಡಾಯಿತು ಎಂದು ವ್ಯಂಗವಾಗಿ ನುಡಿದಿದ್ದರು ಮಾತ್ರವಲ್ಲ ರಶ್ಯದ್ದಕ್ಕೆ ಬ್ರಿಟಿಷ್ ಅಮೆರಿಕನ್ ಮತ್ತು ಫ್ರೆಂಚ್ ಸರಕಾರ ಪರರೂ ತಮ್ಮ ಪ್ರದೇಶಗಳಲ್ಲಿ ತದ್ರೀತಿಯ ನಿರ್ಬಂಧವನ್ನು ಹೊರಿಸಿ ರಶ್ಯದ ಧೋರಣೆಯ ಮುಯ್ಯಿಗೆ ಮುಯ್ಯಿಯನ್ನು ಸಲ್ಲಿಸಿದ್ದರು ಈ ನಿರ್ಬಂಧಗಳು ಕ್ರಮೇಣ ಬಿಗಿಮಾಡಲ್ಪಟ್ಟು ಇತ್ತೀಚೆಗೆ ಪರಿಣಾಮಕಾರಿಯಾಗಿ ನಿರ್ಬಹಿಸಲ್ಪಟ್ಟ ಕಾರಣದಿಂದ ರಶ್ಯಕ್ಕೆ ಒಂದು ತರದ ಅವಮಾನವೂ ಆಗಿತ್ತು ರಶ್ಯನ್ ನಿರ್ಬಂಧಿತ ಪ್ರದೇಶ ದೊಳಗೆ ವಿಮಾನ ಮೂಲಕ ವಸ್ತುಗಳನ್ನು ಸರಬರಾಯಿ ಮಾತ ವುದರಿಂದ ಬ್ರಿಟಿಷ್ ಅಮೇರಿಕನ್ನರ ತುರ್ತಾ ಹಣದ ಖರ್ಚು ತಗಲಿರುವುದಾದರೂ ಈಗ ಆದರಿಂದ ರಶ್ಯವು ಬಗ್ಗಿತೆಂಬ ಸಂಗತಿಯು ಈ ಹೊರೆಯ ಭಾರವನ್ನು ಒಸುಮಾಡಿದಂತಿದೆ ಮುಂದೆ ಎಂದಾದರೂ ರಶ್ಯವು ಮೊನ ನಿರ್ಬಂಧಗಳನ್ನು ಹೊಂಚಿದರೆ ಆಗಲೂ ಅದೇ ತರದ ವ್ಯವಸ್ಥೆಯನ್ನು ಮಾಡಲು ಈ ಮಿತ್ರ ರಾಷ್ಟ್ರಗಳು ಪರಿಪೂರ್ಣ ತರದ ವ್ಯವಸ್ಥೆಯನ್ನು ಪ್ರೋಜಿಸಿಕೊಂಡಿವೆ ಈ ಬಗ್ಗೆ ಅನುಭೋಗಿಸುವ ವಿಮಾನಗಳು ಬೃಹದಾಕೃತಿಯ ದಾಗಿದ್ದು ಅವು ವಸ್ತುಗಳನ್ನು ಅತೀ ಹೆಚ್ಚಾಗಿಯೂ, ಅತೀ ಶೀಘ್ರವಾಗಿಯೂ ಸಾಗಿಸಬಲ್ಲವು.

ಈಗ ಜರ್ಮನಿಯ ಕುರಿತು ಒಂದು ಇತ್ಥರ್ಥದ ಮಾತುಕತೆ ನಡೆಸಲು ರಶ್ಯವು ಒಪ್ಪಿರುವುದಾದರೂ ಯಾವದಾದರೊಂದು ಅನುಕೂಲತೆ ಪಡೆಯದೆ ರಶ್ಯವು ತನ್ನ ಧೋರಣೆಯಲ್ಲಿ ರಿಯಾಯಿತಿಯನ್ನು ತೋರಿಸಲಿಕ್ಕಿಲ್ಲವೆಂದು ಖಂಡಿತ ನಿರೀಕ್ಷಿಸ

(ಎನೇ ಪುಟ ನೋಡಿ)

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬ್ಬಾ 1

ಮೂಲಧನ (ತೆತ್ತದ್ದು) ರೂ 10,00,000

ಜೀವವಿಮೆಯ ಫಂಡು . ರೂ. 12,00,000 (ವಿಸ್ತರಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½%
ಮರಣಕ್ಕೆ	59%	

ಸಾವಿರಕ್ಕೆ ವರ್ಷಕ್ಕೆ ರೂ 5-0 0ರಂತೆ ರಿವರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಪಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನೂ, ಆಡಳಿತೆ ಮಂಡಳಿಯನ್ನೂ ಅಭಿನಂದಿಸುತ್ತೇನೆ. ಅವರ ದೂರದರ್ಶತತ್ವ ನಿಪುಣ ಆಡಳಿತದಿಂದಾಗಿ ಅವರ ಜೊತೆಗಾರಿಕೆಯು ಯೋಗ್ಯವಾದುದು. ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಏಂದಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವುದೆಂದು ಹೇಳುತ್ತೇನೆ

ವಿ. ಎಚ್ ಪೋರಾ, F I A

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಾಕುಮಾರ್ ಕೊಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

(ನಿನ್ನೆ ಮುಂದುವರಿದಿದೆ)

ಏಕೆಂದರೆ ಪಶ್ಚಿಮ ಜರ್ಮನಿಯ ಪ್ರಜಾಸಂಖ್ಯೆಗಳನ್ನು ಒಟ್ಟುಗೂಡಿಸಿ ಒಂದು ಪ್ರಜಾಪ್ರಭುತ್ವವನ್ನು ಸ್ಥಾಪಿಸಲೆಳಸುವ ಬ್ರಿಟಿಷ್ ಅಮೇರಿಕನ್ನರ ಯೋಜನೆಯು ರಶ್ಯಕ್ಕೆ ಕಳವಳವನ್ನುಂಟುಮಾಡಿದೆ. ಇದನ್ನು ಬಿಟ್ಟು ಕೊಡಬೇಕೆಂದು ಅದು ಮುಂದಿನ ವಿದೇಶಾಂಗ ಮಂತ್ರಿಗಳ ಪರಿಷತ್ತಿನಲ್ಲಿ ಒತ್ತಾಯವನಡಿಸಬಹುದು. ಬ್ರಿಟಿಷ್, ಅಮೇರಿಕನ್ ಮತ್ತು ಫ್ರೆಂಚ್ ಆಡಳಿತದೊಳಗೆ ಇರುವ ಪಶ್ಚಿಮ ಜರ್ಮನಿಯ ವ್ಯಾಪಾರೋದ್ಯೋಗಗಳನ್ನು ಒಂದು ಹ್ಯಾ ಕಮಿಶನ್ ಎಂಬ ಉನ್ನತ ಆಡಳಿತ ಮಂಡಳಿಕ್ಕೆ ಮೊದಲು ಒಳಪಡಿಸಿ, ನಂತರ ಅಲ್ಲಿ ಚುನಾವಣೆಗಳನ್ನು ನ್ಯಾಯಬದ್ಧವಾದ ಪ್ರಜಾಪ್ರತಿನಿಧಿಗಳ ಆಡಳಿತವನ್ನು ಸ್ಥಾಪಿಸಬೇಕೆಂಬುದರ ಕುರಿತು ಈ ಮೂರು ರಾಷ್ಟ್ರಗಳೊಳಗೆ ಒಂದು ಒಪ್ಪಂದವಾಗಿದ್ದು, ಅದರ ವಿವರಗಳು ಇತ್ತೀಚೆಗೆ ವೊಶಿಂಗ್ಟನ್ನಿನಿಂದ ಪ್ರಕಟಿಸಲ್ಪಟ್ಟಿವೆ. ಪಶ್ಚಿಮ ಜರ್ಮನಿಯ ಪ್ರಜಾಪ್ರಭುತ್ವದ ಹೊಸ ರಾಜ್ಯ ಘಟನೆಯು ಸಿದ್ಧವಾಗಿದ್ದು ಸೈನ್ಯ ರಚನೆಯ ಯೋಜನೆಯೂ ತಯಾರಿಸಲ್ಪಟ್ಟಿದೆ. ಅದು ಸ್ಥಾಪಿತವಾದ ಕೂಡಲೇ ಆ ಪ್ರದೇಶದಲ್ಲಿ ಈಗ ಇರುವ ಸೈನಿಕ ಆಡಳಿತವನ್ನು ರದ್ದುಗೊಳಿಸಲಾಗುವುದು. ಮತ್ತೆ ರಶ್ಯದ ಕೈಳಿಗಿನ ಜರ್ಮನಿಯ ಭಾಗದ ಜನರು ನೂತ್ರ ಅವರ ಉಕ್ಕಿನ ಹಿಡಿಯಲ್ಲಿ ನರಳುವಂತಾಗುವುದು ಇದನ್ನು ಸ್ವಾತಂತ್ರ್ಯ ಪ್ರಿಯರೂ ಸ್ವಾಭಿಮಾನಿಗಳೂ ಆದ ಆ ಜನರು ಎಷ್ಟು ಕಾಲ ಸಹಿಸುವರು? ಮತ್ತೆ ಇತ್ತೀಚೆಗೆ ರಶ್ಯನರು ತಮ್ಮ ಪ್ರದೇಶದಲ್ಲಿ ಒಂದು ಪ್ರಜಾಪ್ರಭುತ್ವ ಸ್ಥಾಪಿಸಲು ಯೋಚಿಸಿದರು ಆದರೆ ಆ ಪ್ರದೇಶದ ಜನತಾ ಪ್ರತಿನಿಧಿಗಳು ತಮ್ಮ ಬೇಕಾಗುವ ರಾಜ್ಯ ಘಟನೆಯ ಕರಡನ್ನು ಸಿದ್ಧಪಡಿಸಿ ರಶ್ಯನ್ ಮೇಲಧಿಕಾರಿಗಳಿಗೆ ತೋರಿಸಲು ಅವರು ಅದನ್ನು ನಿರಾಕರಿಸಿ ಜನತಾ ಪ್ರತಿನಿಧಿಗಳನ್ನು ಅತ್ಯಪ್ತಿಪಡಿಸಿದ್ದಾರೆ ಈ ರಾಜ್ಯ ಘಟನೆಯನ್ನು ತಯಾರಿಸಿದವರು ಕಮ್ಯುನಿಸ್ಟ್ ಸಹಾನುಭೂತಿಯ ಬೋನ್ ಪಕ್ಷದನರೇ ಆದರೂ ರಶ್ಯನ್ ಕಮ್ಯುನಿಸ್ಟರ ಎಣಿಕೆಗೆ ಅದು ಬರದಾಯಿತು ಅದಲ್ಲದೆ ಹೀಗೆ ತಿರಸ್ಕಾರವನ್ನು ಮಾಡುವಾಗ ರಶ್ಯನರು ಅಲ್ಲಿನ ಇತರ ರಾಜಕೀಯ ಪಕ್ಷಗಳನ್ನಾದರೂ ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳದಾದರು.

ಪಶ್ಚಿಮ ಜರ್ಮನಿಯ ಗಡಿಗಳನ್ನು ಬದಲಿಸಿ ಅದರಲ್ಲಿನ 25 ಮೈಲು ಸ್ಥಳವನ್ನು ಹೊಲೆಂಡಿಗೂ, 17 ಮೈಲು ಸ್ಥಳವನ್ನು ಬೆಲ್ಜಿಯಮಿಗೂ ಕೊಡಿಸಬೇಕೆಂಬ ಮಿತ್ರ ರಾಷ್ಟ್ರಗಳ ನಿರ್ಣಯವನ್ನು ಬದಲಾಯಿಸಲೂ ರಶ್ಯಕ್ಕೆ ಸಾಧ್ಯವಾಗಲಿಲ್ಲ ಇದರಿಂದ ಆ ಕಡೆಯ ಜನತೆಗೆ ರಶ್ಯದ ಮೇಲೆ ಮತ್ತಷ್ಟು ಅಸಮಾಧಾನವು ಹೆಚ್ಚುವಂತಾಯಿತು ಗಡಿಗಳನ್ನು ಬದಲಾಯಿಸುವುದರ ಕುರಿತು ರಶ್ಯವು ಮಾಡಿದ ಪ್ರತಿಭಟನಾತ್ಮಕವಾದ ಆಕ್ಷೇಪವನ್ನು ಪಾಶ್ಚಿಮಾತ್ಯ ರಾಷ್ಟ್ರಗಳು ಅಲಕ್ಷ ಮಾಡಿವೆ. ಇದರ ಮೇಲೆ ಆ ಪ್ರದೇಶಗಳಲ್ಲಿದ್ದ ಕಾರ್ಖಾನೆಗಳನ್ನು ಯುದ್ಧ ಸಾಲದ ಬಾಬ್ತು ಎಂದು ಮಿತ್ರ ರಾಷ್ಟ್ರಗಳು ಕಳಚಿ ಅವುಗಳಲ್ಲಿನ ಯಂತ್ರೋಪಕರಣಗಳನ್ನೂ ಬೇರೆ ಬೇರೆ ದೇಶಗಳಿಗೆ ಕಳುಹಿಸಲೂ ಏರ್ಪಡಿಸಿವೆ. ಇದರಿಂದ ಘಾಯದ ಮೇಲೆ ಉಪ್ಪು ನೀರು ಹಾಕಿದಂತಾಗಿದೆ. ಹಿಂದೆ ಜರ್ಮನಿಯಿಂದ ಧ್ವಂಸ ಮಾಡಲ್ಪಟ್ಟ ಪ್ರದೇಶಗಳ ಪುನರುದ್ಧಾರ ಕ್ಕಾಗಿ ಈ ಕಾರ್ಖಾನೆಗಳು ಬಳಸಲ್ಪಡುವವು. ಈ ಕಾರ್ಯಕ್ರಮದ ಪೈಕಾರ ಪಶ್ಚಿಮ ಜರ್ಮನಿಯ ಇನ್ನೂ ಕೆಲವು ಕಾರ್ಖಾನೆಗಳು ರಶ್ಯಕ್ಕೂ ಕಳುಹಿಸಲ್ಪಡಲಿಕ್ಕೆ ಇದ್ದವು. ಆದರೆ ಈಗ ಒಂದು ಒಪ್ಪಂದವಾಗುವುದಾದರೆ ರಶ್ಯವು ಈ ಕಾರ್ಖಾನೆಗಳ ಕಳಚುವಿಕೆಯನ್ನು ನಿಲ್ಲಿಸಬೇಕಾದಾಗ ಬಹುದು.

ಹೀಗೆ ನಾಲ್ಕರಿಂದ ವಾರಕ್ಕೆ ಪಾಶ್ಚಿಮಾತ್ಯ ರಾಷ್ಟ್ರಗಳ ಶಕ್ತಿಯು ರಶ್ಯಕ್ಕಿಂತ ಹೆಚ್ಚಿಹ್ಚು ಅಭಿವೃದ್ಧಿಯಾಗುವ ವಿಧಾನವನ್ನು ಮೇಲೆ ವಿವರಿಸಿದಂತಾಯಿತು. ಈಗ ಯಾವ ಸಂಧರ್ಭದಲ್ಲೂ ಪಾಶ್ಚಿಮಾತ್ಯ ರಾಷ್ಟ್ರಗಳು ಪಶ್ಚಿಮ ಜರ್ಮನಿಯಲ್ಲಿ ಒಂದು ಏಕ್ಯಮತ್ಯದ ಸ್ವಜಾ ಸರಕಾರವನ್ನು ಸ್ಥಾಪಿಸುವ ತಮ್ಮ ಯೋಜನೆಯನ್ನು ಬಿಟ್ಟು ಬಿಡಲಾರವು. ಮುಂದಿನ ವಿದೇಶರಂಗ ಮಂತ್ರಿಗಳ ಪರಿಷತ್ತಿನಲ್ಲೂ ಈ ಕುರಿತು ಯಾವ ಬದಲಾವಣೆಯ ಪ್ರಸ್ಥಾಪನೆತ್ತಲಾಗದೆಂದು ಬ್ರಿಟಿಷ್ ಪ್ರಧಾನರು ತವ್ಮೊಂದು ಹೇಳಿಕೆಯಲ್ಲಿ ಸೂಚಿಸಿದ್ದಾರೆ ಹಾಗಾದರೆ ಈ ಮಂತ್ರಿಗಳು ಚರ್ಚಿಸಲಿರುವ ಇತರ ವಿಷಯಗಳಾದರೂ ಯಾವುವು?

ಗಾಂಧೀ ಕೊಲೆಯ ಭವಿಷ್ಯ

ಅಮದಾಬಾದದ ಜ್ಯೋತಿಷ್ಯನಿಂದ

ಗಾಂಧೀಜಿಯವರು ತಮ್ಮ 78, 79 ಇಲ್ಲವೆ 80ನೇ ವರ್ಷದಲ್ಲಿ ಅಸ್ವಾಭಿಂದ ಘಾತಿಸಲ್ಪಡುವರೆಂದು ಅಮದಾಬಾದದ ಒರ್ವ ಜ್ಯೋತಿಷ್ಯರು ಬರೆದಿಟ್ಟಿದ್ದರಂತೆ ಆ ಜ್ಯೋತಿಷ್ಯರು ಮಹಾತ್ಮರ ಮರಣದ ಕೆಲ ಸಮಯದ ಮುಂಚೆಯೇ ಮೃತಪಟ್ಟಿದ್ದರು ಈಗ ಅವರ ಕುಟುಂಬದವರು ಆ ಭವಿಷ್ಯ ಬರೆದಿಡಲ್ಪಟ್ಟ ಪುಸ್ತಕವನ್ನು ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಅರ್ಪಿಸಿರುವರು. ಈ ಭವಿಷ್ಯವು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದ್ದು ಗಾಂಧಿಜಿಯ ಕುರಿತು ಸಂಗ್ರಹಿಸಲ್ಪಡುವ ಅವರ ಜೀವನದ ವಿಶೇಷ ದಾಖಲೆಗಳಲ್ಲಿ ಇದೂ ಒಂದಾಗಿದೆ ಎನ್ನಲಾಗಿದೆ

ಶಿಕ್ಷಣ ಕಾರ್ಯಕ್ಕೆ ಚಲಚಿತ್ರಗಳು

ವಿದ್ಯಾಭ್ಯಾಸದಲ್ಲಿ ಅವುಗಳ ಮಹತ್ವ

ಕೇಂದ್ರ ವಿದ್ಯಾಖಾತೆಯವರು ಮಕ್ಕಳಿಗಾಗಿ ಚಲಚಿತ್ರಗಳನ್ನು ತಯಾರಿಸುವ ಒಂದು ಯೋಜನೆಯನ್ನು ಸಿದ್ಧವಡಿಸಿರುವರಂತೆ. ಈಗ ಮನರಂಜನೆಗಾಗಿ ಚಲಚಿತ್ರಗಳನ್ನು ತಯಾರಿಸುವ ಸಂಸ್ಥೆಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಕೊಟ್ಟು ಈ ಚಿತ್ರಗಳನ್ನು ತಯಾರಿಸಲಾಗುವುದು ಇದರಿಂದ ವಿದ್ಯಾಭ್ಯಾಸದಲ್ಲಿ ಚಲಚಿತ್ರಗಳಿಗೆ ಅದಿಷ್ಟು ಮಹತ್ವವಿದೆಯೆಂಬ ಸಂಗತಿಯನ್ನು ಮನಗಂಡಂತಾಯಿತು ಈಗಾಗಲೇ ಮಕ್ಕಳ ವಿದ್ಯಾಭ್ಯಾಸಕ್ಕೆ ರೇಡಿಯೋಗಳಿಂದ ತುಂಬಾ ಪ್ರಯೋಜನವಾಗುತ್ತದೆ ಅನೇಕ ಶಾಲೆಗಳಲ್ಲಿ ರೇಡಿಯೋದ ಮಕ್ಕಳ ಕಾರ್ಯಕ್ರಮಗಳನ್ನು ವಾರ ಅವಧಿಯಲ್ಲಿ ಮಕ್ಕಳಿಗೆ ಕೇಳುವ ಸಂದರ್ಭ ಕಲ್ಪಿಸಿ ಕೊಟ್ಟಿದ್ದಾರೆ ಅದೇ ರೀತಿ ಶೈಕ್ಷಣಿಕ ವಿಷಯಗಳನ್ನೊಳಗೊಂಡ ಚಲಚಿತ್ರಗಳನ್ನು ಪ್ರದರ್ಶಿಸುವ ಏರ್ಪಾಡನ್ನು ವಾರ ಕ್ರಮದೊಡನೆ ಸಂಯೋಜಿಸಿಕೊಳ್ಳುವಂತಾಗಬೇಕು ವಾರ ಸಂಬಂಧವಾದ ಆಸಕ್ತಿಕರ ವಿಷಯಗಳನ್ನು ಚಲಚಿತ್ರಗಳ ಮೂಲಕ ವಿದ್ಯಾರ್ಥಿಗಳಿಗೆ ಮುಂದಟ್ಟು ಮಾಡಲು, ಪ್ರತ್ಯಕ್ಷ ತೋರಿಸಲೂ ಅತ್ಯಂತ ಅನುಕೂಲವಾಗುವುದು ವಿಜ್ಞಾನ, ಭೂಗೋಲ ಇತಿಹಾಸ ವಾರಗಳ ಸಂಬಂಧವಾದ ವಿವರಾತ್ಮಕ ಸಂಗತಿಗಳನ್ನೂ, ಪ್ರದೇಶಗಳನ್ನೂ ಇತಿಹಾಸಿಕ ಸ್ಥಳಗಳನ್ನೂ ಮಕ್ಕಳಿಗೆ ಪ್ರತ್ಯಕ್ಷ ತೋರಿಸಬಹುದು ಚಲಚಿತ್ರಗಳಿಂದ ಶಿಕ್ಷಣವು ಆನಂದದಾಯಕವಾಗಿ ವ್ಯಕ್ತಿತ್ವ ವಿಕಾಸಕ್ಕೆ ಬಹಳ ಸಹಾಯವಾಗುವುದು ಮಕ್ಕಳೆನ್ನು ಪುಸ್ತಕಗಳ ಬಂಧನದಿಂದ ಸ್ವಲ್ಪ ಮಟ್ಟಿಗಾದರೂ ವಿಮುಕ್ತಗೊಳಿಸಿದಂತಾಗಿ ಅವರ ಬೌದ್ಧಿಕ ಕ್ಷೇತ್ರ ವಿಕಾಸವು ಆರೋಗ್ಯಕರವಾಗಿ ಸಾಗುವುದು

ಸರಕಾರದ ಕರ್ತವ್ಯ

ಹೀಗೆ ಶಾಲೆಗಳ ಬೋಧನ ಕ್ರಮದಲ್ಲಿ ಚಲಚಿತ್ರಗಳನ್ನು ಉಪಯೋಗಿಸುವುದರಾತ್ಮಕ ಲಾಭದ ಕುರಿತು ಹೇಳಿದ ಮೇಲೆ ಇಂತಹ ವ್ಯವಸ್ಥೆಯನ್ನು ಶಿಕ್ಷಣ ಸಂಸ್ಥೆಗಳಲ್ಲಿ ಮಾಡಿಕೊಳ್ಳಲು ಬೇಕಾಗುವ ಸಂದರ್ಭಗಳ ಅನುಕೂಲತೆಗಳ ಕುರಿತು ಯೋಚಿಸಬೇಕಾಗುತ್ತದೆ. ನಮ್ಮ ರಾಷ್ಟ್ರದ ಹೆಚ್ಚಿನ ಶಾಲೆಗಳು ತೀರ ನಿಕೃಷ್ಟ ಆರ್ಥಿಕ ಪರಿಸ್ಥಿತಿಯವು. ವಿದ್ಯಾರ್ಥಿಗಳ ಕನಿಷ್ಟ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲಿಕ್ಕೂ ಅವುಗಳಿಗೆ ಅದಿಷ್ಟೂ ಆಡಳಿತೆಗಳಿವೆ ಚಲಚಿತ್ರಗಳ ಏರ್ಪಾಡುಗಳನ್ನೂ ಅವುಗಳ ಸಲಕರಣೆಗಳನ್ನು ಮಾಡಿಕೊಳ್ಳಬೇಕಾದರೆ ಅಪಾರ ಹಣದ ಅವಶ್ಯಕತೆಯಿದೆ ಈ ದಿಶೆಯಲ್ಲಿ ಸರಕಾರದವರು ಒಂದು ಸೌಲಭ್ಯದ ಏರ್ಪಾಡನ್ನು ಮಾಡಿದರೆ ಉಚಿತವೆನಿಸುವುದು. ಒಂದು ಪ್ರದೇಶದ ಕೆಲವು ಶಾಲೆಗಳಿಗೆ ಒಂದು ಚಲಚಿತ್ರ ಉಪಕರಣ ಜೋಡನೆಯನ್ನು ಮಾಡಿ ಕೊಡಬೇಕು. ಆ ಶಾಲೆಗಳು ಅದರ ಖರ್ಚನ್ನು ಕಂತಿನ ಮೂಲಕ ತೆರಬೇಕು ಒಂದು ನಿರ್ದಿಷ್ಟ ಅವಧಿಯಲ್ಲಿ ಆಯಾ ಶಾಲೆಗಳಲ್ಲಿ ಚಲಚಿತ್ರ ಪ್ರದರ್ಶನದ ಏರ್ಪಾಡನ್ನೂ ಮಾಡಿಕೊಳ್ಳಬೇಕು ಸರಕಾರದ ಪ್ರಯೋಗಶಾಲೆಗಳ ನಿಪುಣ ಪ್ರಾಣಿ ಸ್ನಾಗ್ರಹಾಲಯ, ತೋಟಿ ಉಪವನಗಳನ್ನು ಈ ಚಲಚಿತ್ರ ಸಂಸ್ಥೆಗಳ ವಶದಲ್ಲಿರಿಸಬೇಕು.

ಎತ್ತಲ್ಪಡುವ ಚಿತ್ರಗಳಿಂದ ಮಕ್ಕಳಿಗೆ ಶಿಕ್ಷಣ ವಿಷಯಗಳನ್ನು ಸ್ಪಷ್ಟವಾಗಿ ಮನದಟ್ಟು ಮಾಡುವುವುಗಳಿಗಿಂತಲೆ ಕಲ್ಲದೆ ಅವುಗಳ ಪ್ರದರ್ಶನ ವಿಧಾನವು ಮಕ್ಕಳಲ್ಲಿ ಹರ್ಷಾನಂದವನ್ನುಂಟುಮಾಡುವಂತಹುಗಳಾಗಿರಬೇಕು ಇಲ್ಲವೆಂದರೆ ಎಸಳಿಗೆ ಎಸರಿಕೆಯನ್ನುಂಟುಮಾಡುವಂತಹುಗಳಾಗಿರಬಾರದು ಮಕ್ಕಳಿಗೆ ಆಸಕ್ತಿ ಮೂಲಕವಾದ ಕಲಿಸುವಿಕೆಯನ್ನು ಶಿಕ್ಷಣ ಶಾಸ್ತ್ರವು ಹೇಳುತ್ತದೆ ಅದೇ ರೀತಿ ಜವಾಬ್ದಾರಿಕೆಯಿಂದ ಆಯ್ಕೆ ಮಾಡುವ ಚಲಚಿತ್ರಗಳಾದರೂ ಸಂತೋಷದಾಯಕವಾಗಿರಬೇಕು ಅಂದರೆ ರೂಪಿಸಲ್ಪಡುವ ವಿಷಯವು ಚಿತ್ತವೃತ್ತಾತ್ಮಾಗವುದು.

ಅಶ್ಲೀಲ ಚಿತ್ರಗಳು

ವಿದ್ಯಾರ್ಥಿಗಳಲ್ಲಿ ಚಲಚಿತ್ರ ಪ್ರೇಮವನು ಬೆಳೆಸುವ ಪ್ರಯತ್ನದಲ್ಲಿ ಕೆಲವೊಂದು ಮಹತ್ವದ ಸಂಗತಿಗಳನ್ನು ಅಲಕ್ಷಿಸುವ ಸಂಭವವಿದೆ ಶಾಲೆಗಳಲ್ಲಿ ಶೈಕ್ಷಣಿಕ ಚಲಚಿತ್ರಗಳ ವೈದರ್ಶನದ ಏರ್ಪಾಡುಗಳನ್ನು ಮಾಡುವಾಗ ಸರಕಾರದವರು ಸಾರ್ವಜನಿಕರಲ್ಲಿ ಪ್ರದರ್ಶಿಸಲ್ಪಡುವ ಅಶ್ಲೀಲ ಸನ್ನಿವೇಶಗಳುಳ್ಳ ಚಲಚಿತ್ರಗಳನ್ನು ಶಾಲಾ ವಿದ್ಯಾರ್ಥಿಗಳು ನೋಡದಂತೆ ಹಿಂದೆ ತರದ ನಿಷೇಧವನ್ನು ಹೊಂಕರಿಸಬೇಕು. ಈಗಾಗಲೆ ಕೆಲವು ಕಡೆ ಇಂತಹ ಶಾಸನಗಳ ಮಾಡಲ್ಪಟ್ಟಿವೆ. ಚಿಕ್ಕ ವಯಸ್ಸಿನವರ ಮನಸ್ಸುಗಳನ್ನು ಹಾಳುಮಾಡುವ ಚಲಚಿತ್ರಗಳು ರಾಷ್ಟ್ರಹಿತದ ದೃಷ್ಟಿಯಿಂದಲೂ ಅಪಾಯಕಾರಕವಾಗಿವೆ. ಚಲಚಿತ್ರ ತಯಾರಕರಿಗೆ ಸಾಮಾಜಿಕ ನೀತಿ ನಿಯಮಗಳ ಕಟ್ಟುನಿಟ್ಟುವನ್ನು ಸರಕಾರದ ತಜ್ಞರು ಸೂಚಿಸಬೇಕು ಹೀಗೆ ಮಾಡಿದರೆ ಖಂಡಿತವಾಗಿಯೂ ನಮ್ಮ ಭಾವೀ ಜನಾಂಗವು ಆರೋಗ್ಯದಾಯಕವಾಗಿ ಅಭಿವೃದ್ಧಿ ಹೊಂದುವುದರಲ್ಲಿ ಸಂದೇಹ ವಿರಲಾರದು. ಈ ಹೊಣೆಗಾರಿಕೆಯನ್ನು ನಮ್ಮ ಚಲಚಿತ್ರ ತಯಾರಕ ಸಂಸ್ಥೆಗಳೂ ಅರಿತುಕೊಂಡು ಜನಾಂಗದ ಉತ್ತರೋತ್ತರ ಅಭಿವೃದ್ಧಿಗೆ ಅವರೂ ಸ್ಫೈರ್ಯದಿಂದ ತಮ್ಮ ಪಾತ್ರವನ್ನು ನಿರ್ವಹಿಸುವವರಾಗಬೇಕು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨

ಳಿರಿಂದಶಿ ತಿಂಗಳು,, ,, ೨½

ರೂ. ೧೦೦೦೦ಕ್ಕಿಂತ ಕಡಮೆಯಲ್ಲದ ರೂ ೧೦,೦೦೦ಗಳ ಕೆಳಗೆ ರೂ. ೫೦೦೦ ಗುಣಕದ ರೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

ಹೆಡ್ ಆಫೀಸು — ಬಾವಟೆಗುಡ್ಡೆ, ಮಂಗಳೂರ.

ಇತರ ಶಾಖೆಗಳು – ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906.

ವಿದೇಶನಿದೇಶ ವೃತ್ತವೈವಿಧ್ಯ

ಕೃಷಿ ಉಪಕರಣಗಳಿಗೆ ಪ್ರೋತ್ಸಾಹ

ಉಕ್ಕು ಕಬ್ಬಿಣ ಸರಬರಾಯಿ

ಪ್ರಾಂತ್ಯಗಳಲ್ಲೂ ಸಂಸ್ಥಾನಗಳಲ್ಲೂ ಅಟೀ ಹೆಚ್ಚಿನ ಕೃಷಿ ಉಪಕರಣಗಳನ್ನೂ ತಯಾರಿಸಲು ಕೇಂದ್ರ ಸರಕಾರದವರು 10 ಸಾವಿರ ಟನ್ ಕಬ್ಬಿಣ ಮತ್ತು ಉಕ್ಕನ್ನೂ ಸರಬರಾಯಿ ಮಾಡಲು ನಿರ್ಧರಿಸಿರುವರು ಆಹಾರ ವಸ್ತುಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹ ಕೊಡುವ ಚಳವಳಿಯ ಇದೊಂದು ಪ್ರಾಮುಖ್ಯ ಭಾಗವಾಗಿದೆ.

ಸಿಂಹಳ ಭಾರತ ಸಂಬಂಧ

ಸಿಂಹಳದ ಮುಖ್ಯ ಸ್ಪಧಾನ ಸೇನಾನಾಯಕೆಯವರು ಬೊಂಬಾಯಿಯಲ್ಲಿ ಭಾಷಣ ಮಾಡುತ್ತ "ಸಿಂಹಳದಲ್ಲಿನ ಭಾರತೀಯರ ಸಮಸ್ಯೆಯನ್ನು ಎರಡೂ ಸರಕಾರದವರು ತೃಪ್ತಿಕರವಾಗಿ ಇತ್ಯರ್ಥಿಸಿರುವರು ಕೆಲವು ಕುಹಕ ಸ್ವಾರ್ಥಿಗಳು ಮಾತ್ರ ಇನ್ನೂ ಚಿಳವಳಿಬ್ಬಿಸಲು ಪ್ರಯತ್ನಿಸುತ್ತಾರೆ ಸಿಂಹಳದಲ್ಲಿ ಹಿಂದೀಯರಿಗೆ ಒಳ್ಳೇ ರೀತಿಯಲ್ಲೇ ಕಾಣಲಾಗುತ್ತದೆ ದ ಆಫ್ರಿಕದಲ್ಲಿ ಹಿಂದೀಯರನ್ನು ಅಪಮಾನಕಾರಕ ರೀತಿಯಲ್ಲಿ ನಡೆಸುವುದರಿಂದ ಸಿಂಹಳೀಯರಿಗೂ ಅಪಮಾನಕಾರಕವಾಗಿಗೆ ಕಾರಣ ಎರಡೂ ಜನಾಂಗದವರು ಒಂದೇ ಜನರಂತಿರುವರು" ಎಂದು ಹೇಳಿದರು

ಸಂಸ್ಕೃತ ರಾಯಭಾರಿಗಳಾಗಬೇಕು

"ಸರಕಾರದವರು ವಿದೇಶಗಳಲ್ಲಿ ರಾಯಭಾರಿಗಳನ್ನು ಕಳುಹಿಸುವಾಗ ಆ ಸ್ಥಾನಗಳಿಗೆ ಸಂಸ್ಕೃತ ಬಲ್ಲವರನ್ನೂ ಭಾರತೀಯ ಸಂಸ್ಕೃತಿಯಲ್ಲಿ ನುರಿತವರನ್ನ ತುನಾಮಿ ಸಬೇಕಷ್ಟಿದ ತಜ್ಞ ತತ್ವಜ್ಞಿಗಳ ತಂಡವೊಂದನ್ನು ಸಾಂಸ್ಕೃತಿಕ ಪ್ರಚಾರಕೂಟವಾಗಿ ಆಗಿಂದಾಗ್ಗೆ ವಿದೇಶಗಳಿಗೆ ಕಳುಹಿಸಬೇಕು" ಎಂಬ ಠರಾವನ್ನೂ ಬನಾರಸದಲ್ಲಿ ಈಚೆಗೆ ಸೇರಿದ ಭಾರತೀಯ ಸಾಂಸ್ಕೃತಿಕ ಪರಿಷತ್ತಿನಲ್ಲಿ ವಂಜೂರು ಮಾಡಲಾಯಿತು ಬಾಬು ಪುರುಷೋತ್ತಮದಾಸ್ ಠಂಡನರು ಅಧ್ಯಕ್ಷತೆ ವಹಿಸಿದ್ದರು

ಬಲೂಚಿಗಳ ನಿಷೇಧ

ಪಾಕಿಸ್ತಾನಕ್ಕೆ ತಲೆನೋವು

ಬಲೂಚಿಸ್ತಾನದ ಆಡಳಿತಕ್ಕಾಗಿ ಪಾಕಿಸ್ತಾನ ಸರಕಾರವು ನೇಮಿಸಿದ ಸಲಹಾ ಮಂಡಳವನ್ನು ಅಲ್ಲಿನ ಶೇಕಡಾ 95 ಪ್ರಜೆಗಳ ಪ್ರತಿನಿಧಿಯೆನಿಸುವ ಗುಡ್ಡಕಾಡು ಬಲೂಚಿಗಳ ಸಂಘೆದನರು ಮನವಿ ಮಾಡಿದ್ದಾರೆ "ಪಾಕಿಸ್ತಾನವು ಇಸ್ಲಾಮಿ ರಾಜ್ಯವಾಗಿರುವುದರಿಂದ ಪ್ರಜಾಸತ್ತಾತ್ಮಕ ತತ್ವ ಬದ್ಧವಾಗಿದೆ ಬಲೂಚಿಸ್ತಾನದ ಆಡಳಿತಕ್ಕಾಗಿ ನೇಮಿಸಲ್ಪಟ್ಟ ಸಲಹಾಮಂಡಳವು ಆ ತತ್ವಕ್ಕೆ ವಿರುದ್ಧವಾದುದು ಇದನ್ನು ಪ್ರತಿಭಟಿಸಲು ಬಲೂಚಿ ಜಿರ್ಗಾಗಳ ಪ್ರತಿಯೊಬ್ಬ ಸದಸ್ಯನೂ ಕೊನೆಯ ಉಸಿರಿನ ತನಕ ಹೋರಾಡುವನು" ಎಂದು ಮೇಲ್ಕಂಡ ಮನವಿಯು ತಿಳಿಸುತ್ತದೆ

ಅಮರನಾಥನೂ ಕ್ರಿಕೆಟ್ ರಾಜಕೀಯವೂ

ಹಿಂದೂಸ್ತಾನದ ಕ್ರಿಕೆಟ್ ಕಂಟ್ರೋಲ್ ಬೋರ್ಡಿನವರು ಇಂಡಿಯಾ ಟೀಮಿನ ಕಪ್ತಾನನಾಗಿದ್ದ ಲಾಲಾ ಅಮರನಾಥನ ಮೇಲೆ ಶಿಸ್ತು ಉಲ್ಲಂಘನೆಯ ಗಂಭೀರ ಆರೋಪ ಹೊರಿಸಿ ಅವನನ್ನು ಕ್ರಿಕೆಟ್ ಕ್ಷೇತ್ರದಿಂದ ಹೊರ ನಿಲ್ಲಿಸಲು ನಿರ್ಧರಿಸಿದ್ದಾರೆ. ಕ್ರಿಕೆಟ್ ಬೋರ್ಡಿನ ಆಡಳಿತದ ಕುರಿತು ಟೀಕೆ ಮಾಡಿದನೆಂದೂ, ಅಸಭ್ಯ ಮಾತುಗಳನ್ನಾಡಿದನೆಂದೂ, ಬಹಿರಂಗ ಖಂಡನೆ ಮಾಡಿದೆನೆಂದೂ, ತನ್ನ ಕೈಕೆಳಗಿನ ಟೀಮನ್ನು ಗೌರವ ಯೋಗ್ಯವಾಗಿ ನಡೆಸಲಿಲ್ಲವೆಂದೂ, ಬೋರ್ಡಿನ ಅಪ್ಪಣೆ ಪಡೆಯದೆ ಸ್ವತಂತ್ರ ಕ್ರಿಕೆಟ್ ಸಂಸ್ಥೆಗಳಿಂದ ಬಹು ಮಾನ ಹಣ ಪಡೆದೆನೆಂದೂ ಮೊದಲಾಗಿ 23 ಆರೋಪಗಳ ಯಾದಿಯೊಂದು ಸಿದ್ಧ ಗೊಳಿಸಲಾಗಿದೆ ಇನ್ನು ಹದಿನೈದು ದಿನಗಳಲ್ಲಿ ಇವಕ್ಕೆಲ್ಲ ತಾನು ಉತ್ತರ ಕೊಡುವೆನಾಗಿ ಜನಸ್ಯ ಅಮರನಾಥನು ಪ್ರಕಟಿಸುತ್ತ "ಈ ಕ್ರಿಕೆಟ್ ರಾಜಕೀಯದ ಇನ್ನೊಂದು ಮುಗ್ಗಲನ್ನು ಕಾಣಿಸುವೆ" ಎಂದು ಪಂಥಕಟ್ಟಿರುವನು. ಉದಾರತ್ವಕ್ಕೆ ಹೆಸರುಹೋದ ಅರಸು ಆಟದ ಕ್ಷೇತ್ರದಲ್ಲಿ ಇಂತಹ ಪ್ರಸಂಗ ಶೋಚನೀಯವೆಂದು ಪತ್ರಿಕೆಗಳು ಲೌಕಿಕ ಸೂಚಿಸಿವೆ

ಶಿಸ್ತು ಪ್ರಿಯ ನೆಹರು

ಶಾಸನ ಉಲ್ಲಂಘನಾಪ್ರಿಯರೆಂದೂ, ನಿರಂತರ ಚಳವಳಿಗಾರರೆಂದೂ ನೆಹರೂಗಳು ಪ್ರಖ್ಯಾತಿ ಪಡೆದಿರುವರಷ್ಟೆ ಆದರೆ ಇಂದು ಹೊಣೆಗಾರಿಕೆಯ ಸ್ಥಾನ ಹೊತ್ತ ಅವರು ಅತೀ ಅಪ್ರಿಯ ಅಯಮವನ್ನು ಸೃಷ್ಟಿಸುವುದಂತೆ ಕಾವಾಡುತ್ತಿರುವುದು ಎಲ್ಲರ ವೆ ತ್ಯೆಗೆಯನ್ನು ಹೆಚ್ಚಿಸಿದೆ ಲಂಡನಿನ ಮಹಾಹತ ಪರಿಷತ್ತಿಗೆ ಹೋಗಿ ಮರಳುವಾಗ ನೆಹರುಗಳು ಸ್ವಿಜರ್ಲೆಂಡಿಗೆ ಹೋಗಿದ್ದರು ಜ್ಯೂರಿಚ್ ತುಂಬ ಗೌರವದ ಸನ್ಮಾನವನ್ನು ಸ್ವೀಕರಿಸಿ ಅವರು ಸ್ವದೇಶಕ್ಕೆ ಹಿಂತಿರುಗಿದರು ಸ್ವಿಸ್ ಜನರು ಅವರಿಗೆ ತನ್ನ ದೇಶದ ಪ್ರಖ್ಯಾತ ಚಿಂತಕ ಲೇಟನ್ನು ಕಾಣಿಕೆ ಕೊಟ್ಟರು ಕಲವರು ಅಲ್ಲಿನ ಅತಿ ತುಂಬದ ಹೂಗಳನ್ನು ಅರ್ಪಿಸಿದರು ನೆಹರುಗಳು ಪುಷ್ಪಸಮರ್ಪಣ ಅವರು ತಮ್ಮ ಕೋಟಿನಲ್ಲಿ ಬಾವಂಗಲೂ ಶುಭಸೂಚಕ ವರ್ಣಗಳ ಹೂವುಗಳನ್ನು ಧರಿಸುತ್ತಾರೆ ಸ್ವಿಜರ್ಲೆಂಡಿನಲ್ಲಿ ಕೊಟ್ಟ ಹೂಹಾರಗಳನ್ನ ತನ್ನೊಡನೆ ಸ್ವದೇಶಕ್ಕೆ ತರಲು ಅವುಗೆ ತುಂಬಾ ಇಚ್ಛೆ ಇತ್ತು ಆದರ ವಿಮಾನ ಕಾಮಾದೆಯ ನ್ಯಯ ವಿಶೇಷದಿಂದ ಹೂಗಳನ್ನು ತರಲು ಬರ್ಬಂಧವಿದೆ ಈ ಬರ್ಬಂಧವನ್ನು ಮುರಿದು ಸುಲಭವಾಗಿ ನೆಹರುಗಳು ಹೂಗಳನ್ನು ತಂದು ಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ ಆ ಹೂಗಳನ್ನು ಸ್ವಿಜರ್‌ಲೆಂಡಿನ ಆಸ್ಪತ್ರೆಗಳಲ್ಲಿ ಹಂಚಲು ಅವರು ವಿನಂತಿ ಮಾಡಿಕೊಂಡರು

ವೈದ್ಯರೆಂದು ಏಕಾಗಬಾರದು? ಹಿಂದೀ ವೈದ್ಯ ಪದವಿಯ ಪ್ರಶಸ್ತಿ

ಭಾರತೀಯ ವೈದ್ಯ ವಿಧಾನವನ್ನು ಕಲಿತ ವೈದ್ಯಕೀಯ ವೃತ್ತಿಯ ಅಭ್ಯಾಸಿಗಳು ತಮ್ಮ ಪದವಿ ಸೂಚಕ ಅಕ್ಷರಗಳ ಮುಂದೆ (ಭಾರತೀಯ ವೈದ್ಯ ಶಿಕ್ಷಣ) ಎಂಬರ್ಥ ಸೂಚಕ ಶಬ್ದಗಳನ್ನು ಹಾಕಬೇಕು ಎಂದು ಹಿಂದೂಸ್ತಾನ ಸರಕಾರದ ನಿರ್ದೇಶವಿತ್ತು. ಇಂಥ ವೈದ್ಯರಲ್ಲಿ ಕೆಲವರು ಡಾಕ್ಟರ್ ಎಂದು ತಮ್ಮ ಹೆಸರಿನ ಮುಂದೆ ಹಾಕುತಿದ್ದರು. ಈಗ ಎಲ್ ಐ. ಎಸ್. ಡಿಗ್ರಿಪಡೆದವರು ಭಾರತೀಯ ವಿಧಾನವೆಂಬರ್ಥದ ಶಬ್ದಗಳನ್ನು ಹಾಕಬೇಕಿಲ್ಲ, ಬರೇ ಡಾಕ್ಟರ್ ಎಂದು ಹಾಕಿಕೊಳ್ಳುವನವರು ಹಾಗೆ ಸೂಚಿಸಬೇಕು ಎಂದು ಹಿಂದಿನ ಆಜ್ಞೆಯಲ್ಲಿ ತಿದ್ದುಪಡಿ ಮಾಡಲಾಗಿದೆ ಈ ಕುರಿತು ಒಂದು ಪ್ರಮುಖ ಪತ್ರಿಕೆ ಹೀಗೆ ಬರೆಯುತ್ತದೆ. "ಆಯುರ್ವೇದ ವಿಧಾನ ಕಲಿತವರು ಡಾಕ್ಟರ್ ಎಂದು ಏಕೆ ಹಾಕಿಕೊಳ್ಳಬೇಕು? ವೈದ್ಯ ಇಲ್ಲವೆ ವೈದ್ಯರಾಜ್ ಎಂದು ಹಾಕಿಕೊಂಡರೆ ಹೆಚ್ಚು ಭೂಷಣಪ್ರಾಯವಲ್ಲವೆ? ಇನ್ನೂ ನಮ್ಮಲ್ಲಿ ಪಾಶ್ಚಾತ್ಯ ಶಬ್ದ ಆಡಂಬರದ ಬೆಡಗು ಕಡಿಮೆಯಾಗದಿರುವುದು ಖೇದಕರ"

ಬೌದ್ಧ ಸಂಸ್ಥಾನ ಭಾರತಕ್ಕೆ ವಿಲಿನೀಕರಣಕ್ಕೆ ವಿನಂತಿ

ಕಾಶ್ಮೀರವು ಇಂದಿಗೆ ಬಹು ಸಮಯದಿಂದ ತುಂಬಾ ವೆಳಕಿಗೆ ಬಂದಿರುವುದಾದರೂ ಆ ಸಂಸ್ಥಾನದೊಳಗೆ ಒಕುಮಂದಿ ಬೌದ್ಧ ಜನರಿರುವ ಲೆಡ್ಡಾಂ ಎಂಬ ವ್ಯಾಪ್ತಿಯಿರುವ ಸಂಗತಿ ಈಚೆಗೆ ಗಮನಕ್ಕೆ ಒಂದಿರುತ್ತದೆ ಅದೊಂದು ಚಿಕ್ಕ ಸಂಸ್ಥಾನವೇ ಆಗಿದೆ ಅಲ್ಲಿನ ಕೆಲ ಪ್ರತಿಷ್ಠಿತ ಬೌದ್ಧ ಸನ್ಯಾಸಿಗಳು ಈಚೆಗೆ ಕೇಂದ್ರ ಮಂತ್ರಿ ಗೋಪಾಲಸ್ವಾಮಿ ಅಯ್ಯಂಗಾರರನ್ನು ಭೇಟಿಯಾಗಿ ತಮ್ಮ ಪುಟ್ಟ ಸಂಸ್ಥಾನವನ್ನು ಹಿಂದೂಸ್ತಾನಕ್ಕೆ ಸೇರಿಸಬೇಕೆಂದು ಬಿನ್ನವಿಸಿಕೊಂಡಿತ ಶೀ ಅಯ್ಯಂಗಾರರು ಯೋಗ್ಯ ಭರವಸೆಯ ಉತ್ತರವನ್ನು ಕೊಡುತ್ತ ಕಾಶ್ಮೀರದಲ್ಲಿ ತೊಂದವಣಗಳಾದರೆ ಬಹುವ ತವು ಹಿಂದೂಸ್ತಾನಕ್ಕೆ ಸೇರ್ಪಡೆಯ ವಿಷಯ ವಾಗಿಯೇ ವೀರೋಪ್ಪುವುದು ಎಂದು ಅವರು ಭವಿಷ್ಯ ಹೇಳಿದರು ಕಾಶ್ಮೀರದ ವಾಪ್ತಿಯ ಗಡಿಯಲ್ಲಿ ಪಾಕಿಸ್ತಾನಿ ಸೈನ್ಯಗಳು ಅಜಾದ್ ಕಾಶ್ಮೀರ ದಂಗೆಗಾರರಿಗೆ ಸಹಾಯಕೊಟ್ಟ ಸಮಾರು 30 ಕಿಲೋ ಪ್ರದೇಶಗಳನ್ನು ಹಿತಿಸಿರುವುದರ ಕುರಿತು ನಮ್ಮ ಸರಕಾರದವರ ಕಾಶ್ಮೀರ ಸಮಿತಿಗೆ ಆಕ್ಷೇಪ ಕಳುಹಿಸಿರುವರು

ಸಿಂಹಳದಲ್ಲಿ ಹರಿಜನ ಸಮಸ್ಯೆ

ಸ್ಪೃಶ್ಯರ ಅವಿಚಾರದ ವರ್ತನೆ

ಸಿಂಹಳ ದ್ವೀಪದ ಬಾದುಲ್ಲ ನಗರದ ಹತ್ತಿರದ ಹಳ್ಳಿಯಾದ ಕಂಡಾಗಲಿಯಾ ಎಂಬಲ್ಲಿ ರೋದಿಯೋ ಜಾತಿ ಹರಿಜನ ವರ್ಗದ ಹುಡುಗರನ್ನು ಶಾಲೆಗಳಲ್ಲಿ ಸೇರಿಸಿದ್ದೇ ಅಲ್ಲಿನ ಶಾಲೆಗಳು ಖಾಲಿಯಾಗಲಿಕ್ಕೆ ಕಾರಣವಾಯಿತೆಂದು ತಿಳಿದುಬರುತ್ತದೆ. ಅಲ್ಲಿನ ಒಂದು ಶಾಲೆಯಲ್ಲಿ ೨೮೭ ಹುಡುಗರು ಇದ್ದರು. ಉಪಾಯವಿಲ್ಲದೆ ನಾಲ್ಕು ಜನೆ ಹರಿಜನೆ ಹುಡುಗರನ್ನು ಶಾಲೆಗೆ ಸೇರಿಸಿಕೊಳ್ಳಬೇಕಾಯಿತು. ಆಗ ಸ್ಪೃಶ್ಯ ಹುಡುಗರ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ನಿಲ್ಲಿಸಿಬಿಟ್ಟರು. ಶಾಲೆಯ ಉಪಾಧ್ಯಾಯರೂ ಹೆತ್ತವರ ಈ ವರ್ತನೆಗೆ ಪ್ರೋತ್ಸಾಹ ಕೊಟ್ಟರೆಂಬ ಸಂಗತಿಯು ಇನ್ನಷ್ಟು ಕೌತುಕವನ್ನುಂಟುಮಾಡಿದೆ. ಹೆತ್ತವರು ಒಂದು ಸಾರ್ವಜನಿಕ ಸಭೆಗೂಡಿಸಿ "ಎಲ್ಲಿಯ ತನಕ ಹರಿಜನರು ಆ ಶಾಲೆಯಲ್ಲಿರುವರೊ ಅಲ್ಲಿಯ ತನಕ ತಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸಬಾರದೆಂದು" ನಿರ್ಧರಿಸಿದರಂತೆ!

ಪ್ರಾಂತ್ಯ ಭಾಷೆಗಳಲ್ಲಿ ಶೀಘ್ರ ಲಿಪಿ

ಕನ್ನಡದಲ್ಲೂ ಮಾಡಲು ಪ್ರಯತ್ನಗಳು

ಹಿಂದೀ ಮತ್ತು ಮರಾಠಿ ಭಾಷೆಗಳಲ್ಲಿ ಶೀಘ್ರ ಲಿಪಿ (Short hand) ವಿಧಾನದಿಂದ ಬರೆದುಕೊಳ್ಳುವುದನ್ನು ಶಾಸ್ತ್ರೀಯವಾಗಿ ಕಲಿಸುವ ಏರ್ಪಾಡನ್ನು ವಾರ್ಧಾದ ಗೋವಿಂದರಾಮ್ ಸೆಕ್ಸೇರಿಯಾ ವಾಣಿಜ್ಯ ಶಿಕ್ಷಣ ಶಾಲೆಯಲ್ಲಿ ಮಾಡಲಾಗಿದೆ. ಕನ್ನಡದಲ್ಲಿಯೂ ಶೀಘ್ರಲಿಪಿಯನ್ನು ಬಳಸುವ ಏರ್ಪಾಡು ಮೈಸೂರು ಮೊದಲಾದ ಕೆಲವು ಕಡೆಗಳಲ್ಲಿ ಇದೆಯಾದರೂ ಈ ಭಾಷೆ ವಿಶಿಷ್ಟ ವಿಧಾನದ ಶೀರ್ಘಲಿಪಿಯನ್ನು ರಚಿಸಿ ಅದನ್ನು ಶಾಲೆಗಳ ಮೂಲಕ ಕಲಿಸುವ ಏರ್ಪಾಡಿನ ಪ್ರಯತ್ನಗಳಾಗಬೇಕಾಗಿದೆ ಕರ್ನಾಟಕ ವಿದ್ಯಾಶಿಕ್ಷಣ ರಚನೆಯಾಗಲಿರುವಾಗ, ಕನ್ನಡ ಪತ್ರಿಕೋದ್ಯಮ ಅಭಿವೃದ್ಧಿಯಾಗಬೇಕಿರುವಾಗ ಇದರ ಅವಶ್ಯಕತೆಯನ್ನು ಬೇರೆ ಒತ್ತಿ ಹೇಳಬೇಕಾಗಿಲ್ಲ ಆಗಲೆ ಕನ್ನಡ ಲಿಪಿಯನ್ನು ಶಿಕ್ಷಣ ದೃಷ್ಟಿಯಿಂದಲೂ ಮುದ್ರಣ ಸೌಕರ್ಯ ದೃಷ್ಟಿಯಿಂದಲೂ ಸುಧಾರಿಸುವ ಪ್ರಯತ್ನಗಳಾಗಿದೆ ಅಂತೆ ಕನ್ನಡ ಶೀಘ್ರ ಲಿಪಿಯ ಕಾರ್ಯವೂ ನಡೆಯಲಿ ಎಂಬ ಇಚ್ಛೆ ಹಾರೈಕೆಯಿದೆ

ವಿದ್ಯಾರ್ಥಿಗಳ ವರ್ತನೆ

ವಿಚಿತ್ರ ತರದ ಆಗ್ರಹಗಳು

ಹಿಂದೂಸ್ತಾನದಲ್ಲಿ ವಿದ್ಯಾರ್ಥಿಗಳು ಹೀಗೆ ವರ್ತಿಸುತ್ತಿರುವರೆಂದು ಪಂಡಿತ್ ನೆಹರೂಗಳು ಲಂಡನ್ನಿನಲ್ಲಿನ ಹಿಂದೀ ವಿದ್ಯಾರ್ಥಿಗಳಿತ್ತ ಸತ್ಕಾರ ಕೂಟದಲ್ಲಿ ತಿಳಿಸಿದರು. "ಸಾಕಷ್ಟು ನೌಕರ್ಯಗಳು ಸಿಗದಿದ್ದರೂ ಪಾಸ್ ಮಾಡಬೇಕೆಂದು ಹಟ ಹಿಡಿದವರಿದ್ದಾರೆ ಸರ್ದಾರ್ ವಲ್ಲಭಾಯಿಯವರು ಒಸ್ಮಾನಿಯಾ ವಿಶ್ವ ವಿದ್ಯಾಲಯಕ್ಕೆ ಭೇಟಿಯಿತ್ತ ಗೌರವಾರ್ಥವಾಗಿ ಏರ್ಪಡಿಸಿದ್ದ ಸಭೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ತೇರ್ಗಡೆ ಕೊಡಬೇಕೆಂದೂ ಒಂದು ಸುನಾವಿ ಒಪ್ಪಿಸಲಾಗಿತ್ತು." ಈಚೆಗೆ ವಿದ್ಯಾರ್ಥಿಗಳ ವರ್ತನೆ ಪರಮಾವಧಿ ಶಿಸ್ತಿಗೆ ಮುಟ್ಟಿದೆ ಎಂದು ಭಾವಿಸಲಾಗಿದೆ. ಪಂಜಾಬ್ ವಿಶ್ವವಿದ್ಯಾಲಯದ ಒರ್ವ ವಿದ್ಯಾರ್ಥಿ ಕೈಯಲ್ಲಿ ಬಂದೂಕು ಹಿಡಿದು ಉಪಾಧ್ಯಾಯರನ್ನು ಗದರಿಸಿ ನಕಲು ಹೊಡೆದನಂತೆ!



ಸ್ವದೇಶಾಭಿಮಾನಿ

ತಾರೀಕು 20—5—1949

ಅಕ್ಕಿ ಭತ್ತಗಳ ಕಂಟ್ರೋಲು

ತಿದ್ದುಪಡಿ ಸೂಚನೆ

ಸುಬ್ರಹ್ಮಣ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಆಹಾರ ಪರಿಷತ್ತಿನ ಒಂದು ಸಭೆ ಇತ್ತೀಚೆಗೆ ಜರಗಿತು. ಶ್ರೀ ಕೆ. ಆರ್. ಶ್ರೀರಂತರು ಅಧ್ಯಕ್ಷತೆ ವಹಿಸಿಕೊಂಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾದ ಶ್ರೀ ಎಸ್. ಆರ್. ಕೈವಾರರೂ ಹಾಜರಿದ್ದರು.

ಈ ಪರಿಷತ್ತಿನಲ್ಲಿ ಅಧ್ಯಕ್ಷತೆ ವಹಿಸಿದ ಶ್ರೀ ಕಾರಂತರು ಈಗಿನ ಅಕ್ಕಿ ಭತ್ತಗಳ ಕಂಟ್ರೋಲು ಪದ್ಧತಿ ಮತ್ತು ಅದಕ್ಕಾಗಿ ಅಕ್ಕಿ ಸಂಗ್ರಹದ ಕ್ರಮ ಹೇಗೆ ನಡೆಯುತ್ತಿದೆಯೆಂಬ ಬಗ್ಗೆ ತಮ್ಮ ಅನುಭವ ವಿವರಿಸಿ ಹೇಳಿದರು ಅವರ ಭಾಷಣದ ಮುಖ್ಯ ಅಂಶಗಳು ಈ ಕೆಳಗಿನಂತಿವೆ

ಬಡ ಧನಿಂದ ಇವರು ಊಟಕ್ಕಾಗಿ ಆಥವಾ ಬೀಜಕ್ಕೆ ಇಟ್ಟ ಅಕ್ಕಿ ಭತ್ತ ಒಂದೆರಡು ಮುಡಿ ಇದ್ದುದನ್ನು ಕೂಡಾ ಕಿತ್ತು ಕೊಂಡು ಹೋಗುತ್ತಾರೆ. ಈ ಬಗ್ಗೆ ರಾತ್ರೆ ಕೂಡಾ ಮನೆ ನುಗ್ಗಿ ಜಪ್ತಿ ಮಾಡುತ್ತಾರೆ ಆದರೆ ಶ್ರೀಮಂತರನೇಕರು ತಾವು ಕೂಡ ತಕ್ಕ ಅಕ್ಕಿ ಕೂಡಾ ಕೊಡದೆ ಕಳ್ಳಸಂತೆಯಲ್ಲಿ ಮಾರುತ್ತಾರೆ.

ಬಡ ಜಾಲಗೇಣಿ ಒಕ್ಕಲುಗಳಿಂದ ಧನಿಗೆ ಸಲ್ಲಲಿಕ್ಕಿದ್ದ ಪೂರ್ಣ ಅಕ್ಕಿ ಇವರು ಕೊಡಬೇಕೆಂದು ಕೇಳುವುದು ಈಗಿನ ಪದ್ಧತಿ. ಜಾಲಗೇಣಿ ಒಕ್ಕಲುಗಳು ನಿಜವಾಗಿ ತಮ್ಮಿಂದ ಸಲ್ಲುವ ಎಲ್ಲಾ ಗೇಣಿ ಅಕ್ಕಿ ಆಥವಾ ಭತ್ತದ ರೂಪದಲ್ಲೆ ವಸೂಲು ಕೊಡಬೇಕೆಂದಿಲ್ಲ. ತನ್ನ ಉತ್ಪತ್ತಿಯಲ್ಲಿ ತನ್ನ ಸ್ವಂತ ಖರ್ಚಿಗೆ ಬೇಕಾದಷ್ಟು ಇಟ್ಟುಕೊಂಡು ಧನಿಗೆ ಅಕ್ಕಿ ಕ್ರಯ ಪಾವತಿ ಮಾಡುವ ಸಾಂಪ್ರದಾಯ ಇದೆ ಮಾತ್ರವಲ್ಲ ಈ ಸಂಗ್ರಹ ಕಾರ್ಯಕ್ರಮಕ್ಕೆ ಮೊದಲು ಎಷ್ಟು ಮಂದಿ ಧನಿಗಳಿಗೆ ಪೂರ್ಣ ಗೇಣಿ ವಸೂಲಾಗುತ್ತಿತ್ತು? ಸಂಗ್ರಹ ಕಾರ್ಯಕ್ರಮದಿಂದ ಧನಿಗಳಿಗೆ ಗೇಣಿ ವಸೂಲು ಮಾಡಿಕೊಡುವ ಕೆಲಸ ಸರಕಾರದವರು ವಹಿಸಿಕೊಂಡಂತಾಗಿದೆ.

ಹೀಗೆ ಕೊಡಲು ಸಾಧ್ಯವಿಲ್ಲದಷ್ಟು ಅಕ್ಕಿ ಒಕ್ಕಲುಗಳಿಂದ ಕೇಳಿ ಸಿಕ್ಕಿದಷ್ಟು ಕೊಂಡು ಹೋಗಿ ಆ ಮೇಲೆ ಆ ಒಕ್ಕಲಿಗೆ ಬಿ. ರೇಶನ್ ಕಾರ್ಡು ಕೊಟ್ಟು ರೇಶನ್ ಅಂಗಡಿಯಿಂದ ಊಟಕ್ಕೆ ಅಕ್ಕಿ ಪಡೆಯಲು ಹೇಳುತ್ತಾರೆ. ರೇಶನ್ ಅಂಗಡಿ ಅವನ ಮನೆಯಿಂದ ಏಳೆಂಟು ಮೈಲು ದೂರ ಇರುವುದೂ ಉಂಟು. ಅವನು ಬೆಳೆಯಿಸಿದ ಒಳ್ಳೆಯ ಅಕ್ಕಿ ಅವನಿಂದ ಕೊಂಡುಹೋಗಿ ಮತ್ತೆ ಯಾವ ಊರಿನದೊ ಕೆಟ್ಟ ಅಕ್ಕಿ ಅವನಿಗೆ ಕೊಡುತ್ತಾರೆ. ಅವನ ಅಕ್ಕಿಗೆ ಅವನಿಗೆ ಕೊಡುವ ಕ್ರಯಕ್ಕಿಂತ ಅವನು ಮತ್ತೆ ಅಕ್ಕಿ ಪಡೆಯುವಾಗ ಹೆಚ್ಚಿನ ಕ್ರಯ ಕೊಡಬೇಕು.

ಈ ಬಗೆಯ ಅನ್ಯಾಯದ ಅಮಾನುಷ ಕ್ರಮ ದೇಶದ ಬೇರೆ ಯಾವ ಭಾಗದಲ್ಲಿಯೂ ಇಲ್ಲ. ಇದು ಈ ನಮ್ಮ ಜಿಲ್ಲೆಯಲ್ಲಿ ಮಾತ್ರ ನಡೆಯುತ್ತದೆ.

ರೆವೆನ್ಯೂ ಅಧಿಕಾರಿಗಳು ಬಡಪರ ಮೇಲೆ ಸಹಾನುಭೂತಿ ತೋರಬೇಕು. ದೊಡ್ಡವರ ದಾಕ್ಷಿಣ್ಯಕ್ಕೆ ಬಲಿಬೀಳಬಾರದು ಆದೇ ರೀತಿ ದೊಡ್ಡವರಾದವರೂ ಆಹಾರದ ವಿಷಯದಲ್ಲಿ ಕಳ್ಳಸಂತೆ ವ್ಯಾಪಾರ ಮಾಡದೆ ತಮ್ಮ ಉಳಿತಾಯವೆಲ್ಲವನ್ನೂ ನಿರ್ವಂಚನೆಯಿಂದ ಒಪ್ಪಿಸಬೇಕು.

ಇದಿಷ್ಟು ಶ್ರೀ ಕಾರಂತರ ಭಾಷಣದ ಸಾರಾಂಶ. ಶ್ರೀ ಗಿರಿಯಪ್ಪನವರು ಸಭೆಯಲ್ಲಿ ಮಾತನಾಡುತ್ತ ಶ್ರೀ ಕಾಡುತರು ಹೇಳಿದಂತೆ ಊರಲ್ಲಿ ಅನ್ಯಾಯ ನಡೆಯುತ್ತಿದೆಯಾಗಿ ತಾನೂ ಕೇಳಿದ್ದೇನೆ ಎಂದರು.

ಶ್ರೀ ಕಟ್ಟೆ ಗೋವಿಂದಯ್ಯ ಮೊದಲಾದ ಸ್ಥಳೀಯ ವರ್ಗದವರು ತಮ್ಮಲ್ಲಿ ನಡೆದ ಇಂಥ ಅತ್ಯಾಚಾರಗಳ ಉದಾಹರಣೆ ಹೇಳಿದರು

ಇಷ್ಟೆಲ್ಲ ಅನಾಹುತ ತಪ್ಪಿಸಬೇಕಾದರೆ ಕಂಟ್ರೋಲು ಮತ್ತು ಸಂಗ್ರಹ ಪದ್ಧತಿ ಇವನ್ನು ಪೂರ್ಣವಾಗಿ ತೆಗೆದುಹಾಕುವುದೊಂದೇ ದಾರಿಯೆಂದು ಶ್ರೀ ಸಿ ಕೆ. ಪದ್ಮಯ್ಯ ಗೌಡರು ತಮ್ಮ ನಿರ್ಧಾರ ಹೇಳಿದರು ಶ್ರೀ ಐತಪ್ಪ ರೈಯವರು ಈ ಮಾತನ್ನು ಸಮರ್ಥಿಸಿದರು

ಮೈಸೂರು ಸಂಸ್ಥಾನದ ಶ್ರೀ ಕೃಷ್ಣಭಟ್ಟರು ಇದಕ್ಕೆ ಆಕ್ಷೇಪ ಹೇಳಿದರು ಸಂಗ್ರಹ ಕಾರ್ಯ ಬಿಟ್ಟರೆ ಫೇಟೆಯವರ ಗತಿಯೇನೆಂದು ಕೇಳಿದರು

ಕೊನೆಗೆ ಅಧ್ಯಕ್ಷರು ಹೊಸ ಸೂಚನೆಯೊಂದನ್ನು ಮಾಡಿದರು ಈಗಿನ ಕಂಟ್ರೋಲು ಪದ್ಧತಿಯಲ್ಲಿ ತಿದ್ದುಪಡಿ ಮಾಡಿದರೆ ಎಲ್ಲವೂ ಸರಿಯಾಗುವುದೆಂದರು

ಅಕ್ಕಿ ಭತ್ತಗಳ ಸಾಗಿಸುವಿಕೆ ಕಂಟ್ರೋಲಿಗೊಳಪಡಬೇಕು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ, ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಅಥವಾ ಜಿಲ್ಲೆಯ ಹೊರಗೆ ಪರ್ಮಿಟಿಲ್ಲದೆ ಅಕ್ಕಿ ಒಯ್ಯಲು ಸಾಧ್ಯವಿಲ್ಲದಂತೆ ಮಾಡಬೇಕು ಅಕ್ಕಿ ಭತ್ತಗಳ ಕ್ರಯ ನಿರ್ಣಯಿಸಬೇಕು. ಅಕ್ಕಿ ಹೆಚ್ಚುಳಿದ ಮಾರಾಟ ಮಾಡುವವರು ಸರಕಾರದ ಏಜನ್ಸಿಗಳಲ್ಲದೆ ಇತರ ಯಾರಿಗೂ ಮಾರಬಾರದೆಂದು ಕಟ್ಟು ಇಡಬೇಕು.

ಯಾವನೊಬ್ಬನು ಅಕ್ಕಿ ಬಹಳ ದೀರ್ಘ ಕಾಲ ಇಟ್ಟುಕೊಳ್ಳುವುದು ಸಾಧ್ಯವಿಲ್ಲ ಹೆಚ್ಚುಳಿದ ಅಕ್ಕಿ ಮಾರಾಟಮಾಡಲೇಬೇಕು. ಅದನ್ನು ಕಳ್ಳಸಂತೆ ಮಾಡಲು ಬಿಡದಿದ್ದರೆ ಸರಕಾರಕ್ಕೆನೇ ಕೊಡಬೇಕಾಗುವುದು ನಮ್ಮ ಜಿಲ್ಲೆಯ ಮಟ್ಟಿಗೆ ಇದುತನಕ ಸರಕಾರದವರು ವರ್ಷಂಪ್ರತಿ ಒದಗಿಸುತ್ತಿದ್ದ 10 ಸಾವಿರ ಟನ್ನು ಅಕ್ಕಿ ನಮಗೆ ಹೊರಗಿನಿಂದ ಕೊಟ್ಟರೆ ಈ ಪದ್ಧತಿಯಂತೆ ಪೇಟೆಯವರಿಗೆ ಆಥವಾ ಅಕ್ಕಿ ಇಲ್ಲದ ಗ್ರಾಮಸ್ಥರಿಗೆ ಅಕ್ಕಿ ಒದಗಿಸಲು ಯಾವ ಕಷ್ಟವೂ ಆಗಲಾರದು. ಸಂಗ್ರಹ ಕಾರ್ಯಕ್ರಮದ ಅತ್ಯಾಚಾರಗಳೆಲ್ಲವನ್ನು ಹೋಗಲ್ಹಾಡಿಸಿದಂತೆಯೂ ಆಗುವುದು

ಶ್ರೀ ಕಾರಂತರ ಈ ಸೂಚನೆ ಶ್ರೀ ಪದ್ಮಯ್ಯ ಗೌಡರೇ ಮೊದಲಾದವರು ಒಪ್ಪಿಕೊಂಡು ಇದು ಆ ಸರಿಸಮಿತ್ತಿನಲ್ಲಿ ಮಂಜೂರಾಯಿತು

ಈ ಸೂಚನೆ ಸರಕಾರಕ್ಕೆ ಮಾನ್ಯವಿಲ್ಲ ವೆಂದಾದರೆ ಜಾಲಗೇಣಿ ಕೇಳುವ ಪದ್ಧತಿ ಬಿಟ್ಟು ಅವನ ಉಪಜ್ಞಿತ್ತಿಯಲ್ಲಿ ಸ್ವಂತ ಖರ್ಚಿಗೆ ಇಟ್ಟು ಉಳಿದ ಅಂಶ ಮಾತ್ರ ಕೇಳಬೇಕು. ಇಷ್ಟು ತಿದ್ದುಪಡಿಯಾದರೂ ಮಾಡುವುದು ಅಗತ್ಯವೆಂದು ಜಿಲ್ಲಾ ಆಹಾರ ಕಮಿಟಿಯಲ್ಲಿಯೂ ಪಾಸಾಗಿರುತ್ತದೆ ಅದನ್ನೇ ಈ ಪರಿಷತ್ತು ಸಮರ್ಥಿಸಿತು

ಕ್ರಯಗಳ ಹಾಗೂ ಅಕ್ಕಿ ಭತ್ತಗಳ ಚಲನವಲನದ ಕಂಟ್ರೋಲು ಮಾತ್ರ ಇಟ್ಟು ಸಂಗ್ರಹ ಕಾರ್ಯ ಬಿಟ್ಟುಬಿಡಬೇಕೆಂಬ ತಿದ್ದುಪಡಿ ಸೂಚನೆ ಬಹಳ ಆಕರ್ಷಕವಿರುತ್ತದೆ ಇದು ಸರಿಯಾಗಿ ವಿಚಾರಿಸಿದರೆ ಅವ್ಯವಹಾರ್ಯವಲ್ಲವೆಂದು ಕಂಡುಬರುತ್ತದೆ ಇವನ್ನನುಸರಿಸಿದರೆ ಈಗ ಆಹಾರ ಕ್ಕಾಗಿ ಪಡುವ ಕಷ್ಟಗಳೆನ್ನೆಲ್ಲ ಬಿಟ್ಟು ಸುಲಭವಾಗಿ ಈ ಸ್ಪಶ್ಟಿ ತೀರ್ಮಾನಿಸಿದಂತಾಗುತ್ತದೆ.

ಜಿಲ್ಲೆಯ ಅಧಿಕಾರಿಗಳೂ ಮಹಾಜನ ಮುಂದಾಳುಗಳೂ ಈ ಆಕರ್ಷಕ ಸೂಚನೆಯನ್ನು ಇನ್ನಷ್ಟು ವಿವೇಚಿಸಿ ತಮ್ಮ ಸ್ಪಷ್ಟ ಅಭಿಪ್ರಾಯ ವ್ಯಕ್ತಗೊಳಿಸುವುದು ಲಗತ್ಯ.

ಟೀಕೆ—ಟಿಪ್ಪಣಿಗಳು

ಮಂಗಳೂರಿಗೆ ವಿಮಾನ ನಿಲ್ದಾಣ ಮಂಜೂರಾಯಿತು

ಕೇಂದ್ರ ಸರಕಾರದ ಆರ್ಥಿಕ ಸಮಿತಿಯವರು ಮಂಗಳೂರಲ್ಲಿ ವಿಮಾನ ನಿಲ್ದಾಣ ಕಟ್ಟಲು ಅವಶ್ಯವುಳ್ಳ ಖರ್ಚು ಮಂಜೂರು ಮಾಡಿರುತ್ತಾರಾಗಿ ಈಗತಾನೆ ಪ್ರಕಟವಾಗಿರುತ್ತದೆ. ಗಂಜಿಮಠದ ಬಳಿಯ ಪದವಿನಲ್ಲಿ ಇದನ್ನು ನಿರ್ಮಿಸುವರೆಂದು ತಿಳಿದು ಬರುತ್ತದೆ

ವಿಮಾನ ನಿಲ್ದಾಣವಾದ ಬಳಿಕ ಇನ್ನು ಮಂಗಳೂರನ್ನು ದೊಡ್ಡ ಬಂದರವನ್ನಾಗಿ ಬೆಳೆಸಬೇಕೆಂಬ ನಿರ್ಣಯವಾಗುವ ಸಂಭವನೇ ಹೆಚ್ಚೆಂದು ಹೇಳಬಹುದು

ದೊಡ್ಡ ಬಂದರವನ್ನಾಗಿ ಮಂಗಳೂರನ್ನು ಆರಿಸಿದರೆ ಇಲ್ಲಿಂದ ರೈಲು ಮಾರ್ಗಗಳೂ ಸ್ವತೇವ ಹೆಚ್ಚಾಗುತ್ತವೆ

ಅಂತೂ ಮಂಗಳೂರಿನ ಭಾವೀ ಅಭಿವೃದ್ಧಿಗೆ ಈ ವಿಮಾನ ನಿಲ್ದಾಣ ಮೊದಲ ಸಿದರ್ಶನವೆಂದೇ ಭಾವಿಸಿದರೆ ತಪ್ಪಾಗಲಿಕ್ಕಿಲ್ಲವೆಂದು ಆಶಿಸುತ್ತೇನೆ

ಅಲೋಷಿಯಸ್ ಕಾಲೇಜು ರೆಕ್ಟರರಿಗೆ ವರ್ಗ

ಮಂಗಳೂರಿನ ಸೈಂಟ್ ಅಲೋಷಿಯಸ್ ಕಾಲೇಜಿನ ರೆಕ್ಟರರೂ ಪ್ರಿನ್ಸಿಪಾಲರೂ ಆದ ರೆವರೆಂಡ್ ಫಾದರ್ ಜೊಸೆಫ್ ಎ ಬಿ ಕೊಯಲೊರವರಿಗೆ ಬೆಂಗಳೂರಿಗೆ ವರ್ಗ ಮಾಡಿರುತ್ತಾರೆ.

ಇವರು ಈ ಕಾಲೇಜಿಗ ಮತ್ತು ತನ್ಮೂಲಕ ಈ ಜಿಲ್ಲೆಯ ಉಚ್ಚ ಶಿಕ್ಷಣಕ್ಕೆ ಮಾಡಿರುವ ಸೇವೆ ನಿಜವಾಗಿಯೂ ಚಿರಸ್ಮರಣೀಯ. ಇವರ ಸೇವೆಯನ್ನು ಕೊಂಡಾಡುವುದಕ್ಕಾಗಿ ಕೆಥೊಲಿಕ ಎಸೋಸಿಯೇಶನಿನವರು ಕೆಥೊಲಿಕ ಕ್ಲಬ್ಬಿನಲ್ಲಿ ಒಂದು ಮಹಾ ಸಭೆ ನಡೆಸಿದರು. ಮಲಬಾರಿನ ಜಿಲ್ಲಾ ಜಡ್ಜರಾದ ಇ. ಎ ಲೋಬೊ ಇವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಗಳಾದ ಜೆ. ಸಿ. ರೇಗೋ, ವಿಂ. ಮಾಧವರಾವ್, ಯು. ಕಣ್ಣಪ್ಪ, ಕೆ. ಸೂರ್ಯನಾರಾಯಣ ಅಡಿಗ ಮತ್ತು ಬಿ ಎಸ್. ಭಾಸ್ಕರ ರೈ ಇವರು ಮಾತನಾಡಿ ರೆಕ್ಟರರ ಕುರಿತು ತಮ್ಮ ಅನುಭವ ಹೇಳಿದರು. ಈ ಸಭೆಯಲ್ಲಿ ರೆಕ್ಟರರಿಗೆ ಸಲ್ಲಿಸಿದ ಪ್ರಶಂಸೆಗೆ ನಿಜವಾಗಿಯೂ ಇವರು ಅರ್ಹತೆಯುಳ್ಳವರೇ ಇದ್ದಾರೆ. ಇವರ ಕಾಲದಲ್ಲಿ ಈ ಕಾಲೇಜು ಅಭಿವೃದ್ಧಿಗೆ ಒಂದಷ್ಟು ಯೋಜನೆಗಳೂ ಜರಲಿಲ್ಲ ಇವರು ಆರಂಭಿಸಿರುವ ಹೊಸ ಕಟ್ಟಡ ಅರ್ಧಮಾತ್ರ ನಿರವೇರಿರುತ್ತದೆ ಇನ್ನು ಸ್ವಲ್ಪ ಸಮಯ ಅವರು ಇಲ್ಲಿಯೇ ಇದ್ದಿದ್ದರೆ ಉತ್ತಮವಿತ್ತು

ಇವರ ಸ್ಥಾನಕ್ಕೆ ಬರುವವರು ಇವರಂತೆಯೆ ದಕ್ಷತೆಯಿಂದ ಉತ್ಸಾಹದಿಂದ ಕಾರ್ಯ ಪೂರ್ತಿಗೊಳಿಸಲೆಂದು ಹಾರೈಸಬೇಕಾಗಿದೆ.

ಭಾರತಕ್ಕೊಂದು ಸಹಕಾರೀ ಯೂನಿಯನ್

ಸಹಕಾರೀ ಚಳವಳದ ಮುಂದಾಳುಗಳು ಅಖಿಲ ಭಾರತಕ್ಕೆ ಒಂದು ಸಹಕಾರೀ ಚಳವಳದ ಮುಂದಾಳ್ತನ ನಡೆಲ್ಪಡಬೇಕೆಂದೂ ಸಿದ್ಧರಾಗಿರುತ್ತದೆ

ಸಹಕಾರೀ ಚಳವಳಕ್ಕೆ ಒಂದು ಅಖಿಲ ಭಾರತ ಯೂನಿಯನ್ ಮಾಡಿದುದರಲ್ಲಿ ತಪ್ಪೇನೂ ಇಲ್ಲ ಇದು ಅಗತ್ಯ ಆದರೆ ಇಷ್ಟರಿಂದ ಅಥವಾ ಶ್ರೀ ಕಾಜಿಯವರು ಸೂಚಿಸಿದಂತೆ ಸಹಕಾರೀ ಖಾತೆಗಳಿಗೆ ಒಬ್ಬೊಬ್ಬ ಮಂತ್ರಿಯನ್ನು ಪ್ರತಿ ಪ್ರಾಂತಿಕ ಸರಕಾರದಲ್ಲಿ ಇಡುವುದರಿಂದ ಮಾತ್ರ ಸಹಕಾರೀ ಚಳವಳ ಉತ್ತಮವಾಗುವುದೆಂದು ನಂಬಿದರೆ ಅದು ಸರಿಯಲ್ಲ ಸಹಕಾರದ ಅಭಿವೃದ್ಧಿ ಕೆಳಗಿನಿಂದ ಮೇಲಕ್ಕೆ ಬೆಳೆಯುವಂತಹುದು ಅದು ಜನರ ಚಳವಳ.

ಸ್ವತಂತ್ರ ಭಾರತದಲ್ಲಿ ಈ ಚಳವಳಕ್ಕೆ ನಿಜವಾದ ಮಹತ್ವ ಬರಬೇಕಾದರೆ ಇದಕ್ಕೆ ಇಷ್ಟು ಮಾತ್ರ ಸಾಲದು ಇದರ ಸ್ವರೂಪದಲ್ಲಿಯೇ ಬದಲಾವಣೆಯಾಗಬೇಕು ಇದು ಜನರ ಚಳವಳವಾಗಿ ಜನರ ಉತ್ಸಾಹದಿಂದ ನಡೆಯುವಂತೆ ಮಾಡುವುದು ಎಲ್ಲಕ್ಕೂ ಮುಖ್ಯ ಆ ರೀತಿ ಬೇಗನೆ ಸಾಧಿಸಲ್ಪಡಲೆಂದು ಹಾರೈಸೋಣ

ಯುನ್ಯಾಟೆಡ್ ನೇಶನ್ಸಿನಲ್ಲಿ ದಕ್ಷಿಣ ಆಫ್ರಿಕ

ದಕ್ಷಿಣ ಆಫ್ರಿಕ ಸರಕಾರದವರು ಭಾರತೀಯರ ಕಡೆಗೆ ಮಾಡುತ್ತಿದ್ದ ಅನ್ಯಾಯದ ಪ್ರಶ್ನೆ ಯುನ್ಯಾಟೆಡ್ ನೇಶನ್ಸಿನ ಮುಂದೆ ಬಂದಿತು ಮೆಕ್ಸಿಕೊ—ಫ್ರೆಂಚ್ ರಾಷ್ಟ್ರಗಳು ಒಂದು ನಿರ್ಣಯವನ್ನು ಮುಂದೆ ತಂದವು

ತೃತೀಯ ಕರ್ನಾಟಕ ಮಲೆನಾಡು ಪರಿಷತ್ತು

ನಮ್ಮ ಜಿಲ್ಲೆಯ ಮಲೆನಾಡು ವಿಭಾಗದ ಒಂದು ಕೇಂದ್ರವಾದ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಈ ಬಾರಿಯ ಮಲೆನಾಡು ಪರಿಷತ್ತು ಯಶಸ್ವಿಯಾಗಿ ಜರುಗಿತು. ಕೊಡಗಿನ ಜಿಲ್ಲಾಧೀಶರಾದ ಶ್ರೀ ಎನ್. ಮುದ್ದಪ್ಪನವರು ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದರು.

ಆರಂಭದ ಕಾರ್ಯಕ್ರಮವಾಗಿ ಸುಬ್ರಹ್ಮಣ್ಯ ಊರಿನ ಆನೆಬಾಗಿಲ ತನಕ ಪ್ರಭಾತ ಫೇರಿ ನಡೆದು ಅಲ್ಲಿ ರಾಷ್ಟ್ರ ಧ್ವಜಾರೋಹಣವಾಯಿತು ಧ್ವಜವನ್ನೇರಿಸಿ ಮುದ್ದಪ್ಪನವರು ರಾಷ್ಟ್ರಪಿತ ಮಹಾತ್ಮಾ ಗಾಂಧಿ ನಮಗೆ ಕೊಟ್ಟ ಈ ಧ್ವಜದ ಕೀರ್ತಿ ಉಳಿಸಬೇಕಾದರೆ ನಾವೂ ಮಹಾತ್ಮರು ತೋರಿದ ದಾರಿಯಲ್ಲಿ ನಡೆಯಬೇಕೆಂದರು

ಪ್ರಾರ್ಥನೆ ಮತ್ತು ಸ್ವಾಗತ ಗೀತೆಗಳಾದ ಬಳಿಕ ಸ್ವಾಗತಾಧ್ಯಕ್ಷ ಶ್ರೀ ಕೆ. ವಿ. ಗೌಡರು ಪ್ರತಿನಿಧಿ ಹಾಗೂ ಅತಿಥಿ ಅಭ್ಯಾಗತರೆಲ್ಲರಿಗೆ ಸ್ವಾಗತವಿತ್ತರು

ಮಲೆನಾಡು ಅಭಿವೃದ್ಧಿ ಸಂಘದ ಅಧ್ಯಕ್ಷ ಶ್ರೀ ಎಮ್ ಎನ್ ಭಿಡೆಯವರು ಆ ಸಂಘದ ವರದಿ ಓದಿದರು

ಆ ಬಳಿಕ ಪರಿಷತ್ತಿನ ಸಂದರ್ಭದಲ್ಲಿ ಏರ್ಪಡಿಸಿದ್ದ ಕೃಷಿ ಖಾತೆಯವರ ಪ್ರದರ್ಶನ ಹಾಗೂ ಸಾರ್ವಜನಿಕ ಆರೋಗ್ಯ ಖಾತೆಯವರ ಮಲೇರಿಯಾ ನಿವಾರಣಾ ಕ್ರಮಗಳ ಪ್ರದರ್ಶನ ಇವನ್ನು ಜಿಲ್ಲಾ ಕಲೆಕ್ಟರರು ಉದ್ಘಾಟನೆ ನೆರವೇರಿಸಿದರು

ಮಲೆನಾಡು ಪರಿಷತ್ತನ್ನು ರಾವ್ ಬಹದ್ದೂರ್ ಗಿರಿಯಪ್ಪನವರು ಉದ್ಘಾಟನೆ ನಡೆಸುತ್ತ ಮಲೆನಾಡಿನಿಂದ ಇದುವರೆಗೆ ಸರಕಾರದವರು ತೀರ್ವೆ ವಸೂಲಿ ಮಾಡಿ ಸಾವಿರಗಟ್ಟಿ ಹಣ ಕೊಂಡುಹೋಗುವುದಲ್ಲದೆ ಇಲ್ಲಿಗೆ ಅಗತ್ಯವುಳ್ಳ ಸೌಕರ್ಯಗಳನ್ನು ಒಂದೂ ಒದಗಿಸುವುದಿಲ್ಲವೆಂಬ ದೂರು ಬಹಳ ಸಮಯದಿಂದ ಇದೆ ಇದರಲ್ಲಿ ತುಂಬಾ ಸತ್ಯಾಂಶವೂ ಇರುತ್ತದೆ ಇಂಥ ಪರಿಷತ್ತುಗಳಿಂದ ಈ ಪರಿಸ್ಥಿತಿ ಸುಧಾರಿಸಬೇಕಾಗಿದೆ. ಯಾವ ಅಭಿವೃದ್ಧಿಯೇ ಆಗಲಿ ಅಲ್ಲಲ್ಲಿಯ ಜನರಲ್ಲಿ ಸಾಕಷ್ಟು ಜಾಗ್ರತಿಯಿದ್ದು ಅಭಿವೃದ್ಧಿಯಾಗಬೇಕೆಂಬ ಆತುರವಿಲ್ಲದೆ ಸಾಧ್ಯವಿಲ್ಲ. ಇಂಥ ಪರಿಷತ್ತು ಆ ಬಗೆಯ ಜಾಗ್ರತಿಯನ್ನುಂಟುಮಾಡಲು ಸಹಾಯವನ್ನುಂಟುಮಾಡುತ್ತದೆಂಬುದು ಇದರ ಮೊದಲ ಪ್ರಯೋಜನ, ಎರಡನೆಯದಾಗಿ ಹೊರಗಿನವರಿಗೂ ಇಲ್ಲಿಯ ಪರಿಸ್ಥಿತಿ ತಿಳಿಸಲು ಇದು ಸಹಾಯ ಮಾಡುತ್ತದೆ. ಮಂಗಳೂರಿನಂಥ ಪಟ್ಟಣಗಳಿಂದ ಈ ಪರಿಷತ್ತಿಗಾಗಿ ಬಂದವರಿಗೆ ಇಲ್ಲಿಗೆ ಬಂದು ಹೋಗುವುದರಿಂದಲೇ ಇಲ್ಲಿಯ ಸ್ಥಿತಿ ಸ್ವಲ್ಪ ಮಟ್ಟಿಗೆ ತಿಳಿಯುತ್ತದೆ ಇದು ಮೂರನೆಯ ಪರಿಷತ್ತು. ಈ ಬಗೆಯಾಗಿ ನಡೆವ ಯತ್ನಗಳಿಂದ ಬೇಗನೆ ಮಲೆನಾಡಿನ ಪರಿಸ್ಥಿತಿ ಸುಧಾರಿಸಲಿ ಎಂದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಾವೂ ಮಲೆನಾಡಿನವರೇ ಎಂದು ರುಜುಪಡಿಸಲೆತ್ನಿಸಿದರು ಇಲ್ಲಿ ವಿದ್ಯಾಭ್ಯಾಸ, ರಸ್ತೆಗಳ ಸೌಕರ್ಯ, ವೈದ್ಯಕೀಯ ಸಹಾಯ, ಕೃಷಿ ಕೈಗಾರಿಕೆಗಳ ಅಭಿವೃದ್ಧಿ ಮೊದಲಾದುವನ್ನು ಹೆಚ್ಚಿಸುವ ಅವಶ್ಯಕತೆ ವಿವರಿಸಿದರು ಮುಖ್ಯವಾಗಿ ಇಲ್ಲಿಯ ರಿಜರ್ವ ಕಾಡುಗಳಿಂದಾಗಿ ರೈತರಿಗಾಗುವ ಸಂಕಷ್ಟಗಳ ನಿವಾರಣೆ, ಮಲೇರಿಯದ ಹಾವಳಿ ನಿವಾರಣೆ ಇವೇ ಇಲ್ಲಿಯ ಎಲ್ಲಕ್ಕೂ ಮುಖ್ಯ ಪ್ರಶ್ನೆಗಳೆಂದರು

ಪರಿಷತ್ತಿನಲ್ಲಿ ಇದಕ್ಕಾಗಿಯೇ ಬಂದಿದ್ದ ಹಲವು ಸರಕಾರೀ ಅಧಿಕಾರಿಗಳ ಭಾಷಣಗಳೂ ಇದ್ದವು ಮದ್ರಾಸು ಸರಕಾರದ ಮಲೇರಿಯಾ ಖಾತೆಯ ಅಸಿಸ್ಟಾಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಇವರು ಪುತ್ತೂರು ತಾಲೂಕಿನಲ್ಲಿ ಮಲೇರಿಯಾ ನಿವಾರಣೆಗಾಗಿ ಮಾಡುತ್ತಿದ್ದ ಕಾರ್ಯಕ್ರಮ ಆರಂಭಿಸಿತು ಈಗ ಪ್ರಾಂತಿಕ ಸರಕಾರದವರು ಅದನ್ನು ಮುಂದೊತ್ತುತ್ತಿದ್ದಾರೆ ಎಂದರು ಮಲೇರಿಯಾ ನಿವಾರಣೆಯ ಕಾರ್ಯ ಆರಂಭಿಸಿದ ಅಗ್ರಗಾಮಿಗಳಲ್ಲಿ ಈಗಿನ ನಮ್ಮ ಜಿಲ್ಲಾ ಕಲೆಕ್ಟರರ ತಂದೆಯವರೂ ಒಬ್ಬರೆಂದೂ ಅವರ ಕಾರ್ಯದ ಅನುಭವ ಇಂದಿಗೂ ಉಪಯುಕ್ತವೆಂದೂ ಹೇಳಿದರು ಈ ಮೊದಲು ಎಲ್ಲೆಲ್ಲಿ ನೀರು ನಿಂತು ನುಸಿಗಳು ಹುಟ್ಟುವವೋ ಅಲ್ಲೆಲ್ಲ ಹೋಗಿ ಎಣ್ಣೆ ಇತ್ಯಾದಿ ಹಾಕಿ ನುಸಿಯಾಗದಂತೆ ಮಾಡುವ ಕ್ರಮವಿತ್ತು ಹಳ್ಳಿ ನಾಡುಗಳಲ್ಲಿ ಇಂಥ ಸ್ಥಳಗಳೆ ಹೆಚ್ಚಿದ್ದು ಈ ದಾರಿ ಬಹಳ ಕಷ್ಟವಿತ್ತು. ಈಗ ಈ ಕ್ರಮ ಬಿಟ್ಟು ವಸತಿ ಇರುವ ಮನೆ ಇತ್ಯಾದಿ ಕಟ್ಟಡಗಳ ಗೋಡೆಗಳಲ್ಲಿ ಆಗಾಗ ಮದ್ದು ಚಿಮುಕಿಸಿ ನುಸಿ ಹತ್ತಿರ ಬಾರದಂತೆ ಮಾಡುವ ಕ್ರಮ ಅನುಸರಿಸಲಾಗುತ್ತದೆ ಇದು ಎಷ್ಟೋ ಹೆಚ್ಚು ಪರಿಣಾಮಕಾರಿಯಾಗಿದೆಯೆಂದರು ಈಗ ಪುತ್ತೂರು ತಾಲೂಕಿನ ಮಲೆನಾಡಿನ ಜೆಟ್ಟಿನ ಗ್ರಾಮಗಳಲ್ಲಿ ಈ ಕಾರ್ಯ ನಡೆಯುತ್ತಿದೆ ಮುಂದಿನ ವರ್ಷ ಕಾರ್ಕಳ ತಾಲೂಕಿನ ಮಲೆನಾಡಿಗೆ ಈ ಕಾರ್ಯ ವಿಸ್ತರಿಸಲಾಗುತ್ತದೆ ಎಂದರು

ಕೊಡಗಿನ ಮಲೇರಿಯಾ ಆಫೀಸರರಾದ ಮೇಜರ್ ಕಾರಿಯಪ್ಪನವರೂ ಆ ನ್ಯಾಂತ್ಯದಲ್ಲಿ ಈ ಕಾರ್ಯಕ್ರಮ ಪೂರ್ಣ ಯಶಸ್ವಿಯಾಗಿದೆ ಎಂದರು

ಕೃಷಿ ಖಾತೆಯ ಜಿಲ್ಲಾ ಆಫೀಸರರಾದ ಶ್ರೀ ಕೆ ಜಿ ಎಸ್ ಭಂಡಾರಿ, ಸಹಕಾರೀ ಸಬ್ ರಿಜಿಸ್ಟ್ರಾರರಾದ ಶ್ರೀ ಬಸಪ್ಪನವರು, ರಿಜರ್ವ ಕಾಡುಗಳ ಖಾತೆಯ ಜಿಲ್ಲಾ ಆಫೀಸರ್ ಶ್ರೀ ಕಾಳಪ್ಪ, ಮಂಗಳೂರಿನಿಂದ ಪರಿಷತ್ತಿಗಾಗಿ ಬಂದ ಎಲ್. ಸಿ ಪ್ರಾಸ್, ಎಮ್ ಎಲ್ ಎ, ಕೆ ಆರ್ ಕಾರಂತರು, ಮಿಸೆಸ್ ಬ್ರಿಟೊ ಮೊದಲಾದವರ ಭಾಷಣಗಳೂ ಇದ್ದುವು

ಪರಿಷತ್ತಿನಲ್ಲಿ ಹದಿನೇಳು ನಿರ್ಣಯಗಳು ಮಂಜೂರಾದವು ಅವುಗಳಲ್ಲಿ ಕಾಡುಗಳ ಸಂಕಷ್ಟದ ಕುರಿತು ನಿರ್ಣಯದಲ್ಲಿ ಈ ರೀತಿ ಹೇಳಲಾಗಿದೆ ರಿಜರ್ವ ಕಾಡಿನ ಗಡಿ, ನುಸಿ ಅಥವಾ ಸಾಗುವಳಿ ಭೂಮಿಯಿಂದ ½ ಮೈಲು ದೂರವಾದರೂ ಇರಬೇಕು ಮುಂದಿನ ½ ಮೈಲು ತನಕ ಕಾಡಿನ ಪೊದೆ ಇತ್ಯಾದಿ ಸವರಲು ಅನುಮತಿ ಇರಬೇಕು ಕಾಡು ಖಾತೆಯ ಕುಮ್ಮಿಯೆಂಬ ಹಕ್ಕಿಗೆ ಯಾವ ಆಧಾರವೂ ಇಲ್ಲ ಎನ್ನ ನೈಗಳನ್ನು ಬೇಟಯಾಡಿ ನಾಶಪಡಿಸಲು ಆತಂಕ ನಿರಬಾರದು ಕೋವಿ ಲೈಸೆನ್ಸುಗಳನ್ನು ಬೇಕಾದವರಿಗೆ ಕೊಡಬೇಕು ಕಾಡುಗಳ ದಾರಿಗಳು ತೆರವಿರಬೇಕು ಕಾಡುಗಳ ನಡುವೆ ಇರಬಹುದಾದ ಸಾಗುವಳಿಗ ಅನುಕೂಲ ಭೂಮಿಗಳನ್ನು ಸಾಗುವಳಿಗಾಗಿ ಕೊಡಬೇಕು ಕಾಡು ಉತ್ಪತ್ತಿಗಳನ್ನು ಅಂದರೆ ಗೊಬ್ಬರಕ್ಕೆ ಬೇಕಾಗುವ ಸೊಪ್ಪು, ಬುಟ್ಟಿ ಇತ್ಯಾದಿ ಮಾಡಲು ಬೀಳು ಇತ್ಯಾದಿ ಉಪಯೋಗಿಸಲು ಬಿಡಬೇಕು. ಗೋವುಗಳು ಮೇಯುವ ಬಗ್ಗೆ ಈಗ ತೆಗೆದುಕೊಳ್ಳುವ ಧೋರಣೆ ತೆಗೆದು ಹಾಕಬೇಕು.

ಮಲೆನಾಡು ಅಭಿವೃದ್ಧಿ ಸಂಘದವರು ಒಂದು ಕೃಷಿ ಕೋಪರೇಶನ್ ಸಂಸ್ಥೆ ತೆರೆಯಬೇಕೆಂದೂ ಸರಕಾರದವರು ಇದಕ್ಕೆ ಬೇಕಾದ ಅನುಕೂಲತೆ ಒದಗಿಸಬೇಕೆಂದೂ ಮಾಡಿದ ಇನ್ನೊಂದು ನಿರ್ಣಯವೂ ಮಹತ್ವದ್ದು.

ಸುಳ್ಯಕ್ಕೊಂದು ಹಾಸ್ಪೂಲುಬೇಕು. ಮಲೆನಾಡಿನಲ್ಲಿ ಆಸ್ಪತ್ರೆಗಳನ್ನು ಹೆಚ್ಚಿಸಬೇಕು. ಇತ್ಯಾದಿ ಇನ್ನೂ ಹಲವಾರು ನಿರ್ಣಯಗಳಾದವು.

ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಈ ಕಾಡುಗಳ ಮಧ್ಯೆ ಇರುವ ಊರಲ್ಲಿ ಇಷ್ಟು ಯಶಸ್ವಿಯಾಗಿ ಈ ಪರಿಷತ್ತನ್ನು ಒದಗಿಸಿದ ಬಗ್ಗೆ ಮನಸ್ಸಾರೆ ಕರಿಗೆ ಧನ್ಯವಾದ ಕೊಟ್ಟರು

ಶ್ರೀ ಎಮ್ ಎನ್. ಭಿಡೆಯವರು ಸ್ವಾಗತ ಕಮಿಟಿ ಕಡೆಯಿಂದ ಹಾಗೂ ಮಲೆನಾಡು ಅಭಿವೃದ್ಧಿ ಸಂಘದ ಕಡೆಯಿಂದ ಧನ್ಯವಾದ ಅರ್ಪಿಸಿದರು

ಮಂಗಳೂರಿನಿಂದ ಬಂದ ಗಿರ್ಲ್ಸ್ ಆಫ್ ಸರ್ವೀಸಿನ ಸ್ತ್ರೀಯರು "ಜನ ಗಣ ಮನ" ಹಾಡಿ ಪರಿಷತ್ತು ಮುಕ್ತಾಯವಾಯಿತು

ಮುಂಡಾಜಿ, ಸುಬ್ರಹ್ಮಣ್ಯ, ಕೈಕಂಬ ಮೊದಲಾದ ಹಳ್ಳಿ ಪ್ರದೇಶಗಳಲ್ಲಿ ಈ ಮಲೆನಾಡ ಪರಿಷತ್ತು ವರ್ಷದಿಂದ ವರ್ಷಕ್ಕೆ ಉತ್ತಮವಾಗಿ ನಡೆಯುತ್ತ ಬರುತ್ತಿದೆಯೆಂಬುದು ಸಂತೋಷದ ಸಂಗತಿ ಶ್ರೀ ಎಮ್ ಎನ್ ಭಿಡೆಯವರು ಈ ಚಳವಳದ ಜೀವಾಳ– ಇವರ ಸಹಾಯಕ್ಕಾಗಿ ದುಡಿಯುವವರೂ ಒಳ್ಳೆಯ ತಿಳಿವಳಿಕೆ ಇದ್ದವರೇ ಇದ್ದಾರೆ

ಈ ಚಳವಳದ ಪರಿಣಾಮವಾಗಿ ಮುಂದೆ ಸಾಡು ಬೇಗನೆ ಅಭಿವೃದ್ಧಿ ಹೊಂದಿ ಪ್ರಜೆಗಳು ಇಲ್ಲಿ ಹೆಚ್ಚು ಜೆಜ್ಜಾಗಿ ನೆಲೆಸಿ ಈ ಫಲವತ್ತಾದ ಪ್ರದೇಶ ಸಕಲರಿಗೂ ಹೆಚ್ಚು ಉಪಯುಕ್ತವಾಗುವಂತಾಗಲೆಂದು ಹಾರೈಸುತ್ತೇವೆ

ಅದರಲ್ಲಿ ದಕ್ಷಿಣ ಆಫ್ರಿಕದ ಸರಕಾರ, ಭಾರತ ಸರಕಾರ ಮತ್ತು ಪಾಕಿಸ್ತಾನ ಇವು ಒಂದು ದುಂಡು ಮೇಜಿನ ಪರಿಷತ್ತು ನಡೆಸಿ ಈ ಪ್ರಶ್ನೆಯ ಇತ್ಯರ್ಥ ಮಾಡಿಕೊಳ್ಳಬೇಕೆಂಬುದು ನಿರ್ಣಯದ ಸಾರಾಂಶ

47 ಮತಗಳು ಇದಕ್ಕೆ ಅನುಕೂಲವಾಗಿ ಸಿಕ್ಕಿದವು ಇದನ್ನು ವಿರೋಧಿಸಿದವರೆಂದರೆ ದಕ್ಷಿಣ ಆಫ್ರಿಕ ಸರಕಾರ ಮಾತ್ರ ರಸ್ಯಾ ಮತ್ತು ಕೆಲವು ಪ್ರಮುಖ ರಾಷ್ಟ್ರಗಳು ಮತಕೊಡಲಿಲ್ಲ

ದಕ್ಷಿಣ ಆಫ್ರಿಕೆವು ಹೀಗೆ ಏಕಾಕಾಯಾಗುವ ಪ್ರಸಂಗ ಬಂತೆಂಬುದರಿಂದಲಾದರೂ ಇನ್ನು ಮುಂದೆ ನ್ಯಾಯದ ಹಾದಿಗೆ ಬಂದೀತೆ ಎಂಬುದನ್ನು ಮುಂದೆ ನೋಡಬೇಕು.

ಏಸಿಯಾದ ಅತೀ ಶ್ರೇಷ್ಠ ರಾಜನೀತಿ ವಿಶಾರದೆ

ಪ್ರಸಿದ್ಧ ಪಾಶ್ಚಾತ್ಯ ಸಹಿತಿ ಬರ್ನಾರ್ಡ್ ಷಹಾರನ್ನು ಭಾರತದ ಪ್ರಧಾನ ಸಚಿವರು ಅವರ ಊರ ತನಕ ಹೋಗಿ ಭೇಟಿಮಾಡಿ ಆವೆರಿಂದೆ ಭಾರತದ ಮಾವಿನ ಹಣ್ಣುಗಳನ್ನು ತಿನ್ನಿಸಿ ಮಾತುಕತೆ ಬೆಳೆಸಿ ಬಂದಿದ್ದರು

ಪಾಶ್ಚಾತ್ಯ ರಾಷ್ಟ್ರಗಳೆಲ್ಲ ಸ್ಫಾಲಿನು ಅತಿ ಶ್ರೇಷ್ಠ ರಾಜನೀತಿ ವಿಶಾರದನೆಂತೆ ಏಸಿಯಾದಲ್ಲಿ ಪಂಡಿತ ಜವಾಹರಲಾಲ್ ನೆಹರು ಇದು ಬರ್ನಾರ್ಡ್‌ಷಹಾರು ಈಗ ತಾನೆ ಪ್ರಕಟಿಸಿರುವ ತಮ್ಮ ಅಭಿಪ್ರಾಯ

ಈ 92 ವರ್ಷದ ಮುದುಕರಿಂದ ಪ್ರಶಂಸೆ ಪಡೆಯುವುದು ಸಾಮಾನ್ಯ ವಿಷಯವಲ್ಲ ನಾವಿನ ಹಣ್ಣುಗಳನ್ನು ಇವರು ತಿಂದದ್ದು ಇದೇ ಮೊದಲ ಬಾರಿಯಂತೆ ಆದರೂ ಕೇವಲ ಮಾವಿನ ಹಣ್ಣುಗಳಿಂದ ಮಾತ್ರ ಇದರಿಂದ ಪ್ರಶಂಸೆ ಪಡೆಯುವುದು ಸಾಧ್ಯವಿಲ್ಲದ ಮಾತು.

ಪಂಡಿತ ಜವಾಹರಲಾಲರಿಗೆ ಆ ಪ್ರಶಂಸೆ ನ್ಯಾಯವಾಗಿ ಸಲತಕ್ಕದ್ದಿದ್ದುದರಿಂದಮಾತ್ರ ಆದು ದೊರೆಯತೆಂಬ ವಿಷಯದಲ್ಲಿ ಯಾರೂ ಸಂಶಯಪಡಬೇಕಾಗಿಲ್ಲ.

ಕೆನರಾ ಬ್ಯಾಂಕು ಲಿಮಿಟೆಡ್.

ಕೆನರಾ ಬ್ಯಾಂಕು, ಕಳೆದುಹೋದ 1948ರಲ್ಲಿ ತನ್ನ ಎಲ್ಲಾ ಇಲಾಖೆಗಳಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ತೋರಿದೆ, 1948ನೇ ವರುಷದಲ್ಲಿನ ಪರಿಸ್ಥಿತಿಯು ಸರ್ವತ್ರ ನಿರುತ್ಸಾಹಕರವೂ, ಕಠಿಣವೂ ಇದ್ದು ಸಾಮಾನ್ಯವಾಗಿ ಬ್ಯಾಂಕುಗಳಲ್ಲಿ ಡಿಪಾಜಿಟು (ಠೇವಣಿ)ಗಳು ಇಳಿಯಬಹುದಾದ ಲಕ್ಷಣಗಳುವಾಗಲೂ, ಈ ಠೇವಣಿಗಳು ಹೆಚ್ಚಿದ ಕೆಲವೇ ಬ್ಯಾಂಕುಗಳಲ್ಲಿ ಕೆನರಾ ಬ್ಯಾಂಕು ಒಂದು, ಈ ಬ್ಯಾಂಕಿನಲ್ಲಿ ಠೇವಣಿಗಳು 76 78 ಲಕ್ಷ ರೂಪಾಯಿಗಳಿಂದ 8·02 ಕೋಟಿಗೆ ಹೆಚ್ಚಿದೆ ಹಾಗೆಯೇ 14 82 ಲಕ್ಷದಿಂದ 48 06ಕ್ಕೆ ಏರಿದೆ ಬ್ಯಾಂಕಿನ ಮೂಲ ವಿಧಾಗದಲ್ಲಿ ಸರಕಾರೀ ಪತ್ರಗಳ ಭದ್ರತೆಯಲ್ಲಿ 10 68 ಲಕ್ಷದ ಹೆಚ್ಚಳವಾಗಿದ್ದು, ಈಗ ಈ ಸಂಖ್ಯೆ 2·41 ಕೋಟಿಯಿದೆ ಮತ್ತು ಆಡಳಿತದ ದೂರ ದರ್ಶಿತ್ವದಿಂದ ಈ ಸರಕಾರೀ ಭದ್ರತೆಯಲ್ಲಿ ಸೇಕಡಾ 98 1ರಷ್ಟು ಅಲ್ಪ ಹಾಗೂ ಮಧ್ಯಮ ವ್ಯಾಯದೆಯವುಗಳೇ ಆಗಿದ್ದು, ಇವುಗಳ ಇಂದಿನ ಮೌಲ್ಯವು ನೂಲಕ್ಕಿಂತ ಇಂದು ಲಕ್ಷ ರೂಪಾಯಿ ಹೆಚ್ಚಿಗಿದೆ. ಭದ್ರತೆಯಿಲ್ಲದ ಸಾಲಗಳಲ್ಲಿ, 88 ಲಕ್ಷದ ಹೆಚ್ಚಳವಿದ್ದು, ಭದ್ರತೆಯಲ್ಲದ ಮತ್ತು ಕೊಂಡು ಕೊಂಡ ಹುಂಡಿಗಳ ಸಾಲವು ರೂ. 61·71 (1947ರಲ್ಲಿ)ದಿಂದ 1948ಕ್ಕೆ ರೂ 89 42ಕ್ಕೆ ಇಳಿಸಲ್ಪಟ್ಟಿದೆ ಹೀಗೆ ಸಾಲಗಳು ಒಟ್ಟು 74 ಲಕ್ಷಕ್ಕೆ ಹೆಚ್ಚಿದ್ದು ಈ ಹೆಚ್ಚಳವು ಪೂರ್ಣವಾಗಿ ತಕ್ಕ ಭದ್ರತೆ ಪಡೆದ ಸಾಲಗಳಲ್ಲಿದ್ದೇ ಇದೆ ನಗದಿ ತಿಲ್ಕು ರೂ 1 44 ಕೋಟಿಯಿದೆ ಕೈಯಲ್ಲಿರುವ ಮತ್ತು ಬ್ಯಾಂಕುಗಳೊಡನೆ ಇರುವ ಮೊತ್ತವೂ, ಅಡಮಾನದಲ್ಲಿರದ ಸರಕಾರೀ ಭದ್ರತೆಗಳೂ ಸೇರಿ, ಠೇವಣಿಯಾಗಿರುವ ಮೊತ್ತದ ಸುಮಾರು 60%ರಷ್ಟು ಇರುವವು. ಬ್ಯಾಂಕಿನೊಡನೆ ವ್ಯವಹಾರದಲ್ಲಿರುವ ಹಣದ ಪರಿಣಾಮವು ಸದುಪಯೋಗದ ಫಲವಾಗಿ ಬ್ಯಾಂಕಿನ ಲಾಭವು 1947ರಲ್ಲಿ 4 27 ಲಕ್ಷವಿದ್ದುದು 1948ರಲ್ಲಿ 6 25 ಲಕ್ಷಕ್ಕೆ ಏರಿತು ಅಂದರೆ ಎರಡು ಲಕ್ಷದಷ್ಟು ಹೆಚ್ಚು, ಅಳಿಸಿಹಾಕಿ ಪ್ರಸರಣಗಳಿಗೆಂದು ಇರುವ ಕಂಟಿಂಜೆನ್ಸಿ ರಿಸರ್ವಿಗೆ ರೂ. 80,000/– ಸೇರಿಸಲಾಗಿದೆ. (1947ರಲ್ಲಿ ಈ ರಿಸರ್ವಿಗೆ ರೂ 50,000/– ಸೇರಿಸಲಾಗಿತ್ತು) ಬ್ಯಾಂಕು ಸದ್ಯದಲ್ಲಿ ಸ್ವರ್ಣೋತ್ಸವ ಜರಗಿಸಲಿದೆ. ಈ ಬಗ್ಗೆ ಪಾಲುಗಾರರಿಗೆ ಬೋನಸ್ ಕೊಡುವ ಸಲುವಾಗಿ ಒಂದು ಹೊಸ ನಿಧಿ ತೆಗೆಯಲ್ಪಟ್ಟಿದ್ದು ಇದಕ್ಕೆ ರೂ. 80,000/–ವರ್ಗಾಯಿಸಲ್ಪಟ್ಟಿದೆ.

ಇಂದಿನ ಕಠಿಣ ಪರಿಸ್ಥಿತಿಯಲ್ಲಿ ವಹಿಸಿರುವ ಜಾಗರೂಕತೆಯ ಧೋರಣೆಯಿಂದ ಧಾವೀ ಕ್ರಮಗಳನ್ನು ಬ್ಯಾಂಕ್ ಪ್ರತೀಕ್ಷಿಸುತ್ತಿದೆ.

ನಗರ ಸಭೆ ಕಾರ್ಯಕಲಾಪ

ಅಧ್ಯಕ್ಷೆಗೆ ಅಧ್ಯಕ್ಷ ಶ್ರೀ ಎಲ್. ಸಿ. ಡಾಯಸ್ಸರವರ ನೇತೃತ್ವದಲ್ಲಿ ಸೇರಿದ ನಗರ ಸಭೆಯಲ್ಲಿ ಮೋರ್ಗ ಜಾಗಗಳು ಮತ್ತಿತರ ಸಾರ್ವಜನಿಕ ಕಟ್ಟಡಗಳಿಗೆ ಮಹಾತ್ಮಾ ಗಾಂಧಿಯವರ ಹೆಸರಿನ್ನು ಇಡಕಕ್ಕಿದ್ದಲ್ಲಿ ಎಂಬ ಸರಕಾರಿ ಹುಕುಮನ್ನು ರಿಕಾರ್ಡು ಮಾಡಲಾಯಿತು. ನಗರದಲ್ಲಿನ ನುಸಿಕಾಟವನ್ನು ನಿವಾರಿಸುವ ಕಾರ್ಯಕ್ಕೆ ಜಾಲ್ತಿ ವರ್ಷದ ಸಲಕರಣೆಗಳ ಬಗ್ಗೆ ರೂ. ೧೬೮೦೦ ಮಂಜೂರು ಮಾಡಲಾಯಿತು. ಇಲಿಗಳ ನಾಶಕ್ಕಾಗಿ ರೂ. ೧೬೦ ಬೆಲೆ ಬಾಳುವ ೧೮೦ ರಾತ್ತಲ್ಗು ಡ್ರಮ್ "ಸೈನೋ ಗೇಸ್" ತೆಗೆದುಕೊಳ್ಳಬೇಕೆಂದು, ನಿಶ್ಚಯಿಸಲಾಯಿತು.

ಆಕಸ್ಮಿಕ ಮರಣಗಳು

ಕಳೆದ ತಾ. ೩-೫-೪೯ರಂದು ಇಲ್ಲಿಯ ಹೊಗೆ ಬಜಾರಿನ ಫೆಲಿಕ್ಸ್ ಆಲ್ಬುಕರ್ಕ್ ಇವರ ಹಂಚು ಕಾರ್ಖಾನೆಯ ಹಿಂದುಗಡೆಯ ಹೊಳೆ ಭಾಗದಲ್ಲಿ ಈಜಾಡಲು ಹೋದ ಇಲಿಂಗ್ಸನ್ ಜತ್ತನ್ನ ಎಂಬ ೧೬ ವಯಸ್ಸಿನ ಹುಡುಗನೊಬ್ಬನು ಮುಳುಗಿ ಮೃತಪಟ್ಟರುವನೆಂದು ತಿಳಿಸಲು ವಿಷಾದಿಸುತ್ತೇವೆ ಮೃತನು ಇಲ್ಲಿಯ ಮಿಶನ್ ಹ್ಯಾಸ್ಕೂಲಿನ ಡ್ರಾಯಿಂಗ್ ಮಾಸ್ಟರ್ ಶ್ರೀ ಜತ್ತನ್ನನವರ ಮಗನೆಂದೂ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕೂತಿದ್ದನೆಂದೂ ತಿಳಿದು ಬರುತ್ತದೆ.

ನಾಲ್ಕು ವಾರಗಳ ಹಿಂದೆ ಇಲ್ಲಿಯ ಮಾರ್ನಮಿಕಟ್ಟೆಯ ಬಳಿಯ ಕುಡ್ಪಾಡಿ ರಸ್ತೆಯಲ್ಲಿ ಜೋಡಿಪುರದ ಮಾರ್ವಾಡಿ ಯಾತ್ರಿಕನೊಬ್ಬನು ಹೃದಯ ಸ್ತಂಬನದಿಂದ ಮೃತಪಟ್ಟನೆಂದು ತಿಳಿದು ಬರುತ್ತದೆ ಅವನ ಸಂಬಂಧಿಕರು ರೈಲ್ವೆ ಸ್ಟೇಶನ್ ಬಳಿಯಿದ್ದರು. ಸ್ಥಳೀಯ ಸಮಾಜ ಸೇವಾ ಸಂಘದವರು ಶವ ಸಂಸ್ಕಾರ ಮಾಡಿದರು ಮೃತನು ಜೈನನಿದ್ದು ಮೂಡಬಿದರೆಯತ್ತ ಯಾತ್ರೆಗಾಗಿ ಬಂದಿರಬಹುದೆಂದು ಊಹಿಸಲಾಗಿದೆ

ಗಾಂಧಿ ಸ್ಮಾರಕನಿಧಿ

ದ ಕ. ಜಿಲ್ಲೆಯಿಂದ ಇಂದಿನವರೆಗೆ ಮಹಾತ್ಮಾ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ೧,೨೬,೧೯೬-೫-೨ ಸಂಗ್ರಹವಾಗಿರುವುದೆಂದು ಸದ್ರಿ ನಿಧಿಯ ಕೋಶಾಧ್ಯಕ್ಷರು ಪ್ರಕಟಿಸಿರುತ್ತಾರೆ

ಸ್ಥಳೀಯ ಆಡಳಿತ ಮಂತ್ರಿಗಳು

ಮದ್ರಾಸ್ ಸರಕಾರದ ಸ್ಥಳೀಯ ಆಡಳಿತಗಳ ಮಂತ್ರಿಗಳಾದ ಮಾನ್ಯ ಚಂದ್ರ ಮೌಳಿಯವರು ಕಳೆದ ತಾ ೧೨ರಂದು ಮಂಗಳೂರಿಗೆ ದಯಮಾಡಿಸಿದ್ದರು ಸ್ಥಳೀಯ ಕಾಂಗ್ರೆಸಿಗರೂ ಅಧಿಕಾರಿ ಮತ್ತು ಅಧಿಕಾರೇತರ ದುರೀಣರು ಮಂತ್ರಿಗಳನ್ನು ರೈಟ್ಟಿ ನಿಲ್ದಾಣದಲ್ಲಿ ಸ್ವಾಗತಿಸಿದರು ತಾ. ೧೩ರಂದು ಅವರು ಕುಂದಾಪುರಕ್ಕೆ ದಯಮಾಡಿಸಿ ಅಲ್ಲಿಯ ಸಹಕಾರಿ ಕಟ್ಟಡ ರಚನಾ ಯೋಜನೆಯನ್ನು ಪರಿಶೀಲಿಸಿದರು ತಾ ೧೫ರಂದು ಅವರು ಮದ್ರಾಸಿಗೆ ಹಿಂತಿರುಗಿದರು.

ಮೂರನೇ ಬೆಳೆಯ

ಅಕ್ಕಿ ಭತ್ತಗಳನ್ನೊಪ್ಪಿಸುವ ವಿವರ

ಈ ವರ್ಷದ ಕೊಳಕೆ ಅಥವಾ ಮೂರನೆ ಬೆಳೆಯ ಅಕ್ಕಿ ಯಾ ಭತ್ತವನ್ನು ಎಸ್. ಕೆ. ಸಿ. ಸಿ. ಹೋಲ್‌ಸೇಲ್ ಸ್ಟೋರ್ಸ್ ಅಥವಾ ಅದರ ಶಾಖೆಗಳಿಗೆ ಒಪ್ಪಿಸುವ ಕೊನೆಯ ದಿನವು ಜೂನ್ ತಾ. ೧೫ ಎಂದು ಜಿಲ್ಲಾ ಕಲೆಕ್ಟರರು ಒಂದು ಪ್ರಕಟಣೆಯಲ್ಲಿ ತಿಳಿಸುತ್ತಾರೆ. ಇದಕ್ಕೆ ತಪ್ಪಿದವರಿಗೆ ಈ ಕೆಳಗಿನಂತೆ ಬೆಲೆ ಕಡಿತಗಳು ಮಾಡಲ್ಪಡುವುವು ತಾ. ೧೬ರೊಳಗೆ ಒಪ್ಪಿಸಿದಲ್ಲಿ ಕಡಿತ ವಿಲ್ಲ. ತಾ. ೧೯ರಿಂದ ೩೫ರ ವರೆಗೆ ಅಕ್ಕಿ. ಮುಡಿ ಒಂದರ ೪ ಆಣೆ. ಭತ್ತ ಮುಡಿ ೧೮ ೨ ಆಣೆ; ತಾ. ೩೬ರಿಂದ ದುಲ್ಕೆ ತಾ. ೨೮ ವರೆಗೆ ಅಕ್ಕಿ ಮುಡಿ ೧೮ ೧೦ ಆಣೆ ಭತ್ತ ಮುಡಿ ೧೮ ೫ ಆಣೆ, ತಾ. ೨೯ರಿಂದ ನಂತರ ಅಕ್ಕಿ ಮುಡಿ ಒಂದರ ೧ ರೂ. ಭತ್ತಮುಡಿ ಒಂದರ ೮ ಆಣೆ ಕಡಿತ

ಪ್ರೊಕ್ಯೂರ್‌ಮೆಂಟ್ ಆಫೀಸರರಿಂದ ವಶಪಡಿಸಲ್ಪಟ್ಟ ಅಥವಾ ಅವರ ಒತ್ತಾಯ ಮೇರೆಗೆ ಅಕ್ಕಿ ಯಾ ಭತ್ತವನ್ನು ಸ್ಟೋರಿಗೆ ಒಪ್ಪಿಸಿದ ಅಕ್ಕಿ ಮುಡಿ ಒಂದರ ರೂ ೧, ಮತ್ತು ಭತ್ತ ಮುಡಿ ಒಂದರ ಆಣೆ ೮ ಕಡಿತ ಮಾಡಲಾಗುವುದು

ಸಾಹಸದ ಕನ್ನಕಳವು

ಹಂವನಕಟ್ಟೆ ಶ್ರೀ ಕೃಷ್ಣ ಭವನದ ಮಾರ್ಗದ ಕೊನೆಯಲ್ಲಿರುವ "ಶಾರದಾ ಜ್ಯುವೆಲ್ಲರಿ" ಎಂಬ ಚಿನ್ನಾಭರಣ ಮಾರಾಟದ ಅಂಗಡಿಯಿಂದ ಕಳೆದ ತಾ ೮ನೇ ರಾತ್ರಿ ಸಾಹಸದ ಕನ್ನ ಕಳವಿನ ಮೂಲಕ ಸುಮಾರು ೮ ಸಾವಿರ ರೂಪ್ಯಾ ಬೆಲೆ ಬಾಳುವ ವಸ್ತು ಒಡವೆಗಳು ಕಳವಾಗಿ ಹೋಗಿನೆಯೆಂದು ತಿಳಿದು ಬರುತ್ತದೆ ಕಳ್ಳರು ಅಂಗಡಿಯ ಹಿಂಭಾಗದಲ್ಲಿನ ಕಿಟಕಿಯೊಂದರ ಸೆರಳುಗಳನ್ನು ಜಾರಿಸಿ ಒಳಗಿನ ಬಾಗಿಲಿನ ಬೀಗ ಮುರಿದು ಒಳ ಹೊಕ್ಕರೆಂದು ಕುರುಹುಗಳಿಂದ ಗೊತ್ತಾಗಿದೆ ಆಗಡಿಯಲ್ಲಿ ಸುಮಾರು ೧೫ ಲಕ್ಷ ಮೌಲ್ಯದ ರತ್ನಚಿನ್ನ ಮತ್ತು ವಜ್ರಾದಿಗಳ ಸೊತ್ತುಗಳಿದ್ದುವು ಕಳ್ಳರು ಕೆಸೆಯೊಳಗೆ ಹಾಕಿಕೊಂಡೊಯ್ಯುವಂತಹುಗಳನ್ನೇ ಅಪಹರಿಸಿದ್ದು ಮುರಿದ ಮೇಜಿಯೊಳಗಿನ ಒಂದು ಮೂಲೆಯಲ್ಲಿದ್ದ ಚಿನ್ನದ ಪಟ್ಟಿಗಳನ್ನು ಮುಟ್ಟಲಿಲ್ಲ ದಿಮ್ಮಟಿ ಪೋಲಿಸ್ ಸುಪರಿಂಟೆಂಡರೂ, ಸಿ ಐ ಡಿ ಅಧಿಕಾರಿಗಳೂ ಸ್ಥಳಕ್ಕೆ ಭೇಟಿಯಿತ್ತು ತನಿಖೆಯನ್ನು ನಡೆಸುತಿದ್ದಾರೆ

ಬೀಡಿ ಕಾರ್ಖಾನೆ ಬಳಿಯ ಗಲಾಟೆ

ಮೊಕದ್ದಮೆ

ಇಲ್ಲಿಯ "ಗ್ರೇಟ್ ಇಂಡಿಯಾ ಬೀಡಿ ವರ್ಕ್ಸ್"ನ ಎದುರಿನಲ್ಲಿ ಕಳೆದ ತಾ ೧೫-೫-೪೯ರಲ್ಲಿ ಗಲಾಟೆ ಮಾಡಿದರೆಂದೂ, ಪೋಲಿಸರ ಮೇಲೆ ಕಲ್ಲೆಸೆತ ಮುಂತಾದುವನ್ನು ಮಾಡಲು ದುಡುಕಿದರೆಂದೂ ಆಪಾದನೆಗೊಳಗಾದ ೮ ಮಂದಿಗಳಲ್ಲಿ ಶೇಷಪ್ಪ ಮೈಲಿ, ಮೋನಪ್ಪ ಶೆಟ್ಟಿ ಕಾಮಾನಾಥ ವಾಲ್ ಎಂಬೀ ಮೂವರಲ್ಲಿ ಪ್ರತೀಯೊಬ್ಬರಿಗೆ ೯ ತಿಂಗಳ ಕಠಿಣ ಸಜೆಯೂ, ಉಮಾನಾಥ ಶೆಟ್ಟಿ, ರಾಮಚಂದ್ರ ಶೆಟ್ಟಿ ಎಂಬಿಬ್ಬರಿಗೆ ತಲಾ ೩೫ ರೂ. ಜುಲ್ಮಾನೆಯೂ ಬೀಡಿ ಕೆಲಸಗಾರರಲ್ಲದ ಪದ್ಮಪ್ಪ ಪೂಜಾರಿ, ಶಿವಪ್ಪ, ವಾಸು ಸಾವಲ್ಕರೆಂಬ ಈ ಮೂವರಿಗೆ ಬಿಡುಗಡೆಯೂ ವಿಧಿಸಲಾಗಿದೆ.

ದೊಂಬಿ ಮೊಕದ್ದಮೆ

ಕಳೆದ ವರ್ಷದ ಮೇ ತಿಂಗಳಲ್ಲಿ ಪೂರ್ವ ವೈರಿಯದ ಮಣಿಯಾನ್ ಕುನ್ನು ಎಂಬಲ್ಲಿ, ಮಲಬಾರ್ ಸ್ಪೆಶಲ್ ಪೋಲೀಸರು ಉತ್ತರ ಮಲಬಾರಿನ ಎಂ. ಚಿರುಕುಂಡನ್ ಮತ್ತು ೨೧ ಮಂದಿಯನ್ನು ಕೈದು ಮಾಡಲು ಹೋದ ಕಾಲದಲ್ಲಿ ಕೋಮು ಏಳ್ಗೆ ಇತ್ಯಾದಿ ಅಪಾಯಕಕ ಆಯುಧಗಳಿಂದ ಸುಸಜ್ಜಿತರಾದ ಆವರು (ಇವರಲ್ಲಿ ಒಬ್ಬ ಮೃತನಾಗಿರುವ, ಒಬ್ಬ ಪರಾರಿಯಾಗಿದ್ದಾನೆ) ಪೋಲಿಸ್ ಕೂಟದ ಮೇಲೆ ಗುಂಡು ಹೊಡೆಯಲೆತ್ನಿಸಿದರೆಂದು ಸೈಶಲ್ ಡ್ಯೂಟಿ ಇನ್ಸ್‌ಪೆಕ್ಟರ್ ಮಿ। ಬಿರಾ ಮೊದಿನ್ ಸಾಹೇಬರು ಅವರ ಮೇಲೆ ದೊಂಬಿ ಆರೋಪ ಹೂಡಿ ಹೊಡಿದ ಮೊಕದ್ದಮೆ II ಎಡಿಶನನ್ I ಕ್ಲಾಸ್ ಮೆಜಸ್ಟೇಟರಲ್ಲಿ ವಿಚಾರಣೆಯಾಗಿ ೨೦ ಮಂದಿಗಳಿಗೆ ಸೆಶ್ಶನ್ ಕೋರ್ಟಿನ ತೀರ್ಮಾನಕ್ಕೆ ಕಳುಹಿಸಿರುವರು

ಕಮ್ಯೂನಿಸ್ಟರಿಗೆ ಆಶ್ರಯವಿತ್ತ

ಆರೋಪ

ಲಿಂಗಪ್ಪ ಸುವರ್ಣನೆಂಬ ಕಮ್ಯುನಿಸ್ಟನಿಗೆ ದಿಗ್ಬಂಧನಕ್ಕಾಗಿ ಹುಡಕಲ್ಪಡುತಿದ್ದಾಗ ಆಶ್ರಯವಿತ್ತನೆಂದು ಚೆನ್ನಯ್ಯ ಪೂಜಾರಿ ಎಂಬವನಿಗೆ ೯ ತಿಂಗಳ ಕಠಿಣ ಸಜೆ ವಿಧಿಸಲಾಗಿದ

ಎನ್ ಎಸ್ ಹೊಳ್ಳರೆಂಬ ಕಮ್ಯುನಿಸ್ಟರಿಗೆ ಅದೇ ರೀತಿಯ ಸಂದರ್ಭದಲ್ಲಿ ಆಶ್ರಯವಿತ್ತರೆಂದು ಮಂಗಳೂರು ತಾಲೂಕು ಬಾಳಿಲ ಗಾಮದ ವೆಂಕಟ್‌ರಾವ್, ರಾಮರಾವ್ ಎಂಬವರನ್ನು ಸಾಕಷ್ಟು ರುಜುವಾತುಗಳಿಲ್ಲದರಿಂದ ಬಿಡುಗಡೆ ಮಾಡಲಾಗಿದೆ

ಮದ್ಯವಿಧಿಗಳ ಉಲ್ಲಂಘನೆ

ಕುದ್ರೋಳಿಯ ಅಜೀ ಜಾಂಬೀಬಿಯ ವಶ ೪೪ ಡಾಂ ಕಬ್ಬಿನ ಬೆಲ್ಲದ ಶರಾಬು ಇತ್ತೆಂದು ಆಕೆಗೆ ೨ ತಿಂಗಳ ಕಠಿ ಸಜೆ, ಕುಳಾವೂರಿನ ದೈಂಬಯ್ಯ ಪೂಜಾರಿ ವಶ ೮ ಬಾಟ್ಲಿ ಶರಾಬು ಇತ್ತೆಂದು ಅವನಿಗೆ ೪ ತಿಂಗಳ ಕಠಿ ಸಜೆ, ಅದೇ ಗ್ರಾಮದ ತಿಮ್ಮಪ್ಪ ಪೂಜಾರಿ ವಶ ೧ ಗೆಲನ್ ೫೫ ಡಾಂ ಶರಾಬು ಸಿಕ್ಕಿತೆಂದು ೪ ತಿಂಗಳ ಸಜೆ, ಅಳಪೆ ಗಂಗಮ್ಮನ ವಶ ಕಬ್ಬಿಣ ವಾಶ್ ಸಿಕ್ಕಿತೆಂದು ಅವಳಿಗೆ ರೂ ೫೦ ಜುಲ್ಮಾನೆ ಕೊಂವದವು ಜೆಬಲ್ ಪೀರೀರಾ ಬಾಯಿ ವಶ ಕಬ್ಬಿನ ಶರಾಬು ವಾಶ್ ಸಿಕ್ಕಿತೆಂದು ರೂ. ೭೫ ಜುಲ್ಮಾನೆ, ಹೀಗೆ ವಿಧಿಸಲ್ಪಟ್ಟಿದೆ

ದ. ಕ. ಜಿಲ್ಲಾ ರಾಜಕೀಯ ಪರಿಷತ್ತು

ತಾ ೨೨-೫-೪೯ನೇ ಆದಿತ್ಯವಾರ ಅಪರಾಹ್ನ ಘಂಟೆ ೪ಕ್ಕೆ ಪಾಣೆಮಂಗಳೂರಲ್ಲಿ ಶ್ರೀಮಾನ್ ಆರ್ ಎಸ್ ಹುಕ್ಕೇರಿಕರ್, ಬಿ ಎ ಎಲ್ ಬಿ, ಎಮ್ ಎಲ್ ಎ, (ಮುಂಬಯಿ) ಇವರ ಸನ್ನಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು

ವಾರ್ಷಿಕೋತ್ಸವ

ಸೈಂಟ್ ಸೀಟರ್ಸ್ ಶಾಲಾ ಹಳೇ ವಿದ್ಯಾರ್ಥಿ ಸಂಸದ ಐದನೇ ವಾರ್ಷಿಕೋತ್ಸವವು ಡಾ। ಕೆ ನಾಗಪ್ಪ ಆಳ್ವ ಅವರ ಸನ್ನಾನ್ಯ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಡಿ ವೆಂಕಟ್‌ರಾವ್, ಶ್ರೀ ಕೃಷ್ಣರಾವ್ ಬಿ. ಬಿ ಇವರು ಮಾತಾಡಿ ಸಂಘದ ಕಾರ್ಯವನ್ನು ಶ್ಲಾಘಿಸಿ ಇಂಥ ಸಂಘದಿಂದ ದೇಶದ ಕಾರ್ಯವು ಅಭಿವೃದ್ಧಿಯಾಗುವುದರಿಂದ ಗ್ರಾಮಸ್ಥರೆಲ್ಲರೂ ಈ ಸಂಘಕ್ಕೆ ಬೆಂಬಲ ಕೊಡಬೇಕಾಗಿ ಕೇಳಿಕೊಂಡರು. ವಿವಿಧ ವಿನೋದಾವಳಿಗಳಿದ್ದುವು

ಉಡುಪಿ

ಕಳೆದ ವಸಂತಿ ದ್ವಾದಶಿ ದಿನ ಮಂಗಳವಾರದಂದು ಇಲ್ಲಿಯ ಪ್ರಸಿದ್ಧ ಶ್ರೀಕೃಷ್ಣಾಮರದ ಭೋಜನ ಶಾಲೆಗೆ ಗುದ್ಯರಾತ್ರಿಯ ಹೊತ್ತಿಗೆ ಬೆಂಕಿ ತಗಲಿದ್ದು ಸುಮಾರು ಅರ್ಧ ಭಾಗವು ಸುಟ್ಟು ಹೋಗಿರುವುದೆಂದೂ ಸಾಧಾರಣ ೭೫ ಸಾವಿರ ರೂಪಾಯಿಗಳ ನಷ್ಟ ಸಂಭವಿಸಿರಬಹುದೆಂದೂ ತಿಳಿದುಬರುತ್ತದೆ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸಿದರು.

ಉಡ್ಡಿ ತಾಲೂಕು ಕುಲಾಲ ಸಮಾಜದ ವರ್ಷಾವಧಿ ಅಧಿವೇಶನ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು

ಕುಂದಾಪುರ

ಇಲ್ಲಿಯ ಕರ್ನಾಟಕ ಸಂಘದ ವಿಶೇಷ ಸಭೆಯೊಂದು ಬೋರ್ಡ್ ಹೈಸ್ಕೂಲಿನಲ್ಲಿ ಪ್ರೆಸಿಡೆನ್ಸಿ ಕಾಲೇಜಿನ ಪ್ರೋ। ಕೆ. ರಾಮದಾಸ್ ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೋಟ ಶಿವರಾಮ ಕಾರಂತರು "ಸಾಹಿತ್ಯದ ಸ್ವರೂಪ" ಎಂಬ ವಿಷಯದ ಕುರಿತು ಭಾಷಣ ಮಾಡಿದರು

ಕುಂದಾಪುರ ತಾಲೂಕು ರೈತರ ಮಹಾಸಭೆಯೊಂದು ಈಚೆಗೆ ಶ್ರೀ ಎನ್ ವಿಠಲ ದಾಸರ ಅಧ್ಯಕ್ಷತೆಯಲ್ಲಿ ಜರಗಿತು ಡಾ। ಸಂಜೀವನಾಥರು ರೈತರ ಸಂಕಷ್ಟಗಳ ಕುರಿತು ಭಾಷಣ ಮಾಡಿದರು

ಕೊಟೇಶ್ವರ

ಇಲ್ಲಿಯ ಪ್ರೌಢ ಪ್ರಾಥಮಿಕ ಶಾಲೆಯ ಬೆಳ್ಳಿ ಹಬ್ಬವು ಈಚೆಗೆ ಶಿವ ಮೊಗ್ಗೆಯ ವಕೀಲ್ ಶ್ರೀ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಇಲ್ಲಿ ಕನ್ನಡ ವಸಂತೋತ್ಸವವು ತಾ. ೨೮ರಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೊಸ ಬೆಟ್ಟು ರಾಮಂತಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಶಿವರಾಮ ಕಾರಂತರು ಏಕೀಕರಣದ ಕುರಿತು ಭಾಷಣ ಮಾಡಿದರು.

WANTED

ರೂಲಿಂಗ್ (Ruling) ಮಾಡುವರಿಗೆ ಅನುಭವವಿರುವ ಒಬ್ಬ ಟ್ಯಾಂಡರನು ಬೇಕಾಗಿದ್ದಾನೆ

ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡಿಕೊಳ್ಳಿರಿ

Manager
Saraswathi Printing Works, Ltd., Mangalore

ಬೇಕಾಗಿದ್ದಾರೆ

ಹಿಂದೂ ಸೇವಾ ಸಂಘದ ಬಾಲಕಾಶ್ರಮದಲ್ಲಿ ವಾರ್ಡನರಾಗಿರಲು ಬೇಕಾಗಿದ್ದಾರೆ S S. L C Trained ಆಗಿ ಹ್ರಾಯ 40ರಿಂದ 60 ವರ್ಷದೊಳಗಿನವರಾಗಿ, ಸಮಾಜ ಸೇವೆಯಲ್ಲಿ ಅಭಿರುಚಿ ಇದ್ದವರಾಗಿ, ಗಂಡು ಮಕ್ಕಳನ್ನು ಪ್ರೀತಿಯಿಂದ ನೋಡಿಕೊಂಡು ಇರುವವರಾಗಿರಬೇಕು

ವೇತನ ವಗೈರೆಗಳ ಮಾಹಿತಿ ಬಗ್ಗೆ ಬರಕೊಳ್ಳಬೇಕಾದ ವಿಳಾಸ —

M Venkatesh Pai.
ಕಾರ್ಯದರ್ಶಿ,
ಹಿಂದೂ ಸೇವಾ ಸಂಘ,
ತ್ರಿವೇಣಿ ಭವನ,
ಮಂಗಳೂರು.

ಜಗತ್ತಿನ ಅತೀ ದೊಡ್ಡ ಸೇತುವೆ

ಸೆನ್ ಫ್ರೆನ್ಸಿಸ್ಕೋದ ಸರಿಗೆಯ ಸಂಕ

ಯುದ್ಧಕಾಲದಲ್ಲಿ ಸೆನ್ ಫ್ರೆನ್ಸಿಸ್ಕೊ ಅತೀ ಪ್ರಖ್ಯಾತವಾಯಿತು. ಶಕ್ತಿ ರಾಷ್ಟ್ರಗಳ ಪರಿಷತ್ತು ಅಲ್ಲಿ ಸೇರಿ ಮಹತ್ವದ ನಿರ್ಣಯಗಳು ಮಾಡಲ್ಪಟ್ಟವು ಆಗ ಅಲ್ಲಿಗೆ ಹೋದ ಪ್ರೇಕ್ಷಕರು ಅಮೇರಿಕದ ಪಶ್ಚಿಮ ಕರಾವಳಿಯಲ್ಲಿರುವ ಈ 'ಸುವರ್ಣ ದ್ವಾರ' ವೆನಿಸುವ ನಗರದ ಅತ್ಯದ್ಭುತ ರಚನೆಯ ಸೇತುವೆಯನ್ನು ಅವಶ್ಯವಾಗಿ ನೋಡಿರುವರು.

ಸೆನ್ ಫ್ರೆನ್ಸಿಸ್ಕೊ ಸೇತುವೆ ಜಗತ್ತಿನ ಉದ್ದದ ಸಂಕ ಅದು ಅಲ್ಲಿನ ರಾಜ ಮಾರ್ಗವೂ ಹೆದ್ದಾರಿಯೂ ಆಗಿದೆ ಪ್ರತಿ ದಿನ ಅದರ ಮೇಲಿಂದ 71 ಸಾವಿರ ಮೋಟಾರು ವಾಹನಗಳು ಹಾದು ಹೋಗುತ್ತವೆ ಇದರ ಉದ್ದ 8 ಮೈಲುಗಳಷ್ಟಿದೆ

ಈ ಸೇತುವೆಯ ಆಡಳಿತವನ್ನು ನೋಡಿಕ್ಕೇ ಪ್ರತ್ಯೇಕವೊಂದು "ಸ್ಥರಕಾರ"ವಿದೆ ಈ ಸರಕಾರದಲ್ಲಿ 16 ಮಂದಿ ತೆರಿಗೆ ವಸೂಲಿ ಮಾಡುವ "ಕಲೆಕ್ಟರ"ರು ಇರುವರು ಇದರ ಮೇಲಿಂದ ಹಾದು ಹೋಗುವ ಪ್ರತಿಯೊಂದು ವಾಹನವೂ "ಸಂಕದ ಸುಂಕ"ವನ್ನು ತೆರಬೇಕು ಸುಂಕ ಕಲೆಕ್ಟರರು ಇದನ್ನು ಸರಾಸರಿ 6 ಸೆಕೆಂಡಿಗೆ ಒಂದಾನರ್ತಿ ಎಂಬಂತೆ ವಸೂಲು ಮಾಡುವರು ಅಂದರೆ ಅಷ್ಟು ವಾಹನಗಳು ಅದರ ಮೇಲೆ ಓಡಾಡುತ್ತವೆ ಸುಂಕ ವಸೂಲಿಗೆ ಮತ್ತು ಇನ್ನಿತರ ಕೆಲಸಗಳಿಗೆ ನಿಯೋಜಿತರಾದ 340 ಕೆಲಸಗಾರರು ಅದರ ಮೇಲೆ ನಿತ್ಯವೂ ಕಾರ್ಯ ನಿರತರಾಗಿರುವರು ಅದೊಂದು ಪುಟ್ಟ ನಗರವೆಂದರೂ ಸರಿಯೆ ಆದರೆ ಬೇಕು, ಪೋಲಿಸ್ ಕಚೇರಿ, ಅಗ್ನಿ ಶಾಮಕದಳ ಅಲ್ಲದೆ ಒಂದು ಆಸ್ಪತ್ರೆ ಕೂಡ ಇದೆ ತೆರಿಗೆ ವಸೂಲಿ ಮಾಡಲು 80 ಜನ ಅಧಿಕಾರಿಗಳೂ ಇದ್ದಾರೆ ಒಂದು ಡಜನ್ ಮಂದಿಗಳು ಸಂಕದ ಮೇಲೆ ಹಾಳಾಗುವ ಮೋಟಾರು ವಾಹನಗಳನ್ನು ಶೀಘ್ರದಲ್ಲಿ ದುರುಸ್ತಿ ಮಾಡುವ ಉದ್ಯೋಗಕ್ಕೆ ನೇಮಿಸಲ್ಪಟ್ಟವರಿದ್ದಾರೆ

~~ಬಣ್ಣ ಬಳಿಯುವ ಶ್ರಮ~~

ಸೆನ್ ಫ್ರೆನ್ಸಿಸ್ಕೊ ಸೇತುವೆಯು ಎಲ್ಲಾ ಕೆಲಸಗಳಿಗಿಂತ ಅದಕ್ಕೆ ಬಣ್ಣ ಬಳಿಯುವ ಕೆಲಸವು ಅತ್ಯಂತಶ್ರಮದಾಯಕವಾದುದು. ಸೇತುವೆಯ ಒಟ್ಟು ವಿಸ್ತೀರ್ಣವನ್ನು ಲೆಕ್ಕ ಹಾಕಿದರೆ 15 ಮಿಲಿಯ ಚದರ ಅಡಿ ಗಳಷ್ಟಾಗುತ್ತದೆ. ಸೇತುವೆಯ ರಚನೆಯಾಗಿ ಸುಮಾರು 12 ವರ್ಷಗಳಾದುವು. ಅದಕ್ಕೆ ಬಣ್ಣ ಬಳಿಯಲು ಸುಮಾರು 10 ವರ್ಷಗಳು ಹಿಡಿದುವು ಏನ್ನುವಾಗ ಈ ಲೋಹ ಬಂಧನದ ಆಗಾಧತೆಯ ಅರಿವಾಗುವುದು. ಈ ಹತ್ತು ವರ್ಷಗಳಲ್ಲಿ ತೆಗೆದ ಬಣ್ಣದ ಒಂದು ಪದರು ಮಾತ್ರ ಕಳೆದ ಯುದ್ಧದ ಸಮಯದಲ್ಲಿ ಈ ಸೇತುವೆಯನ್ನು ಕಾಯಲು ಒಂದು ಸೈನ್ಯ ದಳವನ್ನು ಕಳುಹಿಸಲಾಯಿತು. ಸೈನಿಕರು ಸೇತುವೆಯ ಬೇರೆ ಬೇರೆ ಕಡೆಯಲ್ಲಿ ಬಣ್ಣ ಹಚ್ಚುವ ಕೆಲಸ ಮಾಡುತಿದ್ದವರಿಗೆ, ಶತ್ರು ಕಡೆಯ ಗುಪ್ತಚಾರರಿರಬೇಕೆಂದು ಗುಂಡಿನ ಗುರಿಯಿಟ್ಟರು. ಕಡೆಗೆ ಅವರು ಬಣ್ಣದ ಕೆಲಸದವರೆಂದು ತಿಳಿಯಿತು.

ಬೆಳಗ್ಗಿನ ಹೊತ್ತಿನಲ್ಲಿ ಸುಮಾರು 3 ರಿಂದ 5 ಗಂಟೆಯ ಅವಧಿಯಲ್ಲಿ ಸೇತುವೆಯ ಮೇಲೆ ವಾಹನಗಳ ಓಡಾಟ ಕೊಂಚ ಕಡಿಮೆ. ಆಗ ಅಸುಖವಾಸಿನ ಮಕ್ಕಳು ತಮ್ಮ ಸಣ್ಣ ಪುಟ್ಟ ವಾಹನಗಳನ್ನು ತಂದೆ ಅದರ ಮೇಲೆ ಆಟವಾಡುತ್ತಾರೆ.

ಸೇತುವೆಯ ಮೇಲೆ ಪಾದಚಾರಿಗಳಿಗೆ ಬಿಡಲಾಗುವುದಿಲ್ಲ ದಿನಕ್ಕೆ ಹೇಗಾದರೂ ಹತ್ತಿಸ್ಸತ್ತು ವಾಹನ ನಿಯಮ ಉಲ್ಲಂಘನೆಯ ಕೇಸುಗಳು ಅಲ್ಲಿ ದೊರಕುವವು.

ಸ್ಥಳೀಯ ಸಂಸ್ಥೆಗಳ ಚುನಾವಣೆ

ಎಲ್ಲಾ ಜಿಲ್ಲಾ ಬೋರ್ಡು ಮತ್ತು ಸಂಯುಕ್ತ ಬೋರ್ಡುಗಳಿಗೆ ಇದೇ ಮೇ ಜೂನ್ ತಿಂಗಳೊಳಗೆ ಚುನಾವಣೆಗಳನ್ನು ಜರಗಿಸಬೇಕೆಂದು ಮದ್ರಾಸ್ ಸರಕಾರದ ಆಜ್ಞೆಯಾಗಿದೆ ಪ್ರಾಂತ್ಯದಲ್ಲಿನ ಅನೇಕ ಪಂಚಾಯ್ತಿ ಬೋರ್ಡುಗಳಿಗೆ ಈಗಿದ್ದ ಮತದಾರರ ಯಾದಿ ಪ್ರಕಾರ ಈ ವರ್ಷ ಚುನಾವಣೆಗಳು ಜರಗಿಸಲ್ಪಟ್ಟಿವೆ. ಆದುದರಿಂದ ಇಂಥವುಗಳಲ್ಲಿ ಪುನಃ ಮತ್ತೊಮ್ಮೆ ಚುನಾವಣೆಯಾಗುವಂತೆ ಆಜ್ಞೆ ಕೊಡುವುದು ಅನವಶ್ಯಕವೂ ಅನುಚಿತವೂ ಆಗುವುದು ಆದುದರಿಂದ ಪುನಃ ಚುನಾವಣೆಯಿಂದ ಇವನ್ನು ವಿಮುಕ್ತಗೊಳಿಸುವರೆ ಆಜ್ಞೆ ಕೊಡಲ್ಪಡುವುದೆಂದು ಹಾರೈಸಲಾಗಿದೆ ಇದರಿಂದ ಅನೇಕ ಹಳ್ಳಿಗಳಲ್ಲಿನ ಅಂತಃಕಲಹ ವರ್ಷಣೆಗಳು ತಪ್ಪುವವು ಸರಕಾರಿಕ್ಕೂ ಹಣ ಮತ್ತು ಶ್ರಮದ ಉಳಿತಾಯವಾಗುವುದು ಹೀಗೆಂದೂ ಒನ್ ಬಾಕ್ಸಿದಾರರು ಅಂಗ್ಲ ದೈನಿಕವೊಂದರಲ್ಲಿ ಪ್ರಕಟಿಸಿದ್ದಾರೆ

ಸಂಕ್ಷೇಪ ಸುದ್ದಿಗಳು

- ರವೀಂದ್ರನಾಥ ಟಾಗೂರರ "ವಿಶ್ವಭಾರತಿಗೆ" ಪಂಡಿತ ಜವಾಹರಲಾಲ್ ನೆಹರುರವರನ್ನು ಆರಿಸಲಾಗಿದೆ. ದಿ। ಸರೋಜಿನಿ ದೇವಿಯವರು ಈ ಸ್ಥಾನದಲ್ಲಿದ್ದರು

✠

ಅಧ್ಯಕ್ಷ ಟ್ರೂಮನ್ನರಿಂದ ಆಹ್ವಾನಿಸಲ್ಪಟ್ಟ ಮಾತ್ರದಿಂದ ಪಂಡಿತ್ ನೆಹರುಗಳ ಅಂತರಾಷ್ಟ್ರೀಯ ಸ್ಥಾನಮಾನವು ನಿರ್ದಿಷ್ಟವಾಯಿತೆಂದು ಅಮೇರಿಕದ ಪತ್ರಿಕೆಗಳು ಸಂತೋಷವನ್ನು ಸೂಚಿಸಿವೆ. ಪಂಡಿತ ನೆಹರುಗಳು ಅಮೇರಿಕಕ್ಕೆ ಒಕ್ಟೋಬರ್ ತಿಂಗಳಲ್ಲಿ ಹೋಗುವರೆಂದು ತಿಳಿದು ಬರುತ್ತದೆ

✠

ಭೂಪಾಲ ಸಂಸ್ಥಾನದ ಆಡಳಿತವನ್ನು ಇಂಡಿಯಾ ಸರಕಾರಕ್ಕೆ ಒಸ್ಪಿಸಲು ಅಲ್ಲಿನ ೫೫ ವರ್ಷದ ನವಾಬರು ಒಪ್ಪಿ ಆ ಸಂಧಿಗೆ ಸಹಿ ಹಾಕಿದ್ದಾರೆ ಭೋಪಾಲದ ವಿಸ್ತೀರ್ಣ ೬ ಸಾವಿರ ಚದರ ಮೈಲು, ಜನ ಸಂಖ್ಯೆ ೭ ಲಕ್ಷ

✠

ಹಿಂದೀ ಒಕ್ಕೂಟದ ಯಾವ ಭಾಗಗಳೂ ಸಂಸ್ಥಾನಕ್ಕೆ ಸೇರಿಸಿಕೊಳ್ಳಲು ಶಕ್ಯವಿಲ್ಲ ಸಂಸ್ಥಾನಕ್ಕೆ ಸೇರಲೇಕು ಹೀಗೆ ಮೈಸೂರು ಮಹಾರಾಜರು ಕರ್ನಾಟಕ ಏಕೀಕರಣಕ್ಕೆ ಸಹಾಯ ಮಾಡಬಹುದು ಎಂದು ಅಧ್ಯಕ್ಷ ಪಟ್ಟಾಭಿಯವರು ಈಚೆಗೆ ತಮ್ಮ ಬೆಂಗಳೂರು ಭಾಷಣದಲ್ಲಿ ತಿಳಿಸಿದರು

✠

ಸಾರ್ವತ್ರಿಕ ಚುನಾವಣೆಗಳು ಇನ್ನೂ ನಡೆದಿಲ್ಲವಾದ್ದರಿಂದ ಈಗಿನ ಸಂವಿಧಾನ ಸಮಿತಿ ಜನಾಂಗದ ಒಪ್ಪಿಗೆ ಸಿಕ್ಕಿಲ್ಲ ಆದ್ದರಿಂದ ಹಿಂದೂ ರೂಢಿಗಳಲ್ಲಿ ಬದಲಾವಣೆ ಮಾಡುವುದಕ್ಕೆ ಈಗ ತಾನೂ ಒಪ್ಪಲಿಕ್ಕಿಲ್ಲವೆಂದು ಫೆಡರಲ್ ಸಮಿತಿಯ ಅಧ್ಯಕ್ಷ ರಾಜೇಂದ್ರ ಪ್ರಸಾದರು ನುದಾಸ್ರಿನ ಮಹಿಳೆಯರಿಗೆ ತಿಳಿಸಿದರು.

✠

ಹಂಪಿ, ವಿಜಯ ನಗರದ ಸುತ್ತುಮುತ್ತಿನ ಭಗ್ನಾವಶೇಷಗಳನ್ನೂ, ಹುಗಿದು ಹೋಗಿರುವ ಐತಿಹಾಸಿಕ ವಿಶೇಷಗಳನ್ನೂ ಪರಿಶೋಧಿಸಲು ಒಂದು ತಜ್ಞರ ಸಮಿತಿಯು ಏರ್ಪಡಿಸಲ್ಪಟ್ಟಿದೆ. ಸದ್ಯದಲ್ಲೆ ಕಾರ್ಯವೂ ಪ್ರಾರಂಭಿಸಲ್ಪಡುವುದು.

✠

ಬ್ರೊಂಕ್ಯಾಟಿಸ್ ಮತ್ತು ಕೆಮ್ಮಿಗೆ ಪೆಪ್ಸು ಅಗತ್ಯ

ರುಚಿಕರ ಮಾಧುರ್ಯದ ಪೆಪ್ಸನ್ನು ಬಾಯಿಯಲ್ಲಿ ಹಾಕಿಕೊಳ್ಳಿರಿ. ಅದು ಕರಗುತ್ತಿರುವಾಗ ಅದರಿಂದ ಒಂದು ಸುವಾಸನೆಯ ಧೂಮ್ರವು ಶ್ವಾಸಕೋಶವನ್ನು ಸೇರಿ ಕೆಮ್ಮನ್ನು ಗುಣವಡಿಸಿ ಕಫವನ್ನು ಹೊರಡಿಸುವುದು



PEPS

ವಿಷಹಾರಿ ಎದೆ ಮತ್ತು ಗಂಟಲು ಬೇನೆಯ ಮಾತ್ರೆಗಳು

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶ್ಯಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿವಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶ್ಯಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶ್ಯಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ರೆ ಕೊಯಮುತ್ತೂರಲ್ಲಿರುವ ಸರ್ಕಾರಿ R. T O ರವರು ಪೆರ್ಮಿಟ್ ಮಾಡಿ, ಅದು ಕೂಡಾ ಗ್ಯಾಸು ಬಸ್ಸುಗಳಿಂದಲೇ ಓಡಿಸಬೇಕಾಗಿ ನಿರ್ಭಂದವಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿಜ್ಜೆ ಸ್ಪೆಶ್ಯಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

ಮಂಗಳೂರು
22-12-48

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed . . .	Rs. 20,00,000
Capital Paid up	Rs. 19,99,800
Reserves	Rs. 8,90,000

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗ, ಭುಜ, ಹಲ್ಲುವೇದನೆಗಳಿಗೂ ಎದನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂಟಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾಯಿ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನವ್ಯ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪಿಡಕೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡಿಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ. ಮರಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 27—5—1949 [ಸಂಚಿಕೆ 21]

ಬ್ರಹ್ಮದೇಶಕ್ಕೆ ಭಾರತದ ಸಹಾಯ

ಎಂಟು ಲಕ್ಷ ಹಿಂದೀಯರ ಸ್ಥಿತಿಗತಿಗಳು

ಒಂದು ತಿಂಗಳ ಹಿಂದೆ ಬರ್ಮಾದ ಮುಖ್ಯ ಪ್ರಧಾನರಾದ ಥಾಕಿನ್‌ರೂ ಅವರು ದಿಲ್ಲಿಗೆ ಬಂದಿದ್ದು ದಂಗೆಖೋರರನ್ನು ಅಣಗಿಸಲು ಸಹಾಯವನ್ನು ಬೇಡಿದ್ದರು ಈಗ ಭಾರತ, ಬ್ರಿಟನ್, ಪಾಕಿಸ್ತಾನ ಮತ್ತು ಸಿಂಹಳಗಳು ಬರ್ಮಕ್ಕೆ ಸಾಧ್ಯವಿದ್ದ ಸಹಾಯವನ್ನು ಸಲ್ಲಿಸ ಬೇಕಾಗಿ ವಚನವಿತ್ತ ವ್ಯಕಟನೆಗಳು ಹೊರಬಿದ್ದಿವೆ ಬರ್ಮಿ ಸರಕಾರ ಮತ್ತು ದಂಗೆಕಾರರೊಳಗೆ ಒಪ್ಪಂದವನ್ನುಂಟುಮಾಡಲು ಮೇಲ್ಕಂಡ ನಾಲ್ಕು ವಸಾಹತುಗಳು ಮಧ್ಯಸ್ಥಿಕೆ ವಹಿಸಲು ಸಮ್ಮತಿ ಸೂಚಿಸಿದವು ಆದರೆ ಬೊದ ಲೊಂದು ಸಲ ಬರ್ಮಾ ಪ್ರಧಾನರು ಇದಕ್ಕೆ ಸಮ್ಮತಿ ಸೂಚಿಸದಾದರು ಮತ್ತೆ ಪ್ರಸಂಗಗಳ ಒತ್ತಡವು ಅಧಿಕವಾಗಲು ಅಂತಹ ಒಂದು ಮಧ್ಯಸ್ಥಿಕೆ ಅವಶ್ಯಕವೆಂದು ಅವರು ಮನಗಂಡರು ಈ ಸಂದರ್ಭದಲ್ಲಿ ಮಧ್ಯಸ್ಥಿಕೆಗೆ ನಮ್ಮ ಮುಖ್ಯ ಪ್ರಧಾನರೇ ಮುಂದಾಗಬಹುದೆಂದೂ ಪ್ರಾತಾಡಲ್ಪಡುತಿತ್ತು

ಕೂಮನ್‌ವೆಲ್ತ್ ಪರಿಷತ್ತಿನ ಕೆಲದಿನಗಳ ಮುಂಚಿತವಾಗಿ ಥಾಕಿನ್‌ರೂ ಅವರು ದಿಲ್ಲಿಗೆ ದಯಮಾಡಿಸಿದರು ಅಲ್ಲಿ ಅವರು ಸಿಂಹಳದ ಮುಖ್ಯ ಪ್ರಧಾನರನ್ನೂ ಕಂಡು ಮಾತನಾಡಿದರು ಈ ಸಂದರ್ಶನಗಳಲ್ಲಿ ಅವರು ಬರ್ಮಾದ ನಿದಿಷ್ಟ ಪರಿಸ್ಥಿತಿಯನ್ನು ನಿವರಿಸುತ್ತ ಶಾಂತಿ ಶಿಸ್ತುಗಳನ್ನು ಶೀಘ್ರದಲ್ಲೇ ಸ್ಥಾಪಿಸಲು ತಮ್ಮ ಸರಕಾರವು ಬಲಿಷ್ಠವಾಗಿದೆಂದೂ ಭರವಸೆಯಿತ್ತರು ಬರ್ಮಕ್ಕೆ ಸಹಾಯಕೊಡುವುದರ ಕುರಿತು ಲಂಡನದ ಮುಖ್ಯ ಪ್ರಧಾನರ ಪರಿಷತ್ತಿನಲ್ಲಿ ಒಂದು ಇತ್ಯರ್ಥ ಮಾಡಬಹುದೆಂದು ಬ್ರಿಟನ್ನು ಹಾರೈಸಿತು ಲಂಡನ್ ಪರಿಷತ್ತಿನಲ್ಲಿ ಈ ಕುರಿತು ತೃಪ್ತಿಕರವಾದ ಒಂದು ಯೋಜನೆಯ ನಿರ್ಧಾರವಾಗಿದೆಂದೂ ಊಹಾಪೋಹೆಗಳಿದ್ದುವು. ಈ ಸಹಾಯ ಒಪ್ಪಂದವನ್ನು ಕಾರ್ಯರೂಪಕ್ಕೆ ತರಲು ಬ್ರಿಟನ್, ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳು ಕೊನೆಯ ಪರ್ಯಾಲೋಚನೆಗಾಗಿ ಮತ್ತೆ ಸ್ವಲ್ಪ ಸಮಯವನ್ನು ತೆಗೆಯುವ ಅವಶ್ಯಕತೆಯುಂಟಾಯಿತು: ಈಗ ಲಂಡನ್ ಪರಿಷತ್ತಿನ ಈ ಕುರಿತಾದ ಇತ್ಯರ್ಥದ ಸಂಬಂಧದಲ್ಲಿ ಒಂದು ಪ್ರಕಟಣೆ ಹೊರಬಿದ್ದಿದೆ ಅದರಲ್ಲಿ ಈ ನಾಲ್ಕು ದೇಶಗಳು "ಬರ್ಮಾದಲ್ಲಿ ಶಾಶ್ವತೆಯನ್ನು ಶೀಘ್ರದಲ್ಲಿ ಸ್ಥಾಪಿಸಲೋಸುಗ ಥಾಕಿನ್‌ರೂ ಸರಕಾರಕ್ಕೆ ಸಾಧ್ಯವಿದ್ದ ಬೆಂಬಲವನ್ನು ಕೊಡಲು ಒಪ್ಪಿವೆ' ಎಂದು ನಿರೂಪಿಸಲಾಗಿದೆ

ಈ ಒಪ್ಪಂದವನ್ನು ಕಾರ್ಯರೂಪಕ್ಕೆ ತರಲು ಪ್ರತ್ಯೇಕವೊಂದು ಸಮಿತಿಯೂ ನಿರ್ಪಡಿಸಲ್ಪಟ್ಟಿವೆ ರಂಗೂನಿನಲ್ಲಿರುವ ಮೇಲ್ಕಂಡ ನಾಲ್ಕು ದೇಶಗಳ ರಾಯಭಾರಿಗಳು ಸಂಯುಕ್ತ ಪರಿಶ್ರಮದಿಂದ ಈ ಕುರಿತು ಯೋಗ್ಯ ಕಾರ್ಯಸಿದ್ಧಾಂತಕ ಕ್ರಮವನ್ನು ಯೋಚಿಸುವರು ಎಂದು ಬ್ರಿಟಿಷ್ ವಿದೇಶಾಂಗ ಮಂತ್ರಿ ಬೆವಿನ್ನರು ವಾರ್ಲಮೆಂಟಿನಲ್ಲಿ ಸಾತಿದರು ಬರ್ಮಾಕ್ಕೆ ಕೊಡಲ್ಪಡುವ ಈ ವಿಶೇಷ ಸಹಾಯವು ಸಾಲದ ರೂಪದ ಲ್ಲಿರಲಾರದೆಂದೂ ತತ್ಸಂಬಂಧ ರಚಿಸಲ್ಪಟ್ಟ ಸಮಿತಿಯ ಶಿಫಾರಸಿನ ಮೇರೆಗೆ ಆರ್ಥಿಕ, ಸೈನಿಕ ಮತ್ತಿತರ ಸಹಾಯಗಳು ಕೊಡಲ್ಪಡುವುದೆಂದೂ ವಿ। ಬೆವಿನ್ನರು ಸ್ಪಷ್ಟಪಡಿಸಿರುವರು ರಂಗೂನಿನಲ್ಲಿರುವ ರಾಯಭಾರಿ ತಜ್ಞರು ಬರ್ಮಕ್ಕೆ ಕೊಡಲ್ಪಡುವ ಈ ಸಹಾಯದ ವ್ಯಾಪ್ತಿ, ಪ್ರಮಾಣ ಮತ್ತು ಉದ್ದೇಶಗಳನ್ನು ಪ್ರತಪ್ರತ್ಯೇಕವಾಗಿಯೂ ಸವಿಸ್ತಾರವಾಗಿಯೂ ವಿಂಗಡಿಸಿ ಅದರಲ್ಲಿ ಹಣದ ರೂಪವಾಗಿಯೂ ವಸ್ತುರೂಪವಾಗಿಯೂ ಒಪ್ಪಂದಕ್ಕೆ ಬದ್ಧರಾದ ರಾಷ್ಟ್ರಗಳು ಎಷ್ಟೆಷ್ಟು ತೆತ್ತಿರೇಕೆಂದು ನಿರ್ಣಯಿಸುವರು. ಬೆವಿನ್ ಸಾಹೇಬರು ತಮ್ಮ ಹೇಳಿಕೆಯಲ್ಲಿ "ಆಗ್ನೇಯ ಆಸ್ಯದಲ್ಲಿ ಚಿರಶಾಂತಿ ಸ್ಥಾಪನೆಯಾಗಬೇಕಾದರೆ ಈ ಸಹಾಯವು ಅವಶ್ಯ ಮಾತ್ರವಲ್ಲಿ ಅದು ನಾಲ್ಕು ದೇಶಗಳ ಸಮರಸವಾದ ಪರಿಶ್ರಮದಿಂದ ಕೊಡಲ್ಪಡಬೇಕಾದುದು ಅನಿವಾರ್ಯ"ವೆಂದೂ ಸ್ಪಷ್ಟಪಡಿಸಿರುವರು

ಆಗ್ನೇಯ ಆಸ್ಯದಲ್ಲಿ ಶಾಂತಿ

ಆಗ್ನೇಯ ಆಸ್ಯದ ಈ ಭಾಗಗಳಲ್ಲಿ ಶಾಂತಿ ನೆಲಸುವಂತೆ ನೋಡ್ವವ ಹೊಣೆಗಾರಿಕೆಯು ಬ್ರಿಟನಿಗಿಂತಲೂ ಭಾರತಕ್ಕೆ ಹೆಚ್ಚಿನ ಮಹತ್ವದ್ದಾಗಿದೆ ಅದರಲ್ಲೂ ಅಕ್ಕ ಪಕ್ಕದ ರಾಷ್ಟ್ರಗಳಾಗಿರುವ ಬರ್ಮಾ, ಇಂಡೋನೇಸ್ಯ, ಮಲಯಗಳ ಕುರಿತಂತೂ ಅದಕ್ಕೆ ಮತ್ತಷ್ಟು ಹೆಚ್ಚಿನ ಜವಾಬ್ದಾರಿಕೆಯಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಆದರಲ್ಲೂ ವಿಶ್ವದಲ್ಲೆಲ್ಲಾ ಕೆಮ್ಯುನಿಸ್ಟ್ ಉಸಟಳವು ಲವಾಹಕವಾಗಿ ಸಾಗುತ್ತಿರುವಾಗ ಇದರ ಅವಶ್ಯಕತೆಯು ಎಷ್ಟೆಂದು ಬಗೆದು ವಿವರಿಸುವುದು ಅನಶ್ಯವಿಲ್ಲ ಅದು ಅತ್ಯಂತ ಸೂಕ್ಷ್ಮವಾದ ವಿಚಾರವೂ ಆಗಿದೆ

ಈ ಕುರಿತು ತಪ್ಪಾದ ಅಭಿಪ್ರಾಯವನ್ನು ಮಾಡಿಕೊಂಡವರೂ ಇದ್ದಾರೆ. ಬರ್ಮಾದ ಸರಕಾರವು ಈಗ ತುಂಬಾ ನಿರ್ಬಲವಾಗಿದೆ ಅಲ್ಲಿ ಅಂತಃ ಕಲಹದ ಉಗ್ರ ಲಕ್ಷಣಗಳು ಎದ್ದಿವೆಯೆಂದು ಬೆವಿನ್ನರೆ ಸುಸ್ಪಷ್ಟಪಡಿಸಿರುವರು ಆದರೂ ಒಂದು ದೇಶದ ಆಂತರಿಕ ವ್ಯವಹಾರದಲ್ಲಿ ಹೈಜಿಕ್ಕುವುದು ಸರಿಯಲ್ಲವೆಂದು ಕೆಲವರ ಆಕ್ಷೇಪವಿದೆ. ಮತ್ತೆ ಕೆಲವರು ರಾಷ್ಟ್ರೀಯ ಚೀನಕ್ಕೆ ಅನೇರಿಕನ್ನರು ಸಹಾಯಮಾಡಿ ನಿರರ್ಥಕವಾದ ಸಂಗತಿಯನ್ನು ಉಲ್ಲೇಖಿಸಿ ಬರ್ಮಾಕ್ಕೆ ಸಹಾಯ ಕೊಡುವುದರ ಅನುಕೂಲತೆಗಳ ಕುರಿತೂ ಸಂದೇಹ ಸೂಚಿಸಿರುವರು. ಥಾಕಿನ್ ಸರಕಾರವು ಕೊಡಲ್ಪಡುವ ಈ ಸಹಾಯದ ಸದುಪಯೋಗ ಮಾಡಿ ಶೀಘ್ರದಲ್ಲಿ ನೆಮ್ಮದಿಯನ್ನು ಸ್ಥಾಪಿಸಲು ಸಮರ್ಥವಿರುವುದೆ? ಎಂದು ಬೇರೆ ಕೆಲವರ ಆಸಕ್ತಿಯು ಪ್ರಶ್ನೆಯಾಗಿದೆ. ಈ ಕುರಿತು ಸಮಂಜಸವಾದ ಭದ್ರತೆ ಭರವಸೆಗಳೇನು ಎಂದು ಇನ್ನಿತರರ ಉಪ ಪ್ರಶ್ನೆಗಳು. ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ರೂಪವಾಗಿ ನಮಗೆ ನಮ್ಮ ಮುಖ್ಯ ಪ್ರಧಾನರ ಹೇಳಿಕೆಯು ಭರವಸೆ ಈಯುವಂತಹವಿದೆ: "ಬರ್ಮಾದ ಈಗಿನ ಸರಕಾರವು ಅಲ್ಲಿನ ವರ್ತಿಷ್ಠಿತಿಯನ್ನು ಹದಕ್ಕೆ ತರಲು ಸಮರ್ಥವಿದೆಯೆಂದು ನಮಗೆ ವಿಶ್ವಾಸವಿರುವುದರಿಂದ ಮಧ್ಯಸ್ಥಿಕೆಗೆ

(ಎನೇ ಪುಟ ನೋಡಿ)

THE

UNITED INDIA LIFE ASSURANCE CO., LTD.

(H. O MADRAS.)

ANNOUNCEMENT

We have great pleasure in announcing that our Branch Office for S. Kanara, Malabar, and Coorg, now functions at our premises at K. S. Rao Road, Mangalore.

THE BRANCH MANAGER.

(ನಿನ್ನೆ ಪುಟದಿಂದ)

ನಾವೆಲ್ಲಿಕ್ಕಾಕ್ರೆಸ್ಸುವುದಿಲ್ಲ. ಸೈನಿಕವಾಗಿ ನಾವು ಬರ್ಮಾದ ಸೊಂಧಲದಲ್ಲಿ ಸಿಲುಕಲಿಚ್ಛಿಸುವುದಿಲ್ಲ. ನಾವು ಅಲ್ಲಿನ ಅಂತರೀಕ ವ್ಯವಹಾರದಲ್ಲಿ ಕೈಯಾಡಿಸುವವರಲ್ಲ. ಆದರೆ ಅಲ್ಲಿರುವ ೪-ಲಕ್ಷ ಹಿಂದೀಯರ ಭವಿಷ್ಯದ ಕುರಿತು ಮಾತ್ರ ನಾವು ಆಸಕ್ತಿ ಪಡುತ್ತೇವೆ. ಥಾಕಿನ್‌ನೂ ಅವರು ಪ್ರಧಾನರಾಗಿರುವ ಅಲ್ಲಿನ ಈಗಿನ ಸರಕಾರವೇ ಆ ದೇಶದಲ್ಲಿ ನಿರತ ಶಾಂತಿಯನ್ನು ಉಂಟು ಮಾಡಬಲ್ಲದೆಂದು ನಮಗೆ ಭರವಸೆಯಿದೆ. ಮಿತ್ರ ರಾಷ್ಟ್ರವೊಂದು ಸಹಾಯಕೊಡುವಂತೆಯೇ ನಾವು ಅವರಿಗೆ ನೆರವುಕೊಡಬಯಸುತ್ತೇವೆ."

ಬರ್ಮಾದಲ್ಲಿ ಇನ್ನೊಂದು ಗಡಿಬಿಡಿಯಿದ್ದರೂ ಅಲ್ಲಿನ ಅಕ್ಕಿ ಸಂಗ್ರಹ ಕಾರ್ಯಕ್ಕೆ ಯಾವ ತೊಡಕೂ ಉಂಟಾಗಲಿಲ್ಲವೆಂದೂ ಪಂಡಿತ್ ನೆಹರುಗಳು ತಿಳಿಸುವವರಾದರು. ಹಿಂದೂಸ್ತಾನ ಮಿತ್ರರಾಷ್ಟ್ರ ದೇಶಗಳಿಗೆ ಕ್ರಮ ಪ್ರಕಾರವಾದ ಅಕ್ಕಿ ಪ್ರಮಾಣಗಳು ಸಿಗುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ ಉಳಿದೊಂದು ಕೊನೆಯ ಸಂಗತಿಯನ್ನು ಭಾರತವು ಅಲಕ್ಷಿಸಿದಿಂದ ನೋಡಲು ಸಾಧ್ಯವಿಲ್ಲ. ನಮ್ಮ ದೇಶಕ್ಕೆ ಬರ್ಮಾದ ಅಕ್ಕಿಯು ಸುಗಮವಾಗಿ ಬರುವಂತಾಗಲು ನಾವು ಅದಿಂತಹ ಸಹಾಯವನ್ನು ಕೊಟ್ಟರೂ ಹೆಚ್ಚೆನಿಸಲಾರದು. ಅಂತಹ ಸಂದರ್ಭವೂ ಸ್ವಾಗತನೀಯವೆ. ಮುಂದೆಯಾದರೂ ಭಾರತಕ್ಕೆ ಬರ್ಮದ ಅಕ್ಕಿಯ ಆವಶ್ಯಕತೆಯಿದೆ ಈಗ ಕೊಟ್ಟ ಸಹಾಯದಿಂತ ಕೃತಜ್ಞನಾದ ಬರ್ಮವು ನಮ್ಮ ಆಹಾರ ಅವಶ್ಯಕತೆಗಳನ್ನು ನೀಗಲೂ ಎಂದೂ ಹಿಂದೆ ಸರಿಯದೆಂದು ಭರವಸೆಯಿಟ್ಟು ಕೊಳ್ಳಬಹುದು

ಸ್ವಾರ್ಥವಿಲ್ಲ

ಆದರೆ ಈಗ ಭಾರತದಿಂದ ಬರ್ಮಕ್ಕೆ ಕೊಡಲ್ಪಡುವ ಸಹಾಯದಲ್ಲಿ ಯಾವ ಸ್ವಾರ್ಥದ ಉದ್ದೇಶವೂ ಇಲ್ಲ ಕಾರಣ ಮುಂದೆ ಸ್ವಲ್ಪ ಸಮಯದಲ್ಲಿ ನಮ್ಮ ದೇಶವು ಆಹಾರ ವಸ್ತುಗಳ ಮಟ್ಟಿಗೆ ಸ್ವಾವಲಂಬಿಯಾಗುವುದರಲ್ಲಿ ಸಂದೇಹವಿಲ್ಲ ಇಲ್ಲಿವೆ ಬರ್ಮಿ ಕಮ್ಯುನಿಸ್ಟರನ್ನು ಸದೆಬಡಿಯಲೂ ಭಾರತವು ಉದ್ದೇಶಿಸುವುದಿಲ್ಲ. ಕಾರಣ ಚೀನದಿಂದ ಮುಂದರಿಯುವ ಕಮ್ಯುನಿಸ್ಟ್ ಪ್ರಭಾವವು ಬರ್ಮದ ತನಕ ಹಬ್ಬಿದರೂ ಸೈನಿಕವಾಗಿ ಬಲಿಷ್ಠವಾಗಿರುವ ಭಾರತಕ್ಕೆ ಅದರಿಂದ ಯಾವ ಹೆದರಿಕೆಯೂ ಇಲ್ಲ. ಕೇವಲ ನೆರೆರಾಷ್ಟ್ರಕ್ಕೆ ನೆರವು ನೀಡುವುದು ಕರ್ತವ್ಯವೆಂಬ ತತ್ವಕ್ಕನುಗುಣವಾಗಿ ಈ ಸಹಾಯವು ಕೊಡಲ್ಪಡುವುದು. ಅದನ್ನು ಯೋಗ್ಯರೀತಿಯಿಂದ ಬಳಸಿ ಶಾಂತಿ ಶಿಸ್ತು ಗಳನ್ನು ಸಾಧಿಸಿಕೊಳ್ಳುವ ಜಾನ್ಮೆ ಬರ್ಮಿ ಸರಕಾರದ್ದಿರುತ್ತದೆ ಆದರೆ ಈ ಕುರಿತು ಥಾಕಿನ್‌ನೂ ಅವರ ಸರಕಾರವು ತನ್ನ ಮೇಲಿರುವ ನೈತಿಕ ಹೊಣೆಗಾರಿಕೆಯನ್ನು ಸಂಪೂರ್ಣ ನಿರ್ವಹಿಸುವುದೆಂದು ಹಾರೈಸಲ್ಪಡುತ್ತದೆ. ಅಂದರೆ ನಮ್ಮ ಆಸಕ್ತಿಯು ಬರ್ಮದಲ್ಲಿನ ಹಿಂದೀಯರ ಹಿತದ ಕುರಿತಾಗಿದೆ. ಇದನ್ನು ನಮ್ಮಿಂದ ಸಹಾಯ ಪಡೆಯುವ ಅಲ್ಲಿನ ಈಗಿನ ಸರಕಾರವು ಗ್ರಹಿಸಿಕೊಳ್ಳುವುದೆಂದು ನಿರೀಕ್ಷಿಸಬಹುದು.

ಭಾರತವು ತಾನು ಸ್ವತಃ ಕಠಿಣವಾದ ಆರ್ಥಿಕ ಅಡಚಣೆಯಲ್ಲಿ ಸಿಲುಕಿರುವುದನ್ನೂ ಗಣಿಸದೆ ಕೊಡುವ ಈ ಸಹಾಯವನ್ನು ಬರ್ಮಾ ಸರಕಾರವು ಯೋಗ್ಯ ಕೃತಜ್ಞತೆಯಿಂದ ಸ್ವೀಕರಿಸುವುದೆಂದು ವಿಶ್ವಾಸ

ದೇಶ ವಿದೇಶ ವ್ಯಕ್ತ ವೈವಿಧ್ಯ

ಆಯರ್ಲೆಂಡಿನಲ್ಲಿ ನೆಹರುಗಳು ಮತ್ತೊಂದು ಸಾಂಪ್ರದಾಯದ ಮುರಿತ

ಸಾಂಪ್ರದಾಯಗಳನ್ನು ಮುರಿಯುವುದೆಂದರೆ ಪಂಡಿತ್ ನೆಹರುಗಳಿಗೆ ಸಾಮಾನ್ಯ ವಿಷಯವಾಗಿದೆ ಎಂಬ ಈ ಅಭಿಪ್ರಾಯವನ್ನು ಬ್ರಿಟಿಷ್ ವಕ್ತಿಕೋದ್ಯೋಮಿಗಳೇ ಅವರ ಡಬ್ಲಿನ್ ಸಂದರ್ಶನ ಸಮಯದಲ್ಲಿ ನಿರೂಪಿಸಿದರು. ನೆಹರುಗಳನ್ನು ಆಯರ್ಲೆಂಡಿನ ಪ್ರಜಾಪ್ರಭುತ್ವದ ಶಾಸನ ಸಭಾ ಮಂದಿರದಲ್ಲೇ ಸ್ವಾಗತಿಸಲಾಯಿತು. ಈ ಗೌರವವನ್ನು ಆ ದೇಶಸ್ಥರು ಈಚಿಗೆ ಯಾರಿಗೂ ಕೊಟ್ಟಿರಲಿಲ್ಲ. ಹಿಂದೀಯರಿಗಂತೂ ಇದು ವ್ಯಥಮೆ ಬಾರಿಯು ಆಯರ್ಲೆಂಡಿನಲ್ಲಿ ನೆಹರುಗಳಿಗೆ ಸಿಕ್ಕಿದ ಸ್ವಾಗತವು ಭಾರತದ ಗೌರವ ಪ್ರತಿಷ್ಠೆಯನ್ನು ಹೆಚ್ಚಿಸಿತು

ಜಾತಿವಾರು ಸೌಕರ್ಯ ಖಂಡನೆ

ಮಾನ್ಯ ದಿವಾಕರರ ಎಚ್ಚರಿಕೆ

ಜಾತಿ, ವರ್ಣ, ಮತ ಮತ್ತು ವಿಶೇಷ ಕೈನುಗುಣವಾಗಿ ಸಂದರ್ಭ ಸೌಕರ್ಯಗಳನ್ನು ಕಲ್ಪಿಸುವುದು ಉತ್ತಮ ಪ್ರಜಾಪ್ರಭುತ್ವ ಧರ್ಮಕ್ಕೂ ಅದರ ಸುಗಮ ಪ್ರಗತಿಗೂ ಬಾಧಕವಾದುದೆಂಬ ಎಚ್ಚರಿಕೆಯನ್ನು ಕೇಂದ್ರದ ಸುದ್ದಿಖಾತೆಯ ಮಂತ್ರಿ ರಂಗರಾವ್ ದಿವಾಕರರು ಬಳ್ಳಾರಿಯ ತಮ್ಮೊಂದು ಭಾಷಣದಲ್ಲಿ ತಿಳಿಸಿದರು. ಜಾತಿವಾರು ಕೆಲಸ ಹಂಚೋಣದ ವದ್ಧತಿಯನ್ನು ಕಿತ್ತುಹಾಕ ಬೇಕು. ಸರಕಾರಿ ಖಾತೆಗಳಿಗೆ ಜನರನ್ನು ಚುನಾಯಿಸುವಾಗ ಎಲ್ಲರೂ ಸಮಾನ ಮಾನವರೆಂದು ತಿಳಿದು ಯೋಗ್ಯರನ್ನೇ ಚುನಾಯಿಸಬೇಕು. ನಮ್ಮ ವೇದಕಾಲದ ಸಂಸ್ಕೃತಿಯ ಮತ್ತು ಮಹಾತ್ಮಾಜಿಯವರ ಸೇವೆ ತ್ಯಾಗಗಳ ಆದರ್ಶವೆ ಎಲ್ಲಾ ಯೋಗ್ಯತೆಗಳನ್ನು ಅಳೆಯುವ ಮಟ್ಟವಾಗಿರಬೇಕು ಎಂದರು ಸೂಚಿಸಿದರು

ಬರ್ಲಿನ್ ಬಿಕ್ಕಟ್ಟಿನ ಪರಿಹಾರ

ಚತುರಾಷ್ಟ್ರಗಳ ಪರಿಷತ್ತು

ಹತ್ತು ತಿಂಗಳಿಂದ ಅತೀವ ಮನಸ್ತಾಪ ದ್ದಾಗಿ ಶಕ್ತಿ ರಾಷ್ಟ್ರಗಳ ತಲೆ ತಿನ್ನುತಿದ್ದ ಬರ್ಲಿನ್ ನಗರದ ತಡೆಗಟ್ಟನ್ನು ತೆಗೆದು ಹಾಕುವ ಕುರಿತು ಬ್ರಿಟನ್, ಅಮೇರಿಕಾ ಫ್ರಾನ್ಸ್ ಮತ್ತು ರಶ್ಯಗಳಲ್ಲಿ ಗುಸ್ತು ಮಾತುಕತೆಗಳು ನಡೆಯುತ್ತಿವೆಯೆಂದು ತಿಳಿದು ಬರುತ್ತಿದೆ ಮುಂಬರುವ ಒಂದು ತಿಂಗಳೊಳಗೆ ಈ ನಾಲ್ಕು ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳು ಪರಿಷತ್ತು ಸೇರಿ ಬರ್ಲಿನ್ ಬಂಧನವನ್ನು ತಗೆದು ಹಾಕಬಹುದೆಂದು ವೊಶಿಂಗ್ಟನ್ನಿನಲ್ಲಿ ಬಹಳ ಆಶಾದಾಯಕ ವಾತಾವರಣ ಹಬ್ಬಿದೆ ಸದ್ಯದಲ್ಲೆ ಬರ್ಲಿನಿನ ಪೂರ್ವ ನಶ್ಚಿಮ ವಿಭಾಗಗಳ ವಾಹನ ಸಂಬಂಧವನ್ನು ರದ್ದುಗೊಳಿಸಲಾಗುವುದೆಂದು ಉನ್ನತ ಜರ್ಮನ್ ಅಧಿಕಾರಿಗಳು ತಿಳಿಸಿರೆಂದರೆ.

ಆಫ್ರಿಕದಲ್ಲಿ ವರ್ಣ ವ್ಯತ್ಯಾಸದ ಬಿಗಿ

ಪಾಶ್ಚಿಮಾತ್ಯ ಸಂಸ್ಕೃತಿಯ ಮೇಲ್ಮೈಗೆ

ಒಂದು ಕಡೆಯಿಂದ ವಸಾಹತು ರಾಷ್ಟ್ರಗಳ ಬಾಂಧವ್ಯಕ್ಕಾಗಿ ಪ್ರಯತ್ನಗಳಾಗುತ್ತಿರುವಾಗ ಇನ್ನೊಂದು ಕಡೆಯಿಂದ ವರ್ಣ ವ್ಯತ್ಯಾಸವನ್ನು ಪರಾಕಾಷ್ಟತೆಗೇರಿಸಲು ಯತ್ನಗಳಾಗುತ್ತಿವೆ ಆಫ್ರಿಕದ ಪ್ರಧಾನ ಮಾಲನ್ನರು ಆ ಖಂಡವನ್ನು ಪಾಶ್ಚಿಮಾತ್ಯ ಸಂಸ್ಕೃತಿಯ ಪೋಷಣೆ ರಕ್ಷಣೆಗಾಗಿ ಭದ್ರಪಡಿಸಬೇಕೆಂದು ತಮ್ಮ ಲಂಡನ್ ಭಾಷಣವೊಂದರಲ್ಲಿ ಅರಿಕೆ ಮಾಡಿಕೊಂಡರು ಈಗಿನ ಆಫ್ರಿಕದಲ್ಲಿ ಬಿಳಿಯರಿಗೂ ವರ್ಣ ಜನಾಂಗೀಕರಿಗೂ ವಿವಾಹ ಸಂಬಂಧವಾಗದಂತೆ ಶಾಸನವನ್ನು ಮಾಡಲು ಯೋಜನೆಗಳಾಗುತ್ತಿವೆ

ತೆರಿಗೆ ವಿಧಾನದ ಪುನರ್ರಚನೆ

ಕೇಂದ್ರ ಸರಕಾರದ ಪರ್ಯಾಲೋಚನೆ

ಬೊಂಬಾಯಿಯಲ್ಲಿ ಆರ್ಥಿಕ ಮಂತ್ರಿ ಡಾ। ಜಾನ್ ಮಾತಾಯಿ ನೇರು ವ್ಯಾಪಾರಿ ಸಂಸ್ಥೆಯ ವರ್ಷದನೆ ಆದಾಯ ತೆರಿಗೆಯ ವಿಷಯದ ಪುನರ್ರಚನೆಯ ಕುರಿತು ಪರ್ಯಾಲೋಚಿಸಿದರು ರಕ್ಷಣಾ ವ್ಯವಸ್ಥೆ, ಆಹಾರ ಕೊರತೆ ನೀಗಿಸುವಿಕೆ ಇತರ ಪುನರ್ವಸತಿಯ ಸಮಸ್ಯೆಯಿಂದಾಗಿ ಸರಕಾರಕ್ಕೆ ಹೆಚ್ಚಿನ ಖರ್ಚಿನ ಆವಶ್ಯಕತೆ ಮತ್ತು ಒತ್ತಡಗಳು ಬೀಳುವುದರಿಂದ ಯಾವ ರೀತಿಯಲ್ಲೂ ಸರಕಾರದ ಕೈರು ಉತ್ಪನ್ನವನ್ನು ಕಡಿಮೆ ಮಾಡುವ ದಾರಿ ತೋಚುವುದಿಲ್ಲವೆಂದರೂ, ಆದರೂ ಸರಕಾರದವರು ಈ ಕುರಿತು ವರದಿ ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಿಸುವುದಾಗಿಯೂ ತಿಳಿಸಿದರು ಹಣದ ವ್ಯವಹಾರದಲ್ಲಿ ಜನತೆಗೆ ವಿಶ್ವಾಸ ಹುಟ್ಟುವಂತೆ ವ್ಯಾಪಾರ ಮತ್ತು ಔದ್ಯೋಗಿಕ ವರ್ಗದವರು ಪ್ರಯತ್ನಿಸಬೇಕೆಂದು ಡಾ। ಮಾತಾಯಿಯವರು ಅರಿಕೆ ಮಾಡಿಕೊಂಡರು.

ಪ್ರಾದೇಶಿಕ ಲಿಪಿಯಲ್ಲಿ ಹಿಂದಿ

ಕೇಂದ್ರ ವ್ಯವಹಾರಕ್ಕೆ ಮಾತ್ರ

ಪುಟನಾ ಸಮಿತಿಯ ಸದಸ್ಯರಾದ ಸೇಟ್ ಗೋವಿಂದದಾಸ್ ಅವರು ಈಚೆಗೆ ಮದ್ರಾಸಿಗೆ ಬಂದಿದ್ದಾಗ "ಹಿಂದಿಯನ್ನು ಅಂತರಾಷ್ಟ್ರೀಯ ವ್ಯವಹಾರಕ್ಕಾದರೆ ದೇವನಾಗರಿ ಲಿಪಿಯನ್ನೂ, ಪ್ರಾಂತೀಯ ವ್ಯವಹಾರಕ್ಕಾದರೆ ಪ್ರಾದೇಶಿಕ ಭಾಷೆಗಳ ಲಿಪಿಯನ್ನೂ ಉಪಯೋಗಿಸಿದರೆ ತುಂಬಾ ಅನುಕೂಲವಾಗುವುದು" ಎಂದು ಸೂಚಿಸಿದರು.

"ರಾಷ್ಟ್ರೀಯ ಭಾಷೆಯಾಗಿ ಅದನ್ನು ಕೇಂದ್ರ ಆಡಳಿತ ವ್ಯವಹಾರಕ್ಕಾಗಿ ಮಾತ್ರ ಉಪಯೋಗಿಸಬೇಕು ಸರಕಾರಕ್ಕೆ ಸದ್ಯಕ್ಕೆ ಇಂಗ್ಲಿಷನ್ನು ರದ್ದುಮಾಡುವ ಉದ್ದೇಶವಿಲ್ಲ. ದ ಭಾರತದ ಮಿತ್ರ ರಾಷ್ಟ್ರಕ್ಕಾಗಿ ಘಟನಾ ಸಮಿತಿಯಲ್ಲಿ ಹಿಂದಿಯೊಡನೆ ಇಂಗ್ಲಿಷನ್ನೂ ಊರ್ಜಿತವಿಡಲಾಗಿದೆ" ಎಂದವರು ತಿಳಿಸಿದರು

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ 1

ಮೂಲಧನ (ತೆತ್ತದ್ದು) . ರೂ. 10,00,000

ಜೀವವಿಮೆಯ ಫಂಡು . ರೂ. 12,00,000 (ಮಿಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ. 5-0 0ರಂತೆ ರಿವರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನೂ, ಆಡಳಿತೆ ಮಂಡಳಿಯನ್ನೂ ಅಭಿನಂದಿಸುತ್ತೇನೆ. ಅವರ ದೂರದರ್ಶಕತ್ವದ ನಿಪುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವದೆಂದು ಹೇಳುತ್ತೇನೆ

ವಿ. ಎಚ್. ಪೋರಾ, F I A

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಕುಮಾರ್ ಕೂಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

ಇಸ್ರಯೇಲದ ಹೊಸ ರಾಷ್ಟ್ರ ರಚನೆ

ಯುಕ್ತರಾಷ್ಟ್ರ ಸಂಘಕ್ಕೆ ಸೇರಿಸಲಾಯಿತು

ಎರಡು ಸಾವಿರ ವರ್ಷಗಳಿಂದ ಚದರಿದ್ದ ಜನಾಂಗ

ಧೋರಣೆಯು ಇಸ್ರಯೇಲ ರಾಷ್ಟ್ರ ನಿರ್ಮಾಣಕ್ಕೆ ಪೀಠಿಕೆಯಾಯಿತು. ಜಗತ್ತಿನ ಎಲ್ಲಾ ಕಡೆಗಳ ಯಹೂದಿಗಳು ಪಲೆಸ್ತೀನದಕ್ಕ ತೆರಳಿ ಅಲ್ಲಿಯೆ ಮನೆಮಾಡಿ ನೆಲಸತೊಡಗಿದಾಗ ಅರಬಿಯರು ನೋಂದರು, ಶಕ್ತಿರಾಷ್ಟ್ರಗಳಿಗೆ ಗಾಬರಿಯಾಯಿತು. ಮೇಲಿಂದ ಮೇಲೆ ಪಲೇಸ್ತಿನದೊಳಗೆ ಹರಿಯುವ ಯೆಹೂದಿಗಳ ಪ್ರವಾಹವನ್ನು ತಡೆದು ಹಿಡಿಯಲೂ ಪ್ರಯತ್ನಗಳಾದುವು. ಅರಬರು ಅಂತೇಳಲಹಕ್ಕೆ ಕಂಕಣ ಕಟ್ಟಿದರು.

ಹೊಸ ರಾಷ್ಟ್ರ ಸೃಷ್ಟಿ

ಅನೇಕ ನೋಲ್ಸು ಸಂಕಷ್ಟಗಳ ನಂತರ ವಂತೂ ಯಹೂದಿಗಳು ಇಸ್ರಯೇಲ ಎಂಬ ತಮ್ಮ ರಾಷ್ಟ್ರದ ಅಸ್ತಿತ್ವವನ್ನು ಘೋಷಿಸಿ ಪಲೆಸ್ತೀನ ಒಂದು ಭಾಗವನ್ನು ತಮ್ಮದಾಗಿ ಮಾಡಿಕೊಂಡರು. ಜಗತ್ತಿನ ಯಹೂದಿಗಳ ಧನಜನ ಬಲಗಳು ಅವರ ಬೆಂಬಲಕ್ಕಿದ್ದುವು ಹೇರಳ ಸಂಖ್ಯೆಯ ಶಸ್ತಾಸ್ತ್ರಗಳೂ ಅವರ ಸಹಾಯಕ್ಕೆ ಕಳುಹಿಸಲ್ಪಟ್ಟವು ಕೊನೆಗಂತೂ ಅವರ ಪರಿಶ್ರಮವು ಫಲದ ರೂಪನನ್ನು ಹೊಂದತೊಡಗಿತು

ಇದೀಗ ಕೆಲದಿನಗಳ ಹಿಂದೆ ಯಹೂದಿಗಳ ಇಸ್ರಯೇಲ ರಾಷ್ಟ್ರವನ್ನು ಯುಕ್ತ ರಾಷ್ಟ್ರ ಸಂಘದ ಸದಸ್ಯತ್ವಕ್ಕೆ ಸೇರಿಸಲಾಯಿತು ಇದರಿಂದ ಈ ಹೊಸ ರಾಷ್ಟ್ರದ ಅಸ್ತಿವಾರವ್ಲ ಭದ್ರವಾದಂತಾಯಿತು "ಇಸ್ರಯೇಲವ್ಯುಯುಕ್ತರಾಷ್ಟ್ರ ಸಂಘದ ಧ್ಯೇಯ ಧೋರಣೆಗಳನ್ನು ನಿರ್ವಹಿಸಲೂ ಪೂರ್ಣವಾಗಿ ಸಲೂ ಶಕ್ತವಾದ ರಾಷ್ಟ್ರ ಅದು ಶಾಂತಿಪ್ರಿಯವೂ ಆಗಿದೆ" ಎಂದು ಈ ಕುರಿತಾದ ಸಾಮಾನ್ಯ ಸಭೆಯ ರಾಜಕೀಯ ಸಮಿತಿಯು ರರಾವು ಶಿಫಾರಸು ಮಾಡಿರುತ್ತದೆ.

ಐದು ರಾಷ್ಟ್ರದ ಸದಸ್ಯರು ಇಸ್ರಯೇಲವನ್ನು ಯುಕ್ತರಾಷ್ಟ್ರ ಸಂಘಕ್ಕೆ ಸೇರಿಸಬಾರದೆಂದು ವಿರೋಧ ಸೂಚಿಸಿದ್ದವು. ಕೆಲವರು ಅಂದಿನ ಸಭೆಗೆ ಗೈರು ಹಾಜರಿ ನಾಡಿದುವು ಇಸ್ರಯೇಲವು-ಶಾಂತಿಪ್ರಿಯ ರಾಷ್ಟ್ರವೆಂಬ ವಿಷಯದಲ್ಲಿ ಇವರಿಗೆಲ್ಲರಿಗೆ ಶೂಕ ಇದ್ದೆ ಇದೆ ಇಸ್ರಯೇಲ ಮುಖಂಡರ ಹಿಂದಿನ ಧೋರಣೆಗಳೇ ಈ ಸಂದೇಹಕ್ಕೆ ಕಾರಣವಾಗಿವೆ ಎನ್ನಲೂ ಬಹುದು. ಆದರೆ ಇಸ್ರಯೇಲವು ಶೈಶವಾವಸ್ಥೆಯಲ್ಲಿದ್ದರೂ ಅಡೊಂದು ಸುಸಂಘಟಿತವೂ ಆರೋಗ್ಯದಾಯಕವೂ ಆದ ರಾಷ್ಟ್ರವೆನ್ನುವುದರಲ್ಲಿ ಯಾರಿಗೂ ಸಂದೇಹವಿಲ್ಲ. ಹೈಫಾ, ಟೆಲ್ ಎವಿವ್ ಗಳಂತಹ ಮರುಭೂಮಿ ಪ್ರದೇಶಗಳನ್ನು ಯಹೂದಿಗಳು ತಮ್ಮ ಸಹಜ ಜಾಣ್ಮೆಯಿಂದ ಫಲಪುಷ್ಪಭರಿತವಾದ ತೋಟಗಳಂತೆ ಕೃಷಿ ಸಮೃದ್ಧಿಗೊಳಿಸಿದ್ದರು. ಈವೊಂದು ಸಾಹಸವೇ ಅವರ ರಾಷ್ಟ್ರತ್ವಕ್ಕೆ ಪ್ರಬಲ ಹೇತುವಾಗಿದೆ. ಸೈನ್ಯಬಲ ಶಸ್ತಾಸ್ತ್ರ ಬಲದಲ್ಲಿಯೂ ಮಧ್ಯಪೂರ್ವದ ಇಸ್ಲಾಮಿ ರಾಷ್ಟ್ರಮಂಡಳಿಗಳಿಂದ ಅವರನ್ನು ಬಗ್ಗಿಲಾರದಾದುದು ಇನ್ನೊಂದು ಮಹತ್ವದ ಕಾರಣ.

ಶತ್ರುಗಳು ಮಿತ್ರರಾದರು

ಒಟ್ಟಿನಲ್ಲಿ ಇಸ್ರಯೇಲರು ತಮ್ಮ ಸಮರ ಸಾಮರ್ಥ್ಯದಿಂದಲೇ ನೆರೆಕರೆಯ ಮಾತ್ರವಲ್ಲ ಜಗತ್ತಿನ ಮನ್ನಣೆಯನ್ನೇ ಪಡೆದರೆನ್ನಬಹುದು ಈ ನಿರ್ಮಾಣದ ಪ್ರಾರಂಭ ಕಾಲದಲ್ಲಿ ಕೆಲವೊಂದು ಭೀಕರವೂ ಕಠೋರ ಹಿಂಸಾತ್ಮಕವೂ ಆದ ಸಂಗತಿಗಳು ಸಂಭವಿಸಿದೆ. ಶಾಂತಿಸ್ಥಾಪನೆಗಾಗಿ ಹೆಣಗುತ್ತಿದ್ದ ಕೌಂಟ್ ಬರ್ನಾಡೊಟಿಯವರ ಖೂನಿಯು ಒಂದು ನಿದರ್ಶನ. ಆದರೆ ಇಸ್ರಯೇಲ ರಾಷ್ಟ್ರವು ಸ್ಥಾಪಿಸಲ್ಪಟ್ಟು ಆ ಚೈತನ್ಯಶಕ್ತಿ ಯಹೂದಿಗಳು ಮಹಾತ್ಮಾ ಯೇಸು ಕ್ರಿಸ್ತನ ಜನ್ಮಾಂಗದವರು. ಆ ಮಹಾ ಪುರುಷನನ್ನು ಶಿಲುಗೆಬೆ ಹಾಕಿದವರೂ ಅವರೇ. ಜಗತ್ತಿನ ಮಹಾ ಮೇಧಾವಿ ಜನರೂ ಅವರಾಗಿರುವರು ಇಂದೂ ಪ್ರೊ। ಇನ್ಸ್ಟಿನ್ಸ್ಟರೇ ಮೊದಲಾದ ಯಹೂದಿ ವಿಜ್ಞಾನಿಗಳೇ ಜನತ್ರಿನಲ್ಲಿ ಅಗ್ರಗಣ್ಯರೆನಿಸಿರುವರು.

ಆದರೆ ಅಂದು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಈ ಜನರು ತಮ್ಮ ಮುಂದಾಳಾಗಿದ್ದ ಕ್ರಿಸ್ತನನ್ನು ಬಡಿಗಯ ಮಗನೆಂದು ಹೀನೈಸಿ ತಮ್ಮ ಜನ್ಮಾಂಗದ ಸಂಘಟನೆ ಮಾಡಿ ರೋಮಾಯರ ಬಂಧನದಿಂದ ವಿಮುಕ್ತಗೊಳಿಸಲೆಳಿಸಿದ ಆ ವಿಭೂತಿ ಪುರುಷನ ಉಪದೇಶವನ್ನು ತಿರಸ್ಕರಿಸಿದರು. ಅವನನ್ನು ಶಿಲುಬೆಗೆ ಹಾಕಲು ಅವರೇ ಸುಳ್ಳು ಸಾಕ್ಷ್ಯವಿತ್ತರು ರೋಮಾಯರ ಅಧಿಪತಿ ಪಿಲಾತನು "ಈತನಲ್ಲಿ ನಾನು ಯಾವ ತರದ ದೋಷವನ್ನೂ ಕಾಣಲಾರೆ" ಎಂದು ಕೈತೊಳೆದು ಹೇಳಿದಾಗಲೂ ಧರ್ಮಾಂಧರಾದ ಯಹೂದಿ ಸಾಂಪ್ರದಾಯವಾದಿಗಳು "ಅವನ ರಕ್ತವು ನಮ್ಮ ಮತ್ತು ನಮ್ಮ ಪೀಳಿಗೆಯ ತಲೆಯ ಮೇಲಿರಲಿ" ಎಂದು ಶಾಪನನ್ನು ತಾವೆ ತಮ್ಮ ತಲೆಗಳ ಮೇಲ ಹೊತ್ತುಕೊಂಡರು ಕ್ರಿಸ್ತನಾದರೊ "ನೀವು ಕಾರುಬಿಸ್ಸಿದ ಕೂರಿಗಳಂದದಿ ಭೂಮಿಯಲ್ಲ ಚದರಿಕೊಂಡಿರುವಿರಿ" ಎಂದು ನುರುಗಿದನು

ಹೊಸ ಜನ್ಮಾಂಗ

ಹಾಗೇ ಆಯಿತು. ಎರಡು ಸಾವಿರ ವರ್ಷಗಳಿಂದ ಯಹೂದಿಗಳು ತಲೆಯೂರಲು ಬಿಲಗಳಿಲ್ಲದ, ನಿಲ್ಲಲು ನೆಲೆಯಿಲ್ಲದ ಜಂತುಗಳೆಂತಾದರು ಜಗತ್ತಿನ ಎಲ್ಲಾ ದೇಶಗಳನ್ನಾಶ್ರಯಿಸಿ ಅವರು ಆಯಾ ಜನ್ಮಾಂಗದಲ್ಲಿ ಬೆರೆತುಕೊಂಡರು. ಆದರೆ ತಾವು ಹೋದೆಡೆಗಳಲ್ಲಿ ಅವರು ತಮ್ಮ ಅಸಾಧಾರಣವಾದ ವೈಪಹಾರ ಚಾತುರ್ಯದಿಂದ ಆಶ್ರಯ ದೇಶದ ಅಭಿವೃದ್ಧಿಗೆ ಕಾರಣಭೂತರಾಗಿದ್ದು ಮಾನವ ಕ್ರಿಯಾತ್ಮಕ ಕ್ಷೇತ್ರದ ಪ್ರತಿಯೊಂದು ವಿಭಾಗದಲ್ಲೂ ಕೀರ್ತಿಕಲಶವನ್ನು ಸ್ಥಾಪಿಸಿರುವರು ಜಗತ್ತು ಯಹೂದಿಗಳ ಧನಬಲದ ಮೇಲೆ ನಡೆಯುತಿದೆ ಒಂದು ಕಾಲವಿತ್ತು. ಆಗ ಜಗತ್ತಿನ ಅತಿ ಶ್ರೀಮಂತ ಬ್ಯಾಂಕುಗಳು ಅವರದಾಗಿದ್ದುವು ಅದ್ವಿತೀಯ ತಯಾರಿ ಸೌಕರ್ಯದ ಕೈಗಾರಿಕೆ ಕಾರ್ಖಾನೆಗಳೂ, ಶಸ್ತಾಸ್ತ್ರ ಕಾರ್ಖಾನೆಗಳ್ಲೂ ಅವರದಾಗಿದ್ದುವು ನೊದಲನೇ ಜಾಗತ್ರಿಕ ಯುದ್ಧದಲ್ಲಿ ಸೋಲು ಜರ್ಮನಿಯೊಡನೆ ಯಹೂದಿಯರಿಗೂ ಉಟಾಯಿತು ಆಗಲೇ ಅವರಿಗೆ ತಮಗೊಂದು ಗೃಹಪ್ರಾಂತವು ಅವಶ್ಯವೆಂದು ತೋರಿತು ತಮ್ಮ ವ್ಯಾಪಿಸಿ ಸಾಹಿತ್ಯ ಕಲೆ, ಸಂಸ್ಕೃತಿ ಧರ್ಮಗಳನ್ನು ಅಭಿವೃದ್ಧಿ ಪಡಿಸಿ ತಮ್ಮ ಶಕ್ತಿಯನ್ನು ಸಂಘಟಿಸಿ ಬಾಳಬೇಕೆಂಬ ಒಂದು ಸಿಗೂಡ ಹಾರೈಕೆಯು ಜಗತ್ತಿನ ಯಹೂದಿ ಜನಾಂಗಿಕರ ಹೃದಯದಲ್ಲಿ ಅಂಕುರಿಸಿತು. ಆಗ ವಿಶ್ವ ರಾಜ ಕಾರಣವು ಬ್ರಿಟಿಷ್ ರಾಜನೀತಿ ತಂತ್ರಕ್ಕೆ ಒಳಗಾಗಿದ್ದ ಕಾಲ. ಈಕ್ಕೆ ಹರಿಯುತ್ತಿರುವ ಅರಬ ರಾಷ್ಟ್ರೀಯತೆಯನ್ನು ತಡೆಯಲು ಪಲೆಸ್ತೀನದಲ್ಲಿ ಯಹೂದಿಯರಿಗೊಂಡು ಪಿತೃಸ್ಥಾನವನ್ನು ಕಲ್ಪಿಸಿ ಕೊಡುವುದಾಗಿ ಬ್ರಿಟಿಷ್ ಮುತ್ಸದ್ದಿಗಳಿಂದ ವಚನವು ಕೊಡಲ್ಪಟ್ಟಿತು. ಯಹೂದಿಗಳೂ ಅಂದಿನಿಂದ ಪಲೆಸ್ತೀನದಲ್ಲಿ ಸಂಘಟಿತರಾಗತೊಡಗಿದರು. ಬ್ರಿಟಿಷರ ವಿಭಾಗಿಸಿ ಆಳುವ ಯಸ್ಸರ ಮಂತ್ರಿಮಂಡಲವು ಸ್ಥಾಪಿಸಲ್ಪಟ್ಟ ನಂತರ ಇವರು ಸಾವಧಾನದ ಮಧ್ಯವರ್ತಿ ಧೋರಣೆಯನ್ನು ವಹಿಸಿ ವಿಶ್ವಾಸವನ್ನು ಗಳಿಸಿದರು. ಪರಿಣಾಮವಾಗಿ ಆಸುಪಾಸಿನ ಅರಬ ರಾಷ್ಟ್ರಗಳೂ ಇಸ್ರಯೇಲದೊಡನೆ ಸ್ನೇಹದ ಒಪ್ಪಂದವನ್ನು ಮಾಡಿಕೊಳ್ಳುವಂತಾಯಿತು. ಕೌಂಟ್ ಬರ್ನಾಡೊಟಿಯವರ ಉತ್ತರಾಧಿಕಾರಿಗಳಾಗಿದ್ದ ಡಾ। ರಾಲ್ಫ್ ಒಬ್ಬಂಚಿಯವರೂ ಈ ಸಂಬಂಧ ಶುಂಬಾ ಪರಿಶ್ರಮವನ್ನು ನಿರ್ವಹಿಸಿರುವರು.

ಈಗ ಯೆಹೂದಿ ಅರಬರೊಳಗೆ ಮೂರು ಮಹತ್ವದ ವಿಷಯಗಳು ಇತ್ಯರ್ಥವಾಗಲಿವೆ ಅರಬ ಯೆಹೂದಿ ಪ್ರದೇಶಗಳ ಗಡಿಗಳು, ಜರೂಸಲೇಮ್ ನಗರದ ಸ್ಥಾನಮಾನ ಮತ್ತು ನಿರಾಶ್ರಿತರಾದ ಅರಬರು, ಇವಿಷ್ಟು ಪರಿಹರಿಸಲ್ಪಟ್ಟರೆ ಇಸ್ರಯೇಲಿಗಳು ತಮ್ಮ ನೂತನ 'ಗೃಹಪ್ರಾಂತ್ಯ'ಗಳಲ್ಲಿ ನೆಮ್ಮದಿಯಿಂದ ಇರಲು ಯಾವ ಆತಂಕವೂ ಇಲ್ಲದಾಗಿದೆ ಸಂಯುಕ್ತ ಅಮೇರಿಕವು ಅರಬ ಯೆಹೂದಿಗಳ ಕಲಹವನ್ನು ಕೊನೆಗೊಳಿಸುವ ಉದ್ದೇಶದಿಂದ ಲೋಸನ್ ನಗರದಲ್ಲಿ ಇತ್ತಂಡದ ಪ್ರತಿನಿಧಿಗಳ ಒಂದು ಪರಿಷತ್ತನ್ನು ಕರೆದಿರುವರು ಇಸ್ರಯೇಲಿಗಳು ಉದಾರ ಭಾವನೆಯ ದೋರಣೆಯನ್ನು ತಳೆದರೆ ಅನುಕೂಲವೇ ಹೆಚ್ಚಾಗಿ ದೊರೆಯುವುದು. ಅರಬ ರಾಷ್ಟ್ರೀಯತೆಯನ್ನು ಮಾನಿಸುವುದರಿಂದಲೇ ಇಸ್ರಯೇಲರಿಗೆ ಲಾಭವಿದೆಯಲ್ಲದೆ ಅವನ್ನು ಉಚ್ಚಾಟನ ಗೊಳಿಸುವುದರಲ್ಲಿ ಇನ್ನು ಯಾವ ಸೌಧರ್ಯವು ಸಿಗಲಾರದು. ಇತರ ರಾಷ್ಟ್ರಗಳು ಕೂಡ ಹೊಸತಾದ ಇಸ್ರಯೇಲರ ಕುರಿತು ಯಾವ ತರದ ಮನಸ್ತಾಪಗಳನ್ನು ಇರಿಸಿಕೊಳ್ಳದೆ ವಿಶ್ವದ ಬಹುಮಂದಿಗಳಿಂದ ಮಾನ್ಯಸಲ್ಪಟ್ಟದ್ದನ್ನು ತಾವೂ ಗೌರವಿಸಿ ಮೈತ್ರಿಯಿಂದಿರುವುದು ಶ್ರೇಯಸ್ಕರ

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
ಳಿರಿಂದ ೫ ತಿಂಗಳು ,, ,, ೩॥

~~ರೂ. ೧೦೦೦೦ಕ್ಕಿಂತ ಕಡಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦೦ ಗುಣಕದ ರೇವಣಾತಿಗಳ ಮೇಲಿನ ಪಡ್ತಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು~~

ಹೆಡ್ ಆಫೀಸು:—ಬಾವಟೆಗುಡ್ಡೆ, ಮಂಗಳೂರ.

ಇತರ ಶಾಖೆಗಳು:-ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

ಸಿನೇಮಾ ಮಂದಿರಗಳಲ್ಲಿ ದೂಮ್ರ ಪಾನಕ್ಕೆ ನಿಷೇಧ

ಧೂಮ್ರಪಾನಕ್ಕೆ ವ್ಯಾಪಕವಾದ ನಿಷೇಧ ಹಾಕಿದಂತೆ ಈಗ ಪ್ರಾಂತ್ಯದ ಎಲ್ಲಾ ಚಲಚಿತ್ರಮಂದಿರಗಳಲ್ಲಿ ಪ್ರೇಕ್ಷಕರಾಗೂ ದೂಮ್ರ ಪಾನ, ಹೊಗೆ ಬತ್ತಿ ಸೇವನೆ ಮಾಡಬಾರದಾಗಿ ಸುದ್ರಾಸು ಸರಕಾರದವರು ಆಜ್ಞೆ ಹೊರಡಿಸಿರುವರು. ದೂಮ್ರ ಸೇವನೆಯ ವಾತಾವರಣದ ವಾಸನೆಗಳು ಮಕ್ಕಳಿಗೆ ಈ ಕತ್ತಲು ದೃಶ್ಯಮಂದಿರಗಳಲ್ಲೇ ಆಗುತ್ತಿದ್ದುವು. ಅಲ್ಲದೆ ಈಗೀಗ ಕಿಕ್ಕಿರಿಯುವ ಸಿನೇಮ ಮಂದಿರಗಳಲ್ಲಿ ಹೊಗೆಬತ್ತಿಯ ಹೊಗೆಯಿಂದ ಶುದ್ಧ ವಾಯು ಸೇವನೆಗೆ ತುಂಬಾ ಆತಂಕವಾಗುತಿತ್ತು. ಪರಿಣಾಮವಾಗಿ ಜನತೆಯ ಆರೋಗ್ಯಕ್ಕೂ ಇದರಿಂದ ತುಂಬಾ ಕುಂದುಂಟಾಗುತಿತ್ತು. ಅನಾವಶ್ಯಕ ಸಿನೇಮಾ ನೋಡುವಿಕೆಯನ್ನೂ ನಿರುತ್ಸಾಹಗೊಳಿಸಿದಂತಾಯಿತು.

ಸ್ವದೇಶಾಭಿಮಾನಿ

ಕಾರೀಕು 27—5—1949

ವಿಧಾಯಕ ಕಾರ್ಯಕ್ರಮದ ಭವಿಷ್ಯ

ಪಾಣೆಮಂಗಳೂರಿನಲ್ಲಿ ಜಿಲ್ಲಾ ರಾಜಕೀಯ ಪರಿಷತ್ತಿನ ಛತ್ರಿಯಲ್ಲಿ ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತು ಶ್ರೀ ಕಾ. ಅ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ವಿಧಾಯಕ ಕಾರ್ಯಕ್ರಮದ ತಳಹದಿಯೆನ್ನಿಸುವ ಗಾಂಧೀ ವಿಚಾರ ಸರಣಿಯನ್ನು ಪರಿಷತ್ತಿನ ಅಧ್ಯಕ್ಷರು ಬಹಳ ಚೆನ್ನಾಗಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ವಿವರಿಸಿದರು.

ಪರಿಷತ್ತು ಮುಗಿದು ಮಂಗಳೂರಿಗೆ ಬಂದ ಮೇಲೆ ಇಲ್ಲಿಯೂ ವಿಧಾಯಕ ಕಾರ್ಯಕ್ರಮದಲ್ಲಿ ಅಭಿರುಚಿಯುಳ್ಳವರ ಸಭೆಯೊಂದರಲ್ಲಿ ಶ್ರೀ ವೆಂಕಟ್ರಾಮಯ್ಯನವರು ಸರ್ವೋದಯ ತತ್ವವೆಂದು ಕರೆಯ ಬಹುದಾದ ಅದೇ ವಿಚಾರಗಳನ್ನು ಇನ್ನಷ್ಟು ವಿವರಿಸಿದರು.

ವಿಧಾಯಕ ಕಾರ್ಯಕರ್ತರೆಲ್ಲರಿಗೆ ಈ ತಾತ್ಕಿಕ ಬೋಧೆ ಅಗತ್ಯವೆಂಬುದರಿಂದ ಈ ಎರಡು ಉಪನ್ಯಾಸಗಳೂ ಉಪಯುಕ್ತವಿದ್ದ ವೆಂಬುದು ನಿರ್ವಿವಾದ.

ಗಾಂಧೀ ಚಳವಳದ ಆರಂಭ ಕಾಲದಲ್ಲಿ ಸ್ವೀಧವರಿಗೆ ಈ ವಿಚಾರ ಸರಣಿ ಒಳ್ಳೆಯ ಪರಿಚಿತ ವಿಷಯ. ಮುಂದೆ ಮುಂದೆ ಇದರ ಪರಿಚಯವುಳ್ಳವರ ಹಾಗೂ ಅದರಲ್ಲಿ ಶ್ರದ್ಧೆಯುಳ್ಳವರ ಸಂಖ್ಯೆ ಕಡಮೆಯಾಗುತ್ತ ಬಂತೆಂದೂ ವಿಧಾಯಕ ಕಾರ್ಯರಂಗಕ್ಕೆ ಹೊಸ ಕೆಲಸಗಾರರು ಸೇರುವುದು 1942 ರ ಬಳಿಕ ಪೂರ್ಣ ನಿಂತಂತಿದೆಯೆಂದೂ ಶ್ರೀ ವೆಂಕಟ್ರಾಮಯ್ಯನವರು ಹೇಳಿದರು. ವಿಧಾಯಕ ಕಾರ್ಯಕರ್ತರ ಪರಂಪರೆಯನ್ನುಳಿಸಿಕೊಳ್ಳುವುದು ಒಂದು ಸಮಸ್ಯೆಯೇ ಇದೆಯೆಂದೂ ಒಪ್ಪಿಕೊಂಡರು.

ಮಂಗಳೂರಿನ ಭಾಷಣದ ಕೊನೆಯಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ಈಗಿನ ನಮ್ಮ ಸರಕಾರಗಳು ಈ ಗಾಂಧೀ ವಿಚಾರ ಸರಣಿಯಂತೆ ವರ್ತಿಸುತ್ತಿಲ್ಲವೆಂದೂ ಒಪ್ಪಿಕೊಂಡು ಜನತೆಯ ಇಚ್ಛೆ ಈ ವಿಚಾರಸರಣಿಯಂತೆ ಸರಕಾರಗಳು ವರ್ತಿಸಬೇಕೆಂದು ಪ್ರಬಲವಾಗಿ ವ್ಯಕ್ತಗೊಂಡರೆ ಮಾತ್ರ ಸರಕಾರಗಳು ಅಂತೆ ನಡೆಯಬಹುದೆಂದು ಸೂಚಿಸಿದರು.

ಜನತೆಯಲ್ಲಿ ಗಾಂಧೀ ವಿಚಾರ ಸರಣಿಯ ಪರಿಚಯ ಕಡಿಮೆಯಾಗುತ್ತ ಹೋಗುತ್ತಿದೆಯೆಂಬುದು ಸ್ಪಷ್ಟ ವಿಚಾರ. ಇದರಲ್ಲಿ ಶ್ರದ್ಧೆಯುಳ್ಳ ಕೆಲಸಗಾರರ ಸಂಖ್ಯೆ ಕಡಮೆಯಾಗುತ್ತ ಹೋಗುತ್ತಿದೆಯೆಂಬುದೇ ಇದರ ಮುಖ್ಯ ಕಾರಣ. ಇದ್ದ ಕೆಲಸಗಾರರು ಈ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸರ್ವ ಪ್ರಯತ್ನಗಳನ್ನು ಮಾಡಬೇಕಾಗಿದೆ ಎಂಬುದು ಶ್ರೀ ವೆಂಕಟ್ರಾಮಯ್ಯನವರ ಭಾಷಣ ಸಾರಾಂಶ.

ಇದಕ್ಕೆ ಬೇಕಾಗಿರುವ ಕಾರ್ಯಕ್ರಮಗಳೇನು? ಇಂಥ ಪ್ರಯತ್ನಗಳನ್ನು ಹೇಗೆ ಮುಂದರಿಸಬೇಕೆಂಬ ವಿಚಾರವನ್ನು ಚರ್ಚಿಸಿದರೆ ಉಪಯುಕ್ತವಾಗುತ್ತಿತ್ತು.

ಕನ್ನೂರ್‌ಬಾ ನಿಧಿಯವರು ತಮ್ಮ ಕೆಲ ಸಗಾರರಿಗೆ ಶಿಕ್ಷಣ ಕೊಟ್ಟು ಮತ್ತೆ ಬೇರೆ ಬೇರೆ ಕೇಂದ್ರಗಳಲ್ಲಿ ಕಾರ್ಯಕ್ಕೆ ನಿಯೋಜಿಸುವಂತೆ ವಿಧಾಯಕ ಕಾರ್ಯಕರ್ತರಿಗೆ ಶಿಕ್ಷಣ ಕೇಂದ್ರಗಳ ವಿಷಯದಲ್ಲಿ ಉಪಯೋಕ್ತವಾಗಬಹುದೆಂದು ಶ್ರೀ ವೆಂಕಟ್ರಾಮಯ್ಯನವರು ಸೂಚಿಸಿದರು. ಇದ್ದ ಕೆಲಸಗಾರರು ಈಗಿನ ಪರಿಸ್ಥಿತಿಯನ್ನು ಕಂಡು ಧೈರ್ಯ ಗೆಡದೆ ಈ ಕಾರ್ಯಕ್ರಮ ಉಳಿಸಿಕೊಳ್ಳುತ್ತೇವೆಂಬ ನಿಶ್ಚಯಾತ್ಮಕ ಬುದ್ಧಿಯಿಂದ ತಮ್ಮ ಕಾರ್ಯ ಸಾಧಿಸುತ್ತ ಹೋಗುವುದೂ ಅತ್ಯವಶ್ಯವೆಂದೂ ಸ್ಪಷ್ಟಪಡಿಸಿದರು. ಇವೆರಡೂ ಸೂಚನೆಗಳಿಗಿಂತ ಹೆಚ್ಚಿಗೆ ಶ್ರೀ ವೆಂಕಟ್ರಾಮಯ್ಯನವರು ಸೂಚಿಸಲಿಲ್ಲ.

ಶ್ರೀ ವೆಂಕಟ್ರಾಮಯ್ಯನವರ ಇವೆರಡು ಸೂಚನೆಗಳೂ ಅತ್ಯುಪಯುಕ್ತವೆಂಬುದು ನಿಜ. ಆದರೆ ಶಿಕ್ಷಣದ ಏರ್ಪಾಡನ್ನು ಈಗಿನ ಪರಿಸ್ಥಿತಿಯ ಆವಶ್ಯಕತೆಗಳಿಗನುಸಾರವಷ್ಟು ವಿಸ್ತೃತ ಪ್ರಮಾಣದಲ್ಲಿ ಸರಕಾರದ ಮೂಲಕವಲ್ಲದೆ ಏರ್ಪಡಿಸಲು ಸಾಧ್ಯವಾಗುವಂತಿಲ್ಲ. ಜನತೆಯ ಇಚ್ಛೆ ವ್ಯಕ್ತವಾಗದೆ ಸರಕಾರಗಳಾದರೂ ವಿಸ್ತೃತ ಪ್ರಮಾಣದಲ್ಲಿ ಈ ಕಾರ್ಯ ಕೈಕೊಳ್ಳುವಂತಿಲ್ಲ. ಜನತೆಯ ಶಿಕ್ಷಣ ಯಾರು ಮಾಡಬೇಕೆಂಬುದೇ ಮುಖ್ಯ ಪ್ರಶ್ನೆ ಇದೆ. ಇದ್ದ ಕೆಲಸಗಾರರ ಸಂಖ್ಯೆ ಸಾಕಷ್ಟಿಲ್ಲವೆಂದೂ ಸ್ಪಷ್ಟವಿರುತ್ತದೆ.

ಸರಿಯಾಗಿ ವಿಚಾರಿಸಿದರೆ ಇದ್ದ ಕೆಲಸಗಾರರು ಸಂಘಟಿತರಾಗಿ ಕಾರ್ಯ ಸಾಧನೆ ಮಾಡಬೇಕಾದುದೇ ಮುಂದಿನ ನಿಜವಾದ ದಾರಿಯೆಂಬುದು ಸ್ಪಷ್ಟವಾಗುತ್ತದೆ. ವಿಧಾಯಕ ಕಾರ್ಯಕರ್ತರ ಕೇಂದ್ರ ಸಂಸ್ಥೆಯೊಂದನ್ನು ಸ್ಥಾಪಿಸುವ ಕುರಿತು ವಿಚಾರಿಸಿದ್ದಕ್ಕೆ ಶ್ರೀ ವೆಂಕಟ್ರಾಮಯ್ಯನವರು ಬೇಕಿದ್ದರೆ ಮಾಡಿಕೊಳ್ಳಿರಿ, ಆಕ್ಷೇಪವಿಲ್ಲ ಆದರೆ ಅದು ಅಗತ್ಯವೆಂದೂ ಹೇಳುವಂತಿಲ್ಲವೆಂಬ ಬಗೆಯ ಅಭಿವ್ಯಾಯ ಕೊಟ್ಟರು. ಇದು ಸರಿಯಲ್ಲ. ವಿಧಾಯಕ ಕಾರ್ಯಕರ್ತರ ಸಂಘ ಆಯಾ ಕಾರ್ಯಕ್ರಮಗಳ ದೃಷ್ಟಿಯಿಂದ ಅಗತ್ಯವಿಲ್ಲವೆಂಬ ಮಾತಿನಲ್ಲಿ ಸತ್ಯಾಂಶವಿರುತ್ತದೆ. ಇದೇ ಅಭಿಪ್ರಾಯದಿಂದ ಶ್ರೀ ವೆಂಕಟ್ರಾಮಯ್ಯನವರು ಉತ್ತರ ಕೊಟ್ಟಿರಬೇಕು. ಆದರೆ ಈಗಿನ ಪರಿಸ್ಥಿತಿಯಲ್ಲಿ ಎಲ್ಲ ಬಗೆಯ ವಿಧಾಯಕ ಕಾರ್ಯಗಳಲ್ಲಿ ನಿರತರಾದವರು ಒಟ್ಟು ಸೇರಿ ತಮ್ಮ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಎಲ್ಲ ವಿಧಾಯಕ ಕಾರ್ಯಗಳ ತಳಹದಿಯಿರುವ ತತ್ವಗಳ ಪರಿಚಯ ಜನತೆಯಲ್ಲಿ ಉಳಿಸಿ ಇನ್ನಷ್ಟು ಬಲಪಡಿಸಿ ಹೊಸ ಕೆಲಸಗಾರರನ್ನು ಸೇರಿಸಿಕೊಂಡು ತಮ್ಮ ಕಾರ್ಯ ಮುಂದೊತ್ತಲು ಯತ್ನಿಸದೆ ನಿವೃತ್ತಿ ಇಲ್ಲ ವೆಂಬ ಪರಿಸ್ಥಿತಿ ಈಗ ಬಂದಿರುತ್ತದೆ. ಈ ರೀತಿಯ ಸಾಧನೆಯಿಂದಲೇ ಜನತೆಯ ಇಚ್ಛೆ ಈ ದಿಸೆಗೆ ತಿರುಗಿಸಿ ಅದನ್ನು ಪ್ರಬಲವಾಗಿ ವ್ಯಕ್ತಗೊಳ್ಳುವಂತೆ ಮಾಡುವುದು ಸಾಧ್ಯ.

ಈ ರೀತಿ ಏರ್ಪಡಿಸುವ ಆವಶ್ಯಕತೆಯನ್ನು ಮಹಾತ್ಮಾ ಗಾಂಧಿಯವರು ತಮ್ಮ ಕೊನೆಯ ದಿನಗಳಲ್ಲಿ ಕಂಡುಕೊಂಡಿದ್ದರು. ಆದ್ದರಿಂದಲೇ ಅವರು ಕಾಂಗ್ರೆಸ್ ಸಂಸ್ಥೆಯನ್ನೇ ಈ ಕಾರ್ಯ ಸಾಧನೆಯ ಬಗ್ಗೆ ಲೋಕ ಸೇವಾ ಸಂಘವನ್ನಾಗಿ ಮಾರ್ಪಡಿಸಲು ಸೂಚನೆ ಕೊಟ್ಟಿದ್ದರು.

ಲೋಕ ಸೇವಾಸಂಘವು ಗಾಂಧೀ ವಿಚಾರ ಸರಣಿಯನ್ನು ಪ್ರಜಾಜನರಲ್ಲಿ ಪ್ರಚಾರ ಗೊಳಿಸಿ ಆ ತತ್ವಗಳ ತಳಹದಿಯ ಮೇಲೆ ರಚಿತವಾಗಿರುವ ವಿಧಾಯಕ ಕಾರ್ಯರೂಪದಿಂದ ಪ್ರಜಾಜನರ ಸೇವೆ ಮಾಡಿ ತನ್ಮೂಲಕ ಪ್ರಜಾಜನರ ಇಚ್ಛೆ ಸರಿಯಾಗಿ ವ್ಯಕ್ತಪಡಿಸುವಂತಾದರೆ ಸರಕಾರಗಳನ್ನು ಸರಿದಾರಿಗೆ ತರಲು ಕಷ್ಟವಿಲ್ಲವೆಂಬುದು ಗಾಂಧೀಜಿಯವರ ಅಭಿಪ್ರಾಯವಿರಬೇಕು.

ಕಾಂಗ್ರೆಸ್ ಸಂಸ್ಥೆ ರಾಜಕೀಯ ಸಂಗಡವಾಗಿ ಉಳಿಯಲು ನಿರ್ಧಾರ ಮಾಡಿತು. ಗಾಂಧೀ ಸೂಚನೆಯನ್ನು ಸ್ವೀಕರಿಸಲು ಅವರು ಅಸಮರ್ಥರಾದರು.

ಗಾಂಧೀಜಿಯವರ ವಾರ್ಧಾ ಶಿಷ್ಯರಾದರೂ ಗಾಂಧೀಜಿಯವರ ಈ ಸೂಚನೆಯನ್ನು ಸ್ವತಂತ್ರವಾಗಿ ಮುಂದೊತ್ತುವ ಸಾಹಸ ಮಾಡಲು ಸಮರ್ಥರಾಗಲಿಲ್ಲ. ಅವರು ಲೋಕಸೇವಾ ಸಂಘವನ್ನು ಪ್ರತ್ಯೇಕವಾಗಿ ಸ್ಥಾಪಿಸಬಹುದಿತ್ತು. ಅದಕ್ಕೆ ಬದಲು ಸರ್ವೋದಯ ಸಮಾಜವೊಂದನ್ನು ರಚಿಸಿಕೊಂಡರು. ಗಾಂಧೀ ವಿಚಾರ ಸರಣಿಯ ಪರಿಚಯ ಜನತೆಯ ಕಣ್ಮುಂದೆ ಎತ್ತಿ ಹಿಡಿಯುವುದೇ ಇವರು ತಮ್ಮ ಧ್ಯೇಯವಾಗಿ ಇಟ್ಟುಕೊಂಡಿದ್ದಾರೆ. ಇವರ ಕಾರ್ಯ ಉಪಯುಕ್ತವೇ ಇದೆ ಆದರೆ ಈಗಿನ ಪರಿಸ್ಥಿತಿಯಲ್ಲಿ ಅದು ಸಾಲದಾಗಿದೆ.

ಲೋಕ ಸೇವಾ ಸಂಘ ಪ್ರತ್ಯಕ್ಷ ರಾಜಕೀಯ ರಂಗದಲ್ಲಿ ಭಾಗವಹಿಸತಕ್ಕ ಸಂಸ್ಥೆ ಅಲ್ಲದಿದ್ದರೂ ಜನತಾ ಶಿಕ್ಷಣದ ಮೂಲಕ ರಾಜಕೀಯ ಪರಿಣಾಮವುಳ್ಳ ಸಂಸ್ಥೆಯಾಗ ತಕ್ಕದ್ದೆಂಬುದು ಸ್ಪಷ್ಟವಿರುತ್ತದೆ. ಇದು ಸಂಘಟಿತ ರೀತಿಯಲ್ಲಿ ಜನಾಂಗದಾದ್ಯಂತ ಕಾರ್ಯ ಸಾಧಿಸುವ ಸಂಸ್ಥೆಯಿರಬೇಕಾಗಿದೆ. ಕೇವಲ ತಾತ್ಕಿಕ ಸಿದ್ಧಾಂತ ಪ್ರಚಾರ ಹಾಗೂ ವೈಯಕ್ತಿಕ ಕಾರ್ಯ ಸಾಧನೆ ಮಾತ್ರ ಈಗಿನ ಪರಿಸ್ಥಿತಿಯನ್ನು ಸುಧಾರಿಸಲು ಸಾಕೆನ್ನಿಸುವುದಿಲ್ಲ.

ವಿಧಾಯಕ ಕಾರ್ಯಕ್ರಮದ ಭವಿಷ್ಯದ ದೃಷ್ಟಿಯಿಂದ ಇದರ ಕಾರ್ಯಕರ್ತರೆಲ್ಲರೂ ಈ ವಿಚಾರಗಳ ಮನನ ಮಾಡಬೇಕು.

ಹವಾಮಾನ

ಜೂನ್ ಮೊದಲನೇ ವಾರಕ್ಕೆ ಹಿಡಿಯುವ ಸಾಂಪ್ರದಾಯದ ಮಳೆ ನೇ ಮಧ್ಯದಿಂದಲೇ ಆರಂಭವಾಗಿದ್ದು ಜಿಲ್ಲೆಯಲ್ಲಿ ಮಳೆಗಾಲ ಕಾಲೂರಿದೆಂದು ಸ್ಪಷ್ಟಗೊಳಿಸುತ್ತದೆ. 10—15 ಇಂಚಿಗೂ ಮಿಕ್ಕಿದ ಮಳೆ ಇದು ತನಕ ಬಂದಿದ್ದು ನಗರಗಳಲ್ಲಿನ ಬಾವಿಗಳಿಗೆ ನೀರು ಏಗಿರುತ್ತದೆ. ಬೆಳೆ ಕೆಲಸವೂ ಆರಂಭವಾಗಿದೆ.

ಟೀಕೆ-ಟಿಪ್ಪಣಿಗಳು

ಉಡುಪಿಗೊಂದು ಹೊಸ ಕಾಲೇಜು

ಉಡುಪಿಯಲ್ಲಿ ಒಂದು ಕಾಲೇಜನ್ನು ತೆರೆಯಬೇಕೆಂದು ಈಗ ಸ್ವಲ್ಪ ಸಮಯದಿಂದ ಬಹಳ ಪ್ರಯತ್ನ ನಡೆಯುತ್ತಿತ್ತಷ್ಟೆ. ಈ ಬಾರಿ ಉಡುಪಿಗೆ ಸೆಕೆಂಡ್ ಗ್ರೇಡು ಕಾಲೇಜು ಮಂಜೂರಾಗಿರುತ್ತದೆ. ಬರುವ ಶಾಲಾ ವರ್ಷದ ಆರಂಭದಿಂದಲೇ ಇದನ್ನು ತೆರೆಯುವರಾಗಿ ತಿಳಿದುಬರುತ್ತದೆ. ಮಾನ್ಯ ಶ್ರೀ ಎ. ಬಿ. ಶೆಟ್ಟರು ವಿದ್ಯಾಪಾತೆಯಮಂತ್ರಿ ಪದವಿಗೆ ಕೈಕೊಟ್ಟೊಡನೆಯೇ ಉಡುಪಿಗೆ ಕಾಲೇಜು ಸಿಕ್ಕುತ್ತದೆಂದು ನಾವು ಈ ಮೊದಲೇ ಹೇಳಿದಂತೆ ಈ ಕಾರ್ಯ ಸಾಧನೆಯಾದುದು ತೃಪ್ತಿಕರವಿರುತ್ತದೆ. ಈ ಸೆಕೆಂಡ್ ಗ್ರೇಡ್ ಕಾಲೇಜು ಸರಿಯಾಗಿ ನಡೆದು ಬೇಗನೆ ಸ್ಥಳೀಯ ಶ್ರೇಣಿಯ ಕಾಲೇಜಾಗಿ ಮಾರ್ಪಡುವಂತಾಗಲೆಂದೇ ಹಾರೈಸುತ್ತೇವೆ. ಜಿಲ್ಲೆಗಾಗಿ ಹಲವು ಉಪಯುಕ್ತ ಕಾರ್ಯಗಳನ್ನು ಸಾಧಿಸಿತ್ತಿರುವ ಶ್ರೀ ಎ. ಬಿ. ಶೆಟ್ಟರಿಗೆ ಈ ಸಂದರ್ಭದಲ್ಲಿ ಜಿಲ್ಲೆಯ ಕೃತಜ್ಞತೆಯನ್ನೂ ವ್ಯಕ್ತಗೊಳಿಸಬೇಕಾಗಿದೆ

ಮಂಗಳೂರಿಗೆ ನಳ್ಳಿ ನೀರು

ಮಂಗಳೂರು ನಗರಕ್ಕೆ ನಳ್ಳಿ ನೀರಿನ ವ್ಯವಸ್ಥೆ ಮಂಜೂರಾಗಿರುತ್ತದೆಂಬುದು ಇನ್ನಷ್ಟು ಸಂತೋಷದ ವಿಚಾರ. ಈ ಯೋಜನೆಗಾಗಿ ಬಹಳ ಸಮಯದಿಂದ ಪ್ರಯತ್ನಗಳು ನಡೆಯುತ್ತಿದ್ದರೂ ಅವು ಫಲಕಾರಿಯಾಗಲಿಲ್ಲ. ಈಗ ಶ್ರೀ ಎ. ಬಿ. ಶೆಟ್ಟರ ಯತ್ನದಿಂದಾಗಿಯೇ ಈ ಕಾರ್ಯವೂ ಯಶಸ್ವಿಯಾಗಿದೆಯೆಂಬುದು ನಿಜವಾಗಿಯೂ ಅಭಿನಂದನೀಯ ವಿಚಾರವೆಂದರೆ ಸಾಕು.

ಮದ್ರಾಸು ಮಂತ್ರಿಗಳ ಮೇಲಿನ ಆರೋಪಗಳು

ಮದ್ರಾಸಿನ ಕೆಲವು ಮಂತ್ರಿಗಳ ಮೇಲೆ ಲಂಚಖೋರತನ ಇತ್ಯಾದಿ ಕೆಲವು ಆರೋಪಗಳು ಹೊರಿಸಲ್ಪಟ್ಟಿದ್ದವು. ಇವುಗಳ ಕುರಿತು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವರು ಮದ್ರಾಸನ್ನು ಸಂದರ್ಶಿಸಿ ವಿಚಾರ ನಡೆಸಲಿರುವರೆಂದು ಸ್ಪಷ್ಟವಾಗಿರುತ್ತದೆ. ಇಂಥ ಆರೋಪಗಳ ಕುರಿತು ತಕ್ಕ ವಿಚಾರಣೆ ನಡೆಸಿ ಅವಶ್ಯವುಳ್ಳ ಕಾರ್ಯ ಕೈಕೊಳ್ಳುವುದು ಅತ್ಯಗತ್ಯವೆಂಬುದಿಂದಲೂ ಕಾಂಗ್ರೆಸ್ ಸಂಸ್ಥೆಯ ಈ ನಿರ್ಧಾರ ಸ್ವಾಗತಿಕರಿಸತಕ್ಕದ್ದಿರುತ್ತದೆ.

ಲಂಡನ್ ನಿರ್ಣಯಕ್ಕೆ ಎ. ಐ. ಸಿ. ಸಿ. ಒಪ್ಪಿಗೆ

ಇದೇ ತಾ 21 ಮತ್ತು 22ರಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯು ಭಾರತವು ಕಾಮನ್‌ವೆಲ್ತಿನ ಸದಸ್ಯತನ ಇಟ್ಟುಕೊಳ್ಳಬೇಕೆಂಬ ಲಂಡನ್ ನಿರ್ಣಯಕ್ಕೆ ತನ್ನ ಒಪ್ಪಿಗೆಯನ್ನು ಕೊಟ್ಟಿರುತ್ತದೆ.

ಜಗತ್ತಿನ ಶಾಂತಿರಕ್ಷಣೆಗೆ ಈ ನಿರ್ಣಯ ಸಹಕಾರಿಯೆಂದೇ ಕಮಿಟಿಯು ಅಭಿಪ್ರಾಯ ಪಟ್ಟಿತು.

ಇದೇ ತಾರೀಕು 22 ನೆಯ ಭಾನುವಾರ ಪಾಣೆಮಂಗಳೂರಿನಲ್ಲಿ ದಕ್ಷಿಣ ಕನ್ನಡ ರಾಜಕೀಯ ಪರಿಷತ್ತು, ಜಿಲ್ಲಾ ರಾಜಕೀಯ ಸಂತ್ರಸ್ತರ ಪರಿಷತ್ತು, ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತು ಮತ್ತು ಜಿಲ್ಲಾ ಕೃಷಿಕರ ಪರಿಷತ್ತು ಹೀಗೆ ನಾಲ್ಕು ಪರಿಷತ್ತುಗಳು ಯಶಸ್ವಿಯಾಗಿ ನಡೆದವು.

ಧ್ವಜವಂದನೆ

ಈ ಪರಿಷತ್ತುಗಳ ಆರಂಭದ ಕಾರ್ಯಕ್ರಮವಾಗಿ ಪರಿಷತ್ತಿಗಾಗಿ ರಚಿಸಲ್ಪಟ್ಟ "ಶ್ರೀನಿವಾಸ ನಗರ"ದಲ್ಲಿ ತಾ. 22ನೇ ಬೆಳಿಗ್ಗೆ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಸ್ವಾಗತಾಧ್ಯಕ್ಷ ಶ್ರೀ ಮಾಧವ ಪಡಿಯಾರರು ಈ ಕಾರ್ಯ ನೆರವೇರಿಸುವಂತೆ ಮಂಗಳೂರು ನಗರಸಭಾಧ್ಯಕ್ಷ ಶ್ರೀ ಎಲ್. ಪಿ. ಪ್ಯಾಸ್ ಎಮ್. ಎಲ್. ಎ. ಇವರನ್ನು ಕೇಳಿಕೊಂಡರು.

ಧ್ವಜಾರೋಹಣ ಮಾಡಿ ಶ್ರೀ ಎಲ್. ಪಿ. ಪ್ಯಾಸರು ಈ ಧ್ವಜದ ಗೌರವವನ್ನು ಕಾಪಾಡಲು ಸರ್ವರೂ ಮಹಾತ್ಮಾ ಗಾಂಧಿಯವರ ಉಪದೇಶಗಳಂತೆ ವರ್ತಿಸಬೇಕೆಂದರು.

ಸರ್ವೋದಯ ಪ್ರದರ್ಶನ

ಪರಿಷತ್ತಿನ ಸಂದರ್ಭದಲ್ಲಿ ನ್ಯಾಸ್ಥೆಗೊಳಿಸಿದ ಪ್ರದರ್ಶನಕ್ಕೆ ಸರ್ವೋದಯ ಪ್ರದರ್ಶನವೆಂಬ ಹೆಸರಿಟ್ಟಿದ್ದರು. ಇದರ ಉದ್ಘಾಟನೆ ಶ್ರೀ ಎಸ್. ಆರ್. ಕೈವಾರ್, ಜಿಲ್ಲಾ ಕಲೆಕ್ಟರ್, ಇವರಿಂದ ಮಾಡಲ್ಪಟ್ಟಿತು.

ಈ ಕಾರ್ಯ ಜರಗಿಸಬೇಕೆಂದು ಕೇಳಿಕೊಳ್ಳುತ್ತ ಶ್ರೀ ಎಚ್. ನಾರಾಯಣರಾಯರು ಪ್ರದರ್ಶನದ ವಿವಿಧ ವಿಚಾರಗಳನ್ನು ವಿವರಿಸಿದರು. ಹತ್ತಿ ಬೀಜ ವಿಂಗಡಿಸುವುದರಿಂದ ಮಗ್ಗ ನೇಯ್ದು ಬಟ್ಟೆ ತಯಾರಿತನಕದ ಎಲ್ಲ ಕಾರ್ಯಗಳನ್ನು ತೋರಿಸುವ ಏರ್ಪಾಡಿತ್ತು. ಕಾರ್ಕಳ ತಾಲೂಕಿನ ಬೋರ್ಕಟ್ಟೆಯಲ್ಲಿ ನಡೆಯುವ ಕಸ್ತೂರ್ಬಾ ಕೇಂದ್ರದವರ ಶಿಕ್ಷಣ ಪ್ರದರ್ಶನವಿತ್ತು. ಮೂಡಬಿದರೆಯಲ್ಲಿ ಕೇಂದ್ರ ಸರಕಾರದವರಿಂದ ನಡೆಸಲ್ಪಡುವ ಪನೆಬೆಲ್ಲ ತಯಾರಿ ಶಿಕ್ಷಣ ಶಾಲೆಯವರ ಒಂದು ವಿಭಾಗವೂ ಇತ್ತು. ದಕ್ಷಿಣ ಕನ್ನಡ ಗ್ರಾಮ ಕೈಗಾರಿಕ ಸಂಘದವರ ಗೇರುಹಣ್ಣಿನ ಮುರಬ್ಬಾ ಜಹಳಿ ಮುಂತಿಯ ಲಕ್ಷ್ಯವನ್ನು ಸೆಳೆಯಿತು. ಪ್ರದರ್ಶನವನ್ನು ತೆರೆಯುತ್ತ ಶ್ರೀ ಕೈವಾರರು ಹೆಚ್ಚಿನ ಆಹಾರ ಮತ್ತು ಬಟ್ಟೆಗಳನ್ನು ಉತ್ಪತ್ತಿ ಮಾಡುವುದಕ್ಕಾಗಿ ಎಲ್ಲರೂ ದುಡಿಯಬೇಕೆಂದು ಹೇಳಿದರು.

ರಾಜಕೀಯ ಪರಿಷತ್ತು

ಜಿಲ್ಲಾ ರಾಜಕೀಯ ಪರಿಷತ್ತು ಹುಬ್ಬಳ್ಳಿಯ ಶ್ರೀಟಿ. ಆರ್. ನೆಸ್ವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ನೆಸ್ವಿಯವರು ಬೊಂಬಾಯಿ ಶಾಸನ ಸಭೆಯ ಸದಸ್ಯರು. ಈ ಮೊದಲು ಅಲ್ಲಿಯ ಸರಕಾರದ ಉಪ ಮಂತ್ರಿಯಾಗಿದ್ದವರು. ಹುಬ್ಬಳ್ಳಿಯ ನವಯುಗವೆಂಬ ದೈನಿಕ ಪತ್ರಿಕೆಯ ಸಂಪಾದಕರು.

ವಂದೇ ಮಾತರಮ್ ಹಾಡಿನೊಂದಿಗೆ ಪರಿಷತ್ತು ಆರಂಭವಾಯಿತು. ಕಸ್ತೂರ್ಬಾ ಕೇಂದ್ರದವರು ಕನ್ನಡದ ಬಾವುಟವೆಂದು ಗೀತೆ ಹಾಡಿದರು. ಸ್ವಾಗತ ಗೀತೆಯೂ ಇತ್ತು.

ಸ್ವಾಗತಾಧ್ಯಕ್ಷ ಶ್ರೀ ಮಾಧವ ಪಡಿಯಾರರು ತಮ್ಮ ಸ್ವಾಗತ ಭಾಷಣದಲ್ಲಿ ಕಳೆದ ಪರಿಷತ್ತು ಸೇರಿ ಹತ್ತು ವರ್ಷಗಳಾದವೆಂದು ತಿಳಿಸಿ ಪರಿಸ್ಥಿತಿಯಲ್ಲಿ ಆದ ಅಂತರಗಳನ್ನು ಹೇಳಿದರು. ಪಾಣೆಮಂಗಳೂರು ಸರ್ಕಲಿನಲ್ಲಿ ಸಾಧಿತವಾದ ಕಾರ್ಯದ ವರದಿಯನ್ನು ಕೊಟ್ಟರು.

ಶ್ರೀ ನೆಸ್ವಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ಮೊದಲಿನ ಪರಿಷತ್ತುಗಳಿಗೂ ಈಗಿನ ಪರಿಷತ್ತುಗಳಿಗೂ ಇರಬೇಕಾದ ವ್ಯತ್ಯಾಸ ವಿವರಿಸಿ ಈಗ ರಾಷ್ಟ್ರ ನಿರ್ಮಾಣದ ಕಾರ್ಯದತ್ತ ಲಕ್ಷ್ಯ ಕೊಡುವುದರ ಅವಶ್ಯಕತೆ ಹೇಳಿದರು.

ಸಾಮ್ಯವಾದಿಗಳೇ ಮೊದಲಾದವರ ವಿರೋಧ ಮುರಿಯಲು ಅವರಲ್ಲಿಯ ಉತ್ತಮ ಕೆಲಸಗಳನ್ನು ತಾವೇ ಸಾಧಿಸುವುದು ದಾರಿಯೆಂದರು.

ಕರ್ನಾಟಕ ಏಕೀಕರಣದ ಅವಶ್ಯಕತೆ ವಿವರಿಸಿದರು.

ಅಧ್ಯಕ್ಷ ಭಾಷಣದ ಬಳಿಕ ಮುಂದರಿದ ಪರಿಷತ್ತಿನ ಅಧಿವೇಶನ ಮಾರನೆ ದಿನ ಬೆಳಿಗ್ಗೆ ಸೇರಿ ಹಲವು ನಿರ್ಣಯಗಳನ್ನು ಮಂಜೂರು ಮಾಡಿತು.

ಶ್ರೀ ಪಂಡಿತ ನೆಹರು ಮತ್ತು ವಲ್ಲಭಾಯಿಯವರ ಕೆಲಸವನ್ನು ಪ್ರಶಂಸಿಸಲಾಯಿತು. ಕರ್ನಾಟಕ ಏಕೀಕರಣದ ಕುರಿತು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಇತ್ತೀಚೆಗೆ ಮಾಡಿದ ನಿರ್ಣಯವನ್ನು ಸಮರ್ಥಿಸಲಾಯಿತು. ಒಕ್ಕಲುತನ ಸುಧಾರಣೆ ಮುಸೂದೆ ಬೇಗನೇ ತರಬೇಕೆಂದೂ ತನ್ಮಧ್ಯೆ ಒಕ್ಕಲೆಬ್ಬಿಸದಂತೆ ತಾತ್ಕಾಲಿಕ ಕಾನೂನು ಕೂಡಲೆ ತರಬೇಕೆಂದೂ ಸೂಚಿಸಲಾಯಿತು. ಮಧ್ಯ ನಿರೋಧಕಾರ್ಯ ಸುಧಾರಣೆಗಳನ್ನು ವಿಮರ್ಶಿಸಲಾಯಿತು. ಆಹಾರ ಸಂಗ್ರಹದ ಕುರಿತು ಸುಬ್ರಹ್ಮಣ್ಯ ಆಹಾರ ಪರಿಷತ್ತಿನಲ್ಲಾದ ನಿರ್ಣಯದಂತೆಯೇ ಒಂದು ನಿರ್ಣಯವಾಯಿತು. ಹಿಂದೂ ಶಾಸನ ಸುಧಾರಣಾ ಮುಸೂದೆ ಸಮರ್ಥವೇ ಮೊದಲಾದ ಇನ್ನು ಕೆಲವು ನಿರ್ಣಯಗಳು ಮಂಜೂರಾಗಿ ಸ್ವಾಗತಾಧ್ಯಕ್ಷರ ವರವಾಗಿ ಶ್ರೀ ನಾರಾಯಣರಾಯರ ಧನ್ಯವಾದ ಸಮರ್ಪಣೆಯೊಡನೆ ಪರಿಷತ್ತು ಮುಕ್ತಾಯಗೊಂಡಿತು.

ರಾಜಕೀಯ ಸಂತ್ರಸ್ತರ ಪರಿಷತ್ತು

ಜಿಲ್ಲಾ ರಾಜಕೀಯ ಸಂತ್ರಸ್ತರ ಪರಿಷತ್ತು ಡಾಕ್ಟರ್ ಯು. ಪಿ. ಮಲ್ಯ ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಡಾ. ಮಲ್ಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ರಾಜಕೀಯ ಸಂತ್ರಸ್ತರು ತಾವು ಸಾಧಿಸಿದ ಸ್ವರಾಜ್ಯ ಜನರಿಗೆ ನಿಜವಾಗಿ ಉಪಯುಕ್ತವಾಗುವಂತೆ ಮಾಡಲು ದುಡಿಯುವ ಅವಶ್ಯಕತೆ ಒತ್ತಿ ಹೇಳಿದರು. ರಾಜಕೀಯ ಸಂತ್ರಸ್ತರ ಕಷ್ಟ ನಿವಾರಣೆಗಾಗಿ ಸರಕಾರದವರು ಭೂದಾನ ಮಾಡಲು ಕೈಕೊಂಡಿರುವ ಯೋಜನೆಯಲ್ಲಿ ದೋಷವಿಲ್ಲವೆಂದರು.

ಪಾಣೆಮಂಗಳೂರು ಪರಿಷತ್ತುಗಳು

ಶ್ರೀ ಕೆ. ಕೆ. ಶೆಟ್ಟರು ಪರಿಷತ್ತಿನ ಉದ್ದೇಶಗಳನ್ನು ವಿವರಿಸಿದರು. ಭೂದಾನ ಯೋಜನೆಯಂತೆ ಕಲೆಕ್ಟರರಿಗೆ ಸಲಹೆ ಕೊಡುವ ಕಮಿಟಿಯ ಸದಸ್ಯರಾದ ಶ್ರೀ ಎಚ್. ನಾರಾಯಣರಾಯರು ಇದುವರೆಗೆ ಈ ಜಿಲ್ಲೆಯಲ್ಲಿ 13 ಮಂದಿಗೆ ಭೂಮಿಕೊಟ್ಟಿದೆಯೆಂದು ತಿಳಿಸಿದರು.

ಈ ಯೋಜನೆಯಂತೆ ಭೂಮಿ ಕೊಡುವ ಕಾರ್ಯ ವಿಳಂಬವಿಲ್ಲದೆ ನಡೆಯುವಂತೆ ಅವಶ್ಯವುಳ್ಳ ತಿದ್ದುಪಡಿ ಮಾಡಬೇಕೆಂತಲೂ ಇದನ್ನು ಜಾರಿಗೆ ತರಲು ರೆವಿನ್ಯು ಡಿವಿಜನಲ್ ಆಫೀಸರ ಗ್ರೇಡಿನ ಒಬ್ಬರನ್ನು ನೇಮಿಸಬೇಕೆಂದೂ ನಿರ್ಣಯಗಳಾದವು.

ವಿಧಾಯಕ ಕಾರ್ಯಕರ್ತರ ಪರಿಷತ್ತು

ವಿಧಾಯಕ ಕಾರ್ಯಕರ್ತರ ಪರಿಷತ್ತಿಗೆ ಶ್ರೀ ಕಾ. ಆ. ವೆಂಕಟರಾಮಯ್ಯನವರು ಅಧ್ಯಕ್ಷರಾಗಿ ಬಂದಿದ್ದರು. ಇವರು ನುರಿತ ಖಾದಿ ಕೆಲಸಗಾರರು. ಕರ್ನಾಟಕ ಎ. ವಿ. ಎಸ್. ಎ. ಕಾರ್ಯದರ್ಶಿ ಇದ್ದವರು. ಈಗ ಬೊಂಬಾಯಿ ಸರಕಾರಕ್ಕೆ ಖಾದಿ ಮತ್ತು ಗ್ರಾಮೋದ್ಯೋಗಗಳ ಕುರಿತು ಸಲಹೆ ಕೊಡುವವರಾಗಿದ್ದಾರೆ.

ಇವರ ಅಧ್ಯಕ್ಷ ಭಾಷಣ ವಿಚಾರ ಪರಿಪ್ಲುತವಿತ್ತು. ಆಹಾರ ವಿಚಾರವೆತ್ತಿ ಇನ್ನೆರಡು ವರ್ಷದಲ್ಲಿ ಹೊರಗಿನಿಂದ ಆಹಾರ ಧಾನ್ಯ ಪಂಡಿತ ತರಿಸುವುದಿಲ್ಲವೆಂದು ಪಂಡಿತ ನೆಹರು ಹೇಳಿದ ನಿರ್ಧಾರದ ಕಡೆಗೆ ಲಕ್ಷ್ಯ ಸೆಳೆದು ಹೆಚ್ಚಿನ ಆಹಾರ ಬೆಳೆಸುವುದು ಎಲ್ಲ ಕ್ಕೂ ಮುಖ್ಯ ಕಾರ್ಯವೆಂದರು.

ಆಹಾರಕ್ಕಾಗಿ ಉಪಯೋಗಿಸುವ ಎಣ್ಣೆ ಗಾಣಿಗರ ಎಣ್ಣೆಯೇ ಇರಬೇಕೆಂದು ಮಿಲ್ಲು ಎಣ್ಣೆ ಸಾಬೂನು, ಸೆಂಟು ಇತ್ಯಾದಿಗಳಿಗೆ ಮಾತ್ರ ಉಪಯೋಗಿಸುವಂತೆ ಇದಕ್ಕೆ ಬಣ್ಣ ಕೊಡುವ ಏರ್ಪಾಡು ಬೇಕೆಂದೂ ಹೇಳಿದರು.

ಮಿಲ್ಲುಗಳಲ್ಲಿ ತಯಾರಾಗುವ ಬೆಣ್ಣೆ ಭಾರತದ ಸುತ್ತಲಿನ ದೇಶಗಳಿಗೆ ರಫ್ತು ಮಾಡಿದರೆ ಅವಶ್ಯಕ ಮ್ಯಾಲು ತರಿಸಲು ಹಣ ಸಿಕ್ಕುವುದೆಂದೂ ಇಲ್ಲಿಯ ಬಟ್ಟೆಯ ಅವಶ್ಯಕತೆ ಖಾದಿ ಉತ್ಪತ್ತಿಯಿಂದ ಪೂರೈಸಬೇಕೆಂದೂ ಹೇಳಿದರು.

ಮಿಲ್ಲುಗಳ ಮೇಲೆ ತೆರಿಗೆ ಹಾಕಿ ಖಾದಿ ನಿಧಿ ಸಂಗ್ರಹಿಸಿ ಖಾದಿ ಕ್ರಯ ಇಳಿಸುವ ಸೂಚನೆ ವಿವರಿಸಿದರು.

ದೊಡ್ಡ ನೀರಾವರಿ ಯೋಜನೆಗಳಿಂದ ಮಲೇರಿಯಾ ಭೀತಿ ಜನಹಾನಿಯಾಗುವ ಸಂಭವವೇ ಹೆಚ್ಚೆಂದರು. ಮಳೆ ಬಾರದೆ ಕೊಂದರೆಯಾದಾಗ ನೀರು ಒದಗಿಸುವಷ್ಟರ ಮಟ್ಟಿಗೆ ಮಾತ್ರ ಈ ಯೋಜನೆಗಳನ್ನು ಕೈಕೊಳ್ಳಬೇಕೆಂದರು. ಚಿಕ್ಕ ನೀರಾವರಿ ಯೋಜನೆಗಳೇ ಹೆಚ್ಚು ಉಪಯುಕ್ತವೆಂದರು.

ಗ್ರಾಮ ಸುಧಾರಣೆ ಸರಿಯಾಗಿ ನಡೆಯಬೇಕಾದರೆ ಏಳು ಲಕ್ಷ ಹಳ್ಳಿಗಳ ಸಂಖ್ಯೆ 80,000ಕ್ಕೆ ಇಳಿಸಲಹುದೆಂದೂ 4000ಕ್ಕೆ ಕಡಮೆಯಾಗದ ಜನಸಂಖ್ಯೆ ಗ್ರಾಮಗಳಿಗೂ ಒಂದು ಲಕ್ಷಕ್ಕೆ ಮಿಕ್ಕಿದ ಜನಸಂಖ್ಯೆ ಪಟ್ಟಣಗಳಿಗೂ ವಿಂಗಡಿಸಿ ಇಟ್ಟು ಈ ಬಗ್ಗೆ ರಾಷ್ಟ್ರೀಯ ಯೋಜನೆ ಮಾಡಬೇಕೆಂದೂ ಸೂಚಿಸಿದರು.

ಅಧ್ಯಕ್ಷ ಭಾಷಣದ ಬಳಿಕ ಪ್ರಶ್ನೋತ್ತರಗಳು ನಡೆದವು. ಸ್ಥಳೀಯ ಕೆಲಸಗಾರರ ಅಡಚಣೆ ನಿವಾರಣೆಗೆ ಅಧ್ಯಕ್ಷರು ದಾರಿ ಹೇಳಿ ಪರಿಷತ್ತು ಮುಗಿಯಿತು.

ಕೃಷಿಕರ ಪರಿಷತ್ತು

ಜಿಲ್ಲಾ ಕೃಷಿಕರ ಪರಿಷತ್ತು ಶ್ರೀ ಎಮ್. ಉಮೇಶರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಕೆ. ಕೆ. ಶೆಟ್ಟರು ಇದುವರೆಗೆ ಸಾಧಿಸಿದ ಕೃಷಿಕ ಸಂಘಟನೆಯ ವರದಿ ಕೊಟ್ಟರು.

ಅಧ್ಯಕ್ಷರು ಒಕ್ಕಲುತನ ಸುಧಾರಣೆಯ ಬಗ್ಗೆ ಕಾನೂನುಗಳ ಅವಶ್ಯಕತೆ ವಿವರಿಸಿ ಕೃಷಿಕರ ಸ್ಥಿತಿ ಸುಧಾರಿಸಬೇಕಾದರೆ ಅವರ ಸಂಘಟನೆ ಅಗತ್ಯವೆಂದರು.

ಶ್ರೀ ಉಮೇಶರಾಯರು, ಶ್ರೀ ಕೆ. ಕೆ. ಶೆಟ್ಟಿ ಮೊದಲಾದವರು ಕೂಡಲೆ ಜಿಲ್ಲಾ ಕೃಷಿಕ ಸಂಘವೊಂದನ್ನು ಸ್ಥಾಪಿಸಲು ಪ್ರಯತ್ನಿಸಿದರು.

ಸ್ವಾಗತ ಕಸಿ ಬಾರ್ಡುಗಳು

ಪರಿಷತ್ತಿಗಾಗಿ ಸ್ವಾಗತ ಕಮಿಟಿಯವರು ಸುಂದರವಾದ ಬೋರ್ಡುಗಳನ್ನು ನಾಡಿದ್ದರು. ಮೆಲಿನ [illegible] ದರಿಯಾದ ಬಾಲ್ ಇಂಗ್ಲಿಷ್ ಅಕ್ಷರಗಳು ಯಾರಿಗೂ ಬೇಗನೆ ಅರ್ಥವಾಗುವಂತಿರಲಿಲ್ಲ. ಪರಿಷತ್ತಿನ ಸಂದರ್ಭದಲ್ಲಿ ಆಡಿದ ಶ್ರೀ ಚೂರಿಮಾ ಮಕ್ಕಳಿಗೆ "ಒದ್ದಿಕೆಗಾಗಿ ಸಾವು" ಎಂಬ ಪ್ರಹಸನವೂ ನಡುವೆ ತೋರಿಸಿದ ಸ್ವಪ್ನಗಳೂ ಉತ್ತಮವಿದ್ದುವು.

ಮಂತ್ರಿಗಳ ಮೇಲಿನ ಆಪಾದನೆ

ವಿಚಾರಣೆಗಾಗಿ ಕೊಂಗ್ರೆಸ್ ನಿರ್ದೇಶ

ಮದ್ರಾಸ್ ಮಂತ್ರಿ ಮಂಡಳ ರಚನೆಯ ಸಂಬಂಧ ನಡೆದ ಮನಸ್ತಾಪದ ವಾದ ವಿವಾದದಲ್ಲಿ ಮಾಜಿ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂ ಅವರು "ಈಗಿನ ಏಳು ಜನ ಮಂತ್ರಿಗಳ ಮೇಲೆ ವಿವಿಧ ರೀತಿಯ ಆಪಾದನೆಗಳು ಇನ್ನೂ ಇವೆ, ಅವುಗಳ ಇತ್ಯರ್ಥವಾಗಿಲ್ಲವೆಂದು ಗಂಭೀರವಾಗಿ ಆರೋಪಿಸಿ ಈಗಿನ [illegible] ಶ್ರೀ ಕುಮಾರ ಸ್ವಾಮಿ ರಾಜಿನಾಮೆ ಮತ್ತು ಮನವಿಯನ್ನು ಕಳುಹಿಸಿದ್ದಾರೆ. ಆ ಪತ್ರವೊಂದು ವಿಳಂಬವಾಯಿತು. ಹಿಂಗಾಗಿ ತಲುಪಿ ಸಲ್ಪಟ್ಟಿದೆ. ಆಗ ಅಧ್ಯಕ್ಷ ಪಟ್ಟಾಭಿಯವರು ಸ್ವತಃ ಕಂತಿ ವಿಚಾರಣೆ ನಡೆಸಲಾಗುವುದು ಎಂದು ಪ್ರಕಟಿಸಿರುವರು. ಆರೋಪಕ್ಕೆ ಪಾತ್ರರಾದ ವ್ಯಕ್ತಿಗಳಿಗೆ ಅವಕಾಶ ಕೊಡಬೇಕೆಂಬ ದೃಷ್ಟಿಯಿಂದ ತಾವು ಸ್ವತಃ ಸಂಘ ಮಾಡಬೇಕಾಯಿತು" ಎಂದು [illegible] ಸ್ಪಷ್ಟಪಡಿಸಿರುವರು. ಪ್ರತಿಪಾದಿಸಿರುವ ಪ್ರಕಾರವಾಗಿ "ಇವರಿಗೆ ಬೇಕಾಬಿಟ್ಟಿಯಾಗಿ ಬಿಡುಗಡೆಯಾಗಲಿ, ತರೋ ಪಗಳನ್ನು ಸುಲಭವಾಗಿ ಜನರ ಸಭೆಯ ಸದಸ್ಯರ ಸ್ಥಾನವನ್ನು ರದ್ದುಪಡಿಸುವಂತೆ ಮಾಡಲೂ ಸಿದ್ಧರಿರಬೇಕಾದುದು ಅವಶ್ಯವೆಂದು ತಿಳಿಸಿದ್ದಾರೆ.

ಮುನ್ಸಿಪಲ್ ಉಪ ಚುನಾವಣೆ

ವೆಲ್ಲು ವಾರ್ಡಿನ ಮುನಿ. ಕೌನ್ಸಿಲರರಾಗಿದ್ದ ಶ್ರೀ ಕೊರಗಪ್ಪ ರೈ, ಅವರ ಖಾಲಿಯಾದ ಸ್ಥಾನಕ್ಕೆ ದ. ಕ. ಜಿಲ್ಲಾ ಕಾಂ. ಕಾರ್ಯದರ್ಶಿ ಶ್ರೀ. ಕೆ. ಕೆ. ಸ್ಟೆಫರೊ ಶ್ರೀ ಅಲೆಮಾನ್ ಶ್ರೀನಿವಾಸರಾಯರೂ ಈಮೇದುವಾರರಾಗಿ ನಿಂತು ಸ್ಪರ್ಧಿಸಿದ್ದು ಅದರಲ್ಲಿ ಶ್ರೀಮಾನ್ ರಾಯರೇ ಬಹುಮತದಿಂದ ಆರಿಸಿಬಂದಿರುವರೆಂದು ವ್ಯಕ್ತವಾಗಿದೆ.

ಸೈಂಟ್ ಎಲೋಸಿಯಸ್ ಕೊಲೇಜ್, ವಿಸ್ತರಿತ ಕಟ್ಟಡದ ಉದ್ಘಾಟನೆ

ಸುಮಾರು ಆರು ಲಕ್ಷ ರೂಪಾಯಿಗಳ ವೆಚ್ಚ ತಗಲಿದೆ ಎಂದೆನ್ನಲಾದ ಸ್ಥಳೀಯ ಎಲೋಸಿಯಸ್ ಕೊಲೇಜಿನ ವಿಜ್ಞಾನ ಶಿಕ್ಷಣ ಕರಗೆತಿಗಳನ್ನೊಳಗೊಂಡ ವಿಸ್ತರಿತ ಹೊಸ ಕಟ್ಟಡದ ಉದ್ಘಾಟನೋತ್ಸವವು ಕಳೆದ ತಾ. ೧೯ರಂದು ಸಂಜೆ ಮಂಗಳೂರು ಲಾರ್ಡ್ ಬಿಶಪರಾದ ವಿ. ಆರ್. ಫೆರ್ನಾಂಡೀಸ್‌ರರ ಹಸ್ತದಿಂದಾಯಿತು. ಆದೇ ಸಂದರ್ಭದಲ್ಲಿ ರೆಕ್ಟರರಾಗಿದ್ದು ಈಗ ಬಿಟ್ಟು ಹೋಗಲಿರುವ ರೆ|| ಫಾ|| ಜೆ. ಎ. ಬಿ. ಕೊಯ್ಲೋರವರದೊಂದು ಭಾವಚಿತ್ರವನ್ನು ಎಲೋಸಿಯಸ್ ಸಂಘದ ಅಕ್ಷರಾದ ಜೆ. ಸಿ. ರೇಗೊರವರು ಒಪ್ಪಿಸಲು ಲಾರ್ಡ್ ಬಿಷಪರು ಅದರ ಅನಾವರಣ ಮಾಡಿದರು.

ಬಳಿಕ ರೆಕ್ಟರರಾದ ರೆ|| ಫಾ|| ಜೆ. ಎ. ಬಿ. ಕೊಯ್ಲೋರವರು ಈ ಕಟ್ಟಡದ ವೆಚ್ಚದ ಕುರಿತಾದ ವಿಸ್ತೃತ ವರದಿಯನ್ನು ಸಭೆಯ ಮುಂದಿಟ್ಟರು. ಕಟ್ಟಡಕ್ಕೆ ಸರಕಾರದಿಂದ ಸುಮಾರು ೭೫೦೦೦ ರೂ. ಗ್ರಾಂಟು ಸಿಕ್ಕಿರುತ್ತದೆ.

ಅನಂತರ ನಗರ ಪ್ರಮುಖರ ಭಾಷಣಗಳಾದುವು. ಶ್ರೀಗಳಾದ ಎಲ್. ಸಿ. ಡಾಸ್, ಬಿ. ವೈಕುಂಠ ಬಾಳಿಗಾ ಮೊದಲಾದವರು ಇಂತಹ ಕಾಲೇಜು ಕಟ್ಟಡದ ಅವಶ್ಯಕತೆಯ ಕುರಿತು ಹೇಳಿದರು. ಕಟ್ಟಡದ ಕದ ತೆರೆಯುವ ಸಮಾರಂಭ ಜರಗಿಸುವ ಸಂದರ್ಭದಲ್ಲಿ ಅಧ್ಯಕ್ಷ ಲಾರ್ಡ್ ಬಿಷಪರು ತಮ್ಮ ಭಾಷಣದಲ್ಲಿ ಶಾಸನ ಸಭಾ ಸದಸ್ಯರು ಧಾರ್ಮಿಕ ವಿಚಾರದಲ್ಲಿ ಕೈಹಾಕುವುದು ಒಳ್ಳೆತಲ್ಲವೆಂದೂ, ಕಾರಣ ಧರ್ಮಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲವೆಂದೂ ಸಾರಿದರು. ಕಾಲೇಜು ವಿಸ್ತರಣ ಸಮಿತಿಯ ಕಾರ್ಯದರ್ಶಿ ಶ್ರೀ ಯು. ಕೃಷ್ಣಪ್ಪನವರು ವಂದನೆಯನ್ನರ್ಪಿಸಿದರೂ ಆ ದಿನ ಬೆಳಿಗ್ಗೆ ಲಾರ್ಡ್ ಬಿಶಪರು ವಿಶೇಷ ವ್ಯಾರ್ಥನೆ ಕೂಟವೊಂದರಲ್ಲಿ ಕಟ್ಟಡವನ್ನು ಹೆರಸಿದ್ದರು. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಲಾಯಿತು.

ನಗರ ಸಭೆ

ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಈಚೆಗೆ ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಂಗಳೂರು ನಗರ ರಸ್ತೆಗಳಿಗೆ ತಾರುಹಾಕುವ ಖರ್ಚಿನ ಅರ್ಧವನ್ನು ಕೊಡಲು ನಿರಾಕರಿಸಿ ರೂ. ೨೫೯,೪೪೦ರಲ್ಲಿ ರೂ. ೨೧,೪೦೦ರನ್ನು ಮಾತ್ರಕೊಡ ಬಹುದೆಂಬ ಸರಕಾರದ ಸೂಚನೆಯನ್ನು ಪರಿಶೀಲಿಸಿ ಸರಕಾರವು ಸೇಕಡಾ ೫೦ರಷ್ಟು ಕೊಡಲೇಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಧಾರವಾಯಿತು. ಮತ್ತು ತಾರು ಹಾಕುವ ಕ್ರಮವನ್ನೂ ನಿಷ್ಕರ್ಷಿಸಲಾಯಿತು. ಕೌನ್ಸಿಲರರಾದ ಶ್ರೀ ಎಫ್. ಸಿ. ಎಸ್. ಅಲ್ಬುಕರ್ಕರ ರಾಜೀನಾಮೆಯನ್ನು ಸ್ವೀಕರಿಸಿ ಬಿಡ್ಡಿ ವಾರ್ಡಿನ ಉಪ ಚುನಾವಣೆ ನಡೆಯಿಸಲು ಕಮಿಶನರರಿಗೆ ಅಧಿಕಾರ ನೀಡಲಾಯಿತು.

ಹರಿಜನ ಲೀಗಿನ ಸಭೆ

ದ. ಕ. ಹರಿಜನ ಲೀಗಿನ ಸಭೆಯೊಂದು ಈಚೆಗೆ ಶ್ರೀ ಕೆ. ಈಶ್ವರನವರ ಅಧ್ಯಕ್ಷತೆಯಲ್ಲಿ ಜರಗಿದಾಗ ತವಸಂಸ್ಮಾರಕ್ಕಾಗಿ ಈ ವರೆಗೆ ವೆಚ್ಚವಾದ ರೂ. ೪೦೦-೦-೦, ನುಂಜೂರಾಯಿತು. ಅಲ್ಲದೆ ಲೀಗಿನ ಕಡೆಯಿಂದ ಒಂದು ಸಹಕಾರ ಸಂಘವನ್ನು ತೆರೆಯುವ ಯೋಜನೆಯು ಚರ್ಚಿಸಲ್ಪಟ್ಟು ತಕ್ಕ ಕಾರ್ಯ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಖಂಡನಾ ಸಭೆ

ಮಲಯಾ ಸರಕಾರವು ದಕ್ಷಿಣ ಭಾರತೀಯರಾದ ಶ್ರೀ ಗಣಪತಿಯವರನ್ನು ಗಲ್ಲಿಗೇರಿಸಿದುದನ್ನು ಖಂಡಿಸುವುದಕ್ಕಾಗಿ ಇಲ್ಲಿಯ ಸೋಶಲಿಸ್ಟ್ ಪಕ್ಷದ ಆಶ್ರಯದಲ್ಲಿ ಈಚೆಗೆ ಒಂದು ಸಾರ್ವಜನಿಕ ಸಭೆ ಶ್ರೀ ವಿಠಲ್‌ದಾಸ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನಿನಲ್ಲಿ ಜರಗಿತು. ಮಲಯ ಸರಕಾರವನ್ನು ಖಂಡಿಸಿದಲ್ಲದೆ ಭಾರತ ಸರಕಾರದವರು ಕಾಮನ್‌ವೆಲ್ತಿನೊಳಗಿರಲು ಒಪ್ಪಿದುದನ್ನು ಪ್ರತಿಭಟಿಸುವ ಠರಾವುಗಳೂ ಮೇಲ್ಕಂಡ ಸಭೆಯಲ್ಲಾದುವು.

ಬಿಲ್ಲವರ ಎಸೋಸಿಯೇಶನ್, ವಿದ್ಯಾರ್ಥಿವೇತನ

ಈ ಎಸೋಸಿಯೇಶನಿನಿಂದ ವಿದ್ಯಾರ್ಥಿವೇತನವನ್ನು ಪಡೆಯಲಿಚ್ಛಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಅರ್ಜಿ ಪತ್ರವನ್ನು ಜುಲ್ಯಾ ತಿಂಗಳ ತಾರೀಕು ಒಂದರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅರ್ಜಿಪತ್ರವನ್ನು ಪಡಕೊಳ್ಳಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ. ವಿದ್ಯಾರ್ಥಿವೇತನ ಪಡೆಯುತ್ತಿರುವ, ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶ ದೊಡನೆ ಮುಂದುವರಿಸುವ ಬಗ್ಗೆ ಅರ್ಜಿಯನ್ನು ಕೊಡತಕ್ಕದ್ದು. ಪ್ರಕೃತ ಹೈಸ್ಕೂಲು ವಿದ್ಯಾಭ್ಯಾಸದ ವರೆಗೆ ಮಾತ್ರ ವಿದ್ಯಾರ್ಥಿವೇತನವನ್ನು ಕೊಡಲಾಗುವುದು. ಗೌರವ, ಜನರಲ್ ಕಾರ್ಯದರ್ಶಿ, ಬಿಲ್ಲವರ ಎಸೋಸಿಯೇಶನ್, ೧೬ ರಘುನಾಥ ದಾದಾಜಿ ರಸ್ತೆ, ಕೋಟೆ, ಮುಂಬಯಿ.

ಕಾರ್ಕಳ

ಕಳೆದ ತಾ. ೧೫ರಂದು ಜರಗಿದ ಇಲ್ಲಿಯ ಸಾರ್ವಜನಿಕರ ಸಭೆಯೊಂದರಲ್ಲಿ ಸ್ಥಳೀಯ ಮಾರಿಗುಡಿಯಲ್ಲಿ ಈ ವರ್ಷದಿಂದ ಪ್ರಾಣಿಬಲಿಯನ್ನು ರದ್ದುಗೊಳಿಸಬೇಕೆಂದು ನಿರ್ಧರಿಸಲಾಯಿತು. ಸದ್ರಿ ಗುಡಿಯ ಮೊಕ್ತೇಸರರನ್ನು ಇದಕ್ಕೆ ಒಡಂಬಡಿಸಲಾಯಿತು. ಪರಿಣಾಮವಾಗಿ ತಾ. ೨೪ರಂದು ಜರಗಿದ ಮಾರಿಗುಡಿ ಪೂಜೆ ಸಮಯ ಯಾವ ಪ್ರಾಣಿ ಬಲಿಗಳೂ ಆಗಲಿಲ್ಲವೆಂದು ತಿಳಿದು ಬರುತ್ತದೆ.

ಪುಣ್ಯಹ್ಯಣ್ಯ

ಶ್ರೀ ವಿಶ್ವಜ್ಞತೀರ್ಥ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ತಾ. ೧೧ರಂದು ಇಲ್ಲಿ ಜರಗಿದ ಅ. ಕ. ಧರ್ಮ ಸಮ್ಮೇಳನದಲ್ಲಿ ಪುಡ್ರಾಸು ಸರಕಾರದ ಹಿಂದೂ ಧರ್ಮ ಸಂಸ್ಥೆಗಳ ಮುಸೂದೆಯನ್ನು ಖಂಡಿಸಲಾಯಿತು.

ಉಜ್ರೆ–ಸಿದ್ಧವನ ಗುರುಕುಲ

ಉಜ್ರೆಯ ಸಿದ್ಧವನ ಗುರುಕುಲದ ಒಂಬತ್ತನೇ ಪಾರ್ಷಿಕೋತ್ಸವವು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿದಾಗ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರು ಸಿದ್ಧವನದ ಕಾರ್ಯಗಳಿಗೆ ಒಗ್ಗೆ ಆಹ್ವಾನಿತರಿಗೆ ಪರಿಚಯ ಮಾಡಿಕೊಟ್ಟರು.

ಅಧ್ಯಾಪಿಕೆಯರಾಗುವವರಿಗೆ ಸೌಲಭ್ಯ

"ಎಸ್. ಎಸ್. ಎಲ್. ಸಿ. ಕಲಿತ ನಂತರ ತಾವು ಟ್ರೈನಿಂಗ್ ಶಾಲೆಗೆ ಹೋಗಿ ತರಬೇತಿ ಹೊಂದುವೆವು" ಎಂದು ವಿದ್ಯಾರ್ಥಿಗಳು ಬರೆದುಕೊಟ್ಟು ಅವರ ಹೆತ್ತವರು ಜವಾಬ್ದಾರಿಯಾಗಿ ಸಹಿ ಹಾಕಿದರೆ ನಾಲ್ಕನೇ, ಐದನೆ, ಆರನೇ ಫಾರ್ಮುಗಳಲ್ಲಿ ಅವರಿಗೆ ಪೂರ್ಣ ಸಂಬಳ ಮಾಫಿಯಾಗುವುದಲ್ಲದೆ ಅವರ ಪುಸ್ತಕಾದಿಗಳಿಗಾಗಿ ಸ್ವಲ್ಪ ಹಣವನ್ನು ಸರಕಾರವು ಕೊಡುವುದು. ಈ ಸೌಲಭ್ಯವು ಇಲ್ಲಿಯ ಬಿಸೆಂಟ್ ಶಾಲೆಯಲ್ಲಿ ಈ ವರ್ಷ 4ನೇ ಫಾರ್ಮಿನಲ್ಲಿ ದೊರೆಯುತ್ತದೆಂದು ತಿಳಿಯುತ್ತೇವೆ.



ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ಸ್ಥಾಪಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳಬೀನೆಯನ್ನು ಹಗಿಸುತ್ತದೆ. ಚರ್ಮ ಸ್ವಚ್ಛಪಡಿಸಿ ಗುಣಪಡಿಸುತ್ತದೆ.

ಕಡಿತ, ಘಾತ, ಕುರುಗಳಿಗೆ

* ಕುಟಿಕೂರಾ ಮುಲಾಮು

CUTICURA OINTMENT

ಶಮನಿಸಿ, ರಕ್ಷಿಸಿ, ಪರಿಹರಿಸಲ್ಪಡುವವು.

ಅತೀ ಹೆಚ್ಚಿನ ರಕ್ಷಣೆಗಾಗಿ ಸುಟ್ಟ ಘಾಯವನ್ನು ಜಾಂಬಕು ತಾಗಿಸಿದ ಒಟ್ಟೆ ಚೂರಿನಿಂದ ಮುಚ್ಚಿರಿ. ಜಾಂಬಕಿನೊಳಗಿನ ಶುದ್ಧೀಕೃತ ಔಷಧ ಎಣ್ಣೆಗಳು ಘಾಯವನ್ನು ತಂಪಾಗಿರಿಸಿ, ಊದುವಿಕೆಯನ್ನು ಇಳಿಸಿ ವಿಷಹಾರಿ ರಕ್ಷಣೆಯನ್ನು ಕೊಡುವುದು, ಚರ್ಮ ಒಡೆದಿದ್ದರೆ ಜ್ಞಾಂಬಕು ಅದನ್ನು ಶೀಘ್ರ ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ.



Zam-Buk

ನಿಷ್ಪಖಾತಿಯ ವನಸ್ಪತಿ ಮುಲಾಮು.

ಖಂಡಿತ ಪ್ರಾಣಿಕೊಬ್ಬು ರಹಿತವಾದುದು.

The Canara Mutual Assurance Company, Ltd., Udipi.

ನೋಟೀಸು

ಮೆರವಣಿಗೆ ಗುರು ಶಾಂತಪ್ಪ ಚೆನ್ನ ವೀರಪ್ಪ (ದಿವಂಗತ ಗುರುಶಾಂತಪ್ಪನವರ ಮಗ) ಲ್ಯಾಂಡ್ ಲಾರ್ಡ್ ಮತ್ತು ಜನರಲ್ ಮರ್ಚಂಟ್, ನ್ಯೂಮಂಕಿ ಪೋಸ್ಟು, ಶಿವಮೊಗ್ಗಾ ಜಿಲ್ಲೆ, ಮೈಸೂರು ಸ್ಟೇಟ್, ಇವರು ಮೆಲ್ಲಾಣಿಸಿದ ಕಂಪೆನಿಯಲ್ಲಿ ಇಳಿಸಿದ ದೇವ ವಿಮಾ ಪಾಲಿಸಿ ನಂ. 16785 ಕಾರ್ಕಳದಲ್ಲಿ ಕಳೆದು ಹೋದ ಬಗ್ಗೆ ನೋಟೀಸು ಕೊಡಲಾಗಿದ್ದು, ಈ ತಾರೀಕಿನಿಂದ ಒಂದು ತಿಂಗಳೊಳಗಾಗಿ ನಮ್ಮ ಕಡೆಗೆ ಕಕಸಾರು ಬಾರದಿದ್ದಲ್ಲಿ ಡುಪ್ಲಿಕೇಟು ಪಾಲಿಸಿಯನ್ನು ಕೊಡಲಾಗುವುದು.

ಉಡುಪಿ, 19 May 1949. } T. R. A. PAI, Managing Director.

ಅಣುಶಕ್ತಿಯು ಗಡಿಯಾರ ರಚನೆ

ಜಗತ್ತು ವೇಗ ಕುಂದುತ್ತಿದೆ

ನ್ಯೂಯೋರ್ಕಿನಿಂದ ವರದಿಗಳಲ್ಲಿ ವಿಶ್ವಾಸವಿಡುವುದಾದರೆ ನಮ್ಮ ವಿಶ್ವವು ಸರಿದಾರಿ ತಪ್ಪಿತೆಂದು ಭಾಸವಾಗುತ್ತದೆ. ತನ್ನ ಅಚ್ಚು ನಲ್ಲಿ ದಿನಕ್ಕೊಂದು ಸುತ್ತು ತಿರುಗುವ ಭೂಮಿಯು ತನ್ನ ವೇಗದಲ್ಲಿ ಮಂದತ್ವವನ್ನು ತಾಳಿದ ಪರಿಣಾಮವಾಗಿ ಸೂರ್ಯೋದಯದಿಂದ ಸೂರ್ಯಸ್ತದ ತನಕ ದಿನದ ಅವಧಿಯು ಕ್ರಮೇಣ ದೀರ್ಘವಾಗುತ್ತಿದೆಯಂತೆ ವರ್ಷಕ್ಕೊಂದು ಇಲ್ಲವೆ ದಿನಕ್ಕೊಂದು ಸೆಕುಂಡಿನಷ್ಟು ವೇಳೆಯನ್ನು ಕಳೆದುಕೊಳ್ಳುವುದರಲ್ಲಿ ರಾಮಯ್ಯ, ಕೋಮಯ್ಯ ಇಲ್ಲವೆ ರಹೀಮಯ್ಯನಿಗೆ ಯಾವ ಕಳವಳವುಂಟಾಗಲಾರದು ಆದರೆ ಸೂಕ್ಷ್ಮ ಮನೋಭಾವನೆಯವರಾದ ವಿಜ್ಞಾನಿಗಳಿಗೆ ತುಂಬಾ ಕಳಕಳಿಯುಂಟಾಗಿದೆ ಕಾರಣ ಇನ್ನು ಮುಂದೆ ಈ ಜಗತ್ತನ್ನು ಮೂಲ ನಿಯಮ ಸೂಚಿಯಾಗಿ ಭರವಸೆಯಿಡಲಾಗುವುದಿಲ್ಲವೆಂದು ಅವರಿಗೆ ಖಚಿತವಾಗಿದೆ ಹೀಗಾಗಿ ಅವರಿಗೆ ತಮ್ಮಡಿಯ ನೆಲವೇ ಜಾರಿದಂತಾಗಿದ್ದು ಅವರು ವಿತ್ತಾನ ದ ಸಂದೇಹಾಸ್ಪದ ಹೊಂದದಲ್ಲಿ ಬಿದ್ದಂತವರಾಗಿದ್ದಾರೆ

ಕೆಲದಿನಗಳ ಹಿಂದೆ ಅಮೇರಿಕದ ಆರು ಮಂದಿ ತಜ್ಞ ವಿಜ್ಞಾನಿಗಳು ಪೂರ್ತಿಗ್ವಿಸ್ಲಿನಲ್ಲಿ ಒಟ್ಟು ಸೇರಿ ಮೂರು ತಾಸುಗಳ ತನಕ ಜಗತ್ತಿನ ಕಾಲಸೂಚಿಗಳ ಅವ್ಯವಸ್ಥೆಯ ಕುರಿತು ಪರಸ್ಪರ ಅನುಭವವನ್ನು ವಿನಿಮಯ ಮಾಡಿದರು ಈಗಿನ ಕಾಲದಲ್ಲಿ ಭೂಮಿಯ ವೇಗದಲ್ಲಿ ಹೆಚ್ಚು ಕಡಿಮೆಯಾಗುತ್ತಿರುವುದರಿಂದ ಸರಿಯಾದ ಸಮಯವನ್ನು ತಿಳಿಕೊಳ್ಳಲು ಅದಿಷ್ಟು ಕಷ್ಟವಾಗುತ್ತಿದೆ ಎಂಬ ಸಂಗತಿಯನ್ನು ಅವರು ವರ್ಯಾಲೋಚಿಸಿದರು ಈ ಸಂದರ್ಭದಲ್ಲಿ ಅವರು ಅಣುಶಕ್ತಿಯ ಗಡಿಯಾರಗಳ, ಇತರ ಗೃಹಗಳ ಆಧಾರದ ಸೂಚಿ ಸೂಚಿಗಳ ಮತ್ತು ರೇಡಿಯೊ ಕಿರಣ ಸೃಷ್ಟಿತ ಕಾಲಸೂಚಕ ಉಪಕರಣಗಳ ಕುರಿತೂ ಅವರು ಅಮೆರಿಕದ ಸಮಯ ಸೂಚಕರ ಸಂಸ್ಥೆದ ಡಾ। ಹೆರೋಲ್ಡ್‌ಲಾಯನ್ಸ್ ಅವರು ಅಣುಶಕ್ತಿಯಿಂದ ಒಂದಷ್ಟೂ ಹೆಚ್ಚು ಕಡಿಮೆಯಾಗದ ಗಡಿಯಾರವನ್ನು ರಚಿಸಬಹುದೆಂದು ಈಗ ಸಾರಿದ್ದಾರೆ ಅವರ ಕಲ್ಪನೆಯ ಗಡಿಯಾರವು ಅದು ಕೂಡ ದೋಷವಿಲ್ಲದೆ ಇರಲಾರದು ಎಂದರೆ ಈ ಅಣುಗಡಿಯಾರವೂ ಮೂರು ಶತವಾನಗಳಿಗೆ ಒಂದು ಸೆಕುಂಡಿನಷ್ಟು ಹಿಂದೆ ಬೀಳಬಹುದೆಂದು ಅಂದಾಜು ಮಾಡಲಾಗಿದೆ! ಹೀಗೆ ಅಗಾಧ ಶಕ್ತಿಯ ಅಣುವು ತನ್ನ ಸ್ಫೋಟನ ಮಹಾತ್ಮೆಗಿಂತ ಯಂತ್ರ ಚಲನಾ ಸೂಕ್ಷ್ಮತೆಯಲ್ಲಿ ಹೆಚ್ಚು ಉಪಕಾರಿಯಾಗಬಲ್ಲುದೆಂದು ಖಚಿತವಾದಂತಾಯಿತು ಬ್ರಿಟಿಷ್ ಅರಸರ ರಾಜಜ್ಯೋತಿಷ್ಯರು ಅಮೇರಿಕದಲ್ಲೊಂದು ಕಡೆ ಕೊಟ್ಟ ಭಾಷಣದಲ್ಲಿ ಮುಂದೆ ರಚಿಸಲ್ಪಡಬಹುದಾದ "ಈ ಅತ್ಯದ್ಭುತ ನಾಹಿಮೆಯ ಅಣುಶಕ್ತಿಯ ಗಡಿಯಾರವೇ ಗ್ರೀನ್‌ವಿಚ್‌ನಲ್ಲಿ ವಿಶ್ವಸಮಯಗಳ ಕೇಂದ್ರ ಕಾಲಸೂಚಿಯಾಗಲಡ್ಡಿಯಿಲ್ಲ"ವೆಂದು ತಿಳಿಸಿದರು. ಅದು ತನಕ ಸಾಮಾನ್ಯ ಹುಲುಮಾನವರಾದ ನಾವು ನಮ್ಮ ಅಗ್ಗದ ವಾಚು ಮತ್ತು ಗಡಿಯಾರಗಳಿಂದಲೇ ಸಮಯ ದೂಡಬೇಕಾಗಿದೆ.

ಒಬ್ಬ ಬ್ರಿಟಿಷ್ ವಿಷಯತಜ್ಞರು ಈ ಕುರಿತು ವಿಮರ್ಶಿಸುತ್ತಾ "ಮಿಲಿಯೆದಲ್ಲಿ ಒಂದಂಶದಷ್ಟು ಹಿಂದು ಮುಂದಾಗುವಂತೆ ರಚಿಸಲ್ಪಟ್ಟ ಗಡಿಯಾರದಿಂದಲೂ ನಮ್ಮ ಈಗಿನ ಮತ್ತು ಅಪಾರವಾದ ಅವಶ್ಯಕತೆಗಳನ್ನು ನೀಗಲು ಸಹಾಯವಾಗಲಾರದು" ಎಂದು ತಿಳಿಸುತ್ತಾರೆ ಕಾರಣ ನಮ್ಮಲ್ಲಿ ಪ್ರತಿಯೊಬ್ಬನೂ ನಿಶ್ಚೂಲಿಯನ ನಲ್ಲ ಆತನಾದರೊ "ನನಗೆ ಏನು ಸಿಗದಿದ್ದರೂ ನನಗೆ ಸರಿಯಾದ ಕಾಲಸೂಚಿಯೊಂದಿದ್ದರೆ ಸಾಕು" ಎಂದಿದ್ದ ಇತರ ನಮ್ಮ ಜನತೆಗೆ ಸಮಯವಂದರೆ (ಅದರಲ್ಲಿ ಕಾಲಕ್ಷೇಪವೂ) ತುಂಬಾ ಕಹಿಯಾದ ವಿಚಾರವೇ ಆಗಿದೆ ಕಳೆದು ಹೋಗುತ್ತಿರುವ ನಮ್ಮ ಸಿನ ಕುರಿತು ಮಾತಾದರೂ ಸ್ಮರಿಸಿದರೆ ನನಗೆ ಹಿತವೆನಿಸುವುದಿಲ್ಲ ಆಗಿಂದಾಗ್ಗೆ ದುಃಖಿತನಿಗೂ ಸಂಕಷ್ಟಿಗಳಿಗೂ ಸಮಯವು ಒಂದು ಶೇಷ್ಯ "ವೇದನಾ ರಹಿತ ಔಷಧಿ" ಆಗಿದೆ ಈ ಸಂದರ್ಭದಲ್ಲಿ ಹೆಚ್ಚಿನ ಮಾನವ ಕೋಟಿಯು ಬಿಷ್ ಕವಿಯ ಸುಮಧುರ ಕವಿತೆಯ ಸಂಗೀತದ ಪತಿಧ್ವನಿಯನ್ನು ಬೀದರಿಂದ ಕೇಳುವುದ

ಉರುಳುವವು ವರುಷಗಳು ಬರದಿಂದ
ಧರೆಯನ್ನು ಬಳಸುವ ಕರಾಳ ಕರಿಯಾನೆಯಂದ
ಮುರಿದು ಹೋಗುವರು ಮಾನವರು
ಕೆಡೆವರಿ ಅದರ ಭಾರದ ಹೆಜ್ಜೆಗಿಕಾಗ್ದು ವರು

ಆದುದರಿಂದ ನಮ್ಮಮಟ್ಟಿಗೆ ಗಡಿಯಾರಗಳು ಅದಿಷ್ಟು ನಿಲ್ಲಗೆ ನಡೆದರೂ ಸುಖವೆ

'ರಶ್ಯದ ಧೋರಣೆಯಲ್ಲಿ ಬದಲಾವಣೆ ಸಿಕಾಯಿತು?

ಎಟ್ಲಾಂಟಿಕ್ ಒಕ್ಕೂಟದ ಪ್ರತಿಕ್ರಿಯೆ?

ಸ್ಟೆಲಿನರಿಗೆ ಸಲಹೆ ಕೊಟ್ಟ ಜರ್ಮನ್ ತಜ್ಞ

ಇಂದು ಜಗತ್ತಿನ ಪ್ರತಿಯೊಬ್ಬ ರಾಜತಂತ್ರಜ್ಞರ ಮನಸ್ಸಿನಲ್ಲಿರುವ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯೆಂದರೆ "ರಶ್ಯವನ್ನು ಇಷ್ಟು ಮೆದುಮಾಡಿದ ಸಂಗತಿ ಯಾವುದು?" ಎಂಬುದಾಗಿರುತ್ತದೆ ಇಲ್ಲವೆ ಅವರು ತಾತ್ಕಾಲಿಕವಾಗಿ ಜಗತ್ತಿನ ಇತರ ಭಾಗಗಳೊಡನೆ ಈ ದೀರ್ಘಕಾಲದ ಸಹಕಾರಕ್ಕೆ ಒಸ್ಸಿಗೆ ಕೊಟ್ಟಿರುವರೋ?

ಹೀಗೆಂದು ಪ್ರಖ್ಯಾತ ಅಮೇರಿಕನ್ ಪತ್ರಿಕೋದ್ಯೋಮಿಯಾದ ಡ್ರೂಪೆರ್ಸನ್ನರು ತಮ್ಮೊಂದು ಲೇಖನದಲ್ಲಿ ಬರೆಯುತ್ತಾರೆ. ಅದರ ಸಾರಾಂಶ ಹೀಗಿದೆ

ಮೈಲಿನ ಪ್ರಶ್ನೆಗೆ ಉತ್ತರ ಕೊಡಲು ಯಾವ ರಾಜನೀತಿಜ್ಞನಿಗೂ ಧೈರ್ಯಸಾಲದು ಜರ್ಮನಿಯಿಂದ ನಿರ್ಬಂಧಿತವಾಗಿ ಈ ಕಡೆ ಬಂದ ವರದಿಗಳಿಂದ ಕೆಲವು ಗಣನೀಯ ಸಂಗತಿಗಳು ವಿಶದವಾಗುತ್ತವೆ.

ಇತ್ತೀಚೆಗೆ ರಶ್ಯನರು ರುಡೊಲ್ಫ್ ನೊಡೊಲ್ಫಿ ಎಂಬ ಜರ್ಮನ್ ರಾಜ್ಯನೀತಿಜ್ಞನಿಂದ ಸಲಜೆ ಪಡೆಯುತ್ತಿದ್ದಾರೆ ಇವನು ಹಿಂದೆ ಮೊಸ್ಕೋದಲ್ಲಿ ಜರ್ಮನ್ ರಾಯಭಾರಿಯಾಗಿದ್ದ ಈ ನೊಡೊಲ್ಫಿ ಮಹಾಶಯನು ಕಮ್ಯೂನಿಸ್ಟ್ರ ತತ್ವ ಪ್ರಿಯನೇನೂ ಅಲ್ಲ ಹಂಗೇರಿ ವಂಶದ ಜರ್ಮನನನವನು ಬ್ಯುಕಿನ ಸರ್ವಾಧಿಕಾರಿಯೆನಿಸಿದ ಬಿಸ್ಮೆರ್ಕನ ಶಿಷ್ಯ ವರ್ಗದವನು ರಶ್ಯ ಜರ್ಮನಿಯೊಳಗೆ ಯಾವಾಗಲೂ ಹತ್ತಿರದ ಸಂಪರ್ಕವಿರಬೇಕೆಂದು ಬಿಸ್ಮೆರ್ಕನ ಅಭಿಪ್ರಾಯವಿತ್ತು

ಏಪ್ರಿಲ್‌ನಲ್ಲಿ ರಾಪ್ಪಲ್ಲೊದೆಡನೆ ರಾಜಕೀಯ ಜಾಣ್ಕೆಯನ್ನಾಡುವುದನ್ನು ಬಿಟ್ಟು ವೃದ್ಧನು ತಿನ್ ಫೆಲ್ಡ್‌ಶನಹಸ್ಪೆಕೆಂದರೆ ಅದೇ ಸಮಯಕ್ಕೆ ರಶ್ಯ ಜರ್ಮನಿಗಳ ಸಂಬಂಧವನ್ನು ಒಲಗೂಳಿಸಬೇಕೆಂದೂ ನೊಡೊಲ್ಫಿಯ ಉಪದೇಶವಿರ ತ್ತದೆ

ಪ್ರಾಚ್ಯವಾತ್ಯ ವ್ಯವಹಾರಗಳಲ್ಲಿ ನಿಷ್ಣಾತನೆಂತಲೇ ಖ್ಯಾತನಾಗಿರುವ ನೊಡೊಲ್ಫಿಯ ಅಭಿಪ್ರಾಯವು ಕೃಸ್ಟೆಗೊಂಡು ಪಕಿಸಿತವಾಗುವುದೆಂದೂ, ಎಟ್ಲಾಂಟಿಕ್ ಒಪ್ಪಂದಕ್ಕೆ ಅವೇರಿಕವು ಸಹಿಹಾಕಿರುವುದಾದರೂ ಅದು ಸಂಕಷ್ಟ ಧನಸಹಾಯವನ್ನು ಸಾಮುವುದಿಲ್ಲವೆಂದೂ ನೊಡೊಲ್ಫಿಯ ರಶ್ಯನರಿಗೆ ಸಲಹೆ ಕೊಟ್ಟಿರುವನು

ಆದೂ ಅಷ್ಟಿದೆ ತನ್ನ ವಿಚಾರ ಸರಣಿಯನ್ನು ಸಿದ್ಧಾಂತಗೊಳಿಸುವ ಪ್ರಚಾರವನ್ನೂ ನೊಡೊಲ್ಫಿಯ ಕೈಕೊಂಡಿರುವನು ಕಳೆದ ತಿಂಗಳಲ್ಲಿ ಆತನು ಪ್ರಮುಖ ಜರ್ಮನ್ ದುರೀಣರನ್ನು ಕಂಡು ಜರ್ಮನಿಯ ಭವಿಷ್ಯವು ರಶ್ಯನನ್ನೇ ಅವಲಂಬಿಸಿದೆಂದು ಮನಪರಿಕೆ ಮಾಡಿರುವನಂತೆ ನೊಡೊಲ್ಫಿಯು ವಿವರಿಸಿದ ನೀತಿಯು ಈ ಕೆಳಗಿನಂತಿದೆಯೆಂದು ತಿಳಿದುಬರುತ್ತದೆ.

ಶಾಂತಿಯು ಚೆನ್ನಾಗಿ ಸ್ಥಾಪಿಸಲ್ಪಟ್ಟರೆ ಮಿತ್ರರಾಷ್ಟ್ರಕ್ಕಿಂತ ರಶ್ಯನೇ ಜರ್ಮನಿಗೆ ಹೆಚ್ಚಿನ ಸಹಾಯಗಳನ್ನು ಮಾಡಬಲ್ಲುದು. ಅದಕ್ಕೆ ಎರಡು ಕಾರಣಗಳಿವೆ 1. ಪ್ರಮುಖ ಖನಿಜ ಮತ್ತು ಕೈಗಾರಿಕೆ ಕೇಂದ್ರವಾದ ಸ್ವಾಲೇಸಿಯವು ಪ್ರಕೃತಕ್ಕೆ ರಶ್ಯದ ಸ್ವಾಧೀನದಲ್ಲಿರುವುದರಿಂದ ಅದನ್ನು ಜರ್ಮನಿಗೆ ಬಿಟ್ಟುಕೊಡಲೂಬಹುದು 2 ಬ್ರಿಟನ್ ಮತ್ತು ಸಂಯುಕ್ತ ಅಮೇರಿಕೆಗಳು ಈಗ ತಮ್ಮ ಕಾರ್ಖಾನೆ ವಸ್ತುಗಳಿಗೆ ವರದೇಶಗಳಲ್ಲಿ ಸಂತೆಯನ್ನು ಹುಡುಕಲು ಕಾತರಿಸುತ್ತಿದ್ದಾರೆ ಯುದ್ಧವು ಇಲ್ಲವಿದ್ದರೆ ಸಂತೆಗಳನ್ನು ಹುಡುಕುವ ಈ ಪೈಪೋಟಿಯು ತೀಕ್ಷ್ಣವಾಗಿ ಬ್ರಿಟನ್ ಅಮೇರಿಕಗಳು ಜರ್ಮನಿಯನ್ನು ಒಂದು ಕೃಷಿ ಪ್ರಧಾನ ರಾಷ್ಟ್ರವಾಗಿಯೇ ಊರ್ಜಿತದಲ್ಲಿಡಲು ಪ್ರಯತ್ನಿಸುವರು ಆದರೆ ರಶ್ಯಕ್ಕೆ ಚೀನದಲ್ಲಿ ವಿಶಾಲವಾದ ಸಂತೆ ವ್ಯದೇಶವಿದೆ ಆದುದರಿಂದ ಅದು ಜರ್ಮನಿಯೊಡನೆ ಸ್ನೇಹಿತವಾಡಲು ಪ್ರಯತ್ನಿಸದು.

ಮತ್ತೊಂದು ಪ್ರಸಂಗದಲ್ಲಿ ಯುದ್ಧವು ಸಂಭವಿಸಿದ್ದೇ ಆದರೆ ರಶ್ಯವು ಜರ್ಮನಿಯನ್ನು ಗೆಲಿಸುವುದೆಂದು ತನಗೆ ರಶ್ಯದ ಕಡೆ ಪಿಂಡ ಭರವಸೆ ಇಕ್ಕಿರುವುದಾಗಿ ನೊಡೊಲ್ಫಿಯು ಜರ್ಮನ್ ಧುರೀಣರಿಗೆ ತಿಳಿಸಿರುವನಂತೆ ರಶ್ಯನ್ ಸೈನ್ಯಗಳು ನೊರೆ ಇಷ್ಟಾಲಿಯ ಮೆಡಿಟರೇನಿಯನ್ ಮುಂದಿರುವುದಾಗಿ ಹಾಗೂ ಅದುದುವ ರಶ್ಯನ್ ಸೈನ್ಯಗಳು ಜರ್ಮನರ ನಿಕಟ ಸಹಕಾರವು ಆವಶ್ಯಕವಿರ ತ್ತದೆ

ಇದರ ಪರಿಣಾಮವಾಗಿ ಅಮೇರಿಕದ ಆಡಳಿತಗಾರರಾದ ಜನರಲ್ ಕ್ಲೇ ಅವರು ಪಶ್ಚಿಮ ಜರ್ಮನಿಯ ಸಂಯುಕ್ತ ರಾಜ್ಯ ಪಟಲಿಯ ಸೂತನೆಕೊಟ್ಟಾಗ ಜರ್ಮನ್ ಮುಂದಾಳ್ಗಿಗಳು ಅದನ್ನು ತಿರಸ್ಕರಿಸಿದ್ದರು. ಮತ್ತೆ ತಿರಿವು ರಿಯಾಯಿತಿಗಳು ಕೊಡಲ್ಪಟ್ಟ ನಂತರ ಅದು ಸ್ವೀಕರಿಸಲ್ಪಟ್ಟಿತು

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿನಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ರೆ ಕೊಯಮುತ್ತೂರಲ್ಲಿರುವ ಸರ್ಕಾರಿ R. T. O ರವರು ಸೆಂಕ್ಷನ್ ಮಾಡಿ, ಅದು ಕೂಡಾ ಗ್ಯಾಸು ಬಸ್ಸು ಗಳಿಂದಲೇ ಓಡಿಸಬೇಕಾಗಿ ನಿರ್ಭಂದನಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದೆ' ಸ್ಪೆಶಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
22-12-48

ಜ್ಯೊಂಟ್ ಮೆನೇಜರ್ಸ್,
ದಿ ಕಂಭ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed . . .	Rs. 20,00,000
Capital Paid up	Rs. 19,99,800
Reserves	Rs 8,90,000

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಭ್ಟ್ ಗ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾವ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ಮ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff, A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ಕಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡಿಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ತಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಥಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನು ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ಶುಕ್ರವಾರ 3—6—1949 [ಸಂಚಿಕೆ 22]

ಭಾರತದಲ್ಲಿ ಕಮ್ಯೂನಿಸ್ಟರ ಶಕ್ತಿ ಎಷ್ಟಿದೆ?

ಬ್ರಿಟಿಷ್ ಪತ್ರಿಕೆಯೊಂದರ ಪರಿಶೀಲನೆ

ಹಿಂದೀ ಕೆಂಪು ತತ್ವಾನುಯಾಯಿಗಳು ಅದೆಷ್ಟು ಬಲಿಷ್ಠರಿರುವರು? ಅವರ ಪ್ರಭಾವವು ಎಷ್ಟಿದೆ? ಕಾಂಪುಖಿಂಡ (ಬೊಗಾತ)ನ್ನ ಅವರು ಹಳದಿಖಿಂಡ (ಚೀನ)ದಂತೆ ಕೆಂಪಾಗಿಸಿದ (ರಶ್ಯದ) ಸ್ಥಾಪಿತಕ್ಕೆ ಒಳಪಡಿಸಬಲ್ಲರೆ?

ಈ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಲಂಡನಿನ ನ್ಯೂಸ್ ಕ್ರಿಯ ಪತ್ರಿಕೆಯ ದಿಲ್ಲಿ ಬಿಂಬಿತ ದಾರರು ಹೀಗ ಬರೆಯುತ್ತಾರೆ

ಚಾರಿತ್ರಿಕವಾಗಿ ಕಮ್ಯೂನಿಸ್ಟ್ ಕೃತವು ಭಾರತದಲ್ಲಿ ಕೇವಲ ೩೦ ವರ್ಷದ ವಯಸ್ಸಿನದಾಗಿದೆ ಕಳೆದೆರಡು ಯುದ್ಧಗಳ ನಡುವಂತರದ ಅವಧಿಯಲ್ಲಿ ಅದು ಇಲ್ಲಿ ನ್ಯಾಯಬಾಹಿರವಾಗಿ ಮಾತ್ರವಿದ್ದಿತು. 1943 ಮತ್ತು 1948ರಲ್ಲಿ ಹೀಗೆ ಎರಡ ಸಲ ಮಾತ್ರ ಕಮ್ಯೂನಿಸ್ಟರು ಸಾರ್ವಜನಿಕ ಪರಿಷತ್ತುಗಳನ್ನು ಸೇರಿಸಿದ್ದರು. ಎರಡನೇ ಪರಿಷತ್ತಾನಂತರ ಬಂಗಾಳದಲ್ಲಿ ಅವರ ಮೇಲೆ ಪ್ರತಿಬಂಧ ಹೊರಿಸಲಾಯಿತು ಅದೇ ಸಮಯಕ್ಕೆ ಭಾರತದ ಇತರ ಕಡೆಗಳಲ್ಲೂ ಕೈದುಗಳು ಮಾಡಲ್ಪಟ್ಟವು ಪರಿಣಾಮವಾಗಿ ಕಮ್ಯೂನಿಸಮು ಹೆಚ್ಚು ಕಡಿಮೆ ಅಕ್ರಮ ಸಂಸ್ಥೆಯಂತೇ ಆಯಿತು

ನೆಹರು ಹೇಳಿಕೆ

ಕಮ್ಯೂನಿಸ್ಟ್ ವಕ್ಷದ 1611 ಮುಂದಾಳುಗಳು ಬಂಧನದಲ್ಲಿರುವರೆಂದು ಮುಖ್ಯ ಪ್ರಧಾನ ನೆಹರುಗಳು ತಿಳಿಸಿದರು ಆದರೆ ಕಮ್ಯೂನಿಸ್ಟರು ಈ ಸಂಖ್ಯೆಯನ್ನು 3000 ವೆಂದು ಪ್ರಚಾರ ಮಾಡಿದ್ದರು ಅನೇಕ ಮುಂದಿ ಸಣ್ಣ ಸಣ್ಣ ಮುಂದಾಳುಗಳು ಕಲ್ಪಿತವಾದ ಖಾಸಿಕಾರಕ ಆರೋಪಗಳಿಗಾಗಿ ವಿಚಾರಣೆಯಿಲ್ಲದೆ ಬಂಧನದಲ್ಲಿಡಲ್ಪಟ್ಟಿರುವರಾಗಿಯೂ ಅವರ ವ್ಯಚಾರ ನಡೆಯುತ್ತಿದೆ.

ಕಳೆದ ವರ್ಷದ ಫೆಬ್ರವರಿ ತನಕ ಅವರ ದೊಬ್ಬ ಪ್ರಮುಖ ನಾಯಕರಾಗಿದ್ದವರು. ಪೂರ್ಣಚಂದ್ರ ಜೋಶಿಯವರು. ಆದರೆ 1948ರ ಎರಡನೇ ಕಮ್ಯೂನಿಸ್ಟ್ ಪರಿಷತ್ತಿನಲ್ಲಿ ಅವರ ಕೈಬಿಗಿಸ್ ಸಹಿತ ಭಾರತವಂದ ಮೋಶೆಯಿಂ ತೀವ್ರ ಟೀಕೆಗಳಿಗಾಯಿತು ಬಿ ಟಿ ರಣದಿವರು ೧೯೪೩ ವರ್ಷದ ಅನ ಭವಸ್ಥ ಲೀಡ್ ಮೂಸಿಯು ನಿಸ್ಸರು ಜೋಶಿಯವರ ಸ್ಥಾನಕ್ಕೆ ನೇಮಿಸಲ್ಪಟ್ಟರು ಜೋಶಿಯವರ ಪಕ್ಷ ಸದಸ್ಯತನವೂ ರದ್ದು ಮಾಡಲ್ಪಟ್ಟಿತೆಂದು ಹೇಳಲಾಗಿದೆ

ಎರಡು ಸಂಗತಿಗಳು

ಈಗ ರಣದಿವೆ ಮತ್ತವರ ಪ್ರಮುಖ ಅನುಯಾಯಿಗಳು ಜಂಗಾಕರಾಗಿದ್ದುಗುಸ್ತು ರಂಗಿರುವರು ಇತರ ನಾಯಕರು ಅವರ ಅಜಗ್ಮೈವೈರಿ ಸರ್ದಾರ್ ಪಟೇಲರು ಇಕ್ಕಿದ ಒಲೆಯೊಳಗೆ ಬಿದ್ದುಬಿಟ್ಟಿರುವರು

ಭಾರತದ ಉತ್ತರ ದಿಕ್ಕಿನ ದ್ವಾರಗಳನ್ನು ಸೋವಿಯಟ್ ಪ್ರಭಾವಕ್ಕೆ ತೆರೆದಿಡ ವ

ದೇನಾ ಇನ್ಶೂರೆನ್ಸ್

ದೇನಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇನಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ 1

ಮೂಲಧನ (ತೆತ್ತದ್ದು) ರೂ 10,00,000

ಜೀವನಿಮೆಯ ಸಂಡು . ರೂ. 12,00 000 (ವಿುಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ತಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ ೫-೦ ೦ರಂತೆ ರಿವರ್ಷನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. ೫-೦-೦ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನು, ಆಡಳಿತೆ ಮಂಡಳಿಯನ್ನೂ ಅಭಿನಂದಿಸುತ್ತೇನೆ ಅವರ ದೂರದರ್ಶಕತ್ವ ನಿಪುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು. ಈ ಕುಟುಂಬದ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವುದೆಂದು ಹೇಳುತ್ತೇನೆ

ವಿ. ಎಚ್ ಪೋರಾ, F I A

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿನಮ್ರತೆಯಿಂದ ಪ್ರೋತ್ಸಾಹಿಸಲಾಗುವುದು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಾಕುಮಾರ್ ಕೂಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

ಹಿಂದೂ ಕನ ಕ್ಯಾಸಿಸ್ಟರಿಂದಾಗುವ ಅನಾಯವು ಭೀತಿಗೊಳಿಸುವಂತದಿಲ್ಲ ಕಾರಣ—

1) ಅಂತರ ಪಕ್ಷಿಯ ಸಂಸ್ಥೆಗಳಲ್ಲಿನ ಒಂದ ವಿಳಿಶಾಖಿ ಶಕ್ತಿಯು ಚೀನ ಬರ್ಮಗಳಲ್ಲಿರ ವುದಕ್ಕಿಂತ ದೃಢವೂ ಸುಸ್ಥಾನಸ್ಥಿತವೂ ಆಗಿದೆ

2) ಎರಡೂ ದೇಶಾಂತರ ಗಳಲ್ಲಿನ ಕಮ್ಯೂನಿಸ್ಟರಿಗೆ ಶಸ್ತ್ರಾಸ್ತ್ರಗಳೆ ದೊರಕಿಸಿಕೊಳ್ಳಲು ಬೇರೆ ಇ ಬೂ ಕೊಡಲ್ಪಡುತ್ತಿದೆ

3) ಹಿಂದ್ ಪಾಕಿಸ್ತಾನಗಳ ಸೈನ್ಯದಲ್ಲಿ ಶಕ್ತಿಯುಕ್ತವಾದ ಶಸ್ತ್ರಾಸ್ತ್ರಗಳಿವೆ

ಹೆಚ್ಚಿನ ಭದ್ರತೆ

ಹಿ ದೂಸ್ತಾನದ ಜಂಕ್ಷ್ ಗಡಿಗಳ ಭದ್ರತೆ ಬೇರೆ ರಾಜಕೀಯ ಕಾರಣಗಳೂ ಇವೆ ಆದರೆ ದ ಚೀನದಲ್ಲಿ ಆಮೂತೆ ಇಲ್ಲಿ ಆಗ ಸಾಧ್ಯವೆ ಇಲ್ಲಿ ಉತ್ತರ ಭಾಗದಲ್ಲಿ ರ ಪ ಪಾಕಿಸ್ತಾನವು ಮುಸ್ಲಿಂ ರಾಜ್ಯವಾಗಿ ಸ್ಥ ಇಸ್ಲಾಮಿ ರಾಷ್ಟ್ರಗಳಲ್ಲ ನಾಕ್ಷಣ ಸಿದಂತಾಗಲಿ ಅನುಕೂಲ ದೊರೆಯುವುದಿಲ್ಲ.

ಹಿಂದೂಸ್ತಾನದ ದಕ್ಷಿಣದಲ್ಲಿ ಮಾತ್ರ ತೆಚ್ಚನ ಕಮ್ಯೂನಿಸ್ಟ್ ಪ್ರಭಾವವಿದೆ ಆಂಧ್ರ ತ್ತು ಮಲಬಾರುಗಳು ಅವರ ಬಲಿಷ್ಠ ಕೇಂದ್ರಗಳು ಹೈದರಾಬಾದಿನ ಕೆಲವು ಹಳ್ಳಿಗಳಲ್ಲಾ ಅವರು ಅವಿತು ಕೆಲಸಮಾಡುತ್ತಿದ್ದುದು ಕಂಡುಬಂದಿದೆ

ಬಂಗಾಲದಲ್ಲಿ ಹೆಚ್ಚು ಉದ್ಯೋಗಿಸಿ ಜನರಿರುವುದರಿಂದ ಕಮ್ಯೂನಿಸ್ಟರಿಗೆ ಅಲ್ಲಿ ದೃಷ್ಟಿ ಬಿದ್ದಿದೆ ಇಲ್ಲಿಯೂ ನೆಹರು ಸರಕಾರದ ಶೋಷಣೆಕಾರ್ಯದಿಂದಾಗಿ ಕಮ್ಯೂನಿಸ್ಟ್ ಉಪಟಳವು ಮೊಗ್ಗೆಯಲ್ಲೇ ಮುರುಟಿ ಹೋದಂತಾಯಿತು

ನಗಾಡುವುದು ಒಂದು ಉತ್ತಮ ವ್ಯಾಯಾಮ

ಆರೋಗ್ಯವನ್ನು ಸುಧಾರಿಸುವುದು

ನಗಾಡುವುದು ಒಂದು ದೈಹಿಕ ವರವೇ ಆಗಿದೆ ಎಂದು ಸರ್ ಪೌಲ್ ಹ್ಯೂಕ್ಸ್ ಎಂಬ ಬ್ರಿಟಿಷ್ ಶಾರೀರಿಕ ತಜ್ಞರು ಸಂಡೇ ಡಿಸ್ಪೇಚ್ ಪತ್ರಿಕೆಯಲ್ಲಿ ಬರೆಯುತ್ತಾ ನಗೆಯ ದೈಹಿಕ, ಮಾನಸೀಕ ಮತ್ತು ಅಧ್ಯಾತ್ಮಿಕ ಅನಲೋಕನದ ಕುರಿತು ಚರ್ಚಿಸುತ್ತಾರೆ.

ನಾವು ನಗಾಡುವಾಗ ಏನೆಲ್ಲ ಸಂಭವಿಸುತ್ತದೆ ಎಂಬು ಪ್ರಶ್ನೆಗೆ ಅವರು ಉತ್ತರ ಬರೆಯುತ್ತಾರೆ·

ಈ ಸಂಬಂಧವಾಗಿ ಗಮನಿಸಬೇಕಾದ ಮೊದಲನೆ ಸಂಗತಿಯೆಂದರೆ ಅದೊಂದು ಉಸಿರಾಟದ ವ್ಯಾಯಾಮವೆಂಬುದು ನಮ್ಮಲ್ಲಿ ಹೆಚ್ಚಿನವರು ಶ್ವಾಸಕೋಶಗಳನ್ನು ಸಂಪೂರ್ಣ ಬರಿಸು ಮಾಡುವುದಿಲ್ಲ ನಗಾಡುವವರಲ್ಲಿ ಆ ಕ್ರಿಯೆಯು ಸುಲಭವಾಗಿ ಉಂಟಾಗುತ್ತದೆ. ನಗಾಡುವಾಗ ಶ್ವಾಸಕೋಶಗಳಲ್ಲಿನ ಗಾಳಿಯು ಸಂಪೂರ್ಣ ಹೊರಹೋಗಿ ಮತ್ತೆ ಹೆಚ್ಚು ಪ್ರಮಾಣದ ವಾಯುವು ಅದರೊಳಗೆ ಪ್ರವೇಶಿಸುವಂತಾಗುತ್ತದೆ. ಹೀಗೆ ಹಲವು ಬಾರಿ ಸಂಭವಿಸಿದಾಗ ರಕ್ತದೊಳಗೆ ಶುದ್ಧ ವಾಯುವಿನ ಶಕ್ತಿಸಾರವು ಹೆಚ್ಚಿಚ್ಚು ಸೇರಿಕೊಳ್ಳಲು ಅನುಕೂಲವಾಗುತ್ತದೆ

ನಗೆಯಿಂದ ಯೋಗಾಭ್ಯಾಸದ ಒಂದು ಧ್ಯೇಯವೂ ನಿರ್ವಹಿಸಿದಂತಾಗುತ್ತದೆಂದು ಬಲ್ಲವರು ಹೇಳುತ್ತಾರೆ ಕಾರಣ ನಗಾಡುವಾಗ ಕ್ರಮವಾಗಿ ಒಂದರ ಹಿಂದೆ ಒಂದರಂತೆ ಶ್ವಾಸಕೋಶಗಳು ಸಂಪೂರ್ಣ ಬರಿದಾಗಿ ಪುನಃ ಸಂಪೂರ್ಣ ತುಂಬಿಕೊಳ್ಳುವಂತಾಗುತ್ತದೆ ಇದು ಯೋಗಾಭ್ಯಾಸ ವ್ಯಾಯಾಮದ ಒಂದು ಮಹತ್ವದ ಕ್ರಿಯಾಂಶವಾಗಿದೆ ಯೋಗವೆಂದರೆ ಪರಮಾತ್ಮನೊಡನೆ ಸಂಯೋಗಗೊಳ್ಳುವುದೆಂದರ್ಥ

ವ್ಯಾಯಾಮವೆಂತಾಗಿ

ನಗುವುದೊಂದು ಅಧ್ಯಾತ್ಮಿಕ ವ್ಯಾಯಾಮ ಏಕೆಂದರೆ ಅದರಿಂದ ರಕ್ತಶುದ್ಧಿಯಾಗುವುದರೊಂದಿಗೆ ನರಶಕ್ತಿಯು ಬಲಿತುಕೊಳ್ಳುವುದು ಈ ಎರಡು ಸುಪರಿಣಾಮಗಳು ಸಂಪೂರ್ಣ ನಗೆಯಿಂದಲೇ ಉಂಟಾಗುತ್ತವೆಂಬುದು ನಿಸ್ಸಂದೇಹ ಯೋಗಿಯೊಬ್ಬನು "ದೇವರೇ, ನನ್ನಲ್ಲಿ ಹೃದಯವನ್ನು ಪರಿಶುದ್ಧಗೊಳಿಸಿ, ಶ್ರೇಷ್ಠ ಸನ್ಮಾರ್ಗದ ಭಾವನೆಯನ್ನುಂಟುಮಾಡು' ಎಂದು ಪ್ರಾರ್ಥಿಸುವಾಗ ಅವನು ಅಕ್ಷರಶಃ ಅದೇ ಉದ್ದೇಶವನ್ನು ಆರ್ಥಿಸುತ್ತಾನೆ

ಶುದ್ಧವಾದ ರಕ್ತ ಹರಿಯುವಂತಾದರೆ ಪರಿಶುದ್ಧವಾದ ಹೃತ್ಕೋಶವುಂಟಾಗುವದು, ಮತ್ತೆ ಆ ರಕ್ತವು ಪರಿಶುದ್ಧವಾಗಿರಬೇಕಾದರೆ ಅದಕ್ಕೆ ಹೇರಳವಾದ ಆಮ್ಲಜನಕವುಳ್ಳ ಗಾಳಿಯು ಸರಬರಾಯಿಯಾಗಬೇಕು ನುತ್ತೆ. ಸದ್ಭಾವನೆಯನ್ನುಂಟು ಮಾಡುವುದರ ಕುರಿತು ನಿರೂಪಿಸುವಾಗ ಬೈಬಲ್ ಧರ್ಮಗ್ರಂಥದಲ್ಲಿ ಹೇಳಲ್ಪಟ್ಟ "ಅಧ್ಯಾತ್ಮಿಕ ಭಾವನೆ" ಇಲ್ಲವೆ "ಸ್ಫೂರ್ತಿ" ಇವಕ್ಕೂ "ಉಸಿರಾಟಕ್ಕೂ" ನಿಕಟ ಸಂಬಂಧವುಳ್ಳ ವಿಷಯಗಳೆಂಬುದನ್ನು ಗಮನಿಸಿದರೆ ಸಾಕು.

ಅದಲ್ಲದೆ ನಗಾಡುವುದರಿಂದ ಹೊಟ್ಟೆಗೊಂದು ಉತ್ತಮ ವ್ಯಾಯಾಮ ಸಿಕ್ಕಂತಾಗುವುದು. ಹೊಟ್ಟೆಯ ಹೊರ ಪರೆಯು ಒಳಗಿನ ಅನ್ನಕೋಶಕ್ಕೆ ಚೆನ್ನಾಗಿ ಒತ್ತಿದಂತಾಗಿ ಜಠರಕ್ರಿಯೆಗೆ ತುಂಬಾ ಸಹಾಯ ಮಾಡುವುದು. ಇದನ್ನು ಉದ್ದೇಶಪೂರ್ವಕವಾಗಿ ಕೈಯಿಂದಲೇ ಚೆನ್ನಾಗಿ ತಿಕ್ಕಿಯೂ ಮಾಡುತ್ತಾರೆ. ಆದರೆ ನಗಾಡುವಾಗ ಇದು ಸಹಜವಾಗಿಯೆ ಆಗುತ್ತದೆ. ಇದೇ ರೀತಿ ಉಶ್ವಾಸ ನಿಶ್ವಾಸಗಳ ಕ್ರಿಯೆಯು ನಗಾಡುವಾಗ ಸರಾಗವಾಗಿ ಜರಗುವುದರಿಂದ ನರ ಶಕ್ತಿಯ ಮೇಲೆ ಅದರ ಪರಿಣಾಮವು ಚೆನ್ನಾಗಿಯೆ ಆಗುತ್ತದೆ.

ಪಚನ ಕ್ರಿಯೆಗೆ ಸಹಾಯ

ನಗೆಯು ಒಂದು ಕಂಪನರೂಪದ ವ್ಯಾಯಾಮ ಹಲವೊಂದು ಸಂದರ್ಭಗಳಲ್ಲಿ ಹೊಟ್ಟೆತುಂಬ ನಗಾಟದಿಂದ ಇದೀ ಶರೀರವು ಚೆನ್ನಾಗಿ ಕುಲುಕಿದಂತಾಗುತ್ತದೆ ಇದರ ಪರಿಣಾಮವಾಗಿ ಸ್ವಲ್ಪ ಋಣವೂ ಉಂಟಾಗುತ್ತದೆ ಕೆಲವು ಸಲ ಅಳುವಾಗಲೂ ಇದೇ ತರದ ಪರಿಣಾಮವುಂಟಾಗುವುದು ಆದರೆ ನಗು ಮತ್ತು ಅಳುವಿಕೆಗಳೊಳಗಿನ ವ್ಯತ್ಯಾಸವು ಬಹಳ ಸೂಕ್ಷ್ಮವಾದುದಾಗಿದೆ

ಈ ಕೊಲುಕಾಟ ಅಲುಗ್ಗಾಟಗಳು ಪಚನ ಕ್ರಿಯೆಗೆ ಅನುಕೂಲ ಸಹಾಯಕಾರಿಯಾದ ವುಗಳು ಈ ತರದ ವ್ಯಾಯಾಮವು ಏನ ನಿತ್ಯವೂ ಸಿಗುವಂತೆ ಪ್ರಯತ್ನಿಸಿದರೆ ಹೊಟ್ಟೆಯ ಪರೆಯು ಬಲಗೊಂಡು ತನ್ಮೂಲಕ ಪಚನೇಂದ್ರಿಯಗಳು ಹದಗೊಳ್ಳುವುವು

ಕನ್ನಡಿಯೊಂದನ್ನು ಎದುರಿಗಿಟ್ಟುಕೊಂಡು ಉದ್ದೇಶಪೂರ್ವಕವಾಗಿ ಬೇಕಾದ ಹಾಗೆ ನಿಮ್ಮನ್ನು ನೋಡಿ ನೀವೇ ನಗುತ್ತಾ ಈ ವ್ಯಾಯಾಮವನ್ನು ಮಾಡಬಹುದು. ಹೊಟ್ಟೆಯ ಪರೆಯು ನಡುಕನನ್ನು ಆದಷ್ಟು ಹೆಚ್ಚಿಚ್ಚು ಉಂಟುಮಾಡಿ ಅದರೊಡನೆ ಬಲವತ್ಕಾರದ ಉಶ್ವಾಸ ಬಿಡುವಿಕೆಗಳನ್ನು ಮಾಡಬೇಕು ಒಂದು ಸಾರಿ ಸಂಪೂರ್ಣ ಗಾಳಿಯನ್ನು ಶ್ವಾಸಕೋಶದಿಂದ ಹೊರ ಹಾಕಿದ ಮೇಲೆ ಮತ್ತೆ ಅದೇ ರೀತಿ ಶ್ವಾಸಕೋಶಗಳನ್ನು ಸಂಪೂರ್ಣ ಒಳ ಉಸಿರಾಟದಿಂದ ತುಂಬಿಸಬೇಕು ಹೀಗೆ ಪುನುರುವುದರಿಂದ ನಿಮಗೆ ತುಂಬಾ ಶಕ್ತಿಯು ಸುಖಾರೋಗ್ಯಗಳುಂಟಾಗುವುದನ್ನು ನೀವು ಗಮನಿಸುವಿರಿ ಕ್ರಮೇಣ ಈ ಅನುಕರಣವನ್ನು ಹೆಚ್ಚಿಸಿ ನೀವು ಇಡೀ ಶರೀರವನ್ನು ಕುಲುಕುವಂತೆ ಮಾಡುವುದು ಅತ್ಯುತ್ತಮ ಫಲವನ್ನು ಕೊಡುವಂತಾಗುವುದು ತದೆ

ಇತರ ಸುಪರಿಣಾಮಗಳು

ನಗಾಟದಿಂದ ಇನ್ನೂ ಅನೇಕ ಶಾರೀರಿಕ ಅನುಕೂಲತೆಗಳು ಲಭಿಸುವವು ರಕ್ತಚಲನೆಯನ್ನು ಶೀಘ್ರಗೊಳಿಸುವುದು; (ಮುಖ ಕೆಂಪಾಗುವುದರಲ್ಲಿ ಇದನ್ನು ಕಾಣಬಹುದು), ಕಣ್ಣೀರು ಬರುವುದು (ಇದು ಉತ್ತಮ ದೃಷ್ಟಿ ಶುಭ್ರಗೊಳಿಸುವ ದ್ರವ್ಯ), ನಗಾಟದಿಂದ ಹಲವು ಸಲ ಬವರು ಬರುವುದೂ ಉಂಟು ಇದೂ ಒಂದು ಒಳ್ಳೆ ಲಕ್ಷಣ

ನಮ್ಮ ಶರೀರವು ಅಧ್ಯಾತ್ಮಿಕ ಸಾಧನೆಯ ಶ್ರೇಷ್ಠ ದೇವಾಲಯವೆಂಬ ಭಾವನೆ ಸರಿಯಾದರೆ ಅದನ್ನು ಉತ್ತಮ ಸ್ಥಿತಿಯಲ್ಲಿಡುವುದೂ ನಮ್ಮ ಆಧ್ಯ ಕರ್ತವ್ಯವಾಗಿದೆ ಆಂತರಿಕ ಶುದ್ಧತೆಯು ಯಾವ ಮಂದಿರಕ್ಕಾದರೂ ಅತ್ಯಾವಶ್ಯಕವಾದುದು ಶರೀರಗಳಲ್ಲಿ ಪರಸ್ಪರ ವ್ಯತ್ಯಾಸಗಳೂ ಲೋಪ, ದೋಷಗಳೂ ಇವೆಯೆಂಬುದೂ ನಿಜ. ಆದರೆ "ದೇವರ ರಾಜ್ಯವು ನಿನ್ನ ಒಳಗೇ ಇದೇ" ಎಂಬ ಸಂತ ವಚನಕ್ಕನುಗುಣವಾಗಿ ಯೋಗಾಭ್ಯಾಸಿಗಳು ಅದನ್ನು ಅಚ್ಚುಕಟ್ಟಾಗಿಡುವ ಧ್ಯೇಯಬದ್ಧರಾಗಿರುವರು ದಿವಸಾಗಲೂ ಒಂದಿಷ್ಟು ಹೊಟ್ಟೆ ತುಂಬ ನಗಾಡಿದರೆ ಈ ಉದ್ದಿಶ್ಯ ಸಾಧನೆಯು ಬಹುಮಟ್ಟಿಗೆ ಪೂರೈಸುವುದೆಂದು ನಾನು ಧೈರ್ಯದಿಂದ ಹೇಳಬಲ್ಲೆ.

ದೇಶಾಭಿವೃದ್ಧಿಗೆ ವಿದೇಶಿ ಬಂಡವಾಳದ ಅವಶ್ಯಕತೆ

ಸರ್ ಬೆನೆಗಲ್ ರಾಮರಾಯರ ಅಭಿಪ್ರಾಯ

"ದೇಶದ ಅಭಿವೃದ್ಧಿಯು ತ್ವರಿತದಲ್ಲಿ ಆಗಬೇಕಾಗಿರುವುದರಿಂದ ಹಿಂದೂಸ್ತಾನವು ವಿದೇಶಿ ಬಂಡವಾಳದ ಸಹಾಯವನ್ನು ಉಪೇಕ್ಷಿಸಬಾರದು" ಎಂದು ಅಮೇರಿಕದಲ್ಲಿ ಭಾರತ ರಾಯಭಾರಿಯಾಗಿದ್ದ ಸರ್ ಬೆನೆಗಲ್ ರಾಮರಾಯರು ಬೊಂಬಾಯಿಯಲ್ಲಿ ತಮಗಿತ್ತ ಒಂದು ಸತ್ಕಾರ ಕೂಟದಲ್ಲಿ ತಿಳಿಸುವವರಾದರು ಈ ಮಹತ್ವದ ವಿಷಯದ ಕುರಿತು ಅವರು ಮತ್ತೆ ನಿರೂಪಿಸಿದ ಇನ್ನಿತರ ಅಭಿವ್ಯಾಯಗಳ ಸಾರಾಂಶ ಹೀಗಿದೆ

ಮುಖ್ಯವಾಗಿ ಅಮೇರಿಕನ್ ಬಂಡವಾಳವನ್ನು ನಾವು ತಿರಸ್ಕರಿಸುವುದು ಯುಕ್ತವೆನಿಸದು ಆಸ್ಯದಲ್ಲೂ ಮತ್ತು ಜಗತ್ತಿನಲ್ಲೂ ಶಾಂತಿ ಶ್ರೇಯಸ್ಸುಗಳು ಪ್ರಗತಿಭೋಗಬೇಕಾದರೆ ಹಿಂದೂಸ್ತಾನವು ಅವೆರಿಕದೊಡನೆ ವ್ಯವಹರಿಸುತ್ತಲಿರಬೇಕು ಮತ್ತು ಆ ದೇಶದ ಬಂಡವಾಳದ ಸಹಾಯವನ್ನು ಪಡೆಯಲು ಸಂಕೋಚಪಡಬಾರದು ನನ್ನ ಅಭಿವ್ಯಾಯದಲ್ಲಿ ಅಮೇರಿಕಕ್ಕೆ ಮಾನವ ದೇಶದ ಮೇಲೂ ಆಕ್ರಮಣ ಮಾಡುವ ಉದ್ದೇಶವಿಲ್ಲವೆಂದು ಹಿತನಿವೆ ಹಿಂದೂಸ್ತಾನದ ಮೇಲಿಂತೂ ಅವಕ್ಕೆ ಯಾವುದೇ ತರದ ದುರುದ್ದೇಶವಿಲ್ಲ ಒದಲಾಗಿ ಅಮೇರಿಕವು ಮಾಜಿ ಶತ್ರುಗಳಾದ ಜಪಾನುಗಳನ್ನೂ ಪುನರ್ನಿರ್ಮಿಸಲು ಪ್ರತಿಜ್ಞಾಬದ್ಧವಾಗಿರುವಂತೆ ಸಹಾಯವನ್ನೂ ಮಾಡುತ್ತಿರುವುದು

ಒದು ನೀಳ ಹಿಂದೂಸ್ತಾನ ನತ್ತ ಇನ್ನಿತರ ದೇಶಗಳನ್ನು ಶಂಕಿಸುವೀಕ ಮ ಅಮೇರಿಕಕ್ಕೆ ಬಯಳೆಯಿದ್ದರೂ ಅದು ನಿಸ್ಪೃಯೋಜಕವೆನಿಸುವುದು. ಕಾರಣ ಆ ದೇಶವು ಸಂಪೂರ್ಣ ಸ್ವಾವಲಂಬಿಯಾಗಿದ್ದು ಪರದೇಶಗಳಿಂದ ಯಾವುದೇ ತರದ ಕಚ್ಚಾವಸ್ತುಗಳನ್ನಾಗಲಿ ಇಲ್ಲವೆ ಕೈಕಾರ್ಮಿಕ ತಯಾರಿತ ವಸ್ತುಗಳನ್ನಾಗಲಿ ತರಿಸಿಕೊಳ್ಳುವ ಅವಶ್ಯಕತೆ ಅದಕ್ಕಿರುವುದಿಲ್ಲ ಅದುದರಿಂದ ಹಿಂದೂಸ್ತಾನವು ಅದರ ಕುರಿತು ಸಂದೇಹಗೊಳ್ಳಬೇಕಾಗಿಲ್ಲ

ಅಮೇರಿಕದ ಅಲಕ್ಷ್ಯಕ್ಕೆ ಕಾರಣ

ವಿದೇಶಿ ಬಂಡವಾಳಗಳನ್ನು ನಾವಿತ್ ನೆಹರುಗಳು ಆಮಂತ್ರಿಸಿದ್ದು ಶ್ಲಾಘನೀಯ ಸಂಗತಿ ಇದುತನಕ ಅಮೇರಿಕನ್ ಬಂಡವಾಳವು ಈ ಕಡೆ ಬರದಿರಲು ಮುಖ್ಯವಾಗಿ ಎರಡು ಕಾರಣಗಳಿವೆ. ಇಲ್ಲಿನ ಕೈಗಾರಿಕಗಳನ್ನು ಸ್ವಾತಂತ್ರ್ಯಾನಂತರ ರಾಷ್ಟ್ರೀಕರಿಸಬಹುದೆಂಬ ಶಂಕೆಯೊಂದು ಅನೇಕ ವಿದೇಶಗಳಲ್ಲಿ ಭಾರತದ ಸ್ಥಿರಿಕ ಸಾಮರ್ಥ್ಯದ ಕುರಿತು ಬಲವಾದ ಸಂದೇಹಗಳಿದ್ದುದು ಎರಡು ಇಲ್ಲಿನ ಆರ್ಥಿಕ ಸ್ಥಿತಿಯು ಬ್ರಿಟಿಷರ ಹಿಂತೆಗೆತದ ನಂತರ ಸಂಪೂರ್ಣ ಮುಗ್ಗರಿಸಿ ಬೀಳುವುದೆಂಬ ಅಭಿವ್ಯಾಯವು ಹಲವು ವಿದೇಶಿ ತಜ್ಞರಲ್ಲಿತ್ತು ಆದರೆ ಕಳೆದ ಒಂದೂವರೆ ವರ್ಷದಿಂದ ಭಾರತಜ ಆಡಳಿತೆಗಾರರು ಇಲ್ಲಿಯ ಹಣಕಾಸಿನ ಮತ್ತು ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸಿರುವ ಸಮರ್ಥ ವಿಧಾನವನ್ನು ಕಂಡ ಬಳಿಕ ಈ ಭಾವನೆ ಸಂಪೂರ್ಣ ಮಾಸಿ ಹೋಗಿದೆ.

ಆಸ್ಯದ ನಾಯಕತ್ವ

ಇಂದು ಭಾರತವು ಆಸ್ಯದ ನಾಯಕತ್ವಕ್ಕೆ ಅರ್ಹವಾಗಿದೆ. ನಮ್ಮ ದೇಶದ ಬಾಗೋಳಿಕ ಸ್ಥಾನ, ಇಲ್ಲಿರುವ ಅಪಾರವಾದ ಕಚ್ಚಾ ಪದಾರ್ಥಗಳ ಸಂಪತ್ತು, ಇಲ್ಲಿಯ ರಾಜ್ಯ ವ್ಯವಹಾರದ ಧೃಡತ್ವ, ಇಲ್ಲಿಯ ಆಡಳಿತ ಯಂತ್ರದ ಸುವ್ಯವಸ್ಥೆ, ಮತ್ತು ಎಲ್ಲದಕ್ಕಿಂತಲೂ ಪರದೇಶಗಳಲ್ಲಿ ನೆಹರು ಮೊದಲಾದ ನಮ್ಮ ದೇಶಧುರೀಣರ ಅಂತರ್ರಾಷ್ಟ್ರೀಯ ಖ್ಯಾತಿಯೂ ಇದಕ್ಕೆ ಮುಖ್ಯ ಕಾರಣಗಳಾಗಿವೆ. ಸದ್ಯಕ್ಕೆ ಅಂತರೀಕ ವ್ಯವಸ್ಥೆಯ ಕಾರಣದಿಂದ ಭಾರತವು ಆಸ್ಯದ ನಾಯಕತ್ವ ವಹಿಸಲು ಇಚ್ಛೆಯುಳ್ಳದಾಗಿಲ್ಲ ನಾಲ್ಕು ತಿಂಗಳ ಕೆಳಗೆ ಪಂಡಿತ್ ನೆಹರುಗಳು ದಿಲ್ಲಿಯಲ್ಲಿ ಆಸ್ಯಾ ರಾಷ್ಟ್ರಗಳ ಪರಿಷತ್ತನ್ನು ಒಂದನ್ನು ಕರೆದು ಸಮಾಲೋಚಿಸಿದ ಪರಿಣಾಮವಾಗಿಯೇ ಇಂದು ಡಚ್ಚರು ಇತರ್ಧರಕ್ಕೆ ಸಮ್ಮತಿಸಿರುವರೆನ್ನಬೇಕು

ದೇಶದ ಸುಧಾರಣೆ

ಸದ್ಯದಲ್ಲೇ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳಾಗಲಿವೆ ದೇಶದ ಪ್ರಾಯಬದ್ಧರೆಲ್ಲರೂ ಮತದಾನವನ್ನು ಮಾಡಲು ಅರ್ಹರಾಗುವರು ದೇಶದ ಹೆಚ್ಚಿನ ಜನತೆಯೂ ಅರೆಹೊಟ್ಟೆಯಲ್ಲಾಗಿದೆ ದೇಶದ ಜನತೆಯ ಜೀವನ ಸ್ಥಿತಿಯನ್ನು ಏರಿಸಲು ಸ್ಪಷ್ಟ ಉತ್ಸಾಹಗಳಾಗಬೇಕಾದುದು ಅವಶ್ಯವಿದೆ ಹಾಗೆ ಶಿಕ್ಷೆದಲ್ಲಿ ಮಾಡಿಯದ್ದರೆ ಬಡಜನರು ತಮ್ಮ ಮೈಗೆ ಬಿಸಿಯಾಕೊಡುತ್ತೇವೆ ನ್ನುವ ಬೆರೆ ತತ್ವಗಳನ್ನು ಸ್ವೀಕರಿಸಲು ಇಚ್ಛೆಪಡಬಹುದು ಅವರು ಕಮ್ಯುನಿಸಮ್ ಸೋಷಿಯಲಿಸಮ್ ಇವು ಘೋರತಕ್ಕ ಗಂಭೀರವೆಂದು ಜಿಜ್ಞಾಸಿಸಿದರೂ ಅದರ ಕುರಿತು ಸಂಶೋಧನೆಯಲ್ಲಿ ತೊಡಗಿರುತ್ತಾರೆ

ಜನರ ಜೀವನ ಮಟ್ಟವನ್ನು ಸುಧಾರಿಸಲು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು ಎಷ್ಟೇ ವಿಷ್ಣು ವೆಂದು ಸಂಡವಾಳವು ಅತ್ಯಾವಶ್ಯಕವೆಂಬ ಈ ಸಂದರ್ಭದಲ್ಲಿ ನಾವು ವಿದೇಶಿ ಬಂಡವಾಳವನ್ನು ಮುಖ್ಯವಾಗಿ ಅಮೇರಿಕವ ಕಡೆಯಿಂದ ಪಡೆಯಬಲ್ಲೆವು



ಇನಫ್ಲುಯೆಂಜಾ ಶೀತ ಮತ್ತಿತರ ಕೂರ ಬೇನೆ ಗುಣಪಡಿಸುವರೆ ಸೆಪ್ಸು ಅಗತ್ಯ

ರುಚಿಕರವಾದ ಒಂದು ಸೆಪ್ಸ್ ಮಾತ್ರೆಯನ್ನು ಕೊಂಡುಕೊಳ್ಳಿರಿ ಅದರಿಂದ ಹೊರಡುವ ಔಷಧಿಯು ಎಸನ್ನು ಶ್ವಾಸಕೋಶಗಳ ಬಾಧೆಯನ್ನು ನಿವಾರಿಸಿ ಗುಣಪಡಿಸುವುದು

PEPS

ವಿಷಹಾರಿ ಎದೆ ಮತ್ತು ಗಂಟಲು ಬೇನೆಯ ಮಾತ್ರೆಗಳು.

ದೇಶ ವಿದೇಶ ವೃತ್ತವೈವಿಧ್ಯ

ಅಖಂಡ ವಿಶ್ವ ಚಳವಳಿ

ನೆಹರುಗಳ ಮುಂದಾಳುತನ

ಒಂದು ಜಗತ್ತು ಮತ್ತು ಒಂದೇ ವಿಶ್ವ ಸರಕಾರ ಬೇಕೆನ್ನುವ ಚಳವಳಿದ ಅಮೇರಿಕನ್ ಪ್ರಚಾರಕರಾದ ಮಿ। ಹೆರಿಸ್ ವುಫರ್ಡ್ ಮತ್ತವರ ಪತ್ನಿ ಕ್ಲೇರ್ ವುಫರ್ಡ್ ಅವರು ಭಾರತಕ್ಕೆ ಬಂದಿರುವರು. "ಪ್ರಾಚೀನವಾದ ಈ ದೇಶದ ಸುಸಂಸ್ಕೃತ ಜನರಲ್ಲಿ ವಿಶ್ವ ಸರಕಾರದ ತತ್ವವನ್ನು ಸಾರಲು ನಾವು ಬಂದಿರುತ್ತೇವೆ. ವಿಶ್ವಸರಕಾರವೊಂದಿದ್ದರೆ ಮಾತ್ರ ಈಗಿನ ಜನಾಂಗ ಜನಾಂಗಗಳೊಳಗಿನ ಸ್ಪೆಪೋಟಿಯನ್ನು ನಿಲ್ಲಿಸಬಹುದು. ಜಾಗತ್ತಿಕ ಯುದ್ಧದ ಸಂಭವವನ್ನು ತೊಡೆದು ಹಾಕಲು ಇದೊಂದೇ ಸಾಧನ" ಎಂದವರು ಒಂದು ಹೇಳಿಕೆಯಲ್ಲಿ ತಿಳಿಸುತ್ತಾರೆ. ಅವರು ನೆಹರುಗಳನ್ನು ಕಂಡು ತಮ್ಮ ಘನವಾದ ಧ್ಯೇಯದ ಕುರಿತು ಅವರ ಬೆಂಬಲವನ್ನೂ ಪಡೆಯಲು ಪ್ರಯತ್ನಿಸುವರಂತೆ. "ಈ ಜಾಗತ್ತಿಕ ಚಳವಳದ ನಾಯಕತ್ವ ವಹಿಸಲು ಶ್ರೇಷ್ಠ ನೈತಿಕಗುಣ ವಿಶೇಷಗಳುಳ್ಳ ನೆಹರುಗಳೇ ಅರ್ಹರು" ಎಂದೂ ಅವರು ತಿಳಿಸುತ್ತಾರೆ.

ನೆಹರುಗಳಿಗೆ ಸ್ಟೆಲೀನರ ಆಹ್ವಾನ

ಭಾರತದ ಕುರಿತು ಮೋಸ್ಕೊದ ಅಸಕ್ತಿ

ಆಮಂತ್ರಿಸಲ್ಪಟ್ಟರೆ ತಾವು ರಶ್ಯಕ್ಕೆ ಹೋಗಲು ಸದಾ ಸಿದ್ಧರಿರುವೆನೆಂದು ಪಂಡಿತ್ ನೆಹರುಗಳು ಎ. ಐ. ಸಿ. ಸಿ. ಸಭೆಯಲ್ಲಿ ತಿಳಿಸಿದ್ದು ಲಂಡನಿನ ರಶ್ಯನ್ ರಾಜಕೀಯ ಮುತ್ಸದ್ದಿಗಳ ಕೂಟದಲ್ಲಿ ಆಳವಾದ ಅಸಕ್ತಿಯನ್ನುಂಟುಮಾಡಿದೆ. ಮೊಸ್ಕೊ ರೇಡಿಯೊದಲ್ಲೂ ಪಂಡಿತ್‌ಜಿಯವರ ಹೇಳಿಕೆಗೆ ತುಂಬಾ ಪ್ರಾಶಸ್ತ್ಯ ಕೊಡಲಾಗಿದೆ. ಇದರ ಪರಿಣಾಮವಾಗಿ ಮಾರ್ಶಲ್ ಸ್ಟೇಲೀನರು ಶೀಘ್ರದಲ್ಲೇ ಭಾರತ ಮುಖ್ಯ ಪ್ರಧಾನರನ್ನು ತಮ್ಮ ದೇಶಕ್ಕೆ ಆಹ್ವಾನಿಸುವ ಸಂದರ್ಭವನ್ನು ಕಾಯುತ್ತಿರುವರೆಂದು ತಿಳಿದು ಬರುತ್ತದೆ.

ಪಾಕ್ ಹಿಂದುಗಳಿಗೆ ಭೀತಿ

ಭಯಪ್ರತೆಗಾಗಿ ಇಸ್ಲಾಂ ಸೇರುವರು

ಕಳೆದೆರಡು ತಿಂಗಳಲ್ಲಿ ಪಾಕಿಸ್ತಾನದ ಹಲವು ಕಡೆಗಳಲ್ಲಿನ ಹಿಂದುಗಳು ಇಸ್ಲಾಂ ಮತಕ್ಕೆ ಸೇರುವುದು ತಿಳಿದು ಬರುತ್ತದೆ. ತಮ್ಮ ಸೊತ್ತು ಜೀವಿತಗಳ ಅಭದ್ರತೆಯ ಭೀತಿಯೇ ಈ ವರಿವರ್ತನಕ್ಕೆ ಕಾರಣವಲ್ಲದೆ ಧರ್ಮ ತತ್ವ ನಿಯತೆಯಲ್ಲವೆಂದು ಅ. ಬ. ಪತ್ರಿಕೆಯು ತಿಳಿಸುತ್ತದೆ. ಚೇತನ್ ಸಿಂಗ್ ನೆಂಬ ಓರ್ವ ಸಿಂಧಿ ಸೀಕ್ ಜಮಿನ್ದಾರನು ತನ್ನ ನಾಲ್ವರು ಗಂಡು ಮತ್ತು ಹೆಣ್ಣು ಮಕ್ಕಳೊಡನೆ ಮಸೀದಿ ಏರಿದರು. ಅವನಿಗೆ ಶೇಕ್ ನಾಥ ಭಕ್ಷ್ ಎಂದು ಹೆಸರಿಡಲಾಗಿದೆ.

ಕೊಟೆನ್ ಸಾಹೇಬರಿಗೆ ಜುಲ್ಮಾನೆ

ಒಂದು ಕಣ್ಣು ಕಟ್ಟು

ಮಲಯದಲ್ಲಿನ ಹಿಂಪೀಳುರು ಒಂದೇ ಒಂದು ಸಿನ್ಮೂಲು ಹುಡೆಕೊಂಡಿದ್ದರೆ ಅವರಿಗೆ ಛಾಸಿ ಶಿಕ್ಷೆ ಪ್ರಾಪ್ತಿಯಾಗುವುದು. ಆದರೆ ಸಾವಿರಗಟ್ಟಲೆಯಲ್ಲಿ ಭೀಕರ ಯದ್ಧಾಸ್ತ್ರಗಳನ್ನು ಹೈದರಾಬಾದಿಗೆ ಒಯ್ದು ಹಂಚಿ ಭಾಷಣ ಮಾಡುತ್ತ ಇಂದಿನ ಕೊಂಗ್ರೆಸ್ಸಿಯನ್ನು ಪಡೆಯುತ್ತಿದ್ದ ಈ ಸರಕಾರದ ವಿರುದ್ಧ ಅಕ್ಷಮ್ಯ ದ್ರೋಹ ಮಾಡಿದ ಕುಖ್ಯಾತ ಹೆನ್ರಿ ಕೊಟೆನನಿಗೆ ಬ್ರಿಟಿಷ್ ನ್ಯಾಯಾಲಯದವರು ಕೇವಲ 300 ಪವನಿನ ಜುಲ್ಮಾನೆ ಹಾಕಿ ಬಿಟ್ಟದ್ದು ಹಿಂದೀ ಜನತೆಯಲ್ಲಿ ಅತ್ಯಂತ ಆತ್ಯಸ್ತ್ರಿಯ ಪ್ರತಿಕ್ರಿಯೆಯನ್ನುಂಟುಮಾಡಿದೆ. ಇದು ಕೇವಲ ಒಂದು ಕಣ್ಣುಕ್ಕಟ್ಟಿಂದೂ ನಿರೂಪಿಸಲಾಗಿದೆ. ಈ ಜುಲ್ಮಾನೆ ಹೆನ್ರಿ ಕೊಟನನಿಗೆ ಒಂದು ಇರುವೆ ಕಡಿತದಂತಾಗಿದೆಯೆಂದು ಲಂಡನಿನ ಹಿಂದೀ ಕೇಂದ್ರಗಳಲ್ಲಿ ಅಭಿಪ್ರಾಯವಿದೆ.

ರಶ್ಯದಲ್ಲಿ ನಿರುದ್ಯೋಗವಿದೆ!

ಭಿಕ್ಷುಕರೂ ಇದ್ದಾರೆ!

ಕಮ್ಯೂನಿಸ್ಟ್ ತತ್ವಾನುಸಾರ ಪ್ರಜೆಗಳೆಲ್ಲರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದು ಸರಕಾರದ ಕರ್ತವ್ಯವಾಗಿರುತ್ತದೆ. ಆದರೆ ಬ್ರಿಟಿಷ್ ಸರಕಾರದ ವಿದೇಶಾಂಗ ಉಪಕಾರ್ಯದರ್ಶಿಗಳಾದ ಮಿ. ಕ್ರಿಸ್ಟೋಫರ್ ಮೇಹ್ಯೂ ಅವರು ಯು. ಕಾ. ಸಂಘದ ಆರ್ಥಿಕ ಸಮಿತಿಯ ಮುಂದೆ ಕೊಟ್ಟ ಹೇಳಿಕೆಯಲ್ಲಿ "ರಶ್ಯದಲ್ಲಿ ಕಡಿಮೆಯೆಂದರೆ 10 ಲಕ್ಷ ನಿರುದ್ಯೋಗಿಗಳಾದರೂ ಇದ್ದಾರೆ" ಎಂದು ತಿಳಿಸಿದರು. ಮೊಸ್ಕೊವಿನ ಒಂದು ಇಗರ್ಜಿಯ ಬಳಿಯಲ್ಲಿ ಇತ್ತೀಚೆಗೆ ಇಪ್ಪತ್ತೈದಕ್ಕೂ ಮಿಕ್ಕಿದ ಭಿಕ್ಷುಕರನ್ನು ಎಣಿಸಲಾಗಿದೆ. "ಎಲ್ಲರಿಗೂ ಉದ್ಯೋಗಕಲ್ಪಿಸುವ ಪೊಣೆ ಹೊತ್ತಿದೆಂದು ಹೇಳಲಾಗುವ ಸೋಷಿಯಟ್ ಸ್ರಚಾರಕರು ಇದಕ್ಕೇನು ಉತ್ತರ ಕೊಡುವರೊ" ಎಂದು ಅವರು ಪ್ರಶ್ನಿಸುತ್ತಾರೆ.

ಜಾತಿಭೇದ ನಿವಾರಣೆ

ಸರಕಾರ ಶಾಸನದಿಂದ ಸಾಧ್ಯವಿಲ್ಲ

ಇತ್ತೀಚೆಗೆ ವಾಜಿ ಕೊಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪ್ಲಾಸಿಯವರು ಜಾತಿ ಭೇದಗಳನ್ನು ನಿರ್ಮೂಲಿಸಲು ಸರಕಾರವು ಒಂದು ಶಾಸನವನ್ನು ಹೊರಡಿಸಬೇಕೆಂದು ಸೂಚಿಸಿದ್ದರು. ಆದರೆ ಮಹಾತ್ಮರ ಪಟ್ಟಶಿಷ್ಯರೆನಿಸುವ ಆಚಾರ್ಯ ವಿನೋಬಾ ಭಾವೆಯವರು ಅದಕ್ಕೆ ವಿರೋಧವಾದ ಅಭಿಪ್ರಾಯವನ್ನು ನಿರೂಪಿಸಿದರು. ಕೊಯಮುತ್ತೂರಿನ ಒಂದು ಪ್ರಾರ್ಥನಾ ಸಭೆಯಲ್ಲಿ ವಿನೋಬಾಜಿಯವರು ಶಾಸನದಿಂದ ಜಾತಿಮತವ್ಯತ್ಯಾಸಗಳನ್ನು ನೀಗುವುದು ಸಂದೇಹಾಸ್ಪದವೆಂದರು. ಶಂಕರಾಚಾರ್ಯರ ಅಭಿಪ್ರಾಯವನ್ನು ತಮ್ಮ ಅಭಿಪ್ರಾಯದ ಸಮರ್ಥನೆಗೆ ಉದ್ಧರಿಸುತ್ತಾ ಅವರು "ಇಂತಹ ಕ್ರಾಂತಿಯು ಹೃದಯ ನಿವೇದನೆಯಿಂದಲೇ ಸಾಧ್ಯ. ಕ್ಷಮಾಗುಣವೂ ನಮ್ಮಲ್ಲಿರಬೇಕಾದುದು ಆತ್ಯಾಪೇಕ್ಷೆ" ವೆಂದು ಅವರು ಬುದ್ಧನ ಮತ್ತು ಗಾಂಧಿಜಿಯ ನಿದರ್ಶನಗಳನ್ನು ನಿರೂಪಿಸಿದರು. ನೈತಿಕ ಶಕ್ತಿಯಿಂದಲ್ಲದೆ ಶಾಸನ ಬತ್ತಡದಾದ ಸಮಾಜಗಳಲ್ಲಿ ಸಮಾನತೆಯನ್ನು ಸ್ಥಾಪಿಸಲಾಗುವುದಿಲ್ಲವೆಂದವರು ತಿಳಿಸಿದರು.

"ಹರಿಜನರನ್ನು ಅಲಕ್ಷಿಸಲಾಗಿದೆ"

ಮಾಜಿಮಂತ್ರಿಗಳ ಆರೋಪ

ಒಮ್ಮಂದೊರು ಮಂತ್ರಿ ಮಂಡಳದಲ್ಲಿ ಹರಿಜನ ಮಂತ್ರಿಗಳಾಗಿದ್ದ ಶ್ರೀ ಕೂರ್ಮಯ್ಯನವರು ವಿಶಾಖಪಟ್ಟಣದಲ್ಲಿ ಸೇರಿದ ಆಂಧ್ರ ಸಂಘದ ವಾರ್ಷಿಕ ಸಭೆಯಲ್ಲಿ ಹರಿಜನರೆನ್ನು ಅಲಕ್ಷಿಸಿದೆ" ಎಂದು ಆರೋಪಿಸಿ ಅವರು ಮಂತ್ರಿಗಳಾಗಿದ್ದಾಗ ಒಂದು ಕೊಂಗ್ರೆಸ್ ಸಮಿತಿಯವರಾದರೂ ಅವರಿಗೆ ಮಾನಪತ್ರವನ್ನು ಕೊಡಲಿಲ್ಲವೆಂದೂ, ಉನ್ನತ ಜಾತಿಯವರೆನಿಸುವ ಮಂತ್ರಿಗಳಿಗೆ ಯಥೇಷ್ಟ ಮಾನ ಪತ್ರಗಳು ಸಮರ್ಪಿಸಲ್ಪಟ್ಟಿವೆಯೆಂದೂ ಅವರು ತಿಳಿಸಿದರು. "ಮುಂದಿನ ಚುನಾವಣೆಗಲ್ಲಿ ಹರಿಜನ ಪ್ರತಿನಿಧಿಗಳು ಕಾದಿಟ್ಟ ಸ್ಥಳಗಳನ್ನಲ್ಲದೆ ಸಾಮಾನ್ಯ ಸ್ಥಾನಗಳನ್ನು ಜಯಿಸಿಕೊಂಗ್ರೆಸ್ ಸಂಸ್ಥೆಯನ್ನು ಕೈವಶವಡಿಸಿಕೊಳ್ಳಬೇಕು." ಎಂದು ಅವರು ಸಲಹೆಯಿತ್ತರು.

ಬುದ್ಧನ ಅಮೂಲ್ಯ ತತ್ವಗಳು

ಭಾರತಮಾತೆಯ ಕಿರೀಟದ ರತ್ನ

ದಿಲ್ಲಿಯಲ್ಲಿ ಜರಗಿದ ಬುದ್ಧ ಜಯಂತ್ಯುತ್ಸವ ಸಮಾರಂಭದಲ್ಲಿ ಭಾಷಣವೀಯುತ್ತ ಗವರ್ನರ್ ಜನರಲ್ ರಾಜಾಜಿಯವರು "ಪ್ರಾಚೀನ ಭಾರತೀಯ ಜ್ಞಾನ ಸಂಪತ್ತು ಗರ್ಭದಿಂದ ಹುಟ್ಟಿದ ಉಜ್ವಲ ರತ್ನವೆ ಬೌದ್ಧ ಧರ್ಮ. ಅದು ಭಾರತ ಮಾತೆಯ ಕಿರೀಟದಲ್ಲಿ ಅತೀ ಶೋಭಾಯಮಾನವಾಗಿ ಪ್ರಕಾಶಿಸುವ ಮಣಿಯಾಗಿದೆ" ಹೀಗೆಂದು ಭಾಷಿಸಿದರು. ಭಾರತವು ಬ್ರಿಟಿಷ್ ಸಾಮ್ರಾಟನ ಕಿರೀಟದ ಪ್ರಕಾಶಮಾನವಾದ ವಜ್ರವೆಂದು ಹೇಳುವ ರೂಢಿಯನ್ನು ರಾಜಾಜಿಯವರು ಹೀಗೆ ಪರಿವರ್ತಿಸಿಕೊಂಡದ್ದು ಎಲ್ಲರ ಶ್ಲಾಘನೆಯನ್ನು ಗಳಿಸಿದೆ. ಆ ದಿನವರ ಭಾಷಣದ ಸಾರಾಂಶವು ಗಮಸೀಯವಾಗಿದೆ: "ಯಾವ ದಿಗ್ವಿಜಯಕ್ಕಿಂತಲೂ, ಅದೆಂತಹಲೌಕಿಕ ಸಂಪತ್ತಿಗಿಂತಲೂ ಮಿಗಿಲಾದುದು ಬುದ್ಧನು ಜಗತ್ತಿಗೆ ಬೋಧಿಸಿದ ಜೀವನತತ್ವಗಳು. ಭಾರತಕ್ಕೆ ಅವು ಅಮರ ಕೀರ್ತಿಯನ್ನು ತಂದವು. ಕೇವಲ ಮತ ವಿಧಿಗಳಿಂದಲೇ ಮನುಷ್ಯನು ತನ್ನನ್ನು ಉದ್ಧರಿಸಿಕೊಳ್ಳಲಾರ. ಇಲ್ಲವೆ ಶರೀರವನ್ನು ಅತೀವ ಸಂಕಲ್ಪಕ್ಕೊಳಪಡಿಸುವುದರ ಮೂಲಕವೂ ಅದು ಸಾಧ್ಯವಿಲ್ಲ. ಸುವಿಚಾರ ಸತ್ಕರ್ಮ, ಸುಭಾಷಿತಗಳಿಂದಲೇ ನಮ್ಮ ರಕ್ಷಣೆಯಾಗಬಲ್ಲದು. ಜೀವನದ ಕುರಿತು ಹೆಚ್ಚಿನ ರಹಸ್ಯಗಳ ಕುರಿತು ಬುದ್ಧದೇವನು ಇನ್ನೇನೂ ಹೇಳಿಲಯಸಲಿಲ್ಲ. ಅಂದೂ ಇಂದೂ ಇದು ಸರಿಯೆನಿಸುವುದು. ವಿಶ್ವದ ಅಂತಿಮ ರಹಸ್ಯವನ್ನು ತಿಳಿಕೊಳ್ಳುವುದು ಕಷ್ಟತರವಾದುದು. ನಮ್ಮ ಅಸರಿಪೂರ್ಣ ಮನಸ್ಸುಗಳಿಗೆ ಅದು ಮುಚ್ಚಿದ ಕೋಣೆಯಂತಿರುವುದು. ಎಲ್ಲಾ ಪ್ರಾಣಿಗಳಲ್ಲೂ ದಯಾಭಾವನವನ್ನು ಕಾಳಲು ನಾವು ಇಂದಿನ ಬುದ್ಧ ಪೂರ್ಣತಿಥಿಯಂದೇ ಸಿರ್ಧರಿಸಬೇಕು. ಮನಸ್ಸು, ಮಾತು ಮತ್ತು ಮಾಡುವಿಕೆಗಳಲ್ಲಿ ನಾವು ಕ್ರೂರ ವಿಚಾರಗಳನ್ನು ತ್ಯಜಿಸಬೇಕು. ನಾವು ಕೆಲವೊಂದು ಸಲ ದಾರಿ ತಪ್ಪಿದರೆ ಅದಕ್ಕಾಗಿ ವಿಶ್ಚಾತಾಪಪಡೋಣ. ಕಾರಣ ಆದರಿಂದ ನಮ್ಮ ಮನಸ್ಸುಗಳು ಪರಿಶುದ್ಧವಾಗುವುವು. ಮತ್ತೆ ಪುನಃ ಪಾಪದಿಂದ ನಾವು ರಕ್ಷಿಸಲ್ಪಡುತ್ತೇವೆ."

ನಿರಾಶ್ರಿತರಿಗೆ ಧರ್ಮಾರ್ಥ ಆಹಾರ

ಗುಡಿಕೈಗಾರಿಕೆಗಳ ಸ್ಥಾಪನೆ

ನಿರಾಶ್ರಿತರ ಶಿಬಿರಗಳಲ್ಲಿನ ಜನರು ಈಗ ಬಹಳ ಕಾಲದಿಂದ ಧರ್ಮಾರ್ಥ ಪೋಷಣೆ ಜನರಲ್ಲಿ ಸಹಜವಾದ ಮೈಗಳ್ಳತನ ಅಲಸ್ಯಗಳು ತಲೆದೋರಿದ್ದು ಕಂಡು ಬಂತು. ಮುಂದೆಯೂ ಹೀಗೆ ಮುಂದರಿದರೆ ಈ ಜನರು ನಿರುಪಯುಕ್ತ ಜೀವಿಗಳಾಗಿ ಸರಕಾರಕ್ಕೂ ದೇಶಕ್ಕೂ ಒಂದು ಹೊರೆಯೆಯಾಗುವರು ಎಂದು ಮನಗಂಡು ನಿರಾಶ್ರಿತರ ಪುನರ್ವಾಲಸೆಯು ತೊತೆಯುವರು ಇದೇ ಬರುವ ಅಕ್ಟೋಬರ ತಿಂಗಳಾಂತ್ಯದಿಂದ ಯಾರಿಗೂ ಪುಕ್ಕಟೆ ಆಹಾರ ವಿತರಿಸಲಾಗುವುದಿಲ್ಲವೆಂದು ನಿರ್ಧರಿಸಿರುವರು. ಈ ಅವಧಿಯೊಳಗೆ ನಿರಾಶ್ರಿತರಿಗೆ ಕೂಲಿ ಸಂಪಾದನೆ ಮಾಡುವ ಕೆಲಸಗಳನ್ನು ಸಿದ್ಧಗೊಳಿಸಲಾಗುವುದು. ಇದರಿಂದ ಜನಾಂಗದ ಪುನರ್ರಚನೆಯ ಕಾರ್ಯಕ್ಕೂ ಸಹಾಯವಾಗುವುದು.

ಅರಬ ದುರೀಣರ ಸತ್ಯಾಗ್ರಹ

ಲಿಬಿಯದ ಟ್ರಿಪೊಲಿಟೇನಿಯದ ಏಪ್ರಿಂತ್ಯನನ್ನು "ಇಟಲಿಯನ್ ಕನಾಯಿ"ಗಳ ಕೈಗಿತ್ತರೆ ತಾವು ಸಂಪೂರ್ಣ ಅಸಹಕಾರದ ಘೋರಣೆಯನ್ನು ವಹಿಸುವುದಾಗಿ ಲಿಬಿಯದ ಪ್ರಮುಖ ಜನತಾ ಧುರೀಣರೂ ಸ್ವಭಾವಿಕ ವರ್ತಕರೂ ಅಮೇರಿಕನ್ ಸರಕಾರಕ್ಕೆ ತಿಳಿಯಪಡಿಸಿರುವರು. ಹತ್ತು ವರ್ಷಗಳ ತನಕ ಈ ನಾಜಿ ಇಟಲಿಯನ್ ವಸಾಹತುಗಳನ್ನು ಬ್ರಿಟನ್, ಫ್ರಾನ್ಸ್ ಮತ್ತು ಇಟಲಿಗಳು ಹಂಚಿ ಆಳಲು ಒಂದು ಯೋಜನೆಯನ್ನು ಯುಕ್ತರಾಷ್ಟ್ರ ಸಂಘದಲ್ಲಿ ಮಂಜೂರು ಮಾಡಿಸಿರುವರು.

ಹಿಂದೀ ಆಫ್ರಿಕನ್ ತ್ವೇಷ

ದ. ಆಫ್ರಿಕದ ಡರ್ಬಾನ್ ನಗರದಲ್ಲಿ ಕೆಲ ತಿಂಗಳ ಹಿಂದೆ ಸಡೆದ ಹಿಂದೀ ಆಫ್ರಿಕಾನ್ ದಂಗೆಯು ತ್ವೇಷವು ತಣಿದಂತೆ ತೋರುವುದಿಲ್ಲ. ಕೆಲ ದಿನಗಳ ಹಿಂದೆ ಮೊತ್ತೆ ಕೆಲ ಆಫ್ರಿಕಾನ್ ಪುಂಡರು ಹಿಂದೀಯ ಸಿಟಿ ಬಸ್ಸುಗಳ ಮೇಲೆ ಕಲ್ಲೆಸೆತವನ್ನು ಮಾಡಿದರು. ಅಲ್ಲಿನ ನಗರ ಸಭೆಯ ಬಸ್ಸುಗಳ ಸಂಖ್ಯೆ ಕಡಿಮೆ ಮಾಡಲ್ಪಟ್ಟಿದಕ್ಕೆ ಹಿಂದೀಯರು ವಿಶೇಷ ಲ್ಯಾಸನ್ಸನ್ನು ಪಡೆದು ತಮ್ಮದೇ ಬಸ್ಸುಗಳನ್ನು ಓಡಾಡಿಸುತ್ತಿದ್ದರು. ಹಿಂದೀ ಬಸ್ಸುಗಳಲ್ಲಿ ಆಫ್ರಿಕಾನರು ಕುಳಿತು ಕೊಳ್ಳುವುದಿಲ್ಲ. ಬಿಳಿಯರ ಘೋರಣೆಯಿಂದ ಅಲ್ಲಿನ ಹಿಂದೀ ಆಫ್ರಿಕಾನರೊಳಗೆ ಮನಸ್ತಾಪವು ಹೆಚ್ಚುತ್ತಲಿದೆ. ಇದಕ್ಕೆ ಅವ್ಯತ್ಯಕ್ಷವಾಗಿ ಬಿಳಿಯರ ಪ್ರೋತ್ಸಾಹವಿದೆಯೆನ್ನಲಾಗಿದೆ.

ಬರ್ಲಿನ್ ದಿಗ್ಬಂಧನದ ಮುಕ್ತ್ಯಾಯ

ಜರ್ಮನ್ ಸ್ವಾತಂತ್ರೋದಯ

ಇಂದಿಗೆ ಒಂದು ವರ್ಷದಿಂದ ದಿಗ್ಬಂಧನಕ್ಕೊಳಗಾದ ಬರ್ಲಿನ್ ನಗರದ ಸಂಕಷ್ಟವು ಇತ್ತೀಚೆಗೆ ಶಕ್ತಿರಾಷ್ಟ್ರಗಳ ಒನ್ಮತದ ಒಪ್ಪಂದದಿಂದ ಸುಕ್ತರ್ಥವಾಯಿತು. ಅಲ್ಲಿನ ಅಮೇರಿಕನ್ ಸೇನಾಪತಿಗಳಾಗಿದ್ದ ಜನರಲ್ ಕ್ಲೇ ಅವರು ಜರ್ಮನರನ್ನುದ್ದೇಶಿಸಿ "ನೀವು ಇಂದು ನಿಮ್ಮ ಸ್ವಾತಂತ್ರ್ಯವನ್ನು ಪುನಃ ಗಳಿಸಿಕೊಂಡ್ತಿರಿ. ಅದನ್ನು ಕೈಬ್ಡೆಯಿಂದ ಕಾಯ್ದುಕೊಳ್ಳಲು ಮರೆಯದಿರಿ." ಎನ್ನುವಾಗ ಅವರ ಕಣ್ಣುಗಳಿಂದ ಆನಂದ ಭಾಷ್ಪಗಳು ಉದುರಿದುವಂತೆ. ಸ್ವತಂತ್ರವಾದ ಜರ್ಮನಿಯಲ್ಲಿ ಇನ್ನೊಬ್ಬ ಹಿಟ್ಲರನ ಉದಯವಾಗದೆ ಎಂದು ಅಂತರಾಷ್ಟ್ರೀಯ ರಾಜಕೀಯ ತಜ್ಞರು ಕಂಕಿಸುತ್ತಿರುವರು. ಸೋವಿಯಟ್ ರಶ್ಯದ ಮೇಲೆ ಜರ್ಮನಿಂಗೆ ತುಂಬಾ ಮನಸ್ಕ್ಲೇಶವೂ ಇದೆ.

ಸ್ವದೇಶಾಭಿಮಾನಿ

ಕಾರೀಕು 3—6—1949

ಪ್ರತ್ಯೇಕ ಪ್ರಾತಿನಿಧ್ಯ ರದ್ದತಿ

ರಾಜ್ಯಾಂಗ ಘಟನಾ ಸಮಿತಿಯಲ್ಲಿ ಈ ವಾರದಲ್ಲಿ ಅತ್ಯಂತ ಮಹತ್ವದ ತೀರ್ಮಾನವೊಂದು ಮಂಜೂರಾಯಿತು. ಕಡಮೆ ಸಂಖ್ಯಾಕ ಜಾತಿಯವರಿಗೆ ಶಾಸನ ಸಭೆಗಳಲ್ಲಿ ಪ್ರತ್ಯೇಕಿಸಿಡುವ ಸ್ಥಾನಗಳ ವದ್ಧತಿಯನ್ನು ನುಚ್ಚಾಯಗೊಳಿಸಲಾಯಿತು.

ಪ್ರತ್ಯೇಕ ಮತದಾನ ಪದ್ಧತಿಯನ್ನು ಘಟನಾ ಸಮಿತಿಯು ಈ ಮೊದಲೇ ರದ್ದುಗೊಳಿಸಲು ನಿರ್ಣಯ ಮಾಡಿತ್ತು. ಆದರೆ ಪ್ರತ್ಯೇಕಿಸಿಡುವ ಪ್ರಾತಿನಿಧ್ಯಸ್ಥಾನಗಳನ್ನು ಸದ್ಯಕ್ಕೆ ಮುಂದರಿಸದೆ ನಿಲ್ಲಿಸಿಬಿಡುವ ಪ್ರವೃತ್ತಿ ಇಲ್ಲವೆಂದು ಈ ಮೊದಲು ನಿರ್ಣಯವಾಗಿತ್ತು. ಈಗ ಈ ನಿರ್ಣಯವನ್ನು ಪುನರಾಲೋಚಿಸಿ ಆ ವದ್ಧತಿ ಇನ್ನು ಅಗತ್ಯವಿಲ್ಲವೆಂದು ತೀರ್ಮಾನಿಸಲಾಯಿತು.

ಆದರೆ ಹಿಂದುಳಿದ ಶೆಡ್ಯೂಲ್ ಕಾಸ್ಟ್ ವಂಗಡಗಳಿಗೆ ಮತ್ತು ಇದೇ ಪರಿಸ್ಥಿತಿಯಲ್ಲಿರುವ ಸೀಖ ಜನರ ಕೆಲವು ವಂಗಡಗಳಿಗೆ ಕೆಲವು ಸ್ಥಾನಗಳನ್ನು ಪ್ರತ್ಯೇಕಿಸಿಡುವುದು ಅಗತ್ಯವೆಂದು ಈ ರೀತಿ ಇನ್ನು ಹತ್ತು ವರ್ಷಗಳ ತನಕ ಇವರಿಗೆ ಈ ರಿಯಾಯಿತಿ ತೋರಿಸತಕ್ಕದೆಂದು ತೀರ್ಮಾನವಾಗಿರುತ್ತದೆ.

ಕಡಮೆ ಸಂಖ್ಯಾಕರ ಹಕ್ಕು ರಕ್ಷಣೆಗಳ ಈ ಕುರಿತಾದ ಉಪಸಮಿತಿಯೊಂದನ್ನು ಘಟನಾಸಮಿತಿಯು ಶ್ರೀ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ನೇಮಿಸಿತ್ತು. ಈ ಸಮಿತಿಯ ಸರ್ವ ಸಮ್ಮತ ವರದಿಯನ್ನು ಘಟನಾ ಸಮಿತಿಯು ಮುಂದಿಟ್ಟು ಶ್ರೀ ವಲ್ಲಭಭಾಯಿಯವರು ಸೂಚಿಸಿದಂತೆ ಈ ಸುಧಾರಣೆ ಮಂಜೂರು ಮಾಡಲಾಗಿದೆ.

ಕಡಮೆ ಸಂಖ್ಯಾಕ ಜಾತಿಯವರ ಅಂದರೆ ಮುಸ್ಲಿಮ, ಕ್ರೈಸ್ತ, ಆಂಗ್ಲೊ ಇಂಡಿಯನ್ ಇತ್ಯಾದಿಯವರ ಸೂಚನೆಯ ಮೇರೆಗೇನೆ ಈ ವರದಿ ತಯಾರಿಸಲ್ಪಟ್ಟಿತ್ತೆಂಬುದು ಭಾವೀ ಕಲ್ಯಾಣ ಸೂಚಕವೆನ್ನಲು ಅಡ್ಡಿಯಿಲ್ಲ.

ಘಟನಾ ಸಮಿತಿಯ ಸಭೆಯಲ್ಲಿ ಇದನ್ನು ವಿರೋಧಿಸಿದವರಿಲ್ಲವೆಂದಲ್ಲ. ಮದ್ರಾಸಿನ ಅಲ್ ಇಂಡಿಯಾ ಮುಸ್ಲೀಮ್ ಲೀಗ್ ಅಧ್ಯಕ್ಷ ಮಹಮ್ಮದ ಇಸ್ಮಾಯಿಲರು ಪ್ರತ್ಯೇಕಿಸಿಡುವ ಪ್ರತಿನಿಧಿ ಸ್ಥಾನಗಳು ಬೇಕೆಂದು ಮಾತ್ರವಲ್ಲ; ಪ್ರತ್ಯೇಕ ಮತದಾನ ಪದ್ಧತಿ ಕೂಡಾ ಬೇಕೆಂದು ವಾದಿಸಿದರು. ಅಂದರೆ ಮುಸ್ಲಿಮ ಪ್ರತಿನಿಧಿಗಳಿಗೆ ಮುಸ್ಲಿಮರೇ ಮತ ಕೊಟ್ಟು ಆರಿಸುವ ಪದ್ಧತಿ. ಆದರೆ ಘಟನಾ ಸಮಿತಿಯಲ್ಲಿಯು ಎಲ್ಲಾ ಮುಸ್ಲಿಮ ಪ್ರತಿನಿಧಿಗಳೆಂಬಂತೆ ಎಲ್ಲರೂ ಈ ಅಭಿಪ್ರಾಯ ತಮ್ಮದಲ್ಲವೆಂದು ಸ್ಪಷ್ಟಪಡಿಸಿದರು.

ಜಾತೀಯ ದೃಷ್ಟಿಯಿಂದ ಕಡಮೆ ಸಂಖ್ಯಾಕರಿದ್ದವರಿಗೆ ಸ್ಥಾನಗಳನ್ನು ಪ್ರತ್ಯೇಕಿಸಿಡುವುದರಿಂದ ಮುಂದೆ ಏನಾದರೂ ಪ್ರಯೋಜನವಿದೆಯೇ?

ಉದಾಹರಣೆಗೆ ಮುಸ್ಲಿಮರಿಗೆ ಅಥವಾ ಕ್ರೈಸ್ತರಿಗೆ ಅವರವರ ಜನ ಸಂಖ್ಯೆಗನುಗುಣವಾಗಿ ಕೆಲವು ಸ್ಥಾನಗಳನ್ನು ಪ್ರತ್ಯೇಕಿಸಿಟ್ಟಿತೆಂದು ಭಾವಿಸೋಣ. ಇದರ ಪರಿಣಾಮ ಇವರು ಮುಂದೆ ಎಂದೆಂದಿಗೂ ಶಾಸನ ಸಭೆಗಳಲ್ಲಿ ಕಡಮೆ ಸಂಖ್ಯಾಕ ಜಾತೀಯ ವಕ್ತನಾಗಿಯೇ ಉಳಿಯಬೇಕಾಗುವುದು. ಅಂದರೆ ದೇಶದ ಆಡಳಿತೆ ಬಹು ಸಂಖ್ಯಾಕರ ಕೈಗೇನೆ ಹೋಗುವುದರಿಂದ, ಇವರಿಗೆ ಆಡಳಿತೆಯಲ್ಲಿ ಭಾಗ ಪಡೆಯುವ ಸಂದರ್ಭವೇ ಬರುವಂತಿಲ್ಲ.

ಬ್ರಿಟಿಷರಂತಹ ಮೂರನೆ ಸಂಗಡದ ಕೈಯಲ್ಲಿ ಆಡಳಿತೆ ಇದ್ದಿದ್ದರೆ ಅವರು ಭೇದೋಪಾಯಕ್ಕಾಗಿ ಈ ಕಡಮೆ ಸಂಖ್ಯಾಕರನ್ನು ಆಗಿಂದಾಗ್ಗೆ ಎತ್ತಿ ಹಿಡಿಯುವ ಸಂಭವವಿತ್ತು. ಈಗಂತೂ ಆವಶ್ಯಕವಿಲ್ಲ. ಅಂದ ಮೇಲೆ ಈ ಸದ್ಯದ ಕಡಮೆ ಸಂಖ್ಯಾಕ ಜಾತಿಯವರಿಗೆ ಅವಗುಣ ಮಾಡುವಂಥಾದ್ದಲ್ಲವೆ ಯಾವ ಉಪಯೋಗವುಳ್ಳದ್ದೂ ಅಲ್ಲ.

ಶಾಸನ ಸಭೆಗಳಲ್ಲಿಯು ವಕ್ತವಂಗಡಗಳು ಜಾತೀಯ ಕ್ರಮ ಅನುಸರಿಸುವ ಬದಲು ಅವರವರ ಧೋರಣೆಯನ್ನನುಸರಿಸುವಂತಾದರೆ ಮುಸ್ಲಿಮ ಅಥವಾ ಕ್ರೈಸ್ತರು ಬಹು ಸಂಖ್ಯಾಕ ವಕ್ತದಲ್ಲಿರಲು ಯಾವ ಆತಂಕವೂ ಇಲ್ಲ- ಇವರಿಗೆ ಆಡಳಿತೆಯಲ್ಲಿ ನ್ಯಾಯವಾದ ಭಾಗೆ ಸಿಕ್ಕುವ ಸಂದರ್ಭವಿದೆ. ಒಂದು ವೇಳೆ ಇವರು ಕಡಮೆ ಸಂಖ್ಯಾಕ ವಂಗಡದಲ್ಲಿದ್ದರೂ ಇಂದಿನ ಕಡಮೆ ಸಂಖ್ಯಾಕ ವಂಗಡ ನಾಳೆ ಬಹು ಸಂಖ್ಯಾಕವಾಗೆ ಬಾರದೆಂದಿಲ್ಲ.

ಆದುದರಿಂದ ರಾಜ್ಯದ ಆಡಳಿತೆ ವದ್ಧತಿ ಜಾತೀಯ ಕ್ರಮ ಬಿಟ್ಟರೀನೇ ಕಡಮೆ ಸಂಖ್ಯಾಕ ಜಾತಿಯವರಿಗೆ ಶ್ರೇಯಸ್ಕರವೆಂಬುದು ಸ್ಪಷ್ಟನಿರುತ್ತದೆ.

ಎಲ್ಲಾ ಧರ್ಮದನರು ಅವರವರ ಧರ್ಮದಂತೆ ವರ್ತಿಸಲು ಯಾವ ತಡೆಯೂ ಇಲ್ಲವೆಂದು ಎಲ್ಲಾ ವ್ರತಿಗಳ ಹಕ್ಕುಗಳನ್ನು ಪ್ರತ್ಯೇಕವಾಗಿ ಸ್ಪಷ್ಟಗೊಳಿಸಿರುವಾಗ ಕಡಮೆ ಸಂಖ್ಯಾಕ ಜಾತಿಯವರು ರಾಜಕೀಯ ರಂಗದಲ್ಲಿ ಜಾತೀಯ ಕ್ರಮ ಕಟ್ಟಿಕೊಳ್ಳುವುದಲ್ಲಿ ಯಾವ ಸಾರ್ಥಕತೆಯೂ ಇಲ್ಲ.

ಈ ಪರಿಸ್ಥಿತಿ ಸರಿಯಾಗಿ ವಿಚಾರಿಸಿ ತಿಳಿದುಕೊಂಡುದರಿಂದಲೇ ಘಟನಾ ಸಮಿತಿಯಲ್ಲಿಯ ಕಡಮೆ ಸಂಖ್ಯಾಕ ಜಾತಿ ಪ್ರತಿನಿಧಿಗಳು ತಮ್ಮ ಸ್ವೇಚ್ಛೆಯಿಂದಲೇ ಈ ಸುಧಾರಣೆ ಮುಂದೆ ತರಲು ಕಾರಣವಾಯಿತು. ಕಡಮೆ ಸಂಖ್ಯಾಕ ಜಾತಿಯವರಿಗೆ ಸನಾಧಾನವಾಗುವಲ್ಲಿ ತನಕ ಈ ಸುಧಾರಣೆ ಪಿತ್ಯಾಯದಿಂದ ಕರುವುದು ಯೋಗ್ಯವಲ್ಲವೆಂಬುದರಿಂದ ಈ ಮೊದಲು ಘಟನಾ ಸಮಿತಿ ಪ್ರತ್ಯೇಕ ಪ್ರಾತಿನಿಧ್ಯ ಪದ್ಧತಿ ಸ್ವಲ್ಪ ಸಮಯ ಇಟ್ಟುಕೊಳ್ಳಲು ಒಪ್ಪಿತ್ತು. ಬಹು ಸಂಖ್ಯಾಕ ಜಾತಿಯವರು ತಮ್ಮ ಕಡೆಗೆ ನ್ಯಾಯಪಕ್ಷ ವರ್ತಿಸುತ್ತಿದ್ದಾರೆಂಬ ವಿಶ್ವಾಸ ಬಂದುದರಿಂದ ಇಂದು ಈ ಸುಧಾರಣೆ ಸಾಧ್ಯವಾದೀತು.

ಇನ್ನೂರು ವರ್ಷಗಳಿಂದ ಬ್ರಿಟಿಷರು ಈ ದೇಶದಲ್ಲಿ ಬಿತ್ತಿನ ಭೇದಭಾವ ಇಂದಿಗೆ ಅಳಸಿ ತೆಗೆದಂತಾಯಿತು. ರಾಜ್ಯದ ಆಡಳಿತದ ದೃಷ್ಟಿಯಿಂದ ಮುಂದೆ ಹಿಂದು ಮುಸ್ಲಿಮ ಇತ್ಯಾದಿ ಭೇಧಭಾವವಿಲ್ಲದೆ ಎಲ್ಲರೂ ಭಾರತೀಯರೆಂಬ ಭಾವನೆ ಮುಂದೆ ಬಂದಿರುತ್ತದೆ.

ಮೇಲೆ ಕಾಣಿಸಿದ ಉಪಸಮಿತಿಯ ಅಧ್ಯಕ್ಷತೆ ವಹಿಸಿದ ಶ್ರೀ ವಲ್ಲಭಭಾಯಿ ಪಟೇಲರು ಕಡಮೆ ಸಂಖ್ಯಾಕರ ಪ್ರತಿನಿಧಿಗಳನ್ನು ತಮ್ಮ ನಿಶ್ಶಾಸದಿಂದ ಒಲಿಸಿಕೊಂಡು ಈ ಸುಧಾರಣೆ ತರಲು ಬಹಳ ಮಟ್ಟಿನ ಕಾರಣಕೆಂದರೆ ಅತಿಶಯೋಕ್ತಿ ಇಲ್ಲ. ಏನೂ ರಕ್ಕೆ ಮೇಲ್ಪಟ್ಟ ಸಂಸ್ಥಾನಗಳನ್ನು ಭಾರತದಲ್ಲಿ ಒಂದುಗೂಡಿಸಿದ ಇವರ ಮಹಾ ಕಾರ್ಯ ಎಷ್ಟು ಮಹತ್ವದ್ದಿದೆಯೋ ಅದಕ್ಕೂ ಒಂದು ತೂಕ ಹೆಚ್ಚಿನ ಮಹತ್ವದ ಕಾರ್ಯ ಈ ಸುಧಾರಣೆಯೆಂದು ಕಂಡೋಕ್ತನಾಗಿ ಹೇಳಬಹುದು. ಇದರಿಂದ ಭಾರತದಲ್ಲಿಯ ರಾಜಕೀಯ ರಂಗದಲ್ಲಿ ಭೇದ ಭಾವವುಳಿಯುವಂತೆ ಸಾಧಿಸಲಾಗಿದೆ.

ಈ ವ್ಯಕ್ತಿಯ ಕುರಿತು ಚರ್ಚೆ ನಡೆವಾಗ ನಮ್ಮ ಪ್ರಧಾನ ಸಚಿವ ಪಂಡಿತ ಜವಾಹರಲಾಲ ನೆಹರು ಅವರು ಎದ್ದು ನಿಂತು ಈ ಐತಿಹಾಸಿಕ ಸುಧಾರಣೆ ನಡೆಯುವಾಗ ತಾನೂ ಸಹಭಾಗಿಯಾಗಲು ಆಶಿಸಿ ನಾಲ್ಕು ಮಾತು ಹೇಳಿದರು. ಕಡಮೆ ಸಂಖ್ಯಾಕರು ರಾಷ್ಟ್ರೀಯ ಪ್ರವಾಹದಲ್ಲಿ ಸೇರುವಂತಾಗ ದಿದ್ದರೆ ಅವರಿಗೇನೆ ಅಹಿತವಾಗುತ್ತಿತ್ತು. ಈಗ ಅವರು ಎಲ್ಲರೊಡನೆ ಸೇರಿ ವರ್ತಿಸಲು ಮಾಡಿದ ನಿರ್ಣಯ ದೇಶದ ಭಾವೀ ಕಲ್ಯಾಣ ಸೂಚಕವೆಂದರು.

ಕಡಮೆ ಸಂಖ್ಯಾಕ ಜಾತಿಯವರಿಲ್ಲರೂ ಈ ಮಹತ್ವದ ನಿರ್ಣಯದ ಸರಿಯಾದ ಅಭಿಪ್ರಾಯ ತಿಳಿದುಕೊಳ್ಳುವುದು ಅತ್ಯಗತ್ಯವಿರುತ್ತದೆ.

ಟೀಕೆ-ಟಿಪ್ಪಣಿಗಳು

ಸಾಂಬಶಿವಮ್ಮನ ಗತಿಯೇನು?

ಮಲಯದಲ್ಲಿ ಗಣನತಿಯೆಂಬ ಭಾರತೀಯನನ್ನು ಗಲ್ಲಿಗೇರಿಸಿದ್ದರಷ್ಟೆ. ಈಗ ಸಾಂಬಶಿವಮ್ ಎಂಬ ಇನ್ನೊಬ್ಬ ಮಜೂರ ಮುಖಂಡನ ಮೇಲೆ ಅದೇ ಬಗೆಯ ತಕ್ಷೀರಿಗಾಗಿ ಅಂದರೆ ರಿವೊಲ್ವರ್ ಇಟ್ಟುಕೊಂಡ ಬಗ್ಗೆ ಮರಣದಂಡನೆಯ ಶಿಕ್ಷೆ ವಿಧಿಸಲಾಗಿದೆ. ಪ್ರಥಮ ತನಖೆಯಲ್ಲಿ ಎಸ್ಸೈಸರ್ರೆಲ್ಲ ಇವನು ತಪ್ಪಿತಸ್ಥನಲ್ಲವೆಂದೂ ಬಿಡುಗಡೆ ಮಾಡಬೇಕೆಂದೂ ಅಭಿಪ್ರಾಯಪಟ್ಟರೂ ಜಡ್ಜರು ಪುನಃ ತನಖಿ ನಡೆಸಲು ಆಜ್ಞೆ ಇತ್ತಿರು. ಎರಡನೆ ತನಖೆಯಲ್ಲಿ ಮರಣದಂಡನೆ ಶಿಕ್ಷೆ ವಿಧಿಸಲ್ಪಟ್ಟಿತು. ಅಪ್ಪೀಲು ತೆಗೆದು ಹಾಕಲಾಯಿತು. ಈಗ ಅಲ್ಲಿಯ ಸುಲ್ತಾನರು ಈ ಶಿಕ್ಷೆ ರದ್ದುಮಾಡಬೇಕಾಗಿ ಕೇಳಲಾಗಿತ್ತು. ಸುಲ್ತಾನರು ಯಾರೋ ಏನು ಪ್ರಪಾಸಕ್ಕೆ ಹೊರಟಿರುವರಂತೆ. ತಿಳಿದಾಗಿಮಾಡುವ ವಿಚಾರ ಇವರು ಯಾವ ತೀರ್ಮಾನ ಹೇಳಿರುವರೆಂದು ಇನ್ನೂ ತಿಳಿದಿಲ್ಲ. 27 ವರ್ಷ ಪ್ರಾಯದ ಸಾಂಬ ಶಿವನ್" ಇವನನ್ನು ಗಲ್ಲಿಗೇರಿಸುವರೆ? ಮಲಯದಲ್ಲಿ ನಿಜವಾದ ಅಧಿಕಾರ ನಡೆಸುವ ಬ್ರಿಟನು ಈ ಕುರಿತು ಏನು ಮಾಡುವುದೋ ನೋಡಲಿಕ್ಕಿದೆ.

ಯುನ್ಯಾಟೆಡ್ ನೇಶನ್ಸ್ ಸಭೆಯಲ್ಲಿ ಪ್ರಾರ್ಥನೆ

ಇನ್ನು ಮುಂದೆ ಯುನ್ಯಾಟೆಡ್ ನೇಶನ್ಸಿನ ಸಭೆಗಳನ್ನು ಆರಂಭಿಸುವಾಗ ಎಲ್ಲರೂ ಎದ್ದು ನಿಂತು ಒಂದು ನಿಮಿಟು ಮೌನ ಪ್ರಾರ್ಥನೆ ನಡೆಸಬೇಕೆಂದು ಏರ್ಪಾಡಾಗಿರುತ್ತದೆ. ಜಗತ್ತಿನ ಎಲ್ಲಾ ಮತಪಂಥದವರು ಸೇರುವಲ್ಲಿ ಮೌನ ಪ್ರಾರ್ಥನೆಯ ಕ್ರಮ ಅನುಸರಿಸಿದ್ದು ಉಚಿತವೇ ಇರುತ್ತದೆ. ಅಂತೂ ಜಗತ್ತಿನ ಶಾಂತಿ ರಕ್ಷಣೆಯ ಕಾರ್ಯ ಭಾರ ಹೊತ್ತ ಈ ಸಂಸ್ಥೆ ತನ್ನ ಸಭೆಗಳನ್ನು ಪ್ರಾರ್ಥನೆಯೊಂದಿಗೆ ಆರಂಭಿಸಲು ಮಾಡಿರುವ ಈ ಏರ್ಪಾಡು ಬಹಳ ಉಚಿತವಿದ್ದು ಮುಂದಾದರೂ ಇದರಿಕಾರ್ಯಗಳು ಯಶಸ್ವಿಯಾಗುವಂತೆ ಸಹಾಯ ಮಾಡಬಹುದಷ್ಟೆ.

ಮೆಕ್ ಆರ್ಥರರ ಮಿಶನರೀ ಕೆಲಸ

ಜಪಾನನ್ನು ಸುಧಾರಿಸಲು ಹೊರಟಿರುವ ಅಮೇರಿಕನ್ ಯೋಧಶ್ರೇಷ್ಠ ಮೆಕ್ ಆರ್ಥರರು ಜಾಪಾನಿನ ಜನರನ್ನು ಕ್ರೈಸ್ತರನ್ನಾಗಿ ಮಾಡಲು ಹೊರಟಿರುವರಂತೆ. ಈ ಬಗ್ಗೆ ಮೂವತ್ತು ಮಿಲಿಯ ಬ್ಯಾಬಲ್ ಗ್ರಂಥದ ಪ್ರತಿಗಳನ್ನು ಕಳುಹಿಸಿಕೊಡಲು ಕೇಳಿರುವರಂತೆ. ಯುದ್ಧಪ್ರಿಯ ಜಪಾನು ಶಾಂತಿಯನ್ನು ಕಲಿತು ಸುಧಾರಣೆ ಹೊಂದಬೇಕಾದರೆ ಅನರೆಲ್ಲ ಕ್ರೈಸ್ತರಾಗುವುದೊಂದೇ ದಾರಿಯೆಂಬುದು ಮೆಕ್ ಆರ್ಥರರ ತೀರ್ಮಾನ. ಎಟಮ್ ಬಾಂಬಿನಿಂದ ಜಪಾನನ್ನು ಜಯಿಸಿ ಆಡಳಿತೆ ಸೂತ್ರ ಕೈಯಲ್ಲಿ ಹಿಡಿದು ಈ ರೀತಿ ಕ್ರೈಸ್ತ ಮತ ಬಲಾತ್ಕಾರದಿಂದ ಹೊರಸುಪುದು ಧರ್ಮ ಸ್ವಾತಂತ್ರ್ಯದ ಈ ಯುಗದಲ್ಲಿ ಸರಿಯೆಂದು ಯಾರೂ ಹೇಳಲಾಪರು. ಜಪಾನಿನಲ್ಲಿ ಹೆಚ್ಚಿನ ಜನರು ಬೌದ್ಧಮತದವರು. ಇವರೆಲ್ಲರನ್ನೂ ಕ್ರೈಸ್ತರನ್ನಾಗಿ ಒತ್ತಾಯದಿಂದ ಪರಿವರ್ತಿಸಲೇಕೆ? ಕಳೆದ ಎರಡು ಮಹಾಯುದ್ಧ ನಡೆಸಿದವರು ಕ್ರೈಸ್ತರಲ್ಲವೆ?

ಜರ್ಮನಿಯ ಸಮಸ್ಯೆ

ಜರ್ಮನಿಯ ಮುಂದಿನ ಆಡಳಿತೆ ಹೇಗೆ ನಡೆಯಬೇಕೆಂಬ ಬಗ್ಗೆ ಅಮೇರಿಕ, ಬ್ರಿಟನ್, ಫ್ರಾನ್ಸ್ ಮತ್ತು ರಸ್ಯಾ ಈ ನಾಲ್ಕು ದೊಡ್ಡ ರಾಷ್ಟ್ರಗಳೊಳಗೆ ಮಾತುಕತೆ ನಡೆಯುತ್ತಿದೆ. ಪಶ್ಚಿಮ ಜರ್ಮನಿಯ ರಾಜಕೀಯ ಮುಂದಾಳುಗಳನ್ನು ಬೊನ್ನ್ ಎಂಬಲ್ಲಿ ಕೂಡಿಸಿ ಇದೀ ಜರ್ಮನಿಯ ಬಗ್ಗೆ ಒಂದು ಸಂಯುಕ್ತ ರಾಜ್ಯಾಂಗ ಘಟನೆಯನ್ನು ತಯಾರಿಸಿ ಅದನ್ನು ಪಾಶ್ಚಾತ್ಯ ಬೊಡ್ಡ ರಾಷ್ಟ್ರಗಳ ಮುಂದೆ ಇರಿಸಿದ್ದಾರೆ. ರಶ್ಯಾದ ಪ್ರತಿನಿಧಿ ಇದನ್ನು ನಿರಾಕರಿಸಿದ್ದಾರೆ. ರಶ್ಯಾದ ಸ್ವಾಧೀನದಲ್ಲಿದ್ದ ಪೂರ್ವ ಜರ್ಮನಿಯಲ್ಲಿ ಕಮ್ಯೂನಿಷ್ಟ್ ಕ್ರಮಗಳನ್ನು ಜಾರಿಗೆ

ಕರ್ನಾಟಕ ಏಕೀಕರಣ

ಮೈಸೂರಿನ ಕರ್ತವ್ಯ

ಬೆಳಗಾವಿಯನ್ನುಳಿದು ಕನ್ನಡ ಜಿಲ್ಲೆಗಳೆಲ್ಲವೂ ಒಂದಾಗಿ ಸೇರಿದ ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಪರಿಷತ್ತಿನ ಮುಖ್ಯ ನಿರ್ಣಯ ಕರ್ನಾಟಕ ಏಕೀಕರಣ ಪರ ನಿರ್ಣಯವಾಗಿದ್ದಂತು ನಿಜವಾದರೂ ಅದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಪರಿಷತ್ತಿನ ಮುಂದೆ ಇಟ್ಟ ನಿರ್ಣಯದಲ್ಲಿ ಮೈಸೂರು ಸಮೇತ ಕರ್ನಾಟಕ ಪ್ರಾಂತ್ಯ ನಿರ್ಮಾಣ ಕೂಡಲೇ ಆಗಬೇಕೆಂದೂ ಮೈಸೂರನ್ನು ಬಿಟ್ಟು ಯೂನಿಯನ್ ಕರ್ನಾಟಕದ ಜಿಲ್ಲೆಗಳನ್ನು ಮಾತ್ರ ಕೂಡಿಸಿ ಕರ್ನಾಟಕದ ಜಿಲ್ಲೆಗಳನ್ನು ಮಾತ್ರ ಕೂಡಿಸಿ ಕರ್ನಾಟಕ ಪ್ರಾಂತ್ಯ ನಿರ್ಮಾಣ ಮಾಡುವುದಕ್ಕೆ ತಾವು ವಿರೋಧವೆಂದೂ ಸ್ಪಷ್ಟವಾಗಿ ಹೇಳಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ನಿಜವಾದ ಅಭಿಪ್ರಾಯವಿದೆಂಬ ಬಗ್ಗೆ ಸಂಶಯವಿಲ್ಲ. ಅಂತೂ ಕರ್ನಾಟಕ ಏಕೀಕರಣದ ಮುಂದಾಳುಗಳ ವಿನಂತಿ ಮೇರೆಗೆ ಆ ವಿರೋಧ ಸೂಚಿಸುವ ಭಾಗ ಕೊನೆಗೆ ಬಿಟ್ಟು ಕೊಡಲಾಯಿತು ಮಾತ್ರವಲ್ಲ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ಕುರಿತು ಮಾಡಿರುವ ನಿರ್ಣಯಕ್ಕೆ ಬೆಂಬಲಕೊಡಲಾಯಿತು

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ನಿರ್ಣಯದಲ್ಲಿ ಮೈಸೂರು ಸೇರಲು ಒಪ್ಪದಿದ್ದರೂ ಕರ್ನಾಟಕ ಪ್ರಾಂತ್ಯ ಹೊಸ ಘಟನೆಯೊಡನೆಯೇ ಜಾರಿಗೆ ಬರಬೇಕೆಂದು ಇದೆಯೆಂದು ಕಾಣುತ್ತದೆ. ಈ ನಿರ್ಣಯವನ್ನು ವಿವರಿಸುವಾಗ ಸಂಬಂಧಪಟ್ಟ ಮುಂದಾಳುಗಳು ಇದರ ಅಭಿವ್ಯಾಯ ಮೈಸೂರು ಬಿಟ್ಟು ಕರ್ನಾಟಕ ಪ್ರಾಂತ್ಯ ಮಾಡಬಹುದೆಂಬುದಲ್ಲ ಪಟನೆಯಲ್ಲಿ ಪ್ರಾಂತ್ಯಗಳನ್ನು ಹೆಸರಿಸುವಾಗ ಅದರಲ್ಲಿ ಕರ್ನಾಟಕ ಪ್ರಾಂತ್ಯದ ಹೆಸರೂ ಬರಬೇಕೆಂಬುದೇ ನಮ್ಮ ಉದ್ದೇಶ. ಇಲ್ಲದಿದ್ದರೆ ಮುಂದೆ ಪ್ರಾಂತ್ಯ ನಿರ್ಮಾಣಕ್ಕೆ ಉದ್ದದಾರಿ ಹಿಡಿಯಬೇಕಾಗುತ್ತದೆ-ಈ ರೀತಿ ವಿವರಿಸಿ ಸಮಾಧಾನ ಹೇಳಿದರು ಈ ವಿವರ ಸತ್ಯ ಸ್ಥಿತಿಯೇ ಇರಬೇಕು.

ಅಂತೂ ಎಲ್ಲರ ಅಭಿಪ್ರಾಯದಲ್ಲಿಯೂ ಮೈಸೂರು ಸಮೇತ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದೇ ಇದೆಯೆಂದು ಹೇಳಿದರೆ ತಪ್ಪಿಲ್ಲ. ಕಾಂಗ್ರೆಸಿನ ತ್ರಿಮೂರ್ತಿ ವರದಿಯಭಿಪ್ರಾಯವೂ ಇದೇ ರೀತಿ ಇದೆ.

ಮೈಸೂರಿನವರ ಅಭಿಪ್ರಾಯ ಹೇಗಿದೆ ಎಂಬುದೇ ಮುಖ್ಯ ಪ್ರಶ್ನೆ ಕರ್ನಾಟಕ ಪ್ರಾಂತ್ಯದಲ್ಲಿ ಲೀನವಾಗಲು ಮೈಸೂರು ಸಿದ್ಧವಿದೆಯೆ?

ಮೈಸೂರಿನಲ್ಲಿ ಈಗ ಪ್ರಜಾಪ್ರಭುತ್ವ ಪೂರ್ಣರೂಪದಲ್ಲಿ ಜಾರಿಗೆ ಬರುತ್ತಿದೆ ದಿವಾನರಾದ ರಾಮಸ್ವಾಮಿ ಮುದಲಿಯಾರರ ಹುದ್ದೆಯ ಅವಧಿ ಬೇಗನೆ ಮುಗಿಯಲಿತ್ತದೆ ಆ ಬಳಿಕ ದಿವಾನ ಪದವಿಯನ್ನೇ ರದ್ದು ಮಾಡಲಾಗಿದೆಯಂತೆ.

ಮಾನ್ಯ ಶ್ರೀ ಚೆಂಗಲ್ರಾಯ ರೆಡ್ಡಿಯವರನ್ನು ಕಾಂಗ್ರೆಸ್ ಪಕ್ಷದವರ ವಂದಾಳಾಗಿ ಆರಿಸಿದ್ದಾರೆ ಅಂದರೆ ಇವರು ಮುಖ್ಯ ಮಂತ್ರಿಯವರಾಗಿ ತಮ್ಮ ಮಂತ್ರಿ ಮಂಡಲವನ್ನು ತಾವೇ ನೇಮಿಸುವ ಏರ್ಪಾಡಾಗಿದೆ

ಹೀಗೆ ಮೈಸೂರಿನ ಪ್ರಜಾಪ್ರಭುತ್ವ ಪೂರ್ಣರೂಪ ತಾಳುತ್ತಿದೆ.

ಪ್ರಜಾ ಪ್ರಭುತ್ವದ ಆಡಳಿತೆಯ ಮೈಸೂರು ಕರ್ನಾಟಕ ಪ್ರಾಂತ್ಯದಲ್ಲಿ ಲೀನವಾಗಲು ನ್ಯಾಯಬದ್ಧವಾದ ಯಾವ ಆಕ್ಷೇಪವೂ ಇರಲಾರದು. ಅದರಲ್ಲೂ ಈಗ ಅಲ್ಲಿಯ ಆಡಳಿತ ಕಾಂಗ್ರೆಸ್ ಪಕ್ಷದ ಕೈಯಲ್ಲಿರುತ್ತದೆ ಶ್ರೀ ಚೆಂಗಲ್ರಾಯ ರೆಡ್ಡಿ ಮೊದಲಾದ ಮೈಸೂರು ಕಾಂಗ್ರೆಸಿನ ಮುಂದಾಳುಗಳು ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಎಂದಿಗೂ ಆಕ್ಷೇಪ ಹೇಳಲಾರರು. ಪ್ರಜಾಭಿಪ್ರಾಯ ಹೇಗಿದೆ ಎಂದು ಇವರು ತಿಳಿಯಲಿಚ್ಛಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ. ಮೈಸೂರಿನ ಪ್ರಜೆಗಳಿಗೆ ಖಂಡಿತವಾಗಿಯೂ ಕರ್ನಾಟಕ ಪ್ರಾಂತ್ಯ ನಿರ್ಮಾಣ ಬೇಡವೆಂಬ ಅಭಿಪ್ರಾಯ ಇರಲು ಕಾರಣವಿಲ್ಲ.

ಮೈಸೂರಲ್ಲಿ ಮಹಾರಾಜರ ನಿರಂಕುಶ ಪ್ರಭುತ್ವ ಜಾರಿಯಲ್ಲಿ ಇರುತ್ತಿದ್ದರೆ ಅವರು ಕರ್ನಾಟಕ ಪ್ರಾಂತ್ಯದಲ್ಲಿ ಲೀನರಾದರೆ ತಮ್ಮ ಅಧಿಕಾರಚ್ಯುತಿಯ ಭಯದಿಂದ ಆಕ್ಷೇಪ ಹೇಳುತ್ತಿದ್ದರೋ ಏನೋ? ಆದರೆ ಮೈಸೂರಿನ ಮಹಾರಾಜರು ತಮ್ಮ ಅಧಿಕಾರವನ್ನು ಈ ಮೊದಲೇ ಪ್ರಜೆಗಳಿಗೆ ಒಪ್ಪಿಸಿ ಕೊಟ್ಟು ತಮ್ಮ ಉದಾರಬುದ್ಧಿ ತೋರಿಸಿದ್ದಾರೆ ಅಂದಮೇಲೆ ಇನ್ನು ಮೈಸೂರು ಕರ್ನಾಟಕದಲ್ಲಿ ಲೀನವಾಗಲು ಇನ್ನಾವ ಅಡ್ಡಿಯೂ ಇರಲಾರದು

ಅಖಿಲ ಕರ್ನಾಟಕ ಪ್ರಾಂತ್ಯಕ್ಕೆ ಮೈಸೂರೇ ಕೇಂದ್ರ ಸ್ಥಾನದಲ್ಲಿದ್ದು ಆದೀ ಕರ್ನಾಟಕದ ಪ್ರಮುಖ ಭಾಗವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ ಕರ್ನಾಟಕದಲ್ಲಿ ಮೈಸೂರಿನಸ್ಟು ಪ್ರಗತಿ ಹೊಂದಿದ ಬಾಗ ಬೇರೆ ಇಲ್ಲವೆಂದ ಮೇಲೆ ಕರ್ನಾಟಕದ ಮುಂದಾಳ್ತನ ಮೈಸೂರಿಗೇನೇ ಸೇರುವುದೆಂಬುದು ಸರ್ವವಾದ

ಮೈಸೂರಿನ ಮಹಾರಾಜರು ಕರ್ನಾಟಕ ಪ್ರಾಂತ್ಯದ ಪ್ರಥಮ ಗವರ್ನರ್ ಪದವಿಗೆ ನೇಮಕ ಹೊಂದುವುದು ಹೆಚ್ಚಿನ ಮಟ್ಟಿಗೆ ಸಂಭವನೀಯವೆನ್ನಬೇಕು. ಕರ್ನಾಟಕ ಇಚ್ಛೆಗೆ ಅನುಗುಣವಾಗಿಯೇ ಈ ಗವರ್ನರರ ನೇಮಕವಾಗುವುದೆಂಬುದು ನಿಸ್ಸಂದೇಹ.

ಮೈಸೂರಲ್ಲಿ ಈಗ ಮಂತ್ರಿ ಮಂಡಲ ನಡೆಸುವ ಮಂತ್ರಿಗಳು ಕರ್ನಾಟಕ ಪ್ರಾಂತ್ಯದಲ್ಲಿಯೂ ಮಂತ್ರಿಗಳಾಗಿ ಉಳಿಯುವರೆ ಎಂದು ಒಂದು ಪ್ರಶ್ನೆ ಕೇಳಬಹುದು. ಕರ್ನಾಟಕ ಪ್ರಾಂತ್ಯದ ಮಂತ್ರಿ ಮಂಡಲ ಇನ್ನಷ್ಟು ವಿಸ್ತೃತವಾಗಬೇಕಾಗುವುದರಿಂದ ಇವರಿಗೂ ಅದರಲ್ಲಿ ಸಹಜಸ್ಥಾನ ದೊರೆಯುವುದು. ಅಂತೂ ಕಾಂಗ್ರೆಸ್ ಮಂತ್ರಿಗಳು ಮಂತ್ರಿ ಪದವಿಯೊಂದು ಸೇವಾಸ್ಥಾನವನ್ನಾಗಿ ತಿಳಿಯುವರಲ್ಲದೆ ಅದೊಂದು ಸ್ವಾರ್ಥಸಾಧನೆಯ ಹುದ್ದೆಯೆಂದು ತಿಳಿಯುವುದಿಲ್ಲ. ಮೈಸೂರಿನ ಮಂತ್ರಿಗಳಾದರೂ ಇದೇ ಬಾವನೆಯುಳ್ಳವರೆಂಬ ಬಗ್ಗೆ ಯಾವ ಸಂಶಯವೂ ಇಲ್ಲ ಅಂದಮೇಲೆ ಕರ್ನಾಟಕ ಪ್ರಾಂತರಚನೆಯಿಂದ ಇವರಿಗೆ ತಮ್ಮ ಸೇವಾಕ್ಷೇತ್ರ ಇನ್ನಷ್ಟು ವಿಸ್ತೃತವಾಗುವುದೆಂಬ ಒಳ್ಳೆ ಆನಂದವೇ ಆದೀತೆಂದು ಬಾವಿಸಿದರೆ ತಪ್ಪಾಗಲಾರದು.

ದಕ್ಷಿಣ ಕನ್ನಡವು ಮೈಸೂರನ್ನು ಬಿಟ್ಟು ಪ್ರಾಂತ್ಯರಚನೆ ಅಪೇಕ್ಷಿಸುವುದಿಲ್ಲ. ನಮಗೂ ಮೈಸೂರಿಗೂ ಸಮೀಪದ ಬಾಂಧವ್ಯವಿದೆ ಮೈಸೂರು ಈ ಪ್ರಶ್ನೆಯ ಕುರಿತು ತಮ್ಮ ಒಪ್ಪಿಗೆಯನ್ನು ಅದಷ್ಟುಬೇಗನೆ ಸ್ಪಷ್ಟಪಡಿಸಿ ಕರ್ನಾಟಕ ಪ್ರಾಂತ್ಯರಚನೆ ಬೇಗನೆ ಆಗ್ಬಹುದಾಗಲೆಂದು ದಕ್ಷಿಣ ಕನ್ನಡಿಗರೆಲ್ಲರೂ ಆಶಿಸುತ್ತಿದ್ದಾರೆ.

ತರಲಾಗಿದೆ. ಈಗ ತಯಾರಿಸಿರುವ ಪಟನೆ ಜನಹಿತದ ದೃಷ್ಟಿಯಿಂದ ಫಲವಿಲ್ಲವೆಂದು ರಸ್ಯಾ ಪ್ರತಿನಿಧಿಯ ಆಕ್ಷೇಪವಿರುತ್ತದೆ ಇಡೀ ಜರ್ಮನಿಗೆ ಕಮ್ಯೂನಿಸ್ಟ್ ಕ್ರಮದ ಸರಕಾರ ಜಾರಿಗೆ ತರುವುದಿದ್ದರೆ ಅವರಿಗೆ ತೃಪ್ತಿಯಾದೀತು. ಪೂರ್ವ ಜರ್ಮನಿಯಲ್ಲೊಂದು ಜನತಾ ವಂಗಡ ಸೃಷ್ಟಿಮಾಡಿ ಹ್ಯಾರೆ. ಇವರೂ ಇದೇ ರೀತಿ ಹೇಳುತ್ತಾರೆ. ಈ ಸಮಸ್ಯೆಯ ತೀರ್ಮಾನ ಹೇಗಾಗ ಬೇಕು?

ಚೀನದ ಕಮ್ಯೂನಿಸ್ಟ್ ಸರಕಾರಕ್ಕೆ ಮಂಜೂರಾತಿ

ಶಾಂಘ್ಯಾ ನಗರದ ವತನದ ಬಳಿಕ ಕಮ್ಯೂನಿಸ್ಟರು ಭರದಿಂದ ದಕ್ಷಿಣ ಚೀನಾ ಪ್ರದೇಶ ಸ್ವಾಧೀನತೆಗೆ ತೊಡಗಿದ್ದಾರೆ. ಈ ಕಮ್ಯೂನಿಸ್ಟ ಸರಕಾರಕ್ಕೆ ಒಪ್ಪಿಗೆ ಕೊಡುವ ಕುರಿತು ಪಾಶ್ಚಾತ್ಯ ರಾಷ್ಟ್ರಗಳೆಲ್ಲ ಆಲೋಚನೆಗೆ ಬಿದ್ದಿವೆ. ಈ ಕುರಿತು ಎಲ್ಲರೂ ಒಗ್ಗಟ್ಟಿನಿಂದ ವರ್ತಿಸಬೇಕೆಂದು ಅಮೇರಿಕ ಎಚ್ಚರಿಕೆ ಕೊಡುತ್ತಿದೆ. ತನ್ನದೈ ರಶ್ಯಾ ಸರಕಾರದವರು ಈ ಸರಕಾರದೆಡೆಗೆ ತಾವು ನೇಮಿಸಿದ್ದ ರಾಯಭಾರಿಯನ್ನು ಹಿಂದೆ ಕರೆದಿರುತ್ತಾರೆ. ಅಂದರೆ ಹೊಸ ಸರಕಾರಕ್ಕೆ ಮಂಜೂರಾತಿ ಕೊಡುವುದರಲ್ಲಿ ಇವರೇ ಮೊದಲಿಗರಾಗುವಂತೆ ಕಾಣುತ್ತದೆ. ಚೀನಾದ ಕಮ್ಯೂನಿಸ್ಟ್ ಸರಕಾರಕ್ಕೆ ಮಂಜೂರಾತಿ ಕೊಡುವುದರಲ್ಲಿ ರಶ್ಯಾ ಮೊದಲಿಗರಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ ಹಿಂದೂಸ್ಥಾನ ಸರಕಾರ ಸಾಶ್ವತಮೈತ್ರಿ ರಾಷ್ಟ್ರಗಳ ದಾರಿಯನ್ನೇ ಅನುಸರಿಸುವುದು ಹೆಚ್ಚು ಸಂಭವನೀಯ.

ಪಾಕಿಸ್ಥಾನ ಅಫಘಾನಿಸ್ಥಾನಗಳ ತಿಕ್ಕಾಟ

ಪಾಕಿಸ್ಥಾನ ಮತ್ತು ಅಫಘಾನಿಸ್ಥಾನಗಳ ಗಡಿಗಳ ನಡುವೆ ಪದಾನರ ಅನೇಕ ತಂಡಗಳು ವಾಸಿಸುತ್ತವೆ. ಇವರನ್ನೆಲ್ಲ ಹತೋಟಿಗೆ ತರಲು ಪಾಕಿಸ್ಥಾನ ಯತ್ನಿಸುವಂತೆ ಕಾಣುತ್ತದೆ ಇವರ ಪ್ರಸ್ತಾವಕ್ಕೆ ಹೋಗಕೂಡದಾಗಿ ಅಫಘಾನಿಸ್ಥಾನ ಹೇಳುತ್ತಿದೆ ಎರಡು ರಾಷ್ಟ್ರಗಳ ಒಳಿಗೆ ಈ ಕುರಿತು ಬಲವಾದ ಚರ್ಚೆ ನಡೆಯುವಂತೆ ಕಾಣುತ್ತದೆ. ಅಂತೂ ಈ ಪ್ರಶ್ನೆಯನ್ನು ಇತ್ತಂಡೆದವರೂ ರಾಜಿಯಿಂದ ತೀರ್ಮಾನಿಸಿಕೊಳ್ಳುವರೆಂದೇ ಆಶಿಸೋಣ.

ನೇಪಾಳದಲ್ಲಿ ಪ್ರಜಾಸತ್ತೆ ಚಳವಳಿ

ನೇಪಾಳ ಸ್ವತಂತ್ರ ರಾಷ್ಟ್ರ. ಇಲ್ಲಿ ಪ್ರಜಾಸತ್ತಾತ್ಮಕ ಸರಕಾರ ಸ್ಥಾಪನೆ ಬಗ್ಗೆ ಚಳವಳ ಸಹಜವಾಗಿ ಆರಂಭವಾಗಿದೆ. ಸರಕಾತ-ದಬ್ಬಳಿಕೆಯ ಕ್ರಮ ಅನುಸರಿಸುತ್ತಿದೆಯೆಂದು ಕಾಣುತ್ತದೆ. ಈ ದಾರಿ ಫಲವಿಲ್ಲವೆಂದು ನೇಪಾಳ ಸರಕಾರ ಬೇಗನೆ ತಿಳಿಯುವಂತಾಗಲೆಂದು ಆಶಿಸಬೇಕಾಗಿದೆ.

ಸಂಕ್ಷೇಪ ಸುದ್ದಿಗಳು

ಇಂಡೋನೇಸ್ಯದಲ್ಲಿ ಡಚ್ ವೈನೂಸಿಕರಿಂದ ಕೊಲ್ಲಲ್ಪಟ್ಟ ಮೂವರು ಹಿಂದೀಯರ ಕುರಿತು ಡೆಚ್ ಸರಕಾರ ಪರಿತಾಪ ಸೂಚಿಸಿ, ಆ ಕುರಿತು ಮೃತರ ಕುಟುಂಬಕ್ಕೆ ಜೀವಾಶನ ಕೊಡಲು ಒಪ್ಪಿಗೆ ಸೂಚಿಸಿರುವರು.

✠

ಲಂಡನಿನಲ್ಲಿದ್ದಾಗ ನೆಹರುಗಳನ್ನು ಚರ್ಚಿಲ್ ದಂಪತಿಗಳು ಭೋಜನ ಸಮಾರಂಭವೊಂದಕ್ಕೆ ಆಹ್ವಾನಿಸಿದರು ಆ ಸಂದರ್ಭದಲ್ಲಿ ಭಾರತ ಪ್ರಧಾನರು ಮಾಜಿ ಬ್ರಿಟಿಷ್ ಪ್ರಧಾನರಿಗೆ ಆಸ್ಪದ ಮತ್ತು ಆಫ್ರಿಕದ ನಮಚಾರ್ಯತೆಯ ಕುರಿತು ತಾತ್ವಿಕ ವಿವರಣೆಯನ್ನು ಮಾಡಿದರು

✠

ಫರೀದ್ ಕೋಟೆಯ ನವಾಬರಾಜರಿಂದ ಕೆಲಸದಿಂದ ತೆಗೆದು ಹಾಕಲ್ಪಟ್ಟ ಆ ಸಂಸ್ಥಾನದ ಕೆಲ ಅಧಿಕಾರಿಗಳಿಗೆ ನಾಟಿಯಾಲಾ ಮತ್ತು ಪೂರ್ವ ಪಂಜಾಬ ಸಂಸ್ಥಾನ ಒಕ್ಕೂಟದವರು ಪುನಃ ಆಯಾ ಸ್ಥಾನದಲ್ಲಿ ನೇಮಿಸಿದ್ದಾರೆ.

✠

ತಿರುಪತಿಯಲ್ಲಿ ನಾಳೆ ಬೀಳಿದೆ ಅವಧಿ ನಿಲ್ಲಿರೆಂದು ಕೆಲ ವಾರಗಳ ಹಿಂದೆ ಅಲ್ಲಿ ವರುಣ ಜಪವನ್ನು ಮಾಡಲಾಗಿತ್ತು. ಕಳೆದ ತಾ. ೨೮ರಂದು ಅಲ್ಲಿ ಸ್ವಲ್ಪ ಮಳೆ ಬಿದ್ದಿದ್ದು ವಿಶ್ವಾಸಿಗಳು ಇದು ಜಪದ ಫಲವೆನ್ನುತ್ತಿರುವರು.

✠

ಹುಟ್ಟೂರಾದ ಸೇಲಂನಿಗೆ ಸಂದರ್ಶನ ಕೊಡಬೇಕೆಂದು ಗವರ್ನರ್ ಜನರಲ್ ರಾಜಾಜಿಯವರಿಗೆ ಸೇಲಂವೂರ ನಿವಾಸಿಗಳು ಒಂದು ಆಮಂತ್ರಣವನ್ನು ಕಳುಹಿಸಿದ್ದಾರೆ.

✠

ಯಾವ ಸಂದರ್ಭದಲ್ಲೂ ಹಿಂದೂಸ್ಥಾನ ಪಾಕಿಸ್ತಾನಗಳೊಳಗೆ ಕಾಶ್ಮೀರ ಸಮಸ್ಯೆಯಿಂದ ಯುದ್ಧವು ಕಲ್ಪನಾತೀತವೆಂದು ಅಲ್ಲಿನ ಚುನಾವಣಾ ನೀಲಧಿಕಾರಿಯಾಗಿ ನೇಮಿಸಲ್ಪಟ್ಟ ಎಡ್ಮಿರಲ್ ನಿಮಿಟ್ಜರು ನ್ಯೂಯೋರ್ಕಿನ ಒಂದು ವೃತ್ತಪತ್ರಿಕಾ ಸಂದರ್ಶನದಲ್ಲಿ ತಿಳಿಸಿದರು.

✠

ಗಾಂಧಿಜಿಯ ಕೊಲೆ ಸಂಚಿನಲ್ಲಿದ್ದ ಸೂಯೋಜ ಎಂಬವನು ಇಂದೋರಿನಲ್ಲಿ ಆಶ್ರಯ ಪಡೆದಿರುವನೆಂದೂ, ಇದರ ಬೇದ ಸೂಚನಾರ್ಥ ವಲ್ಲಭ್ಭಾಯ್ ಪಟೇಲರು ಈಚೆಗೆ ಅಲ್ಲಿಗೆ ಹೋಗಿದ್ದರೂ ಮಾನ ಪತ್ರ ಸ್ವೀಕರಿಸದಿರಲು ಕಾರಣವಿರಬಹುದೆಂದೂ ಊಹಿಸಲಾಗಿದೆ.

✠

ಫಿಲಿಪ್ಪೈನ್ ದ್ವೀಪದಲ್ಲಿ ಬ್ರಿಟಿಷ್ ರಾಯಭಾರಿ ಕಛೇರಿಯ ಮುಖ್ಯಾಧಿಕಾರಿಯಾಗಿದ್ದ ಡಿಕಿನ್‌ಸನ್ ಎಂಬ ೩೬ ವರ್ಷದ ತರುಣನು ಕಟ್ಟಡದ ಮೇಲಿಂದ ದುಮುಕಿ ಆತ್ಮಹತ್ಯ ಮಾಡಿಕೊಂಡನು. ಕೆಲ ಸಮಯದ ಹಿಂದೆ ವಾರ್ಸ್ಕೊ ನಗರದಲ್ಲಿದ್ದಾಗ ಈತ ರಶ್ಯನ್ ಸೈನಿಕರಿಂದ ತಲೆಯಲ್ಲಿ ಏಟು ತಿಂದಿದ್ದನಂತೆ.

ಶಾಲಾ ಪ್ರಾರಂಭ

ಎಂದಿನಂತೆ ಹೆಚ್ಚಿನ ಶಾಲೆಗಳು ಪ್ರಾರಂಭವಾಗಿರುವುದರಿಂದ ವಿದ್ಯಾರ್ಥಿಗಳ ಸದಗರವು ತುಂಬಾ ಗೋಚರವಾಗುತ್ತಿದೆ. ಅಭಿವೃದ್ಧಿಯಾಗುತ್ತಿರುವ ನಗರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿರುವುದು. ಉಚ್ಚ ಶಿಕ್ಷಣದ ಮಟ್ಟಿಗೆ ಸ್ಥಳೀಯ ಗವರ್ನ್‌ಮೆಂಟ್ ಕೋಲೇಜು ಫಸ್ಟ್‌ಗ್ರೇಡ್ ಆಗಿರುವುದರಿಂದಲೂ, ಉಡ್ರಿಯಲ್ಲಿ ಕೋಲೇಜು ಸ್ಥಾಪನೆಗೆ ಅನುಮತಿ ದೊರಕಿರುವುದರಿಂದಲೂ ಅನುಕೂಲವಾಗಿದೆ.

ಹವಾಮಾನ

ಬಿಡದೆ ಮಳೆಗಳು ಸುರಿಯುವುದರಿಂದಲೂ ಮತ್ತು ನುಳಿಗಾಲದ ಲಕ್ಷಣಗಳೆಲ್ಲವೂ ಸಂಪೂರ್ಣ ತೋರಿಬರುವುದರಿಂದಲೂ ಅದು ಈ ಸಲ ಮುಂದಾಗಿಯೇ ಪ್ರಾರಂಭವಾಗಿರುವುದೆಂದು ನಿಶ್ಚಿತವಾಯಿತು. ಈಗಾಗಲೇ ಸುಮಾರು 30 ಇಂಚಿಗೂ ಮಿಕ್ಕಿದ ಮಳೆ ಸುರಿದಿರುತ್ತದೆ. ಮಾರ್ಚ್, ಎಪ್ರಿಲ್ ಮತ್ತು ಮೇ ಮಧ್ಯದ ತನಕ ಉಷ್ಣವು ವಿಪರೀತವಿದ್ದುದರಿಂದ 'ಮಳೆ ಸ್ವಲ್ಪ ಮುಂಚಿತವಾಗಿಯೇ ಬಂದಿದೆನ್ನಬಹುದು. ಆದರೆ ಜೂನ್ ಮಧ್ಯದಲ್ಲಿ ಬೆಳೆ ನೆಡುವ ಕಾಲಕ್ಕೆ ಬಿಸಿಲು ಕಾದೀತೊ ಎಂಬ ಶಂಕೆ ಹಳ್ಳಿ ಕಡೆಗಳಲ್ಲಿ ಹುಟ್ಟಿದೆ. ಕಾಲಮುಂಚಿತ ಮಳೆಯಿಂದ ಹಲವು ಕಡೆ ಬತ್ತದ ಮೊಳಕೆಗೂ ಬಾಧಕ ತಟ್ಟಬಹುದೆಂದೂ ತಿಳಿದು ಬರುತ್ತದೆ.

ಮುಂಜಾಗ್ರತೆ

ನಗರದ ಚರಂಡಿ ವ್ಯವಸ್ಥೆಯ ಕಡೆಗೆ ಪೌರಸಭೆಯವರು ಈ ಸಲ ಹೆಚ್ಚು ಗಮನ ಕೊಟ್ಟಂತೆ ಕಾಣುತ್ತದೆ. ಕೆಲವು ಕಡೆ ಕೆಸರು ನೀರು ಸರಾಗ ಹರಿದು ಹೋಗುವಂತೆ ತೋಡು ದುರುಸ್ತಿಗಳನ್ನು ಮಾಡಲಾಗಿದೆ. ಮಾರ್ಗಗಳು ಬಹಳ ಮಟ್ಟಿಗೆ ದುರುಸ್ತಿಗೊಂಡಿವೆ.

ಇದು ತನಕದ ಮಳೆಗಾಲ ಅನುಭವವೆಂದರೆ ನಗರದ ಹಲವು ಕಡೆಗಳಲ್ಲಿ ಸಣ್ಣ ಪುಟ್ಟ ಕಳಿವುಗಳಾಗುವಂತಹುದು. ಈ ಕುರಿತು ನಗರ ರಕ್ಷಕರು ಹೆಚ್ಚಿನ ಮುತುವರ್ಜಿ ವಹಿಸಿದರೆ ಈ ಸಲವಾದರೂ ಈ ಅವಾಂತರಗಳನ್ನು ಕಡಿಮೆಮಾಡಬಹುದೆಂದು ನಾಗರಿಕರ ಹಾರೈಕೆ ಇದೆ.

ರಾಮ ಪ್ರತಿಷ್ಠೆ

ಭವಂತಿಕೇರಿಯಲ್ಲಿರುವ ಶ್ರೀ ಶಿವಾನಂದ ಭಟ್‌ಜಿಯವರ ರಾಮ ಮಂದಿರದಲ್ಲಿ ಶ್ರೀ ರಾಮಸೀತಾ ವಿಗ್ರಹಗಳ ಪ್ರತಿಸ್ಥಾಪನಾ ಸಮಾರಂಭವು ಕಳೆದ ತಾ. ೩ರಂದು ಶ್ರೀ ಚಿತ್ರಾಪುರ ಮಠದ ಶ್ರೀಮದ್ ಆನಂದಾಶ್ರಮ ಸ್ವಾಮಿವರ್ಯರಿಂದ ನೆರವೇರಿಸಲ್ಪಟ್ಟಿತು. ಶ್ರೀ ಸ್ವಾಮಿಜಿಯವರು ಈ ಮಂಗಲ ಕಾರ್ಯಕ್ಕಾಗಿ ಶಿಷ್ಯವೃಂದದಿಂದ ಇಲ್ಲಿಗೆ ಬಹು ವಿಜೃಂಭಣೆಯಿಂದ ಕರತಲ್ಪಟ್ಟಿದ್ದರು. ತಾ ೩ರಂದು ದೇವ ವಿಗ್ರಹಗಳೊಡನೆ ಶ್ರೀ ಸ್ವಾಮಿಜಿ ಮತ್ತು ವರಾಹರದ ಮೆರವಣಿಗೆಯೊಂದು ಇತ್ತು.

ತುಫಾನು ರಭಸ

ಮಂಗಳೂರಿನಿಂದ ದೀವಿ ದ್ವೀಪಗಳಿಗೆ ಅಕ್ಕಿಯನ್ನೊಯ್ಯಲು ಹೊರಟಿದ್ದ ಒಂದು ಪಾಯಿ ಹಡಗವು ಕೆಲವು ದಿನಗಳ ಹಿಂದೆ ಇಲ್ಲಿಂದ ಕೆಲವು ಅಂತರ ಹೋದ ಮೇಲೆ ಬಿರುಗಾಳಿಯ ತುಫಾನಿಗೆ ಸಿಲುಕಿ ಕಲ್ಲಿಕೋಟೆ ಬಳಿಯೊಂದು ಕಡೆಯಲ್ಲಿ ಹೇಗೂ ದಡಕ್ಕೆ ಮುಟ್ಟುವಂತಾಯಿತು. ಅದರೊಳಗಿನ ೧೬ ನಾವಿಕರೂ ಸುರಕ್ಷಿತರಾಗಿದ್ದಾರೆ. ನಾವೆಗೆ ಸ್ವಲ್ಪ ಧಕ್ಕೆ ತಗಲಿದ್ದು ಸುಮಾರು ೫೦ ಗೋಣಿ ಚೀಲಗಳಷ್ಟು ಅಕ್ಕಿಯನ್ನು ನಾವೆ ರಕ್ಷಣೆ ನಲುವಾಗಿ ನೀರಿಗೆ ಆಹುತಿಕೊಡಲಾಗಿದೆಂದು ತಿಳಿದುಬರುತ್ತದೆ.

ಉದಾರ ದಾನ

ಇಲ್ಲಿಯ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಸ್ಕೂಲಿಗೆ ಡಾ. ಜೋಲ್ವಾಡಿ ರಾಮಕಾಮತರು ಹತ್ತು ಸಾವಿರ ರೂಪ್ಯಾಗಳ ಉದಾರ ದಾನವಿತ್ತಿರುವುದಾಗಿ ತಿಳಿದುಬರುತ್ತದೆ.

ಪ್ರಬುದ್ಧ ಬಂಧುರಿನ ಪ್ರಶ್ನೆ

ಈ ಕುರಿತು ಬೊಂಬಾಯಿಯಲ್ಲಿ ಸರ್ಯಾಲೋಚನೆಗೆ ಕುಳಿತ ಪ್ರಬುದ್ಧ ಬಂಧರು ನಿರ್ಣಾಯಕ ಸಮಿತಿಯ ಕಾರ್ಯಕಲಾಪಗಳು ಮುಗಿದಿದ್ದು ಸದ್ಯದಲ್ಲೇ ಅವರ ವಿಚಾರವರ ಇತ್ಯರ್ಥವು ಪ್ರಕಟವಾಗಲಿದೆಯೆಂದು ತಿಳಿದುಬರುತ್ತದೆ. ತನ್ನ ಮೆಲ್ಕೆ ಭಟ್ಕಳಗಳ ವರವಾಗಿ ಕೆಲವು ಮದ್ರಾಸಿನ ಪತ್ರಿಕೆಗಳಲ್ಲಿ ಪಕ್ಷಪಾತದ ಅಭಿಪ್ರಾಯವುಳ್ಳ ವರದಿಗಳು ಪ್ರಕಟವಾಗಿರುವುದು ಗಮನಕ್ಕೆ ಬಂದಿರುತ್ತದೆ. ಈ ಕುರಿತು ದ. ಕ. ಜಿಲ್ಲಾ ಚೇಂಬರ್ ಆಫ್ ಕೋಮರ್ಸಿನವರು ಪ್ರತಿಭಟನಾತ್ಮಕ ನಿಜ ಸಂಗತಿಗಳನ್ನು ಪ್ರಕಟಿಸಿರುವರು. ಮಂಗಳೂರು ಬಂದರು ತೀರದಲ್ಲಿ ಬಂಡೆಗಳವೆ ಮುಂತಾಗಿ ವರದಿಯಾದುದನ್ನು ಅದು ನಿಜ ಸ್ಥಿತಿಯಲ್ಲವೆಂದೂ ಹೇಳಲಾಗಿದೆ.

ಮದ್ಯವಿಧಿಗಳ ಉಲ್ಲಂಘನೆ

ಕಿನ್ನಿಗೋಳಿಯ ಮಾರ್ಕು ಸೋಜ, ಬೇಸಿಲ್ ಡಿ'ಸೋಜ ಇವರ ಮನೆ ಜಪ್ತಿ ಮಾಡಿದಾಗ ಬಟ್ಟಿಯಿಂದ ಮದ್ಯ ಕಯ್ಯಾರಿಸುವ ಎಲ್ಲ ಉಪಕರಣಗಳೆ ಎರಡು ನೆಟ್ಟ ಮದ್ಯಕ್ಕೆ ತಯಾರಿಸಿದ ಸುಮಾರು ೨೬ ಗೆಲನ್ ಹುಳಿಬಂದ ಕಬ್ಬಿನ ವಾಶ್ ಅಲ್ಲದೆ ೧ ಗೆಲನ್ ೧೯ ಡ್ರಾಂ ಶರಾಬು ಸಿಕ್ಕಿತೆಂದು ಆರೋಪದ ಮೇಲೆ. ಮೇಲ್ಕಂಡವರಿಗೆ ೬ ಮತ್ತು ೩ ತಿಂಗಳ ಸಜೆಯಾಗಿದೆ.

ಅಮಲು ಬೋರಾಗಿದ್ದರೆಂಬುದಕ್ಕೆ ಹೊಗೆ ಬಜಾರಿನ ಬಸಪ್ಪ ಪೂಜಾರಿ ಎಕ್ಕಾರಿನ ವಿನ್ಸೆಂಟ್ ಫರ್ನಾಂಡೀಸ್, ಗೋರಿಗುಡ್ಡೆ ಬಸ್ತ್ಯಾಂ ಸೋಜ ಇವರಿಗೆ ತಲಾ ರೂ. 40 ಜುಲ್ಮಾನೆಯಾಗಿದೆ. ಅಲ್ಪೈಗ್ರಾಮದ ಜಾನ್ ಬ್ಯಾಪ್ಟಿಸ್ಟ್ ಡಿಸೋಜನ ವಶ ಶರಾಬಿತ್ತೆಂದು 2 ತಿಂಗಳು ಕಠಿಣ ಸಜೆಯಾಗಿದೆ. ಹೊಗೆ ಬಜಾರಿನ ಮಾರ್ಶಲ್ ವೀಗಸಿನ ಬಳಿ 5 ಡ್ರಾಂ ಶರಾಬು ಇದ್ದುದಕ್ಕೆ ರೂ. 100 ಜುಲ್ಮಾನೆ, ಬಡಗಬೆಯ್ಕಾರಿನ ತುಕ್ರ ಪೂಜಾರಿ ಬಳಿ 8 ಗೆಲನ್ ಗೇರು ಹಣ್ಣಿನ ಹುಳಿಬಂದ ವಾಶ್ ಇತ್ತೆಂದು 3 ತಿಂಗಳ ಕ. ಸಜೆ ವಿಧಿಸಲಾಗಿದೆ. ಮರ್ಕಡ ಗ್ರಾಮದ ವಂಜ್ಯ ಎಂಬಾತನ ಬಳಿ 6 ಡ್ರಾಂ ತಾಳಿ ಹೆಂಡವಿತ್ತೆಂದು ರೂ. 50 ಜುಲ್ಮಾನೆಯಾಗಿದೆ.

ಹಾಲು ನೀರು ಬೆರಿಕೆಗೆ

ವಾಮಂಜೂರ್ ಚಿನ್ನ ಮೂಲ್ಕನು ಮೇಲಿನ ಆರೋಪಕ್ಕೆ ಗುರಿಯಾಗಿದ್ದು ಅವರಿಗೆ ನಮ್ಮ ಸಂಜಿಸ್ಟ್ರೇಟರಿಂದ 40 ರೂಗಳ ಜುಲ್ಮಾನೆ ವಿಧಿಸಲಾಗಿದೆ.

ಆರೋಗ್ಯ

ನಗರದಲ್ಲಿ ಕೆಲವು ಕಡೆ ಸಿಡುಬು ವಾಂತಿ ಭೇದಿ ಮತ್ತು ಟ್ಯಾಫ್ಯಾಡ್ ಜ್ವರ ವ್ಯಾಧಿಗಳ ಲಕ್ಷಣಗಳು ಕಂಡುಬರುತ್ತವೆ. ಸಿಡುಬಿನಿಂದ ಮೂರಕ್ಕೆ ಮಿಕ್ಕಿದ ಮರಣಗಳೆ ದಾಖಲೆಯೂ ಪೌರ ಸಭೆಯ ಆರೋಗ್ಯ ಇಲಾಖೆಯ ಗಮನಕ್ಕೆ ಬಂದಿದೆ. ಸಂಬಂಧ ಪಟ್ಟ ವಟಾರಗಳಲ್ಲಿ ವಾಸಿಸುವವರು ಡಾಕು ಇಂಜೆಕ್ಷನುಗಳಿಂದ ಮುಂಜಾಗ್ರತೆ ವಹಿಸುವುದು ಹಿತಕರವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಮದ್ಯಪಾನ ನಿಷೇಧವೆಂದರೇನು?

★ ಅದು ಜನಾಂಗದ ಸಂಪತ್ತನ್ನುಳಿಸುವುದು.

★ ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗಿ ಗೊಡಲು ತರಬೇತಿ ಕೊಡುವುದು.

★ ಅದು ಅನಿವಾರ್ಯವಾದ ಒಂದು ಸಾಮಾಜಿಕ ಸುಧಾರಣೆ.

★ ಅದು ಗೃಹಜೀವನದ ಪಾವಿತ್ರ್ಯವನ್ನು ಕಾಪಾಡುವುದು.

★ ಅದು ಪ್ರತಿಯೋರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ:

ಕೆನರಾ ಬ್ಯಾಂಕ್, ಲಿಮಿಟೆಡ್.

ಇದರ ಸೇವಾದಾನ.

ಸೌಂದರ್ಯ ಸಾಧನೆ
ಪ್ರತಿ ಸಲ ಕುಟಿಕೂರಾದಿಂದ
ತಿಕ್ಕಿ ತೊಳೆದಾಗ

ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ಮೌಲ್ಯವಿದೆ. ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಅದರ ಅವಗುಣಗಳನ್ನು ಹೋಗಲಾಡಿಸುತ್ತದೆ.

555

ಕುಟಿಕೂರಾ ಸಾಬೂನು

CUTICURA SOAP

AMMEMBAL SUBBA RAO PAI MEMORIAL FUND

Applications for loan stipends from the above Fund should reach the Hon. Secretary of the Fund on or before the 30th June 1949. While granting stipends, first preference will be given to those who are already undergoing courses with aid from this Fund. With reference to others, preference will be given for Technical or Scientific studies. Only Gowd Saraswath Brahmins need apply.

Application forms will be supplied free of cost on application to "The HON. SECRETARY, A. SUBBA RAO PAI MEMORIAL FUND, Canara High School, P. O. Kodialbail, (South Kanara). While applying for forms, please state if applications are for renewals or for fresh ones.

Mangalore, 30-5-1949. }

M. Appu Rao, B.A., B.L., *Hon. Secretary.*

ರಾಷ್ಟ್ರೀಯ ಚೀನವೂ ಅಮೇರಿಕವೂ

ಸಂಪೂರ್ಣ ಸಹಾಯದ ಭರವಸೆಯಿಲ್ಲ

ಅಮೇರಿಕದಲ್ಲಿ ಚೀನಿ ರಾಯಭಾರಿಗಳಾಗಿರುವ ಡಾ। ವೆಲಿಂಗ್ಟನ್ ಕೂ ಅವರು ಅಮೇರಿಕನ್ ವಿದೇಶಾಂಗ ಮಂತ್ರಿ ಡೀನ್ ಎಚೆಸನ್ನರನ್ನು ಕಂಡು ಚೀನಕ್ಕೆ ಅಮೇರಿಕವು ನೈತಿಕ ಮತ್ತು ಶಸ್ತ್ರಾಸ್ತ್ರಗಳ ಬೆಂಬಲವನ್ನು ಕೊಡುತ್ತದೆಂದು ಭರವಸೆಯೀಯಬೇಕೆಂದು ಕೇಳಿಕೊಂಡಾಗ ಅದು ಕೊಡಲ್ಪಡಲಿಲ್ಲ ಆದರೆ ಅಮೇರಿಕನ್ ಸರಕಾರವು ಹಿಂದಿನಗಿಂತ ಹೆಚ್ಚಿನ ಸಹಾನುಭೂತಿಯನ್ನು ನ್ಯಕ್ತಪಡಿಸಿರುವುದಾಗಿ ತಿಳಿದುಬರುತ್ತದೆ ಏಷ್ಯಾದಲ್ಲಿ ಕಮ್ಯುನಿಸ್ಟ್ ಪ್ರಭಾವವನ್ನು ತಡೆಗಟ್ಟಲು ಆಸಕ್ತಿ ತೋರಿಸುವ ಅಮೇರಿಕವು ಪ್ರತ್ಯಕ್ಷರಾಷ್ಟ್ರೀಯ ಚೀನಿಯರ ವಿಷಯವಾಗಿ ಇಷ್ಟೊಂದು ಉಪೇಕ್ಷೆ ಏಕೆ ತಾಳುತ್ತಿದೆಯೆಂದು ನಿರೀಕ್ಷಕರು ಸಂದೇಹ ಸೂಚಿಸಿರುವರು

ಆಫ್ರಿಕದ ಹಿಂದೀಯರಿಗೆ ರಿಯಾತಿ ಇಲ್ಲ

ಮಾಲನರ ಸ್ಪಷ್ಟೋಕ್ತಿ

ಹಿಂದೀಯರ ಕೇಳಿಕೆಗಳನ್ನು ಮನ್ನಿಸಿದರೆ ದ ಆಫ್ರಿಕಯಲ್ಲಿನ ಬಿಳಿಯರೂ ಆಫ್ರಿಕಾನರೂ ಉರಿದು ಬೀಳುವರೆಂದೂ ಪರಿಣಾಮವಾಗಿ ಅಲ್ಲಿನ ಸರಕಾರವು ಒಂದು ಪಕ್ಷದೊಳಗೇ ಕುಸಿದು ಬೀಳುವುದೆಂದೂ, ತನ್ಮೂಲಕ ದ್ಕಿಪದಲ್ಲಿ ದಂಗೆ ಅಶಾಂತಿಗಳೂ ಉತ್ಪನ್ನವಾಗಬಹುದೆಂದೂ ಮುಖ್ಯ ಪ್ರಧಾನರಾದ ಡಾ ಮಾಲನರು ಲಂಡನಿನಲ್ಲಿ ತಾವು ಪಂಡಿತ್ ನೆಹರುಗಳಿಗೆ ತಿಳಿಸಿರುವುದಾಗಿ ಅಲ್ಲಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ತಿಳಿಸಿದ್ದರು ಈ ಕುರಿತು ತಾವು ಭಾರತ ಮುಖ್ಯ ಪ್ರಧಾನರಿಗೆ ಕೆಲವು ಸೂಚನೆಗಳನ್ನು ಕೊಟ್ಟಿರುವುದಾಗಿಯೂ ಅವರು ತಿಳಿಸಿದ್ದರು ತನ್ಮೂವ ತ್ತು ನೆಹರುಗಳೊಳಗಣ ಮಾತುಕತೆಗಳು ಸಂಪೂರ್ಣ ಸ್ನೇಹದ ವಾತಾವರಣದಲ್ಲಿ ಜರಗಿದುವು ಎಂದೂ ಅವರು ಹೇಳಿದರು

ಬರ್ಮಾದಲ್ಲಿನ ಹಿಂದೀಯರ ಸ್ಥಿತಿ

ದಂಗೆಖೋರರಿಗೆ ಎಚ್ಚರಿಕೆ

ಬರ್ಮಾದಲ್ಲಿರುವ ಹಿಂದೀಯರು ವಿದೇಶೀ ನಾಗರಿಕರೆಂದೂ ಅವರನ್ನು ಯಾವ ರೀತಿಯಲ್ಲೂ ಬಾಧಿಸಿದರೆ ಅಂತರ್ರಾಷ್ಟ್ರೀಯ ಕಾನೂನು ಉಲ್ಲಂಘನೆ ಗೆಯ್ದಂತಾಗುವುದೆಂದೂ ರಂಗೂನಿನಲ್ಲಿರುವ ಹಿಂದೀ ರಾಯಭಾರಿ ಕಚೇರಿಯವರು ಒಂದು ಆಕಾಶವಾಣಿ ಹೇಳಿಕೆಯನ್ನು ಹೊರಡಿಸಿರುವರು ಇಂದು ಮಹಾ ನದಿಯ ಪ್ರದೇಶದಲ್ಲಿರುವ ಬಿಳಿ ಬಾವುಟದ ಕಮ್ಯೂನಿಸ್ಟರ ವಶ ಅನೇಕ ಹಿಂದೀಯರು ಬಾಧಿಗಳಾಗಿರುವರೆಂದು ಗೊತ್ತಾಗಿದೆ. ಈ ಹಿಂದೀಯರು ಬರ್ಮಾ ಸರಕಾರದಡಿಯಲ್ಲಿ ಕೆಲಸಕ್ಕಿದ್ದವರು. ಈಚೆಗೆ ಇವರನ್ನು ವಿದೇಶಿಯರೆಂದು ಉದ್ಯೋಗದಿಂದ ತೆಗೆದಿರುವರು ಅಂದಮೇಲೆ ಅಂತಹ ಹಿಂದೀಯರು ಸಂಪೂರ್ಣ ವಿದೇಶಿಯರಾಗಿರುವರು. ಎಂದು ದಂಗೆಖೋರರಿಗೆ ಎಚ್ಚರಿಕೆ ಕೊಡಲಾಗಿದೆ.

ಪಾಕಿಸ್ತಾನವೂ ವೃತ್ತ ಪತ್ರಿಕೆಗಳೂ

ಒಂದು ವರ್ಷದ ಹಿಂದೆ ಪೂರ್ವ ಪಾಕಿಸ್ತಾನವು ಕಲ್ಕತ್ತದ ಅಮೃತ ಬಜಾರ ಪತ್ರಿಕೆಗೆ ತನ್ನ ಪ್ರದೇಶದಲ್ಲಿ ನಿಷೇಧ ಹೂಕಿತ್ತು. ಕೆಲದಿನಗಳ ಹಿಂದೆ ಈ ನಿಷೇಧಕಾಜ್ಞೆಯನ್ನು ಎತ್ತಲಾಯಿತು. ಪಾಕಿಸ್ಥಾನದ ನಿರ್ಬಂಧಕಾಜ್ಞೆಯಿಂದ ಅಮೃತ ಬಜಾರ ಪತ್ರಿಕೆಯ ತೀಕ್ಷ್ಣ ವಾಗ್ಬಾಣ ವಿಧಾನವು ಕದಿಮೆಯಾದಂತೆ ತೋರುವುದಿಲ್ಲ ಇದು ಹೇಗಿದ್ದರೂ ಹಿಂದೆ ಮುಸ್ಲಿಂ ಲೀಗಿನ ಬೆಂಬಲ ಪತ್ರಿಕೆಯೆನಿಸಿದ್ದ ಲಾಹೋರಿನ ಸಿವಿಲ್ ಎಂಡ್ ಮಿಲಿಟರಿ ಗಜೆಟ್ ಎಂಬ ಪತ್ರಿಕೆಯ ಮೇಲೆ ಈಚೆಗೆ ಪಶ್ಚಿಮ ಪಾಕಿಸ್ತಾನ ಸರಕಾರವು ನಿರ್ಬಂಧ ಹೊರಿಸಿದೆ ಸರಕಾರದ ಆ ವಿಚಾರದ ಧೋರಣೆಗಳ ಕುರಿತು ಸ್ವಪ್ನ ಅಭಿವ್ಯಾಯ ನಿವೇದನೆ ಮಾಡುತಿದ್ದುದೇ ಗಜೆಟಿನ ದೊಡ್ಡ ಅಪರಾಧವೆನ್ನಲಾಗುತ್ತಿದೆ

ಇಂಡೋನೇಸ್ಯದಲ್ಲಿ ಕಲಹ ಇತ್ಯರ್ಧ

ಪ್ರಜಾ ಸರಕಾರಕ್ಕೆ ಮನ್ನಣೆ

ಕೊನೆಗೆಂತೂ ಡಚ್ ಸರಕಾರವು ಇಂಡೋನೇಸ್ಯದ ಪ್ರಜಾಪ್ರತಿನಿಧಿಗಳೊಡನೆ ಒಂದು ಒಪ್ಪಂದಕ್ಕೆ ಬಂದಿದೆ ಇದರ ಪ್ರಕಾರ ಅಲ್ಲಿನ ಪ್ರಬಿಪಭುತ್ವ ಪಕ್ಷದವರು ದ್ವೀಪಗಳಲ್ಲಿ ಶಾಂತಿ ಶಿಸುಗಳನ್ನು ಸ್ಥಾಪಿಸಲು ನೆರವಾಗುವರು ಇಂಡೋನೇಸ್ಯನ್ನರಿಗೆ ಅಡಳಿತದಲ್ಲಿ ಹೆಚ್ಚಿನ ಹೊಣೆಗಾರಿಕೆಯನ್ನು ಕೊಡಲಗುವುದು ಸ್ವಲ್ಪ ಅವಧಿಯ ನಂತರ ಆ ದ್ವೀಪಗಳ ಸಂಪೂರ್ಣ ಸ್ವಾತಂತ್ರ್ಯಕ್ಕೂ ಅರ್ಹವಾಗಿ ಪವು ಈಗ ಅಲ್ಲಿ ನಡಸಲ್ಪಡುವ ಗೂರಿಲ್ಲಾ ಕದನಗಳನ್ನು ಸಂಪೂರ್ಣ ನಿಲ್ಲಿಸಲಾಗುವುದು ಜೊಗ್ ಜಕರ್ತಾದಲ್ಲಿ ಪ ಜಾಪ್ರಭುತ್ವ ಅಧಿಕಾರವನ್ನು ಸ್ಥಾಪಿಸಲಾಗುವುದು ನಂತರ ಒಂದು ದುಂಡುಮೇಜಿನ ಪರಿಷತ್ತನ್ನು ಕರೆಯಲಾಗುವುದು ಆಗಲ್ಲಿ ಇಂಡೋನೇಸ್ಯದ ಸಂಯುಕ್ತ ಸ್ವತಂತ್ರ ರಾಜ್ಯಸ್ಥಾಪನೆಯ ಕುರಿತು ಇತ್ಯರ್ಥವಾಗುವುದು

ಅನೆಕಾಲಿನ ವ್ಯಾಧಿಗೆ ಔಷಧಿ

ಅಮೇರಿಕನ್ ವೈದ್ಯರ ಯಶಸ್ವಿ ಪ್ರಯೋಗ

ಶೆತಮಾನಗಳಿಂದ ಉಷ್ಣವಲಯಗಳಲ್ಲಿ ವಾಸಿಸುವ ಜನರನ್ನು ಪೀಡಿಸುವ ಫ್ಯಾಲೇರಿಯಾಸಿಸ್ (ಆನೆಕಾಲು ವ್ಯಾಧಿಯೆಂದು ಈ ಕಡೆಗಳಲ್ಲಿ ತಿಳಿಯಲ್ಪಡುತ್ತದೆ) ಎಂಬ ರೋಗದ ಅಣುಗಳನ್ನು ನಾಶಮಾಡುವ ಒಂದು ಔಷಧಿಯನ್ನು ಅಮೇರಿಕನ್ ವೈದ್ಯಕೀಯ ಸಂಶೋಧಕರು ಕಂಡು ಹಿಡಿದಿದ್ದಾರೆಂದು ಇದೀಗ ಪ್ರಕಟಿಸಲ್ಪಟ್ಟಿದೆ.

ಹೆಟ್ರಾಜನ್ ಎಂದು ಈ ಔಷಧಿಯ ಹೆಸರು. ನ್ಯೂಯೋರ್ಕಿನ ಲೆಡರ್ಲೆ ಪ್ರಯೋಗಾಲಯದಲ್ಲಿ ಇದನ್ನು ಶೋಧಿಸಲಾಯಿತು. ಇದುತನಕ ಸುಮಾರು ಒಂದು ಸಾವಿರಕ್ಕೂ ಮಿಕ್ಕಿದ ವಿವಿಧ ಔಷಧಿ ಮಿಶ್ರಣಗಳನ್ನು ಫ್ಯಾಲೆರಿಯಾ ಅಣುನಾಶಕ್ಕಾಗಿ ಪ್ರಯೋಗ ಮಾಡಿ ಅಯಶ್ವಸಿಯಾದ ನಂತರ ಕೊನೆಗೆ ಹೆಟ್ರಾಜನ್ ಎಂಬುದಿದು ಅತ್ಯಂತ ಪರಿಣಾಮಕಾರಿಯೆಂದು ಸಿದ್ಧಾಂತವಾಗಿದೆ

ಆನೆಕಾಲಿನ ಮೂಲ

ಕೈಕಾಲುಗಳೇ ಮೊದಲಾದ ಶರೀರದ ಬೇರೆ ಬೇರೆ ಅವಯವಗಳು ವಿನರೀತವಾಗಿ ಊದಿಕೊಳ್ಳುವುದು ಈ ರೋಗದ ಒಂದು ಸಂಕಷ್ಟದಾಯಕ ಲಕ್ಷಣ ಪ್ರಾರಂಭ ಅವಸ್ಥೆಯಲ್ಲಿ ಈ ಊದುಕೊಳ್ಳುವಿಕೆ ಸ್ವಲ್ಪ ಹೆಚ್ಚೂ ಮತ್ತೆ ಸ್ವಲ್ಪ ಕಡಿಮೆಯೂ ಆಗುವುದು ಕಲವು ವರ್ಷಗಳ ನಂತರ ಇದು ಶಾಶ್ವತವಾಗಿ ಆನೆಕಾಲು (ಎಲಿಪೆಂಟಿಸಿಸ್) ವ್ಯಾಧಿಯಾಗಿ ಮಾರ್ಪಾಟು ಹೊಂದುವುದು ಈ ಅವಸ್ಥೆಯಲ್ಲಿ ಕೈಕಾಲುಗಳು ನಂಬಲಸಾಧ್ಯವಾದ ಗಾತ್ರವನ್ನು ತಳೆಯುವವು ಮಾಂಸಖಂಡದೊಡನೆ ಚರ್ಮವೂ ದಪ್ಪನಾಗುವುದು

ಈ ರೋಗವನ್ನುಂಟುಮಾಡುವಂತಹುದು ಒಂದು ಹುಳ ಇದು ರಕ್ತದಲ್ಲಿ ಸೂಕ್ಷ್ಮವಾದ ಮೊಟ್ಟೆಗಳನ್ನಿಡುವುದು ಈ ರೋಗ ವಿದ್ವೆವನ್ನು ಕಚ್ಚಿದ ಸೊಳ್ಳೆಯ "ಕೊಕ್ಕಿನಲ್ಲಿ" ಈ ಮೊಟ್ಟೆಗಳು ಅಂಟಿಕೊಂಡಿರುತ್ತವೆ. ಇನ್ನೊಬ್ಬನಿಗೆ ಕಚ್ಚುವಾಗ ಅವು ಅವನ ದೇಹದಲ್ಲಿ ತೂರಿಸಲ್ಪಡುತ್ತವೆ. ಮೊಟ್ಟೆಗಳು ಅಭಿವೃದ್ಧಿಯಾಗಿ ಹುಳಗಳಾಗುತ್ತವೆ, ಹುಳಗಳು ಪುನಃ ಮೊಟ್ಟೆಗಳನ್ನು ಇಡುತ್ತವೆ ಹೀಗೆ ಈ ಕ್ರಿಯೆಯು ಅಂತ್ಯವಿಲ್ಲದಂತೆ ಸಾಗುತ್ತಿದೆ.

ಮದ್ದು

ಈಗ ಕಂಡುಹಿಡಿಯಲ್ಪಟ್ಟಿ ಹೆಟ್ರಾಜನ್ ಎಂಬ ಔಷಧಿಯು ಫ್ಯಾಲೇರಿಯಾಸಿಸ್ ರೋಗದ ಮನುಷ್ಯನ ರಕ್ತದಲ್ಲಿನಆ ಮೊಟ್ಟೆಗಳನ್ನು ಸಂಪೂರ್ಣ ನಾಶಗೊಳಿಸುವುದು, ಹೊಸ ಔಷಧಿಯು ಒಂದೆ ಬೀಳೀ ಮಾತ್ರೆಯ ರೂಪದಲ್ಲಿದೆ–ಸುಲಭವಾಗಿ ಬಾಯಿಯಿಂದ ಸೇವನೆ ಮಾಡಬಹುದು. ಅದರಿಂದ ಶರೀರಕ್ಕೂ ಯಾವ ಕೆಡಕೂ ಸಂಭವಿಸುವುದಿಲ್ಲ

ರೋಗದ ವ್ಯಾಪ್ತಿ

ನಮ್ಮ ದೇಶದಲ್ಲಿ ಸಮುದ್ರ ಕರಾವಳಿಗಳಲ್ಲಿ ಹಲವು ಕಡೆ ಆನೆಕಾಲಿನ ರೋಗವು ಹರಡಿರುವುದು ಕಂಡುಬಂದಿದೆ ಮಂಗಳೂರು ನಗರದಲ್ಲಿ ಅದರ ಹಾವಳಿಯು ಸ್ವಲ್ಪ ವಿನರೀತವಾಗಿಯೇ ಇದೆಯೆನ್ನಬಹುದು. ಈಚೆಗೆ ಉಡ್ಡಿ, ಕಾಸರಗೋಡುಗಳಲ್ಲೂ ಅದು ತಲೆಯೆತ್ತುತ್ತಿದೆಂದು ಹೇಳಲಾಗಿದೆ. ತಲಚೇರಿ, ಕಲ್ಲಿಕೋಟ, ಕೊಚ್ಚಿನ್, ತಿರುವಾಂಕೂರುಗಳಲ್ಲೂ ಬಹಳವಾಗಿದೆ. ಬಂಗಾಲದಲ್ಲಿಯೂ, ಪೂರ್ವ ಕರಾವಳಿಯ ಹಲವು ಪಟ್ಟಣಗಳಲ್ಲೂ ಪೀಡೆ ಕೊಡುತ್ತಿದೆ ಬ್ರಿಟಿಷ್ ಗಿಯಾನಾ, ಪೋರ್ಟೊರಿಕೊ, ಮೊದಲಾದ ಪಡ್ಡ ಅಮೇರಿಕದ ದ್ವೀಪ ಪ್ರದೇಶಗಳಲ್ಲಿ, ವೆಸ್ಟ್ ಇಂಡಿಸ್, ಜಮೈಕಾ, ಈಸ್ಟ್ ಇಂಡಿಸ್ ದ್ವೀಪಗಳಲ್ಲೂ ಇದು ಇರುವುದು

ಮೇಲ್ಕಂಡ ಲೆಡರ್ಲೆ ಪ್ರಯೋಗಾಲಯದವರು ತಮ್ಮ ಹೆಟ್ರಾಜನ್ ಔಷಧಿಯನ್ನು ಉಷ್ಣವಲಯದ ಅಮೇರಿಕದ ಬಳಿಯ ದ್ವೀಪಗಳಲ್ಲಿಸ ಆನಕಾಲು ವ್ಯಾಧಿಗ್ರಸ್ತರ ಮೇಲೆ ಪ್ರಯೋಗಿಸಿ ಶೇಕಡಾ 96ರಷ್ಟು ಯಶಸ್ವಿ ಪರಿಣಾಮಗಳನ್ನು ಪಡೆದಿದ್ದಾರೆ.

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶ್ಯಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿವಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶ್ಯಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶ್ಯಲು ಬಸ್ಸು ಸರ್ವಿಸುಗಳು ಓಡಿಸಬೇಕಾದೆ, ಕೊಯಮುತ್ತೂರಲ್ಲಿರುವ ಸರ್ಕಾರಿ R. T O ರವರು ಸೆಂಕ್ಷನ್ ಮಾಡಿ, ಅದು ಕೂಡಾ ಗ್ಯಾಸು ಬಸುಗಳಿಂದಲೇ ಪ್ರತಿಸಬೇಕಾಗಿ ನಿರ್ಭಂದವಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದೆ ಸ್ಪೆಶ್ಯಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯುದೆ.

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

ಮಂಗಳೂರು
22-12-48

THE CANARA BANKING CORPORATION LTD.

(Incorporated in British India)

Estd. 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,90,000

(Regd)

ಅಮೃತಾಂಜನ

ತಲೆನೋವನ್ನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವಿನಿಗಳಿಗೂ ಎದೆನೋವು, ಗ್ಲಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ನೋವು, ವಕ್ಷನಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ನಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ಪನ್ನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಪರಿಹರಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಶ್ವಾಸ, ಕೃಯ, ಶೀತಜಾಡ್ಯ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 10—6—1949 [ಸಂಚಿಕೆ 23]

ಹಿಂದೂ ಮಸೂದೆಯ ಕುರಿತು ರೇಡಿಯೋ ಚರ್ಚೆ

★ ಹಿಂದೂ ಧರ್ಮದ ಅದ್ಭುತ ಚೈತನ್ಯ ★

ಶ್ರೀ ಎಚ್. ವಿ. ಕಾಮತರ ಭಾಷಣ

ಇತ್ತೀಚೆಗೆ ಆಲ್ ಇಂಡಿಯಾ ರೇಡಿಯೋದವರು ಹಿಂದೂ ಸಮಾಜ ಸೂತ್ರಸುಧಾರಣೆ ಮಸೂದೆಯ ಕುರಿತು ಒಂದು ರೇಡಿಯೊ ಚರ್ಚೆ ಸಭೆಯನ್ನು ಏರ್ಪಡಿಸಿದ್ದರು. ಇದರಲ್ಲಿ ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ, ಶ್ರೀ ಕೃಷ್ಣಸ್ವಾಮಿ ಬಾರತಿ ಮತ್ತು ಶ್ರೀ ಎಚ್. ವಿ ಕಾಮತರು ಮಸೂದೆಯ ಪರವಾಗಿಯೂ, ಶ್ರೀ ಅನಂತಶಯನ ಅಯ್ಯಂಗಾರ್ ಜಯವಾಲ್ ಸಿಂಗ್, ಬಾಲಕೃಷ್ಣ ಶರ್ಮ ಇವರು ವಿರೋಧವಾಗಿಯೂ ಮಾತನಾಡಿದರು ಡಾ। ಪಂಜಾಬ್‌ರಾವ್ ದೇಶ್‌ಮುಖ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಲೇಖನದಲ್ಲಿ ಶ್ರೀ ಎಚ್ ವಿ ಕಾಮತರ ವಿಚಾರವರ ಸೂಚನೆಗಳನ್ನು ಕೊಡಲಾಗಿದೆ

ಹಿಂದೂ ಸಮಾಜ ಸೂತ, ಸುಧಾರಣೆಗೆ ವಿರೋಧವಿದ್ದವರು ಸನಾತನ ಹಿಂದೂ ಧರ್ಮ ಶಾಸ್ತ್ರಗಳ ಮತ್ತು ಸ್ಮೃತಿಗಳ ಆಧಾರವ ಮೇಲೆ ತಮ್ಮ ತರ್ಕವನ್ನು ಸಮರ್ಥಿಸುತ್ತಾರೆ ಆದುದರಿಂದ ಈ ಸಂದರ್ಭದಲ್ಲಿ ನಾವು "ಧರ್ಮವೆಂದರೇನು?" ಎಂಬುದನ್ನೂ ವಿಶದೀಕರಿಸಿಕೊಳ್ಳುವುದು ಯುಕ್ತವಿದೆ. ಅದನ್ನು "ಸನಾತನಾ ನಿತ್ಯನೂತನ" ಎಂದು ಸರಿಯಾಗಿಯೇ ವರ್ಣಿಸಲ್ಪಟ್ಟಿದೆ. ಹಿಂದೂಧರ್ಮದ ಮೂಲ ತತ್ವಗಳು ಯಾವ ಸಂದರ್ಭದಲ್ಲೂ ಬದಲಾಯಿಸಲ್ಪಟ್ಟಿಲ್ಲವಾದರೂ ಬೇರೆ ಬೇರೆ ಕಾಲಪರಿಸ್ಥಿತಿಗಳಲ್ಲಿ ಬದಲಾಗುವ ಸಾಮಾಜಿಕ ವ್ಯವಸ್ಥೆಗನುಗುಣವಾಗಿ ಆ ತತ್ವಗಳಿಗೆ ಹೊಸ ಹೊಸ ಅರ್ಥವು ಕೊಡಲ್ಪಟ್ಟಿರುವುದು ಮೇಲಿಂದ ಮೇಲೆ ಗಮನಕ್ಕೆ ಬರುತ್ತದೆ.

ಹಿಂದೂ ಧರ್ಮದ ಅಗಾಧ ಚೈತನ್ಯ

ತನ್ನ ದೀರ್ಘ ಇತಿಹಾಸದಲ್ಲೆಲ್ಲ ಹಿಂದೂ ಧರ್ಮವು ವಿಸ್ಮಯಕರವಾದ ಚೈತನ್ಯವನ್ನು ತೋರಿಸಿದೆ. ಬಾಳಿ ಬೆಳೆಯುವಂಥಾ ಅದರ ಶಕ್ತಿಯು ಅತ್ಯದ್ಭುತವಾಗಿದೆಂದು ಕೋರಿ ಬರುತ್ತದೆ ಕಠಿಣ ರಾಜಕೀಯ ಬಿಕ್ಕಟ್ಟಿನಲ್ಲೂ, ಪಲಿವಾದ ಸಮಾಜಕ್ರಾಂತಿಯಲ್ಲೂ, ಅದು ತನ್ನ ಅಸಾಮಾನ್ಯ ತತ್ವಜ್ಞಾನದ ಶಕ್ತಿಯನ್ನು ತೋರಿಸಿದೆ ಈ ಶಕ್ತಿ ಸಾಮರ್ಥ್ಯಕ್ಕೆ ಪರುಷದಂತಿರುವ ವೇದಾಂತ ತತ್ವಜ್ಞಾನದ ಅವಿಗಲ್ಲೇ ಆಧಾರವೆನ್ನಬಹುದು ಈ ವೇದಾಂತ ತತ್ವಜ್ಞಾನದಿಂದಲೇ ನಮ್ಮ ಸ್ಮೃತಿಸೂತ್ರಕಾರರು ಸ್ಫೂರ್ತಿಯನ್ನು ಪಡೆದರು ಆ ತತ್ವಜ್ಞಾನದಿಂದಲೆ ಪೌರರಲ್ಲಿ ದೃಢವಿಶ್ವಾಸದ ಆಳಬೇರುಗಳನ್ನು ಬಿಟ್ಟ ಸ್ವಾತಂತ್ರ್ಯ ಸಮಾನತೆಗಳು ಉಪದೇಶಿಸಲ್ಪಟ್ಟವು ಧರ್ಮಾರ್ಥ ಕಾಮ ಮೋಕ್ಷ ಸಾಧನೆಯಲ್ಲಿ ಸ್ತ್ರೀಪುರುಷರಿಗೆ ಸಮಾನತೆಯ ಸ್ಥಾನವನ್ನು ಕಲ್ಪಿಸಿದ ತತ್ವಜ್ಞಾನವು ಅದೇ ಆಗಿರುತ್ತದೆ

ಆದುದರಿಂದ ಸ್ತ್ರೀಯರ ಹಕ್ಕು ಬಾಧ್ಯತೆಗಳನ್ನು ದಬ್ಬಿಕ್ಕಲು ಪ್ರಯತ್ನಿಸಿದವರು ತತ್ವಜ್ಞಾನ ಸ್ಫೂರ್ತಿಕರಲ್ಲಿ, ಅವರು ಸ್ಫೂರ್ತಿಯ ಕ್ರಿಯಾತ್ಮಕ ಶಕ್ತಿಯ ಮೂಲಕ್ಕೆ ಮನಸ್ಸಿಟ್ಟ ಶೋಧಿಸುತ್ತಿದ್ದರು ಅವರ ತತ್ವಜ್ಞಾನದ ಅರ್ಥವನ್ನು ಹೇಳಲು ಪ್ರಯತ್ನಿಸಿದ್ದು ಯಾಂತ್ರಿಕ ಮನೋಧರ್ಮದ ಟೀಕಾಕಾರರು ಆ ಕೆಲಸವನ್ನು ಮಾಡಿದರು ಆದುದರಿಂದ ಸ್ತ್ರೀಯರ ಅಧಃಪತನಕ್ಕೆ ಹೊಣೆಗಾರರು ಸ್ಮೃತಿಕಾರರಲ್ಲ—ಟೀಕಾಕಾರರು ವೇದ ಕಾಲದಲ್ಲೂ, ಆ ನಂತರದ ಬಹುಕಾಲದ ವರೆಗೂ ಭಾರತೆ ಸ್ತ್ರೀಯರಿಗೆ ಸರ್ವಾಂಗದಲ್ಲಿ ಉನ್ನತ ಸ್ಥಾನಮಾನಗಳಿದ್ದುವೆಂಬ ಸಂಗತಿಯು ಲೋಕವಿದಿತವಿದೆ ಆಬರೆ ಮಧ್ಯಕಾಲದಲ್ಲಿ ಹಿಂದೂ ಧರ್ಮವು ಕ್ಷೀಣತೆಗೊಳ್ಳುತಿದ್ದಾಗ ಸ್ತ್ರೀಯರ ಹಕ್ಕುಗಳು ಸಿರ್ಬಂಧಕ್ಕೊಳಗಾದುವು ಆ ಸಿರ್ಬಂಧಗಳೇ ಈಗಿನ ಕಾಲದ ತನಕ ಮುಂಬರಿದು ಬಂದಿವೆ

ಸಮಾನತೆಯ ತಾಮ್ರಪಟ

ಆಸ್ತಿ, ವಿವಾಹ ದತ್ತು ವಿವಾಹವಿಚ್ಛೇದಗಳ ಸಂಬಂಧವಾಗಿ ಹಿಂದೂ ಸ್ತ್ರೀಪುರುಷರಿಬ್ಬರಿಗೂ ಅವಿಚ್ಛಿನ್ನವಾದ ಕೆಲವು ಸಾಮಾಜಿಕ ಅಸಮಾನತೆಗಳನ್ನು ತಗದು ಹಾಕುವುದು ಹಿಂದೂ ಸಮಾಜಸೂತ ಸುಧಾರಣೆಯ ಮಸೂದೆಯ ಉದ್ದೇಶವಾಗಿದೆ ಇಂತಹ ಪ್ರಯತ್ನಗಳಿಗೆ ಸತತವಾಗಿ ವಿರೋಧವುದೆಂಬುದನ್ನು ಸ್ಪಷ್ಟವಾಗಿ ಹೇಳಿಯೂ ಮುಗಿಸಿದೆ. ಸ್ವಾತಂತ್ರ್ಯ ಸಮ್ಮಕಾಲದಲ್ಲಿಯೂ ಸ್ತ್ರೀಯರು ಹೆಚ್ಚಿನವಾಗಿ ಸಾರ್ವಜನಿಕ ವ್ಯವಹಾರದಲ್ಲಿ ಮಾತ್ರವಲ್ಲ ಯುದ್ಧರಂಗದಲ್ಲಿ ಕೂಡ ಭಾಗವಹಿಸುತ್ತಿರುವುದನ್ನು ನಾವು ಗಮನಿಸಬೇಕು

ಇನ್ನೊಮ್ಮೆ ವಿಜ್ಞಾನ ಆಧುನಿಕ ಸಮಾಜ ಅಭಿವೃದ್ಧಿಯ ದೃಷ್ಟಿಯಿಂದ ಈ ಸುಧಾರಣೆಗಳ ಆವಶ್ಯಕತೆಯನ್ನು ನಾವು ಒಪ್ಪುವಾಗ ಈ ಹೊಸ ಮಸೂದೆಯ ಎಲ್ಲಾ ಕಲಮುಗಳನ್ನು ಇದಕ್ಕಿದ್ದಂತೆ ಸ್ವೀಕರಿಸಬೇಕೆಂದರ್ಥವಲ್ಲ ಮಸೂದೆಯ ಕೆಲವು ಕಲಮುಗಳು ಯೋಗ್ಯರೀತಿಯಲ್ಲಿ ತಿದ್ದುಪಡಿಮಾಡುವುದೂ ಅವಶ್ಯವೆ ಇದೆ ಪಟನಾ ಸಮಿತಿಯ ಪ್ರತಿಯೊಬ್ಬ ಸದಸ್ಯನೂ ಈ ಕುರಿತು ತನಗೆ ತೋರಿದಂತೆ ಮೂಕನಾಡಲೂ ಅಭಿಪ್ರಾಯವನ್ನು ಕೊಡಲೂ ಸ್ವತಂತ್ರನಿರುತ್ತನೆ ಶಾಸನ ಸಭೆಯಿಂದ ಈ ಮಸೂದೆಯು ಸಂಪೂರ್ಣ ಪರಿಶೀಲನಾ ನಂತರ ಸ್ವೀಕೃತವಾಗಿ ಹೊರಬರುವಾಗ ಅದು ಸ್ತ್ರೀಯರ ಹಕ್ಕು ಬಾಧ್ಯತೆಗಳ ತಾಮ್ರ ಶಾಸನವಾಗಿ ಮೆರೆಯುವುದೆಂಬುದರಲ್ಲಿ ನನಗೆ ಲವಲೇಶವೂ ಸಂದೇಹವಿಲ್ಲ ಹಿಂದೂ ಸಮಾಜವು ಕೂತ ನವಚೇತನ ಭರಿತವಾಗಿಯೂ ಏಕ್ಯಮತ್ಯದ್ದಾಗಿಯೂ ಖಂಡಿತ ಮಾರ್ಪಡುವುದು ಹೊಸ ಮಸೂದೆಯಿಂದ. ಈ ಉದ್ದೇಶ ವರಿಪೂರ್ಣವಾಗದಿದ್ದರೆ ಅದು ನನ್ನ ದೇಶದ ಬಂಧು ಭಗಿನಿಯರ ಬೆಂಬಲಕ್ಕೆ ಕಿಂಚಿತ್ತಾದರೂ ಯೋಗ್ಯವಾಗಿರುವುದಿಲ್ಲವೆಂದು ನನ್ನ ಅಭಿಪ್ರಾಯ

THE

UNITED INDIA LIFE ASSURANCE CO., LTD.

(H O MADRAS.)

ANNOUNCEMENT

We have great pleasure in announcing that our Branch Office for S. Kanara, Malabar, and Coorg, now functions at our premises at K. S. Rao Road, Mangalore.

THE BRANCH MANAGER.

ನದಿಗಳ ನೀರು ನೀರಾವರಿಗೆಳಿಗೆ ಬಳಸಿಕೊಳ್ಳಲು
ಭಾರತ ಸರಕಾರದ ಯೋಜನೆ
1200 ಕೋಟಿ ರೂಪಾಯಿಯ ಶಕ್ತಿ ಸೌಧಾಗಾರ

ನಮ್ಮಲ್ಲಿ ನದಿಗಳೂ ನದಿಕಣಿವೆಗಳೂ ತುಂಬಾ ಇವೆ. ಜಗತ್ತಿನ ಮುಂದರಿದ ದೇಶಗಳಲ್ಲೆಲ್ಲ ಇಂತಹ ಕಣಿವೆ ಪ್ರದೇಶಗಳನ್ನು ತುಂಬಾ ಲಿಭಿವೃದ್ಧಿ ಪಡಿಸಲಾಗಿದೆ. ಇದನ್ನು ತಿಳಿದು ನಮ್ಮ ಪ್ರಾಂತ್ಯ ಸರಕಾರಗಳು ಸ್ಫೂರ್ತಿಗೊಂಡು ಒಂದಲ್ಲ ಒಂದು ತರದ ಕಣಿವೆಯೋಜನೆಗಳನ್ನು ಸಿದ್ಧ ಪಡಿಸಿವೆ. ಈಗಾಗಲೇ ದೇಶದಲ್ಲಿ ಇಂತಹ ಸುಮಾರು 170 ಯೋಜನೆಗಳು ಜಾರಿಯಲ್ಲಿವೆ ಇವುಗಳಿಗೆ ಒಟ್ಟು ಸುಮಾರು 1200 ಕೋಟಿ ರೂಪ್ಯಾಯಿಗಳ ಖರ್ಚು ತಗಲಬಹುದು. ಆದರೆ ಈ ಯೋಜನೆಗಳೆಲ್ಲವೂ ಏಕಕಾಲದಲ್ಲಿ ಪ್ರಾರಂಭಿಸಲು ಆಸಾಧ್ಯ. ಆದುದ್ರಿಂದ ಯಾವು ಯಾವದಕ್ಕೆ ಸ್ವಭಾವ ಪಾಧಾನ್ಯತೆ ಕೊಡಬೇಕೆಂಬುದರ ಕುರಿತು ಸದ್ಯದಲ್ಲೇ ದಿಲ್ಲಿಯಲ್ಲಿ ಒಂದು ಪರಿಷತ್ತು ಸೇರಿ ನಿರ್ಣಯಿಸಲಾಗುವುದು.

ಭಾರತದಲ್ಲಿ ಪ್ರಕೃತಿ ರಚನೆಯು ಅದಿಷ್ಟು ಸೌಕರ್ಯವನ್ನು ಕಲ್ಪಿಸಿದೆಯೆಂದರೆ ಪ್ರತಿಯೊಂದು ಪ್ರಾಂತ್ಯ ಇಲ್ಲವೆ ಸಂಸ್ಥಾನದಲ್ಲಿ ಯಾವುದಾದರೊಂದು ನದಿಯು ಮಧ್ಯ ಭಾಗದಿಂದ ಹರಿಯುತ್ತಿರುವುದು ಕಂಡ್ಯ ಬರುತ್ತದೆ.

ದೇಶದ ಕೆಲವು ಬಾಗಗಳಿಗೆ ನದಿಗಳು ವಿಪುಲ ಸಂಪತ್ತು ಅಭಿವೃದ್ಧಿಗಳನ್ನು ತಂದು ಕೊಟ್ಟಿದೆ ನಿಪುಣ ದೇಶವಿದೇಶ ನೀರಾವರಿ ತಜ್ಞರು ಶ್ರಮವಹಿಸಿ ನಮಗೆ ಅಸಂಖ್ಯಾತ ಕಾಲುವೆ, ಆಣೆಕಟ್ಟು ಮತ್ತು ಜಲಾಶ್ರಯಗಳನ್ನು ಕಲ್ಪಿಸಿಕೊಟ್ಟಿರುವರು ಇದರಿಂದ ಭಾರತಕ್ಕೆ ಜಗತ್ತಿನ ಅತೀ ವಿಶಾಲವಾದ ನೀರಾವರಿ ಪ್ರದೇಶವಿರುವಂತಾಗಿದೆ ದೇಶದ ಇತರ ಅನೇಕ ಕಡೆಗಳಲ್ಲಿನ ನದಿಗಳು ಕಾಲ ಕಾಲಕ್ಕೆಂಬಂತೆ ನೆರೆಯಿಂದ ತುಂಬಿದವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಫಲವತ್ತಾದ ಮಣ್ಣನ್ನು ತರುವುದರೊಂದಿಗೆ ಕೆಲ ಸಂದರ್ಭಗಳಲ್ಲಿ ಜೀವ ಸೊತ್ತುಗಳ ಅಪಾರ ಹಾನಿಯನ್ನೂ ಉಂಟುಮಾಡುತ್ತದೆ

1943ರಲ್ಲಿ ಬಿಹಾರದ ದಾಮೋದರ ನದಿಯೂ ಬಂಗಾಲದ ಕೋಸಿ ನದಿಯೂ ಉಕ್ಕಿ ಹರಿದು ಅವರ್ಣನೀಯವಾದ ಗೋಳನ್ನುಂಟುಮಾಡಿದವು ಇದರಿಂದ ಕಣ್ಣು ತೆರೆದ ನಮ್ಮ ಕೇಂದ್ರ ಸರಕಾರದ ನೀರಾವರಿ ಮತ್ತು ವಿದ್ಯುತ್ ಖಾತೆಯವರೂ ಬಿಹಾರ ಬಂಗಾಲ ಸರಕಾರದ ಪ್ರತಿನಿಧಿಗಳೂ ಒಟ್ಟು ಸೇರಿ ಮೇಲ್ಕಂಡ ನದಿಗಳ ಉಬ್ಬುವಿಕೆಯನ್ನು ತಡೆಗಟ್ಟಲು ವಿಧಾನಗಳನ್ನು ಸರ್ಯಾಲೋಚಿಸತೊಡಗಿದರು ಇದರಿಂದ ಹೊಸದೊಂದು ಧೋರಣೆಯ ಜನ್ಮವೆತ್ತಿತು

ಅಗಾಧ ವೆಚ್ಚ

ಪ್ರಕೃತಿಯ ಒಡೆಗಳನ್ನು ಬಗ್ಗಿ ಸ್ವೀಕರಿಸಿದರಲು ನಿರ್ಧಾರಗಳಾದುವು ಇದೇ ಹೊಸ ಧೋರಣದ ಮೂಲ ಉದ್ದೇಶ ನೆರೆಗಳನ್ನು ಹತೋಟಿಯಲ್ಲಿ ಹಿಡಿಯುವುದು, ಅದೇ ಸಮಯಕ್ಕೆ ಹೆಚ್ಚಾದ ಅವರ ನೀರನ್ನು ಕೃಷಿಸಾಗುವಳಿಗೂ ವಿದ್ಯುತ್ ಶಕ್ತಿ ಉತ್ಪಾದನೆಗೂ, ಮಿನುಗಾರಿಕೆಗೂ, ಆಂತರಿಕ ನೌಕಾ ವ್ಯಯಾಣಕ್ಕೂ, ಫಲವತ್ತಾದ ಮಣ್ಣಿಗಾಗಿಯೂ, ಕುಡಿಯುವ ನೀರಿನ ಸರಬರಾಯಿಗೂ, ಅಲ್ಲದೆ ವಿಹಾರದ, ಮನರಂಜನೆಯ ತೋಟ ಮೊದಲಾದ ಸ್ಥಳಗಳನ್ನು ರಚಿಸಲಿಕ್ಕೂ ವ್ಯಯಿಸಲಾಯಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ ಭಾರತ ನದಿಗಳ ನೀರನ್ನು 'ವಿವಿಧ ಉದ್ದೇಶ'ಗಳಿಗೆ ಬಳಸುವುದು ಹೊಸ ಧೋರಣೆಯ ನಿಜವಾದ ಧ್ಯೇಯವಾಯಿತು.

ಈ "ವಿವಿಧೋದ್ದೇಶ" ವಿಚಾರ ದೀಸಿಕೆಯು ಪ್ರಾಂತ್ಯಗಳೆಲ್ಲಾ ಯೋಜಕರ ಕಲ್ಪನೆಯನ್ನು ಬೆಳಗಿಸಿತು.

170 ಯೋಜನೆಗಳು

ಈಗ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಕಾರ್ಯ ಪ್ರವೃತವಾಗಿರುವ, ನಿರ್ವಹಿಸಲು ಹೆಡಿಯಲಿಕ್ಕುವ, ಯೋಜಿಸುತ್ತಲಿರುವ ಮತ್ತು ಪರಿಶೀಲ್ಲನೆಗೊಳಪಟ್ಟ ಸುಮಾರು 170 ಯೋಜನೆಗಳು ಇವೆ ಇವುಗಳ ಒಟ್ಟು ಖರ್ಚು 1200 ಕೋಟಿ ರೂಪ್ಯಾಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ ಇದು ಕೇಂದ್ರ ಸರಕಾರದ ಒಟ್ಟು ವಾರ್ಷಿಕ ಉತ್ಪತ್ತಿಯ ನಾಲ್ಕು ಪಾಲಷ್ಟಾಗುತ್ತದೆ ಇಲ್ಲವೆ ಏದು ಪಾಂತ್ಯಗಳಾದ, ಪಶ್ಚಿಮ ಬಂಗಾಲ, ಬಿಹಾರ, ಅಸ್ಸಾಮ, ಮಧ್ಯಪ್ರಾಂತ, ಪೂರ್ವ ಪಂಜಾಬಗಳ ಸರಕಾರಗಳ ಒಟ್ಟು ವಾರ್ಷಿಕ ಉತ್ಪತ್ತಿಯ 12 ಪಾಲಷ್ಟಾಗುತ್ತದೆ ಈ ಯೋಜನೆಗಳಿಗೆಲ್ಲ ಬೇಕಾಗುವ ಸಲಕರಣೆ ಸಾಮಗ್ರಿಗಳು ಇನ್ನೂ 20 ವರ್ಷಕ್ಕಾದರೂ ಸಿಗುವುದು ಕಷ್ಟ. ಮತ್ತೆ ತಜ್ಞ ಯಾಂತ್ರಿಕರ ಮತ್ತು ಯೋಜಕರ ಸಂಖ್ಯೆಯಂತೂ ನಿರ್ದಿಷ್ಟ ಮಿತಿಯದಿರುವುದರಿಂದ ಇರುವ ಈ ಅತ್ಯಲ್ಪ ಮಂದಿಗಾಗಿ ವ್ಯಾಂತ್ಯ ಮತ್ತು ಸಂಸ್ಥಾನ ಸರಕಾರಗಳಲ್ಲಿ ಅದಿಷ್ಟು ಸೈಪೋಟಿ ನಡೆಯ ಬಹುದೆಂದು ವಾಚಕರೇ ಊಹಿಸಬಹುದು

ಸ್ಥಿತ್ಯಂತರದ ಪರಿಸ್ಥಿತಿ

ಪರಿಸ್ಥಿತಿ ಹೀಗಿರುವಾಗ ಯಾವ ಪ್ರಾಂತ್ಯದ ನೀರಾವರಿ ಮತ್ತು ಕೃಷಿ ಸಂಬಂಧ ಅಭಿವೃದ್ಧಿಯ ಯೋಜನೆಯು ಅತೀ ಮಹತ್ವದ್ದೆಂಬುದನ್ನು ಕೇಂದ್ರ ಸರಕಾರವೇ ನಿರ್ಣಯಿಸಬೇಕಾ. ಬ್ರಿಟಿಷ್ ಸರಕಾರದ ಕಾಲದಲ್ಲಿ ಇಂತಹ ಯೋಜನೆಗಳು ಸೆಕ್ರಟರಿ ಆಫ್ 'ಸ್ಟೇಟ್' ಅವರಿಂದ ಮಂಜೂರು ಮಾಡಲ್ಪಡುತಿದ್ದುವು. ಅವರಿಗೆ ಭಾರತ ಕೇಂದ್ರ ಸರಕಾರದವರು ಸಲಹೆಕೊಡುತಿದ್ದರು. ಪ್ರಾಂತ್ಯ ಪ್ರಾಂತ್ಯಗಳೊಳಗಿನ ಭಿನ್ನಾಭಿಪ್ರಾಯಗಳು ಪರಸ್ಪರ ಮಾತುಕತೆಯಿಂದ ಇತ್ಯರ್ಥಿಸಲ್ಪಡುತಿದ್ದುವು. ಇಲ್ಲವೆ ಸೆಕ್ರೆಟರಿ ಆಫ್ ಸ್ಟೇಟರು ಅವನ್ನು ಆಜ್ಞೆಯ ಮೂಲಕ ಮೌನಪಡಿಸುತಿದ್ದರು

ಕಡಿತ ಘಾಯ ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನುಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ ಊದುಬಿಳಿ ನೋವನ್ನು ಕಡಿಮೆ ಮಾಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT

ಚರ್ಮ ಮತ್ತು ತಲೆಭಾಗದ ವ್ಯಾಧಿಗಳು
ವಿಶ್ವವಿಖ್ಯಾತ ಜಾಂಬಕಿನಿಂದ ನಿವಾರಿಸಲ್ಪಡುವುವು

ಜಾಂಬಕಿನಲ್ಲಿರುವ ಅದ್ಭುತ ಔಷಧಿ ಸತ್ವಗಳು ಚರ್ಮದೊಳಗೆ ಆಳಕ್ಕೆ ಹೀರಲ್ಪಡುತ್ತವೆ ಜಾಂಬಕ್ಕುತುರಿತವನ್ನೂ ಉರಿಯುವಿಕೆಯನ್ನೂ ಶೀಘ್ರ ಶಮನಿಸಿ ಕೀವನ್ನು ಸಿಲ್ಲಿಸಿ ವಿಷಾಣುಗಳನ್ನು ನಾಶಮಾಡಿ ಘಾತಗೊಂಡ ಚರ್ಮವನ್ನು ಗುಣಪಡಿಸುವುದಕ್ಕೆ ಇದೇ ಕಾರಣ ಖಂಡಿತವಾಗಿ ಪ್ರಾಣಿಕೊಬ್ಬು ರಹಿತವಾದುದು.

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಚರ್ಮ ವ್ಯಾಧಿಗಳಿಗೂ, ಗಾಯಗಳಿಗೂ, ಅಲ್ಲದೆ ಕ್ರಿಮಿ ಕೀಟ ಕಡಿತ, ನೋವಾಗುವ ಕಾಲು, ಪಾದಾಂಖಂಡ ವೇದನೆ ಮತ್ತು ಶರೀರದಲ್ಲಿ ವೇದನೆಗಳಿಗೂ ಅತ್ಯುತ್ತಮ

ಸುದ್ದಿ ಸಂಗ್ರಹ

ವರ್ಷಕ್ಕೆ ಒಂದು ಮಿಲಿಯ ಟನ್ ಉಕ್ಕನ್ನು ತಯಾರಿಸುವ ಕಾರ್ಖಾನೆಯನ್ನು ಕೇಂದ್ರ ಸರಕಾರದವರು ಸ್ಥಾಪಿಸಲು ಯೋಜಿಸಿರುವರು ಬ್ರಿಟಿಷ್ ಮತ್ತು ಅಮೇರಿಕನ್ ಉಕ್ಕು ತಯಾರಕ ಕಂಪೆನಿಗಳು ಈ ಕುರಿತು ಸವಿಸ್ತಾರ ಯೋಜನೆಗಳನ್ನು ಸಿದ್ಧಗೊಳಿಸಿರುವವು ಕಾರ್ಖಾನೆಗಳು ಒರಿಸ್ಸಾ ಇಲ್ಲವೆ ಮಧ್ಯಪ್ರಾಂತ್ಯದಲ್ಲಿ ಸ್ಥಾಪಿಸಲಾಗುವುದು

✠

ನವ್ಯ ದೇಶದಿಂದ ರಶ್ಯಕ್ಕೆ ರಾಯಬಾರಿಯಾಗಿ ಡಾ ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನೊ ನೇಮಿಸಲಾಗುವುದೆಂದು ಊಹಾಪೋಹೆಗಳಿವೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪೌರ್ವಾತ್ಯ ತತ್ವಜ್ಞಾನದ ಶಾಶ್ವತ ಪೀಠವೂ ಅವರಿಗೆ ಸಿಗಲಿರುವುದು ಇವೆರಡನ್ನು ಅವರು ಹೇಗೆ ನಿರ್ವಹಿಸುವರೋ ತಿಳಿದಿಲ್ಲ

✠

ಮಳೆ ಕತೆಗಳಲ್ಲಿ ಗಾಂಧಿ ಕೆಂಡಗಳನ್ನಾಗಿ ಬಿಂದಿವರಗಳನ್ನು ಸ್ಥಾಪಿಸಲಿಕ್ಕೆಂದು ಸಮಿತಿ ನಿಹೆರಗಳು ಗಾಂಧೀ ಸ್ಮಾರಕ ನಿಧಿ ಧರ್ಮದರ್ಶಿಗಳಿಗೆ ಸಂಚನೆ ಕೊಟ್ಟಿದ ಬರುವ ಬಿಹಿಮಲ್ಲಿ ಇದರ ಕಾರ್ಯರೂಪ ಲೆಯನ್ನು ಸಲಿಸುವ ಪ್ರಯತ್ನ

✠

ರಾಜಕೋಟ್ ಬಳಿಯ ಒರ್ವ ಜಮೀನ್ದಾರನು ಅಸ್ಪೃಶ್ಯರಿಗಾಗಿ ಇಂದಿಗೆ 102 ವರ್ಷಗಳಿಂದ ನಡೆಯುತ್ತಿದ್ದ ಒಂದು ಸಿವಿಲ್ ಕಟ್ಟೆಯನ್ನು ಇತ್ತೀಚೆಗೆ ಕೃತ್ಯರ್ಥಿಸಲ್ಪಟ್ಟಿತು ಕುಟುಂಬದ ಸಂಬಂಧ ತಲಾಂತರಗಳು ಇದರಲ್ಲಿ ಭಾಗವಹಿಸಿದ್ದುವು ಆಸ್ತಿಯ ಮೌಲ್ಯ ಕೆಂತ ಎಷ್ಟೊ ಪಾಲು ಹೆಚ್ಚಿ ಹೋಗಿವೆ ಇಷ್ಟೆರ ತನಕ ಖರ್ಚಾಗಿರುವುದು

✠

"ವರ್ಣವ್ಯತ್ಯಾಸದ ಕಡೆಗೆ ಅಲಕ್ಷ್ಯ ಮಾಡಿದರಿದ ಅಮೆರಿಕದಲ್ಲಿ ಮಿಶ್ರ ಜನರೇ ಹೆಚ್ಚಾಗಿದ್ದಾರೆ ಇಂತಹ ಪರಿಸ್ಥಿತಿಯನ್ನು ದ ಆಫ್ರಿಕದಲ್ಲಿ ಎಂದಿಗೂ ಉಂಟಾಗಲು ಬಿಡಲಾಗುವುದಿಲ್ಲ" ಹೀಗೆಂದು ದ ಆಫ್ರಿಕವನ ಫ್ಯೂಡಾನರು ಮಾಲನರು ಹೇಳಿರುವರೆಂದು ಭಾರತದಯು ರಾ ಸಂಪದ ಪ್ರತಿನಿಧಿ ಸೆಟಲ್‌ವಾಡರು ಕಮ್ಮ ಭಾಷಣದಲ್ಲಿ ಉದ್ಧರಿಸಿದನ್ನು ಗಮನಿಸಿದ ದ ಅಮೇರಿಕದವರು ಮಾಲನರ ಮೇಲೆ ತುಂಬಾ ರೇಗಕೊಂಡಿರುವರೆಂದು ತಿಳಿದುಬರುತ್ತದೆ

✠

120 ಕೋಟಿ ರೂಪ್ಯಾಗಳನ್ನು ಖರ್ಚು ಮಾಡಿ ಸೊಂಬಾಯಿ ಪ್ರಾಂತ್ಯವನ್ನು ಸಂಪೂರ್ಣ ಸ್ವಾವಲಂಬಿಯಾಗುವಂತೆ ಪ್ರಯತ್ನಿಸಲಾಗುವುದು ವರ್ಷಂಪ್ರತಿ 15 ಲಕ್ಷ ಎಕ್ರೆ ಸ್ಥಳವನ್ನು ಕೃಷಿ ಯೋಗ್ಯವಾಗಿ ಮಾಡಲಾಗುವುದು ಹಳ್ಳಿಗಳಲ್ಲಿ ವಿದ್ಯುತ್ ಸರಬರಾಯಿ ವ್ಯವಸ್ಥೆ ಮಾಡಲಾಗುವುದು

ಬ್ರಿಟಿನಿನ ಕೆಲವು ಹಾಸ್ಯಾಸ್ಪದ ಕಾನೂನುಗಳು

ಈಗಲೂ ಶಾಸನ ಪುಸ್ತಕಗಳಲ್ಲಿವೆ

ತಮ್ಮ ಕಾಲ, ಉದ್ದೇಶ ಮತ್ತು ಉಪಯುಕ್ತತೆಯನ್ನು ಕಳೆದುಕೊಂಡಿರುವ ಕೆಲವೊಂದು ಕಾನೂನುಗಳು ಇನ್ನೂ ಬ್ರಿಟಿಷ್ ಶಾಸನ ಪುಸ್ತಕಗಳಲ್ಲಿರುವುದನ್ನು 'ರೆಂಬ್ಲರ್' ನಾಮಾಂಕಿತ ಪತ್ರಿಕೋದ್ಯೋಮಿಗಳೊಬ್ಬರು ಒಟ್ಟುಗೂಡಿಸಿರುವರು ಈಗ ಅವನ್ನು ಓದುವಾಗ ಹಾಸ್ಯಾಸ್ಪದವೆನಿಸುವವು

1664ರಲ್ಲಿ ಜಾರಿಗೆ ತಂದ ಒಂದು ಕಾನೂನು ವಕಾರ ಎರಡಕ್ಕಿಂತ ಹೆಚ್ಚು ಪದಾರ್ಥಗಳುಳ್ಳ ಊಟವನ್ನು ಯಾರೂ ಮಾಡಬಾರದೆಂದಿದೆ ಅಲ್ಲದೆ ಅದೇ ಶಾಸನ ಪ್ರಕಾರ ಬ್ರಿಟಿನ ದಕ್ಷಿಣ ಭಾಗದಲ್ಲಿ ಬುಧವಾರದಂದು, ಉತ್ತರದಲ್ಲಿ ಶುಕ್ರವಾರದಂದು ಮೆತ್ತು ಪಶ್ಚಿಮ ಭಾಗದಲ್ಲಿ ಶನಿವಾರದಂದು ಯಾರಾದರೂ ಮಾಂಸವನ್ನು ತಿನ್ನಬಾರದೆಂದಿದೆ ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆಯೂ ಅದರಲ್ಲಿ ಹೇಳಲಾಗಿದೆ

17ನೇ ಶತಮಾನದ ಒಂದು ಪಾರ್ಲಿಮೆಂಟ್ ಕಾಯಿದೆ ಪ್ರಕಾರ ಆದಿತ್ಯವಾರ ಕೆಲಸವನ್ನಾಡುವವರು ಶಿಕ್ಷಾರ್ಹರೆನಿಸುತ್ತಿದ್ದರು ಬ್ರಿಟಿನ ಕೆಲವು ಪ್ರಾಂತ್ಯಗಳಲ್ಲಿ ಈ ಶಾಸನ ಪ್ರಕಾರ ಆದಿತ್ಯವಾರ ದಿನದಂದು ಯಾರೂ 3 ಮೈಲಿಗೆ ಮಿಕ್ಕಿ ಪ್ರಯಾಣ ಮಾಡಬಾರದು ಎಂದಿದೆ ಕೆಲವು ವ್ಯಾಂತ್ಯಗಳಲ್ಲಿ ಪ್ರತಿಯೊಬ್ಬನೂ ಐದು ಮೈಲು ನಡೆಯಲೇಬೇಕು ಎಂದೂ ಹೇಳಿದೆ ಈ ದೂರವು ಅಲ್ಲಿನ ಇಗರ್ಜಿಗಳಿಗೆ ಹೋಗುವ ಅಂತರದ ಪ್ರಮಾಣದ ಮೇಲೆ ನಿಶ್ಚಯಿಸಲಾಗಿದೆ ಅಂದರೆ ಆ ಕಾಲದಲ್ಲಿ ಅಲ್ಲಿನ ಯಾವನೊಬ್ಬನಿಗೂ ಇಗರ್ಜಿಗೆ ಹೋಗಬೇಕಾದರೆ ಐದು ಮೈಲಿಗೆ ಮಿಕ್ಕಿ ನಡೆಯಬೇಕಾಗಿರಲಿಲ್ಲ

ಸೊಮರ್‌ಸೆಟ್‌ನಲ್ಲಿ ಒಂದು ಕಾನೂನು ಇದೆ ಅದರ ಪ್ರಕಾರ ಅಲ್ಲಿನವರು ವಾರದ ಇತರ ದಿನಗಳಲ್ಲಿ ಧರಿಸುವ ಉಡುಪುಗಳನ್ನು ಆದಿತ್ಯವಾರದಂದು ಧರಿಸಬಾರದು

ಡರ್‌ಹಾಮ್ ಎಂಬಲ್ಲಿನ ಒಂದು ಕಾಯಿದೆಯನ್ವಯ ನಾಗರೀಕರು ವಾರದ ಅಡಿ ಭಾಗದಿಯವ ಬೂಟ್ಸುಗಳನ್ನು ಧರಿಸಬೇಕಲ್ಲದೆ ಚರ್ಮದವನ್ನು ಧರಿಸಬಾರದೆಂದಿದೆ

ಯೋರ್ಕ್ ಶಾಯರಿನ ಜನರು ಆದಿತ್ಯವಾರ ದಿವಸ ಆ ಪ್ರಾಂತ್ಯದ ಜನಪ್ರಿಯ ಪದಾರ್ಥವೊಂದನ್ನು ತಮ್ಮ ಹುರಿದ ಮಾಂಸದೊಡನೆ ತಿನ್ನಲೇಬೇಕೆಂದು ಒತ್ತಾಯಿಸುವ ಒಂದು ಶಾಸನವಿದೆ

ಪತ್ರಿಕೆ ಓದುವುದು ತಪ್ಪು

ಆದಿತ್ಯವಾರದ ನಿಷೇಧಗಳಲ್ಲಿ ಬೇರೆ ಕೆಲವು ಹೀಗಿವೆ ಆದಿತ್ಯವಾರದಂದು: ಕೆಂಟ್ ಪ್ರಾಂತ್ಯದವರು ಸಾಲುಮರ ಬಳ್ಳಿಗಳಿಂದ ಹಣ್ಣು ಕಾಯಿಗಳನ್ನು ಕೀಳಬಾರದು ಎಸೆಕ್ಸ್ ಪ್ರಾಂತ್ಯದವರು ಅಂದು ನುರಿದ ಹಾರೆಯಿಂದಲ್ಲದೆ ಇತರ ಯಾವುದರಿಂದಲೂ ಬಟಾಟೆಯನ್ನು ಅಗೆದು ತೆಗೆಯಬಾರದೆಂದಿದೆ. 1667ರ ಒಂದು ಶಾಸನದನ್ವಯ ಸರ್ವತ್ರ ಇಂಗ್ಲೆಂಡಿನಲ್ಲಿ ಎಲ್ಲಿಯಾದರೂ, ಯಾರಾದರೂ ವರ್ತಮಾನ ಪತ್ರಿಕೆಗಳನ್ನು ಮಾರಿದರೆ, ಕೊಂಡರೆ ಇಲ್ಲವೆ ಓದಿದರೆ ಜೈಲುವಾಸಕ್ಕರ್ಹರಾಗುವರೆಂದಿದೆ ಕರುಡು ಶಾಸನವನ್ನು ಕತ್ತೆಯೆಂದು ಕರೆಯುವರು. ಆದರೆ ಇಂಗ್ಲೆಂಡಿನ ಶಾಸನ ಪುಸ್ತಕಗಳಲ್ಲಿ ದ್ದೂ ಆಚರಣೆಗೆ ತರದಂತವುಗಳನ್ನು ಹಾಗೇ ಕರೆಯಬಯಸುವಿರೊ?

ವಾರದ ವಿಜ್ಞಾನ ವರದಿಗಳು

ಮೋಟಾರು ಓಡಿಸಲು ಅಣುಶಕ್ತಿ

ವಿಪರೀತ ಖರ್ಚು

ಸಂಯುಕ್ತ ಅಮೇರಿಕದ ಅಣುಶಕ್ತಿ ಸಂಚಯ ಸಮಿತಿಯ ಸದಸ್ಯರಾದ ಮಿ। ಸ್ಮರ್ ವ್ಯಾಕ್ಸ್ ಅವರು ಬೊಸ್ಟನ್ ನಗರದಲ್ಲಿ ಕೊಟ್ಟ ಒಂದು ಭಾಷಣದಲ್ಲಿ "ಮೋಟಾರು ಕಾರುಗಳನ್ನು ಓಡಿಸಲು ಅಣುಶಕ್ತಿಯನ್ನು ಉಪಯೋಗಿಸಬಹುದು" ಎಂದು ಹೇಳಿದರು ಆದರೆ ಅಷ್ಟು ಶಕ್ತಿಯನ್ನು ತಯಾರಿಸಲು ಮೋಟಾರು ಯಂತ್ರ ಚಲಾವಣೆಗೆ ಬಳಸಬೇಕಾದರೆ 750 ಸಾವಿರ ಪವನುಗಳಷ್ಟು ಖರ್ಚು ತಗಲುವುದೆಂದು ಮಿ। ವ್ಯಾಕ್ಸರೇ ತಿಳಿಸುವನರಾದರು ಆದುದರಿಂದ ಅಣುಶಕ್ತಿಯನ್ನು ಸಣ್ಣಪುಟ್ಟ ಯಂತ್ರಚಲನೆಗಾಗಿ ಉಪಯೋಗಿಸುವುದು ಸದ್ಯಕ್ಕೆ ಸುಲಭಸಾಧ್ಯವಾದುದಲ್ಲವೆಂದು ಖಚಿತವಾಗುತ್ತದೆ

ವಿಮಾನ ಯಂತ್ರಗಳ ಪರಿಪೂರ್ಣತೆ

ಲಂಡನ್-ಕರಾಚಿ ಉಡ್ಡಾಣದ ದಾಖಲೆ

ಕರ್ನಲ್ ಲಿಂಡಬರ್ಗನು ಸುಮಾರು 25 ವರ್ಷಗಳ ಹಿಂದೆ ನ್ಯೂಯೋರ್ಕಿನಿಂದ ಲಂಡ್‌ಗೆ ಎಲ್ಲಿ ಇಳಿಯದೆ ದಂಪಿಲೆ ಅವಧಿಯಲ್ಲಿ ಉಡ್ಡಾಣ ಮಾಡಿದಂಗ ಜಗತ್ತು ಬೆರಗುಗೊಂಡಿತ್ತು ಆಗಿನ ವಿಮಾನ ಯಂತ್ರಗಳಿಂದಲೊ ಈಗಿನವುಗಳಷ್ಟು ಪರಿಪೂರ್ಣ ರಚನೆಯಿಲ್ಲವುಗಳಲ್ಲಿ ಕರ್ನಲ್ ಲಿಂಡ್‌ಬರ್ಗರು ತುಂಬಾ ಸುಗಿತವೈಮಾನಿಕರೆಂಬುದರಲ್ಲಿ ಈತ್ತೀಚೆಗೆ ಬರ್ವ ಸಂಸ್ಥಾನ ಬ್ರಿಟಿಷ್ ವೈಮಾನಿಕನು ಹೂಕರ್ ಫ್ಯೂರಿ ಎಂಬ ವಿಮಾನದಲ್ಲಿ ಲಂಡನಿಂದ ಕರಾಚಿಗೆ 15 ಗಂಟೆ 20 ನಿಮಿಷಗಳಲ್ಲಿ ಹಾರಿ ಹಿಂದಿನ 18 ಗಂಟೆ 14 ನಿಮಿಷಗಳ ದಾಖಲೆಯನ್ನು ಮುರಿದನು ಈಗಿನ ವಿಮಾನ ಯಂತ್ರಗಳು ಅವೆಷ್ಟು ಸುರಕ್ಷಿತವೂ ಆಗಿವೆಯೆಂಬುದಕ್ಕೆ ಇದೊಂದು ನಿದರ್ಶನವಾಗಿದೆ

ಕುಷ್ಠರೋಗಕ್ಕೆ ಹೊಸ ಔಷಧಿ

ಕೆಲಸದ ಉತ್ತೇಜನವನ್ನೂ ಕೊಡುವುದು

ಕುಷ್ಠರೋಗವನ್ನು ಪರಿಹರಿಸಲು ಸಲ್ಫೋನ್ ಎಂಬ ಧಾತು ಮಿಶ್ರಣವೊಂದನ್ನು ಕಂಡು ಹಿಡಿಯಲಾಗಿದೆ. ಸಿಪ್ರಸ್ ದ್ವೀಪದಲ್ಲಿರುವ ಒಂದು ಕುಷ್ಠವ್ಯಾಧಿಗ್ರಸ್ತರ ಶಿಬಿರದಲ್ಲಿ ಈ ಕುರಿತು ಪ್ರಯೋಗಗಳನ್ನು ನಡೆಸಿದ ಅಲ್ಲಿನ ವೈದ್ಯಕೀಯ ಅಧಿಕಾರಿಗಳಾದ ಡಾ। ಶಿಲ್ಲಿಯವರು "ಕೊಸ ಔಷಧಿಯು ನಮ್ಮ ಅತ್ಯುನ್ನತ ನಿರೀಕ್ಷೆಗಳಿಗಿಂತಲೂ ಉತ್ತಮವಾಗಿದೆ" ಎಂದು ಉದ್ಗರಿಸಿರುವರು ಇದನ್ನು ಸಿಕೋಸಿಯೂ ಕುಷ್ಠರೋಗಿ ಉದ್ಯೋಗ ಕೇಂದ್ರದಲ್ಲಿ ಉಪಯೋಗಿಸಲಾಯಿತು. ಈ ಔಷಧಿ ಸೇವನೆ ಮಾಡಿದ ರೋಗಿಗಳ ಶರೀರ ಶಕ್ತಿಯು ಅಭಿವೃದ್ಧಿಯಾಗಿದೆ, ಮಾತ್ರವಲ್ಲ ಅವರ ಪಚನ ಕ್ರಿಯೆಯೂ ಸುಧಾರಿಸಿದ್ದು ಆಹಾರ ಸೇವನಾಸಕ್ತಿಯು ಹೆಚ್ಚಿರುತ್ತದೆ ರೋಗಿಗಳಿಗೆ ನಿದ್ರೆಯೂ ಚೆನ್ನಾಗಿ ಬೀಳಲು ಇದರಿಂದ ಸಹಾಯವಾಗಿದೆ ಘೋರಗಳೆಲ್ಲ ಕಂಡು ಬರುತ್ತಿದ್ದ ಸೊಣಗುಟ್ಟುವಿಕೆ ಮತ್ತು ಸರಳುವಿಕೆಗಳೂ ಮಾಯವಾಗಿದ್ದು ಅನುರಲ್ಲಿ ಕೆಲಸನಾಯುವ ಬಯಕೆಯು ಅಭಿವೃದ್ಧಿಯಾಗಿರುತ್ತದೆಂದು ಗಮನಕ್ಕೆ ಬಂದಿರುತ್ತದೆ ಈ ಹೊಸ ಔಷಧಿಯಿಂದಾಗಿ ಅಲ್ಲಿನ ಶಿಬಿರದಲ್ಲಿ ಹೊಸ ಆಶಾ ಹಾರೈಕೆಗಳ ವಾತಾವರಣವು ಪಸರಿಸಿದೆ ಎಂದು ಹೇಳಲಾಗುತ್ತದೆ

ರೇಡಿಯೋಗಳು

ನಂದಿ ಹೋದುವು

ರಹಸ್ಯ ಭೌತಿಕ ಶಕ್ತಿಯ ಪ್ರಭಾವ

ಯಾವುದೊ ಒಂದು ರಹಸ್ಯದ ಭೌತಿಕ ಶಕ್ತಿಯ ಪ್ರಭಾವದಿಂದಾಗಿ ಜಗತ್ತಿನ ರೇಡಿಯೊ ಪ್ರಸರಣದ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿರುತ್ತದೆ ಕಳೆದ ತಿಂಗಳ ತಾರೀಖಿಂದ ಜಗತ್ತಿನ ಕಮ್ಮಿ ಅನೇಕ ಕಡೆಯಿರೇಡಿಯೊ ಪ್ರಸರಣ ಕ್ರಿಯೆಯೇ ಸ್ವಲ್ಪಗೊಸಲ್ಪಟ್ಟಿತೆಂದು ಲಂಡನಿನ ರ್ಯಾಟರ್ ಕಚೇರಿಯು ಒಂದು ಪ್ರಕಟಣೆಯು ತಿಳಿಸುತ್ತದೆ ಈ ನಿಗೂಢ ದುಸ್ಸಂಭಾವದ ಕುರಿತು ರೇಡಿಯೊ ವಿಜ್ಞಾನಿಗಳು ಪರಿಶೀಲಿಸುತಿದ್ದಾರೆ

ತಾಜಮಹಾಲಿನ ವಿಚಿತ್ರ ರಚನೆ

ಬಿರುಕಿಲ್ಲದ ಚಂದ್ರಶಿಲೆಯಿಂದ

ಸೋರುವಿಕೆ

ಜಗತ್ಪ್ರಖ್ಯಾತ ತಾಜಮಹಾಲಿನ ಗೋಪುರದ ಒಳಭಾಗವನ್ನು ಸಿಮೆಂಟ್ ಪದರಿನಿಂದ ಸಾರಣೆ ಮಾಡಲಾಗಿದೆಯಂತೆ ಇದಕ್ಕೆ 10 ಸಾವಿರ ರೂಪಾಯಿಯಿ ಖರ್ಚು ಮಾಡಲಾಗಿದೆ ಮಳೆಗಾಲದಲ್ಲಿ ಚಂದ್ರಶಿಲೆಯ ಈ ಗೋಪುರದ ಒಳಭಾಗವು ವಿಪರೀತ ತೇವದಿಂದ ಒದ್ದೆಯಾಗುತ್ತದೆ ಕೆಲ ಸಮಯ ಹೀಗೆ ಒಟ್ಟುಗೂಡಿದ ನೀರಿನ ಪಸೆಯು ಹಸಿಯಾಗಿ ಸೋರುವುದೂ ಉಂಟು. ಆದರೆ ಗೋಪುರದ ಯಾವ ಭಾಗದಲ್ಲೂ ಬಿರುಕಾಗಲಿ, ಸಂದುಗಳಾಗಲಿ ಇರುವುದಿಲ್ಲವೆಂದು ಖಚಿತವಾಗಿದೆ ಇದು ಒಳಗಿನ ಹವೆಯನ್ನು ತಂಪುಗೊಳಿಸುವ ಒಂದು ತರದ ವಿಚಿತ್ರ ರಚನೆಯಿದಿರಬೇಕೆಂದು ಊಹಿಸಲಾಗಿದೆ

ಮದ್ಯಪಾನ ನಿಷೇಧವೆಂದರೇನು?

★ ಅದು ಜನಾಂಗದ ಸಂಪತ್ತನ್ನುಳಿಸುವುದು.

★ ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗಿ ಗೊಡಲು ತರಬೇತಿ ಕೊಡುವುದು.

★ ಅದು ಅನಿವಾರ್ಯವಾದ ಒಂದು ಸಾಮಾಜಿಕ ಸುಧಾರಣೆ.

★ ಅದು ಗೃಹಜೀವನದ ಪಾವಿತ್ರ್ಯವನ್ನು ಕಾಪಾಡುವುದು.

★ ಅದು ಪ್ರತಿಯೋರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ.

ಕೆನರಾ ಬ್ಯಾಂಕ್, ಲಿಮಿಟೆಡ್.

ಇದರ ಸೇವಾದಾನ.

ಸ್ವದೇಶಾಭಿಮಾನಿ

ತಾರೀಕು 10—6—1949

ಮದ್ರಾಸು ಸರಕಾರದ ಜಾತೀಯತಾ ಧೋರಣೆ

ಸರಕಾರೀ ಉದ್ಯೋಗವನ್ನು ಜಾತಿ ಮತ್ತು ಉಪಜಾತಿಗಳನ್ನೊಪ್ಪಿಕೊಳ್ಳುವುದನ್ನು ನಿಲ್ಲಿಸಬೇಕೆಂಬ ಮಾನ್ಯ ಶ್ರೀ ದಿವಾಕರ ರವರ ಸೂಚನೆಯು ಮೇರೆಗೆ ಕೇಂದ್ರದಿಂದ ಎಲ್ಲ ಪ್ರಾಂತಿಕ ಮತ್ತು ಸಂಸ್ಥಾನ ಸರಕಾರಗಳ ಅಭಿಪ್ರಾಯ ಕೇಳಲಾಗಿ ಮದ್ರಾಸು, ತಿರುವಾಂಕೂರು ಮೈಸೂರು ಸರಕಾರದವರು ಮಾತ್ರ ಈ ಸೂಚನೆ ಅವ್ಯವಹಾರ್ಯವೆಂದು ಉತ್ತರ ಕೊಟ್ಟವು. ಭಾರತದಲ್ಲಿಯ ಉಳಿದ ಎಲ್ಲ ಪ್ರಾಂತ್ಯ ಹಾಗೂ ಸಂಸ್ಥಾನಗಳು ತಮ್ಮ ಸಮ್ಮತಿ ಸೂಚಿಸಿದವು.

ಈ ರೀತಿ ಮದ್ರಾಸು ಪ್ರಾಂತ್ಯ ಮತ್ತು ಅದಕ್ಕೆ ಸಂಬಂಧಪಟ್ಟ ಎರಡು ಸಂಸ್ಥಾನಿಗರು ಮಾತ್ರ ಜಾತಿಗಳನ್ನು ಮನ್ನಿಸದಿರುವುದು ಸಾಧ್ಯವಿಲ್ಲವೆಂದು ಉತ್ತರ ಕೊಟ್ಟುದರ ಅರ್ಥವೇನು?

ಮದ್ರಾಸು ಸರಕಾರಕ್ಕೆ ಸಂಬಂಧಪಟ್ಟ ವರೊಬ್ಬರು ಅದನ್ನು ಈ ರೀತಿ ವಿವರಿಸಿವರಂತೆ: ಸಮಾಜದಲ್ಲಿ ಜಾತಿ ಉಪಜಾತಿಗಳು ಎಷ್ಟರವರೆಗೆ ಇರುವವೊ ಅಲ್ಲಿಯ ತನಕ ಸರಕಾರ ಅದನ್ನು ಮನ್ನಿಸದಿರುವುದು ಹೇಗೆ ಸಾಧ್ಯ? ಸಮಾಜವೇ ಇವನ್ನು ಹೋಗಲಾಡಿಸುವ ಕಾರ್ಯ ಸಾಧಿಸಬೇಕಲ್ಲದೆ ಸರಕಾರವಲ್ಲ. ಸರಕಾರೀ ದಾಖಲೆಗಳಲ್ಲಿ ಜಾತಿ ಯಾವುದೆಂದು ಹೇಳದಿದ್ದರೆ ವ್ಯಕ್ತಿ ಇಂಥವನೇ ಎಂದು ಗುರುತಿಸಲು ಕಷ್ಟವಾದೀತು. ಹಿಂದೆ ಬಿದ್ದಿರುವ ಜಾತಿಯವರನ್ನು ಮುಂದೆ ತರುವ ಉದ್ದೇಶದಿಂದ ನಮ್ಮ ಸರಕಾರ ಸರಕಾರೀ ಹುದ್ದೆಗಳನ್ನು ಜಾತಿವಾರು ಕೊಡಲು ಅದೇ ತತ್ವದ ಮೇಲೆ ಶಾಲೆ ಕಾಲೇಜುಗಳಿಗೆ ಪ್ರವೇಶ ಕೊಡಲು ವರ್ಗಮಾಡಿಸಿರುವಾಗ ಸರಕಾರೀ ದಾಖಲೆಗಳಲ್ಲಿ ಜಾತಿಯ ಪ್ರಸ್ತಾವನೆ ಇರಬಾರದೆಂಬುದನ್ನು ನಾವು ಸ್ವೀಕರಿಸುವುದು ಸಾಧ್ಯವಿಲ್ಲ. ಇದು ನಮ್ಮ ಸರಕಾರೀ ಧೋರಣೆಯ ವಿವರಣದ ಸಾರಾಂಶವೆನ್ನಬಹುದು.

ಬ್ರಿಟಿಷ ಸರಕಾರದ ಆಳ್ವಿಕೆಯಲ್ಲಿ ಸರಕಾರದವರು ಹಿಂದೂ ಮುಸ್ಲೀಮ ಇತ್ಯಾದಿ ಭಿನ್ನಮತದವರಲ್ಲಿ ಭೇದೋಪಾಯ ನಡೆಸಲು ಪ್ರತ್ಯೇಕ ಮತದಾನ ಪದ್ಧತಿ, ಪ್ರತ್ಯೇಕ ಕಾಯಿದೆ ವ್ಯಾಪ್ತಿನಿಧ್ಯ ಇತ್ಯಾದಿ ಕ್ರಮಗಳನ್ನು ದಾರಿಗೆ ತಂದಿದ್ದರು. ಇದರಂತೆಯೇ ಹಿಂದೂ ಸಮಾಜದಲ್ಲಿಯ ಜಾತಿ ಉಪಜಾತಿಗಳೊಳಗೆ ಭೇದಬುದ್ಧಿಯನ್ನು ಬೆಳೆಸಲಿಕ್ಕೆ ಅನುಕೂಲವಾದಲ್ಲೆಲ್ಲ ಯತ್ನಿಸುತ್ತಿದ್ದರು. ಈ ಎರಡನೆಯ ಪ್ರಯತ್ನದಲ್ಲಿ ಹಿಂದಿನ ಸರಕಾರವು ವಿಶೇಷ ಯಶಸ್ವಿಯಾದುದು ಮದ್ರಾಸು ಪ್ರಾಂತ್ಯದಲ್ಲಿ. ಹಿಂದಿನ ಸರಕಾರವು ಮದ್ರಾಸಿನಲ್ಲಿ ಈ ಭೇದಬುದ್ಧಿ ಬಹಳ ಕಾಲದಿಂದ ಪ್ರಯತ್ನಪೂರ್ವಕ ಬೆಳೆಸಿ ಅಸ್ತಿಯನ್ನು ನಮಗೆ ಕೊಟ್ಟಿರುವರು. ಈಗಿನ ಕಾಂಗ್ರೆಸ್ ಸರಕಾರ ಕೂಡಾ ಆ ಆಸ್ತಿಯ ಹೊರೆಯನ್ನು ಒಮ್ಮೆಗೇನೆ ನಿವಾರಿಸಿಕೊಳ್ಳಲು ಸಮರ್ಥವಾಗಿಲ್ಲವೆಂಬುದೇ ಮದ್ರಾಸು ಸರಕಾರದ ಈಗಿನ ಧೋರಣೆಯ ನಿಜವಾದ ಅರ್ಥವಿರುತ್ತದೆ.

ಭಾರತದ ಕೇಂದ್ರ ಸರಕಾರವು ಕನ್ನ ದಾಖಲೆಗಳಲ್ಲಿ ಜಾತಿ ಉಪಜಾತಿಗಳ ಉಲ್ಲೇಖವನ್ನೇ ತೆಗೆದುಹಾಕಲು ನಿರ್ಣಯ ಎಂದೋ ಮಾಡಿರುತ್ತದೆ. ಈಗ ಉಳಿದ ಎಲ್ಲ ಪ್ರಾಂತ್ಯಗಳೂ ಇದಕ್ಕೆ ಸಮ್ಮತಿ ಕೊಟ್ಟಿರುತ್ತವೆ. ಅಂದಮೇಲೆ ಇದು ಅವ್ಯವಹಾರ್ಯ ಪ್ರಶ್ನೆ ಎಂಬ ತರ್ಕದಲ್ಲಿ ಯಾವ ಅರ್ಥವೂ ಇಲ್ಲ. ಇಲ್ಲಿಯ ಮಟ್ಟಿಗೆ ಪ್ರಕೃತ ಜಾರಿಗೆ ತರುವುದು ಅವ್ಯವಹಾರ್ಯ ವೆಂಬ ನಮ್ಮ ಸರಕಾರದ ಅಭಿಪ್ರಾಯಕ್ಕೆ ಕಾರಣವೆಂದರೆ ಇಲ್ಲಿ ಪರಸ್ಪರ ಜಾತಿಗಳೊಳಗೆ ಭೇದ ಬುದ್ಧಿ ಈ ಮೊದಲು ವಿಪರೀತ ಬೆಳೆಸಿಟ್ಟಿರುವುದರಿಂದ ಕಷ್ಟಸಾಧ್ಯ ಎಂಬುದೇ ಸರಕಾರದ ಅಭಿಪ್ರಾಯವಿರಬೇಕು. ಈ ಭೇದಬುದ್ಧಿ ಹೋಗಲಾಡಿಸುವುದು ಸಮಾಜದ ಕರ್ತವ್ಯವೆಂಬುದೇನೊ ಅಲ್ಲ ವೆಂದು ನಾವಾದರೂ ಹೇಳುವುದಿಲ್ಲ. ಆದರೆ ಸರಕಾರದವರು ಹಿಂದಿನ ಬ್ರಿಟಿಷ ಆಳ್ವಿಕೆಯಲ್ಲಿಯ ಧೋರಣೆಯನ್ನೇ ಮುಂದುವರಿಸುತ್ತ ಹೋಗುವುದು ಭೇದ ಬುದ್ಧಿ ನಿವಾರಣೆಗೆ ಸಹಾಯ ಮಾಡುವ ದಾರಿಯಲ್ಲಿ ಈ ಧೋರಣೆ ಅದಕ್ಕೆ ಪ್ರೋತ್ಸಾಹ ಕೊಡಲು ರೂಪಿತವಾದುದೆಂದು ಅತ್ಯಲ್ಪ ಸ್ವಷ್ಟ ವಿಚಾರವಿರುತ್ತದೆ.

ಬ್ರಾಹ್ಮಣ ಬ್ರಾಹ್ಮಣೇತರವೆಂಬ ಈ ಭೇದಬುದ್ಧಿ ಮದ್ರಾಸು, ತಿರುವಾಂಕೂರು, ಮೈಸೂರುಗಳಂತೆ ಬೊಂಬಾಯಿ ಪ್ರಾಂತ್ಯದ ಕರ್ನಾಟಕದ ಭಾಗಗಳಲ್ಲಿಯೂ ಪ್ರಬಲವಾಗಿ ಹಬ್ಬಿಕೊಳ್ಳುತ್ತಿದೆಯೆಂದು ತಿಳಿದು ಬರುತ್ತದೆ. ಇದು ಮದ್ರಾಸಿನ ಗಾಳಿ ಇದೀ ದಕ್ಷಿಣ ಭಾರತದಲ್ಲಿ ವ್ಯಾಪಿಸುತ್ತಿದೆಯೆಂದು ಸೂಚಿಸುತ್ತದೆ. ಉತ್ತರ ಹಿಂದುಸ್ಥಾನದಲ್ಲಿ ಈ ಪ್ರಶ್ನೆ ಅಷ್ಟು ಕಠಿಣವಾದ ರೂಪದಲ್ಲಿ ಇಲ್ಲವಂತೆ. ಈ ರೀತಿ ಕಲುಷಿತವಾದ ವಾತಾವರಣ ಪುನಃ ಸರಿಯಾಗಬೇಕಾದರೆ ಮದ್ರಾಸು ಸರಕಾರವೇ ಈ ಸುಧಾರಣೆಯ ಮುಂದಾಳ್ತನ ವಹಿಸಬೇಕಾಗಿದೆ.

ಹಿಂದೂ ಮುಸ್ಲೀಮ ಮೊದಲಾದ ಮತ ಭೇದಗಳು ರಾಜಕೀಯರಂಗವನ್ನು ಕಲುಷಿತಗೊಳಿಸದಂತೆ ಮಾಡುವುದರಲ್ಲಿ ಕೇಂದ್ರ ಸರಕಾರದ ಮುಂದಾಳುಗಳು ಬಹಳ ಮಟ್ಟಿಗೆ ಯಶಸ್ವಿಯಾಗಿರುವದು. ಘಟನಾ ಸಮಿತಿಯ ಪ್ರತ್ಯೇಕ ಮತದಾನ ಪದ್ಧತಿ ಬಿಟ್ಟು ಪ್ರತ್ಯೇಕ ಪಾತಿನಿಧ್ಯ ಕೂಡಾ ಹೋಗಲಾಡಿಸುವುದರಲ್ಲಿ ಸಮರ್ಥರಾದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದವರು ಮದ್ರಾಸಿನ ಮುಸ್ಲೀಮ ಮುಂದಾಳುಗಳು ಕೆಲವರು ಮಾತ್ರವೆಂಬುದು ಮದ್ರಾಸಿನ ಕಲುಷಿತ ವಾತಾವರಣವನ್ನು ಸೂಚಿಸುತ್ತದೆ.

ಜಾತೀಯತೆಯಿಂದಾಗುವ ಅನಿಷ್ಟ ವರಂ

ಟೀಕೆ-ಟಿಪ್ಪಣಿಗಳು

ದಕ್ಷಿಣ ಕಲ್ಕತ್ತಾ ಚುನಾವಣೆ

ಪಶ್ಚಿಮ ಬಂಗಾಲ ಶಾಸನ ಸಭೆಗೆ ದಕ್ಷಿಣ ಕಲ್ಕತ್ತಾ ವಿಭಾಗದಿಂದ ನೇತಾಜಿ ಸುಭಾಸ ಚಂದ್ರ ಬೋಸರ ಸಹೋದರರೊಬ್ಬರು ಪ್ರತಿನಿಧಿಯಾಗಿದ್ದರು. ಇವರು ಕೆಲವು ತಿಂಗಳ ಹಿಂದೆ ತೀರಿಹೋದರು. ಖಾಲಿ ಬಿದ್ದ ಈ ಸ್ಥಾನಕ್ಕೆ ಈಗ ಚುನಾವಣೆ ನಡೆಲಿಕ್ಕಿದೆ. ಕಾಂಗ್ರೆಸ್ ಕಡೆಯಿಂದ ಅಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ರೊಬ್ಬರನ್ನು ನಿಲ್ಲಿಸಲಾಗಿದೆ. ನೇತಾಜಿಯ ಇನ್ನೊಬ್ಬ ಸಹೋದರ ಶ್ರೀ ಸರತ್ ಚಂದ್ರ ಬೋಸರನ್ನು ಎದ ವಕ್ಷದವರು ವಿರೋಧಿಯಾಗಿ ನೇಮಿಸಿದ್ದಾರೆ. ಶ್ರೀ ಬೋಸರು ಸ್ವತಃ ಆನಾರೋಗ್ಯ ನಿಮಿತ್ತ ಯುರೋಪು ಪ್ರವಾಸದಲ್ಲಿದ್ದರೂ ಅವರ ಕಡೆಯಿಂದ ಕಾರ್ಯವೇನೊ ಭರದಿಂದ ಸಾಗುತ್ತಿದೆ.

ಚುನಾವಣೆಯ ನಿಮಿತ್ತ ಸಾರ್ವಜನಿಕ ಸಭೆ ಇತ್ಯಾದಿಗಳ ಮೇಲೆ ಇದ್ದ ನಿಷೇಧಾಜ್ಞೆಯನ್ನು ಅಲ್ಲಿ ಸದಕಾರದವರು ಹಿಂತೆಗೆದರು. ಎಡ ಪಕ್ಷದವರ ಹಲವು ಪ್ರಚಾರ ಸಭೆಗಳು ಶಾಂತರೀತಿಯಲ್ಲೆ ಜರಗಿದವು. ಕಾಂಗ್ರೆಸ್ ಪಕ್ಷದವರು ಸೈವಸ್ಥೆಗೊಳಿಸಿದ ಒಂದು ಸಭೆ ಮಾತ್ರ ಸರಿಯಾಗಿ ನಡೆಯದಂತೆ ಎಡ ಪಕ್ಷದವರು ಪುಂಡಾಟಿಕೆ ನಿಪರೀತ ನಡೆಸಿದರು. ಗಲಾಟೆ ಜೋರಾಗಿ ಕೊನೆಗೆ ಪೋಲೀಸರು ಗುಂಡು ಹಾರಿಸಬೇಕಾದ ಪ್ರಸಂಗ ಕೂಡಾ ಬಂತು. ಒಬ್ಬರು ಈ ಗುಂಡು ಹಾರಿಸುವಿಕೆಯಿಂದ ಕೊಲ್ಲಲ್ಪಟ್ಟರು.

ಶ್ರೀ ಬೋಸ ಪಕ್ಷದವರು ಈ ರೀತಿ ಬಲಾತ್ಕಾರ ನಡೆಸಲು ಹೋದುದು ಶೋಚ

ನೀಯ. ಯಾವುದೇ ತರದ ಬಲಾತ್ಕಾರವನ್ನು ಕಠಿಣ ರೀತಿಯಿಂದ ಅಡಗಿಸುವುದು ಸರಕಾರದ ಕರ್ತವ್ಯವೆಂದು ಅಲ್ಲಿಯ ಪ್ರಧಾನ ಮಂತ್ರಿ ಡಾ। ಬಿ. ಸಿ. ರಾಯ್‌ರವರು ಕೊಟ್ಟ ಎಚ್ಚರಿಕೆ ನ್ಯಾಯವೇ ಇರುತ್ತದೆ.

ಈ ಉಪಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸು ಶ್ರೀ ಎಸ್. ಸಿ. ರಾಯ್ ಎಂಬವರು. ಈಗ ಉಂಟಾಗಿರುವ ವಿವರೀತ ಪರಿಸ್ಥಿತಿಯಿಂದಾಗಿ ಚುನಾವಣೆ ಮುಂದರಿಸುವುದು. ಯುಕ್ತವೆಂದು ಅಭಿಪ್ರಾಯ ಪ್ರಕಟಿಸಿರುತ್ತಾರೆ

ಚುನಾವಣೆಗಳನ್ನು ಶಾಂತ ರೀತಿಯಿಂದ ನಡೆಸಲು ನಾವು ಕಲಿಯಬೇಕಾದದು ಅತ್ಯಗತ್ಯ. ಪ್ರಾಯಸ್ಥರೆಲ್ಲರಿಗೆ ಮತದಾನದ ಹಕ್ಕು ಕೊಟ್ಟು ನಡೆಯಲಿರುವ ಮಹಾ ಚುನಾವಣೆಗಳಲ್ಲಿ ಎಲ್ಲರೂ ಶಾಂತರೀತಿಯಿಂದ ವರ್ತಿಸದಿದ್ದರೆ ವಿವರೀತ ಗೊಂದಲಕ್ಕೆ ಕಾರಣವೆಂಬುದು ಸ್ಪಷ್ಟವಿರುತ್ತದೆ.

ಯಾವುದೇ ಚುನಾವಣೆಗಳಲ್ಲಿ ಬಲಾತ್ಕಾರದ ದಾರಿಗೆ ಯಾರು ಹೋಗುವರೋ ಅವರನ್ನು ಮತದಾರರು ತಿರಸ್ಕರಿಸಲು ಖಂಡಿತ ನಿರ್ಧಾರ ಮಾಡಿದರೆ ಗಲಾಟೆಯಾಗದಂತೆ ಮಾಡಲು ಇದೇ ಉತ್ತಮ ದಾರಿ.

ಚಂದರ್‌ನಾಗೂರಿನ ಜನಮತಗಣನೆ

ಹಿಂದುಸ್ಥಾನದಲ್ಲಿ ಫ್ರೆಂಚ್ ಸರಕಾರಕ್ಕೆ ಸೇರಿದ ಪ್ರಾಂತಿಚೇರಿ, ಚಂದರ್‌ನಾಗೂರ್, ಮಾಹೆ ಇತ್ಯಾದಿ ಮೂರು ನಾಲ್ಕು ಪಟ್ಟಣಗಳಿವೆಯಷ್ಟೆ. ಭಾರತಕ್ಕೆ ಸ್ವತಂತ್ರ್ಯ ಪ್ರಾಪ್ತಿಯಾದ ಬಳಿಕ ಇಲ್ಲಿಯ ಪ್ರಜೆಗಳು ಭಾರತಕ್ಕೆ ಸೇರಿಕೊಳ್ಳುವ ಆತುರ ಸ್ಥಿತಿಯಿರುವರು. ಫ್ರೆಂಚ್ ಸರಕಾರವು ಈ ಪ್ರಶ್ನೆಯನ್ನು ಆಯಾ ಸ್ಥಳಗಳ ಜನರ ಅಭಿಪ್ರಾಯದಂತೆ ತೀರ್ಮಾನಿಸುವುದಾಗಿ ಒಪ್ಪಿಕೊಂಡಿತು. ಪಾಂಡಿಚೇರಿ ಮೊದಲಾದೆಡೆ ಈ ಜನಮತಗಣನೆ ಮುಂದಿನ ದಶಂಬರದಲ್ಲಿ ಇಡಲಾಗಿದೆ. ಚಂದರ್ ನಾಗೂರಿನಲ್ಲಿ ಮಾತ್ರ ಜೂನ್ ತಾ. 19ಕ್ಕೆ ಇಡಲಾಗಿದೆ.

ಈ ತನ್ಮಧ್ಯೆ ಈ ಪಟ್ಟಣಗಳಲ್ಲಿ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಫ್ರೆಂಚ್ ಸರಕಾರ ಸ್ವಲ್ಪ ಆಟ ಆಡಿದಂತಿದೆ. ಭಾರತ ಸರಕಾರಕ್ಕೆ ಸೇರಬೇಕೆಂಬವರ ವಿರೋಧಿಗಳೇ ಹೆಚ್ಚಾಗಿ ಆರಿಸಿ ಬರುವಂತೆ ಸರಕಾರೀ ಒತ್ತಾಯ ನಡೆದಂತೆ ಕಾಣುತ್ತದೆ.

ಈ ಪಟ್ಟಣಗಳು ಭಾರತ ಸರಕಾರಕ್ಕೆ ಸೇರದೆ ಫ್ರೆಂಚ್ ಪಟ್ಟಣಗಳಾಗಿಯೇ ಉಳಿಯುವುದಾದರೆ ಇವನ್ನು ಪರೀಕ್ಷೆಯರೆನ್ನದೆ ಸಿವೃತ್ತಿ ಇಲ್ಲದೆ ಭಾರತ ಸರಕಾರ ವ್ಯಾಪಾರ ವಹಿವಾಟು ಇತ್ಯಾದಿಗಳ ಕುರಿತು ಸುಂಕದ ನಿಯಮಗಳ ಮಟ್ಟಿಗೆ ವರರಾಷ್ಟ್ರವಪರೊಡನೆ ವರ್ತಿಸುವಂತೆಯೇ ಇವರೊಡನೆಯೂ ವರ್ತಿಸಲು ಆರಂಭವಾಗಿತು. ಇದರ ಪರಿಣಾಮ ಭಾರತದ ನಟ್ಟನಡುವೆ ಇರುವ ಈ ಪಟ್ಟಣಗಳ ಮೇಲೆ ಒಂದು ಬಗೆಯ ಬಹಿಷ್ಕಾರ ನಡೆದಂತಾಗಿದೆ.

ಫ್ರೆಂಚ್ ಸರಕಾರದವರು ಎಲ್ಲಾ ಬಿಟ್ಟು ಇಂಟರ್ ನೇಶನಲ್ ಕೋರ್ಟ್ ಆಫ್ ಜಸ್ಟೀಸ್ ಸಂಸ್ಥೆಯ ವ್ಯಾಸ್ ಪ್ರೆಸಿಡೆಂಟರೊಡನೆ ಚಂದರ್‌ನಾಗೂರಿನಲ್ಲಿ ನಡೆಯು

ಲಿರುವ ಜನಸಮುದಾಯಗಳನ್ನು ನ್ಯಾಯವಾಗಿ ನಡೆಯುವಂತೆ ಪರಿಶೀಲನೆಕ್ಕಾಗಿ ಇಬ್ಬರನ್ನು ನೇಮಿಸಬೇಕೆಂದು ಕೇಳಿಕೊಂಡಿತು. ಭಾರತ ಸರಕಾರ ಈಗ ಬಹಿಷ್ಕಾರ ನಡೆಸುತ್ತಿದೆ. ಜನಸಮುದಾಯಗಳನ್ನು ಯಾವುದೇ ಬಗೆಯ ಬಲಾತ್ಕಾರ ನಡೆಸದಂತೆ ನೋಡಬೇಕು ಎಂಬುದು ಇದರ ಅಧಿವಾಯ್ಯ. ಫ್ರೆಂಚ್ ಸರಕಾರ ಕೇಳಿಕೊಂಡುದೇ ತಡ ಈ ವ್ಯಾಸ್ ಪ್ರೆಸಿಡೆಂಟರು ಯಾರೊಡನೆಯೂ ಹೇಳದೆ ಕೇಳದೆ ಇಬ್ಬರು ಪರಿಶೀಲಕರನ್ನು ನೇಮಿಸಿಯೇ ಬಿಟ್ಟರು. ಯುನ್ಯಾಟೆಡ್ ನೇಶನ್ಸ್ ಇತ್ಯಾದಿಯವರಿಗಾಗಲಿ ಭಾರತ ಸರಕಾರ ಕ್ಯಾಗಲಿ ಈ ವಿಚಾರ ತಿಳಿಸಿದ್ದು ಕೂಡಾ ಇಲ್ಲ

ಫ್ರೆಂಚ್ ಸರಕಾರದ ಈ ವರ್ತನೆಯನ್ನು ತೀವ್ರವಾಗಿ ಖಂಡಿಸಿ ಭಾರತ ಸರಕಾರದವರು ತಮ್ಮ ಅಭಿವ್ರಾಯವನ್ನು ಆ ಸರಕಾರಕ್ಕೆ ಈಗ ತಿಳಿಸಿರುತ್ತಾರೆ

ಚಂದರ್‌ನಾಗೂರಿನ ಜನಮತಗಣನೆಯೇನೋ ಜೂನ್ 19ಕ್ಕೆ ನಡೆಸಬೇಕೆಂದು ಫ್ರೆಂಚ್ ಸರಕಾರ ತಿಳಿಸಿದೆಯಂತೆ ಇವರ ಈ ಪ್ರಹಸನ ಹೇಗೆ ಕೊನೆಗೊಳ್ಳುವುದೆಂದು ಕುತೂಹಲದಿಂದ ನಿರೀಕ್ಷಿಸಿರಬೇಕಾಗಿದೆ

ಮದ್ರಾಸು ಸರಕಾರದ ಹೊಸ ಮಂತ್ರಿ

ಮದ್ರಾಸು ಸರಕಾರದವರು ರೋಕ್ ವಿಕ್ಟೋರಿಯಾ ಎಂಬವರನ್ನು ಹೊಸ ಮಂತ್ರಿಯಾಗಿ ಸೇರಿಸಿಕೊಂಡಿದ್ದಾರೆ. ಇವರು ಕ್ರೈಸ್ತರು ನಮ್ಮ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ವರಂತೆ ಇವರಿಗೆ ಆಹಾರಖಾತೆ ಕೊಡಲಂಗಿದೆ ಡಾ। ರಾಜನರು ಸಾರ್ವಜನಿಕ ಆರೋಗ್ಯಖಾತೆ ಕೈಕೊಂಡರು ವಿದ್ಯಾ ಇಲಾಖ ಶ್ರೀ ನೂಧನ ಮೆನೊನರ ಕೈಗೆ ಒಪ್ಪಿಸಲಾಗಿದೆ ಮಾನ್ಯ ಶ್ರೀ ಎ ಬಿ ಶೆಟ್ಟರಿಗೆ ಕೃಷಿ ಮತ್ತು ಗೋ ರಕ್ಷಣಾ ಖಾತೆ ಕೊಡಲಾಗಿದೆ

ಹೀಗೆ ಆಹಾರ ಖಾತೆಯನ್ನು ವಹಿಸಿಕೊಂಡ ಹೊಸ ಮಂತ್ರಿ ರೋಕ್ ವಿಕ್ಟೋರಿಯಾರವರು ಆದಷ್ಟು ಬೇಗನೆ ರೇಶನ್ ಪದ್ಧತಿಯನ್ನು ಮುಕ್ತಾಯಗೊಳಿಸಲು ಯತ್ನಿಸುವುದಾಗಿ ಹೇಳಿದರು ರೇಶನ್ ಒಮ್ಮೆಗೆ ತೆಗೆಯಲು ಇವರು ಸಮರ್ಥರಾದರೆ ಇವರನ್ನು ಮಂತ್ರಿ ಪದವಿಗೇರಿಸಿದ್ದು ಸಾರ್ಥಕವೆನ್ನಬೇಕು

ರೇಶನ್ ಪದ್ಧತಿ ಮುಕ್ತಾಯವೆಂದರೆ ನಮಗೆ ಬೇಕಾದುದಕ್ಕಿಂತ ಹೆಚ್ಚಿನ ಅಕ್ಕಿ ಬೆಳೆಸಿದರೆ ಮಾತ್ರ ಸಾಧ್ಯವೆಂಬುದನ್ನು ಕೇಂದ್ರ ಸರಕಾರದ ಆಹಾರಖಾತೆಯ ಮಂತ್ರಿ ಜಯರಾಮದಾಸ್ ದೌಲತ್‌ರಾಮರು ಸ್ಪಷ್ಟಪಡಿಸಿದ್ದಾರೆ. ಈ ಪರಿಸ್ಥಿತಿ ಸಾಧಿಸಲು ಹೊರಟ ಶ್ರೀ ರೋಕ್ ವಿಕ್ಟೋರಿಯಾರವರಿಗೆ ಅಭಿವಂದನೆಗಳು ಸಲ್ಲಲೇಬೇಕು.

ಕೇಂದ್ರ ಸರಕಾರದವರು 1951ನೇ ಇಸ್ವಿಯ ಬಳಿಕ ಹೊರಗಿನಿಂದ ಆಹಾರ ಧಾನ್ಯ ತರಿಸುವುದಿಲ್ಲವೆಂದು ಕಂಠೋಕ್ತ ನಿರ್ಣಯ ಮಾಡಿದ್ದಾರೆ. ಅಲ್ಲಿಯ ತನಕ ಹೆಚ್ಚಿಗೆ ಅಕ್ಕಿ ಗೋದಿ ಮೊದಲಾದುವನ್ನು ಬೆಳೆಸುವವರು ತಮಗೆ ಎಷ್ಟು ಕೊಡಬೇಕು, ಕಡಮೆ ಬೀಳುವವರಿಗೆ ತಾವು ಎಷ್ಟು ಹಿಡಗಿಸುತ್ತೇವೆ ಎಂಬುದನ್ನು ನಿರ್ಣಯಿಸಬೇಕಾಗಿದೆ. ಈ ನಿರ್ಣಯಕ್ಕೆ ಮಿಕ್ಕಿ ಕೇಂದ್ರ ಸರಕಾರ ಮುಂದೆ ಆಹಾರ ಒದಗಿಸುವಂತಿಲ್ಲ. ಕಡಮೆ ಬೀಳುವವರು ಈಗಿನಿಂದಲೇ ಯಃಶಕ್ತಿಸಿ ಉಳಿದ ಆಹಾರ ತಾವೇ ಭರ್ತಿ ಮಾಡಲು ಯತ್ನಿಸಬೇಕೆಂದು ಈಗಿಲೆ ಎಚ್ಚರಿಕೆ ಕೊಡಲಾಗಿದೆ

ಈ ಪರಿಸ್ಥಿತಿಯಲ್ಲಿ ಕಡಮೆ ಬೀಳುವ ಪ್ರಾಂತ್ಯವೆಂದು ಮದ್ರಾಸು ಪ್ರಾಂತ್ಯದಲ್ಲಿ ಪ್ರಜೆಗಳಿಗೆ ಆಹಾರವನ್ನಿದೆ ಸಾಯುವ ಸ್ಥಿತಿಗೆ ತಾರದಿದ್ದರೆ ಶ್ರೀ ರೋಕ್ ವಿಕ್ಟೋರಿಯಾರವರನ್ನು ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ

ಈಗ ಎಲ್ಲಕ್ಕೂ ಮುಖ್ಯ ಪ್ರಶ್ನೆ ಹೆಚ್ಚಿಗೆ ಆಹಾರ ಬೆಳೆಸುವುದು ನಮ್ಮ ಜಿಲ್ಲೆ ಕಡಮೆ ಬೀಳುವ ಜಿಲ್ಲೆಗಳಲ್ಲಿ ಒಂದು ಪ್ರತಿ ವರ್ಷ 10,000 ಟನ್ ಅಕ್ಕಿ ಇದುವರೆಗೆ ಸರಕಾರ ಕೊಡುತ್ತ ಬಂದಿತ್ತು ಮುಂದೆಯೂ ಇದೇ ರೀತಿ ಬರುತ್ತದೆಂದು ನಿರೀಕ್ಷಿಸುವುದು ವ್ಯರ್ಥ ಇದ್ದರಿಂದ ಹೆಚ್ಚು ಬೆಳೆಸುವುದರ ಕಡೆಗೆ ನಾವು ಹೆಚ್ಚಿನ ಗಮನ ಕೊಡಬೇಕಾಗಿದೆ ಕೃಷಿ ಖಾತೆಗೆ ಈಗ ನಮ್ಮವರೇ ಆದ ಶ್ರೀ ಎ ಬಿ ಶೆಟ್ಟರು ಮಂತ್ರಿಗಳಾಗಿದ್ದಾರೆ ಇದರ ಸದುಪಯೋಗ ಮಾಡಿಕೊಂಡು ನಮ್ಮಲ್ಲಿಯ ಕೃಷಿಕರು ಈ ಪ್ರಶ್ನೆಯ ಕಡೆಗೆ ಹೆಚ್ಚಿನ ಗಮನ ಕೊಟ್ಟು ಪ್ರಯತ್ನಿಸಿದರೆ ನಮ್ಮ ಜಿಲ್ಲೆಗೆ ಬೇಕಾದ ಆಹಾರವನ್ನಾದರೂ ಇಲ್ಲಿ ಬೆಳೆಸಬಹುದು. ಹಾಗೆ ಮಾಡದೆ ನಿವೃತ್ತಿ ಇಲ್ಲವೆಂಬುದನ್ನು ಎಲ್ಲರೂ ಮನಗಾಣಬೇಕಾಗಿದೆ

ಹೆಚ್ಚು ಬೆಳೆ ಬೆಳೆಸುವ ಕಾರ್ಯಕ್ರಮ

ಈಗ ಸ್ವಲ್ಪ ಸಮುದಾಯದಿಂದ ಹೆಚ್ಚು ಬೆಳೆ ಬೆಳೆಯಿಸಬೇಕೆಂಬ ಚಳವಳ ನಡೆಯುತ್ತಿದೆ. ಪರಿಣಾಮವಾಗಿ ಎಷ್ಟು ಹೆಚ್ಚು ಬೆಳೆ ಬೆಳೆಯಿತೆಂದು ಯಾರೂ ಖಂಡಿತವಾಗಿ ಹೇಳುವ ವರಿಸ್ಥಿತಿಯಲ್ಲಿಲ್ಲ ಸರಕಾರದ ಕೃಷಿಖಾತೆಯವರೇನೋ ಈ ಚಳವಳದಿಂದ ತುಂಬಾ ಪರಿಣಾಮವಾಗಿದೆಯೆಂದು ಹೇಳುತ್ತಾರೆ ನಮ್ಮ ಕೃಷಿಯ ಸಂಬಂಧ ಸರಿಯಾದ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುವ ಪದ್ಧತಿ ಇನ್ನು ಪ್ರಚಾರದಲ್ಲಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೊರಗಿನಿಂದ ಪ್ರತಿವರ್ಷ ಸುಮಾರು ಹತ್ತು ಸಾವಿರ ಟನ್ನು ಅಕ್ಕಿ ಕಳುಹಿಸುತ್ತ ಬರುವುದು ಕಂಡುಬರುತ್ತದೆ ಇದರಲ್ಲಿ ಕಡಮೆಯಾಗಿ ಅಂಶವೇನೋ ಕಂಡುಬರುವುದಿಲ್ಲ ಹೊರಗಿನ ಅಕ್ಕಿ ಬಾರದೆ ನಮ್ಮ ಕಾಲ ಮೇಲೆ ನಾವು ನಿಲ್ಲುವ ವರಿಸ್ಥಿತಿಯಾದರೂ ಒಂದರೆ ಹೆಚ್ಚು ಬೆಳೆ ಬೆಳೆಯಿಸುವ ಕಾರ್ಯ ಅಷ್ಟರ ಮಟ್ಟಿಗೆ ಯಶಸ್ವಿಯಾಯಿತೆಂದು ಹೇಳಬಹುದು

ಅಕ್ಕಿ ಸಂಗಹದ ಮಟ್ಟಿಗೆ ಸರಕಾರದವರು ಈ ಜಿಲ್ಲೆಯ ಮಟ್ಟಿಗೆ ವರ್ಷದಿಂದ ವರ್ಷಕ್ಕೆ ನಿರ್ದೇಶಿಸುವ ವಿತಿಯೊಂದರೂ ಈ ಜಿಲ್ಲೆಯಲ್ಲಿ ಸಿಜವಾಗಿ ವಸೂಲು ಮಾಡಲು ಸಾಧ್ಯವಿಲ್ಲದಷ್ಟೆಂದು ಇಲ್ಲಿಯ ಮುಂದಾಳುಗಳು ಹೇಳುತ್ತಲೇ ಇದ್ದಾರೆ. ಯಾವ ವರ್ಷವೂ ಸರಕಾರದವರು ನಿರ್ದೇಶಿಸಿದಷ್ಟು ವಸೂಲಾದ್ದು ಕಂಡುಬರುವುದಿಲ್ಲ. ಆದರೂ ಸರಕಾರದವರು ಕೊಡುವ ವಿತಿಯೇನೂ ಕಡಮೆ ಮಾಡಲಾಗುವುದೂ ಇಲ್ಲ. ಈ ವಿತಿ ನಿರ್ಣಯ ಕೇವಲ ಕಾಗೆ ಲೆಕ್ಕದಿಂದಲೇ ನಿರ್ಣಯಿಸಲ್ಪಡುತ್ತಿದೆಯಲ್ಲದೆ ಇದಕ್ಕೆ ನಿಜವಾದ ಅಂಕೆಸಂಖ್ಯೆಗಳ ಆಧಾರವೇನೂ ಇದ್ದಂತೆ ಕಾಣುವುದಿಲ್ಲ

ಅಂತೂ ಕೃಷಿ ಸಂಬಂಧದ ಅಂಕೆಸಂಖ್ಯೆಗಳ ಸರಿಯಾದ ಸಂಗ್ರಹದ ಕಾರ್ಯದ ವಿರ್ವಾಡು ಅತ್ಯಗತ್ಯವೆಂದು ಇದರಿಂದೆಲ್ಲ ನ್ಯಕ್ತವಾಗುತ್ತದೆ ಈ ಬಗ್ಗೆ ಸರಕಾರದವರು ತಕ್ಕ ವಿರ್ವಾಡುಗಳನ್ನು ಮುಂದೆ ಮಾಡಲಿಕ್ಕಿದ್ದಾರೆಂದು ತಿಳಿದು ಬರುತ್ತದೆ ಅಲ್ಲಿಯ ತನಕ ನಾವು ಕಾಯಬೇಕಾದ ಅವಶ್ಯಕತೆ ಇಲ್ಲ ಇದು ತನಿಕದ ಹೆಚ್ಚು ಬೆಳೆ ಬೆಳೆಯಿಸುವ ಚಳವಳದ ವರಿಣಾಮದ ವಿಚಾರ ಚರ್ಚೆಯಿಂದ ಯಾವ ಉಪಯೋಗವೂ ಇಲ್ಲ ಅದು ಇನ್ನೂ ಯಶಸ್ವಿಯಾಗಿ ನಡೆಯಬೇಕೆಂಬ ಒಗ್ಗೆ ಯಾರಲ್ಲಿಯೂ ಯಾವ ಸಂಶಯವೂ ಇಲ್ಲ

ಹೆಚ್ಚು ಬೆಳೆ ಬೆಳೆಯಿಸಲು ವಿಧಾನಗಳು ಯಾವುವು? ಭಾರತದ ಕೇಂದ್ರ ಸರಕಾರ ಈ ಬಗ್ಗೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಮೇಲೆಯೇ ಮುಖ್ಯವಾಗಿ ಅವಲಂಬಿಸಿಕೊಂಡಂತೆ ಕಾಣುತ್ತದೆ ಈ ನೀರಾವರಿ ಯೋಜನೆಗಳು ಜಾರಿಗೆ ಬಂದಂತೆ ಭಾರತದ ಆಹಾರ ಪ್ರಶ್ನೆ ತೀರ್ವಾಸನವಾಗುತ್ತದೆಂಬುದು ಅವರ ದೃಢ ವಿಶ್ವಾಸವನ್ನು ಒಹುದು

ಈ ದೊಡ್ಡ ನೀರಾವರಿ ಯೋಜನೆಗಳಿಂದ ಲಕ್ಷಾಂತರ ಎಕ್ರೆ ಭೂಮಿ ಸ್ಥಾಗುವಳಿಗೆ ಒಳಪಡಿಸಲು ಸಾಧ್ಯವಾಗುತ್ತದೆಂದು ಎಣಿಕೆ ಹಾಕಿರುತ್ತಾರೆ ಈ ಯೋಜನೆಗಳಿಂದ ವಿವರೀತ ಮಳೆಬೆಳೆಯೂ ಹೆಂಪಳೆಗೆ ಕಾರಣವಾಗಿ ಆ ಲಕ್ಷಾಂತರ ಎಕ್ರೆ ಸ್ಥಾಗುವಳಿ ಮಾಡಲಿಕ್ಕೆ ಆ ಪ್ರದೇಶಗಳಲ್ಲಿ ಜನವಸತಿಯೇ ಕಡಮೆಯಾಗುವ ಪ್ರಸಂಗ ಬಂದೂ ಈ ಯೋಜನೆಗಳು ಅನಿಯ ಶಸ್ಸಿಗೆ ಹೊಂದುವ ಲಕ್ಷಣಗಳಿವೆಯೆಂದು ಹೇಳುವವರೂ ಇದ್ದಾರೆ ಅಂತೂ ಚರ್ಚಾಸ್ಪದವೆನ್ನಬಹುದಾದ ಈ ದೊಡ್ಡ ಯೋಜನೆಗಳನ್ನೇ ನಂಬಿಕೊಂಡು ಇರುವುದು ಸರಿಯಲ್ಲವೆಂದು ಕಾಣುತ್ತದೆ ಇವು ಯಶಸ್ವಿಯಾದರೆ ಒಳ್ಳೆಯ ಅಯಿತು ಒಂದು ವೇಳೆ ಮೇಲೆ ಕಾಣಿಬಿದ ನಿರಾಶಾವಾದಿಗಳು ಹೇಳುವಂತೆ ಅವು ನಿಷ್ಪ್ರಯೋಕವೆನ್ನುವ ಸ್ಥಿತಿ ಬಂದರೆ ಭಾರತದ ಗತಿಯೇನು?

ಆದುದರಿಂದ ಕೇವಲ ದೊಡ್ಡ ನೀರಾವರಿ ಯೋಜನೆಗಳನ್ನು ಮಾತ್ರ ನಂಬಿಕೊಂಡಿರದೆ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳ ಕಡೆಗೆ ಹೆಚ್ಚಿನ ಗಮನ ಕೊಡುವುದು ಅಗತ್ಯವೆನ್ನಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗಂತೂ ದೊಡ್ಡ ನೀರಾವರೀ ಯೋಜನೆಯ ಪ್ರಶ್ನೆಯೇ ಇಲ್ಲ.

ಚಿಕ್ಕ ನೀರಾವರೀ ಯೋಜನೆಗಳ ಮಟ್ಟಿಗೆ ವಿಚಾರಿಸಿದರೆ ಇದರಲ್ಲಿ ಎರಡು ಬಗೆಯ ವೃಗಳನ್ನು ಕಾಣಬಹುದು ಸರಕಾರದವರು ಸ್ವತಃ ಕೈಕೊಂಡು ಸಾಧಿಸುವ ಚಿಕ್ಕ ನೀರಾವರಿ ಯೋಜನೆಗಳು ಒಂದು ಬಗೆಯವು. ಭಾಂತಾರುಮದಗ ದುರಸ್ತಿ ಇತ್ಯಾದಿ ಬಗೆಯವೆನ್ನಬಹುದು ಈ ಬಗೆಯ ಕಾರ್ಯಗಳನ್ನು ಹಿಂದೆ ವ್ಯಾಯಶಃ ಸಾರ್ವಜನಿಕರೇ ಒಗ್ಗಟ್ಟಿನಿಂದ ಸಾಧಿಸುತ್ತಿದ್ದರು. ಈಗಲ್ಲೂ ಸಹಕಾರೀ ವ್ಯಯತ್ನದಿಂದ ಸಾಧಿಸಬಹುದು. ಆದರೆ ಸರಕಾರದವರೇ ಜನರ ಬಗ್ಗೆ ಇವನ್ನು ಕೈಕೊಂಡು ನಡೆಸುವುದರಿಂದ ಯಾವ ಅವಗುಣವೂ ಇಲ್ಲ ಮದ್ರಾಸು ಸರಕಾರದವರೂ ಈ ಬಗೆಯ ಸುಮಾರು ಮೂವತ್ತರಷ್ಟು ಯೋಜನೆಗಳನ್ನು ಈ ಜಿಲ್ಲೆಯಲ್ಲಿ ಪರಿಶೀಲನಮಾಡಲು ಕೈಕೊಂಡಿತ್ತು. ಇವುಗಳಲ್ಲಿ ಭಾಂತಾರುಮದಗ ದುರಸ್ತಿಯಂಥ ಒಂದೆರಡು ಯೋಜನೆಗಳ ಪರಿಶೀಲನ ಮಾತ್ರ ಪೂರ್ಣವಾದಂತೆ ಕಾಣುತ್ತದೆ. ಅಂತೂ ಜಿಲ್ಲೆಯಲ್ಲ ಕಾರ್ಯರೂಪಕ್ಕೆ ಬಂದ ಒಂದೇ ಒಂದು ಈ ಬಗೆಯ ಯೋಜನೆಯಾದರೂ ಇದ್ದಂತೆ ಕಾಣುವುದಿಲ್ಲ

ಚಿಕ್ಕ ನೀರಾವರಿಯ ಇನ್ನೊಂದು ವಿಧಾನವೆಂದರೆ ವೈಯಕ್ತಿಕವಾಗಿ ಕೆರೆ ಬಾವಿ ಇತ್ಯಾದಿ ಹೊಸತಾಗಿ ನಗಾಡುವವರಿಗೆ ಸರಕಾರೀ ಸಹಾಯ ಒದಗಿಸುವುದು ಈ ಬಗ್ಗೆ ಕೆಲವು ವರ್ಷದಿಂದ ಸರಕಾರದವರು ಹಣ ಪ್ರತ್ಯೇಕಿಸಿಟ್ಟು ಹಂಚುತ್ತ ಬರುತ್ತಿದ್ದಾರೆ ಮದ್ರಾಸು ಸಾಮ್ರಾಜ್ಯದ ಹಲವು ಜಿಲ್ಲೆಯ ಜನರು ಈ ಯೋಜನೆಯಂತೆ ತುಂಬಾ ಹಣ ಪಡೆಕೊಂಡಂತೆ ಕಾಣುತ್ತದೆ ಆದರೆ ದಕ್ಷಿಣ ಕನ್ನಡದಲ್ಲಿ ಈ ಯೋಜನೆಯ ಉಪಯೋಗ ಮಾಡಿಕೊಂಡದ್ದು ಒಹಳ ಸ್ವಲ್ಪವೆಂಬಿ ಕಾಣುತ್ತದೆ

ಹೆಚ್ಚು ಬೆಳೆ ಬೆಳೆಯಿಸಬೇಕಾದರೆ ಸಾಗುವಳಿ ನಡೆಯುತ್ತ ಇರುವಲ್ಲಿ ಸುಧಾರಿತ ಕ್ರಮಗಳಿಂದ ಹೆಚ್ಚು ಬೆಳೆ ಬರುವಂತೆ ಸಾಧಿಸುವುದು ಒಂದ ವಿಧಾನ ಸಾಗುವಳಿ ಮಾಡಲು ಅನುಕೂಲವಿದ್ದು ಈಗ ಸಾಗುವಳಿ ಆಗದಿರುವಲ್ಲಿ ಹೊಸ ಸಾಗುವಳಿ ಮಾಡುವುದು ಎರಡನೆಯ ವಿಧಾನ. ಇನ್ನೆರಡಕ್ಕೂ ನೀರಾವರಿ ಯೋಜನೆಗಳಿಗೂ ನಿಕಟ ಸಂಬಂಧವಿರುವುದರಿಂದ ನೀರಾವರಿ ಯೋಜನೆಗಳ ಕಡೆಗೆ ಹೆಚ್ಚಿನ ಗಮನ ಕೊಡುವುದು ಪ್ರಥಮ ಕರ್ತವ್ಯ

ಸುಧಾರಿತ ಕ್ರಮದ ಸಾಗುವಳಿ ಹೇಗೆ ಸಾಧಿಸಬಹುದೆಂಬುದು ಇನ್ನೊಂದು ಮುಖ್ಯ ವಿಚಾರ ವರವೇಶಗಳಿಂದ ತರಿಸುವ ಗೊಬ್ಬರಗಳಿಂದಲೇ ಇದನ್ನಾರಂಭಿಸಬೇಕೆಂದೂ, ಈ ಗೊಬ್ಬರನ್ನಾಡುವ ವಿಜಂಟು ಕೆಲಸ ಕೃಷಿ ಎತೆಯವರಿಂದ ನಡೆಸಿದಾಕ್ಷಣ ಬಹಳ ಮುಂದರಿದೆವೆಂದು ಭಾವಿಸುವ ದಿನಗಳು ಈಗ ಕಳೆದುಹೋಗಿವೆ. ಇಂಡಿಯಾ ಸರಕಾರದವರು ಫರ್ಟಿಲ್ಯಾಜರ್ ಫ್ಯಾಕ್ಟರಿಗಳನ್ನು ವರ್ವಡಿಸಿ ಈ ಗೊಬ್ಬರ ತಯಾರಿ ಕಾರ್ಯ ಭರದಿಂದ ಮುಂದೊತ್ತಲು ಕಂಕಣಬದ್ಧರಾಗಿದ್ದಾರೆಂದು ಕಾಣುತ್ತದೆ ಈ ರಾಸಾಯನಿಕ ಗೊಬ್ಬರಗಳ ಉಪಯೋಗ ಕ್ಕೆ ಆಕ್ಷೇಪ ಹೇಳುವವರೂ ಇದ್ದಾರೆ. ಒಮ್ಮೆಗೆ ಬೆಳೆ ಹೆಚ್ಚು ಕೊಟ್ಟರೂ ಭೂಮಿಯ

(ಉಳಿದ ಕುಟ ನೋಡಿ)

ಸೈನ್ಯ ಸೇವಾನಿಧಿಯ ಪ್ರಚಾರ

ಹಿಂದೀ ವಿಮಾನ, ನೌಕ ಮತ್ತು ಸೈನ್ಯ ದಳಗಳ ಮೂವರು ಅಧಿಕಾರಿಗಳು-ಶಿಕ್ಷಿತ ತರುಣರು ದೇಶ ರಕ್ಷಣೆಗಾಗಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಸಶಸ್ತ್ರ ದಳಗಳಿಗೆ ಸೇರುವ ಆವಶ್ಯಕತೆಯ ಬಗ್ಗೆ ಕುರಿತು ಜಿಲ್ಲೆಯ ಶಾಲಾ ಕೊಲೇಜುಗಳಲ್ಲಿ ಭಾಷಣ ಪ್ರಚಾರವನ್ನು ಮಾಡುತ್ತಿರುವರು. ಕಳೆದ ತಾ. ೮ರಂದು ಇವರ ಭಾಷಣಕೂಟವೊಂದು ಸ್ಥಳೀಯ ಕೆನರಾ ಹಾಸ್ಕೂಲಿನಲ್ಲಿ ಶ್ರೀಮಾನ್ ಜೆ. ವಾಸುದೇವ ಸೈ, ಬಿ.ಎ.ಎಲ್.ಟಿ. ಇವರ ನೇತೃತ್ವದಲ್ಲಿ ಜರಗಿತು. ಆಗಸಶಸ್ತ್ರದಳಗಳ ಮೂರೂ ವಿಭಾಗಗಳಿಗೆ ಸೇರುವ ವಿಧಾನ ವನ್ನು, ಅವುಗಳಲ್ಲಿ ಕೊಡಲ್ಪಡುವ ತರ ಭೇತಿ ಕ್ರಮವನ್ನೂ ಮತ್ತು ಅದರ ಅನು ಕೂಲತೆಗಳನ್ನೂ ಸ್ಕಾಲರ್ ಆಫಿಸರ್ ಶ್ರೀ ಅಮರೇಂದ್ರ ಅವರು ವಿದ್ಯಾರ್ಥಿಗಳಿಗೆ ವಿವರಿಸಿದರು.

ಆಧುನಿಕ ಶಿಕ್ಷಣ ಮತ್ತು ಚಿತ್ರಕಲೆ

ಫೈನರ್ ಮೈನ್ಡ್ ಶಿಕ್ಷಣ ಕ್ರಮದಲ್ಲಿ ಚಿತ್ರಕಲೆಯು ಸ್ಥಾನಮಾನ ಮತ್ತು ಅದರ ಯಥಾಯೋಗ್ಯ ಬಳಸುವಿಕೆಗಳ ಕುರಿತು ಶ್ರೀ ಪ್ರಸನ್ನ ಅವರು ಸ್ಥಳೀಯ ಕೆನೆರಾ ಹ್ಯಾಸ್ಕೂಲಿನಲ್ಲಿ ತಾ. ೯ರಂದು ಬೆಳಿಗ್ಗೆ ಬೋಧ ಪರವಾದ ಭಾಷಣವನ್ನಿತ್ತರು. ಶ್ರೀ ಎಸ್. ಮುಕುಂದರಾವ್ ಅವರು ವರ್ತಿಚಿಗುಮಾಡಿದರು. ಭಾಷಣಕಾರರು ಶಾಂತಿನಿಕೇತನದ ಕಲಾ ಭವನದಲ್ಲಿ ತರಬೇತಿ ಹೊಂದಿದವರು. ಚಿತ್ರಕಲೆಯು ಉಪಯೋಗವು ವಿದ್ಯಾರ್ಥಿ ಜೀವನದಲ್ಲೂ, ಭಾವೀ ಜೀವನದಲ್ಲೂ ಮತ್ತು ಕೈಗಾರಿಕೆಯಲ್ಲೂ ಅದೆಷ್ಟು ಉಪಯುಕ್ತವಾಗಿದೆ. ಮತ್ತು ಅದನ್ನೂ ನೈಕ್ಷಿತ್ವ ವಿಕಾಸಕ್ಕಾಗಿ ಹೇಗೆ ಸಮ ಸ್ವಯಿಸಿಕೊಳ್ಳಬಹುದು ಎಂದು ಭಾಷಣ ಕಾರರು ನೆರೆದ ಚಿತ್ರಕಲಾ ಅಧ್ಯಾಪಕರಿಗೆ ಸೋಪಪತ್ತಿಕವಾಗಿ ತಿಳಿಸಿದರು. ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಭಾಷಣವು ಏರ್ಪಡಿಸಲ್ಪಟ್ಟಿತು. ತಾ. ೧೨ ರಂದೂ ಶ್ರೀಯುತರು ಅಲ್ಲಿಯೆ ಇನ್ನೊಂದು ಭಾಷಣ ಕೊಡಲಿದ್ದಾರೆ.

ನಗರ ಭಜನೆ

ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ಕೆಲವು ಉತ್ಸಾಹಿ ಗೃಹಸ್ಥರು ಪ್ರತಿ ದಿನ ರಾತ್ರಿ ನಗರ ಭಜನೆಯನ್ನು ಹೊರಡಿಸುವ ಕಾರ್ಯಕ್ರಮವನ್ನು ಕೈಕೊಂಡಿರುವರು. ನಗರದ ಮುಖ್ಯ ಮಾರ್ಗಗಳಲ್ಲಿ ದಿನಕ್ಕೊಂದೊಂದು ಕಡೆಯಂತೆ ಇದು ಪ್ರತಿ ಷ್ಠೆಗೆಯ್ದು ಮರಳುವುದು.

ಪೌರ ಸಭೆ

ಕಳೆದ ತಾ. ೨೮ರಲ್ಲಿ ಜರಗಿದ ಮುನಿಸಿ ವಲ್ ಕೌನ್ಸಿಲ್ ಸಭೆಯಲ್ಲಿ ಇತ್ತೀಚೆಗೆ ಜರಗಿದ ಉಪ ಚುನಾವಣೆಯಲ್ಲಿ ಯಶಸ್ವಿ ಯಾಗಿ ಆರಿಸಿಬಂದ ಶ್ರೀ ಅಲೆಮಾನ್ ಶ್ರೀನಿವಾಸರಾಯರ ಪ್ರತಿಜ್ಞಾವಿಧಿಯು ನೆರ ವೇರಿಸಲ್ಪಟ್ಟಿತು. ಕಂಕನಾಡಿಯ ಸೈಂಟ್ ಜೋಸೇಫ್ ಕುಷ್ಠರೋಗಿ ಆಸ್ಪತ್ರೆಗೆ ರೂ. ೬೫೦ ಮತ್ತು ರೂ. ೧೦೦೦ವನ್ನೂ ಕಳೆದ ಮತ್ತು ಚಾಲ್ತಿ ವರ್ಷದ ದಾನವಾಗಿ ಕೊಡ ಲಾಯಿತು. ಮಂಗಳೂರು ಭಗಿನೀ ಸಮಾ ಜಕ್ಕೂ, ರೂ. ೧೫೦೦ ಸಹಾಯ ನೀಡಲಾ ಯಿತು.

ಸೋಶಲಿಸ್ಟ್ ಜಿಲ್ಲಾ ಸಮ್ಮೇಳನ

ಇದೇ ಬರುವ ೧೧ ಮತ್ತು ೧೨ರಂದು ಸೋಶಲಿಸ್ಟ್ ಪಾರ್ಟಿ ಕಾರ್ಯಕರ್ತರ ವಿಷಯ ಹತ್ತೆಸಿಗಳ ದ. ಕ. ಜಿಲ್ಲಾ ಸಮ್ಮೇ ಳನವೊಂದು ಜರಗುವುದು. ಇದೇ ಸಂದರ್ಭ ದಲ್ಲಿ ದ.ಕ. ಜಿಲ್ಲಾ ತರುಣ ಸಮಾಜವಾದೀ ಸಂಘದ ವಾರ್ಷಿಕ ಅಧಿವೇಶನವೂ ಕೂಡ ಲಿರುವುದು. ಇವಕ್ಕೆ ಕರ್ನಾಟಕ ಪ್ರಾಂತಿಕ ಸೋಶಲಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ನಾಗಭೂಷಣ ಮತ್ತು ಜತೆಕಾರ್ಯ ದರ್ಶಿ ಸದಾಶಿವರಾಯರು ಬಕಲಿರುವರೆಂದು ತಿಳಿದುಬರುತ್ತದೆ. ಕೇರಳದ ಸೋಶ ಲಿಸ್ಟ್ ಪ್ರಮುಖರೂ ಬರಲಿರುವರು. ಹೊರ ಗಿನಿಂದ ಬರುವ ಅನುಮಂತ್ರಿತರಿಗೆ ಊಟ ಮತ್ತು ವಸತಿಯ ಏರ್ಪಾಡುಗಳನ್ನು ಮಾಡ ಲಾಗುವುದು. ಇದಕ್ಕೆ ರೂ. ೩೦ರನ್ನು ತೆರಬೇಕಾಗುವುದು.

ಬಸ್ ಅವಘಡ

ಮಂಗಳೂರಿಂದ ಉಡುಪಿಗೆ ಹೋಗು ತ್ತಿರುವ ಸಿ.ಪಿ.ಸಿ.ಯ ಎಕ್ಸ್‌ಪ್ರೆಸ್ ಬಸ್ಸು ಒಂದು ಮಿಯಾರಿನ ಬಳಿ ಅವಘಡಕ್ಕೀಡಾ ಯಿತೆಂದು ತಿಳಿದುಬರುತ್ತದೆ. ಪ್ರಯಾಣಗೊಂ ಡ ವ್ಯಯಾಣಿಕರನ್ನು ಇನ್ನಿಯ ಬೆನ್‌ಲೋ ರ್ ಆಸ್ಪತ್ರೆಗೆ ತರಲಾಗಿದೆ. ವಾಹನದ ಒಂ ದು ಉವಕರಣವು ತುಂಡಾದುದು ಅವಘ ಡದ ಕಾರಣವೆಂದು ಊಹಿಸಲಾಗಿದೆ.

ದುರ್ಮರಣಗಳು

ಇಲ್ಲಿಯ ಪುತ್ತು ಪ್ರಭು ಓಣಿಯಲ್ಲಿನ ವಟಾರದ ಒಂದು ಬಾವಿಯಲ್ಲಿ ಮೂರು ದಿನಗಳ ಹಿಂದೆ ಗೌಡಸಾರಸ್ವತ ಬ್ರಾಹ್ಮಣ ಣಿಯು ಬಿದ್ದು ಅಕ್ಕಹಕ್ಕಗೆಯ್ದುಳೆಂದು ತಿಳಿದುಬರುತ್ತದೆ.

ರಾಧಾಕೃಷ್ಣ ದೇವಸ್ಥಾನದ ಬಳಿ ವಸತಿ ಯಿರುವ ಸೆಂಟ್ರಲ್ ಸ್ಟುಡಿಯೋದ ಮ್ಯಾಲ ಕ ಶ್ರೀ ಮಂಜುನಾಥ ಅವರದೊಂದು ಎಳೆ ಪ್ರಾಯದ ಮಗು ಹೊರಳಾಡಿ ಮನೆಪಕ್ಕದ ನೀರುಟಾಂಕಿಯಲ್ಲಿ ಬಿದ್ದು ಮೃತವಟ್ಟಿತೆಂದು ತಿಳಿಸಲು ವಿಷಾಧಿಸುತ್ತೇವೆ.

ಹೊಂಡದ ಮಾರ್ಗಗಳು

ಪ್ಲೇಟ್ಟು ವಾಹನಗಳೂ, ಜನರೂ ಸೊಚರಿ ಸುವ ನಗರದ ಕೆಲವು ತಾರು ಹಾಕದ ಮುಖ್ಯ ರಸ್ತೆಗಳು ಹೊಂಡಗಳಿಂದ ತುಂಬಿ ರುವುದು ಗಮನಕ್ಕೆ ಬಂದಿದೆ. ಮಳೆಯು ಬಿಡದೆ ಭೀಳುತ್ತಿದ್ದುದರಿಂದ ಇವುಗಳನ್ನು ಶೀಘ್ರ ದುರುಸ್ತಿ ಪಡಿಸುವುದೂ ಕಠಿಣ ಕೆಲಸವೇ ಆಗಿದೆ. ಈ ಹೊಂಡಗಳಲ್ಲಿ ನೀರು ನಿಂತು, ವಾಹನಗಳ ಓಡಾಟ ಸಮಯದಲ್ಲಿ ದಾರಿಗರ ಮೇಲೆ ಅವುಗಳ ಕೆಂಪು ನೀರು ಹಾರುವ ಅವಾಂತರವು ಅಪ್ರಿಷ್ಟಿಸಿ. ಕೆಲವು ಕಡೆಗಳಲ್ಲಿ ಇಂತಹ ಜೊಂಡಗಳಲ್ಲಿ ಕಲ್ಲು ಗಳು ಇರಿಸಲ್ಪಟ್ಟದ್ದೂ ಕಂಡು ಬರುತ್ತಿದೆ. ಇವನ್ನು ನೋಂದ ದಾರಿಗರು ಇತರಿಗಾದರೂ ನೀರು ಚೆಲ್ಲುವಿಕೆಯ ಅಸಹ್ಯ ತಪ್ಪಲೆಂದು ಇಟ್ಟಿರಬಹುದೇನೊ. ಆಥರೆ ಇವುಗಳಿಂದ ಹಚ್ಚಿನ ಅಪಾಯವೂ ಇದೆ. ಈ ಕಲ್ಲುಗ ಳಿಗೆ ತಗುಲಿ ವೋಟರುಗಳ ಚಕ್ಕಗಳು ಸ್ವಿಮಿತ ತಪ್ಪಲೂಬಹುದು. ನಗರ ಸಭೆಯ ವರು ಈ ಹೊಂಡಗಳನ್ನು ಸಾಧ್ಯವಿದ್ದಷ್ಟು ಸರಿಪಡಿಸಲು ಪ್ರಯತ್ನಪಡುವುದು ಹಿತಕರ ವೆಂದು ಹಾರೈಸಲಾಗಿದೆ.

ಪಣಂಬೂರು

ಪಣಂಬೂರು ಸಾರ್ವಜನಿಕ ವಾಚನಾ ಲಯದ ಮಹಾಸಭೆ ತಾ. ೩೦ರಂದು ಶ್ರೀ ಪಿ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷಕ್ಕೆ ಶ್ರೀ ಪಿ. ಶ್ರೀನಿ ವಾಸರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಪಿ. ರಾಮರಾಯರನ್ನು ಏದನೇ ಸಲ ಕಾರ್ಯದರ್ಶಿಯನ್ನಾಯೂ ಚುನಾಯಿಸ ಲಾಯಿತು. ಭಾಷಣ, ಲಘು ಉಪಹಾರ, ಮಂಗಲ ಗೀತೆಯೊಡನೆ ಸಭೆ ಮುಕ್ತಾಯ ವಾಯಿತು.

ಉಡುಪಿ

ಇದೇ ಜುಲ್ಯಾ ತಿಂಗಳ 2ನೇ ವಾರದಲ್ಲಿ ಜರಗಲಿರುವ ಉಡುಪಿಯ ೨ಕಲಾವೃಂದದ ವಾರ್ಷಿಕೋತ್ಸವದ ಸಂದರ್ಭದಲ್ಲಿ ದಿವಂ ಗತ ವೆಂಕಟ್ರಮಾಚಾರ್ಯರ ಸ್ಮಾರಕ ವಾಗಿ ನಡೆಯಲಿರುವ ಲೇಖನ ಸ್ಪರ್ಧೆಯಲ್ಲಿ ಕನ್ನಡನಾಡಿನ ಎಲ್ಲಾ ವಿದ್ಯಾರ್ಥಿ ವಿದ್ಯಾ ರ್ಥಿನಿಯರು ಭಾಗವಹಿಸಬೇಕೆಂದು ಕಾರ್ಯ ದರ್ಶಿಗಳು ವಿನಂತಿಸುತ್ತಾರೆ.

ಈ ಸ್ಪರ್ಧೆಗೆ ಲಲಿತ ಕಲೆಗಳ (ಕಲೆ, ಸಾಹಿತ್ಯ, ಸಂಸ್ಕೃತಿ ಧರ್ಮ ಇತ್ಯಾದಿ) ಕುರಿತಾಗಿ ಅಥವಾ ಶ್ರೀ ವೆಂಕಟ್ರಮಾಚಾ ರ್ಯರ ವ್ಯಕ್ತಿತ್ವದ ಕುರಿತಾಗಿ ಪ್ರಬಂಧಗಳ ನ್ನು ಕಳುಹಿಸಬಹುದು. ಪ್ರಬಂಧವು ಸ್ವ ತಂತ್ರವೂ ಚೊಕ್ಕವೂ ಆಗಿರಬೇಕು. ಜುಲ್ಯಾ ತಿಂಗಳ ೧೫ರೊಳಗೆ ಅವು ಕಾರ್ಯದರ್ಶಿ, ಕಲಾವೃಂದ, ಉಡುಪಿ ಇವರಿಗೆ ಮುಟ್ಟ ಬೇಕು.

ಉಡುಪಿ ಮುನಿಸಿವಲ್ ಕೌನ್ಸಿಲಿನ ಇತ್ತೀಚೆಗಿನ ಸಭೆಯಲ್ಲಿ, ಶಾಲೆಗಳ ಎಳೆ ಬಾಲಕ ಬಾಲಕಿಯರಿಗೆ ಧರ್ಮಾರ್ಥ ಹಾಲನ್ನು ಕೊಡುವರೆ ಕೌನ್ಸಿಲು ತಯಾರಿದೆ ಎಂದೂ ಆ ಬಗ್ಗೆ ಅಂದಾಜು ಖರ್ಚು ರೂ. ೩ ಸಾವಿರದಲ್ಲಿ ಅರ್ಧಾಂಶ ಹಣವನ್ನು ಸರಕಾರ ಕೊಡಬೇ ಕೆಂದೂ ಕೇಳಿಕೊಳ್ಳುವುದಾಗಿಯೂ ನಿರ್ಧ ರಿಸಲಾಯಿತು.

ಉಡುಪಿ ಸಂಸ್ಕೃತ ಪಾಠಶಾಲೆಯ ದ್ವೈತ ವೇದಾಂತ ಅಧ್ಯಾಪಕ ಶ್ರೀ ಗುರು ರಾಮಾಚಾರ್ಯರು ತಾ. ೩೧ರಂದು ದೈವಾ ಧೀನರಾದರೆಂದ ತಿಳಿಸಲು ವಿಷಾದಿಸುತ್ತೇವೆ.

ಇಲ್ಲಿಯ ಮಧ್ವ ಸರೋವರದಲ್ಲಿ ವತ್ಸಿಕ ಮಾರಾಟದ ಕೆಲಸದ ಒಬ್ಬ ಹುಡುಗನು ಸ್ನಾನ ಮಾಡುತ್ತಿದ್ದಾಗ ಮುಳುಗಿ ದುರ್ಮ ರಣಕ್ಕೀಡಾದನು.

ಪುತ್ತೂರು

ದ. ಕನ್ನಡ ಮತ್ತು ಕೊಡಗು ಅಡಿಕೆ ಬೇಸಾಯಗಾರರ ಸಂಘದ ವಾರ್ಷಿಕ ಸಭೆ ಕಳೆದ ತಿಂಗಳ ತಾ. ೨೬ರಂದು ಶ್ರೀ ಸಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾಯಕದರ್ಶಿ ಶ್ರೀ ಲಕ್ಷ್ಮೀನಾರಾಯಣ ನಾಯರು ವರದಿಯೋದಿದರು. ಅಡಿಕೆ ವ್ಯವಸಾಯದ ಅಭಿವೃದ್ಧಿಗಾಗಿ ಕೈಕೊಂಡ ಕ್ರಮಗಳ ಬಗ್ಗೆ ಕೇಂದ್ರ ಸರಕಾರವನ್ನು ಅಭಿನಂದಿಸುವ ಗೊತ್ತುವಳಿಯು ಅಧ್ಯಕ್ಷ ರಿಂದ ಮಂಡಿಸಲ್ಪಟ್ಟು ಸ್ವೀಕೃತವಾಯಿತು. ಹೊಸ ಕಾರ್ಯ ನಿರ್ವಾಹಕ ಮಂಡಳಿಯ ಆರಿಸುವಿಕೆಯ ನಡೆಯಿತು.

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ 1

ಮೂಲಧನ (ತೆತ್ತದ್ದು) . . ರೂ. 10,00,000

ಜೀವವಿಮೆಯ ಫಂಡು . . ರೂ. 12,00,000 (ಮಿಕ್ಕಿದೆ)

ನೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ. ೮-೦-೦ರಂತೆ ರಿವರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. ೮-೦-೦ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡೈರೆಕ್ಟರರನ್ನೂ, ಆಡಳಿತ ಮಂಡಳಿಯನ್ನೂ ಅಭಿನಂದಿಸುತ್ತೇನೆ. ಅವರ ದೂರದರ್ಶಿತದ್ವ ನಿಪುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾರುದು. ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವುದೆಂದು ಹೇಳುತ್ತೇನೆ.

ವಿ. ಎಚ್. ವೋರಾ, F. I. A.

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು.

ಈ ಕಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಕುಮಾರ್ ಕೂಳೂರ್ ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

(ಚರಿತೆ ಪುಟದಿಂದ)

ಯ ಸತ್ಯವೇ ಇದರಿಂದ ಕುಗ್ಗುತ್ತಿದೆಯೆಂದು ತಿಳಿದುಬರುತ್ತದೆ. ಈ ಗೊಬ್ಬರಗಳಿಂದ ಮಣ್ಣು ವಿಷಮಯವಾಗುವ ಸಂದರ್ಭಗಳೂ ಕಂಡುಬಂದಿವೆ. ಅಂತೂ ಇವುಗಳ ಉಪಯೋಗ ಜರ್ಜರಿತವಾದುದೆನ್ನಲು ಅಡ್ಡಿಯಿಲ್ಲ.

ಈಗ ಸದ್ಯಕ್ಕೆ ನಮ್ಮಲ್ಲಿಯ ಕೃಷಿ ಖಾತೆಯವರು ಟ್ರೆಕ್ಟರುಗಳ ಉಪಯೋಗ ಪ್ರಚಾರಕ್ಕೆ ತರಲು ತುಂಬಾ ಹೆಣಗಾಡುವಂತೆ ಕಾಣುತ್ತದೆ ಹೊಸ ಭೂಮಿ ಸಾಗುವಳಿಗೆ ಒಳಪಡಿಸುವಲ್ಲಿ ಅಧಿನಾ ಸಾಕಷ್ಟು ಕೃಷಿ ಕೆಲಸಗಾರರಿಲ್ಲದ ಫಲ್ಪದ ಬುಡದ ಪ್ರದೇಶಗಳಲ್ಲಿ ಈ ಟ್ರೆಕ್ಟರುಗಳಿಂದ ಉಪಯೋಗವಾಗಬಹುದು. ಆದರೆ ಎಲ್ಲಾ ಕಡೆಗಳಲ್ಲಿ ವಿಚಾರವಿಲ್ಲದೆ ಟ್ರೆಕ್ಟರುಗಳ ಪ್ರಚಾರ ಮಾಡಿದರೆ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚಾಗುವ ಸಂಭವವಿದೆಯೆಂದು ಸಾರುವವರು ಎಷ್ಟೊ ಮಂದಿ ಇದ್ದಾರೆ ಜನಸಂಖ್ಯೆ ತುಂಬಾ ಇದ್ದಲ್ಲಿ ಯಂತ್ರೋಪಕರಣಗಳು ನಿರುದ್ಯೋಗ ಹೆಚ್ಚಿಸಲು ಕಾರಣವಾಗುತ್ತವೆ. ಟ್ರೆಕ್ಟರುಗಳಿಗಿಂತ ಉತ್ತಮ ಜಾನುವಾರುಗಳಿಂದ ನಮ್ಮ ಕೃಷಿಕರಿಗೆ ಎಷ್ಟೋ ಹೆಚ್ಚಿನ ಪ್ರಯೋಜನಗಳಿವೆ ಜಾನುವಾರುಗಳಿಂದ ಅತ್ಯುತ್ತಮ ಗೊಬ್ಬರ ಸಿಗುತ್ತದೆ ಕೃಷಿಕನ ಉತ್ಪತ್ತಿ ಸಾಗಿಸಲು ಹಳ್ಳಿಗಳ ಮಟ್ಟಿಗೆ ಎತ್ತಿನ ಗಾಡಿಗಳಿದ್ದಲ್ಲಿದೆ ಈಗ ಸಾಧ್ಯವಿಲ್ಲಿ. ಇನ್ನೆಲ್ಲ ಕಾರಣಗಳಿಂದ ಟ್ರೆಕ್ಟರುಗಳ ಉಪಯೋಗಕ್ಕೆ ಒಂದು ಮಿತಿ ಇದೆ ಎಂಬುದನ್ನು ತಿಳಿದು ಸಾರಾಸಾರ ವಿಚಾರದಿಂದ ಇವನ್ನು ಪಯೋಗಿಸಿಕೊಳ್ಳುವುದು ಲೇಸು.

ಹೊಸ ಬೀಜಗಳ ಪ್ರಯೋಗವೇನೋ ಕೃಷಿಖಾತೆಯ ಕಾರ್ಯಕ್ರಮದಲ್ಲಿ ಅತ್ಯುಪಯುಕ್ತವೆಂದುದಂಬುದು ನಿರ್ವಿವಾದ ಕಂಕಸಾತಿಯಲ್ಲಿ ಈ ಬಗ್ಗೆ ಒಂದು ಕೃಷಿ ಶೋಧನಾಕ್ಷೇತ್ರದ ಏರ್ಪಾಡಿದ್ದುದು ನಮ್ಮ ಜಿಲ್ಲೆಗೆ ತುಂಬಾ ಪ್ರಯೋಜನಕಾರಿ ಇರುತ್ತದೆ. ನಮ್ಮ ಜಿಲ್ಲೆಯ ರೈತರು ಇಲ್ಲಿಯ ಅನುಭವದ ಪೂರ್ಣ ಸದುಪಯೋಗ ಮಾಡಿಕೊಳ್ಳುವುದು ಅತೀ ಅಗತ್ಯ

ಹಟ್ಟಿ ಗೊಬ್ಬರ ಉತ್ತಮ ರೀತಿಯಲ್ಲಿ ಶಕ್ತಿಸಿಡುವುದು, ಜಾನುವಾರು ಸಂತತಿ ಅಭಿವೃದ್ಧಿ, ಕೃಷಿ ಉತ್ಪತ್ತಿ ಮಾರಾಟದ ಸಹಕಾರಿ ಏರ್ಪಾಡು, ಕೃಷಿಕರಿಗೆ ಉಪಕಸಬುಗಳ ಏರ್ಪಾಡು ಇತ್ಯಾದಿ ಹಲವು ಪ್ರಶ್ನೆಗಳನ್ನು ಪ್ರಯತ್ನಪೂರ್ವಕ ಬಿಡಿಸಲೆತ್ನಿಸಿದರೆ ಮಾತ್ರ ಹೆಚ್ಚು ಬೆಳೆ ಬೆಳೆಯಿಸಿರೆಂಬ ಚಳವಳಿ ಯಶಸ್ವಿಯಾದೀತು.

ಅಂತೂ ಈ ಚಳವಳಿದ ಸರಿಯಾದ ಕಾರ್ಯಕ್ರಮವು ಆಯಾ ನಿರ್ದಿಷ್ಟ ಅವಧಿಗಾಗಿ ನಿರ್ಧರಿಸಿಕೊಂಡು ಆ ಅವಧಿಯೊಳಗೆ ಅದನ್ನು ಪೂರೈಸುವ ವ್ಯವಸ್ಥಿತ ರೀತಿಯಿಂದ ಮುಂದರಿಯುವುದು ಅಗತ್ಯವಿರುತ್ತದೆ. ಕೃಷಿ ಇಲಾಖೆಯವರ ಹಾಗೂ ಸಂಬಂಧಪಟ್ಟ ಇತರ ಇಲಾಖೆಯವರ ಶಿಬಂದಿಯನ್ನೆಲ್ಲಿ ಒಟ್ಟುಗೂಡಿಸಿ ನಮ್ಮ ಎಮ್. ಎಲ್. ಎ. ಮೊದಲಾದವರೂ ಅವರೊಡನೆ ಸೇರಿ ಇಂಥ ನಿರ್ದಿಷ್ಟ ಕಾರ್ಯಕ್ರಮ ನುಂದೊತ್ತುವುದು ಈಗಿನ ಒಂದು ಮುಖ್ಯ ಅವಶ್ಯಕತೆಯೆಂಬುದು ಸೂಚಿಸಬಹುದು.

M. E. No. 29.

ಜನಾಂಗ ಸಂಘದ ಸಮಿತಿ ಮಲೇರಿಯಾ ವಿರುದ್ಧ ಅದರ ಯುದ್ಧ

ಮಲೇರಿಯಾ ಜ್ವರಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಅಭ್ಯಸಿಸಲು ಜನಾಂಗ ಸಂಘದವರು ಒಂದು ಸಮಿತಿಯನ್ನು ನಿರ್ಮಿಸಿ ಇದೀಗ ಹತ್ತು ವರ್ಷಗಳಿಗೂ ಮಿಗಿಲಾಯಿತು.

ಉಷ್ಣ ಮತ್ತು ಸಮಶೀತೋಷ್ಣವಲಯದ ದೇಶಗಳಲ್ಲಿ ಮಲೇರಿಯಾದಿಂದಾಗುವ ಹಾನಿಯು ಎಷ್ಟೆಂದು ಲೋಕವಿದಿತವಿದೆ ವರ್ಷಂಪ್ರತಿ 20 ಮಿಲಿಯಕ್ಕೂ ಮಿಕ್ಕಿದ ಮಲೇರಿಯ ವ್ಯಾಧಿಗ್ರಸ್ತರಿಗೆ ಸರಿಹಾರ ಕೊಡಲ್ಪಡುವುದು. ಎನೋಫಿಲಿಸ್ ಎಂಬ ಮಲೇರಿಯ ಜ್ವರಾಣುಗಳನ್ನು ಒಯ್ಯುವ ಸೊಳ್ಳೆಗಳಿಂದ ವಿಶಾಲ ಪ್ರದೇಶಗಳನ್ನು ನೂನವಾಸಕ್ಕೆ ಅಯೋಗ್ಯಗೊಳಿಸಲ್ಪಡುತ್ತವೆ

ಪೆಲೆಟಿಯರ್ ಮತ್ತು ಕೆವೆಂಟೊ ಎಂಬ ಫ್ರೆಂಚ್ ಜ್ಞಾನಿಗಳು ಸಿಂಕೋನಾ ಮರ ತೊಗಟೆಯಿಂದ ಶುದ್ಧ ಕ್ವಿನೀನನ್ನು ತಯಾರಿಸುವ ಯಶಸ್ವಿ ವಿಧಾನವನ್ನು 1820ರಲ್ಲಿ ಕಂಡು ಹಿಡಿದರು. ಈ ಜ್ವರದ ಭೀತಿಯಿಲ್ಲದಂತೆ ಅದರ ಸಿಂದ್ಧ ಹೋರಾಡಲು ಸ್ಥಳ ಸ್ರವಣಾದ ಕ್ವಿನೀನು ಇದ್ದರೆ ಸಾಕು ಜನಾಂಗ ಸಂಘದ ಮಲೇರಿಯಾ ಸಮಿತಿಯಿಂದ ಶಿಫಾರಸು ಮಾಡಲ್ಪಟ್ಟ ಅಲ್ಪಾವಧಿಯ ಕ್ವಿನೀನು ಸೇವನಾ ಕ್ರಮದಂತೆ 5ರಿಂದ 7 ದಿವಸಗಳ ತನಕ ದಿನಂಪ್ರತಿ 15 ರಿಂದ 20 ಕಾಳುಗಳಷ್ಟು ಕ್ವಿನೀನನ್ನು ಸೇವಿಸುವುದೆಂಬ ಸಂಗತಿಯು ಈ ಗಾಗಲೇ ಸರ್ವವಿದಿತವಿದೆ ಆನಂತರ ಸೇವನೆ ಅವಶ್ಯವಿಲ್ಲ ಜ್ವರ ಪುನಃ ಕಾಣಿಸಿಕೊಂಡರೆ ಮೊದಲಿನಂತೇ ಸೇವಿಸುವುದು.

ಅನೇಕ ಕಾರಣಗಳಿಂದಾಗಿ ಮಲೇರಿಯವ ವಿರುದ್ಧವಾದ ಈ ಹೋರಾಟವು ಮಾನವ ವರ್ಗಕ್ಕೆ ಅತೀ ಮಹತ್ವದ್ದಾಗಿದೆ. ಸಹಜವಾಗಿ ವೈದಕೀಯ ಮತ್ತು ನೈತಿಕ ಕಾರಣಗಳು ಮುಖ್ಯ ಕಾರಣಗಳಾಗಕ್ಕವೆ. ಮಾತ್ರವಲ್ಲ ಮಲೇರಿಯವನ್ನು ನಿರ್ಮೂಲಿಸುವ ಪ್ರಯತ್ನಕ್ಕಾಗಿ ಉಪಯೋಗಿಸುವ ಖರ್ಚು ಒಂದು ಉತ್ತಮ ಶೇವಣಾತಿಯೆಂದು ತಿಳಿಯಬೇಕು

ನಾಣಿಜ್ಯ, ಉದ್ಯೋಗದ ಕೃಷಿಗಾರಿಕೆಯ ನ್ಯಹಾರದ ಜಾಲಕರು ಮಲೇರಿಯಾ ನಿರ್ಮೂಲನಕ್ಕೆ ಆಗಿಂದ್ಯಾಗ್ಗೆ ತಮ್ಮ ಕೆಲಸಗಾರರಿಗೆ ಕ್ವಿನೀನು ಹಂಚೋಣಕ್ಕೆ ಹಣ ವಿರ್ಜನ್ ಮಾಡಿದರೆ ಅವರ ವಹಿವಾಟುಗಳಿಗೆ ಮುಂದೆ ಉತ್ತಮ ಸರಿಸ್ಥಿಯನ್ನುಂಟು ಮಾಡಿದಂತಾಗುತ್ತದೆ ಮಲೇರಿಯಾ ಜ್ವರದ ಕಾಲದಲ್ಲಿ ಪ್ರತಿದಿನ ಒಬ್ಬೊಬ್ಬನಿಗೆ 6 ಕಾಳುಗಳಷ್ಟು ಕ್ವಿನೀನನ್ನು ಸೇವಿಸಲು ಕೊಡಬೇಕೆಂದು ಮಲೇರಿಯಾ ತಜ್ಞರ ಸಮಿತಿಯು ಸೂಚಿಸಿದೆ

ಆ ಸಮಿತಿಯ ಈ ಕೆಳಗಿನ ಹೇಳಿಕೆಯೇ ಎಲ್ಲಾ ಸಂಗತಿಗಳನ್ನೂ ಸುಸ್ಪಷ್ಟಗೊಳಿಸುತ್ತದೆ

"ಮಲೇರಿಯಾ ಜ್ವರ ಪೀಡಿತ ಪ್ರದೇಶಗಳಲ್ಲಿ ಅತ್ಯಾವಶ್ಯಕವೂ ಮತ್ತು ಅತ್ಯಂತ ಮಹತ್ವದ್ದೂ ಆದ ಕಾರ್ಯ ಯೋಜನೆಯೆಂದರೆ ಮಲೇಜ್ವರಕ್ಕೆ ಕುತ್ತಾದ ಪ್ರಜೆಗಳಿಗೆ ಕ್ವಿನೀನಿನ ಸೇವನೆಯ ಅವಧಿಯನ್ನು ತುಸು ದೀರ್ಘಗೊಳಿಸುವುದೆ" ಆಗಿದೆ

ಡಾ। ಎಂಡ್ರ್ಯೂ ಬಾಲ್‌ಸ್ಕೋರ್ ಎಂಬ ತಜ್ಞರು ಒಟ್ಟುಗೂಡಿಸಿದ ಅಂಕೆ ಸಂಖ್ಯೆಗಳು ಹೀಂಗೆ ತಿಳಿಸುತ್ತವೆ ಜಗತ್ತಿನಲ್ಲಿ ವರ್ಷಂಪ್ರತಿ 20 ಲಕ್ಷ ಜನರು ಮಲೇರಿಯದಿಂದ ಸಾವನ್ನಪ್ಪುವರು ಪ್ರತಿ 1000 ಮಲೇರಿಯಾ ವ್ಯಾಧಿಗ್ರಸ್ತರಲ್ಲಿ 3 ಇಲ್ಲವೆ 4 ಮಂದಿಗಳು ಮೃತರಾಗುವರೆಂದು ನಾವು ಲೆಕ್ಕ ಹಿಡಿದರೆ ಇಡೀ ಜಗತ್ತಿನಲ್ಲಿ ಸುಮಾರು 65 ಕೋಟಿ ಜನರು ಮಲೇರಿಯಾ ಜ್ವರದಿಂದ ಸಂಕಷ್ಟಪಡುವರೆಂದು ಗೊತ್ತಾಗುತ್ತದೆ ಈ ಪ್ರಮಾಣವನ್ನು ಹೆಚ್ಚಿನ ತಜ್ಞರು ಒಪ್ಪಿಯೂ ಇರುವರು ಅಂದರೆ ವಿಶ್ವದ ಮೂರನೆ ಒಂದಶದಷ್ಟು ಜನರು ಮಲೇರಿಯಾ ಪೀಡೆಗೊಳಗಾಗಿರುವರೆಂದು ಉಚಿತವಾಗುತ್ತದೆ.

ಜನಾಂಗ ಸಂಘದ ಮಲೇರಿಯಾ ಸಮಿತಿಯ ಲೆಕ್ಕ ಪ್ರಕಾರ 20 ಲಕ್ಷ ಜನರಿಗೆ ಮಾತ್ರ ಈಗ ಕ್ವಿನೀನ ಔಷಧಿ ಸೇವನೆಯ ಸೌಕರ್ಯ ದೊರಕುತ್ತದೆಂದಿದೆ. ಅಂದರೆ ಒಟ್ಟು ಮಲೇರಿಯಾ ವ್ಯಾಧಿಗ್ರಸ್ತರಲ್ಲಿ 65 ರಲ್ಲಿ ಎರಡಂಶದಷ್ಟು ಜನರಿಗೆ ಮಾತ್ರ ಈ ಭಾಗ್ಯವಿರುವಂತಾಯಿತು ಆಗಾಗ ದೇಶದ ಸರಕಾರಗಳು ಅಧಿಕ ಪ್ರಮಾಣದಲ್ಲಿ ಕ್ವಿನೀನನ್ನು ಸರಬರಾಯಿ ಮಾಡಲು ಏರ್ಪಡಿಸಿದರೆ ಮಲೇರಿಯ ಪೀಡೆಯು ಜಗತ್ತಿನಲ್ಲಿ ಬಹು ಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ

ದಿಗಂಬರದ ಜೈನ ಸನ್ಯಾಸಿಯ ನಿರಶನ ಸತ್ಯಾಗ್ರಹ

ಹತ್ತು ತಿಂಗಳಿಂದ ನಡೆಯುತ್ತಿದೆ!

ನಾಸಿಕದ ಬಳಿ ಆಚಾರ್ಯ ಚಿರಿತ್ರ ಚಕ್ರವರ್ತಿ ಶಾಂತಿಸಾಗರ ಸ್ವಾಮಿ ಎಂಬ ದಿಗಂಬರ ವಂಧದ ಜೈನ್ಯ ಸನ್ಯಾಸಿಗಳು ಇಂದಿಗೆ ಹತ್ತು ತಿಂಗಳಿಂದ ನಿರಶನ ವ್ರತವನ್ನಾಚರಿಸುತ್ತಿರುವರು ಬೊಂಬ್ಬಾ ದೇವಾಲಯ ಪ್ರವೇಶ ಶಾಸನವಲ್ಲಿ "ಹರಿಜನರಿಗೆ ಹಿಂದೂ ದೇವಾಲಯಗಳಲ್ಲಿ ಪ್ರವೇಶಕೊಡಬೇಕು." ಮತ್ತು "ಹಿಂದೂಗಳೆಂದರೆ ಜೈನರೂ ಎಂದಾಗುತ್ತದೆ" ಎಂಬೀ ಶಬ್ದಗಳನ್ನು ತೆಗೆಯಬೇಕೆಂದು ಅವರ ಆಗ್ರಹ ಜೈನರಲ್ಲಿ ಹರಿಜನ ವರ್ಗವೆಂದಿಲ್ಲವೆಂದೂ ಜೈನ ಧರ್ಮವು ಹಿಂದೂ ದರ್ಮದಿಂದ ಸ್ವತ್ಯೇಕವಾದುದೆಂತಲೂ ಅವರ ಅಭಿಪ್ರಾಯ ದೇಳ್ಯಂಡಶಬ್ದಗಳನ್ನು ತೆಗೆದರೆ 7ಂ ವರ್ಷದ ಮುನಿಗಳು ಆಹಾರ ಸೇವನೆಮಾಡಲು ಪ್ರಾರಂಭಿಸುವರು

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿವಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ದು ಕೊಯಮುತ್ತೂರಲ್ಲಿರುವ ಸರ್ಕಾರಿ R. T O ರವರು ಸೆಂಕ್ಷನ್ ಮಾಡಿ, ಅದು ಕೂಡಾ ಗ್ಯಾಸು ಬಸುಗಳಿಂದಲೇ ಓಡಿಸಬೇಕಾಗಿ ನಿರ್ಭಂದವಿರುವ ಹುಕುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದೆ ಸ್ಪೆಶಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
22-12-48

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,90,000

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಸಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾಖಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೂ ದಯಪಿಸುವ

ಶ್ರೇಷ್ಠ ವಿಮಾ ಸಂಸ್ಥೆಗಳಲ್ಲಿ

ಪ್ರಾಮುಖ್ಯ ಏಜೆಂಟರು

ಕೊಚ್ಚೆಕಾರ್ ಬ್ರದರ್ಸ್ ಲಿಮಿ. ಮಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ತ್ರಿವೆಂದ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದುವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನವ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharaja Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪಿಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಛಡಿಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ವುಪ್ಪಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 17—6—1949 [ಸಂಚಿಕೆ 24]

ವಿಶ್ವ ರಾಷ್ಟ್ರಮಂಡಳದಲ್ಲಿ ಭಾರತದ ಸ್ಥಾನ

ಸುಖವಾದ ಜೀವನ – ಉನ್ನತ ವಿಚಾರ

ಸಾರ್ವಜನಿಕ ಭಾಷಣಗಾರರ ಕಪಟ ಸಲಹೆಗಳು

ಡಾ। ಕೆ. ಎನ್. ಕಿಣಿ ಅವರ ವಿಚಾರಾರ್ಹ ಲೇಖನ

"ಸರಳವಾಗಿ ಜೀವನಮಾಡಿ, ಉನ್ನತವಾದ ವಿಚಾರಗಳನ್ನು ಮಾಡಬೇಕು" ಎಂದು ನಮ್ಮಲ್ಲಿನ ಪ್ರತಿಯೊಂದು ಸಾರ್ವಜನಿಕ ಭಾಷಣಕಾರರು ಸಲಹೆಯೀಯುವುದು ಒಂದು ಸರ್ವಸಾಮಾನ್ಯ ರೂಢಿಯಾಗಿದೆ ಇವರಲ್ಲಿ ವಕೀಲರೂ ಡಿಮ್ಯೋಗಿಕ ಮುಖಂಡರೂ, ಸೈನ್ಯಾಧಿಕಾರಿಗಳೂ, ತತ್ವಜ್ಞಾನಿಗಳೂ ಇದ್ದಾರೆ ಆದರೆ ಹೀಗೆ ಉಪದೇಶ ಮಾಡುವವರ ವೈಯಕ್ತಿಕ ಜೀವನವನ್ನು ಪರಿಶೀಲಿಸಿದರೆ ಇವರ ನುಡಿಗೂ ನಡೆಗೂ ತುಂಬಾ ತಾರತಮ್ಯವು ತೋರಿಬರುತ್ತದೆ ಅವರು ಹಚ್ಚಾಗಿ ಸುಖದಲ್ಲೇ ಲೋಲ ಸ್ವರಾಗಿರುತ್ತಾರೆ ಇವರು ಅರಮನೆಗಳಂತಹ ಬಂಗಲೆಗಳಲ್ಲೇ ವಾಸಿಸುತ್ತಾರೆ ಮೋಟಾರುಕಾರುಗಳಲ್ಲೇ ಸಂಚರಿಸುತ್ತಾರೆ ಅವರು ಬಳಸುವ ವಸ್ತುಗಳು ದೇಶವಿದೇಶಗಳಿಂದ ಅತೀ ಹೆಚ್ಚಿದ ಬೆಲೆಗೇ ಕೊಂಡು ಕೊಂಡಂಥವುಗಳಿರುತ್ತವೆ ಅವರ ಬಳಿ ಅತೀ ನಾಜೂಕಾದ ಟೂತ್ ಬ್ರಶ್ಶುಗಳೂ ದಂತಲೇವಗಳೂ, ಕ್ಷೌರ ಸಲಕರಣೆಗಳೂ ಇರುತ್ತವೆ ಅವರು ವಿಮಾನಿಸುವ ಕುರ್ಚಿ ಮೇಜುಗಳಾದರೂ ಅತೀ ಶ್ರೇಷ್ಠ ತಯಾರಿಕೆಯವೂ, ಅತೀ ಹೆಚ್ಚು ಮೌಲ್ಯದವೂ ಆಗಿರುತ್ತವೆ ಅತೀ ನಾಜೂಕಾದ ಸಿಲ್ಕು ಮತ್ತು ಟ್ವೀಡ್ ಬಟ್ಟೆಗಳನ್ನೇ ಅವರು ಮತ್ತವರ ಕುಟುಂಬದವರು ಉಡುವರು ಸಂಕ್ಷಿಪ್ತವಾಗಿ ಹೇಳುವುದಾದರೆ ಜೀವನವನ್ನು ಸುಖಮಯವಾಗಿ ಮಾಡುವ ಪ್ರತಿಯೊಂದು ಸಾಧನವನ್ನು ಅವರು ಬಳಸುತ್ತಿರುತ್ತಾರೆ

ಉಪದೇಶದ ವಿನೋದವೇನು?

ಹಾಗಾದರೆ ಈ 'ಸರಳ ಜೀವನದ' ಉಪದೇಶ ಯಾರಿಗಾಗಿ? ನಿಜವಾಗಿಯೂ ಪ್ರತಿಯೊಬ್ಬನೂ ಸುಖವಾಗಿಯೂ ಆರಾಮವಾಗಿಯೂ ಬಾಳಲೇಬೇಕು ಆದರೆ ಸಾರ್ವಸಾರ್ವಜನಿಕ ಭಾಷಣದಲ್ಲಿ ಈ ಅನೈಜ ಕತೆಯನ್ನೇಕೆ ತರುವರು? ಅಂತಹ ಸಂದರ್ಭದಲ್ಲಿ ಅವರು. ಸರಳ ಉಡುವು ತೊಡುವುಗಳಲ್ಲೂ, ಕಾಣಿಸಿಕೊಳ್ಳುವರು ಉನ್ನತ ಅಧಿಕಾರಿಗಳು, ಶ್ರೀಮಂತರು ಕೊಡುವ ಸತ್ಕಾರ ಕೂಟಗಳ ಸಂದರ್ಭದಲ್ಲಿ ಮಾತ್ರ ಉನ್ನತ ವಿಚಾರದ' ಭೋಧನೆ ಅವರ ಬಡ ಬಂಧವರಿಗಾಗಿಯೇ ಸಿದ್ಧಗೊಳಿಸಿದ್ದಾಗಿದಂದು ಸ್ಪಷ್ಟವಾಗುತ್ತದೆ

ಪ್ರಾಚೀನ ಕಾಲದಲ್ಲಿ ನಮ್ಮ ಮಹರ್ಷಿಗಳು ಅರಣ್ಯ ಆಶ್ರಮಗಳಲ್ಲಿ ವಾಸಿಸಿ ಜೀವನದ ಗೊತ್ತುಗುರಿಗಳ ಕುರಿತು ವಿಚಾರ ತಪಸ್ಸನ್ನು ಗೆಯ್ಯುತ್ತಿದ್ದರು ಅವರದು ನಿಜವಾದ ಸರಳ ಜೀವನ ಉನ್ನತ ವಿಚಾರವಾಗಿದ್ದಿತು ಪ್ರಕೃತಿಯಲ್ಲಿ ಸಮೃದ್ಧವಾಗಿರುವ ಕಂದಮೂಲಗಳನ್ನೇ ಅವರು ತಿನ್ನುತ್ತಿದ್ದರು, ಅವರ ಅತ್ಯಂತ ಸರಳವಾದ ಎಲೆಮನೆಗಳಲ್ಲೇ ಇರುತ್ತಿದ್ದರು ಅಲ್ಲೇ ಅವರು ಉದ್ಗ್ರಂಥಗಳನ್ನು ಬರೆದರು ನಮ್ಮ ಅವುರದಾಯಣ ಮಹಾಭಾರತಗಳು ಅಲ್ಲೇ ರಚಿಸಲ್ಪಟ್ಟಿದಂದುಗಳು ಅರಸರಿಂದ ಅರಮನೆಗೆ ಆಹ್ವಾಸಿಸಲ್ಪಟ್ಟು ಹಿಂತಿರುವಾಗಲಾಋಷಿನಿಯರ್ಯರು ಕಾಣಿಕೆ ವಸ್ತುಗಳೆ ಮೂಟೆಗಳನ್ನು ಕೊಂಡೊಯ್ಯುತ್ತಿರಲಿಲ್ಲ ಅರಸರಿಗೆ ತಮಗೆ ಕಂಡ ಯೋಗ್ಯ ಉಪದೇಶಗಳನ್ನು ಕೊಟ್ಟು ಅವರು ತಮ್ಮ ವನವಸತಿಗಳಿಗೆ ಹಿಂತಿರುಗುತ್ತಿದ್ದರು ಅಲ್ಲಿ ಪುನಃ ತಮ್ಮ ಉದಾತ್ತ ವಿಚಾರಸಾಧನೆಗಳನ್ನು ನುಂಡಿರಿಸುತ್ತಿದ್ದರು ನಮ್ಮ ಕಾಲದಲ್ಲಿ ಇಂತಹ ದೊಂದು ಆದರ್ಶವನ್ನು ಮಹಾತ್ಮಾಗಾಂಧಿಯವರು ಪ್ರತ್ಯಕ್ಷ ಕಲ್ಪಿಸಿದ್ದರು

ಸುಖ ಲಾಲಸೆ

ಆದರೆ ಈಗಿನ ಕಾಲದಲ್ಲಿ ಹೆಚ್ಚಿನವರಿಗೆ ಅಂತಹ ಜೀವನವು ಸಾಧ್ಯವಿಲ್ಲ ನಮ್ಮದು ಲೌಕೀಕ ಸುಖಸಾಧನಯ ಕಾಲ ಇಂದು ಪ್ರತಿಯೊಬ್ಬನೂ ಸುಖ ಸಂತೃಪ್ತಿಯಿಂದ ಬಾಳಲಿಚ್ಛಿಸುತ್ತಾನೆ ಆಧುನಿಕ ವಿಜ್ಞಾನದ ಪರಿಪಕ್ವ ಫಲಗಳಂತಿರುವ ಎಲ್ಲಾ ಸೌಖೋ ಪಭೋಗದ ಸಾಧನೆಗಳನ್ನು ಬಳಸಲು ಪ್ರತಿಯೊಬ್ಬನೂ ಹಾಲ್ಕೈಸುವನು.

ಇಂದಿನ ಪೈಪೋಟಿಯ ಜಗತ್ತಿನಲ್ಲಿ ಸುವ್ಯವಸ್ಥೆಯು ಒಂದು ಮಹತ್ವದ ವಿಷಯ ಸರಿಯಾದ ಚೈತನ್ಯವನ್ನು ಕೊಡುವ ಆಹಾರವನ್ನು ತಿನ್ನದೆ, ಶರೀರಕ್ಕೆ ಸುಖ ಆರಾಮವನ್ನು ಕೊಡುವ ವಸ್ತುವಿಧಾನಗಳಿಲ್ಲದೆ ಸುವ್ಯವಸ್ಥೆಯನ್ನುಂಟುಮಾಡಲು ಸಾಧ್ಯವಿಲ್ಲ. ನಾವಿಂದು ನಮಗಿಂತ ಮುಂದರಿದ ದೇಶಗಳೊಡನೆ ಸರಿಸಮಾನತೆಯನ್ನು ಜೊಂದಬೇಕೆಂದು ನಿರೀಕ್ಷಿಸಲ್ಪಡುತ್ತೇವೆ.

(ನಿನೇ ಪುಟ ನೋಡಿ)

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾ 1

ಮೂಲಧನ (ತತ್ತದ್ದು) ರೂ 10,00,000

ಜೀವನಿಮೆಯ ಫಂಡು . ರೂ. 12,00 000 (ಮಿಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½%
ಮರಣತ್ವ	59%	

ಸಾನಿರಕ್ಕೆ ವರ್ಷಕ್ಕೆ ರೂ 5-0 0ರಂತೆ ರಿವರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಚ್ಯಾರೆಕ್ಟರರನ್ನೂ, ಆಡಳಿತ ಮಂಡಳಿಯನ್ನೂ ಅಭಿನಂದಿಸುತ್ತೇನೆ ಅವರ ದೂರದರ್ಶತದ ನಿರ್ಣಯ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು ಈ ಕಂಪನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ತೀವ್ರವಾಗಿ ಸರ್ವತೋಮುಖವಾಗಿ ಬೆಳೆಯುವದೆಂದು ಹೇಳುತ್ತೇನೆ

ವಿ. ಎಚ್ ವೋರಾ, F I. A

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಭೂಷಣಕುಮಾರ್ ಕೂಳೂರ್ ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

(ಸಂಪಾದಕೀಯ)

ಆಧುನಿಕ ಗೃಹಸೌಕರ್ಯ

ಅಧಿಕವಿಲ್ಲದಿರುವ ಸುಖಸಾಧನೆಯವಸ್ತುಗಳು ಸಿಗುವಂತೆ ಮಾಡಲು ಸಾಧ್ಯವಿಲ್ಲ. ಆದರೆ ಪ್ರತಿಯೊಬ್ಬನೂ ಅದನ್ನು ಸಡೆಯಲಿಚ್ಛಿಸುವನೆಂಬುದರಲ್ಲಿ ಸಂದೇಹವಿಲ್ಲ. ಬಡ ಮಕ್ಕಳು ಶ್ರೀಮಂತರ ಮಕ್ಕಳನ್ನು ಕಂಡು "ಅವರೆಷ್ಟು ಭಾಗ್ಯವಂತರು" ಎಂದೆನ್ನುವುದನ್ನು ನಾವು ಕೇಳುತಿದ್ದೇವೆ. ಬಡ ತಾಯಂದಿರು ತಮ್ಮ ಮಕ್ಕಳಿಗೆ ಸರಿಯಾದ ಆಹಾರ ಸಿಕ್ಕುತ್ತಿಲ್ಲವೆಂಬುದಕ್ಕೆ ಕಣ್ಣೀರು ಸುರಿಸುತ್ತಿರುವರು. ತಮ್ಮ ಮಕ್ಕಳಿಗೆ ಶಿಕ್ಷಣದ ಎಲ್ಲಾ ಸೌಕರ್ಯವನ್ನು ಕೊಡಲಾಗದಕ್ಕೆ ಅದೆಷ್ಟೊ ಹೆತ್ತವರು ಮರುಗುವರು. "ನಿನ್ನ ಮಗಳನ್ನು ಶಾಲೆಗೇಕೆ ಕಳುಹಿಸುವುದಿಲ್ಲ?" ಎಂದು ನಾನೊಮ್ಮೆ ತಾಯನ್ನು ಕೇಳಿದೆ. ಅದಕ್ಕವಳು "ನಾರಕ್ಕೇಳು ಸೀರೆ, ಈ ಪುಸ್ತಕದ ರಾಶಿಯನ್ನೆಲ್ಲಿಂದ ತರಲಿ?" ಎಂದವಳು ಕಣ್ಣೀರು ಸುರಿಸಿ ಹೇಳಿದಳು.

ಶತಮಾನದ ಆಲಸ್ಯ

ಆದುದರಿಂದ ಪ್ರತಿಯೊಬ್ಬರೂ ಜೀವನಕ್ಕೆ ಅತ್ಯತ್ತಮ ಸೌಕರ್ಯಗಳನ್ನೇ ಬಯಸುತ್ತಿರುವ ಈ ಕಾಲದಲ್ಲಿ "ಸರಳ ಜೀವನ, ಉನ್ನತ ವಿಚಾರ"ದ ತತ್ವಜ್ಞಾನವು ತೀರ ಅಸಂಬದ್ಧವೆಂದು ಕಾಣುವುದು ಹೀಗೆ ಭೋಧಿಸುವರು ನಿಜವಾದ ದಿನೋದ್ಧಾರದ ಉದ್ದೇಶದವರಿದ್ದರೆ ಅವರು ತಮ್ಮ ಬಡ ಬಾಂಧವರಿಗೆ ಹೆಚ್ಚು ದುಡಿದಂತೆ ಹೆಚ್ಚು ಭುಜೂರಿಯೂ ಸಿಗುವಂತೆ ಮಾಡಲು ಪ್ರಯತ್ನಿಸಬೇಕಾದುದು ನಿಜವಾದ ಕರ್ತವ್ಯವೆನಿಸುತ್ತದೆ ಆದುದರಿಂದ ನಾವು ಬಹಿರಂಗವಾಗಿ "ಸುಖದ ಜೀವನ, ಉದಾತ್ತ ವಿಚಾರ" ಘೋಷಣೆಯನ್ನೇ ಸಾರೋಣ ಏಕೆಂದರೆ ಮನುಷ್ಯನಿಗೆ ಶಾರೀರಿಕ ಸುಖ ಸಂತೃಪ್ತಿಗಳುಂಟಾದರೇನೆ ಅವರ ಮಾನಸೀಕ ಭಾವವು ಉದಾತ್ತತೆಯ ಕಡೆ ತಿರುಗುವುದು ನಮ್ಮಲ್ಲಿ ಹೆಚ್ಚಿನವರ ಆದಾಯವು ಚಳಿಗಾಲದಲ್ಲಿ ಒಂದು ಬೆಚ್ಚನೆಯ ಕಂಬಳಿಯನ್ನು ತೆಗೆದುಕೊಳ್ಳಲಾಗಲಿ, ಮಳೆಗಾಲದಲ್ಲಿ ಸೀರು ಸೋರುವ ಮಾಡನ್ನು ದುರುಸ್ತಿ ಮಾಡಲಾಗಲಿ ಸಾಲದುದಾಗಿದೆ. ಸರಿಯಾದ ಸೌಖರ್ಯಗಳು ಸಿಗದರಿಂದ ಜನರ ಕಾರ್ಯೋತ್ಸಾಹವು ಕುಂದಿ ಆಲಸ್ಯಕ್ಕೆಡೆಕೊಡುವಂತಾಗುತ್ತದೆ ಆಲಸ್ಯದಿಂದ ರೋಗರುಜಿನೆಗಳಾಗಿ ಒಂದು ಕುಟುಂಬದ ಹತ್ತು ಸದಸ್ಯರಲ್ಲಿ ಒಂಬತ್ತು ಮಂದಿ ಆರ್ಥಿಕವಾಗಿ ನಿರುಪಯುಕ್ತರಾಗುತ್ತಾರೆ

ಶಿಕ್ಷಣ ಕ್ರಮದ ಬದಲಾವಣೆ

ನಮ್ಮ ಶಿಕ್ಷಣ ವದ್ಧತಿಯೂ ಇದೇ ತತ್ವಾನುಸಾರ ಬದಲಿಸಲ್ಪಡಬೇಕು ನಮ್ಮ ಹುಡುಗ ಹುಡುಗಿಯರು ಕಲಿಯುತ್ತಿರುವಾಗಲೇ ಉಪಯುಕ್ತವಾದ ವಸ್ತುಗಳನ್ನು ತಯಾರಿಸಲು ಕಲಿಯುವಂತಾಗಬೇಕು ಆ ವಸ್ತುಗಳು ಮಾರಾಟ ಮಾಡುವಂತಹುಗಳೂ ಆಗಬೇಕು ಶಾಲೆಯಲ್ಲಿ ತಯಾರಿಸುವ ಆ ವಸ್ತುಗಳನ್ನು ಮಾರಿದರೆ ಕಮ್ಮಿ ಪಕ್ಷದಲ್ಲಿ ಅವರ ಶಿಕ್ಷಣದ ಖರ್ಚಿಗೆ ಸಾಕಾಗುವಷ್ಟು ಲಾಭವನ್ನಾದರೂ ಅದು ಗಳಿಸಬೇಕು ಅಂದರೆ ಅದರ ಮೇಲೆ ವ್ಯಯಿಸಿದ ಸಮಯಕ್ಕೆ ಸ್ವಲ್ಪವಾದರೂ ಮೌಲ್ಯವು ದೊರೆತಂತಾಯಿತು. ಅದೇ ಸಮಯಕ್ಕೆ ಅವರಿಗೆ ಜೀವನಕ್ಕೆ ಅವಶ್ಯವಾದ ಮಾನಸೀಕ ಸಂತೋಷವೂ ಸಿಕ್ಕಂತಾಯಿತು.

ಬೌದ್ಧಿಕ ಅಭಿವೃದ್ಧಿಯೇ ಸಂಸ್ಕೃತಿಯೆಂದು ತಿಳಿದರೆ ಅದನ್ನು ಈ ತರದ ಶಿಕ್ಷಣದಿಂದ ಅಭಿವೃದ್ಧಿ ಪಡಿಸಬಹುದು ಕಲ್ಪಿತ ಗಣಿತ ಸೂತ್ರಗಳನ್ನು ಬಿಡಿಸಲು ಪ್ರಯತ್ನ ಪಡುವುದಕ್ಕಿಂತ, ನೋಡದ ಮಾಡದ ನದ್ರ ಸಮುದ್ರಗಳ ಬೆಟ್ಟ ಪರ್ವತಗಳ ಅಳೆಯುವ ವಿಷಯವನ್ನು ಕಲಿಸುವುದಕ್ಕಿಂತ ಉಪಯುಕ್ತವೂ, ಕಲಾತ್ಮಕವೂ ಆದ ವಸ್ತುಗಳನ್ನು ತಯಾರಿಸುವ ಸಂತೋಷದ ವೃತ್ತಿಗಳನ್ನು ಕಲಿಸುವುದು ಎಷ್ಟೊ ಉಕ್ತಮವಾದುದು.

ಕಲಿಯುವಾಗ ದುಡಿಯುವುದು

ಹಿಂದೀ ವಿದ್ಯಾರ್ಥಿಗೆ ಚೀಲೀ ದೇಶದ, ಬಲ್ಗೇರಿಯಾದ ಇಲ್ಲವೆ ಡೆನ್‌ಮಾರ್ಕಿನ ಗಡಿಗಳ ಜ್ಞಾನವು ಮಹತ್ವದ್ದಲ್ಲ. ಅದರ ಬದಲಿಗೆ ಶಾಲೆಯಲ್ಲಿ ಅವನು ಹತ್ತಿ ಬೆಳೆಸುವುದನ್ನು ಕಲಿತರೆ, ಹತ್ತಿಗೆ ಸಂಬಂಧಪಟ್ಟ ನಾಣಿಜ್ಯ ನೈಪಹಾರದ ಭೂಗೋಳ ಜ್ಞಾನವನ್ನು ಕಲಿತರೆ ಹೆಚ್ಚಿನ ಪ್ರಯೋಜನವಿದೆ.

ನಮ್ಮ ವಿಶ್ವವಿದ್ಯಾಲಯಗಳು "ಕಲಿಯುವಾಗ ದುಡಿಯುವುದು" ಎಂಬ ಧ್ಯೇಯವನ್ನು ಸ್ವೀಕರಿಸಬೇಕು. ಶಾಲೆಯಲ್ಲಾ ಹೊರಗೂ ಉಪಯುಕ್ತ ವೃತ್ತಿ ಶಿಕ್ಷಣವನ್ನು ಮತ್ತು ತಜ್ಞತೆಯನ್ನು ಪಡೆಯುವ ಸೌಕರ್ಯವನ್ನು ನಮ್ಮ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದವರು ಕಲ್ಪಿಸಬೇಕು ನಮ್ಮ ಭಾವೀ ಜನಾಂಗದ ದುಡಿಯುವ ಶಕ್ತಿಯಲ್ಲಿ ತಜ್ಞತೆಯನ್ನೂ ಪರಿಪೂರ್ಣತೆಯನ್ನೂ ಉಂಟುಮಾಡಲು ಪ್ರಯತ್ನಗಳಾಗಬೇಕು. ಪ್ರತಿಯೊಬ್ಬ ವ್ಯಕ್ತಿಯೂ "ಸುಖದ ಜೀವನ, ಉದಾತ್ತ ವಿಚಾರ" ಎಂಬ ಘೋಷಣೆಯನ್ನು ಅಳವಡಿಸಿಕೊಳ್ಳಬೇಕು ಹೀಗೆ ನಮ್ಮ ರಾಷ್ಟ್ರದ ಶ್ರಮಸುವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿಯೇ ನಾವು ಜೈಪೋಟಿಯ ಜಗತ್ತಿನಲ್ಲಿ ಮುಂದಣ ಶ್ರೇಣಿಯನ್ನು ತಲ್ಪಬೇಕಾಗಿದೆ

(ಡಾ॥ ಕೆ ಎನ್ ಕಿಣಿ, ಎಂ ಎ ಬಿ ಎಡ್ ಡಿ, ಹೋಧಪುರ ಶಿಕ್ಷಣಾಧಿಕಾರಿಗಳ ಲೇಖನದ ಸಾರಾಂಶ)

ವಾರದ ವಿಜ್ಞಾನ ವರದಿಗಳು

ಮಜೂರರ ಸ್ಥಾನದಲ್ಲಿ ಯಂತ್ರಗಳು

ಕಾರ್ಖಾನೆಗಳಲ್ಲಿ ರೊಬಟ್ ಮನುಷ್ಯ

ಕಾರ್ಖಾನೆಗಳಲ್ಲಿ ಮಜೂರರು ಮಾಡುವಂತಹ ಎಲ್ಲಾ ಕೆಲಸಗಳನ್ನು ಸುವ್ಯವಸ್ಥಿತವಾಗಿಯೂ ಕ್ಷಿಪ್ರವಾಗಿಯೂ ಮಾಡುವ ಯಾಂತ್ರಿಕ 'ಮನುಷ್ಯ'ನನ್ನು ಕಂಡುಹಿಡಿಯಲು ವಿಜ್ಞಾನಿಗಳು ಬಹು ಕಾಲದಿಂದ ಶ್ರಮಪಡುತಿದ್ದರು ಇಂತಹ ಯಂತ್ರಕ್ಕೆ ರೊಬಟ್ ಎಂಬ ಹೆಸರು ಜನಪ್ರಿಯವಾಗಿದೆ ಇನ್ನೆರಡು ವರ್ಷಗಳಲ್ಲಿ ಅಮೇರಿಕನ್ ಯಾಂತ್ರಿಕರು ಇಂತಹ ಪರಿಪೂರ್ಣ ಕಾರ್ಯ ನಿರ್ವಹಣೆಯ ಯಂತ್ರಗಳನ್ನು ತಯಾರಿಸುವ ಹಾರೈಕೆಯಲ್ಲಿದ್ದಾರೆ ಈಗ ವಿಮಾನ ಮತ್ತು ನೋಟಾರು ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರ ಸ್ಥಳದಲ್ಲಿ ರೊಬಟ್ ಯಂತ್ರಗಳನ್ನು ಇಡಲಾಗುವುದು ಈ ಕೆಲಸಗಾರರು ಇಂತಹ ರೊಬಟ್ ಯಂತ್ರಗಳನ್ನು ತಯಾರಿಸಲು ಹಚ್ಚಲ್ಪಡುವರು

ನೆಲಗಡಲೆಯ ಆಹಾರ

ಭಾರತದಲ್ಲಿ ಪರಿಶೋಧನೆ

ನೆಲಗಡಲ ಹಿಂಡಿಯನ್ನು ಆಹಾರ ಪದಾರ್ಥವಾಗಿ ಮಾರ್ಪಡಿಸುವ ಕುರಿತ ಯಶಸ್ವಿ ಪರಿಶೋಧನೆಗಳನ್ನು ಮಾಡಲು ಭಾರತ ಸರಕಾರದವರು ವಿಜ್ಞಾನಿಗಳ ಮತ್ತು ಆಹಾರ ತಜ್ಞರ ಒಂದು ಸಮಿತಿಯನ್ನು ನೇಮಿಸಿದ್ದಾರೆ ಇದು ಯಶಸ್ವಿಯಾದರೆ ದೇಶದಲ್ಲಿನ ಆಹಾರ ಕೊರತೆಯು ನೀಗುವುದೆಂದು ನಿರೀಕ್ಷಿಸಿದೆ

ಮನಸ್ಸೂ 'ಶರೀರಾರೋಗ್ಯವೂ

"ಒಬ್ಬನ ಕುತ್ತು ಇನ್ನೊಬ್ಬನ ಕುತ್ತು" ಅಂದರೆ ಒಬ್ಬನಿಗೆ ಅಮೃತವಾಗಿರುವಂತಹುದು ಇನ್ನೊಬ್ಬನಿಗೆ ವಿಷವಾಗಬಹುದು ಎಂಬರ್ಥದ ಗಾದೆಯುಂಟು. ಇದು ಅಕ್ಷರಶಃ ನಿಜವೆಂದು ಅಮೇರಿಕನ್ ವೈದ್ಯ ವಿಜ್ಞಾನಿಗಳು ತಿಳಿಸುತ್ತಾರೆ. ಇಪ್ಪತ್ತು ವರ್ಷಗಳ ಪ್ರಯೋಗಾನಂತರ ಬೇರೆ ಬೇರೆ ಜನರು ಬೇರೆ ಬೇರೆ ತರದ ವ್ಯಾಧಿಗಳತ್ತ ಮಾಲಿ ಕೊಂಡಿರುತ್ತಾರೆ ಎಂಬ ಸಂಗತಿಯನ್ನವರು ಕಂಡು ಹಿಡಿದಿರುತ್ತಾರೆ. ಉದಾಹರಣೆಗಾಗಿ ಒಂದೇ ತರಹ ಮಾನಸಿಕ ವೇದನೆಯಿಂದ ನರಳುವ ಇಬ್ಬರು ಮನುಷ್ಯರಿದ್ದರೆ ಅದರ ಪರಿಣಾಮವಾಗಿ ಒಬ್ಬನಿಗೆ ಹೊಟ್ಟೆಯೊಳಗೆ ಕೇನ್ಸರ್ ಹುಣ್ಣುಗಳಾಗಬಹುದು, ಇನ್ನೊಬ್ಬನಿಗೆ ರಕ್ತದ ಒತ್ತಡದ ವ್ಯಾಧಿಯುಂಟಾಗ ಬಹುದು

ಮಾನಸೀಕ ಆರೋಗ್ಯ

ಮಾನಸೀಕ ವ್ಯಾಧಿಗಳನ್ನು ಗುಣವಡಿಸುವ ರಾಷ್ಟ್ರೀಯ ಶುಶ್ರೂಷಾಲಯವು ಸಂಯುಕ್ತ ಅಮೇರಿಕದಲ್ಲಿ ಸ್ಥಾಪಿಸಲ್ಪಟ್ಟಿದೆ ಇದು ಅಲ್ಲಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯ ಒಂದು ಮುಖ್ಯಾಂಗವಾಗಿಯೂ ಪರಿಗಣಿಸಲ್ಪಡುತ್ತದೆ ದೇಶದೊಳಗಿನ ಎಲ್ಲಾ ಇತರ ಮಾನಸಿಕ ಶುಶ್ರೂಷಾಲಯಗಳ ಚಟುವಟಿಕೆಗಳನ್ನು ಇದು ತನ್ನಲ್ಲಿ ಸಮನ್ವಯಿಸಿಕೊಳ್ಳುತ್ತದೆ ಅಲ್ಲದೆ ಮಾನಸೀಕ ಆರೋಗ್ಯದ ವಿಶ್ವ ಸಂಸ್ಥೆಯೊಡನೆಯೂ ಇದು ಸಮೀಪ ಸಹಕಾರದಿಂದ ಕಾರ್ಯಗೈಯ್ಯುತ್ತದೆ ಜಗತ್ತಿನ ಆಸ್ಪತ್ರೆಗಳಲ್ಲಿ ಕಂಡು ಬರುವ ವ್ಯಾಧಿಗ್ರಸ್ತರಲ್ಲಿ ಸಾವಿಧಾರು ಮುಂದಿಗಳನ್ನು ನೋವ್ಯಾಧಿಯೆಂದೇ ಆ ವರಿಣಾಮಕ್ಕೊಳಗಾಗಿರುವರೆಂದು ಈ ಶುಶ್ರೂಷಾಲಯದ ಡಾ॥ ಲಿನಾರ್ಡ್ ಶಿಲ್ ಅವರು ಅಭಿಸ್ರಾಯ ಪಡುತ್ತಾರೆ

ಹಾಲು ಹೆಚ್ಚಿಸುವ ಮದ್ದು

ಜಾನುವಾರುಗಳ ಹಾಲನ್ನು ನಂಬಲ ಸಾಧ್ಯವಾದ ಪ್ರಮಾಣದಲ್ಲಿ ಹೆಚ್ಚಿಸುವ ಒಂದು ಔಷಧಿಯನ್ನು ಬ್ರಿಟಿನಲ್ಲಿ ಯಶಸ್ವಿಯಾಗಿ ಸ್ಯಾಂಪಲ್‌ಗಳಿಸಲಾಗಿದೆ ಈ ಔಷಧಿಯನ್ನು ಸ್ಥಾನಪಲ್ಲಿದ ಮಾತ್ರೆಗಳ ರೂಪದಲ್ಲಿ ತಯಾರಿಸಲಾಗುವುದು ದನಗಳು ಇದನ್ನು ಸೇವಿಸಿದಾಗ ಅವು ದಿನಂಪ್ರತಿ ಒಂದೆರಡು ಕುತ್ತಿ ಹೆಚ್ಚು ಹಾಲನ್ನು ಕೊಟ್ಟದ್ದು ಗಮಕ್ಕೆ ಬಂದಿದೆ

ಬಾಣಗಳ ವಿಷಜೀವ ರಕ್ಷಣೆಗೆ

ದಕ್ಷಿಣ ಅಮೇರಿಕದ ರೆಡ್ ಇಂಡಿಯನ್ ಮೂಲನಿವಾಸಿಗಳು ತಮ್ಮ ಬಾಣಗಳ ತುದಿಗೆ ಒಂದು ತರದ ಕರೋರ ವಿಷ ರಸವನ್ನು ತಾಗಿಸಿ ಉಪಯೋಗಿಸುತ್ತಿದ್ದರು. ಈ ವಿಷವು ಅತ್ಯಂತ ಶೀಘ್ರ ಪರಿಣಾಮಕಾರಿಯಾಗಿದ್ದು ಶರೀರವನ್ನು ಪ್ರವೇಶಿಸಿದ ಕೆಲವೇ ಕ್ಷಣದೊಳಗೆ ಪ್ರಾಣವನ್ನು ನಂದಿಸಿ ಬಿಡುವಂತಹುದು ಈಗ ಅಮೇರಿಕನ್ ಮತ್ತು ಬ್ರಿಟಿಷ್ ವೈದ್ಯಕೀಯ ಪ್ರಯೋಗತಜ್ಞರು ಈ ವಿಷಯಗಳನ್ನು ತಯಾರಿಸುವ ಗಿಡ ಮೂಲಿಕೆಗಳನ್ನೂ, ಅದರ ವಿಧಾನವನ್ನೂ ಕಂಡುಹಿಡಿದಿರುವರು ಮತ್ತು ಈ ವಿಷದಿಂದ ಶಸ್ತ್ರಕ್ರಿಯೆಯ ಸಂದರ್ಭದಲ್ಲಿ ಉಪಯೋಗಿಸುವ ಕೆಲವು ಉಪಯುಕ್ತ ಇಂಜೆಕ್ಷನ್ನುಗಳನ್ನು ಸಿದ್ಧಗೊಳಿಸಿರುವರು ಈ ಇಂಜೆಕ್ಷನ್ನುಗಳು ಹೊಟ್ಟೆಯ ಮಾಂಸ ಖಂಡವನ್ನು ಸಂಕೋಚಗೊಳಿಸುತ್ತವೆ. ಹೊಟ್ಟೆಯ ಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡುವಾಗ ಇದನ್ನೀಗ ಇತರ ಕೊಕೈನ್, ಕ್ಲೊರೊಫೊರ್ಮ್‌ಗಳ ಬದಲಿಗೆ ಉಪಯೋಗಿಸಬಹುದಂತೆ

ಮದ್ಯಪಾನ ನಿಷೇಧವೆಂದರೇನು?

★ ಅದು ಜನಾಂಗದ ಸಂಪತ್ತನ್ನುಳಿಸುವುದು.

★ ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗಿ ಗೊಡಲು ತರಬೇತಿ ಕೊಡುವುದು.

★ ಅದು ಅನಿವಾರ್ಯವಾದ ಒಂದು ಸಾಮಾಜಿಕ ಸುಧಾರಣೆ.

★ ಅದು ಗೃಹಜೀವನದ ಪಾವಿತ್ರ್ಯವನ್ನು ಕಾಪಾಡುವುದು.

★ ಅದು ಪ್ರತಿಯೋರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ

ಕೆನರಾ ಬ್ಯಾಂಕ್, ಲಿಮಿಟೆಡ್.

ಇದರ ಸೇವಾದಾನ.

ಹಿಂದೂಸ್ತಾನದ ವಿರುದ್ಧ ಪಾಕಿಗಳ ಅಪಪ್ರಚಾರ

ದ್ವೇಷ ಪ್ರಚೋದಕ ಚಲಚಿತ್ರ

ಪಾಕಿಸ್ತಾನದಿಂದ ಹಣದ ಸಹಾಯ ಪಡೆದ ಒಂದು ಬ್ರಿಟಿಷ್ ಫಿಲ್ಮ್ ಸಂಸ್ಥೆಯವರು "ಪಾಕಿಸ್ತಾನದ ಪ್ರಥಮ ವರ್ಷ" ಎಂಬ ಶಿರೋನಾಮದ ಒಂದು ಚಲಚಿತ್ರವನ್ನು ತಯಾರಿಸಿದ್ದಾರೆ. ಅದರಲ್ಲಿ ಉಪಯೋಗಿಸಿದ ವಿವರಣಾತ್ಮಕ ಭಾಷೆಯೂ, ಮತ್ತದರೊಳಗಿನ ದೃಶ್ಯಗಳೂ ಹಿಂದೂಸ್ತಾನದ ವಿರುದ್ಧ ದ್ವೇಷಭಾವನೆಯನ್ನು ಹುಟ್ಟಿಸುವಂತಹುಗಳಾಗಿವೆ. ಲಂಡನ್ನಿನಲ್ಲಿ ವಸಾಹತು ಮುಖ್ಯ ನುಂತ್ರಿಗಳ ಪರಿಷತ್ತು ಸೇರಿದಾಗ ಅಲ್ಲಿನ ಒಂದು ಚಲಚಿತ್ರ ಮಂದಿರದಲ್ಲಿ ಇದನ್ನು ವ್ಯದರ್ಶಿಸಲಾಯಿತು ಈ ಸಂಗತಿಯನ್ನು ಲಂಡನ್ನಿನ ಹಿಂದೀ ಕಚೇರಿಯವರು ದಿಲ್ಲಿ ಸರಕಾರಕ್ಕೆ ತಿಳಿಸಿರುತ್ತಾರೆ.

ಅತ್ಯಾಚಾರದ ಕತೆಗಳು

ಈ ಚಿತ್ರಕ್ಕೆ ಬಂಗಾಳಿ ಭಾಷೆಯ ವಿವರಣೆಯನ್ನು ಕೊಡಲು ಮೇಲ್ಮಂಡ ಫಿಲ್ಮ್ ಸಂಸ್ಥೆಯವರು ಲಂಡನ್ ವಿಶ್ವವಿದ್ಯಾಲಯದ ಓರ್ವ ಒಂಗಾಳಿ ವ್ಯಾಪ್ತಸರನ್ನು ಕೇಳಿ ಕೊಂಡರು ಅವರು ತಿರಸ್ಕರಿಸಿ ಸಂಗತಿಯನ್ನು ಅಲ್ಲಿನ ಹ್ಯೂಕವಿಸಾನರಿಗೆ ತಿಳಿಸಿದರು

ಈ ಚಲಚಿತ್ರದೊಳಗಿನ ದೃಶ್ಯಗಳು ಒಂದರ ಹಿಂದೆ ಒಂದರಂತೆ ಪಾಕಿಸ್ತಾನಿಗಳ ವಿರುದ್ಧ ಹಿಂದುಸ್ತಾನಿಗಳು ನಾಡಿದ ಅತ್ಯಾಚಾರವನ್ನು ತೋರಿಸುವಂತಕದಾಗಿ ಚಿತ್ರಿಸಿದ್ದಾರೆ ಜಾತೀಯ ಕಲಹದ ಕಾಲದಲ್ಲಿ ನಿರಾಶ್ರಿತರಾದ ಮುಸ್ಲಿಮರ ಹೆಂಗಸು ಮಕ್ಕಳನ್ನು ತೋರಿಸಿ ಪಾಕಿಸ್ತಾನ ರಚನೆಗೆ ಹಿಂದೂಸ್ತಾನಿಗಳ ಅತ್ಯಾಚಾರವೇ ಕಾರಣವೆಂದು ಅದರಲ್ಲಿ ವಿವರಿಸಲಾಗಿದೆ ಸದರಿ ಅಂತರ ವಸಾಹತು ಖಪ್ಪಂದದ ಮಂತ್ರಿತವೆಂದು ಲಂಡನಿನ ಹಿಂದೀ ವಕ್ತಾರರೊಬ್ಬರು ತಿಳಿಸುವವರಾದರು ಇದೇ ರೀತಿ ಹಿಂದೂಸ್ತಾನ ಸರಕಾರದವರು ಒಂದು ಪಾಕಿಸ್ತಾನಿ ವಿರುದ್ಧ ಚಲಚಿತ್ರವನ್ನು ಎತ್ತಿ ಪ್ರದರ್ಶಿಸಿದರೆ ಜಾತೀಯ ದ್ವೇಷಕ್ಕೆ ಕಿಡಿಕೊಟ್ಟಂತಾಗುವುದೆಂದೂ ಅನರು ಹೇಳಿದರು.

ಅವರ ಮೇಲೆ ವಯಸ್ಸಿನ ದುಷ್ಪ್ರಭಾವ ಬೀಳಲಿಲ್ಲ

ಬರ್ನಾರ್ಡ್ ಶೋ ಮತ್ತು ನೆಹರು

"ವಯಸ್ಸು ಮತ್ತು ಆಕರ್ಷಣೆ" ಎಂಬ ಶಿರೋನಾವ ದಿಂದ ಅಮೃತ ಬಜಾರ ಪತ್ರಿಕೆಯಲ್ಲಿನ ಒಂದು ಲೇಖನವು ಹೀಗೆ ನಿರೂಪಿಸುತ್ತದೆ

ಶರೀರದ ಆಕರ್ಷಣೆಯನ್ನು ಬಾಡಿಸುವ ವಯಸ್ಸಿನ ದುಷ್ಪರಿಣಾಮದ ಸೋಂಕು ತಗಲದ ಜಗತ್ತಿನ ಅತಿವಿರಳ ವ್ಯಕ್ತಿಗಳಲ್ಲಿ ಕ್ಲಿಯೋಪಾತ್ರಾ, ಬರ್ನಾರ್ಡ್ ಶೊ, ಆಗಾ ಖಾನ್, ಇನ್ಸ್ಟೀನ್ ಮತ್ತು ಜವಾಹರ ಲಾಲ್ ನೆಹರುಗಳು ಅತ್ಯಂತ ಗಣನೀಯರು ವಯಸ್ಸನ್ನು ವ್ಯತಿಭಟಿಸುವ ಅವರ ಶಕ್ತಿಯು ಇನ್ನೂ ರಹಸ್ಯವಾಗಿಯೆ ಇದೆ ಕತ್ತೆಯ ಹಾಲಿನ ಸ್ನಾನ, ಸಸ್ಯಾಹಾರ, ಆಕರ್ಷಕ ಸ್ತ್ರೀಯರೊಡಗೂಡಿ ದಿನಕ್ಕೊಂದಾವರ್ತಿ ಗೋಲ್ಫ್ ಆಟವನ್ನಾಡುವಿಕೆ, ಯಾರೊಡನೆಯೂ ಮನಸ್ಪೋಶವಿಲ್ಲದಿರುವಿಕೆ, ಪ್ರಾಥಃಕಾಲದ ವ್ಯಾಯಾಮಾನಂತರ ಲಘು ಆಹಾರ ಸೇವನೆ ಇವೇ ಮೊದಲಾದ ಕೆಲವು ಕಾರ್ಯಗ್ರಮಗಳಿಗೆ ಊಹಕರು ಕೆಲವರು ಪ್ರಾಧಾನ್ಯ ಕೊಟ್ಟಿದ್ದಾರೆ.

ಶೋ ಅವರ ಹಾಸ್ಯ

92 ವಯಸ್ಸಿನಲ್ಲೂ ಬರ್ನಾರ್ಡ್ ಶೊ ಅವರ ಹಾಸ್ಯಕರಾರಿಯು ಒಡ್ಡಾಗಿರುವುದಿಲ್ಲ ಪಾರ್ಲಿಮೆಂಟನ್ನು ಅವರು "ಶೂನ್ಯಜ್ಞಾನದ ಚುನಾಯಿತರ ಸಂಘ" ನೆಂದು ವಿಡಂಬಿಸಿದ್ದು ಮಾರ್ಮಿಕವಾಗಿದೆ ನಾಟಕ ಚಲಚಿತ್ರಗಳನ್ನು ಸಾರ್ವಜನಿಕ ಪ್ರದರ್ಶನಕ್ಕೆ ಯೋಗ್ಯವೊ ಅಯೋಗ್ಯವೊ ಎಂದು ನಿರ್ಣಯಿಸುವ ಸೆನ್ಸರ್ ಅಧಿಕಾರಿಯನ್ನವರು ಹೀಗೆ ಚಿತ್ರಿಸಿದ್ದಾರೆ "ಅವನು ಅನಂತ್ಯ ಜ್ಞಾನದ ಭಾಂಡಾರ, ಅವನ ತೀರ್ಪು ಅಖಂಡ ವಿನೇಕದ್ದೂ ಮತ್ತು ವಿಶ್ವಕೋಶದ ಸಿರೂಪಕೆಯಷ್ಟು ಸುಸ್ಪಷ್ಟವಾದುದೂ ಆಗಿದೆ. ಅವನ ಮಟ್ಟಿಗೆ ಕಾಲವೆಂಬುದಿಲ್ಲ ಅಂದರ ಇಂತಹ ವ್ಯಕ್ತಿ ಕೇವಲ ಕಟ್ಟುಕತೆಯಲ್ಲಿ ಮಾತ್ರ ಕಾಣಸಿಗುವನಲ್ಲದೆ, ನೈಜಜೀವನದಲ್ಲಿ ಅಂತಹನೊಬ್ಬ ನೆಂದಿಗೂ ಉಂಟಾಗಲಾರ" ಶೋ ಭಕ್ತರು ಮುಂದಿನ ವೆಲ್ವೆಟ್ಟನ್ನು ಹಬ್ಬದ ದಿನವನ್ನು ಅತ್ಯಂತ ಉತ್ಸಾಹದಿಂದ ವೀಕ್ಷಿಸುತ್ತಿದ್ದಾರೆ ಅದು ಅವರ ೭೫ ವರ್ಷ ರಾಜಕೀಯದಿಂದ ಕುರಿತಾಗಿ ಟೀಕ ಟಿಪ್ಪಣಿಯುಳ್ಳ ನಾಟಕವೊಂದು ಪ್ರದರ್ಶಿತವಾಗಲಿದೆ.

೭೭ನೆ ವಯಸ್ಸಿನಲ್ಲಿ ಆಗ ಖನರು ಟರ್ನ ಫ್ರಾಂಚ್ ಕಾರ್ನಿಯ ಆಕರ್ಷಣಿಗೆ ಅರ್ಹರಾದರು ಅನಳು ಖನನನ್ನು ಮದುವೆಯಾದಳು, ಅವರಿಗಾದು ಮಗು ವೂ ಹುಟ್ಟಿತ್ತೆ ಆದರೆ 14 ವರ್ಷಗಳ ನಂತರ ಆಕೆ ಖಾನನನ್ನು ಬಿಟ್ಟುಬಿಟ್ಟಳಳ ಇಷ್ಟಪಟ್ಟರೂ ಇನ್ನೊಬ್ಬರನ್ನು ಮದುವೆಯಾಗಲಿಷ್ಟ ಸಸ್ಕೋಚಕ ವ್ಯಕ್ತಿತ್ವವು ಅವರಲ್ಲಿತ್ತ, ಈಗ ೧೨ರಲ್ಲಿಯೂ ಅವರು ಹರ್ಷಚಿತ್ತರಾಗಿದ್ದು ಈ ಹುಡುಗಿಯರೆಂದಿರನ್ನು ಅಲ್ಪಾವಧಿಯಲ್ಲಿ ತೃಪ್ತಿಸಿ ಈಗವರ ಸೊಸೆಯಾದ ಸಿನೆವಾ ಗಿಟಿರಿಟಾಹೆನರ್ತಕಿಯೊಡನೆ ಅವರ ಏನೋದ ಮಾಡುತ್ತಿದ್ದಾರೆ

ಮತ್ತೆ 60 ವರ್ಷದ ಹಾಲಾಡುವ ಭಾರತ ಪ್ರಧಾನರ ತಿಂದಿಣ್ಯಶನದ ಕುರಿತು ಹೆಚ್ಚು ಹೇಳುವ ಅವಶ್ಯವಿಲ್ಲ ಈಗಲೂ ಅವರು ತನ್ನ ಜನ್ಮದಿನವನ್ನು ಚಿಕ್ಕ ಮಕ್ಕಳೊಡನೆ ಕಣ್ಣುಮುಚ್ಚಾಲೆ ಆಟವಾಡುವುದರೊಂದಿಗೆ ಆಚರಿಸುತ್ತಾರೆ ಈಗಲೂ ಅವರು ಸಣ್ಣ ಮಕ್ಕಳ ಆನಂದದಿಂದ ನದಿ, ಸಮುದ್ರ ಕರೆಗಳಲ್ಲಿ ಈಜಾಡುತ್ತಾರೆ, ಆದುದರಿಂದ ಕಪ್ಪು ಕೂದಲೇ ತಾರುಣ್ಯದ ಲಕ್ಷಣವಲ್ಲ.

ಅಮೆರಿಕದ ಇಲಿಯಾನ್ಯೋಸ್ ರಾಂತ್ಯದ ಶಾಸನ ಸಭೆಯವರು "ನಾಗರಿಕರು ತಮ್ಮ ಚೆಕ್ಕುಗಳನ್ನು ರಾತ್ರಿಕಾಲದಲ್ಲಿ ಹೊರಗೆ ಬಿಡಬಾರದೆಂಬ" ಶಾಸನವನ್ನು ಮಂಜೂರು ಮಾಡಿರುವರು

✠

ಫ್ಲೋರಿಡಾ ರಾಂತ್ಯದ ಜೆಫರ್‌ಸನ್‌ವಿಲೆ ಎಂಬಲ್ಲಿ ಬೆಂಕಿ ತಗಲಿದಾಗ ಅಗ್ನಿಶಮನಿಕ ದಳಗಳಿಗೆ ನೀರು ಸಿಗದಾಗ ಅವರು ಸ್ಥಳೀಕ ಶರಬತ್ತು ತಯಾರಕ ಸಂಸ್ಥೆಯೊಂದರ ದಾಸ್ತಾನಿನಿಂದ ಸಿಹಿ ಪಾನೀಯವನ್ನುಪಯೋಗಿಸಿ ತಮ್ಮ ಕರ್ತವ್ಯವನ್ನು ಪೂರ್ಣಗೊಳಿಸಿದರು.

ದೇಶವಿದೇಶ ವೃತ್ತವೈವಿಧ್ಯ

ಸಾವರಕರರಿಗೆ ಸರ್ದಾರ್ ಪಟೇಲರ ಉತ್ತರ

ಘಟನಾ ಸಮಿತಿಯು ವ್ಯತ್ಯೇಕ ಮತದಾರರ ಸಂಘದ ಬಗ್ಗೆ ಮಂಡಿಸಿದ ಗೊತ್ತುವಳಿಯನ್ನು ನಿರಾಕರಿಸಿ ಅಲ್ಪ ಸಂಖ್ಯಾಕರಿಗೆ ಕಾದಿಟ್ಟ ಸ್ಥಳಗಳಿರಬಾರದೆಂದು ನಿರ್ಣಯಿಸುವಂತೆ ಸಾಧಿಸಿದ ಕೀರ್ತಿ ಸರ್ದಾರ್ ಪಟೇಲರಿಗೆ ಸಲ್ಲುವುದೆಂದು ಶ್ಲಾಘಿಸುತ್ತ "ಇಂತಹ ರಾಷ್ಟ್ರ ವಿಘಾತಕ ವಿಷಯವನ್ನು" ತೊಡೆದು ಹಾಕುವಂತೆ ಪ್ರಯತ್ನ ಪಟ್ಟದ್ದಕ್ಕೆ ಶ್ರೀ ವಿ ಡಿ ಸಾವರಕರರು ಬೊಂಬಾಯಿಯಿಂದ ಸರ್ದಾರ್ ಪಟೇಲರಿಗೆ "ಹೃತ್ಪೂರ್ವಕ ಅಭಿನಂದನೆಗಳನ್ನು" ಕಳುಹಿಸಿದ್ದರು. ಅದಕ್ಕೆ ಉತ್ತರವಾಗಿ ಸರ್ದಾರ್ ಪಟೇಲರು ಹೀಗೆ ಮರುತ್ತರವನ್ನು ಸಾವರ್‌ಕರರಿಗೆ ಕಳುಹಿಸಿರುವರು "ನಿಮ್ಮ ಅಭಿನಂದನೆಗಳಿಗೆ ಅಭಾರಿಯಾಗಿದ್ದೇನೆ ಸರಕಾರವು ತಾನು ಸ್ಪಷ್ಟವಾಗಿ ಸದರ್ ಪಟೇಲರಿಗೆ ಕಳುಹಿಸಿರುವರು "ನಿಮ್ಮ ಅಭಿನಂದನೆಗಳಿಗೆ ಅಭಾರಿಯಾಗಿದ್ದೇನೆ ಸರಕಾರವು ತಾನು ಸ್ಪಷ್ಟವಾಗಿ ಸಂದೇಹವಿಲ್ಲ ಆದರೆ ನೀವು ಹೆಚ್ಚಾಗಿ ಸಂಬಂಧವಿಟ್ಟುಕೊಂಡಂಥ ಜಾತೀಯ ಸಂಸ್ಥೆಯ ರಾಷ್ಟ್ರೀಯ ದೃಷ್ಟಿಯನ್ನಿಟ್ಟುಕೊಂಡು ವರ್ತಿಸುವ ದೆಂದೂ, ಸ್ವತ್ಯೇಕ ನೀತದಾರ ಸಂಘಗಳನ್ನು ನಿರ್ಮೂಲನ ಮಾಡುವುದರ ಹಿಂದೆ ಇರುವ ಭಾವನೆಯನ್ನು ಗನುಸಿಸಿ ಅದರಂತೆ ರಾಷ್ಟ್ರೀಯ ಉದ್ದೇಶದಿಂದ ವರ್ತಿಸುವ ದೆಂದೂ ಆಶಿಸುವೆನು."

ಗೋಡ್ಸೆಯ ಸೂಚನೆ

ವಕ್ತಾತ್ಮಾಗಾಂಧಿ ಕೊಲೆಯ ಕುಯ ಆರೋಪಣೆಯಲ್ಲಿ ನುಮ್ಮ ಆರೋಪಿ ನಾಥುರಾವ್ ಗೋಡ್ಸೆಯು ಸರಕಾರಿ ವಕೀಲರ ಪ್ರತಿವಾದನೆಗೆ ಉತ್ತರ ಕೊಡುತ್ತ ತನ್ನ ಸಹ ಬಂಧಿಗಳ ಕುರಿತು ಹೀಗೆ ಕೊಸೆಯು ಸೂತನೆಯನ್ನು ಸ್ಪಷ್ಟಮಾಧಿಕರಿಸಿರುವರು ತಿಳಿಸಿರುವನು

"ನಾನು ಸಾಕ್ಷಿದಾರ ಪತಗೆಯು ಹೇಳಿಕೆ ನೀಡಿದಲ್ಲಿ ಅವನು ಹಾಲಿನಲ್ಲಿ ನೀರು ಕೂಡಿಸದೆ ನೀರಿಲ್ಲಿ ಹಾಲುಕೂಡಿಸಿ ಅದನ್ನು ಸೇರಿಗೆ ಅಳತೆಯಂತೆ ಮಾರಲು ಪ್ರಯತ್ನ ನಡಿಸಿದ್ದು ಕಂಡು ಬರುವುದು. ಅವನ ಸಾಕ್ಷಿಕೃತಿನುವಿದ್ದು ಅದರಲ್ಲಿ ಸತ್ಯದ ಎಳೆಗಳು ಕೂಡ ಇರುವುದಿಲ್ಲ ಇನ್ನುಳಿದವರ ಬಗ್ಗೆ ಹೇಳಿಕೆಕಾವರೆ ಡಾ। ಜೈನ್ರ ಸಾಕ್ಷಿಯು ಗೊಂದಲದೂ, ಎಂಗದ ಸಿಂಗರ ಸಾಕ್ಷಿ ಅತಿರಂಜಿತವೂ, ಮೊರಾಜಿ ದೇಸಾಯಿಯವರ ಸಾಕ್ಷಿ ನಿಸ್ಸಂಗತವೂ, ದಾದಾ ಮಹಾರಾಜ ತಾಗೂ ದೀಕ್ಷಿತ ಮಹಾರಾಜರ ಸಾಕ್ಷಿಗಳು ಪಿತೂರಿಯವೂ ಆಗಿರುವು ಇವೆಲ್ಲಿ ಸಾಕ್ಷಿಗಳಿಂದ ಒಳ ಸಂಚು ಸಂದೇಹಾಸ್ಪದವಾಗುವುದು. ಸರಕಾರೀ ವಕೀಲರು ಕಟ್ಟಿದ ಒಳಸಂಚಿನ ಕಟ್ಟಡವು ಇಸ್ಪೀಟ್ ಎಲೆಯ ಕಟ್ಟಡದಂತೆ ಪೊಳ್ಳು ಇದ್ದು ನನ್ನ ಮಟ್ಟಿಗೆ ನಾನು ಅವರ ಪ್ರತಿಯೊಂದು ವಿಧಾನವನ್ನು ತುಂಡರಿಸಿರುವೆನು.

"ಡಾ। ಪರಚುರೆ ಹಾಗು ಗೋಪಾಲ ಗೋಡ್ಸೆಯ ವಿರುದ್ಧ ಪುರಾವೆ ಇಲ್ಲದ್ದರಿಂದ ಅವರನ್ನು ಬಿಟ್ಟು ಬಿಡಬೇಕು. ತಂಕರನಿಗೆ ಕಿರುಕುಳ ಆರೋಪಕ್ಕೆ ಶಿಕ್ಷೆ ವಿಧಿಸಬೇಕು ಆಪ್ಟೆಯ ವಿಚಾರವು ಒಳ ಸಂಚಿನದೆಂದು ಸಂದೇಹಾಸ್ಪದವಿರುವುದರಿಂದ ಅವನಿಗೆ ಮರಣ ದಂಡನೆ ವಿಧಿಸದೆ ಜೀವಾವಧಿ ಶಿಕ್ಷೆ ವಿಧಿಸಲಿಕ್ಕೆ ಬರುವಂತಿದೆ. ಅವನ ಹೆಂಡತಿ ಚಿಕ್ಕವಳು, ಒಂದು ಮಗುವೂ ಇದೆ. ಆದುದರಿಂದ ಅವನು ದಯಾರ್ಹನು. ಮಧನಲಾಲನೇನೊ ತಪ್ಪುಗಾರನಲ್ಲ. ನಾನೇ ಅವನನ್ನು ಎಳೆದುಕೊಂಡಿರುವೆ. ಆದ್ದರಿಂದ ಆತನ ಶಿಕ್ಷೆ ಕಡಿಮೆ ಮಾಡಿ ನನ್ನ ಶಿಕ್ಷೆ ಹೆಚ್ಚಿಸಬೇಕು ಅಂದರೆ ಜೀವಾವಧಿ ಶಿಕ್ಷೆ ಅನುಭವಿಸಿದ ಮೇಲೆ ನನ್ನನ್ನು ಗಲ್ಲಿಗೇರಿಸಬೇಕು. ಕರಕರೆಯ ಶಿಕ್ಷೆಯನ್ನು ಮೇಲಿನ ದೃಷ್ಟಿಯಿಂದ ಕಡಿಮೆಯಾಗಬೇಕು." ಕೊನೆಯಲ್ಲಿ ನಾಥೂರಾಮನು ಭಗವದ್ಗೀತೆಯ ಒಂದು ಶ್ಲೋಕದಿಂದ ತನ್ನ ಪ್ರತಿಪಾದನೆಯನ್ನು ಮುಗಿಸಿದನು

ಆರ್. ಎಸ್. ಎಸ್. ಮೇಲಿನ ನಿರ್ಬಂಧ

ಜಾತೀಯತೆ ಪೂರ್ಣ ಬಿಟ್ಟಿಲ್ಲ

ಕೇಂದ್ರ ಸರಕಾರದ ಗೃಹಮಂತ್ರಿಗಳ ಶಾಖೆಗೆ ಪರಿಶೀಲನೆಗಾಗಿ ಒಪ್ಪಿಸಲ್ಪಟ್ಟ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಲೇಖೀ ಘಟನೆಯ ಕುರಿತು ಸರಕಾರಕ್ಕೆ ಕೃಪ್ತಿಯುಂಟಾಗಿಲ್ಲವೆಂದೂ ಊಹಿಸಲಾಗಿದೆ ಸಂಘವು ಜಾತೀಯತೆಯನ್ನು ತೋರಿಕೆಯಲ್ಲಿ ನಾಮತ್ರ ತ್ಯಜಿಸಿದೆ ತನ್ನ ಚಟುವಟಿಕೆಯಲ್ಲೂ ತ್ಯಜಿಸುವೆಕೆಯಿದು ಸರಕಾರದ ಅಭಿಪ್ರಾಯವಾಗಿದೆ ಈ ಕುರಿತು ವಿವರಣೆ ಕೇಳಿದ್ದಕ್ಕೆ ಶ್ರೀ ಸೋಲವಾಲಕರರು ಕೊಟ್ಟ ಉತ್ತರವು ಬಿಕ್ಕಟ್ಟನ್ನುಂಟು ಮಾಡಿದೆಯಂತೆ ಸರಕಾರದ ಕೇಳಿಕೆಗಳು ಅರ್ಧ ವಿಶ್ವಾಸವೆಂದು ಅವರು ತಿಳಿಸಿರುವರಂತೆ ಅವರು ತಮ್ಮ ಉತ್ತರದಲ್ಲಿ ಆರ್ ಎಸ್ ಎಸ್ ವ್ಯ ವಸಾವಾಗಲೂ ರಾಷ್ಟ್ರ ಧ್ವಜಕ್ಕೆ ಮನ್ನಣೆಕೊಡುತ್ತಿರುವುದೆಂದೂ, ಗುಪ್ತ ಚಟುವಟಿಕೆಗಳನ್ನು ನಡೆಸಿಲ್ಲವೆಂದೂ, ಯಾರಲ್ಲೂ ಕೆಟ್ಟ ಭಾವನೆಯನ್ನು ಇಟ್ಟುಕೊಂಡಿಲ್ಲವೆಂದೂ, ಈ ಕಾರಣದಿಂದ ಘಟನೆಯಲ್ಲಿ ಸಿದಲಾವನೆ ಮಾಡುವ್ಕಾದ ಅವಶ್ಯಕತೆ ಉಳಿದಿಲ್ಲವೆಂದೂ, ಸಂಘದ ಮೇಲೆ ಅವಿಶ್ವಾಸ ತಾಳಿಬಂದರೆಂದೂ, ಅವರ ಘಟನೆಯನ್ನೊಪ್ಪಿಕೊಂಡು ನಿರ್ಬಂಧವನ್ನು ತೆಗೆದು ಹಾಕಬೇಕೆಂದೂ ಅವರು ಸರಕಾರಕ್ಕೆ ಬೆನ್ನವಿಸಿ ಕೊಂಡಿದ್ದಾರೆಂದೂ ತಿಳಿದಿದೆ ಆದರೆ ಈ ಉತ್ತರವು ಸರಕಾರದ ದೃಷ್ಟಿಯಲ್ಲಿ ಅಸಮಾಧಾನಕರವಿರುವುದರಿಂದ ಸದ್ಯಕ್ಕೆ ಸಂಘದ ಮೇಲಿನ ನಿರ್ಬಂಧ ತೆಗೆಯುವ ನೆಂಬಿಲ್ಲವೆಂದೂ ತಿಳಿದುಬಂದಿದೆ ಆದರೆ ಶ್ರೀ ಆರ್ ವೈದ್ಯಮಣಿ ಶಾಸ್ತ್ರಿಗಳು ಈ ಕುರಿತು ಸಂಘದ ಸಮಜಾಯಿಷಿನ್ನು ವಾಪಾಸಲೆರಿಯವೆಂದೂ ತಿಳಿದುಬರುತ್ತದೆ

---

440 ಮಹಡಿಯ ಕಟ್ಟಡ

ಸಂಯುಕ್ತ ಅಮೇರಿಕದ ಸೇನ್‌ಫ್ರೆನ್ಸಿಸ್ಕೊ ನಗರದಲ್ಲಿ 440 ಮಹಡಿಗಳುಳ್ಳ ಜಗತ್ತಿನ ಅತೀ ಎತ್ತರದ ಕಟ್ಟಡವನ್ನು ಕಟ್ಟುವ ಒಂದು ಯೋಜನೆಯ ನಕಾಶೆಯನ್ನು ಸಿದ್ಧ ಪಡಿಸಲಾಗಿದ್ದು, ಅದನ್ನು ನುಂಜೂರಂತಿ ಗಾಗಿ ಸಂಬಂಧಪಟ್ಟ ನಗರ ಸಭಾಧಿಕಾರಿಗಳ ಪರಿಶೀಲನೆಗೆ ಕಳುಹಿಸಲ್ಪಟ್ಟಿದೆ. ಕಟ್ಟುಡದ ಖರ್ಚು 175 ಕೋಟಿ ನವನಾಗಳ ಪ್ರಾಗಬಹುದೆಂದು ಅಂದಾಜು ಮಾಡಲಾಗಿದೆ.

ಈ ಕಟ್ಟಡವೆಂದರೆ ಒಂದು ನಗರದಂತೇ ಇರುವುದು. ಅದರಲ್ಲಿ 1000 ಅಂಗಡಿಗಳೂ, 10 ಆಸ್ಪತ್ರೆಗಳೂ, 50 ರಾತ್ರಿ ಕ್ಲಬ್ಬುಗಳೂ, 20 ಇಗರ್ಜಿಗಳೂ ಇರುವವು. 300 ವಿದ್ಯುಚ್ಛಕ್ತಿ ಏಣಿಗಳು ಅದರಲ್ಲಿ ಜೋಡಿಸಲಾಗುವುದು. 80 ಸಾವಿರ ಮೋಟಾರು ವಾಹನಗಳನ್ನು ನಿಲ್ಲಿಸಲ್ಲು ಅದರಲ್ಲಿ ಸ್ಥಳವಿಡಲಾಗುವುದು.

ಸ್ವದೇಶಾಭಿಮಾನಿ

ತಾರೀಕು 17—6—1949

ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸು ಭಾಗವಹಿಸಬೇಕೆ?

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ನಮ್ಮಲ್ಲಿಯ ಕಾಂಗ್ರೆಸ್ ಕಮಿಟಿಯವರು ಭಾಗವಹಿಸಬೇಕೆ ಎಂಬುದೊಂದು ಪ್ರಶ್ನೆ. ಈ ಚುನಾವಣೆಗಳು ಸುಮಾರು ಆಗೋಸ್ತು ತಿಂಗಳಲ್ಲಿ ನಡೆಯಲಿವೆಯೆಂದು ತಿಳಿದುಬಂದಿದೆ. ಈ ಕುರಿತು ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಇನ್ನೂ ಯಾವ ತೀರ್ಮಾನಕ್ಕೂ ಬಂದಂತೆ ಕಂಡುಬರುವುದಿಲ್ಲ.

ತಮಿಳುನಾಡು, ಆಂಧ್ರ, ಕೇರಳಗಳಲ್ಲಿ ಈ ಪ್ರಶ್ನೆಗಳನ್ನು ಅಲ್ಲಲ್ಲಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೇ ತೀರ್ಮಾನಿಸುತ್ತಾರೆ. ಕರ್ನಾಟಕದ ಮಟ್ಟಿಗೆ ಇದು ಸಧ್ಯಕ್ಕೆ ಈ ಜಿಲ್ಲೆ ಮತ್ತು ಬಳ್ಳಾರಿಗೆ ಮಾತ್ರ ಸಂಬಂಧಿಸಿದೆ ಮದ್ರಾಸ್ ಪ್ರಾಂತ್ಯಕ್ಕೆ ಸಂಬಂಧಿಸಿದ ಪ್ರಶ್ನೆಯೆಂಬುದರಿಂದ ಪ್ರಾಯಶಃ ನಮ್ಮ ಪ್ರಾಂತಿಕ ಕಮಿಟಿಯ ಗಮನವು ಈ ಕಡೆಗೆ ಇದುವರೆಗೆ ಹೋಗಿಲ್ಲ ಹೋದರೂ ಇಪ್ಪತ್ತನ್ನರು ಅಲ್ಲಲ್ಲಿಯ ಜಿಲ್ಲಾ ಕಮಿಟಿಗಳ ತೀರ್ಮಾನಕ್ಕೇನೆ ಬಿಡುವಂತೆ ಕಾಣುತ್ತದೆ.

ನಮ್ಮಲ್ಲಿಯ ಜಿಲ್ಲಾ ಕಮಿಟಿಯವರು ಕಳೆದ ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಭಾಗವಹಿಸುವುದು ಬೇಡವೆಂದು ತೀರ್ಮಾನಿಸಿತ್ತು. ವ್ಯಕ್ತಿಗತವಾಗಿಯೇ ಈ ಚುನಾವಣೆಗಳು ನಡೆದ ದ್ದವು ಕಮ್ಯೂನಿಸ್ಟರು ಮಾತ್ರ ತಮ್ಮ ಪಕ್ಷದಿಂದ ಒಂದೆರಡು ನುಂಡಿಯನ್ನು ಉಮೇದ್ವಾರರನ್ನಾಗಿ ನೇಮಿಸಿದ್ದರು

ಈಗತಾನೇ ನಡೆದ ನಮ್ಮ ಜಿಲ್ಲಾ ಸೋಶಲಿಷ್ಟರ ಪರಿಷತ್ತಿನಲ್ಲಿ ಈ ಪಕ್ಷದಿಂದ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿಯೂ ಮುನಿಸಿವಲ್ ಉಪಚುನಾವಣೆಗಳಲ್ಲಿಯೂ ಸ್ಪರ್ಧಿಸಬೇಕೆಂದು ತೀರ್ಮಾನವಾಗಿರುತ್ತದೆ.

ಸ್ಥಳೀಕ ಆಡಳಿತೆಯ ಈ ಬೋರ್ಡು ಮತ್ತು ಮುನಿಸಿಪಲ್ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳು ಈ ಕುರಿತು ಪ್ರಶ್ನೆಯನ್ನು ಸ್ವತಂತ್ರವಾಗಿ ವಿವೇಚಿಸಿ ಪರಿಶೀಲಿಸುವುದು ಅಗತ್ಯ. ಸ್ಥಳೀಕ ಸಂಸ್ಥೆಗಳಲ್ಲಿ ರಾಜಕೀಯ ಪ್ರಶ್ನೆಗಳಿಲ್ಲವೆಂಬುದು ಸರ್ವವಿದಿತವಿರುವ ಸಂಗತಿ. ಆದುದರಿಂದ ರಾಜಕೀಯಪಕ್ಷ ಭೇದಗಳನ್ನು ಈ ಸಂಸ್ಥೆಗಳಲ್ಲಿ ಪ್ರವೇಶಗೊಳಿಸಿದರೆ ಈ ಸಂಸ್ಥೆಗಳು ಹಾಳಾಗುವ ಸಂಭವವೇ ಹೆಚ್ಚೆಂದು ಅಭಿಪ್ರಾಯವುಳ್ಳವರಿದ್ದಾರೆ. ಈ ಧೋರಣೆಯಲ್ಲಿ ತುಂಬಾ ಸತ್ಯಾಂಶವುಂಟೆಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಸ್ಥಳೀಕ ಸಂಸ್ಥೆಗಳು ವಿಶಿಷ್ಟ ಉದ್ದೇಶವುಳ್ಳ ಸಂಸ್ಥೆಗಳು. ಸಹಕಾರಿ ಸಂಸ್ಥೆಗಳಿಂತೆ ಇನ್ನಬಹುದು. ಇವುಗಳಲ್ಲಿ ಯಾವ ರಾಜಕೀಯ ಪಕ್ಷದ ಸದಸ್ಯರು ಚುನಾಯಿತರಾದರೂ ಅವರು ಮಾಡತಕ್ಕ ಕರ್ತವ್ಯಗಳೆಲ್ಲವೂ ಒಂದೇ ಎಂಬ ಬಗ್ಗೆ ಸಂಶಯವಿಲ್ಲ. ಸೋಶಿಯಲಿಸ್ಟರಾಗಲೀ ಕಾಂಗ್ರೆಸಿಗರಾಗಲಿ ಯಾರೇ ಇರಲಿ ಈ ಸಂಸ್ಥೆಗಳನ್ನು ನಡೆಸುವಾಗ ತಮ್ಮ ರಾಜಕೀಯ ಧೋರಣೆಯನ್ನು ಇಲ್ಲಿ ಜಾರಿಗೆ ತರಲು ಹೆಚ್ಚಿನ ಯಾವ ಅಸ್ಪದವೂ ಇರುವುದಿಲ್ಲ. ಅಂದಮೇಲೆ ರಾಜಕೀಯ ಪಂಗಡಗಳ ಹೆಸರೆಲ್ಲಿ ಈ ಸಂಸ್ಥೆಗಳು ಒಳ ಹೊಕ್ಕು ವ್ಯರ್ಥಗೊಂದಲವೆಬ್ಬಿಸುವುದರಿಂದ ಫಲವೇನು ಎಂದು ಕೇಳುವುದು ಅಸಾಧ್ಯ ಭಾವಿಕವಲ್ಲ.

ಆದರೂ ತಮಿಳುನಾಡು ಮೊದಲಾದ ಇತರ ಪ್ರಾಂತ್ಯಗಳ ಕಾಂಗ್ರೆಸಿಗರು ಈ ಚುನಾವಣೆಗಳಲ್ಲಿ ಭಾಗವಹಿಸಬೇಕೆಂದು ತೀರ್ಮಾನಿಸಿ ಈ ಬಗ್ಗೆ ಪೂರ್ಣ ಸನ್ನದ್ಧರಾಗುವುದನ್ನು ನಾವು ಕಾಣುತ್ತಿದ್ದೇವೆ. ಇಲ್ಲಿ ಮಾತ್ರವಲ್ಲ, ಇಂಗ್ಲಾಂಡು ಮೊದಲಾದ ದೇಶಗಳಲ್ಲಿಯೂ ರಾಜಕೀಯ ಪಂಗಡಿಗರು ತಮ್ಮ ಸ್ಥಳೀಕ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸುವುದನ್ನು ನಾವು ಕಾಣುತ್ತೇವೆ ಇದರ ಆರ್ಥವೇನು?

ಈ ಸಂಸ್ಥೆಗಳನ್ನು ನಡೆಸುವಾಗ ಇವುಗಳ ಕಾರ್ಯಕ್ರಮಗಳಲ್ಲಿ ರಾಜಕೀಯ ಅಭಿಪ್ರಾಯಗಳಿಗೆ ಹೆಚ್ಚಿನ ಅಸ್ಪದವಿಲ್ಲ ವೆಂಬ ಮಾತಿನಲ್ಲಿ ಸತ್ಯಾಂಶವಿದ್ದರೂ ಇದು ಪೂರ್ಣವಲ್ಲ ರಾಜಕೀಯ, ಆರ್ಥಿಕ, ಸಾಮಾಜಿಕ ಎಂಬಿತ್ಯಾದಿ ಜನಜೀವನದ ಬೇರೆ ಬೇರೆ ವಿಭಾಗಗಳು ಸಂಪೂರ್ಣ ಭಿನ್ನವೆಂದು ಭಾವಿಸಿದರೆ ಮಾತ್ರ ಮೇಲಿನ ತರ್ಕವು ಪೂರ್ಣ ಸತ್ಯದ್ದಿರುತ್ತದೆ ಆದರೆ ವಸ್ತುತಃ ಈ ವಿಭಾಗಗಳು ಪರಸ್ಪರ ಸಂಬಂಧವುಳ್ಳವುಗಳೇ ಇರುತ್ತವೆ ಉದಾಹರಣೆಗಾಗಿ ರಾಟೆಯಲ್ಲಿ ನೂಲುವ ಕಾರ್ಯಕ್ರಮ ತೆಗೆದುಕೊಳ್ಳೋಣ ಇದು ಮುಖ್ಯವಾಗಿ ಒಂದು ಗುಡಿಕೈಗಾರಿಕೆಯ ಪ್ರಶ್ನೆ ಆದುದರಿಂದ ಆರ್ಥಿಕ ವಿಭಾಗಕ್ಕೆ ಸಂಬಂಧಪಟ್ಟದ್ದು. ಆದರೆ ಈ ನೂಲುವ ಕಾರ್ಯಕ್ರಮಕ್ಕೆ ರಾಜಕೀಯ ಅಥವಾ ಸಾಮಾಜಿಕ ಪರಿಣಾಮಗಳೂ ತುಂಬಾ ಇರುತ್ತವೆ ಆದುದರಿಂದ ಜನಜೀವನದ ಈ ವಿಭಾಗಗಳು ಪೂರ್ಣ ಭಿನ್ನವೆಂದು ಸಾಧಿಸುವುದು ಸರಿಯಲ್ಲ.

ಇದರಂತೆಯೇ ಸ್ಥಳೀಕ ಆಡಳಿತೆ ರಾಜಕೀಯ ವಿಚಾರಗಳಿಂದ ಭಿನ್ನವೆನ್ನುವ ಮಾತು ಬಹಳ ಮಟ್ಟಿಗೆ ಸತ್ಯವಾದರೂ ಪೂರ್ಣ ಸತ್ಯವೆನ್ನುವಂತಿಲ್ಲ. ಪುನಃ ಅದೇ ಕೈ ರಾಟೆಯ ಉದಾಹರಣೆಯನ್ನು ತೆಗೆದು ಕೊಳ್ಳೋಣ. ಪ್ರಾಂತಿಕ ಆಡಳಿತೆಯು ನೂಲುವ ಕಾರ್ಯಕ್ರಮದಲ್ಲಿ ವಿಶ್ವಾಸವುಳ್ಳವರ ಕೈಯಲ್ಲಿದೆಯೆಂದು ಭಾವಿಸೋಣ. ಅವರು ಎಲ್ಲಾ ಮುನಿಸಿವಲ್ ಹಾಗೂ ಬೋರ್ಡು ಶಾಲೆಗಳಲ್ಲಿ ಮಕ್ಕಳಿಗೆ ನೂಲುವುದನ್ನು ಕಲಿಸಬೇಕೆಂದು ತಮ್ಮ ಧೋರಣೆ ರೂಪಿಸುವುದು ಸಹಜ. ಸ್ಥಳೀಕ ಸಂಸ್ಥೆಗಳು ನೂಲುವುದರಲ್ಲಿ ಯಾವ ವಿಶ್ವಾಸವೂ ಇಲ್ಲದವರ ಕೈಗೆ ಬಿದ್ದರೆ ಈ ಶಾಲೆಗಳಲ್ಲಿ ನೂಲುವುದನ್ನು ಕಲಿಸುವ ಕಾರ್ಯಕ್ರಮ ಎಷ್ಟು ಯಶಸ್ವಿಯಾಗಿ ನಡೆದೀತೆಂದು ಊಹಿಸಲು ಕಷ್ಟವಾಗದು.

ಈ ವಿಚಾರ ಸರಣಿಯಂತೆ ಸ್ಥಳೀಕ ಸಂಸ್ಥೆಗಳ ಚುನಾವಣೆಗಳಲ್ಲಿಯೂ ರಾಜಕೀಯ ಪಂಗಡಗಳು ಸ್ಪರ್ಧಿಸುವುದು ತಪ್ಪೆಂದು ತೆಗೆದು ಹಾಕುವಂತಿಲ್ಲ.

ಮಾತ್ರವಲ್ಲ ತಮ್ಮ ತಮ್ಮ ಪಕ್ಷಗಳನ್ನು ಬಲಪಡಿಸಿಕೊಳ್ಳಲು ಈ ಚುನಾವಣೆಗಳು ಒಂದು ಸಾಧನಗಳೆಂದರೆ ಅದನ್ನು ತೆಗೆದು ಹಾಕುವಂತಿಲ್ಲ.

ಸ್ಥಳೀಕ ಸಂಸ್ಥೆಗಳ ಚುನಾವಣೆಗಳನ್ನು ವ್ಯಕ್ತಿಗತವಾಗಿ ಬೇಕಾದವರು ಸ್ಪರ್ಧಿಸಲಿಕ್ಕೆ ಬಿಟ್ಟರೆ ಯಾವ ಬಗೆಯ ಪರಿಣಾಮವಾಗುತ್ತದೆಂದು ನಮ್ಮಲ್ಲಿಯ ಕಳೆದ ಮುನಿಸಿಪಲ್ ಚುನಾವಣೆಗಳ ಅನುಭವದಿಂದ ಸ್ವಲ್ಪವಾಗುತ್ತದೆ ಬಂಟರು, ಬಿಲ್ಲವರು, ಗೌಡಸಾರಸ್ವತರು ಮತ್ತು ಕ್ರೈಸ್ತರೆಂದು ಜಾತಿವಾದ ಪಂಗಡಗಳು ಇಂಥ ಸಂದರ್ಭದಲ್ಲಿ ಉದಯಕ್ಕೆ ಬರುವವೆಂದು ಹೇಳಿದರೆ ಅತಿಶಯೋಕ್ತಿ ಇಲ್ಲ ಈ ಜಾತೀಯತೆಯನ್ನು ಇನ್ನೂ ಇನ್ನೂ ಅಪ್ಪಿಕೊಳ್ಳುವುದಕ್ಕಿಂತ ಕಾಂಗ್ರೆಸ್, ಸೋಶಿಯಲಿಷ್ಟ್ ಇತ್ಯಾದಿ ರಾಜಕೀಯ ಪಂಗಡಗಳ ಹೆಸರಲ್ಲಿ ಚುನಾವಣೆಗಳು ನಡೆಯುವುದು ಸಾವಿರ ಪಾಲಿಗೆ ಮೇಲು ರಾಜಕೀಯ ಹೆಸರುಗಳನ್ನು ಹಾಕಿದರೂ ನಮ್ಮಲ್ಲಿ ಜಾತೀಯತೆ ಅಳಿಸಿ ಹೋಗುವುದಿಲ್ಲವೆಂದರೆ ಅಂಥ ಸಂದರ್ಭದಲ್ಲಿ ಅದು ತಲೆ ತಗ್ಗಿಸಿ ಅಡಗಿಬರುತ್ತದೆಂಬುದರಿಂದ ಕ್ರಮೇಣವಾದರೂ ಶಕ್ತಿಗುಂದಿ ಮಾಯವಾಗುವ ಸಂಭವವುಂಟಲ್ಲ ಬಹುದು

ಹೀಗೆ ಸ್ಥಳೀಕ ಸಂಸ್ಥೆಗಳಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆಗೆ ಉಮೇದ್ವಾರರನ್ನು ಲಿಸಬೇಕೂ ಎಂಬ ಪ್ರಶ್ನೆಯನ್ನು ಸರಿಯಾಗಿ ವಿವೇಚಿಸಿ ನೋಡಿದರೆ ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದವರು ಭಾಗವಹಿಸುವುದೇ ಉತ್ತಮವೆಂದು ನನಗನಿಸುತ್ತದೆ ಏನಿಲ್ಲಿಂದರೂ ಇದರಿಂದ ಮುಂದೆ ಬರಲಿರುವ ಶಾಸನಸಭಾ ಚುನಾವಣೆಗಳಿಗೆ ಸ್ವಲ್ಪ ಸಿದ್ಧತೆಯನ್ನು ಮಾಡಿಕೊಂಡಂತಾದರೂ ಆಗ ಬಹುದು

ನಮ್ಮಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಈ ಪ್ರಶ್ನೆಯ ತೀರ್ಮಾನವನ್ನು ಇನ್ನು ಮುಂದುವರಿಸುತ್ತಾ ಕಾಲ ವಿಳಂಬ ಮಾಡುವುದರಲ್ಲಿ ಮುಂದೆ ಕಷ್ಟಕ್ಕೆ ಬೀಳಬಹುದೆಂಬುದರಿಂದ ಈ ಕುರಿತು ಅದಷ್ಟು ಬೇಗನೆ ನಿಶ್ಚಿಸುವುದು ಉತ್ತಮವೆಂದು ಸೂಚಿಸಬಹುದು.

ಆಹಾರ ಸಮಿತಿಯ ನಿರ್ಧಾರ

ಈಚೆಗೆ ಜಿಲ್ಲಾ ಕಲೆಕ್ಟರ್ರಾದ ಮಿ। ಸಯ್ಯದ್ ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿದ್ದಾಗ ಶ್ರೀ ಕೆ. ಆರ್ ಕಾರಂತ ಎಂ. ಎಲ್ ಎ. ಅವರು ಹಳ್ಳಿಗಳ ಕಾರ್ಡಿನವರಿಗೆ ಒಮ್ಮೆಗೇ 2 ವಾರಗಳ ಅಕ್ಕಿ ಕೊಡಿಸುವಂತೆ ಸೂಚಿಸಿದನ್ನು ಸಮಿತಿ ಅಂಗೀಕರಿಸಿ ಇದರ ವಂಜೂರಾತಿಗಾಗಿ ರವಿನ್ಯೂ ಬೋರ್ಡಿಗೆ ಬರೆದು ಕೊಂಡಿದೆ.

ಟೀಕೆ-ಟಿಪ್ಪಣಿಗಳು

ಲಿಯಾಖತ್ ಅಲಿಯವರಿಗೆ ಮೊಸ್ಕೊ ಆಮಂತ್ರಣ

ಪಾಕಿಸ್ಥಾನದ ಪ್ರಧಾನ ಸಚಿವ ಲಿಯಾಖತ್ ಅಲಿಖಾನರಿಗೆ ರಸ್ಯಾ ಸಂದರ್ಶನ ಮಾಡುವಂತೆ ಮೊಸ್ಕೊದಿಂದ ಸ್ಟಾಲಿನರು ಆಮಂತ್ರಣ ಕಳುಹಿಸಿರುವರೆಂದೂ ಇವರು ಅದನ್ನು ಸ್ವೀಕರಿಸಿರುವರೆಂದೂ ತಿಳಿದುಬರುತ್ತಿದೆ. ಯಾವಾಗ ಪಯಣ ಬೆಳೆಸುವರೆಂದು ಮಾತ್ರ ನಿರ್ಣಯವಾಗಿಲ್ಲ.

ಪಾಕಿಸ್ಥಾನವು ಜಗತ್ತಿನ ಎಲ್ಲಾ ರಾಷ್ಟ್ರಗಳೊಡನೆ ಸ್ನೇಹಾಭಾವದಿಂದ ವರ್ತಿಸಲು ಆಶಿಸುತ್ತದೆ, ಈ ಸ್ನೇಹ ಪ್ರದರ್ಶನಕ್ಕಾಗಿಯೇ ಈ ಆಮಂತ್ರಣ ಸ್ವೀಕರಿಸಲಾಗಿದೆಯೆಂದು ಪಾಕಿಸ್ಥಾನ ಸರಕಾರ ಒಂದು ಹೇಳಿಕೆಯನ್ನು ಪ್ರಕಟಿಸಿರುತ್ತದೆ

ಪಂಡಿತ ಜವಾಹರಲಾಲರಿಗೆ ಅಮೇರಿಕದ ಟ್ರೂಮೆನರು ಅಲ್ಲಿಗೆ ಬಂದು ಸಂದರ್ಶನ ವೀಯುವಂತೆ ಆಮಂತ್ರಣಕೊಟ್ಟರು ನೆಹರುರವರು ಅದನ್ನು ಸ್ವೀಕರಿಸಿದರು. ರಸ್ಯಾಕರೆದರೂ ನಾನು ಹೋಗಲು ಸಿದ್ಧನೆಂದರು ಆದರೆ ರಸ್ಯಾ ಲಿಯಾಖತ್ ಅಲಿಖಾನರ ಕರೆಯಿತು.

ಜಗತ್ತಿನಲ್ಲಿ ಇಂದು ಪ್ರಬಲವಾಗಿ ಬೆಳೆಯುತ್ತಿರುವ ರಸ್ಯಾ ಅಮೇರಿಕ ಇತ್ತೆಂಡಗಳೊಳಗೆ ಭಾರತ ಪಾಕಿಸ್ಥಾನಗಳೂ ಒಂದೊಂದು ಪಂಗಡಗಳನ್ನು ಕಟ್ಟಿಕೊಳ್ಳುವ ಲಕ್ಷಣವೆನ್ನುವೆಕೆ? ಅಲ್ಲವೆಂಬುದು ಭಾರತ ಪಾಕಿಸ್ಥಾನಗಳೆರಿಂದ ಸ್ಪೋತ್ತಿವೆ ಸದ್ಯಕ್ಕೆ ಇವರ ಹೇಳಿಕೆಗಳನ್ನು ಇದ್ದಕ್ಕಿದ್ದಂತೆ ನಂಬುವುದೇ ಲೇಸು

ಕಾಶ್ಮೀರ ಜನಮತಗಣನೆ

ಯುನೈಟೆಡ್ ನೇಶನ್ಸ್ ಕಾಶ್ಮೀರ ಕಮಿಶನಿನ ಎರಪಾಗಿ ಡಾ। ಲೊಜಾನೊರವರು ಇಲ್ಲಿಗೆ ಬಂದಿದ್ದು ಭಾರತ ಸರಕಾರದ ಅಭಿಪ್ರಾಯ ಸ್ಪಷ್ಟೀಕರಣಕ್ಕಾಗಿ ಸರ್ ಗಿರಿಜಾ ಶಂಕರ ಬಾಜಪೇಯರೊಡನೆ ಮಾತುಕತೆ ನಡೆಸುತ್ತಿದ್ದಾರೆ.

ಭಾರತ ಸರಕಾರದ ಹೇಳಿಕೆ ಸ್ಪಷ್ಟವೇ ಇರುತ್ತದೆ ಕಾಶ್ಮೀರದಲ್ಲಿ ಜನಮತ ಗಣನೆ ನ್ಯಾಯವಾದ ರೀತಿಯಲ್ಲಿ ನಡೆಯಬೇಕಾದರೆ ಅಜಾದ್ ಕಾಶ್ಮೀರವೆಂಬ ಹೆಸರಿಟ್ಟುಕೊಂಡ ಸೈನ್ಯಗಳ ಮುಕ್ತಾಯ ಅತ್ಯಾವಶ್ಯಕವೆಂಬುದು ಇದಕ್ಕೆ ಕಮಿಶನಿನವರು ಈ ಮೊದಲು ಒಪ್ಪಿಗೆ ಕೊಟ್ಟಿದ್ದರು ಪಾಕಿಸ್ಥಾನವೂ ಒಪ್ಪಿತು ಈಗ ಪಾಕಿಸ್ಥಾನ ಬೇರೆ ಮಾತಾಡತ್ತಿದೆ. ಕಮಿಶನಿನವರಿಗೆ ಏನು ಮಾಡುವುದೆಂದು ತಿಳಿಯದೆ ಪೇಚಾಡುತಿದ್ದಾರೆ

ಲಿಯಾಖತ್ ಅಲಿಖಾನರು ಪಾಕಿಸ್ಥಾನಕ್ಕೆ ಎವರನ್ನು ಕಾಣಲು ಹೋದ ಕಾಶ್ಮೀರ ಜಮ್ಮು ಮುಸ್ಲೀಮ ವಿದ್ಯಾರ್ಥಿಗಳನ್ನು ದ್ವೇಶಿಸಿ ಕಾಶ್ಮೀರ ಪ್ರಶ್ನೆ ತೀರ್ಮಾನಕ್ಕೆ ನ್ಯಾಯವಾದ ನಿಷ್ಪಕ್ಷ ರೀತಿಯಿಂದ ನಡೆಯುವ ಜನಮತಗಣನೆಯೊಂದೇ ದಾರಿಯೆಂದು ಉಪದೇಶವಿತ್ತರು. ಇದು ಸರಿಯಾಗಿ ನಡೆಯುವಂತೆ ಮಾಡಲು ಪಾಕಿಸ್ಥಾನ ನಿರ್ಧರಿಸಿದೆಯಂತೆ. ಪ್ರಾಯಶಃ

ಅಜಾದ್ ಕಾಶ್ಮೀರ ಸೈನ್ಯಗಳು ಈ ನ್ಯಾಯ ಕಾಪಾಡಲಿಕ್ಕೆ ಅಗತ್ಯವೆಂದು ಇವರ ಅಂಬೋಣವೆಂದು ಕಾಣುತ್ತದೆ. ಇತ್ತಂಡಗಳ ಸೈನ್ಯ ಒತ್ತಾಯದಂತೆ ಮಾಡುವುದೇ ಹೆಚ್ಚು ನ್ಯಾಯವಾಗಲಿಕ್ಕಿಲ್ಲವೆ?

ಅಫಘಾನ ಪ್ರದೇಶಕ್ಕೆ ಪಾಕಿಸ್ಥಾನದ ಬಾಂಬು

ಅಫಘಾನ ಪ್ರದೇಶವಾದ ಮೊಗಲಾಕ್ಕಾ ಎಂಬಲ್ಲಿ ಪಾಕಿಸ್ಥಾನದ ವಿಮಾನ ಜೂನ್ ತಾ 12ರಲ್ಲಿ ಐದು ಬಾಂಬುಗಳನ್ನಿಸೆಯಿತೆಂದೂ ಇದರಿಂದ 15 ಮಂದಿ ಸತ್ತರೆಂದೂ 12 ಮಂದಿಗೆ ಗಾಯಗಳಾಗಿವೆಯೆಂದೂ ಅಲ್ಲಿಯ ದಕ್ಷಿಣ ಪ್ರಾಂತ್ಯ ಮಿಲಿಟರಿ ಕಮಾಂಡಿನ ಪ್ರಕಟನೆಯೊಂದು ತಿಳಿಸುತ್ತಿದೆ ಸ್ವಲ್ಪ ಮೊದಲು ಒಂದು ವಿಮಾನವು ಬಂದು ನೋಡಿ ಹೋಯಿತಂತೆ ಎರಡನೆಯದಾಗಿ ಬಂದ ವಿಮಾನವು ಈ ರೀತಿ ಬಾಂಬೆಸೆಯಿತು ಮಿಲಿಟರಿ ಕಮಾಂಡಿನವರು ನರಿಸ್ಥಿತಿಯನ್ನು ಪರಿಶೀಲಿಸುತ್ತಿರುವರೆಂದೂ ಅನಿರೀಕ್ಷಿತ ಘಟನೆಗಳಿಗಾಗಿ ಸನ್ನದ್ಧರಾಗುತ್ತಿರುವರೆಂದೂ ಹೇಳಲಾಗಿದೆ

ಈ ಕುರಿತು ಪಾಕಿಸ್ಥಾನ ಸರಕಾರದ ಹೇಳಿಕೆ ಈ ರೀತಿ ಇರುತ್ತದೆ

ಉತ್ತರ ವಜೀರಿಸ್ಥಾನದಲ್ಲಿ ಡವಾಗರ ಪ್ರದೇಶದಲ್ಲಿ ಪಾಕಿಸ್ಥಾನದ ಗಡಿಯೊಳಗೆ ವಿರೋಧಿಗಳು ಒಳಬೊಂದು ಪಾಕಿಸ್ಥಾನ ವಿಮಾನ ಪಡೆಪಂಗೆ ಜೂನ್ ತಾ 12ನೇ ದಿನ ವಧ್ಯಕ್ಷ ಕಂಡುಬಂದಿತು ಈ ವಿರೋಧಿಗಳ ಗಡಿದಲ್ಲಿ ಈಸೀ ಘಟನೆ ರವ ಅನುಬವಗಳು ಅಫಘಾನಿಸ್ಥಾನ ಸೈನಿಕರೂ ಇದ್ದು ಈಸಿಯ ಒಂದು ಫಿರಂಗಿಯ ಸಹಿತವಾದಲ್ಲಿ ಕಾಣುತ್ತಿತ್ತು ಪರಿಶೀಲನೆಗೆ ಬೆಂದ ವಿಮಾನ ಕೂಡಲೆ ನೆಲಕ್ಕೆ ಗಿಳಿದು ನಿಲ್ಲಿಸಲ್ಪಟ್ಟಿತು ಹಾರಿಸಿ ವಿಮಾನಕ್ಕೆ ನೆಟ್ಟುಯಿತು ನಮ್ಮ ವಿಮಾನವು ಇದಕ್ಕೆ ಉತ್ತರಕೊಟ್ಟ ನೈರಿಗಳಲ್ಲಿ ಸ್ವಲ್ಪ ಸಪ್ಪವುಂಟುಮಾಡಿತು ಈ ಘಟನೆಯ ಪೂರ್ಣ ವಿವರ ತಿಳಿಯಲಿಕ್ಕಾಗಿ ವಿಚಾರಣೆಯೆಂದು ನಡೆಯುತ್ತಿದೆ

ಇತ್ತಂಡದವರ ಹೇಳಿಕೆಗಳನ್ನೂ ಇದ್ದ ಕ್ಕಿದ್ದಂತೆ ಇಲ್ಲಿ ಕೊಡುವುದಕ್ಕಿಂತ ಹೆಚ್ಚಿನ ಟೀಕೆಗೆ ಈಗ ಆಸ್ಪದವಿಲ್ಲವೆಂಬುದು ಸ್ಪಷ್ಟವಷ್ಟೆ?

ದಕ್ಷಿಣ ಆಫ್ರಿಕದ ಪ್ರಶ್ನೆ

ದಕ್ಷಿಣ ಆಫ್ರಿಕ ಸರಕಾರದೊಡನೆ ಅಲ್ಲಿಯ ಭಾರತೀಯ ಹಾಗೂ ಪಾಕಿಸ್ಥಾನೀ ಪ್ರಜೆಗಳ ಕಡೆಗೆ ಆ ಸರಕಾರದ ವರ್ತನೆಯ ಕುರಿತು ಭಾರತ ಪಾಕಿಸ್ಥಾನ ಸರಕಾರಗಳ ರಡೂ ಜೊತೆಯಾಗಿ ಮಾತುಕತೆ ನಡೆಸಲಿಕ್ಕಿರುವರೆಂಬ ವಾರ್ತೆ ಪ್ರಕಟವಾಗಿರುತ್ತದೆ. ಭಾರತ ಪಾಕಿಸ್ಥಾನ ಎರಡಕ್ಕೂ ಸಮಾನವಾಗಿ ಸಂಬಂಧಿಸಿದ ಪ್ರಶ್ನೆಯೆಂಬುದರಿಂದ ಈ ಕುರಿತಾದರೂ ಜೊತೆಯಲ್ಲಿಯೇ ವರ್ತಿಸಲು ನಿರ್ಣಯ ಮಾಡಿದುದು ಸಂತೋಷಕರವೇ ಇರುತ್ತದೆ. ಹೀಗೆ ಜೊತೆಯಾಗಿ ವರ್ತಿಸುವುದರಿಂದ ಇವರ ಮಾತುಗಳಿಗೆ ಹೆಚ್ಚಿನ ಬೆಲೆ ಸಿಕ್ಕುವ ಸಂದರ್ಭವಿರುತ್ತದೆ. ನೂತ್ರವಲ್ಲ ಕಳೆದ ಯನ್ಯಾಟೆಡ್ ನೇಶನ್ಸ್

ಭತ್ತದ ಪೈರಿಗೆ ಸೈನ್ಯ ಹುಳಗಳ ಹಾವಳಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವೆಡೆಗಳಲ್ಲಿ ಭತ್ತದ ನೇಜಿ ತಿನ್ನುವ ಹುಳಗಳು ಈ ವರ್ಷ ಮೊದಲ ಬಾರಿ ತಲೆದೋರಿರುತ್ತವೆ. ಈಗ ಹಣ್ಣು ಮುದುಕರಿರುವವರು ಕೂಡಾ ಇಂಥಾ ಹುಳಗಳ ತಂಡಗಳನ್ನು ಈ ಜಿಲ್ಲೆಯಲ್ಲಿ ಇದುವರೆಗೆ ಕಂಡಿದ್ದಿಲ್ಲ ಮಾತ್ರವಲ್ಲ ಈ ಕುರಿತು ಹಿಂದಿನ ಯಾವ ದಾಖಲೆಗಳಲ್ಲಿಯೂ ಇದರ ಪ್ರಸ್ತಾವವಿಲ್ಲ

ಈ ಹುಳ ಸುಮಾರು 1¼ ಅಂಗುಲ ಉದ್ದವಿದ್ದು ಕಂಬಳಿ ಹುಳದಂತೆ ಕಾಣುತ್ತದೆ ಸಾವಿರಾರು ಹುಳಗಳ ತಂಡ ತಂಡಗಳೇ ಬೆಳೆಯುತ್ತವೆ ಒಂದು ಹುಳ ಒಮ್ಮೆಗೆ ಮೂರು ನಾಲ್ಕು ಸಾವಿರ ನೊಟ್ಟಗಳನ್ನಿಡುತ್ತದೆಯೆಂದ ಮೇಲೆ ಇದು ಎಷ್ಟು ಪ್ರಮಾಣದಲ್ಲಿ ಹಬ್ಬುತ್ತದೆಂದು ಹೇಳಬೇಕಾಗಿಲ್ಲ ಇವಕ್ಕೆ ಸ್ಯಾರ್ಮಿಂಗ್ ಕೆಟರ್‌ಪಿಲ್ಲರ್ ಅಥವಾ ಸೈನ್ಯಹುಳವೆಂದು ವಾಡಿಕೆಯು ಹೆಸರು ಪೆಂಬ್ಬಯಾಗಿ ನುಂದೆ ಹುಳುವಾಗಿ ಆ ಪೆ ಅ ದಿಕ್ಕೆಗಳು ಬಂದು ತಾರಿ ಸಾಯುವ ತನಕ ಇದರ ಒಟ್ಟು ಆಯುಸ್ಸು ಮೂರು ವಾರಗಳಂತೆ ಈ ವೈಕಿ ಹುಳವಾಗಿ ಇದು ಆಹಾರ ಸೇವಿಸುವ ಅವಧಿ ಏಳು ದಿನಗಳು

ಒಮ್ಮೆ ಭತ್ತದ ನೇಜಿ ತಿನ್ನುತ್ತದೆ ನೇಜಿ ಮೆ ಲೆಲ್ಲಿ ತುದಿಯಿಂದ ತಿನ್ನಲು ತೊಡಗಿ ಭುಸುತ್ತದೆ ಹುಳಗಳು ಬಂದಪೆಂದರೆ ಕೆಲವೇ ಸಮಯದಲ್ಲಿ ಇಡೀ ಗದ್ದೆ ಬರಿದಾಗುತ್ತದೆ ಗದ್ದೆಯಿಂದ ಗದ್ದೆಗೆ ಹರಿದು ಹೋಗುತ್ತವೆ ಗದ್ದೆಗಳನ್ನು ಪೂರ್ಣ ಬರಿದು ಮಾಡುತ್ತಿನೆ ಅಂದರೆ ಇದರ ವಿಧ ಪ್ರಕರ ಹೊಂಚಿಕೆ ಸಾಧ್ಯವೆಂದು ಹೇಳಿ ಬೇಕಾಗಿಲ್ಲ

ಅವರ ಮಳೆ ಬೀಳುವ ವೇಳೆಲೇ ಎಳಸಿದ ನೇಜಿಯನ್ನು ಇವು ತಿನ್ನುವುದಿಲ್ಲ ವ್ಯಾಯಸಃ ಅದಕ್ಕೆ ಸ್ವಲ್ಪ ಸಕ್ಕ ಹಿಡಿದು ತಿನ್ನಲು ರುಚಿಯಾಗುವುದಿಲ್ಲವೋ ಏನೋ ಎರಡನೆಯದಾಗಿ ಈ ಹುಳಗಳು ಕೋಡು

ಸಭೆಯಲ್ಲಿ ದಕ್ಷಿಣ ಆಫ್ರಿಕ, ಭಾರತ ಪಾಕಿಸ್ಥಾನ ಈ ಮೂರು ಸರಕಾರಗಳು ತಮ್ಮೊಳಗೆ ದುಂಡುಮೇಜು ಪರಿಷತ್ತು ನಡೆಸಿ ಈ ಪ್ರಶ್ನೆ ತೀರ್ಮಾನಿಸಿಕೊಳ್ಳಬೇಕೆಂದು ಮಾಡಿದ್ದ ನಿರ್ಣಯಕ್ಕೂ ಇದು ಅನುಗುಣವಾಗಿಯೇ ಇರುತ್ತದೆನ್ನಬಹುದು

ಮಲಾನ ಸರಕಾರ ಮತ್ತು ಡಾಡೂರವರ ಪಾಸ್‌ಪೋರ್ಟ್

ದಕ್ಷಿಣ ಆಫ್ರಿಕದಲ್ಲಿಯ ಹಿಂದಿಯರ ಮುಂದಾಳು ಡಾಕ್ಟರ್ ಡಾಡೂರವರು ಕಳೆದ ಪೆರೀಸ್ ನಗರದಲ್ಲಿ ನಡೆದ ಯುನ್ಯಾಟಿಡ್ ನೇಶನ್ಸ್ ಸಭೆಗೆ ಹೊರಟಾಗ ದಕ್ಷಿಣ ಆಫ್ರಿಕ ಮಲಾನ ಸರಕಾರವು ಇವರಿಗೆ ಆ ಮೊದಲು ಪ್ರಯಾಣಕ್ಕಾಗಿ ಕೊಟ್ಟ ವಾಸ್ ಪೋರ್ಟನ್ನು ಕಿತ್ತುಕೊಂಡಿತು. ಈ ಕುರಿತು ಇವರು ಪ್ರಿಟೋರಿಯದ ವರಿಷ್ಠಕೋರ್ಟಿಗೆ ಹೋದಲ್ಲಿ ಪಾಸ್‌ಪೋರ್ಟು ಕಿತ್ತುಕೊಂಡ ಸರಕಾರದ ಮಂತ್ರಿ ಡಾ। ಟಿ. ಇ. ಡೊಂಗೀ ಸರು ಪಾಸ್‌ಪೋರ್ಟು ತೆಗೆಯಬಾರದೆಂದು ಗಳನ್ನೂ ದಾಟಿ ಹೋಗಲು ಅಸಮರ್ಥವಿವೆಯೆಂಬುದು ನಮ್ಮ ಜಿಲ್ಲೆಯ ಪುಣ್ಯ. ಇಲ್ಲಿದ್ದರೆ ಇವು ಇಡೀ ಜಿಲ್ಲೆ ಬರಿದು ಮಾಡುತ್ತಿದ್ದವು ನಮ್ಮಲ್ಲಿ ಕೋಡುಗಳೂ ಹೊಳೆಗಳೂ ಬೇಕಷ್ಟಿರುವುದರಿಂದ ಇವುಗಳ ಪ್ರಸಾರಕ್ಕೆ ಸಾಕಷ್ಟು ತಡೆಗಳಿರುತ್ತದೆ

ಈ ಹುಳುಗಳ ನಾಶಕ್ಕೆ ಗೆಮ್ಮಕ್ಸೀನು ಎಂಬ ಡಿ ಡಿ ಟಿ ಪ್ರಯೋಗ ಒಂದೇ ದಾರಿಯೆಂದು ತಿಳಿದುಬರುತ್ತದೆ ಗದ್ದೆಗೆ ಈ ಔಷಧಿ ಚಿಮುಕಿಸಿ ಅರ್ಧಗಂಟೆಯೊಳಗೆ ಈ ಹುಳಗಳೆಲ್ಲ ಸತ್ತು ಬೀಳುತ್ತವೆ ಆ ಔಷಧಿಯು ಈ ಹುಳಗಳಿಗೆ ವಿಷವಾಗಿ ಪರಿಣಮಿಸುತ್ತದೆ ಔಷಧಿಯಿಂದ ನೇಜಿಗೆ ಬಾಧೆ ಕವಿಲ್ಲ

ತಲೆ ನೂತ್ರ ಹೋದ ನೇಜಿ ಉಳಿದರೆ ಹೆಚ್ಚು ಯೋಚನೆ ಬೇಡ ಅದು ಪುಷ್ಕಳ ಚಿಗುರಿ ಉಪಯೋಗಕ್ಕೆ ಬರುತ್ತದೆ ಸ್ವಲ್ಪ ಬರಲು ಒಂದು ವಾರ ತಡವಾಗಬಹುದು

ನೇಜಪೂರ್ಣ ನಾಶವಾದಲ್ಲಿ ಪುನಃ ಬೀಜ ಬಿತ್ತಿ ಸಾಗುವಳಿ ಮಾಡುವುದೊಂದೇ ದಾರಿ

ಈ ಹುಳಗಳ ಹಾವಳಿ ಮಂಗಳೂರು ತಾಲೂಕಿನ ಬಂಟ್ವಾಳ ಪ್ರದೇಶದಲ್ಲಿ ಎಲ್ಲಕ್ಕೂ ಹೆಚ್ಚಾಗಿರುತ್ತದೆ ಬಂಟ್ವಾಳ ಮೂಡ, ಕಳ್ಳಿಗೆ, ತುಂಬೆ ಪಾಣೆಮಂಗಳೂರು, ಮೆನ್ನೂರು, ಸಜೀಪ, ಮುಂಜಿ, ಬಾಳ್ತಿಲ ಮತ್ತು ಕಲ್ಲಡ್ಕಗಳಲ್ಲಿ ಹೆಚ್ಚಿನ ಹಾವಳಿಯಾಗಿದೆಯೆಂದು ತಿಳಿದುಬರುತ್ತದೆ ನರಿಕೊಂಬು ನಾವೂರು, ಶಂಬೂರು ಗ್ರಾಮಗಳಲ್ಲಿಯೂ ಹಾವಳಿಯಾಗಿದೆ

ಕಾಸರಗೋಡು ತಾಲೂಕಿನ ಚೆಮ್ನಾಡು, ಮಧೂರು, ಕುಡ್ಲು ಕು ಬಳಿ ಸಮೀಪದ ಅರಕಂಡಿ ಪೊದುಂಬಡೆಗಳಲ್ಲಿ ಹೆಚ್ಚು ಕಡಮೆ ಪ್ರಮಾಣದ ಹಾವಳಿಯಾಗಿದೆ

ಕುತ್ತೂರು ತಾಲೂಕಿನ ವಿಟ್ಲ ಸಮೀಪದಲ್ಲಿಯೂ ವೆಳ್ಳಿಗತಿ ಸಮೀಪದಲ್ಲಿಯೂ ಕೆಲವೆಡೆ ಈ ಹುಳಗಳು ಅವತರಿಸಿವೆಯೆಂದೂ ತಿಳಿದುಬಂದಿದೆ

ಕೋರ್ಟಿನ ಆಜ್ಞೆಯಾಯಿತು ಡಾಡೂರ ವರು ಲಂಡನ್ನಿಗೆ ತೆರಳಿದರು ಆದರೆ ಫ್ರೆಂಚ್ ಸರಕಾರವು ಅಗತ್ಯವಲ್ಲವೆಂದು ವರವಾನಗಿ ಕೊಡದಿದ್ದುದರಿಂದ ಇವರಿಗೆ ಯುನ್ಯಾಟಿಡ್ ನೇಶನ್ಸ್ ಸಭೆಗೆ ಹೋಗಲು ಸಾಧ್ಯವಾಗಲಿಲ್ಲ ಡಾಡೂರವರು ಈಗ ಲಂಡನ್ನಿನಿಂದ ಭಾರತಕ್ಕೆ ಬಂದಿದ್ದಾರೆ

ಪ್ರಿಟೋರಿಯಾ ಕೋರ್ಟಿನ ಆಜ್ಞೆಯ ಮೇಲೆ ಮಲಾನ ಸರಕಾರವು ಟ್ರಾನ್ಸ್‌ವಾಲ ಪರಿಷ್ಠ ಕೋರ್ಟಿನಲ್ಲಿ ಅಪೀಲು ದಾಖಲು ಮಾಡಿತ್ತು ಈ ಕೋರ್ಟಿನ ತೀರ್ಪು ಈಗ ತಾನೇ ಪ್ರಕಟವಾಗಿರುತ್ತದೆ ಇದರಲ್ಲಿ ಸರಕಾರಕ್ಕೆ ಪಾಸ್‌ಪೋರ್ಟು ಹಿಂತೆಗೆಯಲು ಯಾವ ಅಧಿಕಾರವೂ ಇಲ್ಲವೆಂದೂ ಇದು ನಿರಂಕುಶ ವ್ಯಭುತ್ವದ ಒಂದು ನಿದರ್ಶನವೆಂದೂ ಮಲಾನ ಸರಕಾರಕ್ಕೆ ಮುಂಗಾರಿಕೆ ಮಾಡಿದ್ದಾರೆ. ಮಲಾನ ಸರಕಾರ ಇನ್ನಾದರೂ ಬುದ್ಧಿ ಕಲಿಯುವಂತಾಗಲಿ.

ದೂಮ್ಮೂಲ್ಯಿಯ ಬಳಿಯೂ ಇವೆಯೆಂದೂ ಕೇಳಿಬರುತ್ತದೆ.

ಹಾವಳಿ ವಿಷಯ ವರದಿ ಬಂದು ಮುಟ್ಟಿದೊಡನೆ ನಮ್ಮ ಕೃಷಿಖಾತೆಯವರು ಆ ಸ್ಥಳಕ್ಕೆ ಸಂದರ್ಶಿಸಿ ಮದ್ದು ಚಿಮುಕಿಸುವ ಏರ್ಪಾಡು ಮಾಡುತ್ತಾರೆ. ನೇಜಪೂರ್ಣ ಹಾಳಾದಲ್ಲಿ ಪುನಃ ಬಿತ್ತಲು ಬೇಕಾದ ಬೀಜ ಒದಗಿಸುತ್ತಾರೆ. ಈ ಹಾವಳಿಯನ್ನು ತಡೆಗಟ್ಟಲು ನಮ್ಮಲ್ಲಿಯ ಕೃಷಿಖಾತೆಯ ಅಧಿಕಾರಿಗಳು ಒಳ್ಳೆಯ ದಕ್ಷತೆಯಿಂದ ಚಟುವಟಿಕೆ ತೋರಿಸುತ್ತಿರುವುದು ಸಂತೋಷದ ಸಂಗತಿ

ಇವರು ಹಾವಳಿ ತಗಲಿದ ಪ್ರದೇಶಗಳಿಗೆ ಸಾಕಷ್ಟು ಔಷಧಿ ಈಗಲೆ ಸಂಗ್ರಹಿಸಿ ಹಂಚಿದ್ದಾರೆ ಬೇಕಾದಷ್ಟು ಪ್ರಮಾಣದಲ್ಲಿ ಬೀಜ ಸಂಗ್ರಹ ಕೂಡಾ ಇವರಲ್ಲಿರುತ್ತದೆ ಹಾವಳಿಯ ಹೆಸರಲ್ಲಿ ಬೀಜಕೊಂಡು ಹೋಗಿ ಬೇಯಿಸಿ ಊಟಮಾಡುವ ಅಪರಾಧ ಮಾತ್ರ ನಡೆಯದಿದ್ದಂತೆ ಜಾಗ್ರತೆ ವಹಿಸುವುದು ಅಗತ್ಯ

ಈ ಸೈನ್ಯ ಹುಳಿಗಳು ಇಡ್ಯಗ್ರಾಮದಲ್ಲಿ ಕಳೆದ ವರ್ಷದ ಮೂರನೆ ಬೆಳೆ ಸಮಯ ತಲೆದೋರಿದ್ದವಂತೆ ಇವುಗಳನ್ನು ತಡೆಗಟ್ಟುವುದಕ್ಕಾಗಿ ಕೃಷಿ ಖಾತೆಯವರು ಕಾರ್ಯ ನಡೆಸಿದ್ದರಂತೆ ಈ ಅನುಭವ ಈಗ ಪ್ರಯೋಜನಕ್ಕೆ ಬಿದ್ದಂತೆ ಕಾಣುತ್ತದೆ

ಕೊಯಮ್ಮ ತ್ತೂರಿನಿಂದ ಸಸ್ಯರಕ್ಷಣಾ ಆಫೀಸರರು ಇಲ್ಲಿಗೆ ಬಂದು ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ.

ಆಫೀಸ್ಲಿ ಕೆಲವು ಹುಳಗಳು ಮಾತ್ರ ತಲೆದೋರಿದರೆ ಗಾಬರಿಯಿಲ್ಲ ಕಾಗಗಳೇ ಗುಂಪು ಕಟ್ಟಿ ಅವನ್ನು ನಾಶಮಾಡುತ್ತವೆ ಕೊಡಿಯಾಲ್‌ಬೈಲಿನ ಒಂದು ಗದ್ದೆಯಲ್ಲಿ ಈ ರೀತಿ ನಡೆದಿತ್ತು

ಈ ಹುಳಗಳು ಭತ್ತದ ನೇಜಿ ತಿನ್ನುವುದು ಮಾತ್ರವಲ್ಲ ಕೊಯ್ಲಾಗುತ್ತಿನಲ್ಲಿ ಕೃಷಿ ಖಾತೆಯ ಕೊಟವನ್ನೆ ಹೊಕ್ಕಿದವು. ಅಲ್ಲಿ ಸೊಬ್ಬರ ಸಸಿಗಳನ್ನು ಎರಡು ಎಕ್ರೆ ಸ್ಥಳದಲ್ಲಿ ಬೆಳೆಸಿದ್ದರು ಈ ಹುಳಗಳು ಅವೆಲ್ಲವನ್ನು ತಿಂದು ಎರಡು ಎಕ್ರೆ ಖಾಲಿ ಸ್ಥಳ ಬಿಟ್ಟಿವೆಯೆಂದು ತಿಳಿದು ಬರುತ್ತದೆ

ಈ ಹುಳಗಳು ಈ ವರ್ಷ ಹೀಗೆ ಅವತರಿಸಲು ನಮ್ಮಲ್ಲಿ ಈ ವರ್ಷ ಬೇಗನೆ ಮಳೆ ಬಂದದ್ದೇ ಕಾರಣವಿರಬಹುದೇ? ಕೃತ್ತಿಕೆ ಮಹಾ ನಕ್ಷತ್ರದಲ್ಲಿ ಮಳೆ ಬಂದರೆ ಬೆಳೆಗಳು ಕ್ರಿಮಿಕೀಟಗಳಿಗೆ ಎಂಬೊಂದು ನಂಬಿಕೆ ಪ್ರಚಾರದಲ್ಲಿದ್ದಂತೆ ತಿಳಿದುಬರುತ್ತದೆ ಕೃತ್ತಿಕೆಯಲ್ಲಿ ಬಿಳಿಸುಣಕಾಡೆ ಮಣ್ಣು ಸುಟ್ಟು ಇಂಥ ಜೀವಾಣುಗಳು ನಾಶವಾಗುವವೆಂದೂ ಆಗ ಮಳೆ ಬಂದರೆ ಇವು ಜೀವತಾಳುವವೆಂದೂ ಇದರ ಅಭಿಪ್ರಾಯ ನಿಜವಿರಬಹುದೆ?

ಅಥವಾ ಒಬ್ಬರು ಹೇಳಿದಂತೆ ಅಕ್ಕಿ ಭತ್ತಗಳಲ್ಲಿ ಕಳ್ಳಸಂತೆ ನಡೆಸಿದ ಬಗ್ಗೆ ದೇವರು ಶಿಕ್ಷಿಸಬಲ್ಲನೆಂದು ಕೋರಿಸುವುದು ಈ ಹಾವಳಿಯ ಅರ್ಥವಿರಬಹುದೆ?

ಎಸ್. ಎಸ್. ಎಲ್. ಸಿ ಫಲಿತಾಂಶ

ಮೇಲ್ಕಂಡ ಪರೀಕ್ಷೆಯ ಫಲಿತಾಂಶ ಕಳೆದ ವಾರಾಂತ್ಯದಲ್ಲಿ ಪ್ರಕಟವಾಗಿದೆ. ಈ ಸಲದ ಪರೀಕ್ಷೆಗೆ ಸಿಲೆಕ್ಷನ್ ಇಲ್ಲದೆ ವಿದ್ಯಾರ್ಥಿಗಳನ್ನು ಕಳುಹಿಸಿದರಿಂದ ಕೆಲವು ಶಾಲೆಗಳ ತೇರ್ಗಡೆ ದಾಮಶಯವು ಬಹಳ ಕಡಿಮೆ ನಿಂತಿದೆ. ಸ್ಥಳೀಯ ಎಲೋಸಿಯಸ್ ಕೊಲೇಜಿನಲ್ಲಿ ಸುಮಾರು ಶೇಕಡಾ 75ರಷ್ಟು ನಾಸಾಗಿದ್ದು ಇದು ಜಿಲ್ಲೆಯಲ್ಲೇ ಅತೀ ಹೆಚ್ಚಿನದೆಂದು ಹೇಳಲಾಗಿದೆ. ಅದರ ಸಂತೋಷಾರ್ಥ ಕೋಲೇಜಿನ ಹೈಸ್ಕೂಲಿಗೆ ರಜೆಯೂ ಕೊಡಲ್ಪಟ್ಟಿದೆ. ಮತ್ತೆ ತಿಳಿದು ಬಂದುದರಿಂದ ಕೆಲವು ಫಲಿತಾಂಶ ಪ್ರಮಾಣಗಳು ಹೀಗಿವೆ: ಕೆನೆರಾ ಹಾಸ್ಕೂಲು ಸುಮಾರು 88%; ಕೆನೆರಾ ಹಾಸ್ಕೂಲು ಉರ್ವಾ ಶಾಲೆ 60%; ಗಣಪತಿ 20%; ಮಿಶನ್ ಹೈಸ್ಕೂಲು 30%; ಬೆಸೆಂಟ್ ಹೈಸ್ಕೂಲು 45%.

ಹವಾಮಾನ

ಈ ವಾರದಲ್ಲಿ ಮಳೆಯ ಕಾರ್ಯಭಾರವು ಸ್ತಬ್ಧವಾಗಿದು ಬಿಸಿಲು ಕಾಯುತ್ತಿವೆ ಉಷ್ಣವೂ ಸಾಕಷ್ಟು ಪ್ರಮಾಣದಲ್ಲಿದೆ ನೇಜಿನೆಡುವುದಕ್ಕೆ ಇದರಿಂದ ತುಂಬಾ ಅನಾನುಕೂಲವಾಗಿದೆಂದು ತಿಳಿದು ಬರುತ್ತದೆ.

ಜಿಲ್ಲೆಯ ಬೆಳೆಗೆ ಹಾನಿ
ಹುಳಗಳ ಹಾವಳಿ

ಈ ಸಲದ ನೇಜಿಗೆ ಒಂದು ತರದ ಹಾಳು ಪೀಡೆಯು ತಗಲಿದೆಯೆಂದೂ ಇದರಿಂದ ಮುಂದಿನ ಫಸಲಿಗೆ ತುಂಬಾ ನಷ್ಟವಿದೆಯೆಂದೂ ಕೇಳಿಬರುತ್ತದೆ. ಕೆಲವು ಕಡೆ ಬೀಜಕ್ಕೂ ಒಂದು ತರದ ಕಪ್ಪು ಹುಳವು ತಗಲಿದ್ದು ಕೃಷೀಕರಿಗೆ ಹೊಸತಾಗಿ ಬಿತ್ತಲು ಬೀಜವಿಲ್ಲದೆ ಕಂಗೆಟ್ಟಿರುವರೆಂದೂ ತಿಳಿದು ಬರುತ್ತದೆ.

ಕಾಸರಗೋಡು ತಾಲೂಕಿನ ಶಮ್ಮಾಡ್, ಕೊಡ್ಲು, ಮುಧೂರ್, ಆರ್ಕಾಡಿ, ಸಿರಿವಾಗಿಲು ಮೊದಲಾದ ಗ್ರಾಮಗಳಲ್ಲಿ ಈ ಹುಳ ಬಾಧೆಯಿಂದ ಸಾಮಾನ್ಯ ನಷ್ಟ, ಮಂಗಳೂರು ತಾಲೂಕಿನ ಬಂಟ್ವಾಳ ಮೂಡ, ಕಳ್ಳಿಗೆ, ತುಂಬೆ ಪಾಣೆಮಂಗಳೂರು, ಮುನ್ನೂರು ಸಜೀವ, ಮಂಜಿ, ಬಾಳಿಲ, ಕಲ್ಲಡ್ಕ, ನರಿಕೊಂಬು, ಕಾವೂರು, ಶಂಭೂರು, ಮೂಲ್ಕಿ ಕಡಗಳಲ್ಲಿನ ನೇಜು ಪೂರಾ ಹಾಳಾಗಿದೆಯಂತೆ, ಗದ್ದೆಗಳು ಬರಿದಾಗಿರುವುದು ನಿದರ್ಶನಕ್ಕೆ ಬಂದಿರುತ್ತದೆ. ಇಂತಹ ಹುಳ ಹಾವಳಿ ಹಿಂದೆಂದೂ ಸಂಭವಿಸಲಿಲ್ಲವೆಂದು ಹೇಳಲಾಗುತ್ತಿದೆ.

ಅಧಿಕಾರಿಗಳು ರೈತರಿಗೆ ಹೊಸಬೀಜವನ್ನು ಪೂರೈಸಲು ಏರ್ಪಡಿಸಿರುವರು, ಇದನ್ನು ಕ್ರಯಕೊಟ್ಟು ಪಡೆಯಬೇಕು. ಹುಳನಾಶಕ್ಕೆ ಸಾಯುಕ್ರಮವನ್ನು ಕೈಕೊಳ್ಳಲಾಗಿದೆ.

ಮದ್ಯನಿಷೇಧ ಶಾಖೆಯ

ಡಿ॥ ಕಮಿಶನರರು

ಮದ್ರಾಸಿನ ಮೇಲ್ಕಂಡ ಶಾಖಾ ಕಮಿಶನರಾದ ಶ್ರೀ ಎ. ಪಳನಿಯಪ್ಪ ಮುದಲಿಯಾರರು ಈಚೆಗೆ ಮಂಗಳೂರಿಗೆ ಬಂದಿದ್ದು ಸಂಬಂಧವಟ್ಟ ಕಾರ್ಯಾಲಯಗಳನ್ನು ಸಂದರ್ಶಿಸಿ ಮದ್ಯನಿಷೇಧದ ಚಟುವಟಿಕೆಗಳನ್ನು ಪರಾಮರ್ಶಿದರು.

ಭಾಷಣ

ಕಳೆದ ತಾ. 12ರಂದು ಸ್ಥಳೀಯ ಕೆನೆರಾ ಹೈಸ್ಕೂಲಿನ ಸಭಾ ಭವನದಲ್ಲಿ ಮದ್ರಾಸಿನ ವಿದ್ಯೋದಯಾ ಹೈಸ್ಕೂಲಿನ ಕಲಾಧ್ಯಾಪಕರಾದ ಶ್ರೀ ಪ್ರಸನ್ನ ಅವರು ಸ್ಥಳೀಯ ಕಲಾ ಶಿಕ್ಷಕರ ಸಭೆಯಲ್ಲಿ ಚಿತ್ರಕಲೆಯನ್ನು ಕಲಿಸುವುದರ ನೂತನ ವಿಧಾನಗಳನ್ನು ಹೊಸ ಪಾರಪಟ್ಟಿಗನುಸಾರ ವಿವರಿಸಿದರು. ಶ್ರೀಯುತರು ನಮ್ಮ ಜಿಲ್ಲೆಯವರೇ ಆಗಿದ್ದು ರಿಟಾಯರ್ಡ್ ಸಬ್-ಅಸಿಸ್ಟಾಂಟ್ ಸರ್ಜನ್ ಡಾ। ಕೆ. ವೆಂಕಟ್‌ರಾವ್ ಅವರ ಚಿರಂಜೀವರು. ಚಿತ್ರಕಲೆಯು ಕೇವಲ ಯಾಂತ್ರಿಕ ಅಭ್ಯಾಸವಾಗಿರದೆ, ವಿದ್ಯಾರ್ಥಿಗಳ ವ್ಯಕ್ತಿತ್ವವು ಅವರ ಕೃತಿಗಳಲ್ಲಿ ನಿರೂಪಿಸಿ ತವಾಗುವಂತಾಗಿ ಅವರ ಮೊನಸಿಕ ಮತ್ತು ಅಧ್ಯಾತ್ಮಿಕ ವೃತ್ತಿಗಳು ವರಿಪೂರ್ಣತೆಗೆ ಮುಟ್ಟಿಸುವಂತಹ ರೀತಿಯಲ್ಲಿ ಅದನ್ನು ಶ್ರೇರೇಪಿಸಬೇಕು ಎಂದರು. ಜಿಲ್ಲಾ ಟೀಚರ್ಸ್ ಗಿಲ್ಡಿನ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಕಿಣಿಯವರು ಧನ್ಯವಾದಗಳನ್ನರ್ಪಿಸಿದರು

ಸೋಶಲಿಷ್ಟ್ ಪರಿಷತ್ತು

ಕಳೆದ ತಾ. 11 ಮತ್ತು 12ರಂದು ಜಿಲ್ಲಾ ಸೋಶಲಿಷ್ಟ್ ಕಾರ್ಯಕರ್ತರ ಜರಗಿತು ಪರಿಷತ್ತು. ಕರ್ನಾಟಕ ಸೋಶಲಿಷ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ನಾಗಭೂಷಣ ಮತ್ತು ಜತಕಾರ್ಯದರ್ಶಿ ಶ್ರೀ ಸದಾಶಿವರಾಯರು ಬಂದಿದ್ದರು. ಬೊಂಬಾಯಿ ಸೋಶಲಿಷ್ಟ್ ದುರೀಣರಾದ ಶ್ರೀ ಡೆಮೆಲ್ಲೊ ಅವರೂ ಬಂದಿದ್ದರು. ಮುಂಬರುವ ಸ್ಥಳೀಕ ಆಡಳಿತಗಳ ಚುನಾಣೆಗಳಲ್ಲಿ ಭಾಗವಹಿಸಬೇಕೆಂದು ಪರಿಷತ್ತಿನಲ್ಲಿ ನಿರ್ಣಯಿಸಲಾಯಿತು ಸೋಶಲಿಸ್ಟರ ನಿರುದ್ಧ ಸರಕಾರದವರು ಕೈಕೊಂಡ ಕಾರ್ಯಕ್ರಮಗಳನ್ನು ಖಂಡಿಸಲಾಯಿತು. ತಾ. 12ರಂದು ಮೈದಾನದಲ್ಲಿ ಸಾರ್ವಜನಿಕ ಭಾಷಣವಿದ್ದು ಪಕ್ಷದ ಗೊತ್ತುಗುರಿಗಳನ್ನು ವಿವರಿಸಿ ಹೇಳಲಾಯಿತು

ಜುಗಾರಿ ಕೂಟಕ್ಕೆ ಮುತ್ತಿಗೆ

ಡೊಂಗರಕೇರಿಯಲ್ಲಿನ ಕೆನರಾ ಹೈಸ್ಕೂಲ್ ಒಳಿಯ ವರಾಂದದಲ್ಲಿ ನುಧ್ಯರಾತ್ರಿ ಹೊತ್ತಿಗೆ ಗುಪ್ತವಾಗಿ ಜುಗಾರಿ ಆಟವಾಡುತ್ತಿದ್ದ ಕೆಲವರನ್ನು ಸ್ಥಳೀಯ ಪೋಲೀಸರು ಮುತ್ತಿಗೆ ಹಾಕಿ ಕೆಲವರನ್ನು ಹಿಡಿದರೆಂದೂ ಕೆಲವರು ಓಡಿಹೋದರೆಂದೂ ತಿಳಿದು ಬರತ್ತದೆ

THE UNITED INDIA LIFE ASSURANCE COMPANY LIMITED.

MADRAS.

"UNITED INDIA".

UNITED INDIA is one of the soundest of insurance concerns

It is the custodian of more than 40 millions of rupees belonging the Policy holders

It has more than 100,000 Policy holders.

It has assured sums of more than Rs 100 millions

It has constituted a TRUST — the Official Trustee of Madras is the Trustee for the Policy — holders Fund

UNITED INDIA is a household word in South India and is well Known throughout India Ceylon, Malaya and East Africa

For particulars please apply to:-

The Branch Manager,

K S Rao Road Mangalore



ಕೂಸಿನ ಮೈ ತಂಪಾಗಿಡುವ
ದದ್ದನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸುತ್ತಾರೆ.
ಸುಗಂಧಿತ ರೇಶ್ಮೆ ನುಣ್ಣಗಿರುವ ಈ ಪೌಡರು ಎಳೆ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ. 558

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ರಜಕ ಸಂಘ, ಮುಂಬಯಿ

ಕಡ್ಡಾಯ ಶಿಕ್ಷಣವು ಜಾರಿಗೆ ಬಾರದ ಶಾಲೆಯಲ್ಲಿ ಕಲಿಯುತ್ತಿರುವ ರಜಕ ಜಾತಿಯ ವಿದ್ಯಾರ್ಥಿಗಳ ಸೈಕೆ ಯೂರಾದರೂ ವಿದ್ಯೆ ಕಲಿಯಲು ಅಸಮರ್ಥರಾದ ಬಡ ವಿದ್ಯಾರ್ಥಿಗಳಿದ್ದರೆ ಅಂಥವರು ತಾ. 15-7-49ರೊಳಗೆ ತಮ್ಮ ಅರ್ಜಿ ಪತ್ರಗಳನ್ನೂ ಈ ಕೆಳಗಿನ ವಿಳಾಸಕ್ಕೆ ರವಾನಿಸ ಬೇಕೆಂದು ಗೌ। ಕಾರ್ಯದರ್ಶಿಗಳು ವಿನಂತಿಸುತ್ತಾರೆ ರಜಕ ಸಂಘ, 262, ಫರೇಕ ರೋಡ್, ರೂಮ್ ನಂಬ್ರ. 23, 2ನೇ ಮಹಡಿ, ಫೋರ್ಟ್, ಮುಂಬಯಿ.

ಜೈಲಿನಿಂದ ಪರಾರಿಯಾದ ಕೇಡಿಯ
ಪುನರ್ಬಂಧನ

ಕಳೆದ ಮಾರ್ಚ್ ತಿಂಗಳಲ್ಲಿ ಇಲ್ಲಿಯ ಸಬ್ ಜೈಲಿನಿಂದ ಕಿಟಿಕಿಯ ಸರಳು ಕತ್ತರಿಸಿ ಪರಾರಿಯಾದ ಮಂಜೇಶ್ವರದ ಮಹಮ್ಮದ್ ಹುಸೇನ್ ಎಂಬ ಜಿಲ್ಲಾ ಕೇಡಿಯನ್ನು ಕ್ರೈಮ್ ಶಾಖೆಯ ಸಬ್ ಇನ್ಸ್‌ಪೆಕ್ಟರ್ ಶೀಗಳಾದ ಅಣ್ಣಪ್ಪ ಮತ್ತು ಶೀನಪ್ಪನವರು ಚಾರ್ಮಾಡಿ ಗಡಿಯ ಒಳಪುನಃ ಬಂಧಿಸಿರುವರು ಆಗ ಅವನ ಒಳಚಿಕ್ಕ ಮಂಗಳೂರಿನಲ್ಲಿ ಎರಡೂ ಕಡೆ ಕನ್ನ ಹೊಡೆದ ವಸ್ತು ಆಭರಣಗಳೂ ಸಿಕ್ಕಿವೆ

ಕಮ್ಯೂನಿಷ್ಟರಿಗೆ ಆಶ್ರಯ ಕೊಟ್ಟ
ಅಪಾದನೆ – ಬಿಡುಗಡೆ

ಕಮ್ಯೂನಿಷ್ಟ್ ಮುಂದಿರವಾಗಿದ್ದು ಈಗ ತಲೆತಪ್ಪಿಸಿಕೊಂಡಿರುವ ಶ್ರೀಗಳಾದ ಎಸ್ ಎನ್ ಹೊಳ್ಳರಿಗೆ ಕಾರ್ಕಳ ತಂಪೂಕಿನ ಗುಂಡೇರಿ ಗ್ರಾಮದ ಪಟೇಲ್ ಶ್ರೀ ರಾಮ ಭಟ್ಟರು ಆಶ್ರಯ ಕೊಟ್ಟಿದ್ದರೆಂಬ ಅಪಾದನೆ ವಿಚಾರಣೆಯಲ್ಲಿ ತಕ್ಕ ದಾಖಲಾತಿಗಳಿಲ್ಲದ್ದರಿಂದ ಅವರನ್ನು ನಿರಪರಾಧಿಗಳೆಂದು ಬಿಡುಗಡೆಮಾಡಲಾಗಿದೆ

೫1 ಕನ್ಯೂನಿಷ್ಟ್ ಬಂಗಾರಿಗಳಿಗೆ ಸಜೆ

ಕೆಲ ಸಮಯದ ಹಿಂದೆ ಕೊಸ್ಟಾಡ್ ಪಿಲೇಶ್ವರ ಕಯ್ಯಾರು ಚರ್ಚಕ್ಕುಗಳ ಆಸಪಾಸಿನಲ್ಲಿ ಆಕ್ಟಿಗಾಗಿ ಬಲಾತ್ಕಾರ್ಯ ನಡಸಿದ 41 ನುಂದಿಗಳನ್ನು ವಿಚಾರಣೆಗೊಳಪಡಿಸಿದ್ದು ಇವರಲ್ಲಿ 41 ನುಂದಿಗಳಿಗೆ ತಲಾ 10 ತಿಂಗಳ ಕಠಿಣ ಶಿಕ್ಷ ವಿಧಿಸಲಾಗಿದೆ ಉಳಿದ ಹತ್ತು ಅಪಾದಿತರು ಮೈನರ್ ರಾಗಿರುವುದರಿಂದ ಅವರಿಗೆ ತಲಾ 60 ರೂಪ್ಯಾ ಜುಲ್ಮಾನೆವಿಸಾಗಿದ

ದಿವಂಗತ ಎಸ್. ಲಲಿತಾ
ಬಾಯಿಯವರು

ಕೀರ್ತಿವಂತ ಸಮಾಜ ಸುಧಾರಕ ದಿ। ಕುದ್ಮುಲ್ ರಂಗರಾಯರ ಹಿರೇ ಮಗಳೂ, ದಿ ನಮ್ಮಂವಳ್ಳಿ ಸುಬ್ರಾಯರ ಧರ್ಮಪತ್ನಿಯರೂ ಆಗಿದ್ದ ಶ್ರೀಮತಿ ಲಲಿತಾ ಬಾಯಿಯವರು ಕಳೆದ ತಾ 5ರಂದು ದಿವಂಗತರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಇದರ ಶೋಕಾರ್ಥ ಸ್ಥಳೀಯ ಗಣಪತಿ ಹೈಸ್ಕೂಲಿಗೆ ರಜೆ ಕೊಡಲಾಗಿತ್ತು. ದಿವಂಗತರು ಮದ್ರಾಸಿನ ಶ್ರೀಮತಿ ರಾಧಾ ಬಾಯ್ ಸುಬ್ರಾಯನ್ ಅವರ ಹಿರಿಯ ಅಕ್ಕಂದಿರು.

ಕಾಳ್ಗುದುರೆ

ಬನಾರಸದ ಬಳಿಯ ಒಂದು ಪ್ರದೇಶದ ಹಳ್ಳಿಗಳಲ್ಲಿ ಸಾವಿರಗಟ್ಟಿಯಲ್ಲಿ ಹಾವುಗಳು ಸತ್ತುಬಿದ್ದಿರುವುದು ಗಮನಕ್ಕೆ ಬಂದಿದೆ. ಹಾವುಗಳಿಗೇ ತಗಲುವ ಈ ವಿಚಿತ್ರ ವ್ಯಾಧಿಯ ಕುರಿತು ಕೆಲ ಪ್ರಾಣಿ ಶಾಸ್ತ್ರಜ್ಞರು ಪರಿಶೀಲನೆ ಮಾಡುತಿದ್ದಾರೆ.

M. E. No. 81.

ಚಕ್ರವರ್ತಿ ಕೊನ್ಸ್ಟಾಡಿನನೂ ನಿಂಫಾ ನಗರದ ಕಪ್ಪು ಭೂತದ ಕತೆಯೂ

ರೋಮ ನಗರದ ಸನಿಹಾದಲ್ಲಿರುವ ಪೊಂಟ್ಯೂನ್ ಜವುಗು ಪ್ರದೇಶದಲ್ಲಿ ಪ್ರಾಚೀನ ನಗರವಾದ ನಿಂಫಾದ ಭಗ್ನಾವಶೇಷಗಳು ಸ್ಥಳವಿದೆ. ಅಲ್ಲಿನ ಪ್ರಶಾಂತ ಸರೋವರದಲ್ಲಿ ಅವುಗಳ ಕೆಲವು ಕುರುಹುಗಳು ಪ್ರತಿಬಿಂಬಿತನಾಗುತ್ತವೆ. ನಿಂಫಾ ಮಧ್ಯಕಾಲದ ಒಂದು ಪ್ರಖ್ಯಾತ ನಗರ 1640 ಸುಮಾರಿನಲ್ಲಿ ಈ ನಗರವನ್ನು ಅದರ ನಿವಾಸಿಗಳು ಸಂಪೂರ್ಣ ತ್ಯಜಿಸಿದರು ಅದಕ್ಕೆ ಈ ಕೆಳಗಿನ ಕತೆಯು ಕಾರಣವಾಗಿ ಹೇಳಲ್ಪಡುತ್ತದೆ

13ನೇ ಶತಮಾನದ ಅಂತ್ಯಭಾಗದಲ್ಲಿ ನಿಂಫಾ ನಗರವನ್ನು ಆಳುತ್ತಿದ್ದ ಅತೀ ಸುಂದರನಾದ ಹೊಹೆನ್‌ಸ್ಟೌಸೆನ್ ಮನೆತನದ ಚಕ್ರವರ್ತಿ ಕೊನ್ರಾಡೀನನು ನೇಪಲ್ಸ್ ರಾಜ್ಯದ ಮೇಲೆ ಯುದ್ಧ ಹೂಡಿದನು. ಎಷ್ಟೂರದ ಮಹಾಸಾಮ್ರಾಜ್ಯವಾದ ಪ್ರಾಂಗಿ ಪಾಸಿಯು ಕೊನ್ರಾಡೀನನನ್ನು ಸೋಲಿಸಿ ಸೆರೆಹಿಡಿದು ಒಯ್ದು ನಿಂಫಾದ ಅರಮನೆಯಲ್ಲಿ ಅವನನ್ನು ಬಂಧನದಲ್ಲಿಟ್ಟನು ಫ್ರಾಂಗಿಪಾಸಿಯ ಮಗಳು ತರುಣ ಚಕ್ರವರ್ತಿಯನ್ನು ಆಳವಾಗಿ ನೋಡಿದಳು ಆದರೆ ಫ್ರಾಂಗಿಪಾಸಿಯು ತನ್ನ ಸ್ನೇಹವನ್ನು ಅಲಕ್ಷಿಸಿ ಕೊನ್ರಾಡೀನನ್ನ ಅವನ ಶತ್ರುಗಳ ವಶಕ್ಕೊಟ್ಟನು ಶತ್ರುಗಳು ಅವನನ್ನು ಮರಣದಂಡನೆಗೆಳಸಿ ನಾಡಿದರು ತನ್ನ ಪ್ರಿಯತಮನ ಮರಣ ವಾರ್ತೆಯನ್ನು ಕೇಳಿ ಬಸ್ಕಾರಾದ ರಾಜಕುಮಾರಿಯು ನಿಂಫಾ ಸರೋವರದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು ಅಂದಿನಿಂದ ಆ ಸರೋವರದ ಮೇಲೆ ಮಂಜು ಮುಸುಕಿದ ರಾತ್ರಿಗಳಲ್ಲಿ ಅವಳ ಶವವು ತೇಲಾಡುವುದು ಕಂಡುಬರುತಿತ್ತು ಅವಳು ಉದ್ದವಾದೊಂದು ಕಪ್ಪು ಮೇಲು ವಸ್ತ್ರವನ್ನು ಧರಿಸಿರುತ್ತಿದ್ದು ಆಸುಪಾಸಿನ ಸರೋವರದ ತೀರದಲ್ಲಿ, ಆದರ ಹಾಳುಬಿದ್ದ ಕಟ್ಟಡಗಳ ನಡುವೆ ಸಂಚರಿಸುತ್ತಾಳೆ ಅವಳ ಸೆರಗನ್ನು ಮುಟ್ಟಿದವರು ಖಂಡಿತ ಸಾಯುತಿದ್ದರು

ಮೃತಪಟ್ಟ ಆ ಸ್ತ್ರೀಯಲ್ಲಿ, ಅವಳ ಆ ಮೃತ್ಯುಕಾರಕ ಕಪ್ಪು ವಸ್ತ್ರದಲ್ಲಿ ಶತಮಾನಗಳಿಂದ ಆ ಪ್ರದೇಶದಲ್ಲಿ ಹರಡಿಕೊಂಡ ಮಲೇರಿಯದ ಕಪ್ಪು ಛಾಯೆಯನ್ನು ಸುಲಭವಾಗಿ ಕಾಣಬಹುದು ಈ ಅವಧಿಯಲ್ಲಿ ಫಲಸಮೃದ್ಧಿಯಾಗಿದ್ದ ಆ ಪ್ರದೇಶವು ಮಲೇರಿಯಾದಿಂದ ಒಂದು ಜವುಗು ಮರುಭೂಮಿಯಾಗಿ ಪರಿವರ್ತನ ಹೊಂದಿದೆ ಈಚೆಗೆ ಸುಮಾರು 30 ವರ್ಷಗಳಿಂದ ಈ ಫಲವತ್ತು ಪ್ರದೇಶವು ಕಾಡು ಕೋಣಗಳ ಮತ್ತು ಕುರಿಹಿಂಡುಗಳ ಮೇವು ಸ್ಥಳವಾಗಿದೆ

ಆದರೆ, 20ನೇ ಶತಮಾನದ ಪ್ರಾರಂಭದಲ್ಲಿ ಇಟೆಲಿ ಸರಕಾರದವರು ಭರದಿಂದ ಮಲೇರಿಯಾ ನಿರ್ಮೂಲನ ಕಾರ್ಯವನ್ನು ಕೈಕೊಂಡರು. ಇದು ಜಗತ್ತಿನ ಕೌತುಕ ಪಡೆಯಿತು

ಹೆಜ್ಜೆ ಹೆಜ್ಜೆಯಾಗಿ ಸ್ವಲ್ಪ ಸ್ವಲ್ಪ ಪ್ರದೇಶವು ಕೃಷಿಯೋಗ್ಯಗೊಳಿಸಲ್ಪಟ್ಟಿತು. ಕ್ವಿನೀನಿನಿಂದ ಈ ಕೆಲಸವು ಮತ್ತಷ್ಟು ಸುಲಭವಾಯಿತು. ಎಲ್ಲಾ ಕೆಲಸಗಾರರಿಗೆ ಹೇರಳ ಪ್ರಮಾಣದಲ್ಲಿ ಕ್ವಿನೀನನ್ನು ಹಂಚಲಾಯಿತು. ದಿನಕ್ಕೆ ಪ್ರತಿಯೊಬ್ಬನಿಗೆ 6 ಕಾಳುಗಳಷ್ಟು ಕೊಡಲ್ಪಟ್ಟಿತು. ಮಲೇರಿಯಾ

ಜಗತ್ತಿನಲ್ಲಿನ ದುಃಖದ ಕಾರಣ ಮಕ್ಕಳ ತರಬೇತಿ

ಬೆನ್ನಾಗಿರಬೇಕು

ಶಿಕ್ಷಣ ಸಂಬಂಧವಾದೊಂದು ಪತ್ರಿಕೆಯಲ್ಲಿ ಶ್ರೀ ಹರಿಭಾಯ್ ತ್ರಿವೇದಿಯವರು "ಮಕ್ಕಳನ್ನು ತಿಳಿಕೊಳ್ಳಿ" ಎಂಬ ಶಿರೋನಾಮೆಯಡಿಯಲ್ಲಿ ಹೀಗೆ ಬರೆಯುತ್ತಾರೆ:

ಜಗತ್ತಿನಲ್ಲಿಂದು ನಾವು ಕಾಣುವದು ಬಹುದ ಕಾರಣವು ಮಾನವರ ಮಾನಸಿಕ ಒಲುಮೆ ನಿಲುಮೆಗಳೇ ಆಗಿವೆ ಇವುಗಳ ಬೇರುಗಳು ಮಾನವನ ಮನಸ್ಸಿನ ಆಳದಲ್ಲಿ ಸುಸೂಪ್ತಾವಸ್ಥೆಯಲ್ಲಿ ಹುದುಗಿವೆ. ತುಂಬಾ ಶ್ರೀಮಂತನಾಗಿದ್ದರೂ ಒಬ್ಬ ಮನುಷ್ಯ ತುಂಬಾ ದುಃಖಿತನಾಗಿರುತ್ತಾನೆ ತನಗೆ ಬೇಕಾಗಿರುವುದಕ್ಕಿಂತ ಹೆಚ್ಚಾಗಿದ್ದರೂ ಅವನು ಇನ್ನೂ ಗುಪ್ತ ದಾಸ್ತಾನಿರಿಸಲು ಹೇಸುವುದಿಲ್ಲ ಅವನ ಲೈಂಗಿಕ ಬಯಕೆಗಳಾದರೊ ಮಿತಿಮೀರಿರುತ್ತವೆ ಆ ವಿಷಯದಲ್ಲಿ ಅವನು ಸಂಯಮವನ್ನೇ ಅರಿಯದಂತಿರುವನು ಅವನನ್ನು ಪರಿಶೀಲಿಸಿ ನೋಡಿದರೆ, ಮನಶಾಸ್ತ್ರಿಕ ಸ್ವಭಾವವನ್ನು ಕಂಡರೂ ಸರಿಯೆ ಅವನು ಲೋಭಿಯಾಗಿರುವನೆಂದೇ ಬಿಕಮಾರಿಯಿಂ ಆಗಿರುತ್ತಾನೆ ಅವನು ದಬ್ಬಾಳಿಕೆದಾರನಾಗಿರುತ್ತಾನೆ ಪ್ರತಿದಿನ 15 20 ಕಾಳುಗಳಷ್ಟು ಮತ್ತು ರಿಂದ 7 ದಿವಸಗಳ ತನಕ ಕೊಡಲ್ಪಡುತಿತ್ತು ಜ್ವರ ನಿಂತ ಮೇಲೆ ನೀರಸತೆಯಿಲ್ಲ ಈ ಕೆಲಸವು ಈಗ ಕ್ಷೀಣಿಸಿದೆ ಕಡಿಮೆ ಮುಗಿದಿದೆ ಆದರೆ ಕ್ವಿನೀನು ಅಲ್ಲಿ ಇನ್ನೂ ಸೇವೆಗೈಯುತ್ತಿದೆ ಜಗತ್ತಿನಲ್ಲಿ ಅತಿ ಮೃತ್ಯುಕಾರಕ ಹವೆಯ ನಪ್ರದೇಶವೆಂದ ಖ್ಯಾತಿಪಟ್ಟ ಈ ಸ್ಥಳದಲ್ಲಿ ಈಗ ಆರೋಗ್ಯವಂತರೂ ಚೈತನ್ಯಯುಕ್ತರೂ ಆದ ಜನರ ಸಮೂಹವು ವಾಸಿಸಿಕೊಂಡಿದ್ದು ಕಾರ್ಯನಿರತವಾಗಿದೆ.

ನಸ್ಸೇ ಹೇಡಿಯೂ ಆಗಿರುತ್ತಾನೆ. ಆತ್ಮ ವಂಚನೆಯಿಂದವನು ಅತೀವವಾಗಿ ನರಳುತ್ತಾನೆ.

ಇವಕ್ಕೆಲ್ಲ ಕಾರಣವೇನು?

ಮಾನಸಿಕವೂ ಶಾರೀರಿಕವೂ ಆಗಿರುವ ಈ ಸಂಕಷ್ಟಗಳು ಏಕೆ ಇರುತ್ತವೆ? ಇದಕ್ಕುತ್ತರವನ್ನು ಕಂಡು ಹಿಡಿಯಲು ಸಮಾಜವು ತುಂಬಾ ಪ್ರಯತ್ನಿಸುತ್ತಿದೆ, ಆದರೆ ಅದಕ್ಕೆ ಯಾವ ಪರಿಹಾರ ಸಾಧನವೂ ಸಿಗುವುದಿಲ್ಲ ಖಾನಿಕಾರರು ದಿನಂಪ್ರತಿ ಎಂಬಂತೆ ಹೆಚ್ಚುತ್ತಿದ್ದಾರೆ. ಸಾಮಾಜಿಕ ಜೀವನವು ಅನ್ಯನಸ್ತಿತವಾಗಿದೆ ಹಿಂದೆ ಪ್ರಾದೇಶಿಕ ಯುದ್ಧಗಳಾಗಿದ್ದಂತವು ಈಗ ವಿಶ್ವ ಸಮರವಾಗಿ ಮಾರ್ಪಟ್ಟಿವೆ. ಕಳವಳದಿಂದ ಮನುಷ್ಯ ಕಂಗಾಲಾಗಿ ಈ ಅನಿಷ್ಟಗಳ ಕಾರಣವನ್ನು ತಿಳಿಯದವನಾಗಿದ್ದು ಅವುಗಳನ್ನು ಮಕ್ಕೆ ಹೇಗೆ ಸುಧಾರಿಸಬಹುದೆಂಬ ಚಿಂತೆಯಲ್ಲಿದ್ದಾನೆ ಶಿಕ್ಷಣ, ಸಾಮಾಜಿಕ ಸುಧಾರಣೆಗಳು ಮತ್ತು ಇತರ ಅನೇಕ ವಿಧಾನಗಳನ್ನು ಪ್ರಯೋಗಿಸಿಯೂ ನೋಡಲಾಗಿದೆ ಎಲ್ಲವೂ ನಿಷ್ಫಲವಾಗಿವೆ ಕೆಲವೊಂದು ಸಲ ಸಮಾಜದ ಕದಡಿದ ಆತ್ಮಕ್ಕೆ ನೆಮ್ಮದಿಕೊಡಲು ಧರ್ಮದ ನುರಿಹೊಗುನರು ಆದರೂ ಅದರಡಿಯಲ್ಲೂ ಕೈಸ್ತಿದೊರೆಯದು ಧಾರ್ಮಿಕ ಆಚಾರವಿಧಿಗಳು ಮನುಷ್ಯನ ಸಮಸ್ಯೆಗಳನ್ನೂ ಇನ್ನಷ್ಟು ತೀರ್ವಗೊಳಿಸಿ ಅವನನ್ನು ಮತ್ತಷ್ಟು ವಿಶ್ವಾಸಾಂಧನಸ್ಸಾಗಿಯೂ ಆತ್ಮಘಾತಕನನ್ನಾಗಿಯೂ ಮಾಡುತ್ತವೆ ಧರ್ಮದ ಹೆಸರಲ್ಲಿ ಕಪಟಿಗಳೂ ಮೋಚಕರೂ ಹೆರೆಯುವುದನ್ನು ನಾವು ಕಾಣುತ್ತೇವೆ

ಮಗುವಿನ ಕಡೆ ನೋಡಿರಿ

ಜಗತ್ತಿನ ಈ ಎಲ್ಲ ದಾಂಧಲೆ, ಗೋಳನ ಕುರಿತಾಗಿ ಈಗಲಾದರೂ ಸ್ವಲ್ಪ ಪುನರಾಲೋಚಿಸಿ ಅದರ ನರಳ ವಿಕೆಯ ಕಾರಣಗಳನ್ನು ಕಂಡು ಹಿಡಿಯುವುದು ಮುಕ್ತವಲ್ಲವೆ? ನಾವು ಮಕ್ಕಳ ಕಡೆಗೆ ನೋಡೋಣ ಅದೇ ಮನುಷ್ಯನ ತಂದೆಯಾಗಿದೆ ಮುಂದೆ ಜೀವನಕ್ಕೆ ಶ್ರೇಯಸ್ಸನ್ನುಂಟುಮಾಡುವ ಎಲ್ಲಾ ಶಕ್ತಿಗಳೂ ಅದರಲ್ಲೇ ಹುದುಗಿವೆ. ನಾವವನನ್ನು ಅಲಕ್ಷಿಸದರೋಣ. ಅವನು ವಿಶ್ವ ರಥದ ಗಾಲಿಯಾಗಿದ್ದಾನೆ. ನಾವದನ್ನು ಸನ್ಮಾನಿಸೋಣ. ಮಾನವಕೋಟಿಗೆ ಮಗುವೊಂದು ಭೂಷಣಪ್ರಾಯವಾದುದು. ಅದು ಸಕಲ ಗೌರವಾಸ್ಪದವೂ ಆಗಿದೆ. ಮಗುವನ್ನು ತಿಳಿಕೊಳ್ಳದಿದ್ದರೆ ನಾವು ಈ ಅತ್ಯದ್ಭುತ ವಿಶ್ವನನ್ನಾಗಲಿ ಅದರ ಕರ್ತೃವನ್ನಾಗಲಿ ತಿಳಿಕೊಳ್ಳಲಾರೆವು.



ದೀರ್ಘಕಾಲದ ಕೆಮ್ಮು ಇನ್‌ಫ್ಲುಯೆಂಜಾ ಮತ್ತು ಶೀತಕ್ಕೆ ಪೆಪ್ಸು ಅಗತ್ಯ

ರುಚಿಕರವಾದ ಪೆಪ್ಸಿನಿಂದ ಒಂದು ತರದ ಔಷಧೀಯ ಎಸೆನ್ಸು ನೀವು ಗಾಳಿಯನ್ನು ಸೇದುವಾಗ ಅದರೊಂದಿಗೆ ಸೇರುವುದು ಅದು ಶ್ವಾಸಕೋಶವನ್ನು ಸೇರಿಯಾನತ್ಮಕರದ ಕಿಣಿಕೀಟಗಳನ್ನು ನಾಶ ಪಾಡಿ ಎಲ್ಲಾ ತರದ ಬಾಧೆಯನ್ನು ನಿವಾರಿಸುವದು

PEPS

ವಿಷಹಾರಿ ಎದೆ ಮತ್ತು ಗಂಟಲು ಜೇನೆಯ ಮಾತ್ರೆಗಳು

ಪ್ರಯಾಣಿಕರಿಗೆ ವಿಶೇಷ ಸೂಚನೆ

ಮದುವೆ, ಮುಂಜಿ, ಇತ್ಯಾದಿ ಸಮಾರಂಭಗಳಿಗೆ ಸ್ಪೆಶಲು ಬಸ್ಸು ಸರ್ವಿಸು ಅಪೇಕ್ಷಿಸುವವರು ತಮ್ಮ ಸಮಾರಂಭಕ್ಕೆ ಕನಿಷ್ಠ 20 ದಿವಸವಾದರೂ ಇರುವ ಮುಂಚಿತವಾಗಿಯೇ ಸ್ಪೆಶಲ್ ಬಸ್ಸಿನ ಏರ್ಪಾಡಿನ ಬಗ್ಗೆ, ಈ ಕೆಳಗೆ ಕಾಣಿಸಿದವರಿಗೆ ಮನವಿಮಾಡಿಕೊಳ್ಳುವುದು ಸ್ಪೆಶಲು ಬಸ್ಸು ಸರ್ವಿಸುಗಳು ಓಡಿಸಬೇಕಾದ್ದೆ, ಕೊಯಮುತ್ತೂರಲ್ಲಿರುವ ಸೆಕ್ರಾರಿ R. T O ರವರು ಪರ್ಮಿಟ್ ಮಾಡಿ, ಅದು ಕೂಡಾ ಗ್ಯಾಸು ಬಸುಗಳಿಂದಲೇ ಓಡಿಸಬೇಕಾಗಿ ನಿರ್ಭಂದವಿರುವ ಹುಳುಮಿರುವುದರಿಂದ, ಏರ್ಪಾಡಿಗೆ ಸಾಕಷ್ಟು ಸಮಯವಿಲ್ಲದಿದೆ ಸ್ಪೆಶಲು ಸರ್ವಿಸು ಸಾಧ್ಯವಿಲ್ಲೆಂದು ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
22-12-48

ಜೊಂಟ್ ಮೆನೇಜರ್ಸ್,
ದಿ ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ.
ಮತ್ತು
ದಿ ಜೊಂಟ್ ಬುಕ್ಕಿಂಗ್ ಆಫೀಸು ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	. . . .	Rs. 25,00,000
Capital Issued & Subscribed	. . .	Rs. 20,00,000
Capital Paid up	. . . . .	Rs. 19,99,800
Reserves	. . . . .	Rs. 8,90,000

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಜೇಳು ವಿಷಮುಂತಾದ ಬೇನೆ, ವಕ್ಕವಾತ, ಮೊಡಿಮೆ ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕೆಂಪೆನಿಯಲ್ಲಿ ದೊರೆಯುವುದು

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಸ್ಥಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾಯಿ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: **Maharaja Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ವಿಶೇಷ ಔಷಧಿ. ಗರ್ಭಕೋಶದ ವಿವಿಧ ಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡಿಮೆಗೊಳಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮಹಾರಾಜಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ಶುಕ್ರವಾರ 24—6—1949 [ಸಂಚಿಕೆ 25]

ಬೌದ್ಧರ ಬ್ರಹ್ಮದೇಶದಲ್ಲಿ ಅಧಿಕಾರಕ್ಕಾಗಿ ಬಡಿದಾಟ

ಅಲ್ಲಿನ ದಂಗೆಗಾರರ ಐದು ಪಂಗಡಗಳು

ಹಿಂದೂಸ್ಥಾನ ಪಾಕಿಸ್ತಾನಗಳಿಗೆ ಅಧಿಕಾರವನ್ನು ಸ್ಥಾನಾಂತರಗೊಳಿಸಿ ಬ್ರಿಟಿಷ್ ಶಾಸಕೀಯ ಕೀರ್ತಿಗೆ ಪಾತ್ರವಾಗಿರುವ ದಾದರೆ ಬರ್ಮಾದಲ್ಲಿ ಅದು ಸಂಪೂರ್ಣ ಅಯಶಸ್ವಿಯಾಯಿತೆಂದು ಒಪ್ಪದೆ ನಿರ್ವಾಹವಿಲ್ಲ. ಈಗ ಆ ಇರಾವತೀ ನದಿಯ ದೇಶದಲ್ಲಿ ಸಶಸ್ತ್ರವಾದ ಐದು ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಹೆಣಗಾಡುತ್ತಿವೆ ಈ ಪಕ್ಷಗಳ ಉಪ ಮುಖಂಡರೆಂದು ತಾವು ಪ್ರಭಾನಿತರಾಗಿರುವ ಕಡೆಗಳಲ್ಲೆಲ್ಲ ಸಣ್ಣಪುಟ್ಟ ಅಧಿಕಾರ ಕ್ಷೇತ್ರಗಳನ್ನು ಕಲ್ಪಿಸಿ ಸರ್ವಾಧಿಕಾರ ನಡೆಸುತ್ತಿರುವರು

ಕಳೆದ ಆಗಸ್ಟ್ ತಿಂಗಳಿಂದ ಬರ್ಮಾದ ರೈಲು ವ್ಯವಸ್ಥೆಯು ಅಸ್ತವ್ಯಸ್ತವಾಗಿದೆ ಇರಾವತಿಯ ದೀರ್ಘ ಸಾರಿಗೆ ಮಾರ್ಗದಲ್ಲಿ ಹಡಗಗಳು ಸರಿಯಾಗಿ ಚಲಾವಣೆಯಾಗುತ್ತಿಲ್ಲ ಅಲ್ಲಿ ವ್ಯಾಪಾರ ವಹಿವಾಟುಗಳು ಸ್ವಲ್ಪತೆಯನ್ನೇ ತಳೆದಿವೆ ವಿಶೇಷವಾಗಿ ಜಗತ್ತಿಗೆ ಅವಶ್ಯವಾದ ಸಾಗುವಾನಿ ಮರ ಮಟ್ಟುಗಳೂ, ಎಣ್ಣೆ ಅಕ್ಕಿಗಳೂ ಸಿಗದಂತಾಗಿದೆ.

ಅಲ್ಲಿನ ಅನೇಕ ಪ್ರದೇಶಗಳಲ್ಲಿ ಈಗ ಪೋಲೀಸ್ ಸಿಬಂದಿಯಿಲ್ಲ, ನ್ಯಾಯಾಲಯಗಳಿಲ್ಲ ಹೀಗಾಗಿ ಕಳ್ಳಕಾಕರು ದರೋಡೆಗಾರರು ಹಿಂದಿನ ಕಾಲವು ಪುನರ್ ಪ್ರಾಪ್ತಿಯಾಯಿತೆಂದುತ್ಸವದಿಂದ ಮೆರೆಯುತ್ತಿದ್ದಾರೆ.

ಸ್ವಾತಂತ್ರ್ಯ ದಾನ

ಒಂದು ಕಾಲದಲ್ಲಿ ಬ್ರಿಟಿಷರ ಯೋಜನೆಯೇ ಬೇರೆಯಿತ್ತು. ಹತ್ತು ವರ್ಷಗಳ ತನಕ ಕೇಂದ್ರ ಅಧಿಕಾರ ಸೂತ್ರಗಳನ್ನು ಹಿಡಿದುಕೊಂಡಿರುವುದು. ಆ ಅವಧಿಯಲ್ಲಿ ಬರ್ಮಿಯರನ್ನು ಸ್ವಾತಂತ್ರ್ಯಕ್ಕೆ ಹೊಣೆಗೆ ಸಿದ್ಧಗೊಳಿಸುವುದು. ಮತ್ತು ಆ ನಂತರವೇ ಸಂಪೂರ್ಣ ಅಧಿಕಾರವನ್ನು ಸ್ಥಾನಾಂತರಿಸುವುದು. ಆದರೆ ಈ ಯೋಜನೆಯನ್ನೂ ಬಿಡಬೇಕಾದ ಒತ್ತಾಯದ ಪ್ರಸಂಗವು ಬಂತು-ಜನವರಿಯರಂದು ಬರ್ಮವು ಸಂಪೂರ್ಣ ಸ್ವತಂತ್ರವಾಯಿತು.

ಕಳೆದ ಯುದ್ಧಾಂತ್ಯಕಾಲಕ್ಕೆ ಬರ್ಮದ ವಿವಿಧ ರಾಜಕೀಯ ಪಕ್ಷಗಳವರು ಸೇರಿ ಫೆಸಿಸ್ಟ್ ವಿರೋಧ ಹೋರಾಟ ಸಂಘವೊಂದನ್ನು ಸ್ಥಾಪಿಸಿದರು. ಇದರ ಮೂಲ ಸೂತ್ರಧಾರಿಯು ಕಮ್ಯುನಿಸ್ಟ್ ಪ್ರಭಾವದಾಗಿತ್ತು. ಆದರೆ ಇದರ ಪ್ರಭಾವವು ಹೆಚ್ಚುತ್ತಲೇ ಮಿಲಿಟರಿತ್ವವು ರಾಷ್ಟ್ರೀಯವಾದಿಗಳ ಕೈಗೆ ಹೋಯಿತು ಈ ಪಕ್ಷವು ಶಸ್ತ್ರ ಅಭಿವೃದ್ಧಿ ಹೊಂದಿ ಸ್ವಾತಂತ್ರ್ಯ ದೊರೆತೊಡನೆ ಪ್ರಥಮ ಸರಕಾರವನ್ನು ಸ್ಥಾಪಿಸುವ ಭಾಗ್ಯ ಅವರಿಗೆ ಸಿಕ್ಕಿತು

ಪ್ರಾರಂಭದಿ ದಲೇ ಹೊಸ ಸರಕಾರದ ಧೋರಣೆಯು ಉಗ್ರ ಸಮಾಜವಾದದ್ದೇ ಆಗಿತ್ತು. ಆಂಗ್ ಸೇನರ ಕೊಲೆಯ ನಂತರ ಧ್ಯೇಯವಾದಿಯೂ ಕರ್ತವ್ಯಜ್ಞಾನಿಯೂ ಆದ ಧಾಕಿನ್ ನು ಅವರು ಬರ್ಮಾದ ಮುಖ್ಯ ಪ್ರಧಾನರಾದಾಗ ಆ ಧೋರಣೆಯು ಮತ್ತಷ್ಟು ಒಲಗೊಂಡಿತು ಇವರು ಒಂದೇ ದಿನದಲ್ಲಿ ದೇಶದ ಅನೇಕ ಪ್ರದೇಶಗಳನ್ನು "ರಾಷ್ಟ್ರೀಕರಿಸಿದರು" ಅಲ್ಲಿನ ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷವೂ ಇರಲಿಲ್ಲ

ಅಹಿಂಸಾತ್ಮಕ ಹೋರಾಟದ ವಿಚಿತ್ರ ಮಾದರಿ

ಕಾರೆನ್ನರು ಹೊಸ ಸರಕಾರದ ಕಾಲಿಗೊಂದು ಮುಳ್ಳಾದರು. ಈ ಜನರು ಅಚ್ಚ ಒರ್ಜಿಯರಿಂದ ನಾಡು, ನುಡಿ, ನುಡಿ, ನೋಟುಗಳಲ್ಲಿ ತೀರ ಭೇರೆಯವರಾಗಿರುವರು ಆಗಾಧ ಸೈನಿಕಶಕ್ತಿಯ ಗುಣಗಳೂ ಅವರಲ್ಲಿವೆ ತಮ್ಮ ಈ ಪ್ರತ್ಯೇಕತೆಯ ವಿಷಯ ಕಾರೆನ್ನರು ತುಂಬಾ ಅಜ್ಞಾನಿಗಳಾದ್ದು ತಮಗೊಂದು ಪ್ರತ್ಯೇಕ 'ಸ್ಥಾನ'ವನ್ನು ನಿರ್ಮಿಸಿಕೊಳ್ಳಲು ಸಿದ್ಧರಾಗಿ ಯುದ್ಧಕ್ಕಿಳಿದರು.

ಕಲಹದ ಕಾರಣ

ಒಂದು ವೇಳೆ ಕಾರೆನ್ನರೆಲ್ಲರೂ ಪೂರ್ವ ಬರ್ಮದ ಯಾವುದಾದೊಂದೇ ನ್ಯಾದೇಶ ದಲ್ಲಿದ್ದಿದ್ದಾದರೆ ಸಮಸ್ಯೆಯು ತುಂಬಾ ಸರಳವಾಗುತ್ತಿತ್ತು. ಆದರೆ ಅವರು ಬ್ರಿಸ್ಸಿನ್ ಮತ್ತು ಟೆನಸ್ಸಿರಿನ್ ಮೊದಲಾದ ದಕ್ಷಿಣ ಭಾಗಗಳಲ್ಲೂ ಹರಡಿಕೊಂಡಿದ್ದು ಆ ಪ್ರದೇಶಗಳೆಲ್ಲವೂ ತಮ್ಮ ಆಧಿನವಾಗಬೇಕೆಂದು ಕೇಳಿಕೆಯನ್ನು ಮುಂದೊತ್ತಿದ್ದಾರೆ

"ಕೆಂಪು" ಮತ್ತು "ಬಲ" ಧ್ವಜದ ಕಮ್ಯುನಿಸ್ಟರೆಂಬ ಎರಡು ಪಂಗಡದವರು ಬರ್ಮದಲ್ಲಿನ ಐದು ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಇವ್ವರು. ಇದರಲ್ಲಿ 'ಬಿಳಿ' ಕಮ್ಯುನಿಸ್ಟರು ಮೊದಮೊದಲು ಶಾಂತಿಯುಕ್ತ ವಿಧಾನಗಳಿಂದ ತಮ್ಮ ಗುರಿಸಾಧಿಸುವವರಾಗಿದ್ದರು. ಆದರೆ ಆಂಗ್‌ಸೇನರು ಅವರನ್ನು ತಮ್ಮ ಫೆಸಿಸ್ಟ್ ವಿರೋಧ ಸಂಘದಿಂದ ಹೊರತಳ್ಳಿದ ನಂತರ ಅವರು ಉಗ್ರತೆಯನ್ನು ತಾಳಿದರು.

1948ರ ಮಧ್ಯಭಾಗದಲ್ಲಿ ಕಾರೆನ್ನರ ಕಾರುಬಾರು ತೀಕ್ಷ್ಣತೆಯನ್ನು ತಳೆಯಿತು. ಎಲ್ಲೆಡೆಯಲ್ಲೂ ಶಾಂತಿಸ್ಥಾಪಕರು ಕುಸಿದು ಬೀಳುವಂತಾಯಿತು. ಮೊದಲು ದೇಶದಲ್ಲಿ ತಲೆಯೆತ್ತಿದ ಪುಂಡ ದರೋಡೆಗಾರರ

(ಎನೇ ಪುಟ-ನೋಡಿ)

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬ್ಬಾಯಿ 1

ಮೂಲಧನ (ತೆತ್ತದ್ದು) ರೂ 10,00,000

ಜೀವವಿಮೆಯ ಫಂಡು . ರೂ. 12,00,000 (ಮಿಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ಸಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ 5–0 0ರಂತೆ ರಿವರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5–0–0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನೂ, ಆಡಳಿತ ಮಂಡಳಿಯನ್ನೂ ಅಭಿನಂದಿಸುತ್ತೇನೆ. ಅವರ ದೂರದರ್ಶಕತೆದ್ದ ಸವುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಏಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವದೆಂದು ಹೇಳುತ್ತೇನೆ.

ವಿ. ಎಚ್. ವೋರಾ, F. I. A.

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ವಿಜಸ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಾಕುಮಾರ್ ಕೂಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

THE CANARA BANKING CORPORATION LTD.

Incorporated in British India)

Estd: 1906.

Head Office: UDIPI, South India.

Capital Authorised	. . .	Rs. 25,00,000
Capital Issued & Subscribed	. . .	Rs. 20,00,000
Capital Paid up	. . . . .	Rs. 19,99,800
Reserves	. . . . .	Rs. 8,90,000

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾಯಿ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with **seleteed ingredients** under the **supervision** of the **experienced staff.** A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara.

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಖಾಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡಿಗಟ್ಟುವುದು. ಬಂಜೆತನವನ್ನು ಕೊಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ಕಾರ್ಕಳ 24—6—1949 [ಸಂಚಿಕೆ 25]

ಬೌದ್ಧರ ಬ್ರಹ್ಮದೇಶದಲ್ಲಿ ಅಧಿಕಾರಕ್ಕಾಗಿ ಬಡಿದಾಟ

ಅಲ್ಲಿನ ದಂಗೆಗಾರರ ಐದು ಪಂಗಡಗಳು

ಹಿಂದೂಸ್ತಾನ ಪಾಕಿಸ್ತಾನಗಳಿಗೆ ಅಧಿಕಾರವನ್ನು ಸ್ಥಾನಾಂತರಗೊಳಿಸಿ ಬ್ರಿಟಿಸ್ರು ಶಾಶ್ವತೀಯ ಕೀರ್ತಿಗೆ ಪಾತ್ರವಾಗಿರುವ ದಾದರೆ ಬರ್ಮಾದಲ್ಲಿ ಇದು ಸಂಪೂರ್ಣ ಅನುಶಸ್ಥಿಯಾಯ ತೆಂಧು ಒಪ್ಪದೆ ಸರ್ವಾಹಪಿಲ್ಲ ಈಗ ಆ ಇರಾವತಿ ನದಿಯ ದೇಶದಲ್ಲಿ ಸಶಸ್ತ್ರರಾಂದ ಏದು ರಾಜಕೀಯ ಪಕ್ಷಗಳ ಅಧಿಕಾರಕ್ಕಾಗಿ ಹೆಣಗಾಡುತ್ತಿವೆ ಈ ಪಕ್ಷಗಳ ಲೆಪ್ಪ ಸಿಂಡಿಂಟಾವುಪ್ಪಳ ವಿತಾಗಿರುವ ಕಡೆಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಅಧಿಕಾರ ಕ್ಷೇತ್ರಗಳನ್ನು ಕಲ್ಪಿಸಿ ಸರ್ವಾಧಿಕಾರ ನಡೆಸುತ್ತಿರುವರ

ಕಳೆದ ಆಗಸ್ಟ್ ತಿಂಗಳಿಂದ ಏರ್ಪಾದ ರೈಲು ವ್ಯವಸ್ಥೆಯೂ ಅಸ್ತವ್ಯಸ್ತವಾಗಿದೆ ಇರಾವದಿಯ ದೀರ್ಘ ಸಂಗ ಮಾರ್ಗದಲ್ಲಿ ಹಡಗಗಳು ಸರಿಯಾಗಿ ಚಲಾವಣೆಯಾಗುತ್ತಿಲ್ಲ ಅಲ್ಲಿ ವ್ಯಾಪಾರ ವಹಿವಾಟುಗಳು ಸ್ಬಬ್ದತೆಯುನ್ನೇ ತಳೆದಿವೆ ಪರಿಣಾಮವಾಗಿ ಜಗತ್ತಿಗೆ ಅವಶ್ಯವಾದ ಸಾಗುವಾಣಿ ಮರ ಮಟ್ಟುಗಳೂ, ಎಣ್ಣೆ ಅಕ್ಕಿಗಳೂ ಸಿಗದಂತಾಗಿದೆ

ಅಲ್ಲಿನ ಅನೇಕ ಪ್ರದೇಶಗಳಲ್ಲಿ ಈಗ ಪೋಲೀಸ್ ಸಿಬಂದಿಯಿಲ್ಲ, ನ್ಯಾಯಾಲಯಗಳಿಲ್ಲ ಹೀಗಾಗಿ ಕಳ್ಳಕಾಕರು ದರೋಡೆಗಾರರು ಹಿಂದಿನ ಕಾಲವು ಪುನರ್ ಪ್ರಾಪ್ತಿಯಾಯಿತೆಂದುತ್ಸವದಿಂದ ಮೆರೆಯುತ್ತಿದ್ದಾರೆ

ಸ್ವಾತಂತ್ರ್ಯ ದಾನ

ಒಂದು ಕಾಲದಲ್ಲಿ ಬ್ರಿಟಿಷರ ಯೋಜನೆಯೇ ಬೇರೆಯಿತ್ತು ಹತ್ತು ವರ್ಷಗಳ ತನಕ ಕೇಂದ್ರ ಅಧಿಕಾರ ಸೂತ್ರಗಳನ್ನು ಹಿಡಿದುಕೊಂಡಿರುವುದು. ಆ ಅವಧಿಯಲ್ಲಿ ಬರ್ಮಿಯರನ್ನು ಸ್ವಾತಂತ್ರ್ಯದ ಹೊಣೆಗೆ ಸಿದ್ಧಗೊಳಿಸುವುದು. ಮತ್ತು ಆ ಮೇಲೆಯೇ ಸಂಪೂರ್ಣ ಅಧಿಕಾರವನ್ನು ಸ್ಥಾನಾಂತರಿಸುವುದು. ಆದರೆ ಈ ಯೋಜನೆಯನ್ನೂ ಬಿಡಬೇಕಾದ ಒತ್ತಾಯದ ಪ್ರಸಂಗವು ಬಂತು-ಜನವರಿಯರಂದು ಬರ್ಮವು ಸಂಪೂರ್ಣ ಸ್ವತಂತ್ರವಾಯಿತು.

ಕಳೆದ ಯುದ್ಧಾಂತ್ಯಕಾಲಕ್ಕೆ ಬರ್ಮದ ವಿವಿಧ ರಾಜಕೀಯ ಪಕ್ಷಗಳವರು ಸೇರಿ ಫೆಸಿಸ್ಟ್ ವಿರೋಧ ಜೆ ಎಂಬ ಸಂಘವೊಂದನ್ನು ಸ್ಥಾಪಿಸಿದರು ಇದರ ಮೂಲ ಸ್ಫೂರ್ತಿಯೂ ಕಮ್ಯುನಿಸ್ಟ್ ಪಕ್ಷಾಪದಾಗಿತ್ತು ಆದರೆ ಇದರ ಪೃಥಿಂವವ್ವ ಜೆಟ್ಟಿತ್ವವೆಲ್ಲಾ ಥಕಿನ್ ನುಗ್ರ ಎಂಬವನಲ್ಲಿಯೇ ಇದ್ದಿತ್ತು. ಈ ಥಕಿನ್ ನುಗ್ರ ಎಂಬವನು ಬರ್ಮದ ಪ್ರಧಾನಿಯಾಗಿದ್ದಾನೆ ಅಲ್ಲಿನ ಪ್ರಸ್ತುತ ಸರಕಾರವನ್ನು ಸ್ಥಾಪಿಸಿರುವ ಭಾಗ್ಯ ಅವರಿಗೆ ಸಿಕ್ಕಿತು

ಪ್ರಾರಂಭದಿಂದಲೇ ಹೊಸ ಸರಕಾರದ ಘೋರವೈರಿಯು ಉಗ್ರ ಸಮಾಜವಾದಿಯೇ ಆಗಿತ್ತು. ಆ ಗ್ಲೆನ್ ಕೊಲೆಯ ನಂತರ ಸೈಮನ್ನಾಟಿಯೂ ತತ್ಪಜ್ಞಾಸಿಯೂ ಆದ ಥಕಿನ್ ನೂ ಅನೇಕ ಬರ್ಮದ ಮುಖ್ಯ ಪ್ರಧಾನರಾದಾಗ ಆ ಘೋರಕೃಯು ಮತಷ್ಟು ಬಲಗೊಂಡಿತು. ಇವರು ಒಂದೇ ದಿನದಲ್ಲಿ ದೇಶದ ಅನೇಕ ಪ್ರದೇಶಗಳನ್ನು "ರೆಪ್ರಿಸ್ಟಿಕರಿಸಿದರು" ಅಲ್ಲಿನ ಪಾರ್ಲಿಮೆಂಟಿನಲ್ಲಿ ತೀವ್ರ ವಿರೋಧ ಪಕ್ಷವೂ ಇರಲಿಲ್ಲ

ಕಾರ್ಮಿಕರು ಹೊಸ ಸರಕಾರದ ಕಾಲಿಗೆಂಡು ಮುಳ್ಳಾದರು ಈ ಜನರು ಅಚ್ಚು ಬರ್ಮಿಯರಿಂದ ನಾಡು, ನುಡಿ, ನುಡಿ, ನೋಟಗಳಲ್ಲಿ ತೀರ ಭೇದಿಯವರಾಗಿರುವರು ಅಗಾಧ ಸೈನಿಕಶಕ್ತಿಯೇ ಗುಣಗಳೂ ಅವರಲ್ಲಿವೆ ತಮ್ಮ ಈ ಪ್ರತ್ಯೇಕತೆಯು ಬಿಷಯ ಕಂಬೆಸ್ಸರು ತ ವಾ ಅಜ್ಞರಾಗ್ಗಿನ್ನು ತಮಗೊಂದು ಪ್ರತ್ಯೇಕ ಸ್ಥಾನವನ್ನು ಸರ್ಮಿಸಿಕೊಳ್ಳಲು ಸಿದ್ಧರಾದ ಯುಕ್ತರಾಗಿರ್ಲಿಲ್ಲ.

ಕಲಹದ ಕಾರಣ

ಒಂದು ವೇಳೆ ಕಂಬೆಸ್ಸರನ್ನೂ ಪೂರ್ವ ಬರ್ಮದ ಬೂಪ್ರದಾದರೊಂದೆ ಪ್ರದೇಶದಲ್ಲಿದ್ದ ಪಕ್ಷದಲ್ಲಿ ಸಮಸ್ಯೆಯು ತುಂಬಾ ಸುಳವಾಗುತಿತ್ತು ಆದರೆ ಅವರು ಬೆಸ್ಸಿನ್ ಮತ್ತು ಟೆನಿಸ್ಸರಿನ್ ಮೊದಲಾದ ದಕ್ಷಿಣ ಭಾಗಗಳಲ್ಲೂ ಹರಡಿಕೊಂಡಿದ್ದು ಆ ಪ್ರದೇಶಗಳೆಲ್ಲವೂ ತಮ್ಮ ಆಧೀನವಾಗಬೇಕೆಂದು ಕೇಳಿಕೆಯನ್ನು ಮುಂದೊತ್ತಿದ್ದಾರೆ

"ಕೆಂಪು" ಮತ್ತು "ಬಿಳಿ" ಧ್ವಜದ ಕಮ್ಯುನಿಸ್ಟರೆಂಬ ಎರಡು ಪಂಗಡದವರು ಬರ್ಮದಲ್ಲಿನ ಐದು ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಇಬ್ಬರು ಇದರಲ್ಲಿ 'ಬಿಳಿ' ಕಮ್ಯುನಿಸ್ಟರು ಮೊದಮೊದಲು ಶಾಂತಿಯುಕ್ತ ವಿಧಾನಗಳಿಂದ ತಮ್ಮ ಗುರಿಸಾಧಿಸುವವರಾಗಿದ್ದರು ಆದರೆ ಆಂಗ್‌ಸೇನರು ಅವರನ್ನು ತಮ್ಮ ಫೆಸಿಸ್ಟ್ ವಿರೋಧ ಸಂಘದಿಂದ ಹೊರತಳ್ಳಿದ ನಂತರ ಅವರು ಉಗ್ರತೆಯನ್ನು ತಾಳಿದರು.

1948ರ ಮಧ್ಯಭಾಗದಲ್ಲಿ ಕಾರೆನ್ನರ ಕಾರುಬಾರು ತೀಕ್ಷ್ಣತೆಯನ್ನು ತಳೆಯಿತು. ಎಲ್ಲೆಡೆಯಲ್ಲೂ ಶಾಂತಿಶಿಸ್ತುಗಳು ಕುಸಿದು ಬೀಳುವಂತಾಯಿತು. ಮೊದಲು ದೇಶದಲ್ಲಿ ತಲೆಯೆತ್ತಿದ ಪುಂಡ ದರೋಡೆಗಾರರ

(ತನೀ ಪುಟ ನೋಡಿ)

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ

ಮೂಲಧನ (ತೆತ್ತದ್ದು) ರೂ 10,00,000

ಜೀವವಿಮೆಯ ಫಂಡು . ರೂ. 12,00,000 (ಮಿಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ಸಿಕ್ಕಿ	ಆರಂಭದಲ್ಲಿ
ಖರ್ಚು	9%	17%
ಬಡ್ಡಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ 5-0 0ರಂತೆ ರಿನರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನೂ. ಆಡಳಿತೆ ಮಂಡಳಿಯನ್ನೂ ಅಭಿನಂದಿಸುತ್ತೇನೆ. ಅವರ ದೂರದರ್ಶತದ್ದ ಸಪೂರ್ಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು ಈ-ಕಂಪನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವದೆಂದು ಹೇಳುತ್ತೇನೆ.

ವಿ. ಎಚ್ ವೋರಾ, F. I. A

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ವಿಜಸ್ಸಿ ಬಗ್ಗೆಯ ಆರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು.

ಈ ಕಳಗಿನ ವಿಳಾಸಕ್ಕೆ ಬರೆಯಿರಿ.

ಭೂಷಣಕುಮಾರ್ ಕೂಳೂರ್‌ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ವಿಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

(ಇತರೇ ಪುಟದಿಂದ)

ರಕ್ಷೋಧೆ ಸಂರಕ್ಷಣೆಗಾಗಿ ಸಶಸ್ತ್ರಗಳಾದ ಕಾರಿನ್ನರು ಕ್ರಮೇಣ ಜೆಟ್ಟಿಚ್ಚು ತವನೇ ಸಂಗೆಯೇಳಲಾರಭಭಿಸಿದರು, ಇವರನ್ನು ಸಭ್ಚಿಕ್ಕಳು ಕರಣ ಕಾರ್ಯಕ್ರಮಗಳನ್ನು ನರಿಸಿಹಾಗೆ ಅವರು ಬ್ಹಿರಂಗವಾಗಿ ದಂಗೆ ಯೆದ್ದರು.

ಬರ್ಮಿಯರು ಸೈನಿಕರಲ್ಲ

ಬರ್ಮ ಸರಕಾರದ ಸೈನಿಕ್ಯವನ್ಯೆಯು ಕರಿಣ ಸಮಸ್ಯೆಯದಾಗಿದೆ. ಕಾರಿನ್ನರನ್ನು ಹತೋಟಿಕ ತರುವ ಪ್ರಯತ್ನದಲ್ಲಿ ಕಾಚಿನ್ನರಿ ಮೊದಲಾದ ಗುಡ್ಡಕಾಡು ಜನರು ಸರಕಾರಕ್ಕೆ ಸಹಾಯನಾಡದಾದರು. ಮತ್ತೆ ಸಾಮಾನ್ಯ ಬರ್ಮದ ಬಯಲು ನಿವಾಸಿಯು ಎಂದೂ ಸೈನಿಕ ಗುಣಲಕ್ಷಣದವನಲ್ಲ.

ಈಗ ಬರ್ಮಿಯರೊಳಗೂ ಮತ್ತು ಕಾರಿನ್ನರೊಳಗೂ ನಡೆಯುವ ಈ 'ಯುದ್ಧ' ದಲ್ಲಿ ಮತ್ತೊಂದು ಅನೈಜಕತೆಯಿದೆ. ಕೆಲವು ವಾರಗಳ ತನಕ ರಂಗೂನಿನ ಹೊರ ಪ್ರದೇಶದಲ್ಲಿ ಹಿಂದು 'ನಾಟಕ ಯುದ್ಧ'ವಾಯಿತು ಸರಕಾರದ ತೋವುಗಳು ಆಗಾಗ್ಗೆ ಗರ್ಜಿಸಿದುದು ಕೇಳಿಬಂತು. ಮತ್ತೆ ಮದ್ದು ಗುಂಡುಗಳ ದಾಸ್ತಾನು ಮುಗಿಯಲು ಅದನ್ನು ವುನಃ ತರಿಸಿಕೊಳ್ಳಲು ಕೆಲಕಾಲ ಸ್ವಚ್ಛತೆಯುಂಟಾಯಿತು ಎರಡು ಕಡೆಗಳಲ್ಲೂ ಸಂಧಾನಿಸಿದ ನಷ್ಟ ಅತ್ಯಲ್ಪವೆ ಆಗಿತ್ತು 'ಯುದ್ಧ' ನಡೆಯುವ ಸ್ಥಳದಲ್ಲಿ ಮೂರು ಮೈಲು ದೂರದ ತೋಟದಲ್ಲಿ ಕುಳಿತುಕೊಂಡದವರಿಗೆ ಎಲ್ಲವೂ ಸುಳ್ಳೆಂದೇ ಭಾಸವಾಗುತಿತ್ತು ಒರ್ವ ತಜ್ಞ ಬರ್ಮಿಯನು "ನಾವು ಯುದ್ಧ ಮಾಡುವಾಗಲೂ ಮುಕ್ಕಳಿಂತೇ ಮಾಡುತ್ತೇವೆ" ಎಂದನು

ಆಂಗ್‌ಸೇನರ ಸ್ವತಂತ್ರ ದಳದಂತಿದ್ದ ಬರ್ಮದ ಜನತಾ ಸ್ವಯಂ ಸೇವಕ ಸಂಸ್ಥೆಯು ಅವರ ಮರಣಾನಂತರ ಪೆಸಿಸ್ಟ್ ವಿರೋಧಕರ ಸಂಸ್ಥೆಂದ ಹೊರಬಂತು ಇಂದು ಸರಕಾರದ ವಿರುದ್ಧ ಹೋರಾಟ ಮಾಡುವ ಪಕ್ಷಗಳಲ್ಲಿ ಈ ದಳವು ಪ್ರಾಮುಖ್ಯದ್ದಾಗಿದೆ

ಈ ಸಂದರ್ಭದಲ್ಲೂ ಬರ್ಮಿಯರ ಬಡೆದಾಟಕ್ಕೆ ರಕ್ತರಂಜಿತ ವರ್ಣನೆಯನ್ನು ಕೊಡಲು ಸಾಧ್ಯವಿಲ್ಲ ಜನತಾ ಸ್ವಯಂ ಸೇವಕ ದಳದವರು ಕೆಲವು ಜಿಲ್ಲೆಗಳನ್ನು ವಶವಡಿಸಿಕೊಂಡಾಗ ಆವ ಹಾನಿಯೆಂದರೆ ಒಬ್ಬನ ಮರಣ, ಒಬ್ಬನಿಗೆ ಕಾಲಿಗೆ ಗುಂಡಿನೇಟು ಕೆಲ ಸಮಯದ ಹಿಂದೆ ಈ ದಳದವರು ಕಮ್ಯುನಿಸ್ಟರ ಸಹಾಯದಿಂದ ಪಾಕಾಕೊ ಪಟ್ಟಣವನ್ನು ಹಿಡಿದಾಗ ಇಷ್ಟು ಹಿಂಸೆ ಕೂಡ ಆಗಲಿಲ್ಲ ಈ ಪಟ್ಟಣ ಹಿಡಿಯುವ ವಿಕೆಯ ಸಂದರ್ಭವೂ ಸಾರಸ್ಯವಾಗಿದೆ ದಳದ ಸಹಾನುಭೂತಿಗಳು ಕೆಲವರು ಪಟ್ಟಣದ ಹೊರಗೆ ಆಗಾಧ ಸೈನ್ಯವು ನಿಂತಿದೆಂಬ ಸುಳ್ಳು ಸುದ್ದಿಯನ್ನು ಹರಡಿದರು. ತಕ್ಷಣ ಸರಕಾರದ ನಗರ ರಕ್ಷಕ ದಳದವರು ಶರಣಾಗತರಾದರು. ಕೂನಿಗೆ ಸತ್ಯಸ್ಥಿತಿಯು ತಿಳಿದಾಗ ದಂಗೆಕಾರರ ಸಂಖ್ಯೆ ನಗರ ಪೋಲೀಸ್ ಪಡೆಗಿಂತ ಎಷ್ಟೊ ಕಡಿಮೆ ಯಾಗಿತೆಂದು ತಿಳಿದುಬಂತು!

ಹೀಗೆ ಬರ್ಮದಲ್ಲಿ ಐದು ಪಕ್ಷಗಳು ಹೋರಾಟದಲ್ಲಿ ತಲ್ಲೀನವಾಗಿವೆ. ಕೆಂಪು ಮತ್ತು ಬಲ ಕಮ್ಯುನಿಸ್ಟರು ಅವ್ಯವಸ್ಥೆಯನ್ನುಂಟು ಮಾಡಲು ಕಂಕಣಬದ್ಧರಾಗಿರುವರು ಕಾರಿನ್ನರು ಭದ್ರತೆಯನ್ನಿಚ್ಛಿಸುವರಾದರೂ ತಮಗೆ ನ್ಯಾಯವಾಗಿ ಸಲ್ಲಬೇಕಾದುದಕ್ಕಿಂತ ಹೆಚ್ಚಾದ ಪ್ರದೇಶಗಳನ್ನು ಕೇಳುವರು. ತನ್ಮಧ್ಯೆ ಫೆಸಿಸ್ಟ್ ವಿರೋಧಿ ಪಕ್ಷದವರೂ ಕೇಂದ್ರ ಅಧಿಕಾರಕ್ಕಾಗಿ ದ್ವಂದ್ವನಡೆ ನುತಿದ್ದಾರೆ

ಆರ್ಥಿಕ ದುಸ್ಥಿತಿ

ಹೆಚ್ಚು ಅಡಿಗೆಯವರು ಸೇರಿ ಪಾಯಸ ಕಹಿಗೈದ್ದಂತೆ ಬರ್ಮದ ಈ ವಿವಿಧ ಪಕ್ಷೀಯರ ಹೋರಾಟದಿಂದ ಅಲ್ಲಿನ ಜನಜೀವನದ ಸ್ಥಿತಿಗತಿಗಳು ಜರ್ಝರಿತವಾಗಿವೆ ಮಂಡಲೆಯಿಂದ ರಂಗೂನಿಗೆ ಬಬ್ಬನು ಒಂದು ಮೋಟಾರು ಲೋರಿ ತುಂಬ ಅಕ್ಕಿ ತರಬೇಕಾದರೆ ಎಳೆಂಟು ಪ್ರದೇಶಗಳ ಸ್ಥಳೀಕ ದುರೀಣರ ವರವಾನಗಿ ಪಡೆಯಬೇಕು ಒಂದು ಕೇಂದ್ರ ಸ್ಥಳದಿಂದ ಇನ್ನೊಂದಕ್ಕೆ ತಲುವುವುದರೊಳಗೆ ಅಲ್ಲಿ ಯಾವ ಪಕ್ಷದ ದುರೀಣನು ಪ್ರಭಾವಿತ ಸ್ಥಾನಕ್ಕೆ ಬರುತ್ತಾನೆಂದು ಹೇಳಲು ಸಾಧ್ಯವಿಲ್ಲ ಪೆಟ್ರೆಗಳು ಅಷ್ಟು ಭರದಿಂದ ಬದಲಾಗುತ್ತವೆ ಇಂದಿನ ಬರ್ಮದಲ್ಲಿ ಇವೆಲ್ಲದರ ವರಿಣಾಮವೇನು? ಎಲ್ಲಾ ಪಕ್ಷಗಳನ್ನು ಸಂಘಟಿಸುವ ಒಬ್ಬ ವ್ಯಕ್ತಿಯು ಅಲ್ಲಿ ಅವತರಿಸಬಲ್ಲನೆ? ಇದು ತನಕ ಈ ಕುರಿತು ಶುಭಲಕ್ಷಣಗಳು ತೋರುವುದಿಲ್ಲ ಪೆಚ್ಚಿನ ಬರ್ಮಿಯರು ಈ ಕುರಿತು ವಿಶ್ವಾಸ ತಾಳುವುದಿಲ್ಲ

ನೀರು, ಬೆಂಕಿ ಮತ್ತು ಇರುವೆಗಳಿಂದ ಹಾಳಾಗದ ಮರದ ಮನೆಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಲು ಹಿಂದೂಸ್ಥಾನ ಸರಕಾರದವರು ಸ್ವೀಡನ್ ದೇಶದ ಒಂದು ವ್ಯಸಿದ್ಧ ಮರಮಟ್ಟಿನ ಸಂಸ್ಥೆಯೊಡನೆ ವ್ಯವಹಾರ ನಡೆಸುತ್ತಿವೆ. ಒಂದೇ ಕೋಣೆಯುರುವ ಮರದ ಹಲಗೆಗಳ ಡೇರೆಗಳನ್ನೂ ತಯಾರಿಸಲಾಗುವುದಂತೆ ಇವನ್ನು ನಿರಾಶ್ರಿತರಿಗಾಗಿ ಉಪಯೋಗಿಸಲಾಗುವುದು

✠



ಚರ್ಮ ವ್ಯಾಧಿಗಳಿಂದ
ಶೀಘ್ರ ಗುಣಹೊಂದಲಿಕ್ಕೆ
ತ್ವರೆಯ ಮುಲಾಮು

ನಿಷ್ಪಕಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ವುನರ್ಪಡಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳಪೀನೆಯನ್ನು ಡಗಿಸುತ್ತಿದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮು
CUTICURA OINTMENT

ಸಮತಾವಾದ ಸೂತ್ರ ಸಾರ

ಸುರೇಶ ವೈದ್ಯರ ಗಣನೀಯ ಗ್ರಂಥ

ಸಮತಾವಾದದ ಕುರಿತು ಸುಸ್ಪಷ್ಟವಾಗಿಯೂ ಸರಳವಾಗಿಯೂ, ಯಾವ ಪಾರಿಭಾಷಿಕ ಶಬ್ದಗಳ ತೊಡಕಿಲ್ಲದಂತೆಯೂ ಬರೆದ ಗ್ರಂಥಗಳಲ್ಲಿ "ಸಮತಾವಾದದ ರೂಪರೇಷೆ" ಎಂಬ ಗ್ರಂಥವು ಅತ್ಯಂತ ಉಪಯುಕ್ತವಾಗಿದೆಂದು ಒಂದು ಪ್ರಮುಖ ಪತ್ರಿಕೆಯು ತನ್ನ ವಿಮರ್ಶೆಯಲ್ಲಿ ಬರೆದಿದೆ.

ಶ್ರೀ ಸುರೇಶ ವೈದ್ಯರು ಗ್ರಂಥಕರ್ತರು ಅವರ ಈ ಗ್ರಂಥವು ಸಾಶ್ವಿಮಾತ್ಯ ಸಮತಾನಾದ ಸಾಹಿತ್ಯದ ಅನುಕರಣೆಯಾಗಿರುವುದಿಲ್ಲ ಭಾರತೀಯ ವರಿಸ್ಥಿತಿಗೆ ಅನುರು ಸಮತಾವಾದದ ಮೂಲ ತತ್ವಗಳನ್ನು ಹೊಂದಿಸಿಕೊಂಡು ವಿವರಿಸಿದ್ದಾರೆ ಅದಕ್ಕನುಸಾರವಾಗಿಯೇ ಈ ಹೊಸ ರಾಜಕೀಯ ತತ್ವವನ್ನು ಅವರು ರೂಪಿಸಿದ್ದಾರೆ

ನಿರೂಪಣ ವಿಧಾನವು ಪ್ರಶ್ನೋತ್ತರ ರೂಪದಲ್ಲಿದೆ ಇದರಿಂದ ಅರ್ಥವು ಚಿತ್ತ ವೊತ್ತುಗುತ್ತದೆ ಸಮತಾದವೆಂದರೇನೆಂದು ಶ್ರೀ ವೈದ್ಯಾರನರು ಹೀಗೆ ಬರೆದಿದ್ದಾರೆ

"ಸನ ತಾವಾದವೆಂದರೆ ಒಂದು ಹೊಸ ಸಮಾಜ ಅದರಲ್ಲಿ ಮಾನವ ಜೀವಿಗಳೆಲ್ಲಾ ಸಮಾನತೆಯಿಂದ ಕಾಣ್ಯಡುವರು ಸಮಾಜದಲ್ಲಿನ ಜಾತಿ ಮತ್ತು ವರ್ಗ (ಶ್ರೀಮಂತ, ಒಡವರೆಂಬ) ಭೇದವನ್ನು ತೆಗೆದು ಹಾಕುವುದು ಅದರ ಗುರಿ ಶ್ರಮ ಜೀವಿಗಳಿಗೆ ಅದು ಸ್ವಾತಂತ್ರ್ಯ ಮತ್ತು ಶ್ರೀಮಸ್ಸಿನ ಭರವಸೆಯನ್ನೆ ಕೊಡುವುದು. ಸಮಾಜದಲ್ಲಿ ಕರುಡ ಕುಂಟ ಮೊದಲಾದ ಅಂಗಹೀನರನ್ನು ಅದು ಸಂರಕ್ಷಿಸಲ್ಬಿಯುಸುತ್ತದೆ ಜೀವನದಲ್ಲಿ ತಮ್ಮಿಂಗದ ಕರ್ತವ್ಯವನ್ನು ಸಲ್ಲಸಿ ನಿವೃತ್ತರಾಗಲಿಚ್ಛಿಸುವರಿಗೆ ಅದು ಆರೈಕೆಯನ್ನು ಕೊಡುತ್ತದೆ

"ಇದು ಸಮತಾವಾದದ ಒಂದು ಅವಲೋಕನ ತಮವಾಡಿ ಫಲವನ್ನುಂಟು ಮಾಡುವವಸಿಗೆ ಸಂತ್ರ ಸಾಮಾಜಿಕ ಅನುಕೂಲತೆಗಳನ್ನು ಪಡೆಯುವ ಹಕ್ಕಿದೆ ಎಂದು ಸಮತಾವಾದವು ನಂಬುತ್ತದೆ. ಅಂಗಾಂಗ ಪರಿಪೂರ್ಣವಾಗಿದ್ದವನೊಬ್ಬನು ಇತರರ ದುಡಿಮೆಯ ಮೇಲೆ ಜೀವಿಸುವಂತಾದರೆ ಅವನಿಗೆ ಸಮಾಜದಲ್ಲಿ ಸ್ಥಾನವಿಲ್ಲ"

ಇಂತಹ ಬದಲಾವಣೆಯನ್ನುಂಟು ಮಾಡಲು ಒಂದು ಕ್ರಾಂತಿಯು ಅವಶ್ಯವೆ? ಇದು ಅತ್ಯಾವಶ್ಯಕವೆಂದು ಶ್ರೀ ವೈದ್ಯರು ಭಾವಿಸುವುದಿಲ್ಲ ಆದರೆ ಕ್ರಾಂತಿಯನ್ನು ತಪ್ಪಿಸಲೂ ಸಾಧ್ಯವಿಲ್ಲ ಇಷ್ಟಿನೆ ಈ ಬದಲಾವಣೆಗಳನ್ನು ಹೇಗೆ ಉಂಟುಮಾಡುವುದು? ಅವರೆನ್ನುತ್ತಾರೆ

"ಸಮತಾವಾದ ಪಕ್ಷದ ಗೊತ್ತುಗುರಿಗಳನ್ನು ಜನತೆಗೆ ತಿಳಿಸುವುದು ಸಮಾಜ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುವ ಆವಶ್ಯಕತೆಗಳನ್ನು ತಿಳಿಸುವುದು. ಮಜೂರ ಸಂಘಟನೆಯನ್ನು ಮಾಡುವುದು ಈಗಿನ ಬಂಡವಾಳಶಾಹಿ ರಾಜ್ಯಘಟನೆಯನ್ನು ಸಮತಾವಾದಶಾಹಿಯಾಗಿ ಪರಿವರ್ತಿಸುವರೆ ಜನತೆಯ ಮನಸ್ಸನ್ನು ಸಿದ್ಧಗೊಳಿಸುವುದು.' ಇದೇ ಸಮಾಜವಾದಿ ಪಕ್ಷವು ತರಲೆಳಿಸುವ ಕ್ರಾಂತಿ.

ಧಾರ್ಮಿಕ ಸ್ವಾತಂತ್ರ್ಯ

ಸಮತಾವಾದವು ಧರ್ಮ ಮತ್ತು ಧಾರ್ಮಿಕ ಆಚಾರ ವಿಚಾರಗಳನ್ನು ಅಳಿಸಿ ಬಿಡುವುದು ಎಂಬ ಕುರಿತು ಗ್ರಂಥಕಾರರ ಈ ಕೆಳಗಿನ ಸುಸ್ಪಷ್ಟ ಭರವಸೆಯನ್ನು ಕೊಡುತ್ತೇರೆ "ಸಮತಾವಾದ ಆಡಳಿತದಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯನಿರುತ್ತದೆ. ಧಾರ್ಮಿಕ ವಿಷಯಗಳು ರಾಜಕೀಯದ ಮೇಲೆ ವರಿಣಾಮ ಮಾಡುವಂತಹದನ್ನು ಸಮತಾವಾದವು ಸಹಿಸದು. ಈ ಸಂಗತಿಗಳಲ್ಲಿ ಸಮತಾವಾದವು ತಾಟಸ್ಥ್ಯದ ಧೋರಣೆಯನ್ನೇ ವಹಿಸಬಯಸುತ್ತದೆ. ಯಾವೊಂದು ನಿರ್ದಿಷ್ಟ ಧರ್ಮನಂಥಕ್ಕೆ ಸೇರಿದವನಿಗೆ ಅನುಕೂಲತೆಗಳಾಗಲಿ ಅನಾನುಕೂಲತೆಗಳಾಗಲಿ ಉಂಟು ಮಾಡಲು ಅದು ಇಚ್ಛಿಸುವುದಿಲ್ಲ"

✠

ಸಿಹಿಸುದ್ದಿ ಸಂಗ್ರಹ

ಭಾಗೋಳಿಕವಾಗಿಯೂ ಭಾಷಾ ದೃಷ್ಟಿಯಿಂದಲೂ ಕೂಜ್‌ಬಿಹಾರ್ ಸಂಸ್ಥಾನವು ಪಶ್ಚಿಮ ಬಂಗಾಳದಲ್ಲಿ ವಿಲೀನಗೊಳಿಸಲ ರ್ಪವಾಗಿದೆಂದು ಅಲ್ಲಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಠರಾವು ನಾಡಿದ್ದು ಇದನ್ನು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಕೇಂದ್ರ ಸರಕಾರಕ್ಕೆ ವಿನ್ನವಿಸಲಾಗಿದೆ

✠

"ರಷ್ಯವು ಸದ್ಯಕ್ಕೆ ಅಮೇರಿಕನೊಡನೆ ಯುದ್ಧಮಾಡಲು ಬಯಸುವುದಿಲ್ಲ"ವೆಂದು ಆಸ್ಟ್ರೇಲಿಯದ ಮುಖ್ಯ ಪ್ರಧಾನ ಚೀಫ್ಲೆಯರು ಒಂದು ಹೇಳಿಕೆಯಲ್ಲಿ ತಿಳಿಸುತ್ತಾರೆ ಆಸ್ಟ್ರೇಲಿಯಕ್ಕೆ ಆಸ್ಯಾದಿಂದ ಶ್ರೀಷ್ಯ ಜಾತ್ಯರ್ಯದ ಕೆಲಸಗಾರರನ್ನು ತರಿಸಿಕೊಳ್ಳಲು ಇದೇ ಸುಸಂದರ್ಭವೆಂದೂ ಅವರು ಸೂಚಿಸಿದರು

✠

ಡಚ್ ಸೈಕಾರನ್ನು ವಿಮಾನ ಯುದ್ಧದಲ್ಲಿ ತರಬೇತಿ ಮಾಡಲು ಒಂದು ಬ್ರಿಟಿಷ್ ಸೈಕ ವಂಡಳವು ಹೆಲೆಂಬಿಗೆ ಹೊಳಿದೆ ಡಚ್ಚರಲ್ಲಿ ಕೆಲವರು ಈ ಕುರಿತ ಪ್ರತಿಭಟನಾತ್ಮಕ ಪ್ರದರ್ಶನಗಳನ್ನು ಮಾಡಿದರು ಅಲ್ಲಿನ ಗೋಡೆಗಳಲ್ಲಿ "ಸಮಗಿಲ್ಲಿ ಬ್ರಿಟಿಷರು ಬೇಕಾಗಿಲ್ಲ"ವೆಂದು ಬರೆದು ಹಾಕಲ್ಪಟ್ಟಿತ್ತು.

✠

ಇತ್ತೀಚೆಗಿನ ಗ್ರಂಥ ಪ್ರಕಟಣೆಗಳಲ್ಲಿ ಲಂಡನಿನ ಒಂದು ಪ್ರಕಟನಾ ಸಂಸ್ಥೆಯವರು ಸಿದ್ಧಗೊಳಿಸಿರುವ 'ವಿಶ್ವಧರ್ಮ ಗ್ರಂಥ'ವೊಂದು ವಿಹಾರಿಗಳ ಗಮನ ಸೆಳೆದಿದೆ ಆದರಲ್ಲಿ ಹಿಂದೂ, ಕ್ರೈಸ್ತ, ಬೌದ್ಧ, ಕನ್‌ಫೂಸಿ, ಯಹೂದಿ, ಇಸ್ಲಾಂ, ಟಾವೊ, ಮತ್ತು ಪಾರಸಿಕ ಧರ್ಮಗ್ರಂಥಗಳಿಂದ ಹೆಕ್ಕಿದ ಧರ್ಮಸೂಕ್ತಗಳು ಇವೆ

✠

ನಾಯಿಯಂತೆ ಬೋಗಳುವ ಒಂದು ತರದ ಜಿಂಕೆಗಳು ಬ್ರಿಟಿಷನ ಅರಣ್ಯಗಳ ಸ್ಥಿನೆಯೆಂಬ ಸಂಗತಿಯು ಪ್ರಾಣಿ ಶಾಸ್ತ್ರಜ್ಞರನ್ನು ಸಮಸ್ಯೆಕ್ಕೊಳವಾಡಿದೆ ಭಯಗೊಂಡಾಗ ಇವು ಬೊಗಳುತ್ತವೆಯಂತೆ.

✠

1949ರ ಮೊದಲ ಮೂರು ತಿಂಗಳಲ್ಲಿ 86,569 ಅಮೇರಿಕನ್ ಮೋಟಾರು ವಾಹನಗಳು ವರದೇಶಗಳಿಗೆ ಕಳುಹಿಸಲ್ಪಟ್ಟಿವೆ.

✠

1950ರಲ್ಲಿ ನೋರ್ವೇ ದೇಶದ ಗಿರಿಕಚ್ಛರು ಕೆಲವರು ಹಿಮಾಲಯ ಪರ್ವತಾರೋಹಣವನ್ನು ಮಾಡುವರು.

✠

ದೇಶವಿದೇಶ ವೃತ್ತವೈವಿಧ್ಯ

ಮೂರನೇ ಯುದ್ಧ ಕೇಂದ್ರ ಚೀನದಲ್ಲಿ

ಅಮೇರಿಕದ ಉದ್ದೇಶ ಮಣ್ಣುಗೂಡಿತು

ಚೀನದ ಘಟನೆಗಳ ಕುರಿತು ವಿನೇಚಿ ಸುಕ್ತಾ ಮೊಸ್ಕೋದ ನ್ಯೂ ಟೈಮ್ಸ್ ಪತ್ರಿಕೆ ಅಮೇರಿಕದ ಉದ್ದೇಶಗಳ ನಿಷ್ಫಲತೆಯನ್ನು ವಿವರಿಸಿದೆ.

"ಚೀನದಲ್ಲಿನ ಆಂತರಿಕ ಪ್ರತಿಗಾಮಿಗಳ ಮತ್ತು ವಿದೇಶಿ ಸಾಮ್ರಾಜ್ಯದ ವಿರುದ್ಧ ಅಲ್ಲಿನ ಪ್ರಜಾಶಕ್ತಿಯು ಉಜ್ವಲ ವಿಜಯಗಳನ್ನು ಹೊಂದಿ ಮುನ್ನಡೆಯುತ್ತಿದೆ ಕೆಲ ಸಮಯದ ಹಿಂದೆ ಅಮೇರಿಕನ್ ವಿಮಾನಗಳು ಪೀಪಿಂಗ್‌ದಿಂದ ಮುಕ್ಡೆನ್ನಿಗೆ ಶಸ್ತ್ರಾಸ್ತ್ರಗಳನ್ನು ಬಿಡುವಿಲ್ಲದೆ ಸಾಗಿಸುತ್ತಿದ್ದವು ಆದರೆ ಜನತಾ ವಿಮೋಚಕ ದಳದವರಿಗೇ ಅಲ್ಲಿ ಜಯಶ್ರೀಯು ಒಲಿದಳು. ಮೂರು ವರ್ಷಗಳ ಸ್ವೈರ್ಯದ ಹೋರಾಟದಿಂದ ಜನತಾ ಸೇನೆಗಳು ಕೊಮಿಟಾಂಗ ಸರಕಾರದ 50 ಲಕ್ಷ ಸೈನ್ಯವನ್ನು ಕಾರ್ಯಹೀನವಾಗಿ ಮಾಡಿದೆ 20 ಕೋಟಿ ಜನಯುಳ್ಳ ಪ್ರದೇಶಗಳನ್ನು ಇವರು ವಿಮೋಚಿಸಿರುವರು.

"ಚೀನದಲ್ಲಿ ಅಂತಃಕಲಹವನ್ನು ಹೆಚ್ಚಿಸಲು ಅಮೇರಿಕವು 600 ಮಿಲಿಯ ಡಾಲರುಗಳನ್ನು ವ್ಯಯಿಸಿದೆಂದು ತಿಳಿದು ಬರುತ್ತದೆ ಸರ್ವವಿಧದಿಂದಲೂ ಕೊಮಿಟಾಂಗ್ ಸರಕಾರಕ್ಕೆ ಬೆಂಬಲ ತೆತ್ತುದು ನಿಷ್ಫಲವಾಗಿದೆ ಮೂರನೇ ಯುದ್ಧಕ್ಕಾಗಿ ದುರ್ಗವಾದ ಸೈನ್ಯಕೇಂದ್ರವನ್ನು ಚೀನದಲ್ಲಿ ಸ್ಥಾಪಿಸುವ ಅಮೇರಿಕದ ಉದ್ದೇಶ ನೂನ್ ಕಿಂಗ್ ಶಿಂಘೈಗಳಲ್ಲಿ ಪತನದ ನಂತರ ಸಂಪೂರ್ಣವಾಗಿ ಕುಗ್ಗಿತು

ಸುಭಾಸ್ ಬೋಸರು ಜೀವಂತವಿದ್ದಾರೆ!

ರೇಡಿಯೊ ಭಾಷಣವನ್ನು ಇತ್ತಿದ್ದಾರೆ?

"ತರುಣ ಭಾರತ" ಎಂಬ ಸಾಪ್ತಾಹಿಕ ಪತ್ರಿಕೆಯಲ್ಲಿ "ನೇತಾಜಿ ಬೋಸರು ಜೀವಂತ ವಿದ್ದಾರೆ" ಎಂಬ ವಿಸ್ಮಯಕರ ಶೀರ್ಷಿಕೆಗಳು ಈಚೆಗೆ ಪ್ರಕಟವಾದುವು ಅದರ ಹೊಸ ದಿಲ್ಲಿ ಬಾತ್ಮಿದಾರರು ಹೀಗೆ ಬರೆದಿದ್ದರು

"ಜೂನ್ 3ರಂದು ಸ್ವಿಜರ್‌ಲೆಂಡಿನ ಬರ್ನ್ ರೇಡಿಯೊವು ಸುಭಾಸರು ಜೀವಂತ ವಿದ್ದಾರೆಂದು ಸಾರಿತು

"ಅದೇ ದಿನ ನೇತಾಜಿಯವರ ಸಹೋದರರಾದ ಶ್ರೀ ಸರತ್ ಬೋಸರು ಅದೇ ರೇಡಿಯೋ ಕೇಂದ್ರದಿಂದ ಒಂದು ಭಾಷಣ ಮಾಡಿದರು ಅವರಲ್ಲದು ತಾನು ನೇತಾಜಿಯೊಡನೆ ಜುಲ್ಯಾ ತಿಂಗಳಾರಂಭದೊಳಗೆ ಭಾರತಕ್ಕೆ ಬರುವೆನೆಂದೂ, ಭಾರತದ ವಿದೇಶ ರಾಯಭಾರಿಗಳಿಗೆ ಅವ್ಯವಹಾರದಿಂದ ನೇತಾಜಿಯವರಿಗೆ ಅತೀವ ಅತೃಪ್ತಿಯುಂಟಾಗಿರುವುದೆಂದೂ ನಿರೂಪಿಸಿದ್ದರೆಂದು ಹೇಳಲಾಗುತ್ತದೆ.

"ಇಲ್ಲಿಯ ರಾಜಕೀಯ ಕೇಂದ್ರಗಳಲ್ಲಿ ಈ ಸುದ್ದಿಯ ಕುರಿತು ನಡೆಸಲ್ಪಡುವ ತರ್ಕ ವಿತರ್ಕಗಳು ನೇತಾಜಿಯವರ ಜೀವಂತವಿರುವಿಕೆಯ ಕುರಿತು ಆಶಾಸ್ಪದ ಕಲ್ಪನೆಗೆ ಎಡೆಗೊಟ್ಟಿವೆ"

ಭಾರತವು ಶ್ರೇಷ್ಠ ಶಕ್ತಿರಾಷ್ಟ್ರವಾಗುವುದು

ಜ್ಯೋತಿಷ್ಯತಜ್ಞರ ಭವಿಷ್ಯ

1965ರಷ್ಟರೊಳಗೆ ಭಾರತವು ಜಗತ್ತಿನ ಅತೀ ಶಕ್ತಿಯುಕ್ತ ರಾಷ್ಟ್ರವಾಗುವುದು. ಹೀಗೆಂದು ಬೆಂಗಳೂರಿನ ಒಂದು ಜ್ಯೋತಿರ್ವಿಜ್ಞಾನ ಪತ್ರಿಕೆಯ ಭವಿಷ್ಯವಾಣಿದೆ.

"ಗ್ರಹಗಳೂ, ಭಾರತವೂ ಮತ್ತು ವಸಾಹತು ಮಂಡಳವೂ" ಎಂಬ ಶಿರೋನಾಮೆಯಿಂದ ಆ ಪತ್ರಿಕೆಯು ಅಗ್ರಲೇಖನವನ್ನು ಬರೆದು ಈ ಕೆಳಗಿನ ನಿಷ್ಕರ್ಷೆಗೆ ಬಂದಿರುತ್ತದೆ

"ಭಾರತದ ಜಾತಕವು ಅಗಾಧಶಕ್ತಿಗರ್ಭಿತವಾಗಿದೆ ಆದುದರಿಂದ ಹಿಂದೆಯೂ ನಾವು ಅನೇಕ ಸಲ ಸೂಚಿಸಿದಂತೆ 1965ರಷ್ಟರಲ್ಲಿ ಭಾರತವು ಆಧುನಿಕ ನಾಗರೀಕತೆಯ ಇತಿಹಾಸದಲ್ಲೇ ಅತೀಶಕ್ತಿಯುಕ್ತವಾದ ರಾಷ್ಟ್ರವಾಗುವುದು ಈಗ ಆಶ್ಚರ್ಯದ್ದಾಗಿ ತೋರಿದರೂ ಶನಿಯು ಗುರುವಿನ ಸ್ಥಾನವನ್ನುಪೇಕ್ಷಿಸಿದೊಡನೆ ಪ್ರಭಾವಮತ್ತು ಭಾರತಗಳೆಳಗಿನ ಈಗಿನ ಮನಸ್ತಾಪಗಳು ಸೀಗಿ ಅನ್ಯೋನ್ಯತೆಯುಂಟಾಗುವುದು ಪಿತ ಎರಡೂ ದೇಶಗಳ ಸೌಹಾರ್ದದಿಂದ ವಾತಾವರಣವು ಪರಸ್ಪರ ಅನುಕೂಲತೆಗಾಗಿಯೂ ಸಹಕರಿಸುವುದು ಶಕ್ತಿಯುಕ್ತ ಖಂಡ ಭೂತಲ ಈಗಿನ ಪಾಶ್ಚಿಮಾತ್ಯ ಶಕ್ತಿರಾಷ್ಟ್ರಗಳ ಮತ್ತು ರಶ್ಯದೊಳಗಿರುವ ಕಲಹವನ್ನು ನಿಷ್ಫಲಗೊಳಿಸಲು ಮಧ್ಯವರ್ತಿ ಶಕ್ತಿಯಾಗುವುದು ತರುವಾಯ ಖಂಡಾಂತರಿಯ ಸಂಬಂಧವು ಸಾಮಾನ್ಯವಾಗಿ ವಿಶ್ವಶಾಂತಿಯ ಆಶಾಕಿರಣವು ಮೂಡುವುದು ಆದರೆ ಅದು ಕೆಲವು ನಿರ್ದಿಷ್ಟ ರಾಜಕೀಯ ಮುಂದಾಲೋಚನೆಗಳು ನಿರೀಕ್ಷಿಸಿದ ಶಾಂತಿಯಾಗಿರಲಾರದು ಅಲ್ಲಿದೆ ಅದರ ಕಾಲವು ಸುಧೀರ್ಘವಾಗಿರುತ್ತದೆ ಬಂದೂ ನಿಸ್ಸಂದೇಹ ಮತ್ತು ಈ ಕೋಮನೆಲ್ತ್ ಒಂದು ವಿಸ್ಮಯಕರ ವಿಷಯ ಕೆಲವು ತನಕ ಅತಾರ್ಕಿಕವಾದ ವಿವಿಧ ಜನಾಂಗದವರ ಮತ್ತು ರಾಜಕೀಯ ತತ್ವಜ್ಞಾನಗಳ ಕಲಸು ಮೇಲೋಗರವಾಗಿಯೇ ಉಳಿಯುವುದು.

ಪರೀಕ್ಷೆಗಳ ದುರಂತ ಪರಿಣಾಮ

ವಿದ್ಯಾರ್ಥಿಗಳೂ ಆತ್ಮಹತ್ಯವೂ

ಮದ್ರಾಸ್ ನಗರದಲ್ಲಿ ಎಸ್ ಎಸ್. ಎಲ್ ಸಿ. ಪರೀಕ್ಷೆಯಲ್ಲಿ ನಾನಾಸಾದ ವಿದ್ಯಾರ್ಥಿಗಳಿಬ್ಬರು ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟರು ಒಬ್ಬನು ಮರಣವನ್ನೇ ಹೊಂದಿದನು ಬೊಂಬಾಯಲ್ಲಿ ಒಬ್ಬ ಪಾರ್ಸಿ ಹುಡುಗನು ರಾಜಾಭಾಜಿ ಗೋಪುರದಿಂದ ಕೆಳಗೆ ದುಮುಕಿ ಪ್ರಾಣ ಹತ್ಯ ಮಾಡಿಕೊಂಡನು

"ಹಿತವಾದ" ಪತ್ರಿಕೆಯು ಈ ಕುರಿತು ಹೀಗೆ ಬರೆಯುತ್ತದೆ

"ತರುಣ ತರುಣಿಯರು ಪರೀಕ್ಷೆಗಳಲ್ಲಿ ಅಯಶಸ್ವಿಯಾದುದರ ಕುರಿತು ಇಷ್ಟೊಂದು ತೀಕ್ಷ್ಣತೆಯನ್ನು ಹೃದಯಕ್ಕಂಟಿಸಿಕೊಳ್ಳುವುದು ಕರುಣಾಸ್ಪದವಾಗಿದೆ ಎಷ್ಟು ಸಲವೂ ಅವರು ವಿಫಲಪಡಲು ಸಾಧ್ಯವಿರುವ ಎಳೆ ವಯವು ಅವರದಾಗಿದೆ ಅಲ್ಲದೆ ಜಗತ್ತಿನಲ್ಲಿ ಶೈಕ್ಷಣಿಸ್ಸು ಸೌಭಾಗ್ಯವನ್ನು ಹೊಂದಲು ಶಾಲಾ ಪರೀಕ್ಷೆಗಳೇ ಮುಖ್ಯವಾದ ಸ್ಪರ್ಧೆದ್ವಾರಗಳಲ್ಲವೆಂಬುದನ್ನು ನಗಣ್ಯವೇಕು ನಿರ್ಬಲವೂ ಪಿನ್ನವೂ ಆದ ಮಾನಸಿಕ ಲಕ್ಷಣವುಳ್ಳವರು ಮಾತ್ರ ಆತ್ಮಹತ್ಯದಿಂದ ಪರಿಹಾರೋಪಾಯವನ್ನು ಹುಡುಕುವರು ಚಟುವಟಿಕೆಯುಕ್ತವೂ ಕ್ರೀಡಾಸ್ಪಿಯ ಸ್ಪಭಾವವುಳ್ಳವರು ಎಂದಿಗೂ ಈ ಆಯಶಸ್ವಿತ್ವಕ್ಕೆ ವ್ಯಳೆವಡೆವುದಿಲ್ಲ ಇಂತಹ ವ್ಯಕ್ತಿಗಳೇ ನಿಷ್ಫಲ ಸೇತ್ತಿಗಿರುವರು ಸಹಾಯಿಯಾನ್ನು ಸ್ಫೋಲಿಸಿದ ವಾಲ್ಟರ್ ಸ್ಕಾಟ್‌ನ ಈಟನ್ ಶಾಲಾ ಕ್ರೀಡಾಂಗಣದಲ್ಲಿ ಜಯಿಸಲ್ಪಟ್ಟಿತು ಎಂದು ಹೇಳಲ್ಪಡುವುದು ಅಕ್ಷರಶಃ ನಿಜವೆನ್ನಬೇಕು."

ಪಾಕಿಸ್ತಾನ ಪ್ರಧಾನರಿಗೆ ಸ್ಟೆಲೀನರ ಆಹ್ವಾನ

ನಾಲ್ಕು ಮುಖ್ಯ ಕಾರಣಗಳು

ಭಾರತದ ಪ್ರಧಾನರನ್ನು ಅಮೇರಿಕಕ್ಕೆ ಸಂದರ್ಶನವೀಯಲು ಟ್ರೂಮನ್ನರು ಆಮಂತ್ರಣ ಕಳುಹಿಸಿದುದರ ಕೆಲವೇ ದಿನಗಳ ನಂತರವೆಂಬಂತೆ ರಶ್ಯದ ಸ್ಟೇಲಿನರು ಪಾಕಿಸ್ತಾನ ಪ್ರಧಾನ ಲಿಯಾಖತ್ ಆಲಿಯವರನ್ನು ಮೊಸ್ಕೋಗೆ ಒರಲು ಆಹ್ವಾನವಿತ್ತಿರುವರು. ಇದರ ಕಾರಣಗಳನ್ನು ರಾಜಕೀಯ ನಿರೀಕ್ಷಕರು ಸುಲಭವಾಗಿ ಊಹಿಸಿದ್ದಾರೆ

ರಶ್ಯಾದ ಗಡಿಗೆ ತಗಲಿಕೊಂಡಿರುವ ಅಫಗಾನಿಸ್ತಾನ ಮತ್ತು ಪಾಕಿಸ್ತಾನಗಳೊಳಗೆ ಘರ್ಷಣೆಗಳಾರಂಭವಾದುದರ ಕುರಿತು ರಶ್ಯಕ್ಕೆ ಅಲ್ಲಿನ ರಾಜಕಾರಣದಲ್ಲಿ ಸಮಿಪದ ಆಸಕ್ತಿಯುಂಟಾಗಿದೆ ಅಫಗಾನಿಸ್ತಾನದಲ್ಲಿ ಬ್ರಿಟಿಷ್ ಅಮೇರಿಕನ್ ಒಂಡವಾಳ ಶಾಹಿಹಿತಗಳು ರಶ್ಯಕ್ಕೆ ಅನಾನುಕೂಲತೆಯುಂಟುಮಾಡುವ ಕುತಂತ್ರವಾಡುವುದನ್ನು ತಡಗಟ್ಟಲು ಪಾಕಿಸ್ತಾನ ಅಫಗಾನಿಸ್ತಾನಗಳ ಸೌಹಾರ್ದವು ರಶ್ಯಕ್ಕೆ ಅವಶ್ಯವಸಿದೆ

ಇದುತನಕ ರಶ್ಯಾ ಪಾಕಿಸ್ತಾನಗಳೊಳಗೆ ರಾಜಾಂತ್ರಿಕ ಸಂಪರ್ಕವುಂಟಾಗಿಲ್ಲ ಪರಸ್ಪರ ರಾಯಭಾರಿಗಳನ್ನಿಡುವುದರ ಕುರಿತೂ ಸ್ಟೇಲಿನರು ಪಂಕ್ ಪ್ರಧಾನರೊಡನೆ ಚರ್ಚಿಸುವುದು

ರಶ್ಯದ ಕೆಲವೆ ಪ್ರಾಂತ್ಯಗಳಲ್ಲಿ ಮುಸ್ಲಿಂ ಪ್ರಜೆಗಳಿವೆ ಆದುದರಿಂದ ಮುಸ್ಲಿಂರಾಷ್ಟ್ರವಾದ ಪಾಕಿಸ್ತಾನದೊಡನೆ ಪರಸ್ಪರ ಹಿತ ಚಿಂತನವು ಪ್ರಸ್ತಾವವು ಅತ್ಯವಶ್ಯಕ

ಬೆಳೆಕಾಯಲು ಹೆಬ್ಬಾವುಗಳು

ಆವುಗಳನ್ನು ಭಕ್ಷಿಸುವ ಕಳ್ಳರಿದ್ದಾರೆ!

ನಲವೊಂದ್ವಿಸ್ಮೂಸ್‌ಗಳ ಒಳಜಿರವ ಸರಂವರ್ ಎಂಬ ಬಿಳಿ ಪಾಜನದ್ವಿನದಲ್ಲಿ "ಕೃಷಿ ಪ್ರದೇಶಗಳ ಕಾವಲಿಗೆ ಹಾವು ಹೆಬ್ಬಾವುಗಳನ್ನು ಇಡುವ ಪಯತ್ನ ಮಾಡಿಯೇಕು ಇದಕ್ಕಾಗಿ ಒಂದು ಹಾವು ಸಮಿಯನ್ನು ಸ್ಥಾಪಿಸಬೇಕ " ಎಂಬ ಸಲಹೆ ಅಲ್ಲಿನ ಸರಕಾರಕ್ಕೆ ಕೆಲವರಿಂದ ಕೊಡಲ್ಪಟ್ಟಿದೆ ಅಲ್ಲಿನ ಒಂದು ಧಾನ್ಯದಾಸ್ತಾನು ಕಟ್ಟಡದಲ್ಲಿ ಎರಡು ಹೆಬ್ಬಾವುಗಳು ಅಡಗಿಕೊಂಡಿದ್ದುವಂತೆ, ಅವುಗಳಿಗೆ ಹೆದರಿ ಇಲಿ ಹೆಗ್ಗಣಗಳು ಅದರೆ ಸಮೀಪ ಸುಳಿದಾಡುತ್ತಿರಲಿಲ್ಲವಂತೆ ವರಿಣಾಮವಾಗಿ ಆ ಧಾನ್ಯ ಸಂಗ್ರಾಹಾಲಯದಲ್ಲಿ ಯಾವ ತರದ ಧಾನ್ಯ ಹಾನಿಯೂ ಆಗಲಿಲ್ಲ

ಆದರೆ ಅಲ್ಲಿನ ಆಹಾರ ನಿಯಂತ್ರಣ ಖಾತೆಯು ಮುಖ್ಯಾಧಿಕಾರಿಗಳು ಬೇರೊಂದು ಅನುಭವವನ್ನು ತಿಳಿಸಿದರು "ಹೆಬ್ಬಾವುಗಳು ಇಲಿ ಭಕ್ಷಕಗಳೆಂದು ಪ್ರತೀತಿ ಏನೋ ನಿಜವೆ ಆದರೆ ಇಲ್ಲಿಯ ಕಳ್ಳರು ಪ್ರಚಿಂಡ ಮಹಿಮೆಯವರು ಅವರು ದಾಸ್ತಾನಿದ್ದ ಭತ್ತವನ್ನು ಕದ್ದೊಯ್ಯುವಾಗ ಹೆಬ್ಬಾವುಗಳನ್ನು ಕೂಡ ಕೊಂಡುಹೋಗಿ ಅವುಗಳ ಮಾಂಸವನ್ನು ಅನ್ನದೊಂದಿಗೆ ಬೆರಸಿಕೂಡ ತಿನ್ನುವರು.

ಮೂಂಸಖಂಡ ಬೇನೆ
ಮತ್ತು
ನೋವುಗಳು
ಜಗತ್ಪ್ರಖ್ಯಾತ ಜಾಂಬಕ್‌ನಿಂದ
ಪರಿಹರಿಸಲ್ಪಡುವುದು.

ಜಾಂಬಕ್ಕನ್ನು ಮೆಲ್ಲನೆ ತಿಕ್ಕಿರಿ ಪರಿಹಾರವು ತೀಕ್ಷ್ಣದಲ್ಲಿ ಉಂಟಾಗುವುದು ಈ ಅದ್ಭುತ ವನಸ್ಪತಿ ಮೂಲಾಸಿನೊಳಗಿನ ಔಷಧೀಯ ಎಣ್ಣೆಗಳು ಚರ್ಮದೊಳಗೆ ನೀರವಾಗಿ ಇಂಗಿ ಸೆಳೆತಗೊಂಡು ದಣಿದು ವೇದನೆ ಕೊಡುವ ಒರಬಾದ ಗಂಟುಗಳಿಗೂ ಮಾಂಸಖಂಡಗಳಿಗೂ ಪರಿಹಾರವನ್ನು ಕೊಡುತ್ತವೆ. ಖಂಡಿತ ಪ್ರಾಮಿಕೊಬ್ಬು ವಿರಹಿತವಾದುದು

Zam-Buk

ಜಾಂಬಕನ್ನೇ ಉಪಯೋಗಿಸಿರಿ.

ಚರ್ಮ ವ್ಯಾಧಿಗಳಿಗೂ, ಗಾಯಗಳಿಗೂ, ಅಲ್ಲದೆ ಕೈಬಿಟ್ಟ ಕೀಟ ಕಡಿತ, ನೋವಾಗುವ ಕಾಲು, ಮಾಂಸಖಂಡ ವೇದನೆ ಮತ್ತು ಕರೀರದೆಲ್ಲ ವೇದನೆಗಳಿಗೂ ಅತ್ಯುತ್ತಮ.

ಸ್ವದೇಶಾಭಿಮಾನಿ

ತಾರೀಕು 24—6—1949

ದಕ್ಷಿಣ ಕಲ್ಕತ್ತಾ ಚುನಾವಣೆ

ಪಶ್ಚಿಮ ಬಂಗಾಲ ಪ್ರಾಂತಿಕ ಶಾಸನ ಸಭೆಯ ಖಾಲಿಬಿದ್ದ ಸದಸ್ಯತ್ವದ ಸ್ಥಾನಕ್ಕೆ ದಕ್ಷಿಣ ಕಲ್ಕತ್ತಾ ಮತದಾರ ವಿಭಾಗದಿಂದ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರನ್ನು ವಿಶೇಷ ಬಹುಮತದಿಂದ ಶ್ರೀ ಸರತ್‌ಚಂದ್ರ ಬೋಸರು ಸೋಲಿಸಿ ವಿಜಯ ಹೊಂದಿದರು.

ಸರ್ದಾರವಲ್ಲಭಬಾಯಿ ಪರೀಲರೀ ಮೊದಲಾದ ಮುಂದಾಳುಗಳು ಇಲ್ಲಿಯ ಮತದಾರರಿಗಾಗಿ ಮಾಡಿದ ವಿನಂತಿಗಳಿಗೆ ಕೊಡ ಬೆಲೆ ಸಿಕ್ಕಲಿಲ್ಲವೆಂಬುದು ಸ್ಪಷ್ಟವಾದ ಸಂಗತಿ.

ಬೊಂಬಾಯಿಯಲ್ಲಿ ಕೆಲವು ಸ್ಥಳೀಕ ಕೊರ್ಪರೇಶನ್ ಚುನಾವಣೆಗಳಲ್ಲಿಯೂ ಸಮತಾವಾದೀ ಪಕ್ಷದ ಉಮೇದ್ವಾರರು ಕಾಂಗ್ರೆಸ್ ಉಮೇದ್ವಾರರನ್ನು ಸೋಲಿಸಿದ್ದರು

ನಮ್ಮ ಮಂಗಳೂರಲ್ಲಿಯೇ ಸ್ವಂತ ಜವಾಬ್ದಾರಿ ಮೇಲೆ ಮುನಿಸಿಪಲ್ ಚುನಾವಣೆಗೆ ನಿಂತವರಾದರೂ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯವರು ಟಿಕ್ಕದೊಂದು ಚುನಾವಣೆಯಲ್ಲಿ ಸೋತು ಹೋದರು

ಈ ಉಪಚುನಾವಣೆಗಳೆಲ್ಲಿ ಅಲ್ಲಲ್ಲಿ ಕಾಂಗ್ರೆಸಿಗೆ ಈ ರೀತಿ ಸೋಲು ಪ್ರಾಪ್ತಿಯಾಗುವುದಕ್ಕೆ ಏನಾದರೂ ಅರ್ಥವಿದೆಯೆ? ಅಥವಾ ಆಯಾ ಸ್ಥಳೀಕ ಸ್ಥಿತಿಗತಿಗಳು ಮಾತ್ರ ಇವಕ್ಕೆ ಕಾರಣವೆ? ಎಂಬ ಪ್ರಶ್ನೆ ಪರಿಶೀಲಿಸತಕ್ಕ ವಿಚಾರವಾಗಿದೆ

ಅಲ್ಲಲ್ಲಿಯ ಸ್ಥಳೀಕ ಪರಿಸ್ಥಿತಿಗಳು ಈ ಚುನಾವಣೆಗಳಲ್ಲಿಯ ಸೋಲಿಗೆ ಸ್ವಲ್ಪ ಮಟ್ಟಿಗೆ ಕಾರಣವೆಂಬ ಮಾತನ್ನು ಅಲ್ಲಗಳೆಯುವಂತಿಲ್ಲ.

ದಕ್ಷಿಣ ಕಲ್ಕತ್ತಾ ಮತದಾರ ವಿಭಾಗದಿಂದ ನೇತಾಜ ಸುಭಾಸಚಂದ್ರ ಬೋಸರು ಮೊದಲು ಆ ಶಾಸನ ಸಭೆಗೆ ಆರಿಸಲ್ಪಟ್ಟಿದ್ದರು. ಅವರ ಬಳಿಕ ಅವರ ಇನ್ನೊಬ್ಬ ಸೋದರರು ಅಲ್ಲಿಯ ಸದಸ್ಯರಿದ್ದರು. ಇವರು ಕಾಲವಾದ್ದರಿಂದ ನಡೆದ ಈ ಉಪ ಚುನಾವಣೆಯಲ್ಲಿ ಮತದಾರರು ಸರತ್ ಚಂದ್ರ ಬೋಸರಿಗೇನೆ ಮತ ಕೊಡಲು ಆಶಿಸಿದುದು ಸಹಜವೂ ಸ್ವಭಾವಿಕವೂ ಇರುತ್ತದೆ. ಇದು ಬೋಸರ ಕುಟುಂಬದ ಕಾದಿಟ್ಟ ಸ್ಥಾನದಂತಿದ್ದ ವಿಭಾಗವೆಂಬುದು ಸ್ಪಷ್ಟವಾಗಿ ಕಾಣುವ ಮೊದಲ ವಿಚಾರ.

ಸರತ್‌ಚಂದ್ರ ಬೋಸರ ವ್ಯಕ್ತಿಪ್ರಾಭಾವನ್ನೆ ಅಲ್ಲಗಳೆಯಲು ಸಾಧ್ಯವಿಲ್ಲ. ಇವರು ಈಗ ಕಾಂಗ್ರೆಸ್ ಸಂಸ್ಥೆಯನ್ನು ಬಲವಾಗಿ ಟೀಕಿಸುವವರಲ್ಲಿ ಒಬ್ಬರಾದರೂ, ಇವರೂ ಸಾಕಷ್ಟು ದಿನಗಳಿಂದ ಮಾಡಿದರೆಂಬುದು ನಿರ್ವಿವಾದ. ಮಾತ್ರವಲ್ಲ ನೇತಾಜಿಯವರ ಮೇಲೆ ಜನರಿಗೆ ಇರುವ ವಿಶೇಷ ವಾತ್ಸಲ್ಯದ ಉಪಯೋಗವನ್ನು ಈ ಚುನಾವಣೆಯಲ್ಲಿ ಮಾಡಿಕೊಂಡಂತೆ ಕಾಣುತ್ತದೆ.

ಇದೇ ರೀತಿ ಮೇಲೆ ಹೇಳಿದ ಇತರ ಉಪ ಚುನಾವಣೆಗಳ ವಿಚಾರದಲ್ಲಿಯೂ ವಿಶಿಷ್ಟವಾದ ಸ್ಥಳೀಕ ಕಾರಣಗಳಿಂದಾಗಿ ಸೋಲು ಪ್ರಾಪ್ತವಾಗಿರುವುದು ಸಂಭವನೀಯವಲ್ಲ ವೆನ್ನುವಂತಿಲ್ಲ.

ಇದೆಲ್ಲ ನಿಜವಿದ್ದರೂ ಕೂಡ ಕಾಂಗ್ರೆಸ್ ಸಂಸ್ಥೆಯ ವಿರುದ್ಧ ನಿಂತು ಎಂಥ ಪ್ರಧಾನ ವ್ಯಕ್ತಿಯಾದರೂ ಸೋತುಹೋಗುವ ದಿನ ಗಳನ್ನು ಈ ಮೊದಲು ಎಲ್ಲರೂ ಕಂಡಿದ್ದಾರೆ. ಆ ದಿನಗಳಲ್ಲಿ ಕಾಂಗ್ರೆಸ್ ಸಂಸ್ಥೆಗೆ ಇದ್ದ ಪ್ರತಿಷ್ಠೆ, ಮಹಾಜನರ ವಿಶ್ವಾಸ ಹಾಗೂ ಅವರ ಸಂಪರ್ಕ ಈಗ ಕಡಿಮೆಯಾಗುತ್ತ ಬರುತ್ತಿದೆಯೆಂಬುದನ್ನು ನಿರಾಕರಿಸುವುದ ರಿಂದ ಹೆಚ್ಚು ಪ್ರಯೋಜನವಿಲ್ಲ.

ಆಗಿನ ಕಾಂಗ್ರೆಸ್ ಸಂಸ್ಥೆಯ ಪರಿಸ್ಥಿತಿ ಗೂ ಈಗಿನ ಕಾಂಗ್ರೆಸ್ ಸಂಸ್ಥೆಯ ಪರಿಸ್ಥಿತಿ ಗೂ ಹೆಚ್ಚು ಕಡಿಮೆ ಇದೆಯೆಂಬ ಮಾತು ನಿಜ ಆಗ ಕಾಂಗ್ರೆಸು ಬ್ರಿಟಿಷರೊಡನೆ ಇಡೀ ಜನಾಂಗದ ವರವಾಗಿ ಹೋರಾಡುವ ಸಂಸ್ಥೆಯಾಗಿತ್ತು ಎಲ್ಲ ಜನರೂ ಮತ ಭೇದಕ್ಕೆ ಎಡೆಕೊಡದೆ ಉತ್ಸಾಹದಿಂದ ಕಾಂಗ್ರೆಸಿಗೆ ಕೊಡುತ್ತಿದ್ದರು ಕಾಂಗ್ರೆಸು ಯಾವುದಕ್ಕಾಗಿ ಹೋರಾಡುತ್ತಿತ್ತೊ ಆ ರಾಜಕೀಯ ಸ್ವಾತಂತ್ರ್ಯದ ಈಗ ಬಂದಿದೆ ಈಗ ಕಾಂಗ್ರೆಸು ಸರಕಾರ ನಡೆಸುವ ಪಕ್ಷವಾಗಿ ನಿಂತಿದೆ ಸರಕಾರ ನಡೆಸುವವರ ಮೇಲೆ ಟೀಕೆಗಳಿಗೆ ಯಾವಾಗಲೂ ಆಸ್ಪದವಿರುತ್ತದೆ ಇದು ಕಾಂಗ್ರೆಸ್ ಪರಿಸ್ಥಿತಿಯಲ್ಲಿ ಆಗಿರುವ ಮುಖ್ಯ ಸ್ಥಿತ್ಯಂತರವಿದ್ದು ಈಗ ಕಾಂಗ್ರೆಸ್ ಸಂಸ್ಥೆಗೆ ಮೊದಲಿನಂತೆಯೇ ಇಡೀ ಜನಾಂಗದ ಬೆಂಬಲ ಸಿಕ್ಕಿಯೇ ಸಿಕ್ಕುತ್ತದೆಂದು ಆತಿಸಿದರೆ ಅದು ಸರಿಯಾಗಲಾರದು

ಈಗ ದೇಶದ ಮುಂದೆ ಕಾಂಗ್ರೆಸ್ ಪಕ್ಷವಲ್ಲದೆ ಸರಕಾರ ವಹಿಸಿಕೊಂಡು ನಡೆಸಬಲ್ಲ ಬೇರೆ ರಾಜಕೀಯ ವ್ಯವಸ್ಥಿತ ಪಂಗಡಗಳಿಲ್ಲವೆಂಬುದು ಸತ್ಯ ಸಂಗತಿ. ಆದರೆ ಕೊನೆಯ ತನಕವೂ ಇದೇ ಪರಿಸ್ಥಿತಿ ಇರುವುದು ಸಾಧ್ಯವಿಲ್ಲ ಪ್ರಜಾಸತ್ತೆಯಲ್ಲಿ ವಿರುದ್ಧ ಪಂಗಡಗಳು ಬೆಳೆಯಲೇ ಬೇಕು ಪ್ರಬಲವಾದ ವಿರುದ್ಧ ಪಕ್ಷವಿದ್ದರೆ ಪ್ರಜೆಗಳಿಗೆ ಕ್ಷೇಮವೆಂದು ಈ ಪದ್ಧತಿಯನ್ನು ಸರಿಸುವವರ ಅಭಿಪ್ರಾಯ.

ಅಂತೂ ಈಗ ಕಾಂಗ್ರೆಸು ನಮ್ಮ ಪ್ರಧಾನ ರಾಜಕೀಯ ಪಕ್ಷ. ಇದರ ಧ್ಯೇಯಗಳು ಸರಿಯಾಗಿಯೇ ಇವೆಯೆಂಬುದು ಹೆಚ್ಚಿನ ಪ್ರಜೆಗಳಿಗೆ ಗೊತ್ತಿದೆ ಹಲವು ವರ್ಷಗಳಿಂದ ಇದು ಸಾರುತ್ತ ಬಂದಿರುವ ಮುಂದಿನ ದಾರಿಯಲ್ಲಿ ಈ ದೇಶದ ಪ್ರಜೆಗಳು ಸಾಕಷ್ಟು ವಿಶ್ವಾಸ ತೋರಿಸಿದ್ದಾರೆ. ಈ ಸಂಸ್ಥೆ ನಮ್ಮ ದೇಶದ ಸ್ವಾತಂತ್ರ್ಯ ಬಲ ಗೊಂಡು ರೂಢಿಮೂಲವಾಗಿರುವಲ್ಲಿ ಪರ್ಯಂತವಾದರೂ ನಮ್ಮ ಪ್ರಧಾನ ರಾಜಕೀಯ ಸಂಸ್ಥೆಯಾಗಿ ಉಳಿದು ದೇಶದ ಆಡಳಿತ ಇವರ ಕೈಯಲ್ಲಿ ಉಳಿಯುವಂತಾದರೆ ದೇಶಕ್ಕೆ ನಿಜವಾಗಿಯೂ ಶ್ರೇಯಸ್ಸುಂಟು.

ಕಾಂಗ್ರೆಸಿನವರು ಈ ಮೊದಲು ಸಾರುತ್ತ ಬಂದ ಉದಾತ್ತ ಧ್ಯೇಯಗಳನ್ನು ಅವರು ಈ ಹೊತ್ತು ಸರಿಯಾಗಿ ಪಾಲಿಸುತ್ತಿಲ್ಲ ವೆಂದೂ ಸಂಸ್ಥೆಯು ಅಧಿಕಾರಸ್ಥಿರ ಜನರ ಕೈಗೊಂಬೆಯಾಗುತ್ತಿದೆಯೆಂದೂ ಜನರಲ್ಲಿ ಒಂದು ಭಾವನೆಯು ತಲೆದೋರುತ್ತಿದೆಯೆಂ ಬುದು ಎಲ್ಲಕ್ಕೂ ಶೋಚನೀಯ ವಿಚಾರ. ಈಗಿನ ಉಪಚುನಾವಣೆಗಳ ಅಪಯಶಸ್ಸಿಗೆ ಇದೂ ಸ್ವಲ್ಪ ಮಟ್ಟಿಗೆ ಕಾರಣವಿರಬಹುದು

ಈ ಜಗೆಯ ಭಾವನೆ ಸರಿಯಲ್ಲವೆಂಬು ದನ್ನು ಕಾಂಗ್ರೆಸಿಗರು ಜನರಿಗೆ ಮಂದಟ್ಟು ಮಾಡಿಕೊಡುವುದು ಅತ್ಯಾವಶ್ಯಕ

ಕಾಂಗ್ರೆಸು ಜನರ ಸಂಪರ್ಕ ಕಳೆದು ಕೊಳ್ಳುತ್ತಿರುವಂತೆ ಕಾಣುತ್ತದೆಂದು ನಮ್ಮ ಪ್ರಧಾನ ಸಚಿವ ಪಂಡಿತ ಜವಾಹರಲಾಲರೇ ಸ್ವತಃ ಅಭಿಪ್ರಾಯ ಪಡುತ್ತಿದ್ದಾರೆ ಈ ಸಂಪರ್ಕ ಪುನಃ ಬೆಳೆಸುವುದು ಅತ್ಯಾವಶ್ಯಕ

ಕಾಂಗ್ರೆಸ್ ಸಂಸ್ಥೆ ಪುನಃ ತನ್ನ ಪ್ರತಿಷ್ಠೆ ಸ್ಥಾಪಿಸಲು ಮನಃಪೂರ್ವಕವಾಗಿ ವ್ಯವಸ್ಥಿತ ರೀತಿಯಿಂದ ಕೆಲಸ ಮಾಡುವುದು ಅಗತ್ಯವೆಂಬ ಈ ಉಪಚುನಾವಣೆಗಳು ಸೂಚಿಸುತ್ತಿವೆಯೆಂದು ತಿಳಿದುಕೊಂಡರೆ ಬಾಧಕವಿಲ್ಲ

ಕಾಂಗ್ರೆಸಿನ ಪ್ರತಿಷ್ಠೆ ಬೆಳೆಯಬೇಕಾದರೆ ಕಾಂಗ್ರೆಸಿನವರ ವರವಾಗಿ ಶಾಸನ ಸಭೆಗಳಲ್ಲಿರುವವರು ಅಧಿಕಾರ ಸ್ಥಾನದಲ್ಲಿರುವವರು ಇವರೆಲ್ಲ ಒಹಳ ಜಾಗರೆಯಿಂದ ವರ್ತಿಸುವುದು ಅಗತ್ಯ ಮಾತ್ರವಲ್ಲ ಸಾಮಾನ್ಯ ಜನರ ಹಿತವೇ ತಮ್ಮ ಮುಖ್ಯ ಕಾರ್ಯವೆಂಬುದನ್ನು ಯಾವಾಗಲೂ ಜ್ಞಾಪಕದಲ್ಲಟ್ಟುಕೊಂಡು ನಿಸ್ವಾರ್ಥತೆಯಿಂದ ಅದಕ್ಕಾಗಿ ದುಡಿಯಬೇಕು

ಎರಡನೆಯದಾಗಿ ಕಾಂಗ್ರೆಸ್ ಸಂಸ್ಥೆ ಸ್ವತಂತ್ರವಾಗಿ ಅಂದರೆ ಸರಕಾರ ಮೂಲಕವಲ್ಲದೆ ತಾನೇ ಜನಸೇವೆ ಸಲ್ಲಿಸಿ ಜನರ ವಿಶ್ವಾಸಗಳಿಸಬೇಕು ಇದು ಎಲ್ಲಕ್ಕೂ ಮುಖ್ಯ ವಿಚಾರ. ವಿಧಾಯಕ ಕಾರ್ಯಕ್ರಮವೇ ಇದಕ್ಕೆ ದಾರಿ ಈ ಕಾರ್ಯವನ್ನು ಕಾಂಗ್ರೆಸಿಗರು ಸರಿಯಾಗಿ ಮುಂದೊತ್ತಿದರೆ ಮಾತ್ರ ಕಾಂಗ್ರೆಸ್ ಸಂಸ್ಥೆ ದೇಶದ ಪ್ರಧಾನ ರಾಜಕೀಯ ಸಂಸ್ಥೆಯಾಗಿ ಉಳಿದು ದೇಶದ ಕಲ್ಯಾಣವನ್ನು ಸಾಧಿಸಲು ಸಮರ್ಥವಾಗಬಲ್ಲುದು

ಅಂತೂ ಈಗ ನಡೆದಿರುವ ಈ ಕೆಲವು ಉಪಚುನಾವಣೆಗಳ ಫಲಿತಾಂಶಗಳು ಎಲ್ಲ ಕಾಂಗ್ರೆಸಿಗರ ಕಣ್ತೆರೆಯಲು ಸಹಾಯಕವಾಗಿ ಇವರೆಲ್ಲ ತಮ್ಮ ಕರ್ತವ್ಯಗಳ ಕಡೆಗೆ ಹೆಚ್ಚಿನ ಗಮನ ಕೊಡುವಂತಾಗಲೆಂದು ಹಾರೈಸಬೇಕಾಗಿದೆ. ಹೀಗಾದರೆ ಈ ಚುನಾವಣೆಗಳಲ್ಲಿ ದೊರೆತ ಅಪಯಶಸ್ಸು ಮುಂದಿನ ಯಶಸ್ಸಿಗೆ ಕಾರಣವಾಗಬಹುದು

ಟೀಕೆ-ಟಿಪ್ಪಣಿಗಳು

ಚಂದರ್‌ನಾಗೂರು ಜನಮತಗಣನೆ

ಚಂದರ್‌ನಾಗೂರು ಭಾರತಕ್ಕೆ ಸೇರಬೇಕೂ ಇಲ್ಲವೆ ಫ್ರೆಂಚರ ಅಧೀನದಲ್ಲಿಯೇ ಉಳಿಯಬೇಕೂ ಎಂಬ ಬಗ್ಗೆ ಅಲ್ಲಿಯ ಪ್ರಜಾಭಿಪ್ರಾಯ ನಿರ್ಣಯಕ್ಕಾಗಿ ಫ್ರೆಂಚ್ ಸರಕಾರದ ಆಶ್ರಯದಲ್ಲಿ ನಡೆದ ಜನಮತ ಗಣನೆಯ ಭಾರತಕ್ಕೆ ಸೇರಬೇಕೆಂಬ ಬಗ್ಗೆ 7473 ಮತಗಳೂ ವಿರುದ್ಧ 114 ಮತಗಳೂ ದೊರತವು.

ಭಾರತದ ಪ್ರಧಾನ ಸಚಿವ ಪಂಡಿತ ಜವಾಹರಲಾಲ ನೆಹರು ಅವರಿಗೆ ಈ ಫಲಿತಾಂಶದಿಂದ ತೃಪ್ತಿಯಾಗಿ ಅಲ್ಲಿಯ ಜನರಿಗೆ ಕಳುಹಿಸಿದ ಒಂದು ಸಂದೇಶದಲ್ಲಿಯ ತನ್ನ ವಸಾಹತುಗಳಲ್ಲಿಯೆ ಜನಾಭಿಪ್ರಾಯವನ್ನು ಸ್ವಷ್ಟವಾಗಿ ತಿಳಿಯುವಂತಾಗಿದೆಯೆಂದೂ ಈ ಸ್ಥಳಗಳು ಭಾರತಕ್ಕೆ ಸೇರುವುದು ಅನಿವಾರ್ಯವೆಂದೂ ಫ್ರೆಂಚ್ ಸರಕಾರವು ಸ್ವೇಚ್ಛೆಯಿಂದ ಇವುಗಳ ಬಿಡುಗಡೆ ಮಾಡಿ ಭಾರತ ಮತ್ತು ಫ್ರೆಂಚರೊಳಗಿನ ಮೈತ್ರಿ ಇನ್ನೂ ಬೆಳೆಯುವಂತ ಮಾಡಬೇಕೆಂದೂ ಸೂಚಿಸಿರುತ್ತಾರೆ

ಇನ್ನು ಭಂಗರತದಲ್ಲಿಯ ಉಳಿದ ಫ್ರೆಂಚ್ ವಸಾಹತುಗಳಿಂದರೆ ಪಾಂಡಿಚೇರಿ, ಮಾಹೆ, ಕಾರೈಕ್ಕಲ್ ಮತ್ತು ಯಾನಮ್ ಎಂಬ ಊರುಗಳು ಇಲ್ಲಿಯ ಜನಮತ ಗಣನೆ ಒಂದು ನಶಂಬರಕ್ಕೆ ಇಟ್ಟಿರುತ್ತಾರೆ ಫ್ರೆಂಚ್ ಸರಕಾರವು ಈ ಜನಮತ ಗಣನೆಯ ತನಕ ಕಾಯುವ ಅಗತ್ಯ ಕಂಡ ಬರುವುದಿಲ್ಲ, ಈಗಲೆ ಅವನ್ನು ಬಿಟ್ಟುಕೊಡುವುದು ಲೇಸೆಂದು ಒಬ್ಬಗ ಸೂಚಿಸಿದ್ದಾರೆ

ಸಂಖ್ಯೆಯ ಹಿಂದೆ ಮುಂದೆಯಾದರೂ ಫ್ರೆಂಚ್ ಸರಕಾರವು ಈ ಊರುಗಳ ಪ್ರಜಾಭಿಪ್ರಾಯದಂತೆ ವರ್ತಿಸಲು ನಿಶ್ಚಿತವಿರುವುದು ಸ್ಪಷ್ಟವೇ ಇರುತ್ತದೆಂದು ಹೇಳಲೇ ಬೇಕು

ಗೋವೆಯ ಭವಿಷ್ಯವೇನು?

ಫ್ರೆಂಚ್ ಸರಕಾರವು ಈ ರೀತಿ ಸುಸಂಸ್ಕೃತ ಬುದ್ಧಿ ತೋರ್ಪಡಿಸಿ ಭಾರತೀಯರ ಮೆಚ್ಚಿಗೆ ಪಡೆಯುತ್ತಿರುವಾಗ ಗೋವೆಯ ಪೊರ್ತುಗೀಸು ಸರಕಾರದ ಮಾತ್ರ ತದ್ವಿರುದ್ಧ ರೀತಿಯಲ್ಲಿ ನಡೆದು ಹಾಸ್ಯಾಸ್ಪದವಾಗುತ್ತಿದೆಯೆಂಬುದು ಶೋಚನೀಯ

ಭಾರತ ಸ್ವಾತಂತ್ರ್ಯದಿಂದುಂಟಾದ ವಾತಾವರಣದಲ್ಲಿ ಗೋವೆಯಲ್ಲಿಯೂ ತಲೆದೋರಿದ ಸ್ವಾತಂತ್ರ್ಯ ಚಳವಳವನ್ನು ಪೋರ್ತುಗೀಸು ಸರಕಾರವು ತೀವ್ರದಬ್ಬಾಳಿಕೆಯಿಂದ ಎದುರಿಸಿತು ಗೋವೆಯ ಪ್ರಜಾಜನರ ಮುಂದಾಳು ಅಲ್ಲಿಯ ನೆಶನಲ್ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್ ಬಿ ಡಿ ಸಿಲ್ವ ಇವರು ಒಂದು ಹೇಳಿಕೆಯಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳಿಗಾಗಿ ಆರಂಭವಾದ ಚಳವಳವನ್ನು ಪೋರ್ತುಗೀಸು ಸರಕಾರವು ದಬ್ಬಾಳಿಕೆಯಿಂದ ಎದುರಿಸಿದುದರ ವರಿಣಾ

ಮವಾಗಿ ಈಗ ಪ್ರಜೆಗಳೆಲ್ಲ ಪೋರ್ತುಗೀಸರು ಗೋವೆಯಿಂದ ಹೋಗಬೇಕೆಂದು ಚಳವಳಿ ಹೂಡದೆ ನಿವೃತ್ತಿ ಇಲ್ಲವೆಂದು ಹೇಳಿದ್ದಾರೆ.

ಗೋವೆಯಿಂದ ಪ್ರಮುಖ ಬಂದರು ಸ್ಥಳವನ್ನು ಪೋರ್ತುಗೀಸರ ಕೈಯಲ್ಲಿ ಬಿಡುವುದು ಭಾರತದ ಭದ್ರತೆಯ ದೃಷ್ಟಿಯಿಂದ ಅಸಾಧ್ಯವಾದ ಮಾತು ಹೈದರಾಬಾದಿನ ಜಗಳದ ಸಮಯದಲ್ಲಿ ಹೇಗೆ ಈ ಬಂದರದ ದುರುಪಯೋಗ ಮಾಡಲ್ಪಟ್ಟಿತ್ತೆಂಬುದು ಈಗ ಎಲ್ಲರಿಗೂ ಗೊತ್ತಿದೆ.

ಪೋರ್ತುಗೀಸು ಸರಕಾರವು ಫ್ರೆಂಚರಂತೆ ತಾವಾಗಿ ಅಲ್ಲಿಯ ಪ್ರಜೆಗಳ ಇಚ್ಛೆಯೇನೆಂದು ವಿಚಾರಿಸಿ ಅದರಂತೆ ಸ್ವೇಚ್ಛೆಯಿಂದ ವರ್ತಿಸಲು ಒಪ್ಪುವುದು ಮರ್ಯಾದೆಯ ದಾರಿ ಇದಕ್ಕೆ ಬದಲು ಬಲಾತ್ಕಾರಕ್ಕೇನೆ ಮನಸ್ಸು ಮಾಡುವುದಾದರೆ ಬಲತ್ಕಾರದಿಂದ ಗೋವೆಯನ್ನದು ಉಳಿಸಿಕೊಳ್ಳಲಾರದೆಂಬುದನ್ನು ತಿಳಿದುಕೊಳ್ಳಲು ಬಹಳ ದೂರ ಹೋಗಲಿಕ್ಕಿಲ್ಲವೆಂದು ಯೋಚಿಸಿದರೆ ತಪ್ಪಾಗಲಾರದು.

ಮಾರಾಟ ತೆರಿಗೆ ತಿದ್ದುಪಡಿ ಮಸೂದೆ

ಮದ್ರಾಸು ಸರಕಾರದ ಸೇಲ್ಸ್‌ಟೇಕ್ಸ್ ಅಥವಾ ಮಾರಾಟ ತೆರಿಗೆ ತಿದ್ದುಪಡಿ ಮಸೂದೆ ಚುನ್ನಾತ ಕಮಿಟಿಗೆ ಒಪ್ಪಿಸಲ್ಪಟ್ಟಿದ್ದು ಈಗ ಅದರ ವರದಿ ತಯಾರಾದ ಬಳಿಕ ಇನ್ನು ಸೂಚಿಸಿದ ಕೆಲವು ಬದಲಾವಣೆಗಳೊಂದಿಗೆ ಈಗ ಮಂಜೂರಾಗಿರುತ್ತದೆ

ಮೆಣಸು, ಬಾಳೆಹಣ್ಣು ಇತ್ಯಾದಿ ಆಹಾರ ಸಾಮಾಗ್ರಿಗಳ ಮೇಲೆ ಮಾರಾಟತೆರಿಗೆ ಹೊರಿಸುವ ಸೂತ್ರವನ್ನು ತಜ್ಞತ ಕಮಿಟಿಯಲ್ಲಿ ಪೂರ್ಣ ತೆಗೆದು ಹಾಕಲಾಗಿದೆ

ಚಾ ಸೊಪ್ಪು ಮಾರಾಟದ ಮೇಲೆ ಮಾರಾಟತೆರಿಗೆ ಹಾಕಲು ಸೂತ್ರವನ್ನು ಹಿಂತೆಗೆಯಲಾಗಿದೆ

ಹತ್ತಿಯ ಮೇಲೆ ಹೊರಿಸಲಿತ್ತ ಮಾರಾಟ ತೆರಿಗೆಯು ದರ ನೂರು ರೂಪ್ಯಾಗಳಿಗೆ ರೂ 1-9-0 ಎಂದಿದ್ದದ್ದು ರೂ 0-8-0 ಎಂದು ಕಡಮೆ ಮಾಡಲಾಗಿದೆ

ಕಾಫಿ ಮತ್ತು ಊಟದ ಹೋಟೇಲುಗಳ ಮೇಲೆ ರೂಪ್ಯಾಗೆ ನಾಲ್ಕಾಣೆ ಪೈಯಂತೆ ಮಾರಾಟತೆರಿಗೆ ಹೊರಿಸಬೇಕೆಂದು ಮೂಲ ಸೂಚನೆ ಇತ್ತು. ಈ ಮೊದಲು ಇದು ಮೂರು ಪೈ ಮಾತ್ರವಿತ್ತು

ಹೊಸ ಸೂಚನೆಯಂತೆ ರೂಪ್ಯಾ 25,000ಕ್ಕೆ ಮೇಲ್ಪಟ್ಟ ವರ್ಷಾವಧಿ ವಹಿವಾಟು ಇದ್ದ ಹೊಟೇಲುಗಳಿಗೆ ಮಾತ್ರ ಈ ಹೆಚ್ಚಿಸಿದುದರ ಅಂದರೆ ರೂಪ್ಯಾ 4½ ಪೈಯಂತೆ ಅನ್ವಯಿಸಲಾಗುವುದೆಂದೂ ರೂಪ್ಯಾ 10,000ದಿಂದ ರೂ 25,000ದ ವರೆಗಿನ ವಹಿವಾಟಿನವರು ಈ ಮೊದಲು ಇದು ಮೂರು ಪೈ ದರದ ತೆರಿಗೆ ಕೊಟ್ಟರೆ ಸಾಕೆಂದೂ ರೂ. 10,000ಕ್ಕೂ ಕೆಳಗಿನ ವಹಿವಾಟಿನವರು ಮುಂದೆ ಈ ಮಾರಾಟ ತೆರಿಗೆಯನ್ನು ಕೊಡುವುದೇ ಬೇಡವೆಂದೂ ಹೊಸ ತಿದ್ದುಪಡಿಯಲ್ಲಿದ್ದು ಇದೀಗ ಮಂಜೂರಾಗಿರುತ್ತದೆ.

ಈ ರೀತಿ ದೊಡ್ಡ ಹೊಟೇಲಿನವರಿಗೆ ಮಾತ್ರ ತೆರಿಗೆ ಹೆಚ್ಚಿಸಿ ಚಿಕ್ಕ ಹೊಟೇಲಿನವರಿಗೆ ತೆರಿಗೆ ರಿಯಾಯಿತಿ ನೀಡಿದ ಬಗ್ಗೆ ಯಾರೂ ಆಕ್ಷೇಪಿಸುವಂತಿಲ್ಲವೆನ್ನಬಹುದು. ದೊಡ್ಡ ಹೊಟೇಲಿನವರು ಈ ಕುರಿತು ಇನ್ನೂ ಚಳವಳಿ ನಡೆಸುವುದು ಸರಿಯೆನ್ನಿಸಲಾರದು. ಈ ಸುಧಾರಣೆಯಿಂದ ಸರಕಾರಕ್ಕೆ 10 ಲಕ್ಷ ರೂಪ್ಯಾ ಹೆಚ್ಚಿನ ಉತ್ಪತ್ತಿ ಸಿಕ್ಕಬಹುದೆಂದು ಮಾನ್ಯ ಅರ್ಥ ಸಚಿವ ಬಿ. ಗೋಪಾಲ ರೆಡ್ಡಿಯವರು ಹೇಳಿದರು ಸರಕಾರಕ್ಕೆ ಹಣ ಬೇಕಾದಾಗ ಕೊಡುವುದು ಸಾಧ್ಯವಿರುವ ಪ್ರಜೆಗಳ ಧರ್ಮವೇ ಇರುತ್ತದೆ

ಗೋಡ್ಸೆ ನಂಬ್ರದ ಅಪ್ಪೀಲು ತೀರ್ಮಾನ

ದೆಲ್ಲಿಯ ಕೆಂಪು ಕೋಟೆಯಲ್ಲಿ ಶ್ರೀ ಆತ್ಮಚರಣದ ಸ್ಪೆಶಲ್ ಕೋರ್ಟಿನಲ್ಲಿ ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿದ ಸಂಬಂಧ ನಡೆದ ನಂಬ್ರದಲ್ಲಿ ನಾಥುರಾಮ ವಿನಾಯಕ ಗೋಡ್ಸೆ ಮತ್ತು ನಾರಾಯಣ ದತ್ತಾತ್ರೇಯ ಆಪ್ಟೆಯವರನ್ನು ಮರಣದಂಡನೆಗೂ ವಿಷ್ಣುರಾಮ ಚಂದ್ರ ಕರ್ಕರೆ, ಮದನಲಾಲ ಕಾಶ್ಮೀರಿಲಾಲ್ ಪಹವಾ, ಶಂಕರ ಕಿಸ್ತಯ್ಯ, ಗೋಪಾಲ ವಿನಾಯಕ ಗೋಡ್ಸೆ, ಸದಾಶಿವ ಪರಚುರೆ, ಈ ಏದು ಮಂದಿಗೆ ಜನ್ಮ ಪರ್ಯಂತ ಶಿಕ್ಷೆಯನ್ನೂ ವಿಧಿಸಲಾಗಿತ್ತು ವಿಷ್ಣು ಕಿಸ್ತಯ್ಯನ ಶಿಕ್ಷೆ ಸರಕಾರದವರಿಗೆ ವರ್ಷಗಳ ಬದಲಾಯಿಸಬಹುದೆಂದು ಸಂತತಿಯಂತೆ ನ್ಯಾಯಾಲಯಕ್ಕೆ ಮಾತ್ರ ಪೂರ್ವ ಸಂಜೀವ ಹೈಕೋರ್ಟಿನಲ್ಲಿ ಈ ಏಳು ಮಂದಿ ಅಪ್ಪೀಲು ನಡೆಯುತ್ತಿದ್ದು ಆ ಹೈಕೋರ್ಟ್ ನವರು ಪ್ರಿವಿ ಕಿಸ್ತಯ್ಯನವರು ಈಗತಾನೆ ಅಪ್ಪೀಲು ತೀರ್ಮಾನ ಹೇಳಿರುತ್ತದೆ

ಡಾಕ್ಟರ್ ಸದಾಶಿವ ಪರಚುರೆ ಮತ್ತು ಶಂಕರ ಕಿಸ್ತಯ್ಯ ಇವರಿಬ್ಬರನ್ನು ಅಪ್ಪೀಲು ತೀರ್ಮಾನದಲ್ಲಿ ಬಿಡುಗಡೆ ಮಾಡಲಾಗಿದೆ ಉಳಿದವರ ಶಿಕ್ಷೆಗಳನ್ನು ಮೂಲ ತೀರ್ಪಿನಂತೆ ಕಾಯಮನ್ ಮಾಡಲಾಗಿದೆ

ಹೈಕೋರ್ಟು ಜಡ್ಜರಲ್ಲಿ ಒಬ್ಬರಾದ ಜಸ್ಟೀಸ್ ಅಚುರಾಮರು ಮದನಲಾಲರ ಜನ್ಮಟಾಪು ಶಿಕ್ಷೆ ಸರಕಾರದವರು ಬದಲಾಯಿಸಬಹುದೆಂದು ಪ್ರತ್ಯೇಕವಾಗಿ ಸೂಚಿಸಿದ್ದಾರೆ ಉಳಿದ ಜಡ್ಜರು ಇದಕ್ಕೆ ಒಪ್ಪಿಗೆ ಕೂಡಲಿಲ್ಲ

ಗೋಡ್ಸೆ ಮತ್ತು ಆಪ್ಟೆಯವರ ಫಾಶಿ ಶಿಕ್ಷೆ ಜಾರಿ ಮಾಡುವರೆ? ಮಾಡಬೇಕೆ? ಎಂಬುದು ಭಾರತ ಸರಕಾರದ ಮುಂದಿರುವ ಒಂದು ಮುಖ್ಯ ಪ್ರಶ್ನೆ ಕಾನೂನಿನಂತೆ ಕಾನೂನು ನಡೆಯಲ್ಲಿ ಎಂದು ಸರಕಾರವು ಸುಮ್ಮನಿದ್ದು ಬಿಟ್ಟರೆ ಈ ಶಿಕ್ಷೆ ಸ್ವತೇನ ಜಾರಿಯಾಗುತ್ತದೆ.

ಆದರೆ ಮಹಾತ್ಮಾಗಾಂಧಿಯವರ ಕೊಲೆ ಮಾಡಿದವರು ಈ ರೀತಿ ಫಾಶಿ ಶಿಕ್ಷೆಗೆ ಒಳಗಾಗುವುದು ಇಡೀ ಜಗತ್ತಿಗೇನೆ ಸರಿಕಾಣಲಿಕ್ಕಿಲ್ಲವೆಂದರೆ ಅತಿಶಯೋಕ್ತಿ ಇಲ್ಲ. ಮಹಾತ್ಮಾ ಗಾಂಧಿಯವರ ಅಭಿಪ್ರಾಯ ಇಂಥ ಶಿಕ್ಷೆಗೆ ಖಂಡಿತ ಅನುಕೂಲವಿರುತ್ತಿರಲಿಲ್ಲ.

ಆದುದರಿಂದ ಇವರಿಬ್ಬರ ಫಾಶಿ ಶಿಕ್ಷೆಯನ್ನು ಭಾರತ ಸರಕಾರವು ಜನ್ಮ ಟಾಪಿಗೆ

ಮದ್ರಾಸು ಮಂತ್ರಿಗಳ ಮೇಲಿನ ಆರೋಪ ವಿಚಾರಣೆ

ಮದ್ರಾಸು ಸರಕಾರದ ಈಗಿನ ಮಂತ್ರಿಗಳಲ್ಲಿ ಆರು ಮಂದಿ ಮತ್ತು ಈ ಮೊದಲು ಮಂತ್ರಿಯಾಗಿದ್ದು ಈಗ ಕಾಂಗ್ರೆಸಿನ ಕಾರ್ಯದರ್ಶಿಯಾಗಿರುವ ಶ್ರೀ ಕಾಳಾ ವೆಂಕಟ್ರಾವ್ ಹೀಗೆ ಏಳು ಮಂದಿಯ ಮೇಲೆ ತನ್ನ ಮಂತ್ರಿ ಪದವಿಯ ಅಧಿಕಾರ ಸ್ವಂತ ಕ್ಕಾಗಿ ದುರುಪಯೋಗಪಡಿಸಿರುವರೆಂಬ ಆರೋಪಗಳೆನ್ನು ಮದ್ರಾಸಿನ ಶಾಸನ ಸಭೆಯ ಸದಸ್ಯರಾದ ಶ್ರೀ ಕೆ ಆರ್ ಕಾರಂತರೇ ಮೊದಲಾದ ಕೆಲವರು ಕಳೆದ ವರ್ಷ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರಿಗೆ ಕಳುಹಿಸಿದ್ದರು ಆವರು ಈ ಆರೋಪಗಳ ಕುರಿತು ಸಂಬಂಧಪಟ್ಟವರ ಉದಾಹರಣೆ ಕೇಳಿದ್ದಾರಂತೆ ಈಗ ಈ ಕುರಿತು ಪ್ರಾಥಮಿಕ ವಿಚಾರಣೆಯೊಂದನ್ನು ನಡೆಸಬೇಕೆಂದು ಈಗಿನ ಕಾಂಗ್ರೆಸ್ ಅಧ್ಯಕ್ಷರು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವರನ್ನು ನೇಮಿಸಿದರು ಇವರು ಈ ಬಗ್ಗೆ ಮದ್ರಾಸಿಗೆ ಬಂದು ವಿಚಾರಣೆ ನಡೆಸಿ ಈಗ ತಮ್ಮ ವರದಿಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಒಪ್ಪಿಸಲಿರುವರು

ಈ ರೀತಿ ಆರೋಪಕ್ಕೆ ಒಳಗಾಗಿರುವ ಆರು ಮಂದಿ ಮಂತ್ರಿಗಳಲ್ಲಾರೆಂದು ಯಾರೂ ಹೇಳಿಲ್ಲ ಹಿಂದಿನ ಮಂತ್ರಿ ಮಂಡಲದಲ್ಲಿದ್ದು ಪ್ರಸಕ್ತ ಮಂತ್ರಿಗಳಾಗಿರುವವರಲ್ಲಿ ಈ ಆರುಮಂದಿ ಇರುವರೆಂದು ಮಾತ್ರ ಊಹಿಸಬಹುದು

ಮದ್ರಾಸಿಗೆ ಬಂದ ಶ್ರೀ ಶಂಕರರಾವ್ ದೇವರು ಶ್ರೀ ಕಾರಂತರೇ ಮೊದಲಾದ ವರನ್ನು ಕೂಡರು ಆಗ ಇವರು ತಾವು ಹೊರಿಸಿದ ಆರೋಪಗಳ ಕುರಿತು ಸಂಬಂಧಪಟ್ಟ ಮಂತ್ರಿಗಳ ಕಳುಹಿಸಿದ ಉದಾಹರಣೆಗಳ ಪ್ರತಿಗಳನ್ನು ತಮಗೆ ಒದಗಿಸಬೇಕೆಂದು ಒರಹ ಮೊಲಕ ಕೇಳಿಕೊಂಡರು

ಅದಕ್ಕೆ ಶ್ರೀ ದೇವರು ತಾವು ಮಾಡುವ ವಿಚಾರಣೆ ಕೇವಲ ಪ್ರಾಥಮಿಕ ರೀತಿಯದು. ಆಗತ್ಯವೆಂದು ಕಂಡರೆ ಮುಂದೆ ಹೆಚ್ಚಿನ ವಿಚಾರಣೆ ಮಾಡಬಹುದೂ ನೀವು ಹೊರಿಸಿರುವ ಆರೋಪಗಳಿಗೆ ಸಿಮ್ಮೋಡನೆ ಸಾಕಷ್ಟು ರುಜುವಾತುಗಳಿರಬೇಕು ಅವನ್ನು ನೀವು ಒದಗಿಸಿ ಈ ಆರೋಪಗಳು ಸರಾಧಾರವಲ್ಲವೆಂದು ನೀವು ಮೊದಲಾಗಿ ತೋರಿಸುವುದೇ ನಿಮ್ಮ ಕೆಲಸವೆಂದು ಶ್ರೀ ಕಾರಂತ ಮೊದಲಾದವರಿಗೆ ತಿಳಿಸಿದರಂತೆ.

ಆರೋಪಗಳು ಕ್ಷುಲ್ಲಕ ಆರೋಪಗಳಲ್ಲ ವೆಂದು ತೋರಿಸುವ ಸಮಯವು ಈಗ ಅಲ್ಲ. ಬಾಬು ರಾಜೇಂದ್ರ ಪ್ರಸಾದರು ನಮ್ಮ ಹೇಳಿಕೆಗಳನ್ನು ಪೂರ್ಣ ಕೇಳಿ ಮಂತ್ರಿಗಳೊಡನೆ ಉದಾಹರಣೆ ಕೇಳಿದ್ದರು. ಇಷ್ಟು ಮುಂದುವರಿಸಿದ ಬಳಿಕ ಈಗ ವಿಚಾರಣೆ ಸರಿಯಾಗಿ ನಡೆಯಬೇಕಾದರೆ ಮಂತ್ರಿಗಳು ಕೊಟ್ಟ ಉದಾಹರಣೆಗಳನ್ನು ನಮಗೆ ತೋರಿಸಬೇಕು. ಮುಂದೆ ಯಾವ ದಾಖಲೆಗಳನ್ನು ಪರಿಶೀಲಿಸಿದರೆ ಸತ್ಯಾಂಶ ಗೊತ್ತಾಗುವುದೆಂದು ಆಗ ನಾವು ಹೇಳಲು ಸಾಧ್ಯವಾಗುತ್ತದೆ. ಈ ರೀತಿ ಶ್ರೀ ಕಾರಂತರು ವಾದಿಸಿದರು.

ಶ್ರೀ ದೇವರು ಕಾರಂತರು ತಮ್ಮ ಆಧಾರಗಳನ್ನು ಹೇಳಬೇಕೆಂದೂ ಶ್ರೀ ಕಾರಂತರು ಮಂತ್ರಿಗಳ ಉದಾಹರಣೆಗಳ ಪ್ರತಿಗಳನ್ನು ಕೊಡಬೇಕೆಂದೂ ಸಾಧಿಸುತ್ತಲಿದ್ದು ಕೊನೆಗೆ ಶ್ರೀ ದೇವರು ತಮಗೆ ತೋಚಿದ ರೀತಿಯಲ್ಲಿ ಏನೋ ವಿಚಾರಣೆ ಮಾಡಿ ವರ್ಕಿಂಗ್ ಕಮಿಟಿಗೆ ವರದಿ ಒಪ್ಪಿಸುವುದಾಗಿ ಹೇಳಿ ಹೋಗಿರುತ್ತಾರೆ

ಶ್ರೀ ಶಂಕರರಾವ್ ದೇವರಿಗೂ ಶ್ರೀ ಕಾರಂತರಿಗೂ ನಡೆದ ಪತ್ರ ವ್ಯವಹಾರ ಮದ್ರಾಸಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ

ಶ್ರೀ ದೇವರು ಮಂತ್ರಿಗಳ ಉದಾಹರಣೆಗಳ ಪ್ರತಿಗಳನ್ನು ಶ್ರೀ ಕಾರಂತರಿಗೆ ಒದಗಿಸಲ್ಲು ಒಪ್ಪಿದ್ದರೆಂದೂ ಮತ್ತೆ ಕೊಂಗ್ರೆಸ್ ಅಧ್ಯಕ್ಷ ಪಟ್ಟಾಭಿ ಸೀತಾರಾಮಯ್ಯನವರೊಡನೆ ವಾತುಕತೆ ನಡೆಸಿದ ಬಳಿಕ ಇವನ್ನೊದಗಿಸಲು ಸರಕಾರಿಸಿದರೆಂದೂ ಶ್ರೀ ಕಾರಂತರು ತಮ್ಮ ಪತ್ರಗಳಲ್ಲಿ ಹೇಳುತ್ತಾರೆ. ಶ್ರೀ ದೇವರು ಇದನ್ನು ತಮ್ಮ ಪತ್ರಗಳಲ್ಲಿ ನಿರಾಕರಿಸುತ್ತಾರೆ

ಕಾಂಗ್ರೆಸಿನ ಕಾರ್ಯದರ್ಶಿಯಾಗಿರುವ ಶ್ರೀ ಕಾಳಾ ವೆಂಕಟ್ರಾವರ ಮೇಲೆ ಕೂಡಾ ಇದೇ ಆರೋಪಗಳ ವಿಚಾರಣೆಗೆ ಅದೇ ಸಂಸ್ಥೆಯ ಇನ್ನೊಬ್ಬ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವರನ್ನು ನೇಮಿಸಿದ್ದೇ ಸರಿಯಲ್ಲ. ಅದರ ಮೇಲೆ ಕೊಂಗ್ರೆಸ್ ಅಧ್ಯಕ್ಷರು ಮತ್ತೆ ಮತ್ತೆ ಕೈಪಾಕಿ ಈ ಕ್ರಮದಲ್ಲಿ ಮುಂದುವರಿಸಬೇಕೆಂದು ಸೂಚಿಸುತ್ತಾ ಹೋಗುವುದು ಕೇವಲ ಅಕ್ಷಮ್ಯವೆಂದೂ ಶ್ರೀ ಕಾರಂತರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ

ಯಾರನ್ನಾದರೂ ನಿಷ್ಪಕ್ಷಪಾತೀ ಜಡ್ಜರನ್ನು ಈ ಕಾರ್ಯಕ್ಕೆ ನೇಮಿಸಬೇಕೆಂದು ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಿಗೂ ಭಾರತ ಸರಕಾರದ ಪ್ರಧಾನ ಮಂತ್ರಿಗಳಿಗೂ ಶ್ರೀ ಕಾರಂತರೇ ಮೊದಲಾದವರು ಪುನಃ ವಿನಂತಿ ಮಾಡಿರುವರೆಂದು ತಿಳಿದು ಬರುತ್ತದೆ.

ಶ್ರೀ ಶಂಕರರಾವ ದೇವರು ಮಂತ್ರಿಗಳ ಉದಾಹರಣೆಗಳನ್ನು ಶ್ರೀ ಕಾರಂತ ಮೊದಲಾದವರಿಗೆ ಒದಗಿಸಲು ಮೊದಲು ಒಪ್ಪಿ ಅನಂತರ ಕಾಂಗ್ರೆಸ್ ಅಧ್ಯಕ್ಷರ ಮಾತು ಕೇಳಿ ತಿರುಗಿಬಿದ್ದರೆಂಬ ಶ್ರೀ ಕಾರಂತರ ಆರೋಪ ನಿಜವಿರಲಿ ಇಲ್ಲದಿರಲಿ ಈ ವಿಚಾರಣೆ ಈ ರೀತಿ ಸಾಗಿಸಿ ಅವ್ಯರ್ಥಕ್ಕೇ ತೀರಿಸುವ ಹಂಚಿಕೆ

(೬ನೇ ಪುಟ ನೋಡಿ)

ಮಾನ್ಯ ಗೋಪಾಲ್ಕರ್ ರೆಡ್ಡಿಯವರು ಬಂಧಿತರಾಗಿರುವರು

ಮದ್ರಾಸ್ ಸರಕಾರದ ಹಣಕಾಸು, ಖಾತೆಯ ಮಂತ್ರಿಗಳಾದ ಮಾನ್ಯ ಗೋಪಾಲ ರೆಡ್ಡಿಯವರು ಕೆಲವು ವಾರಗಳಲ್ಲಿ ನ ಮ್ಮ ಜಿಲ್ಲೆಗೆ ಸಂಚಾರಾರ್ಥ ಬರಲಿರುವರೆಂದು ನಿರೀಕ್ಷೆಯಿದೆ. ನಿರಿಸಿದ ವೋಟಾರು ತೆರಿಗೆ ಸಂಬಂಧ ಹಾಲುಹವಾಲೆಗಳನ್ನು ಪರಿಶೀಲಿ ಸಲೂ, ಈ ಜಿಲ್ಲೆಯ ಮೋಟಾರು ವ್ಯವಸ್ಥಾ ಕ್ರಮದ ವಿಶೇಷ ನಿರೀಕ್ಷಿತಿಯನ್ನು ಅವರು ಪರಾಮರ್ಶಿಸುವರೆಂದೂ ಊಹಿಸಲಾಗಿದೆ. ಸ್ವಾತಂತ್ರ್ಯಾನಂತರ, ಶ್ರೀ ರೆಡ್ಡಿಯವರು ನಮ್ಮ ಜಿಲ್ಲೆಗೆ ಬಂದಿರಲಿಲ್ಲ, ರಾಜಾಜಿ ಯವರ ಮಂತ್ರಿ ಮಂಡಳದಲ್ಲಿದ್ದಾಗ ಒಮ್ಮೆ ಬಂದಿದ್ದರು. ಧೀರ್ಘಕಾಲ ಬಾರದೆ ಇದ್ದು ದೂ ಈಗಿನ ಅವರ ಬರುವಿಕೆಯ ಒಂದು ಕಾರಣವಾಗಿರಬಹುದೆಂದು ಭಾವಿಸ ಲಾಗಿದೆ

ಪ್ರಬುದ್ಧ ಬಂದರು

ನೈಮ ಕರಾವಳಿಯಲ್ಲಿ ಪ್ರಬುದ್ಧ ಬಂದ ರೊಂದನ್ನು ಅಭಿವೃದ್ಧಿ ಪಡಿಸುವವರ ಕುರಿತು ಸದ್ಯದಲ್ಲೇ ಕೊನೆಯ ನಿರ್ಣಯವು ವ್ಯಕ್ತ ವಾಗಬಹುದೆಂದು ನಿರೀಕ್ಷಿಸಲಾಗಿದ ಈಗ ಕೊನೆಯ ಹಂತದಲ್ಲಿರುವ ತೆರಿಕೀಳುನೆಯ ನುಗುಣವಾಗಿ ಕಾರವಾರ ಭಟ್ಕಳ ಕುರಿತಾಗಿ ಪರ್ಯಾಲೋಚನೆಯು ಬಿಟ್ಟುಬಿಡಲಾಗಿದೆ ಯೆಂದೂ ಬಂದರ ಚುನಾವಣೆಯು ಪ್ರಶ್ನೆ ಮಂಗಳೂರು ಮಲ್ಪೆಗಳೊಳಗೆ ಮಾತ್ರ ಜೋಲಾಡುತ್ತಿರುವದೆಂದೂ ಇತ್ತೀಚೆಗಿನ ವರದಿಗಳು ತಿಳಿಸುತ್ತವೆ ಈ ಸಂದರ್ಭ ದಲ್ಲಿ ಮಂಗಳೂರಿನ ಕುರಿತು ಹಲವು ಆಕ್ಷೇ ಪಗಳು ಎದ್ದು ತೋರುತ್ತಿವೆಯಾಗಿ ಈ ಸಂಬಂಧ ವ್ಯಕ್ತವಾದ ಎಸೋಸಿಯೇಟೆಡ್ ಪ್ರೆಸ್ ವರದಿಯಲ್ಲಿ ಹೇಳಲಾಗಿದೆ ಮಲ್ಪೆ ಯು ಹೆಚ್ಚಿನ ಅನುಕೂಲವಿರುವುದಾಗಿ ಬಂದರು ಸಮಿತಿಯ ಅಭಿಪ್ರಾಯವಿರಬಹು ದೆಂದೂ ಅದರಲ್ಲಿ ತಿಳಿಸಲಾಗಿದೆ ಆದರೆ ಮಂಗಳೂರಿನ ಧುರೀಣರು ಈ ವರದಿಯು ಪಕ್ಷಪಾತದ್ದೆಂದು ಅಭಿಪ್ರಾಯ ಪಡುತ್ತಾರೆ ಆಗಲೇ ತುಂಬಾ ಬೆಳೆದಿರುವ ಮಂಗಳೂರೇ ಚುನಾಯಿತವಾಗಬಹುದೆಂದೂ ಅವರ ತರ್ಕವಿದೆ

ಸಂಗೀತ ಕಚೇರಿ

ಸ್ವಾಮಿ ವಲ್ಲಭದಾಸ್ ಎಂಬ ಉತ್ತರಾದಿ ಸಂಗೀತ ತಜ್ಞರು ಈಚೆಗೆ ಮಂಗಳೂರಲ್ಲಿ ಕೆಲವು ಕಡೆ ತಮ್ಮ ಅನೋಘ ಸಂಗೀತ ಕಚೇರಿಯನ್ನು ಜರಗಿಸಿದರು ಕಳೆದ ತಾ ೧೨ರಂದು ಶ್ರೀ ಸಾಹುಕಾರ್ ವೆಂಕಟೇಶ ಪೈಯವರ ರಂಗಭವನದಲ್ಲಿ ಜರಗಿದ ಕಚೇ ರಿಯಲ್ಲಿ ಸ್ವಾಮಿಜಿಯವರಿಗೆ ಒಂದು ಧನ ನಿಧಿಯನ್ನು ಅರ್ಪಿಸಲಾಯಿತು

ಚಿತ್ರ ಅನಾವರಣ ಸಮಾರಂಭ

ಶಂಕರ್‌ವಿಠಲ ಮೋಟಾರು ಕಂಪೆನಿ ಲಿಮಿಟೆಡ್–ಈ ಸಂಸ್ಥೆಯ ಮೆನೆಜಿಂಗ್ ಡೈರೆಕ್ಟರಕಾಗಿದ್ದ ದಿ ನ ಕೆ ಶೇಷಗಿರಿ ರಾವ್ ಅವರ ತೈಲಚಿತ್ರ ಅನಾವರಣ ಸಮಾರಂಭವು ಸದ್ರಿ ಸಂಸ್ಥೆಯ ಮುಖ್ಯ ಆಫೀಸಿನಲ್ಲಿ ಕಳೆದ ತಾ ೧೨ರಂದು ಜರ ಗಿತು. ಉಡುಪಿಯ ಡಾ। ಟಿ. ಮಾಧವ ರೈ ಅವರು ಅನಾವರಣ ಸಮಾರಂಭವನ್ನು ಜರಗಿಸಿದರು.

ಹವಾಮಾನ

ಕಳೆದ ವಾರದಲ್ಲಿ ಸ್ವಲ್ಪ ಬಿಸಿಲು ಕಾದಿ ರುವುದರಿಂದ ಜಿಲ್ಲೆಯ ಕೃಷಿ ಪ್ರದೇಶಗಳಲ್ಲಿ ಕಾವಳಿ ಮಾಡುತ್ತಿದ್ದ ಸೈನ್ಯ ಹುಳುಗಳು

ನಾಶವಾಗಿರುವದೆಂದು ತಿಳಿದುಬರುತ್ತದೆ. ಇಲಾಖೆಯವರೂ ಇವುಗಳನ್ನು ನಾಶ ಮಾಡುವ ಕಾರ್ಯಕ್ರಮವನ್ನು ಭರದಿಂದ ಜರಗಿಸುತ್ತಿರುವರು.

ಕಳ್ಳತನದ ಆರೋಪ

ಪೆಂಟ್‌ಲೆಂಡ್ ಪೇಟೆಯ ಅಸುವಾಸಿನಲ್ಲಿ ರಾತ್ರಿ ಪಹರೆ ಜರಗಿಸುವ ಫೂರ್ಕಾ ಸಿಪಾ ಯಿಯೊಬ್ಬನು ಅಲ್ಲಿಯ ಉರ್ವ ಮಾರ್ಕೇ ಟಿನ ಬಳಿ ರಾತ್ರೆ ಕಾಲದಲ್ಲಿ ಸಂದೇಹಾಸ್ಪದ ರೀತಿಯಲ್ಲಿ ತಿರುಗುತಿದ್ದ ಒರ್ವ ತರುಣ ಪ್ರಾಯದವನನ್ನು ಹಿಡಿದಿರುವನು ತರುಣನ ಬಳಿ ಬೇರೆ ಯಾರದೊ ಹೆಸರಿರುವ ಒಂದು ಪೆನ್ನು, ಕೆಲವು ಪೆನ್ಸಿಲುಗಳ ಕಟ್ಟುಗಳು ಮತ್ತಿನ್ನಿತರ ಸಾಮಾನುಗಳು ದೊರಕಿವೆ ಅವನನ್ನು ಪೋಲಿಸರ ವಶಕೊಡಲಾಗಿ ದೆಂದು ತಿಳಿದುಬರುತ್ತದೆ

ಹಾಲು ನೀರು ಬೆರಿಕೆ

ಹಾಲು ನೀರಿನ ಬೆರಿಕೆ ಸಂಬಂಧದ ವಿಧಿ ಗಳನ್ನು ಮೀರಿದ ಆರೋಪದ ಸಂಬಂಧ ರಾಮಚಂದ್ರ ಚಂದ್ಯಾಣಿಗೆ ರೂ ೭೫ ಸಂತಾನ ಲೋಪೊಗೆ ರೂ ೫೦–ಲಾರೆನ್ಸ್ ಲೊಬೋಗೆರೂ ೩೦ ಲಾರೆನ್ಸ್ ನುಡ್ರಿನಳಿಗೆ ರೂ ೩೦ ಮತ್ತು ಕೂಜಬ್ಯಾಗೆರೂ ೩೫ರ ಜುಲ್ಮಾನೆ ವಿಧಿಸಲಾಗಿದೆ

ಅಕ್ರಮ ಕೂಟದ ಆರೋಪ–ಬಿಡುಗಡೆ

ಉಡ್ರಿ ಬೀಡಿ ಲೇಬರ್ ಯೂನಿಯನಿಗೆ ಸೇರಿದ ಹುನೇನ್ ಬ್ಯಾರಿ ಮತ್ತ ಅವನ ಸಹೋದರ ಮುತ್ತೋಲಿ ಬ್ಯಾರಿ ಮೊದಲಾದ ಕೆಲವರ ಮೇಲೆ ಅಕ್ರಮ ಕೂಟ ಮಾಡಿದರ ಒಬ್ಬನನ್ನು ಹೊಡೆದುದರ ಕುರಿತು ಮೊಕ ದ್ದಮೆ ಹೂಡಲ್ಪಟ್ಟಿತ್ತು ಎರಡನೆ ಆರೋಪಿ ಮುಸೋಲಿ ಬ್ಯಾರಿ ಒಂದು ಪ್ರತಿ ಆರೋಪ ದ ಧೀರ್ಘಾದಿಯನ್ನು ಅದೇ II ಎಡಿ। I ಕ್ಲಾಸ್ ಮೆಜಿಸ್ಟ್ರೇಟರಲ್ಲಿ ದಾಖಲು ಮಾ ಡಿದ್ದ ವಿಚಾರಣೆಯಾದಾಗ ಎರಡೂ ಕಡೆ ಯವರು ಸಾಕ್ಷ್ಯಗಳನ್ನು ಮರೆಮಾಚಿದ್ದ ರೆಂದು ಮೆಜಿಸ್ಟ್ರೇಟರು ಆರೋಪಿಗಳನ್ನು ಬಿಟ್ಟರು

ಹಳೇ ಅಪರಾಧಿಗೆ ಜೈಲು

ನಂದಾವರ ಇಸ್ಮಾಯೆಲ್ ಬ್ಯಾರಿ ಎಂಬ ವನ ಮೇಲೆ ಗಿಲೀಟು ಬಂಗಾರವನ್ನು ವಂಚನೆಯಿಂದ ಸಾರ್ವಜನಿಕಕ್ಕೆ ಮಾರು ತ್ತಾನೆ ಮತ್ತು ಅಡವು ಇಡುತ್ತಾನೆ ಎಂಬ ಆರೋಪದ ವಿಚಾರಣೆಯಾಗಿ ಆರೋಪಿಗೆ 6 ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ ಈತ ಕೇಡಿಯೆಂದೆನಿಕೆಯಾಗಿದ್ದು ನುಂಜೆ 19 ಸಲ ಸೆರೆಮನೆಯನ್ನು ಕಂಡಿದ್ದಾನೆಂದೂ ತಿಳಿದುಬಂದಿದೆ

ಮದ್ಯವಿಧಿ ಉಲ್ಲಂಘನ

ಮದ್ಯನಿಷೇಧದ ವಿಧಿಯ ಉತ್ತಿಕ್ರಮ ಕ್ಕಾಗಿ ಲಾರೆನ್ಸ್ ಪೆಂಡೊಸ್ಸಾಗ ರೂ ೪೦ ಜುಲ್ಮಾನೆ ವಿಧಿಸಲಾಗಿದೆ

ವಿಶ್ವಾಸ ವಂಚನೆಗೆ – ಸಜೆ

ಉಡುಪಿ ತಾಲೂಕು ಕಲ್ಯಾಣಪುರ ಶ್ರೀನಿ ವಾಸ ನಾಯ್ಕ್ ಯಾನೆ ರಾಮ ಎಂಬಾತ ಕಳೆದ ತಾ ೨೯-೬-೪೯ರಂದು ಇಲ್ಲಿನ ವೆಟ್ಟಾಸರ್ ಮಾರ್ಕೆಟ್ ರಸ್ತೆಯ ನಿವಾಸಿ ಮುಹಮ್ಮದ್ ಖಾನ್ ಎಂಬವರಲ್ಲಿಂದ ಸುಮಾರು ೧೫೦ ರೂ. ಬೆಲೆ ಬಾಳುವ ಒಂದು ಸೈಕಲ್ ಪಡೆದು ಅದನ್ನು ಮಾರಲೆತ್ನಿಸುವಾಗ ಸಿಕ್ಕಿ ಬಿದ್ದು ಹಾಗೆ "ವಿಶ್ವಾಸ ವಂಚನೆ" ಮಾಡಿದ ಆರೋಪಕ್ಕೆ ಗುರಿಯಾಗಿ 7 ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟನು.

ಹರಿಕಥಾ ಕಾಲಕ್ಷೇಪ

ತಲಪಾಡಿಯ ಶ್ರೀ ದುರ್ಗಾ ಪ್ರಸಾದಿಕ ಪ್ರಾಥಮಿಕ ಶಾಲೆಯಲ್ಲಿ ಕಳೆದ ತಾ 14, 16ರಲ್ಲು ತಿರುವಂಕೂರು ಮಹಾರಾಜರ ಆಶ್ರಯದಲ್ಲಿ ಸಂಗೀತ ತರಬೇತಿ ಹೊಂದಿದ ಪ್ರಖ್ಯಾತ ಬ್ರಹ್ಮ ಶ್ರೀ ಉಡುಪಿ ವ್ಯಾಸಾ ಚಾರ್ ಅವರಿಂದ ಹರಿಕಥಾ ಕಾಲಕ್ಷೇಪವು ಜರಗಿಸಲ್ಪಟ್ಟಿತು ಶ್ರೀಯುತರು ಕನ್ನಡ ನಾಡಿನಲ್ಲಿ ಹಲವರಿಗೆ ಸಂಗೀತ ವಿದ್ಯೆಯನ್ನು ಕಲಿಸುತ್ತಲೂ ಇರುವರು

(ಜನೇ ಪುಟದಿಂದ)

ಮಾತ್ರ ಯೋಗ್ಯವೆಂದು ಯಾರೂ ಒಪ್ಪು ವಾರಲ್ಲ ಶ್ರೀ ಕಾರಂತರೇ ಮೊದಲಾ ದವರ ತಮ್ಮ ಅಧಿಕಾರ ಕಳೆದುಕೊಂಡು ಅತೃಪ್ತಿಪಟ್ಟವರೆಂದು ಹೇಳಿದ ಮಾತ್ರಕ್ಕೆ ಅವರು ಶುದ್ಧಸರಾಧಾರ ಆರೋಪಗಳನ್ನು ಹೊರಿಸುವಷ್ಟು ಬೇಜವಾಬ್ದಾರಿ ಇರುವ ವೆಂದ ಬೇರೆ ಮೂಸಿದ ಪತ್ರಿಕೆಗಳೂ ಒಪ್ಪಲಿಲ್ಲವು

ಈ ಆರೋಪಗಳಲ್ಲಿ ಕಥಿತ ಶ್ರೀ ಕಾರಂತ ರು ಸೂಚಿಸುವಂತೆ ಇಂಥ ವಿಚಾರಣೆ ನಡೆಸಿ ಅಭ್ಯಾಸವುಳ್ಳ ಯಾರೊಬ್ಬ ಜನ್ಮರನ್ನು ನೇಮಿಸಿ ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸುವುದು ಕಾಂಗ್ರೆಸ್ ಸಂಸ್ಥೆಯ ಒಳ್ಳೆ ಯ ಹೆಸರಿನ ದೃಷ್ಟಿಯಿಂದ ಅತ್ಯಾವಶ್ಯಕ ವಿರುತ್ತದೆ

ಶ್ರೀ ಕಾರಂತರೇ ಮೊದಲಾದವರು ತಂದ ಆರೋಪಗಳು ಈ ವಿಚಾರಣೆಯಂತೆ ನಿರಾ ಧಾರವಾದ ತೀರ್ಮಾನವಾದಲ್ಲಿ ಈ ಬಗೆ ಯ ಆರೋಪಗಳನ್ನು ಕೇವಲ ವ್ಯಕ್ತಿ ದ್ವೇಷ ದಿಂದ ಮಾಡಿದ ತಪ್ಪಿಗಾಗಿ ಕಾಂಗ್ರೆಸಿನ ಹೆಸರಿ ಗೇನೆ ಕಲಂಕ ಹತ್ತಿಲಿ ಮುಚ್ಚಿಸಿದ ಶ್ರೀ ಕಾರಂತ ಮೊದಲಾದವರ ಮೇಲೆ ಕಾಂಗ್ರೆ ಸಿನವರು ತಕ್ಕ ಶಿಸ್ತು ಜಾರಿವಾಡಿ ಇವರ ನ್ನು ಶಿಕ್ಷಿಸಬೇಕು

ಇದಕ್ಕೆ ಬದಲು ವಿಚಾರಣೆಯನ್ನೆ ಸಾರಿಸಿ ಬಿಟ್ಟರೆ ಮೊದಲೇ ಸಂಶಯದಲ್ಲಿರುವ ಮಹಾಜನರ ಮನಸ್ಸಿನಲ್ಲಿ ಇನ್ನಷ್ಟು ಸಂಶ ಯಗಳನ್ನು ಒಲಪಡಿಸಿ ಕಾಂಗ್ರೆಸಿನ ಮಂತ್ರಿ ಗಳ ಮೇಲೆ ಮಾತ್ರವಲ್ಲ ಕಾಂಗ್ರೆಸ್ ಸಂಸ್ಥೆ ಯ ಸಂಚಾಲಕರ ಮೇಲೆ ಕೂಡಾ ಜನರ ವಿಶ್ವಾಸ ಹೋಗಿ ಕಾಂಗ್ರೆಸ್ ಸಂಸ್ಥೆಯ ಅಧಃಪತನಕ್ಕೆ ಇದು ಕಾರಣವಾದೀತು

ಕಾಂಗ್ರೆಸ್ ಮುಂಖ್ರಿಗಳಿದ್ದವರು ತಮ ವರ್ತನವನ್ನು ಶುದ್ಧರೀತಿ ಇಟ್ಟುಕೊಳ್ಳಬೇ ಕೆಂಬ ಪ್ರಶ್ನೆ ಸಾಮಾನ್ಯ ಪ್ರಶ್ನೆಯಲ್ಲ ಭಾರತದ ಭವಿಷ್ಯವೇ ಈಗಿನ ಪರಿಸ್ಥಿತಿಯಲ್ಲಿ ಇಂಥ ಪ್ರಶ್ನೆಗಳ ಮೇಲೆ ಹೊಂದಿಕೊಂಡಿ ರುತ್ತದೆ ಹೀಗಾಗಿ ವರ್ಕಿಂಗ್ ಕಮಿಟಿಯ ವರು ಈ ಪ್ರಶ್ನೆಯನ್ನು ಸಾರಿಸಲಿಕ್ಕೆ ಬಿಡದೆ ಸರಿಯಾದ ವಿಚಾರಣೆಗೆ ಒಳಪಡಿಸುವುದು ಅತ್ಯಗತ್ಯವಿರುತ್ತದೆ

ಮದ್ಯಪಾನ ನಿಷೇಧವೆಂದರೇನು?

★ ಅದು ಜನಾಂಗದ ಸಂಪತ್ತನ್ನುಳಿಸುವುದು.

★ ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗ ಗೊಡಲು ತರಬೇತಿ ಕೊಡುವುದು.

★ ಅದ ಅನಿವಾರ್ಯದ ಒಂದು ಸಾಮಾಜಿಕ ಸುಧಾರಣೆ.

★ ಅದ ಗೃಹಜೀವನದ ಪಾವಿತ್ರ್ಯವನ್ನು ಕಾಪಾಡುವುದು.

★ ಅದ ಪ್ರತಿಯೋರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ.

ಕೆನರಾ ಬ್ಯಾಂಕ್, ಲಿಮಿಟೆಡ್

ಇದರ ಸೇವಾದಾನ.

ಭಾರತದ ಸ್ವಾತಂತ್ರ್ಯವನ್ನು ರಕ್ಷಿಸಿರಿ
ಸೈನ್ಯಗಳಿಗೆ ಸರ್ದಾರ್ ಪಟೇಲರ ಕರೆ

ಡೆಹರಾಡೂನಿದಲ್ಲಿ ಸಶಸ್ತ್ರ ಸೈನ್ಯಶಿಕ್ಷಣಾಲಯವನ್ನು ಉದ್ಘಾಟಿಸುವ ಸಂದರ್ಭದಲ್ಲಿ ಗೃಹ ಮಂತ್ರಿ ಸರ್ದಾರ್ ಪಟೇಲರು ಇತ್ತ ಸ್ಫೂರ್ತಿದಾಯಕ ಭಾಷಣದ ಸಾರಂಶವು ಮನನೀಯವಾಗಿದೆ:

"ಯುದ್ಧವ್ಯಾಧಿಗೆ ಸಿಲುಕಿದ ಜಗತ್ತು ಮರಣೋನ್ಮುಖ ರೋಗಿಯಂತಾಗಿದೆ. ಇಸ್ಪೊಂದು ಶಸ್ತ್ರಾಸ್ತ್ರಗಳಿಂದಲೂ, ಇಸ್ಪೊಂದು ಹಿಂಸೆಯಿಂದಲೂ, ಇನ್ನೂ ಅದಕ್ಕೆ ಶಾಂತಿಫಲವು ದೊರೆಯದಂತಾಗಿದೆ. ನಮ್ಮ ವಿವಾದಗಳನ್ನು ನೆಮ್ಮದಿಯಿಂದೊಡಗೂಡಿದ ಅಹಿಂಸಾತ್ಮಕ ವಿಧಾನಗಳಿಂದ ಇತ್ಯರ್ಥಿಸಿಕೊಳ್ಳುವುದೇ ಶಾಂತಿ ಸ್ವರ್ಗದ ದಾರಿ. ಅಂತಹ ಪರಿಸ್ಥಿತಿಯಲ್ಲಿ ಸ್ಕಾಟ್ ಸಂಸ್ಥೆಯ "ಸದಾಸಿದ್ಧವಿರಿ" ಎಂಬ ನೆಚ್ಚಿನ ನುಡಿಯೇ ನಮ್ಮ ನಿತ್ಯದ ನುಡಿಯಾಗಿರಬೇಕಾದುತ್ತದೆ.

"ಈ ಕಾಪಿನ ಮಾತುಗಳ ಅರ್ಥವನ್ನು ಇಲ್ಲಿ ತರಬೇತಿ ಹೊಂದಲು ತರುಣವರ್ಗಕ್ಕೆ ಅರ್ಥವತ್ತಾಗಿ ತಿಳಿಸುವ ಹೊಣೆಗಾರಿಕೆಯು ಇಲ್ಲಿಯ ಅಧ್ಯಾಪಕರದಾದ ಭಾರತ ಸೈನ್ಯಾಧಿಕಾರಿಗಳ ಮೇಲಿದೆ. ಅವನ್ನು ಕಾರ್ಯರೂಪಕ್ಕೆ ತರುವುದೂ ಅತ್ಯಾವಶ್ಯಕ ವಿದ್ಯಾಲಯದ ಬಳಗೂ ಹೊರಗೂ ಮುತ್ತು ನೀವು ಮುಂದೆ ಕರ್ತವ್ಯದ ಹೊಣೆ ಹೊತ್ತಪರಾದಾಗಲೂ ಅವನ್ನು ಕಾರ್ಯಾಚರಣೆಗಿಳಿಸುವ ಪ್ರಯತ್ನದಲ್ಲೇ ಇರಬೇಕು.

"ಮನೋವಾಕ್ಯಾಯ ಕರ್ಮಗಳಲ್ಲೂ ಸದಾಸಿದ್ಧವಾಗಿರುವಿಕೆಯ ಈ ಮಂತ್ರವು ನಿಮ್ಮಲ್ಲಿ ಬಾಳಿಕೊಂಡಿರುವಂತಾಗಿ, ಉದಕ್ಕೆ ನುಸಾರ ದೇಶದ ಈ ಧ್ವಜದ ಗೌರವವನ್ನು ವ್ಯಾಪಾರ್ಯವನ್ನಾದರೂ ಮಾಡಿ ರಕ್ಷಿಸಬೇಕೆಂಬುದನ್ನು ಮರೆಯದಿರಿ. ನೀವು ನನ್ನೆದುರು ಇಂದು ಪ್ರದರ್ಶಿಸಿದ ಸುವ್ಯವಸ್ಥೆ ಮತ್ತು ಶುಚಿತ್ವಗಳು ನನ್ನಲ್ಲಿ ತುಂಬಾ ಹಾರೈಕೆಯನ್ನು ಮೂಡಿಸಿದೆ. ನಿಮ್ಮ ಕರ್ತವ್ಯಬದ್ಧ ಕೈಗಳಲ್ಲಿ ನಮ್ಮ ನಾಡಗಡಿಗಳು, ನಮ್ಮ ಗಗನ ನೂರ್ಗಗಳು, ನಮ್ಮ ಸಾಗರಾಂತರಗಳು ಸುಭದ್ರವಾಗಿರುತ್ತವೆಂದು ನನಗೆ ಖಚಿತವಾಗಿದೆ.

ಸ್ವಾತಂತ್ರ್ಯ

"ನಮ್ಮ ಹೋರಾಟ ಕಾಲದಲ್ಲಿ ನಾವು ಪರಕೀಯ ಆಡಳಿತದ ಅನೇಕ ಅಧಿಕಾರ ದುರ್ಗಗಳನ್ನು ಒಳಹೊಕ್ಕು ಅಲ್ಲಿ ದೃಢವಾಗಿ ಕಾಲೂರಿದ್ದೆವು. ಆಗಿನ ಸೈನ್ಯ, ವಿಮಾನ ಪಡೆ, ನೌಕಾಪಡೆಗಳು ಸಬಲವಾದ ಅಭ್ಯಂತರಗಳೂ ಆಗಿದ್ದುವು. ಪರಕೀಯರು ಆಳವಾದ ನಿರಾಕ್ಷೇಪಣೆಯಿಂದ ನಮ್ಮೆ ವರಿಗೆ ಸಾಕಷ್ಟು ಸೈನ್ಯವಿದ್ದೆಯ ರಹಸ್ಯವನ್ನು ಕಲಿಸದಾದರು. ಇದರ ಪರಿಣಾಮವಾಗಿ ನಮ್ಮ ಸಶಸ್ತ್ರ ದಳಗಳ ಸ್ವಗತಿಯು ಈ ದಿಶೆಯಲ್ಲಿ ಸಹಜವಾಗಿ ಮುಂದಗತಿಯದಾಯಿತು. ಸೈನ್ಯ ಶಕ್ತಿಯ ದೃಷ್ಟಿಯಿಂದಲೂ ನಮ್ಮನ್ನವರು ನಿರ್ಬಲವಾಗಿಯೆ ಇರಿಸಿದರು. ಇಷ್ಟಾದರೂ ಕಳೆದ ಯುದ್ಧದಲ್ಲಿ ನಮ್ಮ ಸೈನ್ಯವನ್ನು ವಿಕಾಸಗೊಳಿಸಿ ಸುವ್ಯವಸ್ಥಿತ ಸಿದ್ಧತೆಯಲ್ಲಿರಿಸಬೇಕಾದ ಒತ್ತಾಯದ ವ್ಯವಸಂಗವು ಅವರಿಗೆ ಬಂತು. ಆ ಯುದ್ಧಾಂತ್ಯದಲ್ಲಿ ನಮ್ಮ ಸೈನ್ಯಾಧಿಕಾರಿಗಳು ಅನೇಕ ಯುದ್ಧಕ್ಷೇತ್ರಗಳಲ್ಲಿ ಹೊಣೆಗಾರಿಕೆಯ ಸ್ಥಾನಗಳನ್ನು ಪಡೆದು ಅವುಗಳ ಗೌರವಯುಕ್ತ ನಿರ್ವಹಣೆಯಿಂದ ಕೀರ್ತಿಶಾಲಿಗಳಾದರು. ನಮ್ಮ ಸೈನ್ಯದ ಸುವ್ಯವಸ್ಥೆಯು ಅಭಿಮಾನಾರ್ಹವಾಯಿತು.

"ಇಂದು ನಾವು ಪರಿಪೂರ್ಣವಾದ ಭಾರತೀಯ ಸೈನ್ಯವಡೆಯೊಂದನ್ನು ಪಡೆದಿರುವ ಹೆಮ್ಮೆಯನ್ನು ಹೊಂದುವಂತಾಗಿದೆ. ಮುಂದೆಯೂ ಬ್ರಿಟಿಷರ ಸಹಕಾರ ಸಹಾಯಗಳು ನಮಗೆ ದೊರಕುವಂತಾಗುವ ಪರಿಸ್ಥಿತಿಯನ್ನೂ ನಾವು ಕಲ್ಪಿಸಿದ್ದೇವೆ. ಬ್ರಿಟಿಷ್ ಸೌರ್ವಭೌಮ ಸರಕಾರದಿಂದ ಸೌಹಾರ್ದ ಪೂರ್ವಕವಾಗಿ ತೆರಿಪ್ಪಟ್ಟ ನುರಿತ ಬ್ರಿಟಿಷ್ ಸೈನ್ಯಾಧಿಕಾರಿಗಳು ಇನ್ನೂ ನಮ್ಮ ಸೈನ್ಯಗಳಲ್ಲಿರುವರ್ಥು. ಅವರ ವಿವೇಕವರ ಸಲಹೆಯಿಂದಲೂ ನಮ್ಮ ಸೈನ್ಯಗಳ ಮರಿ ಕೆಳ್ಳ ಅನುಭವದಿಂದಲೂ ನಮ್ಮ ಮಾತೃ ಭೂಮಿಯ ಗೌರವ ಪ್ರತಿಷ್ಠೆಗಳನ್ನು ಕಾಯಲು ಸಮರ್ಥವಾದದ್ದೂ ನಮ್ಮ ನವೀನ ಸ್ವಾತಂತ್ರ್ಯವನ್ನು ರಕ್ಷಿಸಲು ಸಹಾಯವಾಗುವಂತಹದೂ ಆದ ಶಕ್ತಿಯನ್ನು ನಾವು ಗಳಿಸುವೆವೆಂದು ಹಾರೈಸೋಣ."

ನಿಜವಾಗಿಯೂ ಎದೆ ಒಡೆದು ಮರಣವಾಗುವುದೆ?

ಶೋಕದಿಂದ ಒಬ್ಬನ ಹೃದಯ ಒಡೆದು ಹೋಯಿತು, ಅವನು ಮೃತನಪಟ್ಟ ಎಂದು ನಾವು ಓದುತ್ತೇವೆ ಇದು ನಿಜವಾಗಿ ಸಂಭವನೀಯವೆ?

ವಿಜ್ಞಾನಿಗಳು ಹೌದೆಂದು ಒಪ್ಪುತ್ತಾರೆ ಪ್ರಣಯಕಾರ್ಯದಲ್ಲಿ ತೀವ್ರ ನಿರಾಶೆ ಹೊಂದಿದವರೇ ಹೆಚ್ಚಾಗಿ ಜಗತ್ತಿನಲ್ಲಿ ಮೃತಹೊಂದುವರೆಂದು ವಿಮಾ ಸಂಸ್ಥೆಗಳ ಅಂಕೆ ಸಂಖ್ಯೆಗಳು ತೋರಿಸುತ್ತವೆ ಪ್ರೇಮದಾಟದಲ್ಲಿ ನಿರಾಶೆಯುಂಟಾಗುವುದರಿಂದ ಶರೀರದ ವ್ಯಾಧಿವಿರೋಧಕ ಶಕ್ತಿಯು ಗಣನೀಯ ಪ್ರಮಾಣದಲ್ಲಿ ಕುಂದುತ್ತದೆಯಂತೆ. ಇದರಿಂದ ಬಹುಬೇಗನೆ ಶಾರೀರಿಕ ಬೇನಗಳು ತಲೆದೋರಿ ಮೃತ್ಯುವಿನತ್ತ ಸಾಗಿಸುವುದು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ

ವಾರದ ವಿಜ್ಞಾನ ವರದಿಗಳು
ಹೊಸ ಭೂಗೃಹಗಳ ಸೃಷ್ಟಿ
ನಿರಂತರವಾಗಿ ಸಾಗುತ್ತಿದೆ

ವಿಶ್ವದ ಅತಿದೂರ ದಿಗಂತಗಳಲ್ಲಿ ಹೊಸ ಹೊಸ ಸೂರ್ಯಮಂಡಳಗಳು ಹುಟ್ಟುತ್ತಾ ಇವೆಯೆಂಬುದರ ಸಾಕ್ಷ್ಯಗಳನ್ನು ಸಂಯುಕ್ತ ಅಮೇರಿಕದ ತಜ್ಞ ನಕ್ಷತ್ರ ನಿರೀಕ್ಷಕರು ಸಾರಿದ್ದಾರೆ ನಮ್ಮದಂತಹದೇ ಮಿಲಿಯಾಂತರ ಸೂರ್ಯಮಂಡಳಗಳು ಈಗಾಗಲೇ ಅಸ್ತಿತ್ವದಲ್ಲಿವೆಯೆಂದವರು ಸೂಚಿಸುತ್ತಾರೆ.

ಕೆಲಿಫೋರ್ನಿಯದ ಮೌಂಟ್ ವಿಲ್ಸನ್ ಎಂಬಲ್ಲಿರುವ ಜಗತ್ತಿನ ಅತೀ ದೊಡ್ಡ ಜ್ಯೋತಿರ್ಮಂಡಲ ಅವಲೋಕನಾಲಯದ ಡಾ। ಪಾಲ್‌ಮೆರಿಲ್ ಅವರು ಇವರಲ್ಲೊಬ್ಬರು ಚಿಕಾಗೊ ವಿಶ್ವವಿದ್ಯಾಲಯದ ಡಾ। ಸ್ವಾವೆ ಅವರು ಹೀಗೆ ಹೇಳುತ್ತಾರೆ "ನಾವು ದುರ್ಬೀನುಗಳಿಂದ ನೋಡುತ್ತಿರುವಾಗಲೇ ಹೊಸ ಹೊಸ ನಕ್ಷತ್ರಲೋಕಗಳು ಸೃಷ್ಟಿಯಾಗುವುದನ್ನು ಕಾಣುತ್ತೇವೆ. ಕೆಲವು ಬರೀ 10 ಲಕ್ಷ ವರ್ಷಗಳ ಹಿಂದೆ ಹುಟ್ಟಿದಂತವುಗಳು. ನಕ್ಷತ್ರಗಳ ಸೃಷ್ಟಿಯು ವಿಶ್ವದಲ್ಲಿ ಒಂದು ಸಾಮಾನ್ಯ ಸಂಭವನಾಗಿದೆ"

ಕ್ಷ-ಕಿರಣದ ದೃಷ್ಟಿಯುಳ್ಳ ಬಾಲಕ
ನೆಲದಡಿಯ ಲೋಹಗಳನ್ನು ತಿಳಿಸುವನು

ದಕ್ಷಿಣ ಆಫ್ರಿಕದಲ್ಲಿ ಖನಿಜ ಉದ್ಯಮ ಮಾಡುವ ಒಂದು ಅಮೇರಿಕನ್ ಕಂಪೆನಿಯವರು 14 ವರ್ಷದ ಬರ್ನ ಕೋಲೇಜ್ ವಿದ್ಯಾರ್ಥಿಗೆ ತಮ್ಮ ಸಂಸ್ಥೆಯಲ್ಲಿ ಕೆಲಸಕ್ಕಿಟ್ಟಿದ್ದಾರೆ ನೆಲದಡಿಯಲ್ಲಿ ಗರ್ಭಿತವಾಗಿರುವ ಲೋಹ ಪದರುಗಳ ಏರುತಗ್ಗು ಅಂತರ್ಭಾಗಗಳನ್ನವನು ತಿಳಿಸಲು ಸಮರ್ಥನಾಗಿದ್ದಾನಂತೆ

ಪೀಟರ್‌ಮೀನ್ ಜಾರ್ಸ್‌ವೆಲ್ಡ್ ಎಂದು ಆ ಹುಡುಗನ ಹೆಸರು ಅವನನ್ನೂ "ಕ್ಷ-ಕಿರಣದ ಕಣ್ಣಿನವ" ಎನ್ನುತ್ತಾರೆ. ಭೂಗರವು ಅವನ ಕಣ್ಣಿಗೆ ಒಂದು ಅಲುಗಾಡುವ ಜೌಳವಾಗಿ ಕಾಣಿಸುವುದು. ಎಣ್ಣೆಯಿರುವ ನೆಲವು ಅವನಿಗೆ ನಯಮಾದಿದ ನುರದ ಮೇಲ್ಭಾಗದಂತೆ ಕಾಣಿಸುವುದು. ನೀರು ಬೆಳದಿಂಗಳಂತೆ ಭಾಸವಾಗುತ್ತದೆ.

ಬಿಸಿಲಿನ ಶಕ್ತಿಯನ್ನು ಶೇಖರಿಸಿಡಲು ಪ್ರಯತ್ನ

ಬಿಸಿಲಿನಲ್ಲಿ ಜೀವಶಕ್ತಿ ಜೈತನ್ಯಗಳಿವೆಯೆಂದು ವಿಜ್ಞಾನಿಗಳು ತಿಳಿಸುತ್ತಾರೆ. ಸೂರ್ಯನ ಉಷ್ಣವನ್ನು ಶೇಖರಿಸಿಟ್ಟು ಅದನ್ನು ಯಂತ್ರೋಪಕರಣ ಚಲಾಯಿಸಲಿಕ್ಕೂ ಇತರ ಔದ್ಯೋಗಿಕ ಕಾಮಗಾರಿಗಳಿಗೂ ಉಪಯೋಗಿಸಬಹುದೆಂದು ಕಂಡುಹಿಡಿದಿದ್ದಾರೆ ಫ್ರಾನ್ಸಿನ ಸರಕಾರಿ ಪ್ರಯೋಗಾಲಯದಲ್ಲಿ ಪ್ರೊಫೆಸರ್ ಟ್ರೊಂಬೆ ಎಂಬ ಭೌತಿಕ ತಜ್ಞರು ಈ ಕುರಿತು ಅನಿಶ್ರಾಂತ ಶ್ರಮ ಪಡುತ್ತಿರುವರು. ತಮ್ಮ ಪ್ರಯತ್ನದಲ್ಲಿ ಪ್ರೊಫೆಸರರು ಆಶಾದಾಯಕ ಪ್ರಗತಿ ಮಾಡಿರುವರೆಂದೂ ತಿಳಿದುಬರುತ್ತದೆ

ಬಡ ಬಿಲ್ಲವ ವಿದ್ಯಾರ್ಥಿಗಳಿಗೆ ವೇತನ
ವಿದ್ಯಾದಾಯಿನಿ ಸಭಾ ಮುಂಬಾಯಿ

"ವಿದ್ಯಾದಾಯಿನಿ ಸಭೆ ವರ್ಷಂಪ್ರತಿ ವಿದ್ಯಾರ್ಥಿ ವೇತನವನ್ನು ಕೊಡುತ್ತಾ ಬರುವಂತೆ ಈ ವರ್ಷವೂ ಈ ಮೇಲಿನ ಸಭೆಯಿಂದ ವಿದ್ಯಾರ್ಥಿ ವೇತನವನ್ನೂ ಪಡೆಯಲಿಚ್ಛಿಸುವ ಬಿಲ್ಲವರ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಜುಲೈ ತಿಂಗಳ ತಾ. ೧೧ ರೊಳಗೆ "ಹೊನರೆರಿ ಸೆಕ್ರೆಟರಿ, ವಿದ್ಯಾದಾಯಿ ಸಭಾ, ೩೧, ರಘುನಾಥ ದಾದಾಜಿ ಸ್ಟ್ರೀಟ್, ಫೋರ್ಟ್, ಮುಂಬಯಿ." ಇವರಿಂದ ಅರ್ಜಿಪತ್ರವನ್ನು ಪಡಕೊಳ್ಳಬೇಕಾಗಿ ವಿನಂತಿ, ವಿದ್ಯಾರ್ಥಿನೇತನವನ್ನು ಪಡೆಯುತ್ತಿರುವ ಮತ್ತು ಕೇಗಡೆ ಹೊಂದಿರುವ ವಿದ್ಯಾರ್ಥಿಗಳು ಪರೀಕ್ಷೆ ಫಲಿತಾಂಶದೊಡನೆ ಮುಂದವರಿಸುವ ಬಗ್ಗೆ ಅರ್ಜಿಯನ್ನು ನೂತಿಕೊಳ್ಳತಕ್ಕದ್ದು."

ಬಸ್ಸು ಪ್ರಯಾಣಿಕರ ಅವಗಾಹನೆಗೆ

ಪ್ರತಿದಿನ ಮಂಗ್ಳೂರಿಂದ ಬೆಳಿಗ್ಯೆ ಘಂಟೆ **5** ಮತ್ತು **5-30**ಕ್ಕೂ, ಮುಲ್ಕಿಯಿಂದ ಕೂಡಾ ಬೆಳಿಗ್ಯೆ **5** ಘಂಟೆಗೂ, ಮುಂಬ್ಯಾಗೆ ಬರೇ **36** ಘಂಟೆ ಸಮಯದಲ್ಲಿ ತಲ್ಪುವಂತೆ ಮಂಗ್ಳೂರು ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಯವರು ಸರ್ವಿಸುಗಳನ್ನು ಕ್ಷಪ್ತ ಸಮಯದಲ್ಲಿ — ಮಂಗ್ಳೂರು ಮತ್ತು ಮೂಲ್ಕಿಯಿಂದ ಹೊರಡಿಸಿ ಕಡೂರಿಗೆ ಮಧ್ಯಾಹ್ನ **2-30**ರೊಳಗೆ ತಲ್ಪಿ ಅಲ್ಲಿಂದ ಕೂಡ್ಲೇ ಹೊರಡುವ ರೆಲ್ವೆಯಲ್ಲಿ ಮುಂಬ್ಯಾಗೆ ಸೀದಾ ತಲ್ಪುವ ಏರ್ಪಾಡು ಮಾಡಿರುತ್ತದೆ. ಟಿಕೇಟುಗಳು ಮಂಗ್ಳೂರು ಮತ್ತು ಮೂಲ್ಕಿ ಆಫೀಸಿನಲ್ಲಿ ಸರ್ವಿಸು ಬಿಡುವ ಎರಡು ದಿವ್ಸಕ್ಕೆ ಮುಂಚಿತವಾಗಿಯೇ ದೊರಕುವಂತೆ ರಿಜರ್ವೇಶನ್ ಆಫೀಸು ಕೂಡಾ ಪ್ರತೀ ದಿವಸ ಬೆಳಿಗ್ಯೆ ಘಂಟೆ 9ರಿಂದ ಶ್ಯಾಮ 6 ಘಂಟೆ ವರೆಗೂ ತೆರೆಯಲ್ಪಟ್ಟಿದೆ. ಜಿಲ್ಲೆಯ ಇತರ ಲ್ಯಾನುಗಳಿಗೆ ಕೂಡಾ ಮಂಗ್ಳೂರಿನಲ್ಲಿ ಹಿಂದು ದಿವ್ಸಕ್ಕೆ ಮುಂಚಿತವಾಗಿ ಟಿಕೇಟುಗಳು ಸಿಗುವ ಏರ್ಪಾಡು ಕೂಡಾ ಉಂಟು.

ವಿ. ಸೂಚನೆ:—ಪ್ರಯಾಣಿಕರು ತಮ್ಮೊಂದಿಗೆ ಅದಷ್ಟು ಸಾಮಾನನ್ನು ಕಡಿಮೆ ಒಯ್ಯೋಣಾಗಬೇಕಾಗಿ ವಿನಂತಿ.

ಮಂಗಳೂರು
24-6-49

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised . . . . . Rs. 25,00,000
Capital Issued & Subscribed . . . . Rs. 20,00,000
Capital Paid up . . . . . Rs 19,99,800
Reserves . . . . . Rs 8,91,000

ಹುಳುಕಡ್ಡಿ ಮದ್ದು



ಕಫ್ಜ, ಪುರಿಕೆ, ಪುರಿಪಿಟ್ಟು, ಹುಳ ಕಡ್ಡಿ, ಕೆಕ್ಕ ಉಪದ್ರವ, ತಲೆ ಹುಣ್ಣು, ವೃಣ ಮೊದಲಾದ ವಲ್ಲಿ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅನುಭವಾಜನ ಔಷಧ;

ಕೊಂಬ್ಯಾ, ಸುಡಿಯಿಲ್ಲ, ಕಬ್ಬಿಣ ಮಂಗಳೂರಿನಲ್ಲಿ ಈ ಔಷಧವಿಡುವ ಕೊಡುವುದು

ದಿ ಬೊಂಬೆ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ರಾಷ್ಟ್ರೀಯ ಸ್ವಾತಂತ್ರ್ಯಾಂದೋಲನ)

ಅತೀ ಕಡಿಮೆ ಪೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ವಿಜೀಯಿಯರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ.

ಇವರ ಅಭಿಜಾಗಳು

ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕುಂದಾಪುರ, ಮುಂಬಯಿ, ಮಂಗಳೂರು,

ಮದ್ರಾಸು ಮತ್ತು ಶ್ರೀಮದ್ರಾಜಗಳಲ್ಲಿವೆ.

ವಿಮಾವ್ಯವಹಾರ ಕ್ಷೇತ್ರದಲ್ಲಿ ಕಳೆದ [illegible] ವರ್ಷಗಳಿಂದ ಇದ್ದ ಪಾಶ್ಚಾತ್ಯ ಪ್ರಭಾವವನ್ನು ಕಡಿಮೆ ಮಾಡಿ ಭಾರತೀಯ ಕ್ಷೇತ್ರೋನ್ನತಿಗೆ ಸಲ್ಲಿಸಿದ ನಮ್ಮ ನಮ್ಮ ಸಂಸ್ಥೆಗಳ ಪಾಲು ಮತ್ತು ಮುಂತಾದ

ವಾಹನವಿಧಾನಗಳಲ್ಲಾಗಲೀ ವಿಮೆ ಮಾಡಿಸಲಾಗಿದ್ದಲ್ಲಿ ಯಾವಾಗಲಾದರೂ ನಮ್ಮ ಕಛೇರಿಗೆ ಪ್ರತ್ಯಕ್ಷ ಇಲ್ಲವೆ ಪತ್ರ ಮುಖೇನ ಇಲ್ಲವೆ ಬರೆಯಿರಿ.

Bhuvanendra Products Limited,

KAATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as it tones the vitality and sexual vigour. Also useful in habitual abortion and all diseases pertaining to the heart & lungs

Depot: Mahaveera Galli, Hubli.

Bhuvanendra Products Ltd.

Factory & Head Office

KATAPADI S. Kanara

"ಭುವನೇಂದ್ರ" ದಶಮೂಲಾರಿಷ್ಟ

[illegible] ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಹೋಂಗರೆ

ಬಾಲಾಮೃತವು

ಪುಷ್ಟಿಗೆ

ಆರೋಗ್ಯವನ್ನು ಬಲವನ್ನು ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ರಾಷ್ಟ್ರೀಯತೆಯ ಪ್ರಥಮ ಪತ್ರಿಕೆ ಬೆಲೆ ಒಂದು ಪೈಸೆ

[ಸಂಪುಟ 48] ಕಾರವಾರ ಬುಧವಾರ [ಸಂಚಿಕೆ 24]

ಸರ್ದಾರ್ ಪಟೇಲರು ಮತ್ತೆ ಕಾಂಗ್ರೆಸಿಗೆ

ರಾಷ್ಟ್ರ ಸಂಸ್ಥೆಯ ಪುನರ್ಜೀವನ

ನಿನ್ನೆಯ ದಿವಸ ಆನಂದಾಶ್ರಮಕ್ಕೆ ಇದ್ದಕ್ಕಿದ್ದಂತೆ ಹೋಗಿ ಪಟೇಲರನ್ನು ಕಂಡು ಮಾತನಾಡಿದ ಸರ್ದಾರ್ ಪಟೇಲರು ಕೆಲವೇ ನಿಮಿಷಗಳಲ್ಲಿ ಹೊರಟು ಬಂದರು. ಅವರು ಹೊರಟ ಮೇಲೆ ಪಟೇಲರು ಕೆಲವು ಸಂಸ್ಥೆಗಳ ಸದಸ್ಯರನ್ನು ಕರೆಸಿ ಮಾತನಾಡಿದರು. ಅವರಲ್ಲಿ ಕೆಲವರು ಪಟೇಲರ ಆಪ್ತ ಸ್ನೇಹಿತರೂ ಆಗಿದ್ದರು. ಅವರೊಡನೆ ಪಟೇಲರು ಏನು ಮಾತನಾಡಿದರು ಎಂಬುದು ಯಾರಿಗೂ ತಿಳಿಯಲಿಲ್ಲ. ಆದರೆ ಅವರು ಹೊರಟ ಮೇಲೆ ಅವರು ಹೇಳಿದ ಮಾತುಗಳಿಂದ ಪಟೇಲರು ಕಾಂಗ್ರೆಸ್ ಸಂಸ್ಥೆಯನ್ನು ಪುನರ್ಜೀವನಗೊಳಿಸಲು ಸಿದ್ಧರಾಗಿದ್ದಾರೆಂಬುದು ಸ್ಪಷ್ಟವಾಯಿತು. ಈ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು.

ಪಟೇಲರು ಹೇಳಿದ್ದು

ಹೊರ ಬಂದಮೇಲೆ ಪತ್ರಿಕಾ ಪ್ರತಿನಿಧಿಗಳಿಗೆ ಪಟೇಲರು ಹೇಳಿದ್ದು ಇಷ್ಟು. ಕಾಂಗ್ರೆಸ್ ಸಂಸ್ಥೆಯನ್ನು ಪುನರ್ಜೀವನಗೊಳಿಸುವುದು. ಈಗ ಗೋಚರವಾಗುತ್ತಿರುವ ಕೆಲವು ಅಪಾಯಗಳನ್ನು ಮತ್ತು ಕಷ್ಟಗಳನ್ನು ಎದುರಿಸಲು ಸಿದ್ಧರಾಗಿರುವುದು. ಕಾಂಗ್ರೆಸ್ ಪಕ್ಷದಲ್ಲಿ ಸಂಸ್ಥೆಯ ಪುನರ್ಜೀವನಕ್ಕೆ ಸಿದ್ಧರಾಗಿರುವ ಎಲ್ಲಾ ಅನಾವಶ್ಯಕ ವ್ಯಕ್ತಿ ವಿಚಿತ್ರಗಳನ್ನು ತೊರೆದು ಸಾಕ್ಷಾತ್ಕರಿಸಿದ ಕೆಲವೇ ಮಾತುಗಳಲ್ಲಿ ಪಟೇಲರು ಸಂಸ್ಥೆಯ ಪುನರ್ಜೀವನಕ್ಕೆ ಸಿದ್ಧರಾಗಿರುವ ಸುದ್ದಿಯನ್ನು ಪ್ರಕಟಿಸಿದರು. ಈ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು.

ಪಟೇಲರ ಹೇಳಿಕೆಯ ಪ್ರಭಾವ

ಪಟೇಲರ ಹೇಳಿಕೆಯ ಪ್ರಭಾವ ಕಾಂಗ್ರೆಸ್ ಮುಖಂಡರುಗಳ ಮೇಲೆ ಬಹಳ ಆಗಿದೆ. ಅವರೆಲ್ಲರೂ ಪಟೇಲರ ಹೇಳಿಕೆಯನ್ನು ಸ್ವಾಗತಿಸಿದ್ದಾರೆ. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು.

ಪಟೇಲರ ಹೇಳಿಕೆಯ ಪ್ರಭಾವ

ಪಟೇಲರ ಹೇಳಿಕೆಯ ಪ್ರಭಾವ ಕಾಂಗ್ರೆಸ್ ಮುಖಂಡರುಗಳ ಮೇಲೆ ಬಹಳ ಆಗಿದೆ. ಅವರೆಲ್ಲರೂ ಪಟೇಲರ ಹೇಳಿಕೆಯನ್ನು ಸ್ವಾಗತಿಸಿದ್ದಾರೆ. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು. ಕಾಂಗ್ರೆಸ್ ಸಂಸ್ಥೆಯ ಪುನರ್ಜೀವನಕ್ಕೆ ಪಟೇಲರು ಸಿದ್ಧರಾಗಿದ್ದಾರೆಂಬ ಸುದ್ದಿ ಕೇಳಿ ಕಾಂಗ್ರೆಸ್ ಮುಖಂಡರುಗಳು ಹೊರಗಿನಿಂದ ಸಂತೋಷಪಟ್ಟರು.

THE UNITED INDIA LIFE ASSURANCE COMPANY LIMITED.

MADRAS.

"UNITED INDIA"

UNITED INDIA is one of the soundest Assurance Companies in India.

It is the custodian of more than Rs. 2 millions of Rupees belonging to the Policy holders.

It has more than 100,000 Policy holders.

It has assured sums of more than Rs. 200 millions.

It has constituted a TRUST — the Official Trustee of Madras is the Trustee for the Policy-holders' Fund.

UNITED INDIA is a household word in South India and is well Known throughout India, Ceylon, Malaya and East Africa.

For particulars please apply to—

The Branch Manager,
K. Sri Rao Road, Mangalore.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,91,000

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಿ ಕಡ್ಡಿ, ವಿಷ್ಣು ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: Maharaja Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ಸುರಿತ ಅನುಭವಸ್ಥರಿಂದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ವಿಶಿಷ್ಟ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಪರಿಹರಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮುಖಾಪಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್‌ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 1—7—1949 [ಸಂಚಿಕೆ 26]

ಸರ್ದಾರ್ ಪಟೇಲರು ಪುನಃ ಕೊಂಗ್ರೆಸಿಗೆ

ದಿನದಿಂದ ದಿನಕ್ಕೆ ಅಧೋಗತಿಗೆ ಇಳಿಯುವುದೆಂದು ಹೇಳಲ್ಪಡುವ ಕೊಂಗ್ರೆಸ್ ಸಂಸ್ಥೆಯನ್ನು ಶುದ್ಧೀಕರಿಸಲೋಸುಗ ಸರ್ದಾರ್ ವಲ್ಲಭಭಾಯಿ ಪಟೇಲರವರು ತಮ್ಮ ಕೇಂದ್ರ ಮಂತ್ರಿಮಂಡಲ ಸದಸ್ಯತ್ವಕ್ಕೆ ರಾಜೀನಾಮೆಯಿತ್ತು ತಮ್ಮ ಚೈತನ್ಯ, ಸಮಯಗಳನ್ನು ಆ ಕಾರ್ಯಕ್ಕಾಗಿ ವ್ಯಯಿಸುವರೆಂದು ನಂಬಲರ್ಹವಾದ ದಿಲ್ಲಿಯ ಕೊಂಗ್ರೆಸ್ ಕೇಂದ್ರಗಳಿಂದ ತಿಳಿದು ಬರುತ್ತದೆ.

ಕಲ್ಕತ್ತಾ ಮುಂಬಯಿಗಳಲ್ಲಿ ಕಡೆಗಳಲ್ಲಿ ನಡೆದ ಇತ್ತೀಚಿನ ಚುನಾವಣೆಗಳಲ್ಲಿ ಕೊಂಗ್ರೆಸ್ ಹುರಿಯಾಳುಗಳು ಸೋಲನ್ನನುಭವಿಸಿದುದರ ಕುರಿತು ಸರ್ದಾರರು ಗಂಭೀರ ವಿಚಾರಮಗ್ನರಾಗಿದ್ದಿರುವಂತೆ ಪ್ರಾಂತ್ಯಗಳಲ್ಲಿನ ಸರಕಾರಿ ವರ್ಗಗಳಲ್ಲಿ ದಿನವಹಿ ಎಂಬಂತೆ ಹೆಚ್ಚಾಗುತ್ತಿರುವ ಲಂಚ, ವಂಚನೆ ಪಕ್ಷಪಾತ ದ್ರೋಹಗಳ ಕುರಿತು ಅವರು ತೀವ್ರ ಮನೋವೇದನೆಯನ್ನು ನಿರೂಪಿಸಿರುವರಂತೆ ಕೊಂಗ್ರೆಸಿನೆಳಗಿಂದ ಎಲ್ಲಾ ಅನ ವಶ್ಯಕ ವೈಕೃತ ಶಕ್ತಿಗಳನ್ನು ತೊಡೆದು ಹಾಕಬೇಕೆಂದು ಕೊಂಗ್ರೆಸ್ ವರಿಷ್ಠರಿಗೂ ತುಂಬಾ ಆಸಕ್ತಿಯಿಂದ ಪತ್ರಿಮ ಬಂಗಾಲದಲ್ಲಿ ಇತ್ತೀಚೆಗುಂಟಾದ ಕೊಂಗ್ರೆಸಿಗರ ಸೋಲನಂತೂ ಸರ್ದಾರ್ ವರೇಲರು ತಮ್ಮ ವ್ಯಯಕ್ತಿಕ ಅವಯಶಸ್ಸೆಂದೂ ಬಾವಿಸಿಕೂ ತಂತೆ ತಿಳಿದು ಬರುತ್ತದೆ

ಕೇಂದ್ರದಿಂದ ಸರ್ದಾರ್ ಪಟೇಲರು ರಾಜೀನಾಮೆಯಿತ್ತು ಹೊರಬಂದರೆ ಪ್ರಾಂತೀಕ ರಾಜಕೀಯದಲ್ಲಿ ತುಂಬಾ ಬದಲಾವಣೆಗಳಾಗಬಹುದೆಂದು ನಿರೀಕ್ಷಿಸಲಾಗಿದೆ ಅವರಸ್ತಾನದಲ್ಲಿ ಪ್ರಾಂತ್ಯಗಳಿಂದ ಯಾವ ರಾದರೊಬ್ಬ ಸಭಾವಿತ ದ್ಯೀಣರನ್ನು ತೆಗೆದುಕೊಳ್ಳಬಹುದೆಂದೂ ಕಲ್ಪಿಸಲಾಗಿದೆ

ಚಂದ್ರನಾಗೂರು ಜಯದಿಂದ ಗೋವೆ ಅಧಿಕಾರಿಗಳಿಗೆ ಕಳವಳ

ಭಾರತ ಒಕ್ಕೂಟದಲ್ಲಿ ಸೇರಬೇಕೆಂಬ ಚಂದ್ರನಾಗೂರು ಚುನಾವಣೆಗಳ ನಿರ್ಣಯದಿಂದ ಗೋವೆಯ ಜನತೆಯಲ್ಲೂ, ಅಲ್ಲಿನ ಪೋರ್ತುಗೀಸ್ ಅಧಿಕಾರಿಗಳಲ್ಲೂ ಪ್ರಚಂಡ ಪರಿಣಾಮವನ್ನುಂಟುಮಾಡಿದೆಂದು ಹೇಳಲಾಗಿದೆ. ಇದುತನಕ ಅಲ್ಲಿನವರು ಉಷ್ಣ ಪಕ್ಷಿಯಂತೆ ಮರಳಲ್ಲಿ ತಲೆ ಮರೆಸಿಕೊಂಡಂತಿರುತ್ತಿದ್ದರು

ಅಲ್ಲಿನ ಸಾರ್ವಜನಿಕ ಸ್ಥಳಗಳಲ್ಲೆಲ್ಲಾ ವಿಶೇಷವಾಗಿ ಕೇಳಿಬರುವ ಒಂದೇ ಸುದ್ದಿ

ರಾಷ್ಟ್ರ ಸಂಸ್ಥೆಯ ಶುದ್ಧೀಕರಣ

ಯೆಂದರೆ ಚಂದ್ರನಾಗೂರಿನ ಭಾರತ ಒಕ್ಕೂಟ ವಿಲೀನೀಕರಣದ ನಿರ್ಣಯ. ಅಲ್ಲಿನ ಅಧಿಕಾರಿಗಳ ಅಭಿವ್ಯಾಯದಲ್ಲಿ ಫ್ರೆಂಚ್ ವಸಾಹತು ಫಾಸ್ಟಿನ ಅಧೀನದಲ್ಲಿಯೇ ಉಳಿಯುತ್ತವೆಂದಿತ್ತು ಗೋವೆಯು ಪೋರ್ತುಗಲಿನ ವಸಾಹತು ಇರುವಂತೇ ಅದೂ ಆಗುವುದು ಎಂದವರು ನಿರೀಕ್ಷಿಸಿದ್ದರು

ಭೀಕರ ಧಕ್ಕೆ

ಚಂದ್ರನಾಗೂರಿನ ಜನರು ಗೋವೆ ಅಧಿಕಾರಿಗಳಿಗೆ ಒಂದೆ ಧಕ್ಕೆಯನ್ನುಂಟುಮಾಡಿದವರು ಈಗ ಗೋವೆ ಅಧಿಕಾರಿಗಳು ತಮ್ಮ ಮಾತಿನ ವೈಖರಿಯನ್ನು ಬದಲಾಯಿಸಿರುವರು ಫ್ರೆಂಚ್ ವಸಾಹತುಗಳ ಮತ್ತು ಪೋರ್ತುಗಲ್ ವಸಾಹತುಗಳ ಪರಿಸ್ಥಿತಿ ಬೇರೆ ಬೇರೆಯಾಗಿರುವುದೆಂದವರು ಈಗ ಹೇಳಹತ್ತಿದ್ದಾರೆ ಗೋವೆಯೊಳಗಿನ ಜನರೂ ಹೆಚ್ಚಾಗಿ ಕ್ರೈಸ್ತರಾಗಿದ್ದು ಪೋರ್ತುಗೀಸ್ ಸಂಸ್ಕೃತಿ ಸಂಪ್ರದಾಯಗಳನ್ನು ಒಳಪಡಿಸಿದವರಾಗಿದ್ದಾರೆಂದೂ ಆದರೆ ಫ್ರೆಂಚ್ ವಸಾಹತುಗಳೊಳಗಿನ ಜನತೆ ಹಿಂದೂ ಇಸ್ಲಿವೆ ಮುಸ್ಲಿಮರಾಗಿದ್ದು ಅವರಿಗೆ ಫ್ರೆಂಚರ ಸಂಪರ್ಕವೆ ಇಲ್ಲದಾಗಿರೆಂದೂ ಅವರು ಕುತರ್ಕವನ್ನು ಮಾಡುತ್ತಿರುವರು

ಲಂಡನಿನಲ್ಲಿ ಹಿಂದೂ ದೇವಾಲಯ

ಹಿಂದೀ ಶಾಲೆಯೂ ತೆರೆಯಲ್ಪಡುವುದು

ಕಟ್ಟಡಕ್ಕಾಗಿ ನಿಧಿ ಸಂಗ್ರಹ

ಯುರೋಪಿನ ಹಿಂದೂ ಎಸೋಸಿಯೇಶನ್ನಿನವರು ದಕ್ಷಿಣ ಲಂಡನಿನ ಒಂದು ಕಡೆ ಒಂದು ಸ್ಥಳವನ್ನು ಕೊಳ್ಳಲು ನಿರ್ಧರಿಸಿದ್ದು, ಅದು ಒಂದು ದೇವಸ್ಥಾನವನ್ನು ಕಟ್ಟಿಸುವುದಕ್ಕಾಗಿ ಎಂದು ಹೇಳಲಾಗಿದೆ

ಮೊಲ್ಯಾಂಡ ಸಂಸ್ಥೆಯ ಕಾರ್ಯದರ್ಶಿ ಶ್ರೀ ಸೋಂಧಿಯವರು ಹೀಗೆ ತಿಳಿಸುತ್ತಾರೆ ನಾವು ಮೊದಲು ಸುಮಾರಾದೊಂದು ಕಾರ್ಖಾನೆ ತಯಾರಿತ ಕಟ್ಟಡದಿಂದ ವ್ಯಾರಂಭಿಸುತ್ತೇವೆ ಆದರಲ್ಲಿ ಸುಮಾರು 100–150 ಬಕ್ತರಿಗೆ ಉಳಕೊಳ್ಳಲು ಮಾತ್ರ ಸ್ಥಳವಿರುವುದು ಸದ್ಯಕ್ಕೆ ಈ ಕೆಲಸಕ್ಕಾಗಿ ನಮ್ಮಲ್ಲಿ ಸಾಕಷ್ಟು ಹಣವಿದೆ ನಮಗೆ ದೊಡ್ಡದಾದ ಶಾಶ್ವತ ಕಟ್ಟಡವನ್ನು ಕಟ್ಟಲು ನಾವು ಹಣ ಸಂಗ್ರಹಿಸಬೇಕಾಗಿದೆ ಅಷ್ಟಲ್ಲಿ 300–400 ಜನರಿಗೆ ಪೂಜೆ ವ್ಯಾರ್ಧನೆ ಮಾಡಲು ಸ್ಥಳವಿಡಲಾಗುವುದು ಅಲ್ಲಿ ದೇಹಿಂದಿಯನ್ನು ಕಲಿಸುವ ತರಗತಿಗಳು ಆದರಲ್ಲಿ ತೆರೆಯಲ್ಪಡುವವು ದೇವಳದೊಳಗೆ ಒಂದು ಹವನ ಕುಂಡವೂ ಇದ್ದು ನೆಲವು ಚಂದ್ರಶಿಲೆಯಿಂದ ಮುಚ್ಚಲ್ಪಡುವುದು ಕಟ್ಟಡಕ್ಕಾ ಸುಮಾರು ಒಂದೂವರೆ ಲಕ್ಷ ರೂಪ್ಯಾ ಖರ್ಚು ಬೀಳಬಹುದು ಖರ್ಚು ಪುರೈಸಲು ಹಿತಸನ್ನು ಇಡಲಾಗುವುದು

ಅತೀ ಚತುರ ಭಾರತೀಯ

ಸರ್ ಸಿ ಪಿ ಯವರಿಗೆ ಶ್ಲಾಘನೆ

1917ರಲ್ಲಿ ವಿ. ಎಸ್. ಶಾಸ್ತ್ರಿಗಳವರು ಬ್ರಿಟಿಷ್ ಸರಕಾರದ ಪರವಾಗಿ ದಿಲ್ಲಿಗೆ ಸುಧಾರಣೆಗಳನ್ನು ಜಾರಿಗೆ ತರುವುದರ ಕುರಿತು ಪರಿಶೀಲನೆ ಮಾಡಲು ಬಂದಾಗ ಅವರು ಜ ಕಾಲಿನ ಅತ್ಯುತ್ತಮ ಹಿಂದೀ ಪತ್ರಿಕೆಗಳನ್ನು ಬೇಟಿಯಾಗಿದ್ದರು ಅವರು ತಮ್ಮ ದಿನಚರಿ ಪುಸ್ತಕದಲ್ಲಿ ಸರ್ ಸಿ ಪಿ ರಾಮಸ್ವಾಮಿಯವರ ಕುರಿತ 'ನಾನೆ ಕಂಡ ಭಾರತೀಯರಲ್ಲಿ ಅತೀ ಚಾಣಾಕ್ಷರಿರುವರು' ಎಂದು ಬರೆದಿದ್ದಾರೆ ಆದರೆ ಇಂದು ಸ್ವತಂತ್ರ ಭಾರತದಲ್ಲಿ ಆ ಅತೀ ಚತುರ ಮಂತ್ರಿಯನ್ನು ಯಾವ ಸ್ಥಾನವೂ ಇಲ್ಲದಾಗಿದೆ! ಖುದಕ ವಂಡಲದ ತನ್ನ ಅರಮನೆಯಂತಹ ನಿವಾಸದಲ್ಲಿ ಇಂಜನರು ವಿಶ್ರಾಂತಿ (ಈಗ ಭಾಷಣ ನೈವಾಸ್ಯಕ್ಕಾಗಿ ಹೊನಲೂಲು ದ್ವೀಪಕ್ಕೆ ಹೋಗಿದ್ದಾರೆ) ಪಡೆಯುತ್ತಿದ್ದಾರೆ ಅಲ್ಲಿನವರು ತಮ್ಮ ಜೀವನದ ವಿಶೇಷ ಘಟನೆಗಳ ಒಂದು ಗ್ರಂಥವನ್ನು ಬರೆಯುತ್ತಿದ್ದಾರೆ "ಜೀವನಚಕ್ರ" ವೆಂಬ ಹೆಸರಿನಿಂದ ಅದು ಅಮೇರಿಕದಲ್ಲೂ ಪ್ರಕಟವಾಗುವುದೆಂದು ತಿಳಿದು ಬರುತ್ತದೆ. ಈ ಗ್ರಂಥವು ಆಧುನಿಕ ಭಾರತೀಯ ಇತಿಹಾಸದ ಅಮೋಘ ಚಿತ್ರಣವಾಗಿರುವುದೆಂದೂ ಅಭಿಪ್ರಾಯ ಪಡಲಾಗಿದೆ. ಹೀಗೆಂದು ಶ್ರೀ ಪಿ. ಆರ್. ದಾಸ್ ಅವರು ಓರಿಯಂಟ್ ಪೆಕ್ರಿಕೆಯಲ್ಲಿ ಬರೆಯುತ್ತಾರೆ.

THE UNITED INDIA LIFE ASSURANCE COMPANY LIMITED.

MADRAS.

"UNITED INDIA"

UNITED INDIA is one of the soundest of insurance concerns.

It is the custodian of more than 40 millions of rupees belonging the Policy holders

It has more than 100,000 Policy holders.

It has assured sums of more than Rs 200 millions.

It has constituted a TRUST—the Official Trustee of Madras is the Trustee for the Policy—holders' Fund.

UNITED INDIA is a household word in South India and is well Known throughout India, Ceylon, Malaya and East Africa.

For particulars please apply to:—

The Branch Manager,

K. S. Rao Road, Mangalore.

ವಾರದ ವಿಜ್ಞಾನ ವರದಿಗಳು

ರಷ್ಯದ ನುರಭೂಮಿ ಮತ್ತು ಜವುಗು ಪ್ರದೇಶಗಳನ್ನು ಕೃಷಿ ಯೋಗ್ಯ ಮಾಡಲು ಅವುಗಳ ಹೊರ ಪ್ರದೇಶದ ಗಡಿಗಳಲ್ಲಿ ಮರಗಳನ್ನು ನೆಟ್ಟು ಕಾಡನ್ನು ಬೆಳೆಸುವ ದೆಂದು ಯೊಜನೆಗಳನ್ನು ಮಾಡಲಾಗಿದೆ. ಮರದ ಸಸಿಗಳನ್ನು ನೆಡಲು ಅಲ್ಲಿನ ಯಂತ್ರ ವಿಜ್ಞಾನಿಗಳೊಬ್ಬರು ಒಂದು ಯಂತ್ರವನ್ನು ಕಂಡುಹಿಡಿದಿದ್ದಾರೆ. ಇದು ಮಿನಿಟಿಗೆ 60 ಸಸಿಗಳನ್ನು ನೆಡುವುದು. ಇಂತಹ ಹತ್ತು ಯಂತ್ರಗಳನ್ನು ಒಂದೇ ಸಾಲಾಗಿ ಎಳೆಸಿದರೆ 40 ಅಡಿ ಅಂತರದಲ್ಲಿ ಏಳು ಸಾಲು ಗಳಲ್ಲಿ ಸಸಿಗಳನ್ನು ನೆಡಲು ಸಾಧ್ಯವಾಗು ವುದೆಂದು ಹೇಳಲಾಗಿದೆ. ಈ ಯಂತ್ರದ ಒಂದು ಕೈಯು ನೆಲವನ್ನೆಗೆದು ಪಾಲು ಮಾಡುವುದು. ಇನ್ನೊಂದು ಸಸಿಗಳನ್ನು ಕುಳಿಸುವುದು. ಕೋನಾಕೃತಿಯ ಮತ್ತೊಂದು ಉಪಕರಣವು ಬೇರುಗಳನ್ನು ಮಣ್ಣಿನಲ್ಲಿರಿಸಿರುವುದು. ಕೊನೆಯ ದೊಂದು ಯಂತ್ರ ಭಾಗವು ನೆಲವನ್ನು ಸವರಿ ಸಮಾನ ವಾಗಿ ಮಾಡುವುದು.

ಮಲಯದ ಮಿಡಿತೆಗಳು

ಗುಂಡು ಸೂಜಿಯ ತಲೆಯಷ್ಟು ಕೂಡ ಗಾತ್ರವಿಲ್ಲದೊಂದು ಮಲಯಾ ದ್ವೀಪದ ಒಂದು ತರದ ಮಿಡಿತೆಯನ್ನು ಶೋಧಿಸಲು ಸಂಯುಕ್ತ ಅಮೇರಿಕದ ಕೃಷಿ ಇಲಾಖೆಯವರು ಸುಮಾರು 7 ಸಾವಿರ ಡಾಲರು ಗಳನ್ನು ಖರ್ಚು ಮಾಡಿರುವರು. ಈ ಮಿಡಿತೆಗಳು ಹಣ್ಣುಹಂಪಲಿಗೂ ಸುಗಂಧ ಹೂಗಳಿಗೂ ತಗಲುವ ಒಂದು ತರದ ರೋಗಾಣುಗಳನ್ನು ತಿನ್ನುವವು. ಆಸ್ಟ್ರೇಲಿಯ ದಲ್ಲಿನ ತೋಟಗಳಲ್ಲಿ ಈಗ ಅಂತಹ ಕ್ರಿಮಿ ಗಳು ಹಾವಳಿ ಮಾಡಹತ್ತಿವೆ. ಅದಕ್ಕಲ್ಲಿನ ಸರಕಾರದವರು ಮಲಯದಿಂದ ಆ ಪ್ರಸಿದ್ಧ ಮಿಡಿತೆಗಳನ್ನು ತರಿಸುವ ಪ್ರಯತ್ನದಲ್ಲಿರು ವರು. ಮೆಕ್ಸಿಕೋದ ಹಣ್ಣುಹಂಪಲು ತೋಟಗಳಲ್ಲೂ ಈಗ ನಾಶಕಾರಕ ಹುಳು ಗಳು ಕಾಣಿಸಿಕೊಂಡಿರುವುದರಿಂದ ಅಮೇ ರಿಕದ ಕೃಷಿ ಇಲಾಖೆಯವರು ಒಂದು ವಿಜ್ಞಾನ ಶಿಷ್ಟ ಮಂಡಳವನ್ನು ಮಿಡಿತೆ ಸಂಗ್ರ ಹಕ್ಕಾಗಿ ಮಲಯಕ್ಕೆ ಕಳುಹಿಸಿರುವರು.

ಬೆಂಕಿ ಕಡ್ಡಿಗಳ ಗಡಿಯಾರ

ಸ್ಟೋಕ್ ಹೋಮಿನಲ್ಲಿ (ಸ್ವೀಡನ್) ನಡೆಯುವ ಮುಂಬರುವ ಅಂತರಾಷ್ಟ್ರೀಯ ಕ್ರೀಡಾ ಪ್ರದರ್ಶನ ಕಾಲದಲ್ಲಿ ಏಳು ಅಡಿ ಎತ್ತರದ ಒಂದು ಕಂಭ ಗಡಿಯಾರವು ಪ್ರದರ್ಶನಕ್ಕಿಡಲಾಗುವುದು. ಇದು ಸಂಪೂರ್ಣ ಬೆಂಕಿಪೆಟ್ಟಿಗೆಯ ಕಡ್ಡಿಗಳಿಂದ ಲೇ ರಚಿಸಲ್ಪಟ್ಟಿದ್ದು. 1600 ಗಂಟೆಗಳ ಶ್ರಮವು ಅದರ ಮೇಲೆ ವ್ಯಯಿಸಲ್ಪಟ್ಟಿದೆ. ಅದು 24 ಗಂಟೆಗಳಿಗೆ ಮಿಕ್ಕಿ ಸರಿಯಾದ ಸಮಯವನ್ನು ಸೂಚಿಸುವುದು. ಅದರಲ್ಲಿ ರುವ ಒಂದೇ ಒಂದು ಲೋಹದ ಉಪಕರ ಣವೆಂದರೆ ಅದಕ್ಕೆ ತೂಗ ಹಾಕಿರುವ ಪೆಂಡುಲಮ್ಮಿನ ಭಾರದ ಕಲ್ಲು.

ಎರಡು ಪ್ರಕೃತಿ ವೈಚಿತ್ರ್ಯಗಳು

ಮುಧ್ಯ ಪ್ರಾಂತ್ಯದ ಬಂಧಾರಾ ಎಂಬೂರಿ ನಲ್ಲಿ 17 ವರ್ಷದ ತರುಣಿಯೊಬ್ಬಳು ಕರು ವಿನಂತೆ ತೋರುವ ಒಂದು ಶಿಶುವನ್ನು ಹೆತ್ತ ಕೆಂದೂ ಅದು ಕೆಲವೇ ಗಂಟೆ ಜೀವಿಸಿ ಕೊಂಡಿತ್ತೆಂದೂ ತಿಳಿದು ಬರುತ್ತದೆ.

ಮತ್ತೆ ರಾಜಕೋಟೆ ಬಳಿಯ ಒಂದೂರಲ್ಲಿ ಒರ್ವ ರಜಪೂತ ಸ್ತ್ರೀಯು ಇದೇ ವಾರದಲ್ಲಿ ಎರಡು ತಲೆ ನಾಲ್ಕು ಕೈಗಳು ಎರಡು ಕಾಲು ಗಳಿರುವ ಒಂದು ಶಿಶುವನ್ನು ಹೆತ್ತಿರುವ ಕೆಂದು ವದಂತಿ ಬಂದಿರುತ್ತದೆ.

ಬೌದ್ಧಯತಿಯ ಪ್ರಕೃತಿ ಚಿಕಿತ್ಸಾಲಯ

ದಿಲ್ಲಿಯ ಬಳಿಯಲ್ಲಿ

ದಿಲ್ಲಿಯಿಂದ ಏಳು ಮೈಲು ಅಂತರದಲ್ಲಿ ಒರ್ವ ಬೌದ್ಧ ಸನ್ಯಾಸಿಯು ಒಂದು ಪ್ರಕೃತಿ ಚಿಕಿತ್ಸಾಲಯವನ್ನು ಸ್ಥಾಪಿಸಿ ನಮ್ರ ರೀತಿ ಯಲ್ಲಿ ಜನತಾ ಸೇವೆಗೈಯ್ಯುತ್ತಿರುವನು. ಇದು ಪ್ರಖ್ಯಾತ ಕುತುಬ್‌ಮಿನಾರಿನ ಅತೀ ಸಮೀಪದಲ್ಲಿದೆ. ಆಸುಪಾಸಿನ ಜನರು ತಂಡ ತಂಡವಾಗಿ ಅವನ ಬಳಿ ಚಿಕಿತ್ಸೆಗಾಗಿ ಹೋಗುತ್ತಿರುವರು. ಸರಕಾರದವರು ಆ ಸ್ಥಳವನ್ನು ಸನ್ಯಾಸಿಯ ಸೇವಾ ಕಾರ್ಯ ಕ್ಕಾಗಿ ಉಚಿತ ಕೊಟ್ಟಿರುವರೆಂದು ತಿಳಿದು ಬರುತ್ತದೆ.

ಭಿಕ್ಕು ವೀರ ಧರ್ಮವರನೆಂದು ಅವನ ಹೆಸರು. ಆತ ಸಯಾಮ್ ದೇಶಸ್ಥ. 1933ರಲ್ಲಿ ಭಾರತಕ್ಕೆ ಬಂದಿದ್ದ. ಮೊದಲು ಆತನು ಪಂಜಾಬದ ಗುಜರನವಾಲಾದಲ್ಲಿ ಒಂದು ಪ್ರಕೃತಿ ಚಿಕಿತ್ಸಾಲಯವನ್ನು ಸ್ಥಾಪಿ ಸಿದ್ದ. ಅದನ್ನು ತನ್ನ ಶಿಷ್ಯರ ವಶ ಬಿಟ್ಟು ಅವನು ಕಾಶ್ಮೀರಕ್ಕೆ ಹೋದ. ಕಾಶ್ಮೀರದ ಚಿಕಿತ್ಸಾಲಯವು ಒಂದೂವರೆ ಲಕ್ಷ ರೂಪ್ಯಾ ಮೌಲ್ಯದಿದ್ದು ಈಚಿಗಿನ ಗಲಭೆಗಳಲ್ಲಿ ಅದು ನಾಶವಾಯಿತು. ನಂತರ ಸ್ವಾಮಿಯು ದಿಲ್ಲಿಗೆ ಬಂದ.

ಈ ಸಯಾಮಿನ ಸನ್ಯಾಸಿಯು ತುಂಬಾ ವಿದ್ಯಾವಂತ. ಚಿಕ್ಕಂದಿನಲ್ಲಿ ವೈದ್ಯ ಮತ್ತು ನ್ಯಾಯಶಾಸ್ತ್ರಗಳನ್ನು ಫ್ರಾನ್ಸಿನ ಪೆರಿಸ್ ಮತ್ತಿತರ ವಿಶ್ವವಿದ್ಯಾಲಯಗಳಲ್ಲಿ ಅಭ್ಯಸಿಸಿ ದ್ದಾನೆ. ಫ್ರಾನ್ಸಿನಲ್ಲೇ ಆತ ಪ್ರಕೃತಿ ಚಿಕಿತ್ಸೆ ಯ ರಹಸ್ಯವನ್ನು ಕಲಿತನಂತೆ. ತನ್ನ ಚಿಕಿತ್ಸೆ ಕ್ರಮದಲ್ಲಿ ಅವನು ಸೂರ್ಯಶಕ್ತಿ, ತಿಕ್ಕು ವಿಕೆ, ಜಲೋಪಾಸನೆ, ಆಹಾರ ಚಿಕಿತ್ಸೆ ಮತ್ತು ಮನೋಶಾಸ್ತ್ರ ವಿಧಾನಗಳನ್ನು ಪ ಯೋಗಿಸುತ್ತಾನೆ.

ಔಷಧಿ ವಿಧಾನ

ಅವನ ಔಷಧಿ ತಯಾರಿ ಕ್ರಮಕ್ಕೆ ಹೊಮ್ಯೋಪೆಥಿ ಎಂದು ಹೆಸರು. ನೀರು, ಸಕ್ಕರೆ, ಎಜ್ಜೆ ಮಿಶ್ರಣಗಳನ್ನು ವಿವಿಧ ಬಣ್ಣದ ಗಾಜಿನ ಕುಪ್ಪಿಗಳಲ್ಲಿಟ್ಟು ಬಿಸಿಲಿಗೆ ಇಡುತ್ತಾನೆ. ಬಿಸಿಲಿನ ಪ್ರಕಾಶದ ಬೇರೆ ಬೇರೆ ಬಣ್ಣದ ಕಿರಣಗಳಿಗೆ ಬೇರೆ ಬೇರೆ ಶಕ್ತಿಯಿರುವುದು. ಅದು ಕುಪ್ಪಿಯೊಳಗಿನ ಮಿಶ್ರಣಗಳಿಂದ ಹೀರಲ್ಪಡುವುದು.

ಸ್ವಾಮಿಯು ಯಶಸ್ವಿಯಾಗಿ ಅನೇಕ ಕಠಿಣ ವ್ಯಾಧಿಗಳನ್ನು ಗುಣಪಡಿಸಿರುವ ನೆಂದು ವ್ರತೀತಿ ಹಬ್ಬಿದೆ. ತನ್ನ ಚಿಕಿತ್ಸಾ ಲಯಕ್ಕೆ ಸಂಬಂಧಿಸಿ ಸ್ವಾಮಿಯು ಒಂದು ಗೋ ಸಂರಕ್ಷಣಾಲಯವನ್ನು ಮತ್ತೊಂದು ಬೌದ್ಧ ದೇವಾಲಯವನ್ನು ಸ್ಥಾಪಿಸಲು ಯೋಜಿಸಿರುವನು.

ಕುಡುಕುತನ — ಕೆಡುಕುತನವಹುದು

ಆದರೆ

ಬಹುಸಂಖ್ಯಾಕರು, ಅಲ್ಪಸಂಖ್ಯಾಕರ ಉದ್ಧಾರಕ್ಕಾಗಿ

ತಾವು ತೆರಿಗೆ ತೆರಬೇಕಾಯಿತೆಂದು ಮುನಿಯುತ್ತಾರೆ.

✱ ನಾವು ಮರೆಯುತ್ತೇವೆ ✱

ಏನೆಂದರೆ ಇಂದು ವಿದೇಶೀ ಮದ್ಯಗಳನ್ನು ಇಲ್ಲಿಗೆ ಆಮದು ಮಾಡುವ ಮೂಲಕ ಪರದೇಶಕ್ಕೆ ತೆರುತ್ತಿರುವ ಮಿಲಿಯಗಟ್ಟಲೆ ಹಣವು ಇಲ್ಲೆ ಉಳಿಯುವುದೆಂಬುದನ್ನು!

ಮದ್ಯ ನಿಷೇಧವನ್ನು ಪ್ರೋತ್ಸಾಹಿಸಿರಿ! ತನ್ಮೂಲಕ ದೇಶೀ ಹಣವು ಹೊರಗೆ ಹೋಗದಂತೆ ತಡೆಯಿರಿ.

ಈ ಜಾಹೀರಾತಿನ ಸ್ಥಳ:

ಕೆನರಾ ಬ್ಯಾಂಕ್, ಲಿಮಿಟೆಡ್.

ಇದರ ಸೇವಾದಾನ.

ಕಡಿತ ಘಾಯ ಚರ್ಮ ಘಾತಗಳಿಗೆ

ಕ್ಯುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕ್ಯುಟಿಕೂರಾ ಮುಲಾಮಿ ಂದ ಲೇಪಿಸಿರಿ. ಆದರ ವಿಷಹಾರಿ ಶಮ ಸುವ ಶಕ್ತಿ ಚರ್ಮ ಆರೋಗ್ಯ ಪುನಃ ರ್ನಿರ್ಮಿಸುತ್ತದೆ. ಊದುವಿಕೆ ಗಾಯವನ್ನು ಡಿಮೆ ಮಾಡುತ್ತದೆ.

ಕ್ಯುಟಿ ಕೂರಾ ಮುಲಾಮು

CUTICURA OINTMENT

ಮೀನಿನ ಕಡ್ಡಿಗಳ ಕಾರ್ಖಾನೆ

ಮೀನಿನ ಕಡ್ಡಿಗಳ ಕಾರ್ಖಾನೆಯೊಂದು ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿದೆ. ಇದರಲ್ಲಿ ಮೀನಿನ ಕಡ್ಡಿಗಳನ್ನು ಮಾಡಿ ಅವುಗಳನ್ನು ಬೆಂಕಿಪೆಟ್ಟಿಗೆಗಳಲ್ಲಿ ತುಂಬಿ ಮಾರಲಾಗುವುದು. ಈ ಕಾರ್ಖಾನೆಯಲ್ಲಿ ಸುಮಾರು 100 ಜನರಿಗೆ ಕೆಲಸ ಸಿಗುವುದು. ಈ ಕಾರ್ಖಾನೆಯ ಮಾಲಿಕರು ಮೀನಿನ ಕಡ್ಡಿಗಳ ಕಾರ್ಖಾನೆಯನ್ನು ಸ್ಥಾಪಿಸಲು ಸರಕಾರದಿಂದ ಪರವಾನಗಿ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಪತಿಪತ್ನಿಯರಿಗೆ ಸಮಾನ ಹಕ್ಕುಗಳು

ಒಂದು ಜೆಕ್ ಕಾಯಿದೆ

1950ರ ಸೆಂಪ್ಟಂಬರದಲ್ಲಿ ಜೆಕೋಸ್ಲೊ ವೇಕಿಯದಲ್ಲಿ ಜಾರಿಗೆ ಬಲಲಿರುವ ಒಂದು ಕಾಯಿದೆಯನ್ವಯ ಸ್ತ್ರೀಯರಿಗೆ ತಮ್ಮ ಗಂಡಂದಿರ ಆಸ್ತಿಪಾಸ್ತಿ, ಬಿರುದು ಬಾವಲಿ ಮೊದಲಾದುವುಗಳಲ್ಲಿ ಸಮಾನ ಹಕ್ಕು ಪುಂಟಾಗುವುದು. ಅವರು ತಮ್ಮ ಹೆಸರನ್ನು ಕೂಡ ಬದಲಾಯಿಸಬೇಕಾದ ಅವಶ್ಯಕತೆ ಯಿರುವುದಿಲ್ಲ.

ಇಂತಹದೇ ಒಂದು ಶಾಸನವನ್ನು ಪೊಲೆಂಡ್ ದೇಶದಲ್ಲೂ ಜಾರಿಗೆ ತರಲಾಗು ವುದು.

ಜೆಕ್ ಶಾಸನವು ಹೀಗೆ ನಿರೂಪಿಸುತ್ತದೆ: ಮನುಷ್ಯನಿಗೂ ಅವನ ಹೆಂಡತಿಗೂ ಸಮಾ ಜದಲ್ಲೂ ಕುಟುಂಬದಲ್ಲೂ ಸಮಾನ ಹಕ್ಕು ಬಾಧ್ಯತೆಗಳಿವೆ.

ಅವಿವಾಹಿತ ಸ್ತ್ರೀಯರಿಗೆ ಅನೈತಿಕವಾಗಿ ಹುಟ್ಟಿದರೂ ಮಕ್ಕಳ ಹಕ್ಕುಗಳಿಗೆ ಯಾವ ದಕ್ಕೆಯೂ ತಗಲಲಾರದು.

ವಿವಾಹವು ಒಂದು ಸ್ವೇಚ್ಛೆಯಾದ ಜೀವನ ಬಂಧನವಾಗಿದೆ. ಈರ್ವರೂ ತಮ್ಮ ಸಾಮರ್ಥ್ಯ ಸುತ್ತು ಅನುಕೂಲತೆಯಂತೆ ಕುಟುಂಬದ ರಕ್ಷಣೆಯನ್ನು ಮಾಡತಕ್ಕದ್ದು.

ಇರ್ವರೂ ತಮ್ಮಿಚ್ಛೆಯ ಉದ್ಯೋಗ ವನ್ನು ಚುನಾಯಿಸಲು ಸ್ವತಂತ್ರರಿರುತ್ತಾರೆ.

ಪ್ಲೇಗ್ ರೋಗದ ಸಾಂಕ್ರಾಮಿಕ

ಹಿಂದೀ ವಿಜ್ಞಾನಿಯ ಎಚ್ಚರಿಕೆ

ಜನತೆ ಈಗಲೇ ಎಚ್ಚರಿಕೆ ವಹಿಸದಿದ್ದರೆ ಈಗ ಹಿಂದೂಸ್ಥಾನದ ಕೆಲಭಾಗಗಳಲ್ಲಿ ತಲೆ ಎತ್ತಿರುವ ಪ್ಲೇಗ್ ವ್ಯಾಧಿಯು ಸಾಂಕ್ರಾಮಿಕವಾಗಿ ದೇಶವೆಲ್ಲವನ್ನೂ ವ್ಯಾಪಿ ಸುವ ಸಂಭವವಿದೆಯೆಂದು ಪ್ರಖ್ಯಾತ ವೈದ್ಯ ತಜ್ಞರಾದ ಡಾ. ಎಸ್. ಸಿ. ಸೀಲರು ಒಂದು ಭಾಷಣದಲ್ಲಿ ತಿಳಿಸುತ್ತಾರೆ. ಇಂದು ವೈದ್ಯ ರಿಗೆ ಪ್ಲೇಗ್ ರೋಗದ ಕುರಿತು ಸವಿಸ್ತಾರ ಮಾಹಿತಿಯಿರುವುದು ಒಂದು ಸಮಾಧಾನದ ಸಂಗತಿಯೆಂದೂ ಅವರು ಹೇಳಿದರು. ಪ್ಲೇಗ್ ರೋಗದಲ್ಲಿ ನ್ಯೂಮೊನಿಕ್ ಮತ್ತು ಬ್ಯುಬೊನಿಕ್ ಎಂಬೆರಡು ಲಕ್ಷಣದವು ಇವೆ. ಮೊದಲನೆಯದು ಮನುಷ್ಯರಿಂದಲೇ ಪ್ರಸ ರಿಸಲ್ಪಡುತ್ತದೆ. ಎರಡನೇಯರು ಇಲಿಗ ಳಿಂದ ಹರಡಲ್ಪಡುತ್ತದೆ. ಅದ್ದರಿಂದ ಅದ ನ್ನು ನಿಯಂತ್ರಿಸಲು ತುಂಬಾ ಶ್ರಮವೆನಿ ಸುತ್ತದೆ.

ದಿಲ್ಲಿಯ ಯೋಗಾಶ್ರಮದವರು ಸದ್ಯ ದಲ್ಲೇ ವಿಶ್ವ ಆರೋಗ್ಯ ಸಂಸ್ಥೆಯವರಿಗೆ ಯೋಗ ವ್ಯಾಯಾಮದ ಮಹತ್ವದ ಕುರಿ ತು ಒಂದು ವಿಜ್ಞಾಪ ಪತ್ರವನ್ನು ಅರ್ಪಿಸಲಿ ರುವರು.

ಲಂಚ ವಂಚನೆಯ ಮೂಲ ಸ್ವರೂಪ

[ಅನೈತಿಕ ಸರಕಾರಗಳ ಪಾತಕಗಳಲ್ಲಿ ಲಂಚಗುಳಿತನವು ಸವ್ಯಧ್ವನಿವಾಗಿದೆ. ಕೆಲವು ಘಟಕಗಳಲ್ಲಿ ಇದನ್ನು ಹಿಡಿಯುವುದು ಕಷ್ಟತರವಾಗುತ್ತದೆ. ಆದರೆ ಇದನ್ನು ಹೀಗೇ ಬೆಳೆಯಬಿಟ್ಟರೆ ನಮ್ಮ ದೇಶದ ಬಿನ್ನಿಲುಬೇ ಈ ವ್ಯಾಧಿಯಿಂದ ಭರ್ಭಲವಾಗುವುದೆಂದು ಬಂಗಾಲದ ದಿನೇಶ ಚಂದ್ರ ಜಾಂದಾ ಎಂಬ ಲಂಚಗುಳಿತನ ನಿರ್ಮೂಲನಾಧಿಕಾರಿಗಳು ತಿಳಿಸುತ್ತಾರೆ. ಈ ಸಂಬಂಧ ಅವರ ಲೇಖನವೊಂದು ವಿಚಾರಾರ್ಹವಾಗಿದೆ.]

ಲಂಚಗುಳಿತನವು ಮಾನವ ಸಮಾಜದಲ್ಲಿ ಬಹಳವಾಗಿ ವ್ಯಾಪಿಸಿಕೊಂಡಿರುವ ಒಂದು ಅನೈತಿಕ ನ್ಯವಹಾರ. ಅದರ ಕ್ಷೇತ್ರವು ವಿಶಾಲವೂ ಅದರ ವಿಧಾನಗಳು ಅಸಂಖ್ಯಾತವೂ ಆಗಿವೆ. ಈ ಅನೈತಿಕ ರೋಗ ಪೀಡೆಯು ದೇಶದ ರಾಜಕೀಯ ಮತ್ತು ಸಾಮಾಜಿಕ ಶರೀರವನ್ನು ಅದೆಷ್ಟು ಕೊರೆಯುತ್ತಿದೆಯೆಂದರೆ ತತ್ಪರಿಣಾಮವಾಗಿ ನಮ್ಮ ಸಾರ್ವಜನಿಕ ಮತ್ತು ಸ್ವತಂತ್ರ ಜೀವನಗಳು ಅದರಿಂಗ ಅಧೋಗತಿಗಿಳಿದಂತಾಗಿ ವಿಚಾರಿ ದುರಿಣರಿಗದೊಂದು ಅಗಾಧ ಸಮಸ್ಯೆಯಾಗಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಇದರ ಕಾರ್ಯ ಕಾರಣಗಳು ಬೇರೆ ಬೇರೆ ತರವಾಗಿದ್ದರೂ ಸದ್ಯಕ್ಕೆ ದೇಶದ ಆಡಳಿತ ಪಾತಕಗಳಲ್ಲಿ ಅದರ ಹಾವಳಿಯ ಖೂನಿಕಾರಕ ಪರಿಣಾಮಗಳನ್ನು ತಿಳಿಸುವುದು ಈ ಲೇಖನದ ಉದ್ದೇಶವಾಗಿದೆ ಇದರಿಂದ ಲಂಚಗುಳಿತನದ ಪತ್ತೆ ಹಚ್ಚುವನರಿಗೆ ಸ್ವಲ್ಪ ಸಹಾಯವೂ ಆಗಬಹುದು

✠

ಮನೋಶಾಸ್ತ್ರ ದೃಷ್ಟಿಯಿಂದ ಪರಿಶೀಲಿಸಿದಾಗ ಲಂಚ ತಿನ್ನುವವರಲ್ಲಿ ಸ್ವಾಮುಖ್ಯವಾಗಿ ಎರಡು ವರ್ಗದವರಿರುವರೆಂದು ತಿಳಿದುಬಂದಿದೆ (1) ಕೆಲವು ಆಕರ್ಷಕ ಸಂದರ್ಭಗಳಲ್ಲಿ ಅಪ್ರಾಮಾಣಿಕರಾಗುವುದು, (2) ಎಲ್ಲಾ ಸಂದರ್ಭಗಳಲ್ಲೂ ಸ್ವಾಭಾವಿಕವಾಗಿ ಅಪ್ರಾಮಾಣಿಕರಾಗಿರುವುದು

ದೊಡಲನೆ ವರ್ಗದವರು ಹೊಲಿ ಕೊಟ್ಟಿಕ್ಕಾದರೂ ಪ್ರಾಮಾಣಿಕರಂತೆ ತೋರುವರು ಇದಕ್ಕೆ ಶಿಕ್ಷಣ ಭೀತಿ, ಕೆಟ್ಟ ಹೆಸರು ಬರುವೆಂಬ ಆಂಜಿಕೆ, ಮತ್ತು ಯೋಗ್ಯ ಸಂದರ್ಭಗಳಿರುವುದು, ಈ ಮೂರು ಕಾರಣಗಳಿರಬಹುದು ಈ ವರ್ಗದ ಲಂಚಗುರುಗಳು ನಿರ್ಬಲ ಧೈರ್ಯದನರಾಗಿದ್ದು ಯೋಗ್ಯ ಮೇಲ್ವನಕೆಯನ್ನು ಇಡುಪುದರ ಮೂಲಕ ಇವರನ್ನು ಗುಣಪಡಿಸಬಹುದಾಗಿದೆ ಆದರೆ ಲಂಚದ ಸಂದರ್ಭಗಳು ಅನುಕೂಲವಾಗಿದ್ದರೆ, ಲಂಚದ ವಸ್ತುಗಳು ಶ್ರೇಷ್ಠ ತರಗತಿಯದಾಗಿದ್ದರೆ, ಮತ್ತು ಅದರ ಪ್ರಮಾಣವು ದೊಡ್ಡದಾಗಿದ್ದರೆ ಅವರು ಯಾವಾಗಲೂ ಇದಕ್ಕೆ ಬಲಿಬೀಳಬಹುದಂತವರಾಗಿದ್ದಾರೆ.

✠

1. ಸಂದರ್ಭಗಳ ಒತ್ತಡದಿಂದ:

ಲಂಚವನ್ನು ಅಪಾಯವಿಲ್ಲದೆ ಜೀರ್ಣಿಸಿಕೊಳ್ಳುವಂತಹ ಅನುಕೂಲ ಸಂದರ್ಭಗಳಿದ್ದರೆ ಕೆಲವರು ಲಂಚಗುಳಿತನವನ್ನನುಸರಿಸುವರು. ಇಲ್ಲದಿದ್ದರೆ ಅವರು ಶುದ್ಧ ವ್ಯಾಮಾಣಿಕರಂತೆ ನಟಿಸುವರು. ಕಚೇರಿಗಳೆಲ್ಲನ ಕೆಲವು ಅಧಿಕಾರಿಗಳು ಸಹಜವಾಗಿ ಅನಷ್ಟರೂ ದುರ್ಬಲ ಮನಸ್ಸಿನವರೂ ಇದ್ದು ಇಂತಹ ಕೆಲಸಕ್ಕೆ ಹೇಸುವವರಾದರೂ ಕೆಲವು ಸ್ವಾರ್ಥಸಾಧಕ ಪ್ರಭಾವಿತ ಸಾರ್ವಜನಿಕ ವ್ಯಕ್ತಿಗಳ ದುರ್ಬೋಧನೆಗೆ ಬಲಿಬೀಳುವರು. ಇಂತಹ ಸಾರ್ವಜನಿಕ ವ್ಯಕ್ತಿಗಳು ಲಂಚಗುಳಿತನದ ಪ್ರಾರಂಭಕ್ಕೂ ಮತ್ತು ದರ ಹರಡುವಿಕೆಗೂ ಬಹುಮಟ್ಟಿಗೆ ಹೊಣೆಗಾರರಾಗಿರುತ್ತಾರೆ. ಇವರೆ ದುರ್ಬೋಧನೆಯಲ್ಲದಿದ್ದರೆ ಕಚೇರಿಗಳಲ್ಲಿನ ತುಂಬ ಮಂದಿ ಕೆಲಸಗಾರರು ನೀತಿಗೆಡದಂತಹರಾಗುವರು. ಸಂಬಳ ಕಡಿಮೆ ಕೊಡಿಲ್ಲದುವ ಕಛೇರಿ ಕೆಲಸಗಾರರು ಈ ದುಷ್ಟ ಟಿಕ್ಕೆ ಬಲಿಬೀಳುವರೆಂಬೊಂದು ಕುತರ್ಕವು ಆಗಾಗ್ಗೆ ಹೇಳಲ್ಪಡುತ್ತದೆ. ಆದರೆ ಯಾವ ಸಂದರ್ಭದಲ್ಲೂ ಇಂತಹ ಲಂಚಗುಳಿತನವನ್ನು ಸ್ಯಾಯನೀತಿಗನುಗುಣವಾಗಿ ಸರಿಯೆಂದ ಸಿದ್ಧಾಂತ ಮಾಡಿಕೊಡಲು ಸಾಧ್ಯವೇ ಇಲ್ಲ ಏಕೆಂದರೆ ಕಮ್ಮಿ ಸಂಬಳ ಸಿಗುತ್ತದೆಂದು ಹೇಳಲ್ಪಡುವ ಈ ಜನರಿಗೆ ಹೆಚ್ಚು ಸಂಬಳವನ್ನು ಕೊಟ್ಟರೂ ಸಂದರ್ಭಗಳು ಅನುಕೂಲವಾಗಿದ್ದರೆ ಅವರು ಖಂಡಿತ ಲಂಚ ತಿನ್ನಲು ಪ್ರಯತ್ನಿಸುವುದು ' ಗಮನಕ್ಕೆ ಬಂದಿದೆ ಆದುದರಿಂದ ಇಂತಹರನ್ನು ಇತರರಂತೇ ಹೆಚ್ಚಿನ ಜಾಗರೂಕತೆಯಿಂದಲೂ ಶ್ರಮದಿಂದಲೂ ಒತ್ತಿಕ್ಕುವುದು ಅವಶ್ಯವೆನಿಸುತ್ತದೆ

✠

2 ವಸ್ತುರೂಪಕ ಲಂಚ:

ಕೆಲವರು ತಾವು ಹಣದ ರೂಪದಲ್ಲಿ ಲಂಚ ತೆಗೆದುಕೊಳ್ಳುವಷ್ಟು ಅಪ್ರಾಮಾಣಿಕರಲ್ಲವೆಂದು ಒತ್ತಿ ಹೇಳುತ್ತಾರೆ ಆದರೆ ಹಣದ ಬದಲಿಗೆ ವಸ್ತುಗಳನ್ನು ಕೊಟ್ಟರೆ ಇವರು ಸುಲಭವಾಗಿ ಅದನ್ನು ಸ್ವೀಕರಿಸುವರು ಇವರ ವಿಧಾನವು ಪರೋಕ್ಷದ್ದು

3. ದೊಡ್ಡ ಮೊತ್ತಕ್ಕೆ ಬಲಿ ಬೀಳುವವರು:

ಕೆಲವರಲ್ಲಿ ಪ್ರಾಮಾಣಿಕತನದ ಶೀಲವು ತುಂಬಾ ದೃಢತರದ್ದಾಗಿರುತ್ತದೆ ಇವರು ಸಣ್ಣ ಪುಟ್ಟ ಮೊತ್ತಗಳನ್ನು ನಿರಾಕರಿಸುವ ಧಾಡರೂ ದೊಡ್ಡ ಬೇಟೆಯೊಂದನ್ನು ಸದಾ ಕಾಯುತ್ತಿರುತ್ತಾರೆ. ಇವರು ತನ್ಮ ಗುಣ ಶ್ರೇಷ್ಠತೆಯನ್ನು ಕ್ರಮೇಣ ದೊಡ್ಡ ಪ್ರಮಾಣದ ಲಂಚವನ್ನು ನುಂಗಿ ಕರಗಿಸಲು ಉಪಯೋಗಿಸುವರು.

ಸ್ವಾಭಾವಿಕವಾಗಿ ಅಪ್ರಾಮಾಣಿಕರಾಗಿರುವವರಲ್ಲಿ ಸ್ವಾಧಿಮಾನದ ಇಲ್ಲವೆ ಸೌಮ್ಯ ಕನದ ತಿಳಾಂಶ ಪ್ರದರ್ಶನವಾದರೂ ತೋರಿ ಬರುವುದಿಲ್ಲ ತಮ್ಮ ಲಂಚಗುಳಿ ನ್ಯವಹಾರದಲ್ಲವರು ತುಂಬಾ ಸಾಹಸವಂತರೂ ತಜ್ಞರೂ ಎನಿಸಿಕೊಳ್ಳುತ್ತಾರೆ ಇವರು ಪಣ ಇಲ್ಲವೆ ಮಸ್ತುರೂಪಗಳೆರಡರಲ್ಲೂ ಲಂಚವನ್ನು ಸ್ವೀಕರಿಸುವರು ಇವರ ವಿಧಾನಗಳಾದರೂ ತುಂಬಾ ಜಾಗರೂಕತೆಯವೂ ಮತ್ತು ಇತರರಿಂದ ಸಹಕರಿಸಲ್ಪಟ್ಟು ಯೋಜಿಸಿದಂತಹುದೂ ಆಗಿರುತ್ತವೆ ಅನೈತಿಕ ಜೀವನ ರೀತಿಯೂ ಅಭ್ಯಾಸಿ ಲಂಚಗುಳಿತನದ ಒಂದು ಮುಖ್ಯ ಕಾರಣವಾಗಿದೆ ಅನೈತಿಕ ಸ್ವಭಾವವೇ ಮುಖ್ಯ ಕಾರಣವೆಂಬುದಕ್ಕೆ ತುಂಬಾ ಶಿಕ್ಷಿತರೂ ಉನ್ನತ ಸ್ಥಾನದಲ್ಲಿರುವವರೂ, ಮತ್ತು ತುಂಬಾ ಶ್ರೀಮಂತರಾಗಿರುವವರೂ ಕೂಡ ಈ ಕೆಲಸವನ್ನು ನಾಡುವರೆಂಬುದೊಂದು ನಿದರ್ಶನ ಲಂಚಗುಳಿ ವ್ಯವಹಾರದಲ್ಲಿ ಈ ವರ್ಗದವರನ್ನು ಹಿಡಿಯುವುದು ಹೆಚ್ಚಿನ ಶ್ರಮದಾಯಕವೂ ಅಪಾಯಕಾರಕವೂ ಆಗಿರುತ್ತದೆ ಅಲ್ಲದೆ ಇವರು ತಮ್ಮ ಕೆಟ್ಟ ಆದರ್ಶದಿಂದ ತಮ್ಮ ಕೈಕೆಳಗಿನವರನ್ನು ಕೆಲಂಕಿಸುವರು. ಇಂತಹರು ರಾಷ್ಟ್ರದ ಅಭಿವೃದ್ಧಿಗೆ ಘಾತುಕರಾಗಿರುವರು. ತಾವು ಸ್ವತಃ ಲಂಚಗುಳಿಗಳಾಗುವುವರಿಂದ ತಮ್ಮ ಕೈಕೆಳಗಿನವರ ಮೇಲೆ ಯಾವ ತರದ ಆರೋಪ ಹೊರಿಸಲೂ ಅವರಿಗೆ ನೈತಿಕ ಸ್ಥೈರ್ಯವಿರುವುದಿಲ್ಲ. ಇಂಥವರನ್ನು ನಿರ್ದಾಕ್ಷಿಣ್ಯವಾಗಿ ಕಳೆಕಿತ್ತಂತೆ ನಿರ್ಮೂಲಿಸುವುದುಯುಕ್ತವಿದೆ.

✠

ಲಂಚದ ವಿಧಾನಗಳು: (1) ನೇರವಾಗಿ ಮತ್ತು (2) ಪರೋಯಾಗಿ ಎಂಬೆರಡು ವಿಧಾನಗಳಿಂದ ಲಂಚ ಸ್ವೀಕರಣವು ನಡೆಯುತ್ತದೆ. ಮೊದಲನೆಯ ವಿಧಾನದಲ್ಲಿ ನಸ್ತು ಇಲ್ಲವೆ ಹಣದ ರೂಪದಲ್ಲಿ ಲಂಚವನ್ನು ನುಂಗಲಾಗುವುದು. ಎರಡನೆಯ ವಿಧಾನದಿಂದ ಅಪ್ರತ್ಯಕ್ಷವಾಗಿ ಇತರರಿಂದ ಮೆಚ್ಚಿಗೆ ಪಡೆಯುವುದಕ್ಕೆ, ಪ್ರಭಾವ ಹೆಚ್ಚಿಸುವುದಕ್ಕೆ, ಲಾಭ ಹೊಂದಲಿಕ್ಕೆ, ಸುಖದ ಅನುಕೂಲತೆ ಪಡೆಯಲಿಕ್ಕೆ, ಮರ್ಯಾದೆ ಗಳಿಸಲಿಕ್ಕೆ, ಇಲ್ಲವೆ ಸದಭಿಪ್ರಾಯವನ್ನುಂಟು ಮಾಡಲಿಕ್ಕೆ ಪ್ರಯತ್ನಗಳಾಗುವವು ಆದರೆ ಸಾರ್ವಜನಿಕ ಆಡಳಿತದ ಪಾತಕಗಳಲ್ಲಿರುವವರು ಇಂತಹ ಯಾವ ಕಾರ್ಯವನ್ನು ಮಾಡಲು ಸಿರೀಕ್ಷಿಸಲ್ಪಡುವುದಿಲ್ಲ ಇದು ಕರ್ತವ್ಯಲೋಪವೆನಿಸುತ್ತದೆ

ಲಂಚಕ್ಕೆ ಹಲವು ಗೌರವದ ಹೆಸರುಗಳು ಕೊಡಲ್ಪಡುವುದು ವಾಡಿಕೆಯಾಗಿದೆ ಉದು ನಜರು, ಕಾಣಿಕೆ, ಪುರಸ್ಕಾರ, ಭಕ್ಷೀಸು, ನಮೂನೆ, ನ್ಯಾದರಿ ಮೊದಲಾದ ರೂಪಗಳನ್ನು ಹೊಂದುತ್ತದೆ

ಮೇಲಿನವುಗಳು ಲಂಚಗಳೇ ಆದರೂ ಗಣಸಂಖ್ಯವೆನಿಸುವೆದಿಲ್ಲ ಇದರಲ್ಲಿ ದುರುದ್ದೇಶದ ಕಾರ್ಯ ಸಾಧನೆಗಾಗಿ ಕೊಡಲ್ಪಡುವ ಔತಣ, ಉಪಹಾರ ಕೂಟಗಳೂ ಸೇರುತ್ತವೆ ಅಕ್ಷೀಯರಿಗೆ ಕೆಲಸಗಳನ್ನು ಮಾಡಿಕೊಡಲು ಮಾಡುವ ಪ್ರಯತ್ನಗಳೂ ಇದೇ ವರ್ಗದವು

ಲಂಚದ ಮೂಲ ಕಾರಣಗಳು: 1 ಸೀಳಿಟ್ಟ ಸ್ವಭಾವ, 2 ಬಡತನ, 3 ಸ್ವ ಕಲ್ಪಿತ ಅನಶ್ಯಕತೆಗಳು, 4 ಯೋಗ್ಯ ಸಿಯ ಶಿಕ್ಷಣವಿಲ್ಲದಿರುವಿಕೆ, 5 ಆಕರ್ಷಣೆಗಳಿರುವಿಕೆ, 6 ಪುಸಲಾಯಿಸುವಿಕೆಗೆ ಬಲಿಬೀಳುವುದು, 7 ಕಳ್ಳತನದ ಸ್ವಭಾವ, 8 ಅಧಿಕಾಂಶಲಾಲಸೆ 9 ಹಣವೆ ಒಕ ಮಾನಿತ, 10 ಸುಖಿದಲಾಲಸೆ ಈ ಕಾರಣಗಳಿಂದ ನರ್ಬಲ ನೈತಿಕ ಸ್ವಭಾವದ ಕೆಲಸಗಾರರು ಲಂಚಗುಳಿತನಕ್ಕೆ ಕೈಯೊಡ್ಡುವರು

✠

ಲಂಚದ ದುಷ್ಪರಿಣಾಮಃ ಲಂಚದಿಂದ ಲಂಚಗುಳಿತನವು ವ್ಯಾಪಿಸುತ್ತದೆ. ಅದೊಂದು ಅಂಟು ವ್ಯಾಧಿ ಅದು ವಿತ್ಸಂಬಂಧದ ವಾತಾವರಣದಲ್ಲೆಲ್ಲ ಹರಡಿಕೊಳ್ಳುವುದು. ಬೇರೆಯವರ ದುರಾದರ್ಶಗಳು ಇದರ ಪ್ರೋತ್ಸಾಹಕಗಳು ಹೀಗೆ ಬಿಟ್ಟು ಲಂಚಗುಳಿ ಕೆಲಸಗಾರನು ಒಂದು ಆಫೀಸಿನ ಅನಾರೋಗ್ಯಕರ ಪರಿಸ್ಥಿತಿಗೆ ಅವಾಯಕಾರಿಯಾದವನು. ಅನೇಕ ಸಂದರ್ಭಗಳಲ್ಲಿ ಲಂಚ ಕೊಡುವವನು ಮತ್ತು ಅದನ್ನು ಸ್ವೀಕರಿಸುವವನು ಮೂರನೆಯವನೊಬ್ಬನಿಗೆ ಅನಾನುಕೂಲತೆಯನ್ನುಟುಮಾಡಿ ಲಾಭಗಳಿಸುವರು. ಅದರಲ್ಲಿ ಯಾವ ನ್ಯಾಯನೀತಿಗೂ ಅಸ್ತವಿಲ್ಲ. ಆದರೆ ಇದರಿಂದ ದೇಶದ ಹತಗಳು ಹಾಳಾಗುವುದೆಂಬುದರಲ್ಲಿ ಸಂದೇಹವಿಲ್ಲ. ದೇಶದ ನೈತಿಕ ಜೀವನ ಶ್ರೇಷ್ಠತೆಯೂ ಇದರಿಂದ ಕುಂದುವುದು.

ಶ್ವಾಸನಾಳ ತೊಂದರೆಗಳಿಗೆ
ಉಕ್ಕುವ ಕೆಮ್ಮು, ಶ್ವಾಸತೊಂದರೆ
ಇವಕ್ಕೆ
ನಿಮಗೆ ಪೆಪ್ಸ್ ಅವಶ್ಯ

ರುಚಿಕರವಾದ ಪೆಪ್ಸ್ ಮಾತ್ರೆಗಳು ಶ್ವಾಸಕೋಶ ಮತ್ತು ನಾಳಗಳ ಬಾಧ ಶಮನಿಸಲು ಅತ್ಯುತ್ತಮ. ಪೆಪ್ಸ್‌ನ್ನು ಏವ ಹೀರುವಾಗ ಆದರೊಳಗಿನ ಅಮೂಲ್ಯ ವಿಷಹಾರಿ ಸತ್ವಗಳು ನಿಮ್ಮ ಶ್ವಾಸಕೋಶದೊಗೆ ನೇರವಾಗಿ ಬಾಧೆಗೊಳಗಾದ ಭಾಗಗಳಿಗೆಯೊಯ್ಯಲ್ಪಡುತ್ತವೆ. ಪೆಪ್ಸ್ ಕೆಮ್ಮುನ್ನು ನಿಲ್ಲಿಸುತ್ತದೆ, ಗಂಟಲನ್ನು ವಿಷಾಣುರಹಿತವಾಗಿಡುತ್ತದೆ ಕಫವನ್ನು ಸಡಿಲಿಸಿ, ಊದುವಿಕೆಯನ್ನು ಕಮ್ಮಿ ಮಾಡಿ ರೋಗಾಣುಗಳನ್ನು ನಾಶಮಾಡುತ್ತದೆ.

ವಿಷಹಾರಿ ಪೆಪ್ಸನ್ನೇ
ಉಪಯೋಗಿಸಿರಿ

ಪೆಪ್ಸಿನ ವಿಷಹಾರಿಯ ಸತ್ವಗಳು ಶ್ವಾಸಕೋಶನಳಿಕೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ.

PEPS
ವಿಷಹಾರಿ
ಗಂಟಲು ಮತ್ತು ಎದೆ ಗುಳಿಗೆಗಳು
ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ
ಅತ್ಯಂತ ಪರಿಣಾಮಕಾರಿ ಔಷಧಿ.
ಏಜೆಂಟ್ : ಮೆಸರ್ಸ್ ದಾಧಾ ಎಂಡ್ ಕೊ., ಮದ್ರಾಸು.

ಸ್ವದೇಶಾಭಿಮಾನಿ

ತಾರೀಕು 1—7—1949

ಗ್ರಾಮ ಪಂಚಾಯತ ಮಸೂದೆ

ಮದ್ರಾಸು ಶಾಸನ ಸಭೆಯ ಮುಂದೆ ಮಾನ್ಯ ಚಂದ್ರಮೌಳಿಯವರು ತಮ್ಮ ಗ್ರಾಮ ಪಂಚಾಯತು ಮಸೂದೆಯನ್ನು ಇಟ್ಟಿರುತ್ತಾರೆ. ಪಂಚಾಯತುಗಳಿಗೆ ಸಂಬಂಧವಟ್ಟ ಈ ಪ್ರಾಂತ್ಯದಲ್ಲಿಯ ಕಾಯಿದೆಯ ಇತಿಹಾಸ ಹಾಗೂ ಈಗಿನ ಮಸೂದೆಯ ಮುಖ್ಯ ವಿಷಯಗಳು ಇವನ್ನು ವಿವರಿಸುತ್ತ ಈ ಮಸೂದೆಯು ಸರಳ ಸ್ವಭಾವದ ಗ್ರಾಮದ ಜನರಿಗಾಗಿ ತಂದಿರುವ ಒಂದು ಸರಳವಾದ ಮಸೂದೆಯೆಂದು ವರ್ಣಿಸಿದರು.

ಪ್ರಾಂತ್ಯದಲ್ಲಿಯ ಎಲ್ಲಾ ಗ್ರಾಮಗಳಿಗೆ ಪಂಚಾಯತುಗಳನ್ನು ಕಡ್ಡಾಯವಾಗಿ ಮಾಡಿರುವುದು ಈ ಮಸೂದೆಯ ಒಂದು ಮುಖ್ಯ ವಿಚಾರ. ಬಹಳ ಚಿಕ್ಕ ಗ್ರಾಮಗಳೆಂದಾದರೆ ಇಂಥವುಗಳನ್ನು ಹತ್ತಿರದ ಗ್ರಾಮಕ್ಕೆ ಜೊತೆಗೂಡಿಸಿ ಪಂಚಾಯತು ವ್ಯವಸ್ಥೆ ಗೊಳಿಸಲ್ಪಡುವುದು.

ಈ ಪಂಚಾಯತುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಗುತ್ತಿದೆ. ಮಾತ್ರವಲ್ಲ ಮೊದಲಬಾರಿಗೆ ಈ ಸಂಸ್ಥೆಗಳಿಗೆ ಬೇಕಾಗುವ ಹಣದ ಅನುಕೂಲತೆಯನ್ನೂ ಒದಗಿಸಲಾಗುತ್ತಿದೆ. ಹೊಸ ತೆರಿಗೆಗಳನ್ನು ಹೊರಿಸುವ ಅಧಿಕಾರ ಹಾಗೂ ಸರಕಾರೀ ಸಹಾಯ ಧನದ ವ್ಯವಸ್ಥೆ ಇವುಗಳ ರೂಪದಿಂದ ಈ ಏರ್ಪಾಡು ಮಾಡಲಾಗುತ್ತಿದೆ.

ಈ ರೀತಿ ಗ್ರಾಮಜೀವನದ ಆಡಳಿತೆಯಲ್ಲಿ ಗ್ರಾಮಸ್ಥರೇ ಪ್ರಧಾನ ಭಾಗ ವಹಿಸುವಂತೆ ಮಾಡುವ ಉದ್ದೇಶದ ಈ ಮಸೂದೆ ಬಹಳ ಪ್ರಾಮುಖ್ಯತೆಯುಳ್ಳದೆಂಬುದು ನಿರ್ವಿವಾದ.

ಒಂದಾನೊಂದು ಕಾಲದಲ್ಲಿ ಪ್ರಾಯಶಃ ಬ್ರಿಟಿಷರ ಆಳ್ವಿಕೆಯ ಆರಂಭದ ವರೆಗೆ ನಮ್ಮಲ್ಲಿಯ ಗ್ರಾಮ ಪಂಚಾಯತುಗಳು ಬಹಳ ಸಜೀವ ಸಂಸ್ಥೆಗಳಾಗಿದ್ದವೆಂಬುದು ಎಲ್ಲರೂ ತಿಳಿದಿರುವ ಸಂಗತಿ. ಪುನಃ ಆ ಪರಿಸ್ಥಿತಿ ಈಗ ಪುನರುಜ್ಜೀವನಗೊಳಿಸುವುದೇ ಈಗಿನ ಪ್ರಯತ್ನದ ಉದ್ದೇಶವೆಂದರೆ ತಪ್ಪಾಗಲಾರದು.

ಭಾರತದಲ್ಲಿ ಎಷ್ಟೊಂದು ಮಂದಿ ರಾಜರುಗಳು ಅಥವಾ ರಾಜಾನ್ಯಯಗಳು ಆಳುತ್ತಿರಲಿ ಇವರೊಳಗೆ ಎಷ್ಟೇ ಬಡಿದಾಟಗಳು ನಡೆಯುತ್ತಲಿದ್ದಾಗ ಕೂಡಾ ನಮ್ಮಲ್ಲಿಯ ಗ್ರಾಮ ಜೀವನ ಇವೆಲ್ಲವುಗಳಿಂದ ಸ್ವತಂತ್ರವಾಗಿ ಶಾಂತ ರೀತಿಯಿಂದ ಶತಮಾನಗಳ ತನಕ ನಡೆಯುತ್ತಲೇ ಇದ್ದಿತು. ಈ ಸ್ವತಂತ್ರ ಗ್ರಾಮ ಸಮಾಜಗಳೇ ಭಾರತದ ಸಂಸ್ಕೃತಿ ಮತ್ತು ಸಂಪತ್ತನ್ನು ಕಾಯ್ದುಕೊಂಡು ಬಂದ ಸಂಸ್ಥೆಗಳು. ಬ್ರಿಟಿಷರ ಆಳ್ವಿಕೆ ಬಳುವಲ್ಲಿ ತನಕ ಈ ಸ್ವತಂತ್ರ ಗ್ರಾಮ ಸಮಾಜಗಳ ಬೆಲೆ ಎಲ್ಲ ಸರಕಾರಗಳಿಗೂ ತಿಳಿದಿದ್ದದ್ದರಿಂದ ತಮ್ಮೊಳಗೆ ಯಾವ ಜಗಳಗಳಿದ್ದರೂ ಯಾವ ಪಕ್ಷದವರೂ ಗ್ರಾಮ ಜೀವನದ ಶಾಂತಭಂಗ ಮಾಡುತ್ತಿರಲಿಲ್ಲ.

ಬ್ರಿಟಿಷರು ಈ ಪದ್ಧತಿಯನ್ನು ಸಮೂಲವಾಗಿ ಕಿತ್ತೊಗೆದರು. ಹಳ್ಳಿಯಲ್ಲಿಯ ಪ್ರತಿಯೊಬ್ಬರೊಡನೆ ವ್ಯಕ್ತಿಗತ ಸಂಪರ್ಕ ಬೆಳೆಸುವ ಕೇಂದ್ರೀಕೃತ ಆಡಳಿತೆ ಸ್ಥಾಪಿಸುವುದನ್ನು ತಮ್ಮ ಧೋರಣೆಯನ್ನಾಗಿಯೇ ಇಟ್ಟುಕೊಂಡರು.

ಎರಡು ಶತಮಾನಗಳ ಈ ಪ್ರಯೋಗದಿಂದ ನಮ್ಮ ಗ್ರಾಮಗಳ ಸಹಕಾರ ಜೀವನ ನಷ್ಟವಾಯಿತು. ಇಂದು ನಮ್ಮ ಗ್ರಾಮಗಳು ಬಹಳ ಕೆಳಮಟ್ಟಕ್ಕೆ ಇಳಿದಿವೆಯೆಂಬುದು ಖಂಡಿತವಾದ ಹಾಗೂ ಕಠಿಣವಾದ ಒಂದು ಸತ್ಯ.

ಬ್ರಿಟಿಷ ಆಳ್ವಿಕೆಯ ಕೊನೆಯ ಭಾಗದಲ್ಲಿ ಸರಕಾರದವರು ಆಗಾಗ ಜಾರಿಗೆ ತರುತಿದ್ದ ಸುಧಾರಣೆಗಳಲ್ಲಿ ಗ್ರಾಮ ಪಂಚಾಯತುಗಳನ್ನು ವ್ಯವಸ್ಥೆಗೊಳಿಸುವ ಕಾರ್ಯಕ್ರಮ ಒಂದಿತ್ತು. ಈ ಬಗೆಯ ಸುಧಾರಣೆಗಳಲ್ಲೆಲ್ಲ ಪ್ರಜೆಗಳಿಗೆ ನಿಜವಾದ ಆಡಳಿತದ ಅಧಿಕಾರ ಕೊಡುವ ಬದಲು ತೋರಿಕೆಯ ಅಧಿಕಾರ ಕೊಡುವುದೇ ವಾಡಿಕೆ ಇತ್ತು. ಕೊಡಲಾಗುವ ಅಲ್ಪ ಸ್ವಲ್ಪ ಅಧಿಕಾರಗಳನ್ನು ಒಹಳ ಜಾಗ್ರತೆಯಿಂದ ಹತೋಟಿಯಲ್ಲಿ ಇರಿಸಿಕೊಳ್ಳಲಾಗುತ್ತಿತ್ತು.

ಹೀಗಾಗಿ ಸುಮಾರು ಮುನ್ನೂರು ವರ್ಷಗಳ ಹಿಂದೆ ನಮ್ಮ ಪ್ರಾಂತ್ಯದಲ್ಲಿ ಜಾರಿಗೆ ಬಂದ ಗ್ರಾಮ ಪಂಚಾಯತು ಕಾಯಿದೆಯಂತೆ ಈ ಪ್ರಾಂತ್ಯದಲ್ಲಿ ಸುಮಾರು ಏಳು ಸಾವಿರದ ಇನ್ನೂರು ಪಂಚಾಯತುಗಳು ಸ್ಥಾಪಿಸಲ್ಪಟ್ಟರೂ ಅವು ಹೆಚ್ಚಿನ ಕಾರ್ಯ ಸಾಧಿಸಲು ಸಮರ್ಥವಿದ್ದಿಲ್ಲ.

1941ರಲ್ಲಿ ಈ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಪಂಚಾಯತುಗಳ ಕುರಿತು ಸರಕಾರದವರು ಪ್ರಕಟಿಸಿದ ಹೇಳಿಕೆಯೊಂದರಲ್ಲಿ ಈ ರೀತಿ ಹೇಳಲಾಗಿತ್ತು.

"ಅನೇಕ ಪಂಚಾಯತುಗಳಲ್ಲಿ ಬಲವಾದ ಭಿನ್ನ ಪಕ್ಷಪಂಗಡಗಳಿದ್ದು ಇವುಗಳಿಗೆ ಅಡ್ಡಮಾಡುತ್ತಿರುವವು ಮಾತ್ರವಲ್ಲ ಇಡೀ ಗ್ರಾಮದ ದೃಷ್ಟಿಯಿಂದ ಯಾವ ಪ್ರಯೋಜನಕಾರೀ ಕಾರ್ಯವನ್ನು ಇವರು ಕೈಕೊಳ್ಳಲು ಅಸಾಧ್ಯವಿರುವ ಪರಿಸ್ಥಿತಿ ಇರುತ್ತದೆ. ಪಂಚಾಯತುಗಳು ಅನೇಕ ಬಾರಿ ತಮ್ಮ ಕ್ಲಾರ್ಕರ ಮೇಲೆಯೇ ಹೊಂದಿಕೊಂಡಿರುತ್ತವೆ. ಇವರಾದರೋ ಲಂಚ ಖೋರರೂ ತಂಟೆಕೋರರೂ ಇರುವುದುಂಟು. ಅನೇಕ ಪಂಚಾಯತುಗಳಲ್ಲಿ ಕ್ರಮವಾಗಿ ಸಭೆಗಳನ್ನೇ ಜರಗಿಸುವುದಿಲ್ಲ. ಗ್ರಾಮದ ಶುಚಿತ್ವದ ಕಡೆಗೆ ಹೆಚ್ಚಾಗಿ ಅಸಡ್ಡೆಯೇ ತೋರಿಸಲಾಗುತ್ತಿದೆ. ಕುಡಿಯುವ ನೀರು ಒದಗಿಸುವ ಏರ್ಪಾಡು ಮಾಡುವುದಿಲ್ಲ. ರಸ್ತೆಗಳನ್ನು ದುರಸ್ತಿ ಸ್ಥಿತಿಯಲ್ಲಿ ಡುವುದಿಲ್ಲ. ಟೆಂಡರುಗಳನ್ನು ಸ್ವೀಕರಿಸುವಾಗ ತಮ್ಮ ಜನರನ್ನೇ ಆರಿಸುವ ಪದ್ಧತಿ ಇದೆ. ನಮೂನಿ ಕೆಲಸ ಬಹಳ ಅತ್ಯಪ್ತಿಕರವಾಗಿ ನಡೆಯುತ್ತಾರೆ. ಲೆಕ್ಕ ಪರಿತೋಧಕರ ಸೂಚನೆಗಳಿಗೆ ಗಮನ ಕೊಡುವವರೇ ಇಲ್ಲ. ಆಯವ್ಯಯ ತಪ್ಪುಗಳನ್ನು ಸರಿಯಾಗಿ ತಯಾರಿಸುವುದಿಲ್ಲ ಮಾತ್ರವಲ್ಲ ಖರ್ಚನ್ನು ವರಿಣಾಮಕಾರೀ ಹಿಡಿತದಲ್ಲಿಟ್ಟುಕೊಳ್ಳುವುದಿಲ್ಲ. ಇದರಿಂದಾಗಿ ಹಣ ಹಾಳಾಗುವುದು ಹಾಗೂ ವ್ಯರ್ಥ ಖರ್ಚಾಗುವುದು ಸಾಮಾನ್ಯವಾಗಿದೆ. ಪಂಚಾಯತು ಹಣಗಳ ದುರುಪಯೋಗವೂ ಸರ್ವಸಾಧಾರಣವಾಗಿ ಅನೇಕ ಕಡೆ ಪ್ರಚಾರದಲ್ಲಿದೆ."

ಪಂಚಾಯತು ದೌರ್ಬಲ್ಯಗಳ ಈ ಉದ್ದ ನಟ್ಟಿ ಪ್ರಕಟವಾದ ಬಳಿಕ ಈಗ ಗ್ರಾಮಗಳ ಪರಿಸ್ಥಿತಿ ಬಹಳ ಉತ್ತಮವಾಗಿದೆಯೆಂದು ಹೇಳುವಂತಿಲ್ಲ.

ಮದ್ರಾಸು ಪ್ರಾಂತ್ಯದಲ್ಲಿ ಸುಮಾರು 54,000 ಗ್ರಾಮಗಳಿವೆ. ಈಗಿನ ಹೊಸ ಮಸೂದೆಯಂತೆ ಎಲ್ಲ ಗ್ರಾಮಗಳಿಗೂ ಪಂಚಾಯತುಗಳನ್ನು ವ್ಯವಸ್ಥೆಗೊಳಿಸುವುದು ಕಡ್ಡಾಯವೆಂಬುದರಿಂದ ಮುಂದೆ ಪಂಚಾಯತುಗಳ ಸಂಖ್ಯೆ ವಿಪರೀತ ಬೆಳೆಯುವುದು ಅನಿವಾರ್ಯ. ಚಿಕ್ಕ ದೊಡ್ಡ ಗ್ರಾಮಗಳು ಸೇರಿ ಸುಮಾರು 20,000 ಪಂಚಾಯತುಗಳಾದರೂ ಏರ್ಪಡಿಸಲ್ಪಡಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ.

ಮುಂದಿನ ಈ ಪಂಚಾಯತುಗಳು ಸರಿಯಾಗಿ ನಡೆಯುವವೆ? ಅಥವಾ ಹಿಂದಿನ ಕಥೆಯೇ ಮುಂದೆ ಸಾಗುವುದೆ? ಎಂಬುದು ಮುಖ್ಯ ಪ್ರಶ್ನೆ.

ಈಗ ಬ್ರಿಟಿಷರ ಆಳ್ವಿಕೆ ಇಲ್ಲ. ಈ ಸುಧಾರಣೆ ಬರೇ ತೋರಿಕೆಯ ಸುಧಾರಣೆ ಮಾತ್ರವಿರಬೇಕೆಂಬ ಅಭಿಪ್ರಾಯ ಈಗಿನ ಸರಕಾರಕ್ಕೆ ಇಲ್ಲ. ಒಂದು ಸರಕಾರವು ಈ ಸುಧಾರಣೆ ಯಶಸ್ವಿಯಾಗುವಂತೆ ಏನೆಲ್ಲ ಮಾಡುವುದು ಅಗತ್ಯವೊ ಅದೆಲ್ಲವನ್ನೂ ಈಗಿನ ಸರಕಾರ ಮಾಡುವುದು ಅಥವಾ ಅದರಿಂದ ಮಾಡಿಸಬಹುದು.

ನಮ್ಮ ಗ್ರಾಮಸ್ಥರಲ್ಲಿ ನಿಜವಾದ ಜನ ಜಾಗ್ರತಿ ಸಾಧಿಸುವುದು ಎಲ್ಲಕ್ಕೂ ಮುಖ್ಯ. ಸಾಕಷ್ಟು ಜವಾಬ್ದಾರಿ ತಲೆಯ ಮೇಲೆ ಹೊರಿಸಿದರೆ ಇಂಥ ಜಾಗ್ರತಿ ತಾನಾಗಿ ಬೆಳೆಯುವುದೆಂಬ ಮಾತಿನಲ್ಲಿ ತುಂಬಾ ಸತ್ಯಾಂಶವುಂಟು.

ಗ್ರಾಮ ಉದ್ಯೋಗಸ್ಥರನ್ನು ಅಂದರೆ ಪಠೇಲ ಶ್ಯಾನುಭೋಗರೇ ಮೊದಲಾದವರನ್ನು ಪಂಚಾಯತುಗಳಿಗೆ ಅಧೀನವಡಿಸಿ ಅವರು ಮಾಡುತ್ತಲಿದ್ದ ಕಾರ್ಯಗಳೆಲ್ಲವನ್ನು ಪಂಚಾಯತುಗಳಿಗೇನೇ ವಹಿಸಿಕೊಡಬಹುದೆಂದು ಒಂದು ಸೂಚನೆ ಇದೆ. ಸಂಯುಕ್ತ ಪ್ರಾಂತ್ಯದಲ್ಲಿ ಭೂಕಂದಾಯ ವಸೂಲಿ ಕೂಡಾ ಪಂಚಾಯತಿಗೆ ಕೂಡಲಾಗಿದೆಯಂತೆ. ನಮ್ಮಲ್ಲಿ ಇಂದಲ್ಲ ನಾಳೆ ಇದೇ ಬಗೆಯ ಏರ್ಪಾಡು ಬರುವುದು ಅನಿವಾರ್ಯ.

ಗ್ರಾಮಸ್ಥರು ಈ ಬಾರಿ ಒಮ್ಮೆಗೆ ತಮ್ಮೊಳಗಿನ ಭೇದಬುದ್ಧಿ ಬದಿಗಿಟ್ಟು ಸ್ವಪ್ರತಿಷ್ಠೆಗೆ ಪ್ರಧಾನ್ಯತೆ ಕೊಡದೆ ಈ ಹೊಸ ಪಂಚಾಯತು ವ್ಯವಸ್ಥೆ ಪೂರ್ಣ ಯಶಸ್ವಿಯಾಗಲು ಸಹಕರಿಸುವುದು ಎಲ್ಲಾ ಗ್ರಾಮಸ್ಥರ ಪವಿತ್ರ ಕರ್ತವ್ಯವೆಂದು ತಿಳಿಯಬೇಕು. ಇದರಿಂದಲೇ ನಮ್ಮ ಗ್ರಾಮಗಳ ಅಂದರೆ ದೇಶದ ಏಳಿಗೆ ಸಾಧ್ಯ. ತಮ್ಮ ಸ್ವಾರ್ಥ ಸ್ವವ್ಯಕ್ತಿಪ್ರೆಗಳಿಗಾಗಿ ಈ ಸಂದರ್ಭ ಹಾಳು ಮಾಡುವುದೆಂದರೆ ನಿಜವಾದ ಸಮಾಜ ಹಾಗೂ ದೇಶದ ದ್ರೋಹವೆಂದು ಎಲ್ಲಾ ಗ್ರಾಮಸ್ಥರೂ ತಿಳಿಯಬೇಕಾಗಿ ವಿನಂತಿ ಮಾಡಬಹುದು.

ಟೀಕೆ-ಟಿಪ್ಪಣಿಗಳು

ಜಿಲ್ಲಾ ಬೋರ್ಡು ಚುನಾವಣೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸದ್ಯದಲ್ಲಿ ಬರಲಿರುವ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಭಾಗ ವಹಿಸಿಬೇಕಾಗಿ ಅಂದರೆ ಕಾಂಗ್ರೆಸ್ ಕಡೆಯ ಉಮೇದ್ವಾರರನ್ನು ನಿಲ್ಲಿಸಿ ತಮ್ಮ ಪಕ್ಷದ ವರವಾಗಿ ಸ್ಪರ್ಧಿಸಬೇಕಾಗಿ ಇತ್ತೀಚೆಗೆ ಸೇರಿದ ಕಮಿಟಿಯ ಸಭೆಯಲ್ಲಿ ಬಹುಮತದಿಂದ ಮಂಜೂರಾಗಿರುತ್ತದೆ.

ಧೈರ್ಯದಿಂದ ಮುಂದೆ ಬಂದು ಈ ರೀತಿ ನ್ಯಾಯವಾದ ತೀರ್ಮಾನಕ್ಕೆ ಬಂದ ಬಗ್ಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅಭಿನಂದನೆಗಳು ಸಲ್ಲಬೇಕು.

ಜಿಲ್ಲೆಯ ಮಹಾಜನರೆಲ್ಲರೂ ಕಾಂಗ್ರೆಸ್ ಉಮೇದ್ವಾರರನ್ನು ಎಂದಿನಂತೆ ಆರಿಸುವದೆಂದು ನಿರೀಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ. ಕಮಿಟಿಯವರಾದರೂ ಯೋಗ್ಯ ಉಮೇದ್ವಾರರನ್ನು ಆರಿಸಿ ನಿಲ್ಲಿಸುವರೆಂದು ಹಾರೈಸಬಹುದು.

ಕಾಶ್ಮೀರಕ್ಕೆ ಪಾಕಿಸ್ತಾನದ ಆಹಾರ ದಾನ

ಭಾರತ ಸರಕಾರಕ್ಕೆ ಸೇರಿದ ಕಾಶ್ಮೀರ ವಿಭಾಗದಲ್ಲಿ ಆಹಾರವಿಲ್ಲದೆ ಸಾವಿರಾರು ಜನರು ಸಂಕಷ್ಟಕ್ಕೆ ಬಿದ್ದಿರುವುದರಿಂದ ಈ ಜನರಿಗೆ ಬೇಕಾಗುವ ಆಹಾರಧಾನ್ಯಗಳನ್ನು ಧರ್ಮಾರ್ಥವಾಗಿ ತಾನು ಒದಗಿಸಲು ಸಿದ್ಧವಿರುವುದಾಗಿ ಪಾಕಿಸ್ತಾನ ಸರಕಾರವು ಯುನ್ಯಾಟೆಡ್ ನೇಶನ್ಸ್ ಕಾಶ್ಮೀರ ಕಮಿಶನ ಸದಸ್ಯರಿಗೆ ತಿಳಿಸಿರುವರು. ಕಾಶ್ಮೀರದಲ್ಲಿ ಈ ಬಗೆಯ ಸಂಕಷ್ಟದ ಪರಿಸ್ಥಿತಿ ಇಲ್ಲವೆಂದೂ ಜನರಿಗೆ ಬೇಕಾದ ಆಹಾರಧಾನ್ಯ ಒದಗಿಸಲ್ಪಟ್ಟಿದೆಯೆಂದೂ ತಿಳಿದು ಬರುತ್ತದೆ. ಮಾತ್ರವಲ್ಲ ಅಂಥ ಸಹಾಯ ಮಾಡುವ ಅಪೇಕ್ಷೆ ಪಾಕಿಸ್ತಾನಕ್ಕೆ ಇದ್ದರೆ ಅವರು ಈ ಕುರಿತು ಭಾರತ ಸರಕಾರಕ್ಕೇನೆ ತಿಳಿಸಬಹುದಿತ್ತು. ಯುನ್ಯಾಟೆಡ್ ನೇಶನ್ಸಿನ ಕಮಿಶನರಿಗೆ ತಿಳಿಸಬೇಕಾಗಿರಲಿಲ್ಲ. ಮಾತ್ರವಲ್ಲ ಭಾರತ ಸರಕಾರಕ್ಕೆ ಪಾಕಿಸ್ತಾನವು ಒದಗಿಸುವುದಾಗಿ ಒಪ್ಪಿಕೊಂಡಂತೆ ಆಹಾರಧಾನ್ಯ ಭಾರತಕ್ಕಾಗಿ ಇನ್ನೂ ಒದಗಿಸಲಿಲ್ಲ. ಕಾಶ್ಮೀರದಲ್ಲಿಯ ಮುಸ್ಲೀಮ್ ಜನರು ಭಾರತ ಸರಕಾರದಡಿ ಸಂಕಷ್ಟದಲ್ಲಿ ಬಿದ್ದಿದ್ದಾರೆ. ತಾವು ಅವರಿಗೆ ಸಹಾಯ ಮಾಡಲು ಸಿದ್ಧರಿದ್ದೇವೆನೆಂಬ ವ್ಯಾಜದಲ್ಲೇ ಇದೆಲ್ಲವಿದರ ಮೂಲವೆಂಬುದು ಸ್ಪಷ್ಟವಿರುತ್ತದೆ.

ಸತ್ಯಮೇವ ಜಯತೇ

ಭಾರತ ಸರಕಾರದ ರಾಷ್ಟ್ರೀಯ ಚಿಹ್ನೆ ಮತ್ತು ಮುದ್ರೆಗಳಲ್ಲಿ "ಸತ್ಯಮೇವ ಜಯತೇ" ಎಂಬ ಮಾತನ್ನು ಬರೆಯಲ್ಪಟ್ಟು ಆರಿಸಲಾಗಿದೆ. ಈ ವಾಕ್ಯದಲ್ಲಿ "ಜಯತೇ" ಎಂಬುದರ /ಬದಲು "ಜಯತಿ" ಎಂದಿರಬೇಕೆಂದು ಅಭಿಪ್ರಾಯ ವ್ಯಕ್ತಗೊಳಿಸಿದರು. 'ಜಯತೇ' ಎಂಬುದು ಹಳೆಯ ವೈದಿಕ ಪ್ರಯೋಗವಂತೆ. ಪಾಣಿನೀ ವ್ಯಾಕರಣದಂತೆ 'ಜಯತಿ' ಎಂಬುದೇ ಸರಿಯಂತೆ ಈ ಕುರಿತು ದೇಶದಾದ್ಯಂತ ವಂಡಿತರುಗಳೊಳಗೆ ಚರ್ಚೆ ನಡೆಯಿತು. ಕೊನೆಗೆ ಇದು ಉನಿಷದ್ವಾಕ್ಯವಿದ್ದು ಹಳೆಯ ಕ್ರಮ ಅಂದರೆ 'ಜಯತೇ' ಎಂಬ ರೂಪವನ್ನೇ ಇಟ್ಟುಕೊಳ್ಳಬೇಕೆಂದು ತೀರ್ಮಾನವಾಯಿತು.

ಹೊಟೇಲುಗಳೂ ದರ್ಜಿ ಅಂಗಡಿಗಳೂ ಮತ್ತು ಕಾರ್ಖಾನೆ ಕಾನೂನು

10 ಮಂದಿಗಿಂತ ಹೆಚ್ಚು ನೌಕರರಿರುವ ಕಾಫಿ ಅಥವಾ ಊಟದ ಹೋಟೇಲುಗಳು ಮತ್ತು 9 ಮಂದಿ ನೌಕರರಿರುವ ದರ್ಜಿ ಅಂಗಡಿಗಳು ಕಾರ್ಖಾನೆಯೆಂದು ಘೋಷಿಸಲ್ಪಡಬೇಕು ಇವುಗಳಿಗೆ ಫ್ಯಾಕ್ಟರೀ ಕಾನೂನು ಅನ್ವಯಿಸುತ್ತದೆಂಬುದರಿಂದ ಆ ಕಾನೂನಿನಂತೆ ಇವನ್ನು ರಿಜಿಸ್ಟರ್ ಮಾಡಬೇಕು. ಈ ರೀತಿ ಕೇಂದ್ರ ಸರಕಾರವು ಪ್ರಾಂತಿಕ ಸರಕಾರಗಳಿಗೆ ತಿಳಿಸಿರುತ್ತದೆ ಆದುದರಿಂದ ಇಂಥವುಗಳಿಗೆ ಅಂಗಡಿ ನೌಕರರ ಕಾನೂನು ಅನ್ವಯಿಸುವುದಿಲ್ಲವಂತೆ

ಹೊಟೇಲುಗಳಲ್ಲಿ ತಿಂಡಿ ಇತ್ಯಾದಿ ತಯಾರಿಸುವುದು ಕಾರ್ಖಾನೆಯೆ? ದರ್ಜಿಗಳು ಹೊಲಿದು ಅಂಗಿ ಇತ್ಯಾದಿ ಮಾಡುವುದು ಇವು ಕೈಗಾರಿಕೆಗಳಾದುದರಿಂದ ಹೀಗೆ ಈ ಸಂಸ್ಥೆಗಳನ್ನು ಕಾರ್ಖಾನೆಗಳೆಂದು ಹೇಳಬೇಕಾಗುತ್ತದೆಂದು ಕೇಂದ್ರ ಸರಕಾರದ ಕಾನೂನು ನಿಶಾರದರು ಅಭಿಪ್ರಾಯ ಕೊಟ್ಟರುತ್ತಾರೆ

ಪನೆಬೆಲ್ಲ ತಿಕ್ಷಣ ಶಾಲೆ

ಭಾರತ ಸರಕಾರದವರು ನಮ್ಮ ಜಿಲ್ಲೆಯ ಮೂಡಬಿದರೆಯಲ್ಲಿ ಓಲೆಬೆಲ್ಲ ಅಥವಾ ಪನೆ ಬೆಲ್ಲವೆಂದು ಕರೆಯಲ್ಪಡುವ ಬೆಲ್ಲವನ್ನು ಸುಧಾರಿತ ಕ್ರಮದಲ್ಲಿ ತಯಾರಿಸುವ ವಿಧಾನಗಳಲ್ಲಿ ಕೆಲಸಗಾರರಿಗೆ ಶಿಕ್ಷಣಕೊಡುವ ಏರ್ಪಡಿಸಿದ ಶಾಲೆಯನ್ನು ಈಗ ಇಲ್ಲಿಂದ ಕಡ ಊರಿಗೆ ನರ್ಗಾಯಿಸಲ್ಪಡುತ್ತದೆಂದು ಪ್ರಕಟವಾಗಿರುತ್ತದೆ. ತೆಂಗು, ತಾಳೆ ಮತ್ತು ಖರ್ಜೂರ ಮರಗಳಿಂದ ಬೆಲ್ಲ ತಯಾರಿ ಮಾಡಲು ಇಲ್ಲಿಗಿಂತಲೂ ಕಡ ಊರಲ್ಲಿ ಹೆಚ್ಚು ಅನುಕೂಲತೆಗಳಿವೆಯೆಂಬುದರಿಂದ ಈ ರೀತಿ ಶಾಲೆಯನ್ನು ವರ್ಗಾಯಿಸಲು ಕಾರಣವಂತೆ. ಕಡ ಊರಲ್ಲಿ ಈ ಶಾಲೆ ಇದೇ ಬರುವ ಅಗೋಸ್ತು ತಾ. 1ನೇ ದಿನ ತೆರೆಯಲ್ಪಡುವುದೆಂದು ಪ್ರಕಟವಾಗಿದೆ. ಜಿಲ್ಲೆಯ ಪರವಾಗಿ ಈ ಶಾಲೆ ನಡೆಸಿಕೊಂಡಿದ್ದವರಿಗೆ ವಿದಾಯ ಕೋರಬೇಕಾಗಿದೆ.

ಸೇಲ್ಸ ಟೆಕ್ಸ್ ಮತ್ತು ಹೊಟೇಲು ಮ್ಹಾಲಿಕರ ನಿಷೇಧ ಪ್ರದರ್ಶನ

ಮದ್ರಾಸ್ ಸರಕಾರದವರು ಊಟದ ಮತ್ತು ಕಾಫಿ ಹೊಟೇಲುಗಳ ಮೇಲಿನ ಸೇಲ್ಸ ಟೇಕ್ಸ್ ಅಥವಾ ಮಾರಾಟ ತೆರಿಗೆ ದರಗಳನ್ನು ಹೆಚ್ಚಿಸುವ ಪ್ರಯುಕ್ತ ತಮ್ಮ ನಿಷೇಧ ಪ್ರಕಟಿಸುವುದಕ್ಕಾಗಿ ಮದ್ರಾಸು ಪ್ರಾಂತ್ಯದಲ್ಲಿಯ ಎಲ್ಲಾ ಊಟದ ಹಾಗೂ ಕಾಫಿ ಹೊಟೇಲುಗಳನ್ನು ಇಥೇ ಜುಲ್ಯಾ ತಾರೀಕು 1ಕ್ಕೆ ಮುಚ್ಚಬೇಕಾಗಿ ಮದ್ರಾಸಿನ ಹೊಟೇಲು ಮ್ಹಾಲಿಕರ ಸಂಘದವರು ವಿನಂತಿ ಮಾಡಿಕೊಂಡರು

ಮದ್ರಾಸು ಸರಕಾರದ ಮುಖ್ಯ ಮಂತ್ರಿ ಮೊದಲಾದವರು ಹೊಟೇಲು ಮ್ಹಾಲಿಕರ ಸಂಘದವರನ್ನು ಕರೆಸಿ ಮಾರಾಟ ತೆರಿಗೆ ಏರಿಸುವ ಸೂಚನೆಯಲ್ಲಿ ಮಾಡಿದ ತಿದ್ದುಪಡಿಗಳನ್ನು ತಿಳಿಯಹೇಳಿ ಹೊಟೇಲುಗಳನ್ನು ಒಂದು ದಿನವೂ ನುಟ್ಟಿಗಾದರೂ ಬಲ್ಲ ರೂ ಮುಚ್ಚಿದರೆ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತೋರಿಸಿ ಈ ರೀತಿ ವರ್ತಿಸುವುದು ಸರಿಯಲ್ಲವೆಂದು ಬೋಧಿಸಿದರು ಹೋಟೇಲು ಮ್ಹಾಲಿಕರು ಉಪದೇಶ ಸ್ವೀಕಾರ ಮಾಡಿದರೂ ಇಲ್ಲಿವೊ ಸ್ಪಷ್ಟವಾಗಲಿಲ್ಲ

ಅಂತೂ ಮಲಬಾರು ಜಿಲ್ಲೆಯ ಹೊಟೇಲು ಮಾಲಿಕರು ತಾವು ನಿಷೇಧ ಪ್ರಕಟನೆಗಾಗಿ ಹೊಟೇಲುಗಳನ್ನು ಮುಚ್ಚುವುದಿಲ್ಲವೆಂದು ಪ್ರಕಟಿಸಿರುತ್ತಾರೆ

ನಮ್ಮ ಜಿಲ್ಲೆಯವರು ಅದರಲ್ಲೂ ಮಂಗಳೂರಿನ ಹೊಟೇಲು ಮ್ಹಾಲಿಕ ಸಂಘದವರು ಈ ಕುರಿತು ಯಾವ ತೀರ್ಮಾನ ಮಾಡಿರುವರೊ ತಿಳಿದುಬಂದಿಲ್ಲ

ಈ ಲೇಖನವು ಓದಿ ಗರ್ಕೈಯಲ್ಲಿ ಸಿಕ್ಕಾಗ ಜುಲ್ಯಾ ತಾ 1 ಬರುತ್ತದೆಂಬುದರಿಂದ ಆಗ ಮಂಗಳೂರಿನವರು ಯಾವ ತೀರ್ಮಾನ ಮಾಡಿರುವರೆಂಬುದ ತಾನಾಗಿ ತಿಳಿದುಬರುವುದು.

ಅಂತೂ ಈ ಪ್ರಶ್ನೆಯು ಸಾರಾಸಾರ ವಿವಾರ ಮಹಾಜನರು ತಿಳಿಯುವಂತೆ ಹೇಳುವುದು ಅಗತ್ಯ.

ಆಯವ್ಯಯ ತಖ್ತೆಯನ್ನು ಶಾಸನ ಸಭೆಯ ಮುಂದಿಡುವಾಗ ಕಡಮೆ ಬಿದ್ದ ಜಮೆ ಜನ್ನು ಭರ್ತಿ ಮಾಡುವುದಕ್ಕಾಗಿ ನಮ್ಮ ಆರ್ಥಿಕ ಖಾತೆಯ ಮಂತ್ರಿ ಶ್ರೀ ಬಿ ಗೋಪಾಲ ರೆಡ್ಡಿಯವರು ಮುಂದೆ ತಂದ ಸೂಚನೆಗಳಲ್ಲಿ ಊಟದ ಹಾಗೂ ಕಾಫಿ ಹೋಟೇಲುಗಳ ಮೇಲೆ ಹಾಕಿದ ಮಾರಾಟ ತೆರಿಗೆಯನ್ನು ಶೇಕಡಾ 50ರಂತೆ ಹೆಚ್ಚಿಸಬೇಂಬ ಒಂದು ಸೂಚನೆ ಇತ್ತು.

ಮುಂದೆ ಈ ಕುರಿತು ಒಂದು ಮಸೂದೆಯನ್ನು ಚುನ್ಯಾತ ಕಮಿಟಿಗೆ ಒಪ್ಪಿಸಲಾಯಿತು. ಅಲ್ಲಿ ಈ ಸೂಚನೆಗಳನ್ನೆಲ್ಲ ಚೆನ್ನಾಗಿ ಚರ್ಚಿಸಿ ಅರೂಢದ ಸೂಚನೆಗೆ ಕೆಲವು ತಿದ್ದುಪಡಿಗಳನ್ನು ಸೂಚಿಸಲಾಯಿತು. ಈ ಕುರಿತು ಕಳೆದ ವಾರಿಯ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಹೊಟೇಲುಗಳ ಮೇಲೆ ಹೊರಿಸುವ ಮಾರಾಟ ತೆರಿಗೆಯ ಮಟ್ಟಿಗೆ ಮಾಡಿದ ತಿದ್ದುಪಡಿಗಳನ್ನು ಇಲ್ಲಿ ಪುನಃ ವಿವರಿಸ ಬಹುದು ಈ ತಿದ್ದುಪಡಿಗಳು ಶಾಸನ ಸಭೆಯಲ್ಲಿ ಕೊನೆಗೆ ಮಂಜೂರಾಗಿರುತ್ತವೆ.

ಮೊದಲು ಹೊಟೇಲುಗಳ ಮೇಲೆ ರೂಪ್ಯಾ ಒಂದರ ನೂರು ಪೈಗಳಂತೆ ಮಾರಾಟ ತೆರಿಗೆ ವಸೂಲು ಮಾಡಲಾಗುತ್ತಿತ್ತು. ಶೇಕಡಾ 50ರಂತೆ ಹೆಚ್ಚಿಸುವುದೆಂದರೆ ರೂಪ್ಯಾ ಒಂದರ ಮೇಲೆ 4½ ಪೈ ತೆರಿಗೆ ಹೊರಿಸುವುದು ಎಂಬರ್ಥ

ಚುನ್ಯಾತ ಕಮಿಟಿಯವರು ಸೂಚಿಸಿದ ತಿದ್ದುಪಡಯಂತೆ ಈ ರೀತಿ ಮಾರಾಟ ತೆರಿಗೆ ಎಲ್ಲಾ ಹೋಟೇಲುಗಳ ಮೇಲೆ ಹೆಚ್ಚಿಸದರದಲ್ಲಿ ಹೊರಿಸುವ ಬದಲು ಯಾವ ಹೋಟೇಲಿನ ವರ್ಷಾವಧಿ ವಹಿವಾಟು ರೂ 25,000ಕ್ಕೆ ಹೆಚ್ಚಿರುವುದೋ ಅಂಥ ಹೋಟೆಲಿನವರಿಂದ ಮಾತ್ರ ರೂಪ್ಯಾ ಒಂದಕ್ಕೆ 4½ ಪೈ ದರದಲ್ಲಿ ವಸೂಲು ಮಾಡಬೇಕು

ರೂ 10,000ದಿಂದ ರೂ 25,000ದ ವರೆಗೆ ವಹಿವಾಟು ವರ್ಷಕ್ಕೆ ಇದ್ದ ಹೋಟೆಲುಗಳಿಂದ ಹಿಂದಿನ ದರ ಅಂದರೆ ರೂಪ್ಯಾ ಒಂದರ 3 ಪೈ ಮಾತ್ರ ವಸೂಲು ಮಾಡಬೇಕು

ಮತ್ತು ರೂ 10,000ಕ್ಕಿಂತ ವರ್ಷಾವಧಿ ವಹಿವಾಟು ಕಡಮೆ ಇದ್ದ ಹೊಟೇಲುಗಳಿಂದ ಮಾರಾಟ ತೆರಿಗೆ ವಸೂಲು ಮಾಡುವುದೇ ಬೇಡ

ಈ ಸೂಚನೆ ಚುನ್ಯಾತ ಕಮಿಟಿಯವರಿಂದ ಬಂದಿದ್ದು ಕೊನೆಗೆ ಶಾಸನ ಸಭೆಯಲ್ಲಿ ಮಂಜೂರಾಯಿತು

ಮೇಲಿನ ತಿದ್ದುಪಡಿಯೊಂದಿಗೆ ಮುಂಜಾರಾದ ಮಾರಾಟ ತೆರಿಗೆ ಕಾಯಿದೆಯಿಂದಾಸರಕಾರಕ್ಕೆ ಈ ವರ್ಷ ರೂಪ್ಯಾ ಹತ್ತು ಲಕ್ಷ ಹೆಚ್ಚಿಗೆ ಸಿಕ್ಕುತ್ತದೆಂದು ತಿಳಿದು ಬರುತ್ತದೆ

ಈ ಹಿತ್ತು ಲಕ್ಷ ರೂಪ್ಯಾ ಹೆಚ್ಚಿನವಿಂಗಿ ರೂಪ್ಯಾ 2000ಕ್ಕೆ ವೆಲ್ಲಟ್ಟು ವಹಿವಾಟಿರುವ ಶ್ರೀಮಂತ ಹೋಟೇಲು ಮ್ಹಾಲಿಕರಿಂದಲೇ ವಸೂಲಾಗುತ್ತದೆಂಬುದರಿಂದ ಇದರಲ್ಲಿ ಹೆಚ್ಚಿನ ಅನ್ಯಾಯವುಂಟೆಂಬುದು ಹೇಳಬೇಕಾಗಿಲ್ಲ

ಮಾತ್ರವಲ್ಲ ಹೊಸ ಕಾಯಿದೆಯಂತೆ ರೂಪ್ಯಾ 10,000ಕ್ಕೆ ಕಡಿಮೆ ವಹಿವಾಟು ಇದ್ದವರಿಂದ ಹಿಂದೆ ವಸೂಲು ಮಾಡುತ್ತಿದ್ದ ಮಾರಾಟ ತೆರಿಗೆ ಇವರಿಗೆ ಬಿಡಲಾಗುತ್ತದೆಂಬುದರಿಂದ ಬಡ ಹೋಟೇಲುಗಾರರಿಗೆ ಇದರಿಂದ ನ್ಯಾಯವೇ ಆಗುತ್ತದೆ

ಇದಕ್ಕೆ ನಿಷೇಧ ಪ್ರದರ್ಶನೆ ಮಾಡಲಿಕ್ಕೆ ಹೆಚ್ಚಿನ ನ್ಯಾಯವಿರುವಂತೆ ಕಾಣುವುದಿಲ್ಲ

ಕಲ್ಕತ್ತಾದಲ್ಲಿ ಜರಗಿದ ಉಪಚುನಾವಣೆಯಲ್ಲಿ ಸರಕಾರೋಸರು ವಿಜಯಿಗಳಾದರೆಷ್ಟೆ. ಅವರ ಕಡೆಯವರು ಬರ್ಲಿನ್, ವಿಯೆನ್ನಾದಿಂದ ಸುಭಾಸರು ಕೊಟ್ಟ ಭಾಷಣಗಳೆಂದು ಕೆಲವು ಕರಪತ್ರಗಳಲ್ಲಿ ಪ್ರಕಟಿಸಿದ್ದರು. ಇದು ಚುನಾವಣೆ ವ್ಯಾಪಾರದ ಒಂದು ಅಂಗ.

ಸುದ್ದಿ ಸಂಗ್ರಹ

ಯುಕ್ತರಾಷ್ಟ್ರ ಸಂಸ್ಥೆಯವರು ಶೀಘ್ರದಲ್ಲೇ ಜಗತ್ತಿನ ಜನಸಂಖ್ಯೆ ಅಭಿವೃದ್ಧಿಯ ಸಮಸ್ಯೆಯ ಕುರಿತು ಒಂದು ಪರಿಶೀಲನೆಯನ್ನು ನಡೆಸಲಿರುವರೆಂದು ಅದರ ಜನಸಂಖ್ಯೆ ಸಮಿತಿಯ ಕಾರ್ಯದರ್ಶಿ ಡಾ। ಸಿ ಚಂದ್ರಶೇಖರನ್ ಅವರು ತಿಳಿಸುತ್ತಾರೆ.

✠

ಸಂಯುಕ್ತ ಅಮೇರಿಕದ ಜನಸಂಖ್ಯೆ ಈಗ 148 ಕೋಟಿ 5 ಲಕ್ಷ, 27 ಸಾವಿರ ದಷ್ಟಿದೆಯೆಂದು ಗೊತ್ತಾಗುತ್ತದೆ

✠

ಕಲ್ಕತ್ತೆದ ಡಾ। ಶ್ಯಾಮದಾಸ್ ಚಟರ್ಜಿ ಮತ್ತು ಅಲಹಾಬಾದದ ಡಾ। ದೇವೇಂದ್ರ ಶರ್ಮಾ ಎಂಬಿಬ್ಬ ಹಿಂದೀ ವಿಜ್ಞಾನಿಗಳಿಗೆ ಕೆನಡಾದ ರಾಷ್ಟ್ರೀಯ ಸಂಶೋಧಕ ಸಂಘದವರು ಒಟ್ಟೋವಾದಲ್ಲಿನ ತಮ್ಮ ಭೌತಿಕ ಶಾಸ್ತ್ರ ಸಂಶೋಧನಾಲಯದಲ್ಲಿ ಪ್ರಯೋಗ ಕಾರ್ಯಗಳನ್ನು ನಡೆಸಲು ಎರಡು ವೇತನಗಳನ್ನು ಕೊಟ್ಟಿರುವರು

✠

ಜಗಾಖಾನರ ಮಗನಾದ ಆಲಿಖಾನ ನನ್ನು ವಿವಾಹ ಮಾಡಿಕೊಂಡ ಚಲಚಿತ್ರ ನಟಿ ರಿಟೊವೇರ್ತಳು ತನ್ನ ಚಲಚಿತ್ರ ನಟನಾ ವೃತ್ತಿಯನ್ನು ತ್ಯಜಿಸುವುದಿಲ್ಲವೆಂದು ಸಾರಿದ್ದಾಳೆ ಸದ್ಯದಲ್ಲೇ ಅವಳು ಕೆಲವು ಬ್ರಿಟಿಷ್ ಚಿತ್ರಗಳಲ್ಲಿ ಪಾತ್ರನಿಭಿಸಲಿರುವಳು ಈಗಾಗಲೆ ಇವರ್ ಗಂಡಂದಿರನ್ನು ಬಿಟ್ಟವಳೆ ಈ ಹೊಸ ರಾಜಕುಮಾರ ಪತಿಯೊಡನೆ ಎಷ್ಟು ಕಾಲ ಇರುವಳೊ ಎಂದು ಶಂಕಿಸಲಾಗಿದೆ

✠

ರೊಮೇನಿಯದ ರಾಜಕುಮಾರಿ ಈಲಿಯಾನಳು ತನ್ನ ಕಿರೀಟವನ್ನು 1 ಲಕ್ಷ 95 ಸಾವಿರ ರೂಪ್ಯಾಗಳಿಗೆ ಒತ್ತೆ ಇಟ್ಟಿದ್ದಾಳೆ ಈಕೆ ರೊಮೇನಿಯದ ಎಷಾ ಅರಸ್ಯನ್ಯಾಕೆಲನ ಸೊಂದರತ್ತೆ ಆರ್ಜೆಂಟಿನದಲ್ಲಿ ವ್ಯಾಪಾರ ಮಾಡುವ ತನ್ನ ಗಂಡನಿಗೆ ಹಣ ಪ್ಪಾರೈಸಲು ಹೀಗೆ ಮಾತಿದೆಳೆಂದು ಆಕೆ ತಿಳಿಸುತ್ತಾಳೆ ಮಕ್ಕಳ ವಿದ್ಯಾಭ್ಯಾಸಕ್ಕೂ ಆ ಹಣವನ್ನು ಉಪಯೋಗಿಸಲಾಗುವುದೆ. ಸ್ವಲ್ಪ ಸಮಯದ ನಂತರ ಕಿರೀಟವನ್ನು ಬಿಡಿಸಿಕೊಳ್ಳುವ ಹಾರೈಕೆಯೂ ಅವಳಿಗಿದೆ

✠

ಡನ್‌ಕರ್ಕ್ ದಾಳಿಯ ಸಮಯ ಒರ್ವ ಬ್ರಿಟಿಷ್ ಸೈನಿಕನು (1939ರಲ್ಲಿ) ಲಂಡನಿನಲ್ಲಿರುವ ತನ್ನ 3 ವರ್ಷದ ಮಗಳಿಗೂಂದು ಪತ್ರ ಬರೆದಿದ್ದ ದಾಳಿಯ ಗಡಿಬಿಡಿಯಲ್ಲಿ ಆ ಪತ್ರ ಒಂದ ಮೂರಿದ ಟವ್ಯಾಲು ವಾಹನದಲ್ಲಿ ಉಳಿಯಿತು 9 ವರ್ಷಗಳ ನಂತರ ಈಚೆಗೆ ಅದು 12 ವರ್ಷದವಳಾದ ಆ ಹುಡುಗಿಗೆ ತಲುಪಿಸಲಾಗಿದೆ

✠

ದಕ್ಷಿಣ ಕೆಲಿಫೋರ್ನಿಯದ ಕರಾವಳಿ ಪಟ್ಟಣದಲ್ಲೊಂದು ಕಡೆ ಒರ್ವ 20-30 ವರ್ಷದ ತರುಣಿಯು ನ್ಯೆಗ್ಲಾವೆಸ್ಟೆಯಲ್ಲೇ ಮೋಟಾರೊಂದನ್ನು ಚಲಾಯಿಸಿ ಓಡುವುದು ತಿಳಿದುಬಂದಿದೆ. ಕೆಲವೊಮ್ಮೆ ಗಂಡಸರೆದುರಿನಲ್ಲಿ ಅವರು ಮೋಟಾರಿನಿಂದಿಳಿದು ಹೊರಗೆ ತಿರುಗಾಡುವುದೂ ಇದೆ. ಆಕೆಯನ್ನು ಪತ್ತೆಹಚ್ಚಲು ಪ್ರಯತ್ನಗಳಾಗುತ್ತಿವೆ.

✠

ನಗರ ಸಭೆ

ಈಚೆಗೆ ನೇರೆದ ನಗರ ಸಭೆಯ ಕೂಟದಲ್ಲಿ ಅವಧಿ ಮಿಕ್ಕಿ ಹಾಜರಾಗದ ಇನ್ನ ಸವಸ್ಯರುಗಳ ಸ್ಥಾನಗಳನ್ನು ಊರ್ಜಿತಗೊಳಿಸಬೇಕೆ ಎಂಬ ವಿಷಯದ ಕುರಿತು ಚರ್ಚೆಯಾಗಿ ಈ ಕುರಿತು ಸರಕಾರಕ್ಕೆ ಬರೆದು ತಿಳಿಕೊಳ್ಳುವುದೆಂದು ನಿರ್ಧರಿಸಲಾಯಿತು. ಶ್ರೀಯುತ ಭಾಸ್ಕರ ರೈಯವರು ತಿಳಿಸಿದ ಒಂದು ತರಾವು ಅವರು ಸಭೆಗೆ ಬಾರದಿರುವುದರಿಂದ ಮುಂದೆ ಹಾಕಲಾಯಿತು. ಆಡಳಿತಾವಿನಲ್ಲಿ ಶ್ರೀ ರೈಗಳು "ಈಗಿನ ಆರೋಗ್ಯ ಖಾತೆಯ ಸೆನಿಟರಿ ನಿಬಂಧಿಯು ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಅವರನ್ನು ಬೇರೆ ಕಡೆ ವರ್ಗಾಯಿಸಿ ಹೊಸಬರನ್ನು ಅವರ ಸ್ಥಾನದಲ್ಲಿ ನೇಮಿಸಬೇಕೆಂದು" ಶಿಫಾರಸು ಮಾಡಲಾಗಿತ್ತು.

ನಿಳಲನೇ ಕಲಮು

ತಾ. ೨೬ರಂದು ಇಲ್ಲಿಯ ಸೋಶಲಿಸ್ಟ್ ವಕ್ಷದವರು ರಾಮಮನೋಹರ ಲೋಹಿಯೆ ದಿನವನ್ನಾಚರಿಸಿ ಅಂದು ಮೆರವಣಿಗೆ ಪ್ರದರ್ಶನ ಭಾಷಣ ಮೊದಲಾದ ಕಾರ್ಯಕ್ರಮಗಳನ್ನು ಜರಗಿಸಲು ಏರ್ಪಡಿಸಿದ್ದುದರಿಂದ ಸಾರ್ವಜನಿಕ ಶಾಂತಿ ಶಿಸ್ತುಗಳಿಗೆ ಭಂಗ ಬರುವ ಸಂಭವವಿದೆಯೆಂದು ಮನವರಿಕೆಯಾದ ಅಧಿಕಾರಿಗಳು ತಾ. ೨೫ರಿಂದ ಏಳು ದಿನಗಳ ನಿಳಲನೇ ಕಲಮನ್ನು ಜಾರಿಮಾಡಿರುವರು.

ಹೊಸ ಕಟ್ಟಡ ಪ್ರವೇಶೋತ್ಸವ

ಇಲ್ಲಿಯ ಕಾರ್ನಾಡ್ ಸದಾಶಿವರಾವ್ ರಸ್ತೆಯಲ್ಲಿರುವ ಸೆಂಟ್ರಲ್ ಸಹಕಾರಿ ಬೇಂಕಿನ ಹೊಸ ಕಟ್ಟಡದ ಪ್ರವೇಶೋತ್ಸವವನ್ನು ಮುನಿಸಿವಲ್ ಚೆಯರ್‌ಮೇನ್ ಶ್ರೀ ಎಲ್. ಸಿ. ಪ್ಯಾಸ್. ಎಂ. ಎಲ್. ಎ. ಅವರು ಜರಗಿದರು. ಲಘುಉಪಹಾರಾ ನಂತರ ಕಾರ್ಯದರ್ಶಿ ಶ್ರೀ ಶಾಂತಾರಾಮರಾಯರು ವರದಿಯೋದಿದರು. ನೆರೆದ ಮಹಸೀಯರಲ್ಲನೇಕರು ಸಹಕಾರಿ ಸಂಘದ ಅಭಿವೃದ್ಧಿಗೆ ಶ್ರಮವೆತ್ತ ಶ್ರೀ ಎಂ. ಶಿವರಾವ್, ಶ್ರೀ ಸರ್ವಪ್ಪಯ್ಯ ಮೊದಲಾದವರನ್ನು ಪ್ರಶಂಸಿಸಿ ಭಾಷಣ ಮಾಡಿದರು. ಭಾಷಣಗಾರರಲ್ಲಿ ಜಿಲ್ಲಾ ರಿಜಿಸ್ಟ್ರಾರ್ ಶ್ರೀ ಶಾನುಭಾಗರೂ, ನಿವೃತ್ತ ಜ್ಯೊಂಟ್ ರಿಜಿಸ್ಟ್ರಾರ್ ಶ್ರೀ ಗಿರಿಯಪ್ಪನವರೂ ಇದ್ದರು.

ಕರ್ನಾಟಕ ಪೊಲಿಟೆಕ್ನಿಕ್

ಮದ್ರಾಸ್ ಸರಕಾರದ ಔದ್ಯೊಗಿಕ ಇಲಾಖೆಯ ಜ್ಯೊಂಟ್ ಡೈರೆಕ್ಟರರಾದ ಶ್ರೀ ಮೆನೊನರವರು ಈಚೆಗೆ ಮಂಗಳೂರಿಗೆ ಬಂದಿದ್ದು ಇಲ್ಲಿಯ ಕರ್ನಾಟಕ ಪೊಲಿಟೆಕ್ನಿಕ್ ಶಾಲೆಯ ಕಾರ್ಯಕಲಾಪಗಳನ್ನು ಪರಾಂಬರಿಸಿದರು. ಪದವಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ವಸತಿಯಲ್ಲಿ ಈ ಶಾಲೆಗಾಗಿ ೨೫ಲಕ್ಷ ರೂಪ್ಯಾ ವೆಚ್ಚದಿಂದ ಹೊಸ ಕಟ್ಟಡವೊಂದು ಸ್ಥಾಪಿಸಲಾಗುವುದೆಂದೂ ಅವರು ತಿಳಿಸಿದರು.

ಡೈರೆಕ್ಟರ್ರರು ಆ ಸ್ಥಳಕ್ಕೂ ಭೇಟಿಯಿತ್ತು ಅಲ್ಲಿನ ಸಿ. ಸಿ. ಸಿ. ನರ್ಸ್‌ಶೋಪನ್ನೂ ಸಂದರ್ಶಿಸಿದರು. ಅಲ್ಲದೆ ಎಲೋಶಿಯಸ್ ಕೋಲೇಜಿನ ಹೊಸ ಕಟ್ಟಡವನ್ನೂ ಪರಿಶೀಲಿಸಿದರು. ರೈಲ್ವೆ ಸ್ಟೇಶನಿನ ತಮ್ಮ ವಸತಿಯಲ್ಲಿ ಡೈರೆಕ್ಟರರು ಪತ್ರಿಕಾ ಪ್ರತಿನಿಧಿಗಳಿಗೆ ಆಮಂತ್ರಿಸಿ ಔದ್ಯೊಗಿಕ ಶಿಕ್ಷಣ ಅಭಿವೃದ್ಧಿಗೆ ಸರಕಾರವು ಮಾಡಲಿಕೆಸುವ ಯೋಜನೆಗಳನ್ನು ವಿವರಿಸಿದರು.

ಪೊಲಿಟೆಕ್ನಿಕ್‌ದಲ್ಲಿ ಹೊಸ ಶಿಕ್ಷಣ ವಿಷಯಗಳು

ಇದೇ ಜುಲೈಯಿಂದ ಇಲ್ಲಿಯ ಪೊಲಿಟೆಕ್ನಿಕ್ ಶಾಲೆಯಲ್ಲಿ ಮೂರು ಹೊಸ ಶಿಕ್ಷಣ ವರ್ಗಗಳನ್ನು ತೆರೆಯಲಾಗುವುದು. ಮರದ ಕೆಲಸ, ಬೆತ್ತದ ಸಾಮಾನು ತಯಾರಿಸುವ ಶಿಕ್ಷಣ, ಮತ್ತು ಮೋಟಾರು ಯಂತ್ರ ಸಂಬಂಧ ತರಬೇತಿ ಇವುಗಳನ್ನು ಬೇರೆ ಬೇರೆ ಅವಧಿಯ ತನಕ ಕಲಿಸಲಾಗುವುದು. ಈ ವರ್ಗಗಳಿಗೆ ಸೇರುವವರು ಕನಿಷ್ಠ III ಫೋರ್ಮ್ ಕಲಿತವರಾದರೂ ಆಗಿರಬೇಕು.

ಹವಾಮಾನ

ಈ ವಾರದ ಪ್ರಾರಂಭದಲ್ಲಿ ಮಳೆಯು ಭರವು ವಿವರೀತವಾಗಿತ್ತು. ಸೋಮವಾರದಂದು ಗಾಳಿ ಚಳಿಯಿಂದ ಕೂಡಿದ ಬಿರುಸು ಮಳೆಗಳು ಬಿದ್ದುದರಿಂದ ಅನೇಕ ಶಾಲೆಗಳಿಗೆ ರಜೆ ಕೊಡಲಾಗಿತ್ತು. ಜಿಲ್ಲೆಯ ಕೃಷಿ ಪ್ರದೇಶಗಳಿಂದ ಬೆಳೆಗೆ ಹಿಡಿದ ಹುಳಗಳ ಕುರಿತು ಈಚೆಗೆ ತೀವ್ರವಾದ ವರದಿಗಳು ಬಂದಿರುವುದಿಲ್ಲ.

ಟಪ್ಪಾಲು ವಿತರಣೆ

ಕಳೆದ ತಾ. ೨೦ರಿಂದ ಟಪ್ಪಾಲು ಬಟವಾಡೆಯನ್ನು ಸಾಯಂಕಾಲವೆ ಮಾಡಲೇರ್ಪಡಿಸಿರುವುದು ಬಹಳ ಅನುಕೂಲವಾದ ವ್ಯವಸ್ಥೆಯಾಗಿರುವುದು. ಆದರೆ ಇಂದಿಗೆ ಸಮಯದಿಂದ ಮೈಲು ಸಾಯಂಕಾಲ ೫ ಘಂಟೆಗೆ ಬರುತ್ತಿರುವುದರಿಂದ ಈ ವಿತರಣೆ ಕೆಲಸವು ಇಷ್ಟು ವಿಳಂಬವಾಗಿ ಈಗ ವ್ಯವಸ್ಥಿತವಾಗುವಂತಾದುದೇಕೆಂದು ಪ್ರಶ್ನಿಸಲಾಗುತ್ತಿದೆ.

ಹೋಟೆಲುಗಳ ಹರತಾಳ

ಹೆಚ್ಚು ವ್ಯಾಪಾರದ ಹೊಟೇಲುಗಳ ಮೇಲೆ ಸೇಲ್ಸ್‌ಟೆಕ್ಸ್ ಹೊರಿಸಬೇಕೆಂಬ ಮದ್ರಾಸ್ ಸರಕಾರದ ನಿರ್ಣಯಕ್ಕೆ ನಿಷೇಧವನ್ನು ಸೂಚಿಸಲು ನಗರದ ಹೋಟೇಲು ಮ್ಯಾಲಿಕರ ಸಂಘದವರು ನಿಶ್ಚಯಿಸಿದರ ಮೇರೆಗೆ ಇಂದು ತಾ. ೧ರಂದು ನಗರದೊಳಗಿನ ಪ್ರಮುಖ ಹೋಟೇಲುಗಳೆಲ್ಲ ಮುಚ್ಚಲ್ಪಟ್ಟಿದ್ದುವು. ಸಣ್ಣ ಪುಟ್ಟ ಹೋಟೇಲುಗಳು ತೆರೆದಿದ್ದು ಗಿರಾಕಿಗಳ ಹೆಚ್ಚಳದಿಂದ ತಿಂಡಿ ಪಾನೀಯಗಳ ಶ್ರೇಷ್ಠತೆಯು ಬಹಳ ಕನಿಷ್ಠ ಮಟ್ಟಿದ್ದಾಗಿತ್ತು.

ಉಡುಪಿ ಕೊಲೇಜು

ಕಳೆದ ತಾ. ೨೬ರಂದು ಇಲ್ಲಿಯ ಹೊಸ ಕೋಲೇಜಿನ ಉದ್ಘಾಟನಾ ಸಮಾರಂಭವನ್ನು ಮುಂಬಯಿಯ ಪ್ರಸಿದ್ಧ ವೈದ್ಯಕತಜ್ಞರಾದ ಡಾ। ಎ. ವಿ. ಬಾಳಿಗರು ನೆರವೇರಿಸಿದರು. ಜಿಲ್ಲೆಯ ಹಲವು ಕಡೆಗಳಿಂದ ಪ್ರಮುಖ ಮಹಸೀಯರು ಆಹ್ವಾನಿತರಾಗಿ ಬಂದಿದ್ದರು. ಅನೇಕ ಸಂದೇಶಗಳೂ ಬಂದಿದ್ದುವು. ಮೊದಲು ೬೦ ವಿದ್ಯಾರ್ಥಿಗಳ ಒಂಧೇ ತರಗತಿಯನ್ನು ತೆರೆಯುವುದೆಂದು ನಿಶ್ಚಯಿಸಲಾಗಿತ್ತು. ಆದರೆ ಪ್ರವೇಶಾಪೇಕ್ಷೆಗಳ ಸಂಖ್ಯೆಯು ಅದಕ್ಕಿಂತಲೂ ಮಿಕ್ಕಿ ದರಿಂದ ಎರಡು ವಿಭಾಗಗಳನ್ನು ತೆರೆಯುವುದು ಅನಿಶ್ಯವೆಂದು ಭಾವಿಸಲಾಗಿದೆ. ಇಲ್ಲಿ ಕೋಲೇಜನ್ನು ತೆರೆಯೋಣಾದುದರಿಂದ ಮಂಗಳೂರಿನ ಕೊಲೇಜುಗಳಲ್ಲಿನ ಕಿಕ್ಕಿರಿಯುವಿಕೆಯು ಸ್ವಲ್ಪ ಕಡಿಮೆಯಾಯಿತೆಂದೂ ತಿಳಿದುಬರುತ್ತದೆ.

ದೇನಾ ಇನ್ಶೂರೆನ್ಸ್

ದೇವಕರನ್ ನಾನ್ಜಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ದೇವಕರನ್ ನಾನ್ಜಿ ಬಿಲ್ಡಿಂಗ್ಸ್, ಬೊಂಬಾಯಿ 1

ಮೂಲಧನ (ತೆತ್ತದ್ದು) . . ರೂ. 10,00,000

ಜೀವವಿಮೆಯ ಫಂಡು . . ರೂ. 12,00,000 (ಮಿಕ್ಕಿದೆ)

ಮೊದಲಿನ ವರ್ಷದ ಮೌಲ್ಯ ನಿರ್ಣಯ

	ನಿಕ್ಕಿ	ಅಂದಾಜು
ಖರ್ಚು	9%	17%
ಬಡ್ಡಿ	4%	2½%
ಮರಣತ್ವ	59%	

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ರಿವರ್ಶನರಿ ಬೋನಸ್ಸು

ಸಾವಿರಕ್ಕೆ ವರ್ಷಕ್ಕೆ ರೂ. 5-0-0ರಂತೆ ಇಂಟರಿಮ್ ಬೋನಸ್ಸು

ಪ್ರಶಂಸೆ

ಮೌಲ್ಯ ನಿರ್ಣಯದ ಫಲಿತಾಂಶದ ಬಗ್ಗೆ ಇದರ ಡ್ಯಾರೆಕ್ಟರರನ್ನೂ, ಆಡಳಿತ ಮಂಡಳಿಯನ್ನೂ ಅಭಿನಂದಿಸುತ್ತೇನೆ. ಅವರ ದೂರದರ್ಶಿತ್ವದ ನಿಪುಣ ಆಡಳಿತದಿಂದಾಗಿ ಅವರ ಹೊಣೆಗಾರಿಕೆಯು ಯೋಗ್ಯವಾದುದು. ಈ ಕಂಪೆನಿಯ ಅಭಿವೃದ್ಧಿಯು ಮುಂದಿನ ವರ್ಷಗಳಲ್ಲಿ ಖಂಡಿತವಾಗಿಯೂ ಶೀಘ್ರವಾಗಿ ಸರ್ವತೋಮುಖವಾಗಿ ಬೆಳೆಯುವುದೆಂದು ಹೇಳುತ್ತೇನೆ.

ವಿ. ಎಚ್. ವೋರಾ, F. I. A.

ಚಟುವಟಿಕೆಯುಳ್ಳ ಮತ್ತು ಉತ್ಸಾಹಿ ಜನರ ಏಜನ್ಸಿ ಬಗ್ಗೆಯ ಅರ್ಜಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಲಾಗುವುದು.

~~ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.~~

ಭೂಷಣಾಕುಮಾರ್ ಕೂಳೂರ್ ಕಾರ್

ದಕ್ಷಿಣ ಕನ್ನಡ, ಮಲಬಾರು, ಕೊಡಗು ಪ್ರಾಂತ್ಯಗಳ ಮುಖ್ಯ ಏಜಂಟರು

ಕಾರ್ ಸ್ಟ್ರೀಟ್ ಮಂಗಳೂರು.

ಶ್ರೀ ಸ್ವಾಮಿ ಶಿವಾನಂದ ಪರಮಹಂಸರ

ಜೀವಂತ ಸಮಾಧಿ

ಸಿದ್ಧ ಸಮಾಜ ಸ್ಥಾಪಕರಾದ ಶ್ರೀ ಸ್ವಾಮಿಶಿವಾನಂದ ಪರಮಹಂಸರು ತನ್ನ 69ನೇ ವರುಷ ಪ್ರಾಯದಲ್ಲಿ ತಾರೀಕು. 21-6-'49ನೇ ಮಂಗಳವಾರ ಪ್ರಭಾತ ಘಂಟೆ 4-30ಕ್ಕೆ ಬಡಗೆರಾದ ಪಳನಿ ಟ್ಟರ್ ರೋಡಿನಲ್ಲಿರುವ ಗಾರ್ಡನ್ ಹೌಸಿನಲ್ಲಿ ಜೀವಂತ ಸಮಾಧಿಯನ್ನೈದಿದರು.

ತಾ. 23 - 6 - 49ನೇ ಗುರುವಾರ ಪ್ರಾರ್ಥಃಕಾಲ ಘಂಟೆ 5ಕ್ಕೆ ಬಡಗೆರಾ ಸಿದ್ಧಾಶ್ರಮದಲ್ಲಿ ಸಿದ್ಧ ಸಹೋದರ ಸಹೋದರಿಯರ ಕೂಡುವಿಕೆಯಿಂದ ಶ್ರೀ ಸ್ವಾಮೀಜೀಯನರ ಸಮಾಧಿಯು ಕಟ್ಟಲ್ಪಟ್ಟಿತು.

ಕೃತಕ ಮೂತ್ರಕೋಶ

ಫಿಲಡೆಲ್ಫಿಯದ ಯಹೂದಿ ಆಸ್ಪತ್ರೆಯಲ್ಲಿನ ವೈದ್ಯತಜ್ಞರು ತಾತ್ಕಾಲಿಕವಾಗಿ ಮನುಷ್ಯನ ಹೊಟ್ಟೆಯ ಹೊರಗೆ ಜೋಡಿಸಲಿಕ್ಕೆ ಬರುವ ಒಂದು ಚಿಕ್ಕ ಕೃತಕ ಮೂತ್ರ ಕೋಶವನ್ನು ಕಂಡು ಹಿಡಿದಿರುವರು. ಹೊರಗಿನಿಂದಲೇ ಅದು ಹೊಟ್ಟೆಯೊಳಗಿನ ವಿಷಮಯ ಧಾತುಗಳನ್ನದು ಶೇಖರಿಸಿಕೊಳ್ಳುವುದು. ಒಂಥಾ ವಿಷಧಾತುಗಳು ರಕ್ತನಾಡಿಗಳಲ್ಲಿದ್ದರೆ ಅದು ಕ್ರಮೇಣ ಮರಣವನ್ನುಂಟುಮಾಡುವ ವ್ಯಾಧಿಗಳಿಗೆ ಕಾರಣವಾಗುವುದು. ಈ ಹೊಸ ಉಪಕರಣವು ಒಂದು ಅಡಿ ಉದ್ದಗಲವಿದ್ದು ಹತ್ತುರಾತ್ಲ ಭಾರವಿದೆ. ಇಂತಹದೇ ಕೋಶ ಉಪಕರಣವನ್ನು ಹಿಂದೆಯೂ ಉಪಯೋಗಿಸುತಿದ್ದರು. ಆದರೆ ಅದರ ಭಾರ 100 ರಾತ್ಲಗಳಷ್ಟಿರುತಿತ್ತು.

ಅಣು ಬೊಂಬು ತಯಾರಿಯ ರಹಸ್ಯ

ಅಮೇರಿಕನ್ ವಿಜ್ಞಾನಿಗಳಿಗೆ ಮಾತ್ರ ಗೊತ್ತಿದೆ

ಕೆಂಬ್ರಿಜ್ ವಿಶ್ವ ವಿದ್ಯಾಲಯದ ಗಣಿತ ಶಾಸ್ತ್ರಪ್ರಾಧ್ಯಾಪಕರಾದ ಸರ್ ಜೊಫ್ರೆ ಟೇಲರ್ ಅವರು ಅಣುಶಕ್ತಿಯ ಬೊಂಬಿನ ಕುರಿತು ಅನಾವಶ್ಯಕ ಗೊಂದಲವುಂಟು ಮಾಡಲ್ಪಡುತ್ತದೆಂದು ತಿಳಿಸುತ್ತಾರೆ. ಇವರು ಮೆಕ್ಸಿಕೋದ ಮರುಭೂಮಿ ಪ್ರದೇಶದಲ್ಲಿ ಮೊದಲ ಸಲಕ್ಕೆ ಅಣುಬೊಂಬಿನ ಸ್ಫೋಟ ಪ್ರಯೋಗಮಾಡಿ ನೋಡಿದ ನಿರೀಕ್ಷಕ ಮಂಡಳಿಯಲ್ಲಿ ಒಬ್ಬರಾಗಿದ್ದರು. ಅಣು ಬೊಂಬನ್ನು ತಯಾರಿಸುವ ವಿಧಾನವು ಇನ್ನೂ ರಹಸ್ಯವಾಗಿದೆಯೆಂದೂ ಕೆಲವು ಅಮೇರಿಕನ್ ವಿಜ್ಞಾನಿಗಳಿಗೆ ಮಾತ್ರ ಅದು ತಿಳಿದಿದೆಯೆಂದೂ ಇವರು ತಿಳಿಸುತಾರೆ.

ದೇಶವಿದೇಶ ವೃತ್ತವೈವಿಧ್ಯ

ಯುಕ್ತ ಪ್ರಾಂತ್ಯದಲ್ಲಿ ಮೂದರಿ ಪೋಲೀಸ್ ವ್ಯವಸ್ಥೆ

ಜನತಾ ಸೇವೆಯ ಆದರ್ಶ

ಯುಕ್ತ ಪ್ರಾಂತ್ಯ ಸರಕಾರದವರು ಪ್ರಾಂತ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ಮೂದರಿ ಪೋಲೀಸ್ 'ಸೇವಾ ನಿಸ್ಸನ್ನು' ಪ್ರಯೋಗಾರ್ಥವಾಗಿ ಸ್ಥಾಪಿಸಿದ್ದಾರೆ. ಪೋಲೀಸ್ ಖಾತೆಯನ್ನು ಆದಷ್ಟು ಶ್ರೇಷ್ಠ ಕಾರ್ಯದಕ್ಷತೆಯುಳ್ಳದಾಗಿಯೂ, ಪ್ರಮಾಣಿಕದಾಗಿಯೂ ಮತ್ತು ಅತ್ಯಂತ ಪಿನಮ್ರತೆಯುಳ್ಳದಾಗಿಯೂ ಮಾಡಿ ತನ್ಮೂಲಕ ಜನತೆಗೆ ಅತೀ ಹೆಚ್ಚಿನ ಸೇವೆ ದೊರೆಯುವಂತೆ ಮಾಡುವುದು ಇದರ ಉದ್ದೇಶವಾಗಿದೆ.

ಅದನ್ನೇ ಮುಂದರಿಸಿ ಈಗೊಂದು ಆದರ್ಶ ಜಿಲ್ಲೆಯನ್ನು ಉಂಟು ಮಾಡಲೂ ಅಲ್ಲಿ ಯೋಜನೆಗಳಾಗಿವೆ. ಪೋಲೀಸರಲ್ಲಿ ಜನತೆಗೆ ಅತೀ ಹೆಚ್ಚಿನ ವಿಶ್ವಾಸವುಂಟಾಗುವಂತೆ ಮಾಡುವುದು ಇದರ ಉದ್ದೇಶ.

ಮುಂಬಾಯಿ ಪ್ರಾಂತ್ಯದಲ್ಲಿ ಪಾನನಿರೋಧ

ಕಳೆದ ತಾ. 1ರಿಂದ ಮುಂಬಯಿ ಪ್ರಾಂತ್ಯದಲ್ಲಿ ಪಾನನಿರೋಧವು ಜಾರಿಗೆ ಬಂತು. ಆದರೆ ಇದು ಸಂಪೂರ್ಣ ನಿಷೇಧವಲ್ಲ. ಶೇಕಡಾ 75ರಷ್ಟು ಇನ್ನು ಹತ್ತು ತಿಂಗಳಲ್ಲಿ ಸಂಪೂರ್ಣ ಪಾನನಿರೋಧನವನ್ನು ಅಸ್ತಿತ್ವಕ್ಕೆ ತರಲಾಗುವುದು. ಆಗ ಮುಂಬಯಿ ಸುದ್ದಾಸಿನ ಶ್ರೇಣಿಗೆ ಸೇರುವುದು.

ಪಾನ ನಿರೋಧದಿಂದ ಮುಂಬಾಯಿ ಸರಕಾರಕ್ಕೆ 12 ಕೋಟಿ ರೂಪ್ಯಾಗಳ ಆದಾಯ ಕಡಿಮೆಯಾಗುವುದು. ಆದರೆ ಅಲ್ಲಿನ ಜನರು ನೈಸರ್ಗಿಕ ಪದಾರ್ಥಗಳ ಮೇಲೆ ವ್ಯಯಿಸುವ 40 ಕೋಟಿ ರೂಪಾಯಿಗಳ ಉಳಿತಾಯವಾಗಿ ಜನತೆಯ ಆರ್ಥಿಕ ಸಾಮಾಜಿಕ ಸ್ಥಿತಿಗಳು ಸುಧಾರಿಸುವುವು. ಪಾನ ನಿರೋಧ ಕಾರ್ಯಾಚರಣೆಗಾಗಿ 6 ಸಾವಿರ ಪೋಲೀಸ್ ಸಿಬಂಧಿಯನ್ನು ಹೆಚ್ಚಿಸಲಾಗುವುದು.

ನಿರಾಶ್ರಿತರ ಆಸ್ತಿ ಪಾಸ್ತಿ ವಿವರ

ಪಾಕಿಸ್ತಾನದಲ್ಲಿ ಹಿಂದು ಸೀಖರರು 1400 ಕೋಟಿ

ಪಾಕಿಸ್ತಾನದಿಂದ ಹಿಂದೂಸ್ತಾನಕ್ಕೆ ಬಂದಿರುವ ಹಿಂದು ಸೀಖರ ಸ್ಥಿರಚರ ಆಸ್ತಿ ಪಾಸ್ತಿಗಳ ಒಟ್ಟು ಮೌಲ್ಯವು ಸುಮಾರು 1400 ಕೋಟಿ ರೂಪಾಯಿಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಹಿಂದೂಸ್ತಾನದಿಂದ ಪಾಕಿಸ್ತಾನಕ್ಕೆ ಹೋದ ಮುಸ್ಲಿಮರ ಸೊತ್ತಿನ ಮೌಲ್ಯ ಸುಮಾರು 200 ಕೋಟಿ ರೂಪಾಯಿಗಳಷ್ಟಿದೆ. ಈ ಕುರಿತು ಬಂದು ಇತ್ಯರ್ಥ ಮಾಡಿದಲು ಸದ್ಯದಲ್ಲೇ ಕರಾಚಿಯಲ್ಲಿ ಒಂದು ಉಭಯ ರಾಷ್ಟ್ರಗಳ ಪ್ರತಿನಿಧಿಗಳ ಪರಿಷತ್ತು ಸೇರುವುದು. ಜುನಾಗಡ ಮಾಜಿ ಮಂತ್ರಿ ಪಾಕ್ ಅಬ್ದುಲ್ ಖಾದರರ 10 ಲಕ್ಷ ಮೌಲ್ಯದ ಆಸ್ತಿ ಪಾಸ್ತಿಯನ್ನು ಅವರು ಮಾರಲು ಪ್ರಯತ್ನಿಸಿದಾಗ ಅಲ್ಲಿನ ಸರಕಾರದವರು ಆ ವ್ಯವಹಾರವನ್ನು ರದ್ದುಗೊಳಿಸಿ ಆಸ್ತಿಯನ್ನು ವಶ ಪಡಿಸಿಕೊಂಡರು.

ಸಿರಿಯದ ಗಡಿಯಲ್ಲಿ ಇರಾಕ್ ಸೈನ್ಯ

ಮಧ್ಯ ಪೂರ್ವದಲ್ಲಿ ಗಡಿಬಿಡಿ

ಸಿರಿಯದ ಗಡಿಯಲ್ಲಿ ಇರಾಕವು 5 ಸಾವಿರ ಸೈನ್ಯವನ್ನು ಸಂಗ್ರಹಿಸಿದೆಯೆಂಬ ಸುದ್ದಿ ಹಬ್ಬಿದ್ದರಿಂದ ಮಧ್ಯ ಪೂರ್ವದ ದೇಶಗಳಲ್ಲಿ ತುಂಬಾ ಕಳವಳವುಂಟಾಗಿದೆಯೆಂದು ನಿರೀಕ್ಷಕರು ಅಭಿಪ್ರಾಯ ಪಡುತ್ತಾರೆ. ಈಗ ಎರಡು ತಿಂಗಳ ಹಿಂದೆ ಬಲಾತ್ಕಾರದಿಂದ ಅಧಿಕಾರ ವಹಿಸಿದ ಸಿರಿಯದ ಮುಖ್ಯ ಮಂತ್ರಿಗಳಾದ ಕರ್ನಲ್ ಹಸ್ನಿ ಜೈಮರು ಸಿರಿಯವು ತನ್ನ ಗಡಿ ರಕ್ಷಣೆಗಾಗಿ ಸರ್ವ ಸಿದ್ಧತೆಗಳನ್ನು ಮಾಡಿದೆಯೆಂದು ಹೇಳಿದ್ದರು. ಸಿರಿಯ ಇರಾಕ್ ಟ್ರಾನ್ಸ್ ಜೋರ್ಡನ್‌ಗಳನ್ನು ಒಂದುಗೂಡಿಸಿ ಫಲವತ್ತಾದ ವೈದೇಶ ರಚಿಸಬೇಕೆಂಬ ಯೋಜನೆಯ ಬಗ್ಗೆ ಈ ಎರಡು ರಾಷ್ಟ್ರಗಳಲ್ಲಿ ಬಿನ್ನಾಭಿಪ್ರಾಯ ಬಂದಿದೆಯೆಂದು ಹೇಳಲಾಗುತ್ತಿದೆ.

ಕಾಶ್ಮೀರ ಸಮಸ್ಯೆಯ ಇತ್ಯರ್ಥ್ಯ ಪ್ರಯತ್ನ

ಕಾಶ್ಮೀರ ಸಮಸ್ಯೆಯ ಬಗ್ಗೆ ಕಾಶ್ಮೀರ ಸಮಿತಿಯ ಅಧ್ಯಕ್ಷರಾದ ಲೊಜಾನೊರವರು ಕೊನೆಯ ಸಲ ಭಾರತ ಸರಕಾರದ ಪ್ರತಿನಿಧಿಗಳನ್ನು ಭೇಟಿಯಾದರು. ಸದ್ಯದಲ್ಲೇ ಅವರು ಪಾಕಿಸ್ತಾನಕ್ಕೆ ತೆರಳುವ ಸಂಭವವಿದೆ. ಈ ವಿಷಯದ ಬಗ್ಗೆ ದುಂಡುಮೇಜಿನ ಸರಿಷತ್ತನ್ನು ಕೂಡಿಸುವ ವಿಷಯದಲ್ಲಿ ಲೋಜಾನೊರವರು ಆಶಾವಾದಿಗಳಾಗಿರುವರೆಂದೂ ಭಾರತ ಸರಕಾರದ ಮಾತುಗಳಲ್ಲಿ ಅವರಿಗೆ ಇದೀಗ ನಂಬಿಕೆ ಹುಟ್ಟಿದೆಂದೂ ಹೇಳಲಾಗುತ್ತದೆ. ಆದರೆ ಭಾರತವು ತನ್ನ ಪೊಡಲಿನ ಶರ್ತಗಳ ಬಗ್ಗೆ ತನ್ನ ಧೋರಣೆಯನ್ನು ಬದಲಿಸಿದಂತಿಲ್ಲವೆಂದು ಉಚಿತವಾಗಿ ತಿಳಿಯುತ್ತದೆ.

ನೆಹರುಗಳು ಆನೆಗಳನ್ನು ಕಳುಹಿಸಿದರು

ಜಪಾನೀ ಮಕ್ಕಳಿಗೆ ಕಾಣಿಕೆ

ಯುದ್ಧ ಕಾಲದಲ್ಲಿ ಜಪಾನಿನಲ್ಲಿನ ಮೃಗಾಲಯಗಳಲ್ಲಿದ್ದ 'ಆನೆಗಳನ್ನೆಲ್ಲ ಭದ್ರತೆಗಾಗಿ ಕೊಂದುಹಾಕಿದ್ದರು. ಈಗ ಅಲ್ಲಿನ ಮಕ್ಕಳಿಗೆ ಆನೆಯನ್ನು ಪ್ರತ್ಯಕ್ಷ ನೋಡಬೇಕೆಂಬ ಅವಲಂಬಿಕೆಯುಂಟಾಗಿದ್ದು ಅವರು ಇತ್ತೀಚೆಗೆ ವಾಣಿಜ್ಯ ಸಂಬಂಧವಾಗಿ ಆ ಕಡೆಗೆ ಹೋಗಿರುವ ಒರ್ವ ಬಂಗಾಳಿ ಮಹನೀಯರ ಮೂಲಕ ಭಾರತ ಪ್ರಧಾನ ನೆಹರುಗಳಿಗೆ ಕೆಲವು ಪತ್ರಗಳನ್ನು ಕಳುಹಿಸಿದ್ದು ಅದರಲ್ಲಿ ಹೇಗಾದರೂ ತಮ್ಮ ದೇಶಕ್ಕೆ ಕೆಲವು ಆನೆಗಳನ್ನು ಕಳುಹಿಸಬೇಕೆಂದು ವಿನಂತಿಸಿಕೊಂಡಿರುವರು. "ನೀವು ಮನಸ್ಸು ಮಾಡಿದರೆ ಅದು ಸಾಧ್ಯ" ಎಂಬ ಮಕ್ಕಳ ನುಡಿಗಳು ನೆಹರುಗಳಿಗೆ ಹೃದಯಸ್ಪರ್ಶವಾಗಿದೆ. ಅವರೀಗ ಎರಡು ಆನೆಗಳನ್ನು ಟೋಕಿಯೋಗೆ ಕಳುಹಿಸಲು ಏರ್ಪಡಿಸಿರುವರು.

ಸಿರಿವಂತ ಭಿಕ್ಷುಕರು

ಕಾನ್‌ಪುರದ ಭಿಕ್ಷುಕನೊಬ್ಬನು ಧೀರ್ಘ ಕಾಲ ಕಾಯಿಲೆಯಿಂದ ನರಳುತಿದ್ದು ಕೆಲ ದಿನಗಳ ಹಿಂದೆ ತಾನು ಸಾಯುವ ಕಾಲಕ್ಕೆ ತನ್ನ ಮಗನಿಗೆ ೫೦೦ ರೂಗಳನ್ನೂ ಎರಡು ಬೆಳ್ಳಿ ತಾಟುಗಳನ್ನೂ ಬಿಟ್ಟುಹೋಗಿದ್ದಾನೆ. ಮಗನು ಅಯೋಧ್ಯೆಯಲ್ಲಿದ್ದ. ಆತನು ಕಾನ್‌ಪುರಕ್ಕೆ ಬಂದು ತಂದೆಯ ಕ್ರಿಯಾಕರ್ಮಗಳನ್ನೆಲ್ಲ ತೀರಿಸಿಕೊಂಡು ಪಿತ್ರಾರ್ಜಿತ ಆಸ್ತಿಯೊಂದಿಗೆ ಅಯೋಧ್ಯೆಗೆ ಹಿಂತಿರುಗಿದನು. ಮಗನು ಕೂಡ ಅಯೋಧ್ಯೆಯಲ್ಲಿ ಭಿಕ್ಷುವೆಯ ವೃತ್ತಿಯಿಂದಲೇ ಜೀವಿಸುತಿದ್ದಾನೆ!

ಕಾತೀಮ್ ರಜ್ಜಿಯ ವಿಚಾರಣೆ

ಎರಡು ಆಪಾದನೆಗಳು

ಕುಖ್ಯಾತ ರಜಾಕಾರ ಮುಖಂಡನೂ, ನಿಜಾಮರ ಧ್ವಜವನ್ನು ದಿಲ್ಲಿಯ ಕೆಂಪು ಕೋಟೆಯ ಮೇಲೇರಿಸಬಯಸಿದವನೂ ಆದ ಕಾತೀಮ್ ರಜ್ಜಿಯ ವಿಚಾರಣೆಯು ಸದ್ಯದಲ್ಲೇ ಪ್ರಾರಂಭವಾಗಲಿದೆಯೆಂದು ಮಿಲಿಟರಿ ಗವರ್ನರ್ ಜೌದರಿಯವರು ತಿಳಿಸಿದರು. ಪತ್ರಿಕಾ ಸಂವಾದಕ ಶೋಬುಲ್ಲಾ ಖಾನನನ್ನು ಕೊಲೆ ಮಾಡಿದ ಮತ್ತು ಬೀದರಿನಲ್ಲಿ 9 ಜನರನ್ನು ಕೊಂದ ಎರಡು ಆರೋಪಗಳ ಸಂಬಂಧ ಈ ವಿಚಾರಣೆಯು ನಡೆಯುತ್ತದೆಯೆಂದು ಹೇಳಲಾಗಿದೆ.

ಲಾಯಕಾಲಿಯ ಕುರಿತು ಇನ್ನೂ ವಿವರಗಳು ಸಂಗ್ರಹವಾಗುವಲಿರುವುದರಿಂದ ಅವನ ವಿಚಾರಣೆಗೆ ತುಸು ವಿಳಂಬವಾಗಬಹುದೆಂದೂ ತಿಳಿದಿದೆ.

ಸರಕಾರವು ಬಂಡವಾಳಗಾರರ ಕೈಗೊಂಬೆಯಲ್ಲ

ಡಾ। ಮುಕರ್ಜಿಯವರ ಸ್ಪಷ್ಟೋಕ್ತಿ

ಕಲ್ಕತ್ತದಲ್ಲಿ ಏರ್ಪಡಿಸಿದ ಸತ್ಕಾರಕೂಟವೊಂದರಲ್ಲಿ ಮಾತನಾಡುತ್ತ ಔದ್ಯೋಗಿಕ ಕೇಂದ ಮಂತ್ರಿ ಡಾ। ಶ್ಯಾಮ ಪ್ರಸಾದ ಮುಕರ್ಜಿಯವರು "ಭಾರತ ಸರಕಾರವು ಬಂಡವಾಳಗಾರರ ಹಿತಕ್ಕಿದಲ್ಲಿ ಒದ್ದಾಡುತ್ತಿದೆ. ಹಾಗೂ ಬಂಡವಾಳಗಾರರು ಹೇಳಿದಂತೆ ಕುಣಿಯುತ್ತದೆ" ಎಂಬ ಅಪಪ್ರಚಾರದಲ್ಲಿ ಹುರುಳಿಲ್ಲವೆಂದು ತಿಳಿಸಿದರು. "ರಾಷ್ಟ್ರದ ಆರ್ಥಿಕ ರಚನೆಯಲ್ಲಿ ಒಮ್ಮೆಲೆ ಕ್ರಾಂತಿಕಾರಕ ಬದಲಾವಣೆಗಳಾಗುವದು ನಮ್ಮ ಸರಕಾರಕ್ಕೆ ಬೇಡ. ಕೂಲಿಕಾರರ ಹಾಗೂ ಗ್ರಾಹಕರ ಹಿತಕ್ಕೆ ಧಕ್ಕೆ ತಗಲದಂತೆ ಸರಕಾರವು ನೋಡಿಕೊಳ್ಳಬೇಕಾಗಿದೆ. ಅಲ್ಲದೆ ಕಳೆದ ಅರ್ಧ ಶತಮಾನದ ಉದ್ದಿಮೆಗಳನ್ನು ಸ್ಥಾಪಿಸಿ, ಮುಂದಕ್ಕೆ ತಂದ ಉದ್ದಿಮೆಗಳನ್ನು ಸ್ಥಾಪಿಸಿ, ಮುಂದಕ್ಕೆ ತಂದ ಉದ್ದಿಮೆದಾರರ ಹಣ, ಅನುಭವ, ಹಾಗು ಜ್ಞಾನದ ಲಾಭವನ್ನು ಮಾಡಿಕೊಳ್ಳದಿರುವದು ಅಕ್ಷಮ್ಯಾತಕತನವೆಂಬುದು ಸರಕಾರಕ್ಕೆ ಮನವರಿಕೆಯಾಗಿದೆ" ಎಂದೂ ಅವರು ತಿಳಿಸಿದರು.

ಬಸ್ಸು ಪ್ರಯಾಣಿಕರ ಅವಗಾಹನೆಗೆ

ಪ್ರತಿದಿನ ಮಂಗ್ಳೂರಿಂದ ಬೆಳಿಗ್ಗೆ ಘಂಟೆ **5** ಮತ್ತು **5-30**ಕ್ಕೂ, ಮುಲ್ಕಿಯಿಂದ ಕೂಡಾ ಬೆಳಿಗ್ಗೆ **5** ಘಂಟೆಗೂ, ಮುಂಬ್ಯಾಗೆ ಬರೇ **36** ಘಂಟೆ ಸಮಯದಲ್ಲಿ ತಲ್ಪುವಂತೆ ಮಂಗ್ಳೂರು ದಿ. ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಯವರು ಸರ್ವಿಸುಗಳನ್ನು ಕ್ಲೃಪ್ತ ಸಮಯದಲ್ಲಿ — ಮಂಗ್ಳೂರು ಮತ್ತು ಮೂಲ್ಕಿಯಿಂದ ಹೊರಡಿಸಿ ಕಡೂರಿಗೆ ಮಧ್ಯಾಹ್ನ **2-30**ರೊಳಗೆ ತಲ್ಪಿ ಅಲ್ಲಿಂದ ಕೂಡ್ಲೇ ಹೊರಡುವ ರೆಲ್ವೆಯಲ್ಲಿ ಮುಂಬ್ಯಾಗೆ ಸೀದಾ ತಲ್ಪುವ ಏರ್ಪಾಡು ಮಾಡಿರುತ್ತದೆ. ಟಿಕೇಟುಗಳು ಮಂಗ್ಳೂರು ಮತ್ತು ಮೂಲ್ಕಿ ಆಫೀಸಿನಲ್ಲಿ ಸರ್ವಿಸು ಬಿಡುವ ಎರಡು ದಿವ್ಸಕ್ಕೆ ಮುಂಚಿತವಾಗಿಯೇ ದೊರಕುವಂತೆ ರಿಜರ್ವೆಶನ್ ಆಫೀಸು ಕೂಡಾ ಪ್ರತೀ ದಿವಸ ಬೆಳಿಗ್ಗೆ ಘಂಟೆ **9**ರಿಂದ ಶ್ಯಾಮ **6** ಘಂಟೆ ವರೆಗೂ ತೆರೆಯಲ್ಪಟ್ಟಿದೆ. ಜಿಲ್ಲೆಯ ಇತರ ಲ್ಯಾನುಗಳಿಗೆ ಕೂಡಾ ಮಂಗ್ಳೂರಿನಲ್ಲಿ ಒಂದು ದಿವ್ಸಕ್ಕೆ ಮುಂಚಿತವಾಗಿ — ಟಿಕೇಟುಗಳು ಸಿಗುವ ಏರ್ಪಾಡು ಕೂಡಾ ಉಂಟು.

ವಿ. ಸೂಚನೆ — ಪ್ರಯಾಣಿಕರು ತಮ್ಮೊಂದಿಗೆ ಆದಷ್ಟು ಸಾಮಾನನ್ನು ಕಡಿಮೆ ಒಯ್ಯೋಣಾಗಬೇಕಾಗಿ ವಿನಂತಿ.

ಮಂಗಳೂರು
24-6-49

ಜೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,91,000

(Regd)

ಅಮೃತಾಂಜನ

ತಲೆನೋವು, ಶಿರೋನೋವು, ಉಳುಕು, ಉಕ್ಕಿಗೆ, ಭುಜ, ಹಲ್ಲುನೋವಿನಿಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಸ್ಥಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾಯಿ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭ್ಯುದ್ಧಿಗೆ ಸಲ್ಲಿಸಿದ ನಮ್ಮ ನವ್ಯ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಜ್ಞರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಟ್ಟುವುದು. ಸೂತಿಕಾ ರೋಗಗಳನ್ನು ಕಡಿಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶಿರಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

WADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

] ಕಾರೀಕು 12—8—1949 [ಸಂಚಿಕೆ 32]

ಸ್ ಚಂದ್ರ ಬೋಸರು ಜೀವಂತವಿರುವರೊ?

ದ್ರ ಬೋಸರು

ಮೃತರಾಗಿರುವರೊ?

ಕೆಲವು ಗಮನಾರ್ಹ ಸಂಗತಿಗಳು

ಸರಕಾರವು ಸೂಕ್ಷ್ಮ ಪರಿಶೀಲನೆ ಮಾಡಬೇಕು

ಸರತ್ ಚಂದ್ರ ಬೋಸರು ಇತ್ತೀಚೆಗಿತ್ತ ಹೇಳಿಕೆಗಳಿಂದ ನೇತಾಜಿಯವರು ಜೀವಂತರಾಗಿರುವರೆಂಬುದೂ ಸರಿಯಾದಸಂದರ್ಭದಲ್ಲಿ ಅವರು ಭಾರತಕ್ಕೆ ಹಿಂತಿರಿಗುವರೆಂದೂ ತಿಳಿದು ಬರುತ್ತದೆ. ಇದರಿಂದ ಭಾರತೀಯ ಸ್ವತಂತ್ರ ಸೈನ್ಯದ ದುರೀಣರು ಪುನಃ ಮೊನ್ನೆ ತಮ್ಮ ನಡುವಿನಲ್ಲಿರುವರೆಂದು ಅನೇಕಾನೇಕ ಜನರ ಹೃದಯದಲ್ಲಿ ಆಶಾದಾಯಕ ಹೂರೈಕೆಗಳು ಮೊಳೆತಿವೆ.

ಒಂದು ಆಗ್ಲಲೇಖದಲ್ಲಿ ಹಿಂದೂಸ್ತಾನ್ ಸ್ಟೆಂಡಾರ್ಡ್ ಪತ್ರಿಕೆಯು ಸುಭಾಸರು ಜೀವಂತವಿರುವರೆಂಬುದಕ್ಕೆ ಯುಕ್ತ ಸಿದರ್ಶನಗಳನ್ನು ಕೊಡುತ್ತ ಸರಕಾರವು ಈ ಕುರಿತು ಒಂದು ಸೂಕ್ಷ್ಮ ವಿಚಾರಣಾ ಮಂಡಳಿಯನ್ನು ಸ್ಥಾಪಿಸಿ ಸಂಗತಿಯನ್ನು ಪರಿಶೀಲಿಸಬೇಕೆಂದು ಸೂಚಿಸಿದೆ:

ಇದುತನಕ ಸತ್ಯಾಂಶವು ಸಂಪೂರ್ಣವಾಗಿ ತಿಳಿಯದಿರುವ ನೇತಾಜಿಯವರ ಕುರಿತಾದ ರಹಸ್ಯದ ಗಾಢವು ಈಚೆಗೆ ಕೆಲದಿನಗಳಿಂದ ಅಳವಾಗುತ್ತಲಿದೆ. ಅವರು ಜೀವಂತವಿರುವುದಾಗಿ ತಿಳಿಸುವ ದೊಡ್ಡ ಶಿರೋನಾಮೆಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಸಾರ್ವಜನಿಕ ಮನಸ್ಸು ಅತ್ಯಕಳನಳದ ರಹಸ್ಯದಲ್ಲೂ ಇತ್ತ ಆತುರದ ಪಾರ್ಶ್ವಕೆಯಲ್ಲೂ ಹೊರಳಾಡುತ್ತಿದೆ. ಅವರ ಮರಣದ ಸಂಗತಿಯು ಕಟ್ಟುಕಥೆಯೆಂದೂ ಅವರು ಜೀವಂತವಿರುವುದು ಖಂಡಿತವೆಂದೂ ಹೊಣೆಗಾರಿಕೆಯುರಿತ ದುರೀಣರು ಕೆಲವರು ಒತ್ತಿ ಹೇಳುತ್ತಾರೆ.

ವಿಮಾನ ಅವಘಡದ ಕಥೆ

ಕಳೆದ ಸಂದ ನೇತಾಜಿ ಜನ್ಮದಿನಾಚರಣೆ ಕಾಲದಲ್ಲಿ ಆಗ ತಾನೆ ಜಪಾನಿನಿಂದ ಹಿಂತಿರುಗಿದ ಡಾ। ರಾಧಾ ಬಿನೋದ್ ಪಾಲರವರು "ನೇತಾಜಿಯವರು ಜೀವಂತವಿರುವರೆಂದೂ, ಯುಕ್ತ ಸಮಯದಲ್ಲಿ ಅವರು ಸ್ವದೇಶಕ್ಕೆ ಮರಳುವರೆಂದೂ" ತಿಳಿಸಿದರು. ಈಚೆಗೆ ಸರತಚಂದ್ರರು ಅಂತಹದೇ ಅನೇಕ ಹೇಳಿಕೆಗಳನ್ನು ಕೊಟ್ಟಿರುವರು. ಡಾ। ರಾಧಾ ಬಿನೋದ್ ಪಾಲರು ಸರತ್ ಬೋಸರೊಡನೆ "ತಾನು ಅನೇಕ ಅಮೇರಿಕನ್, ಇಂಗ್ಲಿಷ್ ಮತ್ತು ಜಪಾನ್ ಪತ್ರಿಕೋದ್ಯೋಮಿಗಳನ್ನು ಭೇಟಿಯಾಗಿದ್ದೇನೆ. ಅವರಾರೂ ಸುಭಾಸರು ಮೃತಪಟ್ಟಿರುವರೆಂಬ ಸಂಗತಿಯನ್ನು ಒಪ್ಪುವುದಿಲ್ಲ" ವೆಂದು ತಿಳಿಸಿದ್ದರಂತೆ. ಆ ಪತ್ರಿಕೋದ್ಯೋಮಿಗಳಾರೂ ಸುಭಾಸರು ಹತ್ತಾದರೆಂದು ಹೇಳಲ್ಪಟ್ಟ ಆ ದುರಂತ ವಿಮಾನ ಅವಘಡದ ಕಾಲದಲ್ಲಿ ಜಪಾನಿನಲ್ಲಿದ್ದ ಒರ್ವ ಬರೋಪ್ಯ ಪತ್ರಿಕಾ ಪ್ರತಿನಿಧಿ ಮಹಿಳೆಯು ಕೂಡ ಸುಭಾಸರು ಆ ದುರಂತದಲ್ಲಿ ಸತ್ತಿರುವರೆಂಬುದು ಸುಳ್ಳು ಎಂದು ಸರತ್ ಚಂದ್ರರಿಗೆ ತಿಳಿಸಿರುವಳಂತೆ. ಅವಳು ವಿಮಾನ ಅಘಘಾತದ ಸವಿಸ್ತಾರ ವಿವರಗಳನ್ನು ಪಡೆಯಲು ಅನೇಕ ಕಡೆಗಳಲ್ಲಿ ವಿಚಾರ ಮಾಡಿದ್ದಳಾದರೂ ಅಂತಹದ್ದೊಂದು ಅವಘಡ ಸಂಭವಿಸಿದೆ ಎಂಬುದಕ್ಕೆ ವಿಶ್ವಾಸಾರ್ಹವಾದ ಪೂರ್ವ ಸಾಕ್ಷ್ಯಗಳೂ ಅವಳಿಗೆ ದೊರೆಯಲಿಲ್ಲ.

ಹರ್ ಫೌನ್ ಹೀಮ್ ಎಂಬ ಜರ್ಮನ್ ವ್ಯಾಪಾರಿಯೂ ಅದೇ ಸಮಯಕ್ಕೆ ಜಪಾನಿನಲ್ಲಿದ್ದ. ಜಪಾನಿಗಳು ಈತನನ್ನು ಯುದ್ಧ ಕೈದಿಯಾಗಿ ಮಾಡಿದ್ದಾಗ ನೇತಾಜಿಯವರ ಸಲಹೆ ಮೇರೆಗೆ ಅವನು ಪಾರಾಗಿ ಬಿಟ್ಟಿದ್ದನು. ಅವನು ಕೂಡ ಅದೇ ರೀತಿ ತಿಳಿಸುತ್ತಾನೆ. ನೇತಾಜಿಯವರ ಮರಣ ಸಂಗತಿಯನ್ನು ನಿಜವೆ ಎಂದು ಖಚಿತ ಮಾಡಲು ಅವನ ಪೊರ್ಮೊಸಾ (ಇಲ್ಲಿ ಅವಘಡ ಸಂಭವಿಸಿದೆಂದು ಹೇಳಲ್ಪಟ್ಟದ್ದು)ಕ್ಕೆ ಹೋಗಿದ್ದನು. ಆದರೆ ಅವನಿಗೂ ವಿಶ್ವಾಸಾರ್ಹ ಸಾಕ್ಷ್ಯಗಳು ಆ ಕಾಲದಲ್ಲೇ ಸಿಗಲಿಲ್ಲ. ಕೊನೆಗೆ ಜಪಾನಿ ವಿದೇಶಾಂಗ ಖಾತೆಯವರು ಅವನಿಗೊಂದು ಎಚ್ಚರಿಕೆಯನ್ನು ಕೊಟ್ಟು ನೇತಾಜಿಯವರ ರಹಸ್ಯದ ಕುರಿತು ಹೆಚ್ಚಿನ ಮುತುವರ್ಜಿ ವಹಿಸುವುದು ಬೇಡವೆಂದು ತಿಳಿಸಿದ್ದರು.

ಕೆಲ ಸನ್ನುಯದ ಹಿಂದೆ ಸುಭಾಸರಿಂದ ಸ್ಥಾಪಿಸಲ್ಪಟ್ಟ ಪೋರ್ವರ್ಡ್ ಬ್ಲೋಕಿನ ದುರೀಣ ಶ್ರೀ ರುಯ್ ಕರರು ತಮ್ಮ ಪಾರ್ಟಿಯ ಶಾಖೆಗಳಿಗೆ ಒಂದು ಸರ್ಕಿಲಾರು ಕಳುಹಿಸಿದರಲ್ಲಿ ನೇತಾಜಿಯವರು ಉತ್ತರ ಚೀನದಲ್ಲಿರುವೆಡೆಂದು ತಿಳಿಸಿದ್ದರಂತೆ. ಜುಲ್ಯಾ 22ರಂದು ಶ್ರೀ ಸರತ್ ಚಂದ್ರರು ಮುಂಬಯಿಯಲ್ಲಿ ಕೊಟ್ಟ ಒಂದು ಹೇಳಿಕೆಯು ಇದೇ ಸಂಗತಿಯನ್ನು ಸಮರ್ಥಿಸುತ್ತದೆ. ಕೊನೆಯ ಸಲ ಬೆಂಕೊಕ್‌ದಿಂದ ನೇತಾಜಿಯವರು ವಿಮಾನ ಪ್ರಯಾಣ ಮಾಡುವಾಗ ತನಗೆ ಉತ್ತರ ಚೀನಕ್ಕೆ ಹೋಗುವ ಇಚ್ಛೆಯುದೆಯೆಂದವರು ತಮ್ಮ ಅಸ್ತರಿಗೆ ತಿಳಿಸಿದ್ದರಂತೆ.

ಕೆಲವು ಗಣನೀಯ ತಾರೀಕುಗಳು

ಜನರು ಹೇಳಿದ ಕಥೆಗೆಗೂ ತತ್ಸಂಬಂಧದ ತಾರೀಕುಗಳಿಗೂ ಸಕಷ್ಟ ಮೇಳಾವೇಳಿಯೂ ಕೋರಿ ಬರುತ್ತದೆ. ಈ ಸಂದರ್ಭದಲ್ಲಿ 1945ರ ಕೆಲವು ತಾರೀಕುಗಳು ಬಹಳ ಮಹತ್ವವಾಗಿವೆ:

ಆಗಸ್ಟ್ 14, 1945ರಂದು ಅಧ್ಯಕ್ಷ ಟ್ರೂಮನ್ ಮತ್ತು ಎಟ್ಲಿಯವರು ಜಪಾನಿನ ಶರಣಾಗತಿಯ ಕುರಿತು ಜಗತ್ತಿಗೆ ಸಾರಿದರು.

ಆಗಸ್ಟ್ 21, 1945ರಂದು ಜಪಾನ ಚಕ್ರವರ್ತಿ ಕಚೇರಿಯಿಂದ. ಮೇಲ್ಕಂಡ ಹೇಳಿಕೆಯನ್ನು ಸಮರ್ಥಿಸಿ ಮತ್ತು ಆಗಸ್ಟ್ 26ರಂದು ಮಿತ್ರ ರಾಷ್ಟ್ರಗಳ ಮೊದಲ ಆಕ್ರಮಣ ದಳಗಳು ಜಪಾನಿ ಆಶಾತದಲ್ಲಿ ಬಂದಿಳಿಯುವುವೆಂದು ಸಾರಲಾಯಿತು.

(೭ನೇ ಪುಟ ನೋಡಿ)

THE UNITED INDIA LIFE ASSURANCE COMPANY LIMITED.

MADRAS.

"UNITED INDIA"

UNITED INDIA is one of the soundest of insurance concerns.
It is the custodian of more than 40 millions of rupees belonging the Policy holders.
It has more than 100,000 Policy holders.
It has assured sums of more than Rs. 200 millions.
It has constituted a TRUST—the Official Trustee of Madras is the Trustee for the Policy—holders' Fund.
UNITED INDIA is a household word in South India and is well Known throughout India, Ceylon, Malaya and East Africa.

For particulars please apply to:—

The Branch Manager,
K. S. Rao Road, Mangalore.

ಜರ್ಮನಿಯು ಇನ್ನು ಸಮುಸ್ಯಾತ್ಮಕ ದೇಶವಾಗಿದೆ

ವಿಶ್ವಶಾಂತಿಯನ್ನು ಸಾಧಿಸುವ ವಿಧಾನ

ಲೂಯಿಪಿಶರರ ವಿಚಾರಾರ್ಹ ಲೇಖನ

ಎರಡೆರಡು ಯುದ್ಧಗಳಲ್ಲಿ ಜರ್ಮನಿಯು ಮುಖ್ಯ ಪಾತ್ರ ವಹಿಸಿದ್ದು ಜಗತ್ತಿನ ಎಲ್ಲಾ ಭೂಖಂಡಗಳನ್ನು ಸಮರರಂಗಕ್ಕೆಳೆಸಿತು. 1918ರ ಮೊದಲ ಅವಜಯಾನಂತರ ಜರ್ಮನಿಯು ತನ್ನ ವಸಾಹತು ಸಾಮ್ರಾಜ್ಯವನ್ನೆಲ್ಲಾ ಕಳಕೊಂಡಿತು. ಮಾತ್ರವಲ್ಲ ಅತ್ಯಂತ ಫಲವತ್ತಾದ ಎಲ್ಸೆಸ್-ಲೊರೈನ್ ಪ್ರದೇಶವನ್ನು ಫ್ರಾನ್ಸಿಗೆ ಬಿಟ್ಟು ಕೊಟ್ಟಿತು. ಮಿಲಿಯಾಂತರ ಹಣವನ್ನು ಯುದ್ಧಾವರಾಧಕ್ಕಾಗಿ ತೆತ್ತಿತು. 1930ರ ತನಕ ಮಿತ್ರ ಸೈನ್ಯಗಳು ಅದರ ಕೆಲ ಪ್ರದೇಶಗಳನ್ನು ಆಕ್ರಮಿಸಿದ್ದುವು. ಇಷ್ಟಾದರೂ ಹಿಟ್ಲರನ ಕೈಕೆಳಗೆ ಜರ್ಮನಿ ದ್ವಿತೀಯ ಯುದ್ಧಕ್ಕೂ ಮೂಲ ಕಾರಣವಾಯಿತು.

ಈ ಯುದ್ಧದಲ್ಲಿ ಹೆಚ್ಚಿನ ಜರ್ಮನ್ ನಗರಗಳು ಧ್ವಂಸನವಾದುವು. ಮಿಲಿಯಾವಧಿ ಜರ್ಮನ್ ಸ್ತ್ರೀಪುರುಷರು ವ್ಯತರಾದರು ಇಲ್ಲವೆ ಅಂಗಾಂಗಹೀನರಾದರು. ನಾಲ್ಕನೆ ಒಂದಂಶ ಪ್ರದೇಶವು ರಶ್ಯ ಪೋಲೆಂಡುಗಳ ವಶವಾಯಿತು. ಉಳಿದ ಭಾಗವು ನಾಲ್ಕು ಮಿತ್ರ ರಾಷ್ಟ್ರಗಳಿಂದ ಪ್ರದೇಶಗಳಾಗಿ ಆಕ್ರಮಿಸಲ್ಪಟ್ಟಿತು.

ಹಿಟ್ಲರನು ಕಾಣೆಯಾದ; ಜರ್ಮನಿಯು ಪೂರ್ವ ಪಶ್ಚಿಮಗಳ ಘರ್ಷಣೆಗೀಡಾಗಿ ಇಬ್ಭಾಗವಾಯಿತು. ಪಶ್ಚಿಮ ಜರ್ಮನಿಯು ಈಚೆಗೆ ತನ್ನದೇ ಸರಕಾರವೊಂದನ್ನು ರಚಿಸಲಾರಂಭಿಸಿದೆ. ಯುದ್ಧಾನಂತ್ಯವಾಗಿ ಇನ್ನು ನಾಲ್ಕು ವರ್ಷಗಳಾಗುತ್ತಿರುವಾಗಲೆ ಫ್ರಾನ್ಸ್ ಮತ್ತಿತರ ಸಣ್ಣ ಪುಟ್ಟ ನೆರೆ ದೇಶಗಳು ಜರ್ಮನಿಯ ಶಕ್ತಿಯ ಕುರಿತು ಕಳವಳಾಸ್ಪದವಾಗಿವೆ. ಇಂಗ್ಲೆಂಡು ಜರ್ಮನಿಯ ಆರ್ಥಿಕ ಶ್ರೇಷ್ಠತೆ, ವ್ಯಾಪಾರ ಸ್ಪರ್ಧೆಯ ಕುರಿತು ಆಸಕ್ತಿ ತಾಳುತ್ತಿದೆ.

ಪುನಃವೊಮ್ಮೆ ಜರ್ಮನಿಯು ಯುರೋಪಿನ ಸಮಸ್ಯಾತ್ಮಕ ದೇಶವಾಗಿದ್ದು ಶಕ್ತಿ ರಾಷ್ಟ್ರಗಳ ತಲೆಶೂಲೆಯಾಗಹತ್ತಿದೆ. ಅದರ ಭವಿತವ್ಯವನ್ನು ನಿರ್ಣಯಿಸುವ ಬಗೆಗೆ ಮೇಲಿಂದ ಮೇಲೆ ಚತುರ್ರಾಷ್ಟ್ರಗಳ ಪರಿಷತ್ತುಗಳು ಸೇರುತಿದ್ದು ಒಂದೂ ಯಶಸ್ವಿಯಾಗಿ ಅಂತ್ಯವಾಗುತ್ತಿಲ್ಲ. ಮುಂದಿನ 10-15 ವರ್ಷಗಳಲ್ಲಿ ಏನೆಲ್ಲ ಸಂಭವಿಸಬಹುದು? ಜರ್ಮನಿಯು ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಸೇರುವುದೊ ಇಲ್ಲವೆ ರಶ್ಯದೊಡನೆ ಕೂಡುವುದೊ?

ಕೊಮ್ಯುನಿಸಮಿಗೆ ಅಭ್ಯಂತರ

ಜರ್ಮನಿಯ ಕಾರ್ಖಾನೆಗಳು ಪುನಃ ರ್ರಚಿತವಾಗಿದ್ದು ಉತ್ಪತ್ತಿಯು ಹೆಚ್ಚುತ್ತಿದೆ. ಜರ್ಮನಿಯನ್ನು ಸದಾಕಾಲ ಸೈನ್ಯಾಕ್ರಮಣ ಪರಿಸ್ಥಿತಿಯಲ್ಲಿರಿಸಲಾಗುವುದಿಲ್ಲವೆಂಬ ನಿಶ್ಚಿತ ಭಾವನೆ ಇಂಗ್ಲೆಂಡ್ ಅಮೇರಿಕಗಳಲ್ಲಿ ಹೆಚ್ಚುತ್ತಿದೆ. ಅದನ್ನು ಪುನಃ ಸರ್ವ ಸ್ವತಂತ್ರ ಮಾಡಿದರೆ ರಶ್ಯದ ಆಕ್ರಮಣದ ವಿರುದ್ಧ ಬಲವಾದ ಒಡ್ಡನ್ನು ಕಟ್ಟಿದಂತಾಗಬಹುದೆಂದೂ ಅವರಿಗೆ ಮನವರಿಕೆಯಾಗಿದೆ. ರಶ್ಯವು ಪಶ್ಚಿಮ ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಹಾಲೆಂಡ್, ಬೆಲ್ಜಿಯಂ, ಡೆನ್ಮಾರ್ಕ್ ಇಲ್ಲವೆ ಸ್ವಿಜರ್‌ಲೆಂಡುಗಳ ಮೇಲೆ ಬೀಳಬೇಕಾದರೆ ಮೊದಲು ಅಲ್ಲಿನ ಆಕ್ರಮಿತ ಸೈನ್ಯಗಳನ್ನು ಎದುರಿಸಲೇಬೇಕಾಗುವುದು. ರಶ್ಯವು ಹಾಗೆ ಮಾಡಿತೆಂದರೆ ಅದು ಅತೀ ಶಕ್ತಿ ಯುಕ್ತವಾದ ಮೂರು ರಾಷ್ಟ್ರಗಳೊಡನೆ ಜಗಳ ಕಾಣಿಕೆದಂತಾಗುತ್ತದೆ. ಅದೇ ಸಮಯಕ್ಕೆ ಎಟ್ಲಾಂಟಿಕ್ ಒಪ್ಪಂದವು ಸಂಪೂರ್ಣ ಕಾರ್ಯರೂಪವಕ್ಕೆ ಬಂತೆಂದರೆ ಅದಕ್ಕೆ ಸಹಿ ಹಾಕಿದ ರಾಷ್ಟ್ರಗಳು ಆಕ್ರಮಣಗಾರರನ್ನು ತಡೆದು ಹಿಡಿಯುವ ಹೊಣೆಗಾರಿಕೆಗೆ ಬದ್ಧರಾಗುವರು. ಈ ಸಂದರ್ಭದಲ್ಲಿ ಪಶ್ಚಿಮ ಜರ್ಮನಿಯ ಆಕ್ರಮಿತ ಸೈನ್ಯ ಬಲವು ಅಗಣ್ಯನೀಯವಾಗಿ ಇದನ್ನು ಹಂತೆಗೆಯಲೂಬಹುದು.

ಹೀಗೆ ಪಶ್ಚಿಮ ಜರ್ಮನಿಯು ಆಕ್ರಮಣ ಸೈನ್ಯಗಳಿಂದ ವಿಮುಕ್ತಗೊಳಿಸಲ್ಪಟ್ಟು ತನ್ನ ಸ್ವಂತ ಸರಕಾರದಿಂದ ಆಳಲ್ಪಡುವಂತಾದರೆ ಮತ್ತದರ ಆರ್ಥಿಕ ಸ್ಥಿತಿಯು ಉತ್ತಮವಾಗುತ್ತಲಿದ್ದರೆ ರಶ್ಯದಿಂದ ಆಕ್ರಮಿಸಲ್ಪಟ್ಟ ಪೂರ್ವ ವಿಭಾಗಕ್ಕೆ ಅದೊಂದು ಬಲವಾದ ಆಕರ್ಷಣೆಯಾಗುವುದು ಅಲ್ಲಿಂದ ರಶ್ಯನರೂ ಹಿಂತೆಗೆದರೆ ಒಂದೇ ವಾರದಲ್ಲಿ ಜರ್ಮನಿಯು ಸಂಪೂರ್ಣ ಸಂಘಟಿತವಾಗುವುದೂ ನಿಶ್ಚಯ. ರಶ್ಯವು ಅಲ್ಲೇ ಉಳಿದರೆ ಅದರ ಸ್ಥಾನವು ಅಭದ್ರವಾಗಿ ಉಳಿಯುವುದು.

ಜರ್ಮನಿಯ ಏಕ್ಯ ಅನಿವಾರ್ಯ

ಒಂದು ವೇಳೆ ಇದನ್ನರಿತು ರಶ್ಯವೆ ಮೊದಲು ಜರ್ಮನಿಯ ತನ್ನ ವಿಭಾಗದಿಂದ ಹಿಂದಕ್ಕೆ ಸರಿದರೆ ಜರ್ಮನಿಯು ಖಂಡಿತ ಪುನಃ ಅಖಂಡ ಏಕ್ಯಹೊಂದುವುದು. ಹೇಗಾದರೂ ಸರಿಯೆ ಕೆಲವೆ ವರ್ಷಗಳಲ್ಲಿ ಜರ್ಮನಿಯು ಯಾವ ಪರಕೀಯ ಸೈನ್ಯಗಳಿಲ್ಲದ ಸಂಪೂರ್ಣ ಸ್ವತಂತ್ರವೂ ಸುಸಂಘಟಿತವೂ ಆದ ರಾಜ್ಯವಾಗುವುದು.

ಹೀಗಿರುವುದರಿಂದ ಈಗಲೆ ಅಲ್ಲಿನ ಜನರು ಮುಂದಿನ ಸಂಪೂರ್ಣ ಸ್ವತಂತ್ರ ಸರಿಸ್ಥಿತಿಗೆ ಹೊಂದಿಕೆಯಾಗುವಂತಹ ಧೋರಣೆಯನ್ನೇ ಅನುಸರಿಸಲಾರಂಭಿಸುವುದು ಒಳಿತು.

ಸ್ವತಂತ್ರ ವಿದೇಶಾಂಗ ಧೋರಣೆಯ ಜರ್ಮನಿಯು ಎಂದಿಗೂ ರಶ್ಯದೊಡನೆ ಸೇರಲಾರದು. ಈಗ ಅಲ್ಲಿನ ಒಂದು ಭಾಗದಲ್ಲಿ ರಶ್ಯನ್ ಸೈನ್ಯವಿರುವುದರಿಂದ ಅದು ರಶ್ಯದೊಡನೆ ಕೃತ್ರಿಮ ಸ್ನೇಹವನ್ನು ತೋರಿಸಬಹುದು. ಆದರೆ ಜರ್ಮನ್ ರಾಷ್ಟ್ರೀಯವಾದಿಗಳ ಈಗಿನ ಈ ಬಾಯಿ ಮಾತಿನ ರಶ್ಯನ್ ಸಹಾನುಭೂತಿಯನ್ನು ಯಾರೂ ಗಂಭೀರವಾಗಿ ಎಣಿಸಲಾರರು. ಪಶ್ಚಿಮ ರಾಷ್ಟ್ರಗಳ ಕಣ್ಣಿಗೆ ಮಣ್ಣೆರಚುವ ವಿಧಾನ ವಿದೆನ್ನಬಹುದು. ಸ್ವತಂತ್ರ ಜರ್ಮನಿಯು ಯಾವ ಸಂದರ್ಭದಲ್ಲೂ ರಶ್ಯದ ಸಮೀಪ ಸಂಪರ್ಕದಿಂದ ಲಾಭ ಹೊಂದದು; ಯುದ್ಧಾನಂತರ ರಶ್ಯದ ನೆರೆಯಲ್ಲಿರುವ ರಾಷ್ಟ್ರಗಳು ಬೇರೆ ದಾರಿಗಾಣದೆ ಅದರೊಡನೆ ಮೈತ್ರಿ ಬೆಳೆಸಿವೆ.

ಆದುದರಿಂದ ಸಹಜವಾಗಿ ರಶ್ಯಾ ವಿರೋಧಿಯಾದ ಜಗತ್ತು "ಭಾವೀ ಜರ್ಮನಿಯೊಡನೆ ರಶ್ಯದ ಸಂಬಂಧವೇನಿರಬಹುದು?" ಎಂದು ವರ್ಮಾಲೋಚಿಸುವುದು. ಒಂದೊ ಇನೆರೆಲ್ಲರೂ ಸೇರಿ ಜರ್ಮನಿಯನ್ನು ತನ್ನ ಕುಟುಂಬ ಮಂಡಲದೊಳಗೆ ತೆಗೆದುಕೊಳ್ಳಬೇಕು, ಇಲ್ಲವೆ ಅದನ್ನು ಪ್ರತ್ಯೇಕಿಸಬೇಕು. ಈಗಾಗಲೆ ಜರ್ಮನಿಯು ಹೆದರಲ್ಪಡುವ, ತೆಗಳಲ್ಪಡುವ ದೇಶ. ಪುನರ್ರಚಿಸಲ್ಪಟ್ಟಾಗ ಅದನ್ನು ಪ್ರತ್ಯೇಕವಿರಿಸಿದರೆ ಅದು ಮತ್ತೊಮ್ಮೆ ವಿಶ್ವಶಾಂತಿಗೂ ಮತ್ತು ತನಗೂ ಬಾಧಕರವಾಗುವುದೂ ಖಂಡಿತ. ಹಿಂದೆರಡು ಸಲ ಅದರಿಂದ ವಿಶ್ವ ಶಾಂತಿಗೆ ಧಕ್ಕೆಯುಂಟಾದಂತೆ ಜರ್ಮನಿಯ ಕಬ್ಬಿಣ ಪದಾರ್ಥಗಳ ಸಂಪತ್ತು, ಅದರ ಯಾಂತ್ರಿಕ ಶ್ರೇಷ್ಠತೆ, ಅಲ್ಲಿನ ವಿಜ್ಞಾನಿ ವಿದುಳುಗಳು, ಟಿಜ್ಞೋಗಿಕ ಶಕ್ತಿ ಮತ್ತು ಅದರ ಭೂಗೋಳಿಕ ಸ್ಥಾನ ಪ್ರಾಮುಖ್ಯತೆ ಇವೆಲ್ಲವೂ ಯುರೋಪಿನ ಮತ್ತು ಜಗತ್ತಿನ ರಾಜ ಕಾರಣದಲ್ಲಿ ಭೀಕರ ಅಂದೋಲನವನ್ನುಂಟು ಮಾಡಾವು.

ಜರ್ಮನಿಯನ್ನು ಇಲ್ಲವೆ ಸಂಪೂರ್ಣ ನಾಶವಾಡುಬೇಕು ಇಲ್ಲವೆ ಅದನ್ನು ಅಂತರಾಷ್ಟ್ರೀಯವಾಗಿ ಮಾನ್ಯಲ್ಪಟ್ಟ ವಿಶ್ವಮಂಡಳದ ಸದಸ್ಯವಾಗಿ ಮಾಡಬೇಕು. ಅದರ ಯಂತ್ರ ಶಕ್ತಿಯ ಸಂಜು ಹಲ್ಲನ್ನು ತೆಗೆದು ಅದನ್ನು ಕೃಷಿ ಪ್ರಧಾನ ದೇಶವಾಗಿ ಮಾಡಬೇಕೆನ್ನುವವರ ಹಾರೈಕೆಯೂ ಕಳೆದುಹೋಯಿತು. ಆಧೋರಣೆಯು ಈಗ ಅಸಾಧ್ಯ ಈಗ ಜರ್ಮನಿಗೆ ಜಪಾನಿಗಿಂತ ವ್ಯಂಡಳದಲ್ಲಿ ಯೋಗ್ಯ ಹೊಣೆಗಾರಿಕೆಯ ಪಾತ್ರವನ್ನು ಕೊಡುವುದೇ ದೊಡ್ಡ ಸಮಸ್ಯೆ ಬಾಗಿದೆ.

ಯುರೋಪಿನಲ್ಲಿ ಪ್ರಜಾಸತ್ತಾತ್ಮಕ ಒಕ್ಕೂಟ

1919ರಿಂದ 1939ರ ತನಕ ಶಕ್ತಿರಾಷ್ಟ್ರಗಳು ಜರ್ಮನಿಯ ಏರುದ್ಧ ನೆರೆರಾಷ್ಟ್ರಗಳನ್ನು ಬೆಂಬಲಕೊಟ್ಟು ಶಕ್ತಿ ಸಮತೂಕ ಮಾಡತ ನೋಡಿದ ಧೋರಣೆಯು ಅವಿಷ್ಟು ವಿಚಾರಹೀನವಾದುದೆಂದು ಸ್ಪಷ್ಟವಾಯಿತು. ಹಾಗೆ ಮಾಡಿದರೆ ಇನ್ನೊಂದು ಯುದ್ಧವು ಖಂಡಿತ ಸಂಭವಿಸುವುದು. ಒಂದು ವೇಳೆ ರಶ್ಯದೊಡನೆ ಮೈತ್ರಿಯು ಬೆಳೆದರೂ ಯುರೋಪು ಪೂರ್ವ ಪಶ್ಚಿಮವಾಗಿ ವಿಭಾಗವಾಗಿಯೇ ಉಳಿಯುವುದು. ಹೀಗೆ ಪೂರ್ವ ಪಶ್ಚಿಮ ಮತ್ತು ಕುಧ್ಯವಾಗಿ ಅದು ವಿಭಾಗಿಸಲ್ಪಡಲೇಬಾರದು.

ಹಾಗಾದರೆ ಜರ್ಮನಿಯು ಫ್ರಾನ್ಸ್ ಡೆನ್ಮಾರ್ಕ್, ಬೆಲ್ಜಿಯಮ್‌ಗಳ ಮೇಲೆ ಬೀಳಲಾರದೆಂಬುದಕ್ಕೆ ಭರವಸೆಯೇನು? ಏನೂ ಇಲ್ಲ. ಜರ್ಮನಿಯೊಡನೆ ಕೂಡಿಕೊಂಡಿದ್ದರೆ ಮಾತ್ರ ಅವಕ್ಕೆ ಭದ್ರತೆ ಸಿಗಬಹುದು. ಆದರೆ ನಾಜಿಗಳ ಭೀಕರ ಆಡಳಿತವು ಆನುಭವ ಉಂಡ ಈ ದೇಶಗಳು ಜರ್ಮನಿಯೊಡನೆ ಮೈತ್ರಿಯಿಂದ ಹೇಗೆ ಇರಬಲ್ಲವು? ಆದರೆ ಅದು ಅನಿವಾರ್ಯ. ಜರ್ಮನಿಯೊಡನೆ ಅವಕ್ಕೆ ವ್ಯಾಪಾರ ಸಂಬಂಧವಿದೆ. ಅದನ್ನು ಬಿಟ್ಟರೆ ಅವಕ್ಕೆ ಅಪಾಯವೇ ಗತಿ.

ಯುರೋಪು ಒಂದೋ ಜರ್ಮನಿಗೆ ವಿರುದ್ಧವಾಗಿ ಇಲ್ಲವೆ ಅದರೊಡನೆ ಬಿಟ್ಟು ಕೂಡಲೇಬೇಕು. ಜರ್ಮನಿಯು ಒಂದು ಸಲಕ್ಕೆ ಪುನರುಜ್ಜೀವನಗೊಂಡಿತೆಂದರೆ ಮತ್ತೆ ಅದನ್ನು ಮಿಗಿಸುವ ಶಕ್ತಿ ಭಿನ್ನವಾದ ಯುರೋಪಿನಲ್ಲಿ ಯಾವುದೂ ಇಲ್ಲ. ಜರ್ಮನಿಯ ವಿರುದ್ಧವಾದ ಒಂದು ಪ್ರಜಾಸತ್ತಾತ್ಮಕ ಒಕ್ಕೂಟ ರಚಿಸುವುದೆಂದಾದರೆ ಅದಕ್ಕೆ ಅಮೇರಿಕನ್ ಬೆಂಬಲವು ಬೇಕೇ ಬೇಕು. ಆದರೆ ಅಮೇರಿಕನ್ನರ ಬೆಂಬಲವು ಇಂತಹ ಯೋಜನೆಗೆ ನಿರಂತರವಾಗಿ ದೊರೆಯುವುದೆಂದು ಹೇಳಬಹುದಲ್ಲ.

ಕಾರಣ ಇಂದಿನ ಅಮೇರಿಕನ್ ವಿದೇಶಾಂಗ ಧೋರಣೆಯು ಜರ್ಮನ್ ವಿರುದ್ಧ ಇಲ್ಲವೆ ಜಪಾನ್ ವಿರುದ್ಧವಾಗಿರುವುದಿಲ್ಲ. ದ್ವಿತೀಯ ಯುದ್ಧದ ವೈರವು ಇಂದು ಮರೆಯಲ್ಪಟ್ಟಿದೆ.

ಒಂದು ವೇಳೆ ಜರ್ಮನಿಯು ಪ್ರತಿಗಾಮಿಯೂ, ಪ್ರಜಾಸತ್ತೆಯ ವಿರೋಧಿಯೂ ಆಗಿದ್ದರೆ? ಹಿಂದಿನ ಜರ್ಮನ್ ಇತಿಹಾಸವು ಪ್ರಜಾಪತ್ಯಕ್ಕೆ ವಿರುದ್ಧವೂ ದಬ್ಬಾಳಿಕೆಯದೂ ಎಂದು ಸ್ಪಷ್ಟವಿದೆ. ಜರ್ಮನ್ ಪ್ರಜಾಸತ್ತೆಯು ಅಂತರಾಷ್ಟ್ರೀಯಮತ್ವದ ವಾತಾವರಣದಲ್ಲಿ ಮಾತ್ರ ಬಾಳಿಬಲ್ಲುದು.

ಮೂರನೆ ಯುದ್ಧವು ಅತಿಗತ್ಯವೂ ಅಸಂಭವವೂ ಆಗಬೇಕಾದರೆ ರಶ್ಯನ್ ವಿರೋಧಿದ ಎಲ್ಲಾ ರಾಷ್ಟ್ರಗಳ ಒಕ್ಕೂಟವೊಂದನ್ನು ಸ್ಥಾಪಿಸಬೇಕು. ಅಫ್ರಿಕಾ ಮತ್ತು ಅಸ್ಯದೊಳಗಿನ ದೇಶಗಳನ್ನೂ ಅದರೊಳಗೆ ಸೇರಿಸಬೇಕು. ಈ ಒಕ್ಕೂಟದ ಸಂಯುಕ್ತ ಶಕ್ತಿಯನ್ನು ರಶ್ಯವು ಅದೊಡೆದನೆಂದಿಗೂ ಕೆಣಕಾಟವಾಡಲಾರದು. ಈ ಒಕ್ಕೂಟವು ಅದೆಷ್ಟು ಸುಭದ್ರವಾಗಿರುವುದೆಂದರೆ ರಶ್ಯದ ಮೇಲೆ ಬೀಳುವ ಆತುರವೂ ಅದಕ್ಕಿರಲಾರದು. ಇದರಿಂದ ಈಗಿನ ಅಂತರಾಷ್ಟ್ರೀಯ ವೈಮನಸ್ಸು ಸಹಿಲಾಗುವುದು. ರಾಷ್ಟ್ರ ರಾಷ್ಟ್ರಗಳಲ್ಲಿ ವ್ಯಾಪಾರ ವ್ಯವಹಾರಗಳು ಅಭಿವೃದ್ಧಿಯಾಗಿ ಕ್ರಮೇಣ ರಶ್ಯನ್ ಪ್ರಭಾವಿತ ರಾಷ್ಟ್ರಗಳೂ ಇದರೊಳಗೆ ಸೇರಬಹುದು. ಇದರ ಪರಿಣಾಮವಾಗಿ ರಶ್ಯದ ಅಂತರೀಕ ರಾಜಕಾರಣವೂ ಮಾರ್ಪಾಟುಹೊಂದಿ ಸರ್ವಾಧಿಕಾರವು ಅಲ್ಲಿ ಕೂನೆಗೊಳ್ಳಬಹುದು. ಹೀಗೆ ಜರ್ಮನಿಯ ವಿಷಯವಾಗಿ ತಳೆಯುವ ವಿವೇಕಸರವಾದ ಧೋರಣೆಯಿಂದ ರಶ್ಯದೊಡನೆ ಸೌಹಾರ್ದವನ್ನುಂಟುಮಾಡುವುದರೊಂದಿಗೆ ವಿಶ್ವಶಾಂತಿಗೂ ಸಾಧಕವಾಗುವುದು.

ವಾರದ್ಯವಿಜ್ಞಾನ ವರದಿಗಳು

ನಿದ್ದೆಯನ್ನು ಇಲ್ಲದಂತೆ ಮಾಡಬಹುದೆ?

ಸಂಯುಕ್ತ ಅಮೇರಿಕದ ಕಾರ್ನಿಜಿ ವೈಜ್ಞಾನಿಕ ಸಂಸ್ಥೆಯಲ್ಲಿ ನಿದ್ದೆಯ ಕುರಿತು ಪರಿಶೀಲನೆಯು ಪ್ರಯೋಗಗಳಾಗುತ್ತಿವೆ ನಿದ್ದೆಯಲ್ಲಿ ಮನುಷ್ಯ ತನ್ನ ಅರ್ಧಕ್ಕೂ ಮಿಕ್ಕಿದ ಆಯುಷ್ಯವನ್ನು ನಿರರ್ಥಕಗೊಳಿಸುತ್ತಾನೆ. ನಿದ್ದೆಯನ್ನು ಕಡಿಮೆ ಮಾಡಿ ಆ ಅಮೂಲ್ಯ ಸಮಯದ ಸದುಪಯೋಗವನ್ನು ಹೇಗೆ ಮಾಡಬಹುದೆಂದು ಅವರ ಪ್ರಯೋಗಗಳ ಉದ್ದೇಶ ಈ ಸಂಬಂಧ ಅವರು ಕೆಲವು "ಆಯಾಸ ರಹಿತ ಇಲಿಗಳನ್ನು" ತಯಾರು ಮಾಡಿದ್ದಾರೆ

ನಿದ್ದೆಮಾಡುವ ಮನುಷ್ಯನೊಬ್ಬನ ತಲೆ ಬರುಡೆಯಲ್ಲಿ ತೂತು ಮಾಡುವುದರ ಮೂಲಕ ಅವನ "ವಿಧಿಳು ಮಲಗುತ್ತಿದೆಯೆ ಎಂಬುದರ ಕುರಿತು ಪರಿಶೀಲನೆ ಸರಿಪೂರ್ಣಗೊಳಿಸಲಾಗಿದೆ ಇತ್ತಾದರೂ ಮನುಷ್ಯನಿಗೆ ಈ ನಿದ್ರೆಯ ಇಚ್ಛೆಯೇಕೆ ಉಂಟಾಗಿದೆಂದು ವಿಜ್ಞಾನಿಗಳಿಗೆ ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲವಂತ

ದೀರ್ಘ ಬಾಳ್ವಿಕೆಗೆ ಶರೀರ ಗಾತ್ರವು ಕಾರಣವಲ್ಲ

ಕೆಲವು ಮೃಗಪಕ್ಷಿಗಳ ಪ್ರಮಾಣ

ಜೀವಜಂತುಗಳ ದೀರ್ಘ ಬಾಳ್ವಿಕೆಯ ಕುರಿತು ಒಂದು ಬ್ರಿಟಿಷ್ ಪತ್ರಿಕೆಯ ಫ್ರೆಂಚ್ ಲೇಖಕರ ಕೆಲವು ವಿಚಾರಾರ್ಹ ಸಂಗತಿಗಳನ್ನು ಪ್ರತಿಪಾದಿಸಿದ್ದಾರೆ ಅನೆಗಳು 65 ವರ್ಷಕ್ಕೆ ಒಂದು ಕೈ ಜೀವಿಸುತ್ತವೆಂದೂ ಕುರಿತು ಸೃಷ್ಟಿ ಅಧಿಕಗಳ ಇನ್ನೂ ಸ್ಪಷ್ಟಿಕ್ಲಿವೆ

ಶರೀರಗಾತ್ರವು ಆಯುಷ್ಯ ನಿರ್ಣಾಯಕ ಮೂಲಕಾರಣವೆಂಬ ಕಲ್ಪನೆಯನ್ನು ಬಿಟ್ಟಿಗಳೆಯುತ್ತ ಮಿಲೆನರು 70 80 ವರ್ಷಗಳ ತನಕ ಬದುಕಿರುವ ಅತಿ ಚಿಕ್ಕ ಪಕ್ಷಿಗಳ ಉದಾಹರಣೆಯನ್ನು ಕೊಡುತ್ತಾರೆ ಒಂದು ಗಿಳಿ 102 ವರ್ಷಗಳ ತನಕವೂ ಬದುಕಿತ್ತು ಸಾಗರಾಂತರ ವಾಸಿಗಳಲ್ಲಿ ಕಡಲು ಆಮೆಗೇ ದಾಖಲೆ ಸಲ್ಲುತ್ತದೆ ಮೊರಿಶಿಯಸ್ ದ್ವೀಪಗಳಲ್ಲಿನ ಒಂದು ಸೈನ್ಯ ಕೇಂದ್ರದಲ್ಲಿ ಒಂದು ಆಮೆ 166 ವರ್ಷಗಳ ತನಕ ಬದುಕಿದ್ದದು ಕಂಡುಬಂದಿದೆ

ಹತ್ತಿ ಬೀಜದಿಂದ ನೂಲು.

ಎರಡು ಹೊಸ ದಾರಗಳು

ನೂಲನ್ನು ಹತ್ತಿಯಿಂದ ಮಾತ್ರವಲ್ಲ ಅದರ ಬೀಜದಿಂದಲೂ ತೆಗೆಯಲಾಗುತ್ತದೆಂದು ಗೊತ್ತಾಗಿದೆ ಸಂಯುಕ್ತ ಅಮೇರಿಕ ಕೃಷಿ ಇಲಾಖೆಯ ಸಂಶೋಧನಾಲಯದಲ್ಲಿ ಹತ್ತಿ ಬೀಜದಿಂದಲೂ, ಮರ ಮತ್ತು ಹಾಳಾದ ಹತ್ತಿಯ ತುಂತುರುಗಳಿಂದಲೂ ಕೃತಕ ನೂಲುಗಳನ್ನು ತಯಾರಿಸಿದ್ದಾರೆ ಇದರಿಂದ ಹತ್ತಿ ಗಿಡದ ಉಪಯುಕ್ತತೆಯು ಇಮ್ಮಡಿಯಾಯಿತೆಂದು ಹೇಳಲಾಗಿದೆ. ಈ ಕೃತಕ ನೂಲಿನ ಬಟ್ಟೆಗಳು ಕಂಬಳಿ ನೂಲಿನ ಮುಂಕಾಲು ಪಾಲಷ್ಟು ಗಟ್ಟಿಯಾಗಿಯೂ ಸ್ಪರ್ಶಕ್ಕೆ ಮೃದುವಾಗಿಯೂ, ಬಣ್ಣವನ್ನೆಳೆಯುವ ಶಕ್ತಿಯುಳ್ಳದಾಗಿಯೂ ಇರುತ್ತವೆಯಂತೆ.

ರಕ್ತದ ಒತ್ತಡ ಕುಗ್ಗಿಸಲು ಹೊಸ ಮದ್ದು.

ರೋಗಿಗೆ ಯಾವ ತರದ ಹಾನಿಯಾಗದಂತೆ ರಕ್ತದ ಒತ್ತಡವನ್ನು ತಗ್ಗಿಸುವ ಒಂದು ಹೊಸ ಔಷಧಿಯನ್ನು ಸರಿಯುತ್ತ ಅಯೋರಿಕದಲ್ಲಿ ಕಂಡು ಹಿಡಿಯಲಾಗಿದೆ.

ಈ ಔಷಧಿಯ ಸಾರವನ್ನು ರೋಗಿಯ ಮಾಂಸಖಂಡಗಳೊಳಗೆ ಇಂಜೆಕ್ಷನ್ ಮೂಲಕ ಕಳಿಹಿಸಲಾಗುವುದು ಗಿದು ಳಿನ ರಕ್ತ ಪಾತ್ರೆಗಳಲ್ಲಿನ ಕಣಗಳು ಈ ಔಷಧಿಯ ಶಕ್ತಿಯಿಂದ ವಿವೋಚಿಸಲ್ಪಟ್ಟು ರಕ್ತದ ಒತ್ತಡಕ್ಕೆ ಕಾರಣವೆಂದೆನ್ನಲ್ಪಡುವ ಈ ದೋಷವು ನಿವಾರಣೆ ಮಾಗುವುದ

ಹೊಸ ಪಲ್ಯ ಪದಾರ್ಥ ತಯಾರಿಕೆಗೆ ಬಹುಮಾನ

ಮೊರಿಸ್ ಡ್ಯಾರಿಸರ್ ಎಂಬ ಖಾದ್ಯ ತಜ್ಞರು ಈಗ ಯುರೋಪಿನ ಸಂಚಾರಕ್ಕೆ ಕೊಂಡಿರುವರು ಹೊಸ ಹೊಸ ಸನಮಾನೆಯ ಸೊರು ಪಲ್ಯ, ಪದಾರ್ಥ ತಿಂಡಿ ಗಳನ್ನು ಪ ನೀವ ಗಳನ್ನು ನ ಂಡಿ ತೆರಿಸುವನವರಿಗೆ ಅವರು ಬಹುಮಾನಗಳನ್ನು ಕೊಡುವರು ಡನ್ ವರ್ಕಿರ್ ಸ್ಪರ್ಧಿತರು ಜಗತ್ತಿನ ಜತ್ಯುತ್ತಮವಾದ ಬೆಣ್ಣೆಯನ್ನು ತಯಾರಿಸುವುದರಲ್ಲಿ ಸಪ್ರಸಿದ್ಧಿ ವಿ ಮೊರಿಸರು ಅವರಿಗೆಂದು ಚಿನ್ನದ ಬೆಣ್ಣೆ ಕತ್ತಿಯನ್ನು ಉಡುಗೊರೆಯಾಗಿ ಆದೇ ರೀತಿ ಡೆನ್ಮಾರ್ಕ್ ಒಂದ ಸಂಸ್ಥೆಗೆ ಅವರು ಜಗತ್ತಿನ ಅತ್ಯುತ್ತಮ ಹಣ್ಣು ಪ್ರೀತಿ ಯಿಸುವವರೆಂದು ಒಂದು ಚಿನ್ನದ ಹಣ್ಣನ್ನು ಉಡುಗೊರೆಯಾಗಿ ಅರ್ಪಿಸಿದ್ದಾರೆ. ಸದ್ಯದಲ್ಲೇ ಅವರು ಬ್ರಿಟನ್ ಅಮೇರಿಕಗಳಿಗೂ ಹೋಗಿ ಅಲ್ಲಿನ ಪ್ರಖ್ಯಾತ ಖಾದ್ಯಪೇಯಗಳನ್ನು ಪರಿಶೀಲಿಸುವರು

ಮಿದುಳು ಕಾರ್ಯದ ಚಿತ್ರ ಹೊಸ ವಿಧಾನದಿಂದ

ಹೊಸದಾದ ಒಂದು ವಿಧಾನದಿಂದ ಮನುಷ್ಯನೊಬ್ಬನ ಮಿದುಳು ಕಾರ್ಯನಿರ್ವಹಿಸುವ ರೀತಿಯನ್ನು ಚಲಚಿತ್ರದಲ್ಲಿ ತೆಗೆಯಲಾಗಿದೆ ಸದ್ಯದಲ್ಲೇ ಅದನ್ನು ಜಗತ್ತಿಗೆ ಪ್ರೇಕ್ಷಕರಿಗೆ ಪ್ರದರ್ಶಿಸಲಾಗುವುದು ಈ ವಿಧಾನವನ್ನು ಕಂಡುಹಿಡಿದವರಲ್ಲಿ ಬ್ರಿಟಿಷ್ ಪ್ರಧಾನರ ಅಳಿಯಂದಿರಾದ ಹೆರೊಲ್ಡ್ ಶಿಪ್ಸನ್ ಎಂಬ ವಿಜ್ಞಾನ ಪ್ರಯೋಗ ತಜ್ಞರೂ ಒಬ್ಬರಾಗಿರುವರು ಹೊಸ ಯಂತ್ರದ ಸರಿಗೆಗಳನ್ನು ಮನುಷ್ಯನ ತಲೆಗೆ ಜೋಡಿಸಿ ಎಕ್ಕರೇ ವಿಧಾನದ ಸಂಪೆ ೀಜನುನ್ನೆಳೆಗೊಂಡ ಸೂಕ್ಷ್ಮ ಯಂತ್ರದ ಮೂಲಕದ ಮಿದುಳಿನ ಚಿ ನ ವಲನಗಳನ್ನು ನೇರವಾಗಿ ರಜದ ಪರದೆಯ ಮೇಲೆ ಬೀಳಲಾಗುತ್ತದೆ ಇದರಿಂದ ಮಿದುಳು ಚಿಕಿತ್ಸೆ ಶಸ್ತ್ರಕ್ರಿಯೆಯ ವಿಧಾನದಲ್ಲಿ ಕ್ರಾಂತಿಕಾರಕ ಪರಿವರ್ತನೆಗಳಾಗಬಹುದೆಂದು ಹೇಳಲಾಗಿದೆ

ಧ್ರುವ ವಲಯದ ರಹಸ್ಯ

ಧ್ರುವ ಪ್ರದೇಶದ ಅತಿ ಗಾಢವಾದ ರಹಸ್ಯವನ್ನು ಕಂಡು ಹಿಡಿಯಲು ಅಮೆರಿಕ ಸಂಯುಕ್ತ ಪೋಲೀಸ್ ಅಧಿಕಾರಿಗಳು ಕೆಲವು ಎಸ್ಕಿಮೊ ಸಹಾಯಕರೊಡನೆ ಆ ಕಡೆ ತೆರಳಿರುವರು. 1845ರಲ್ಲಿ ಧ್ರುವ ವಲಯಕ್ಕೆ ಪರಿಶೀಲನೆಯ ಸಂಚಾರಕ್ಕೆ ಹೋದ ಸರ್ ಜೊನ್ ಫ್ರೆಂಕ್ಲಿನ್ ಎಂಬ ಬ್ರಿಟಿಷ್ ತಜ್ಞರ ಮೃತ ಶರೀರವನ್ನವರು ಅಲ್ಲಿ ಶೋಧಿಸುವರು ಸರ್ ಜೊನರು 138 ಸಹಾಯಕರೊಂದಿಗೆ ಮೂರು ಹಡಗದಲ್ಲಿ ಧ್ರುವ ವಲಯಕ್ಕೆ ಹೋಗಿದ್ದವರು ದುರಂತಕ್ಕೊಳಗಾದರು 60 ಶೋಧಕ ಪಂಗಡಗಳು ಮೇಲಿಂದ ಮೇಲೆ ಆ ಕಡೆ ಹೋಗಿ 138 ಜನರ ಮೃತ ಶರೀರಗಳನ್ನೂ ಅವರ ಹಡಗಗಳನ್ನೂ ಪತ್ತೆ ಹಚ್ಚಿದ್ದರು. ಆದರೆ ಸರ್ ಜೊನರ ಶವವು ಇದುತನಕ ಸಿಗದಿದ್ದು ಈಗಿನ ಸಂಚಾರಕರು ಅದನು ನುತ್ತೊಮ್ಮೆ ಹುಡುಕುವರು

ವ್ಯಾಧಿ ಗುಣಪಡಿಸಲು ಸ್ವರ್ಗೀಯ ಶಕ್ತಿ

ಲಂಡನ್ ಬಿಶಪರ ಪ್ರಚಾರ

ಕೆಲವು ಅದ್ಭುತ ನಿವಾರಕಗಳು

ಜನರ ರೋಗರುಜಿಗಳನ್ನು ನಿವಾರಿಸುವಂತಹ "ಸ್ವರ್ಗೀಯವಾದ ವಿದ್ಯುತ್ ಶಕ್ತಿ" ಯೊಂದರ ಕುರಿತು ವಿವರಿಸುವ ಪುಸ್ತಕವೊಂದರ ಕುರಿತು ಲಿಂಕನಿನ ಬಿಶಪರಾದ ರೆವರೆಂಡ್ ಹಾಲ್ಡೆಂಡ್ ಅವರು ಪ್ರಶಂಸಿಸಿದ್ದಾರೆ ಇವರ ಸೂಚನೆಗಳು "ವ್ಯಾಧಿಗಳ ವಿರುದ್ಧ ಹೃದಯವಿರುವ ಹೋರಾಟಕ್ಕೆ ಅಮೂಲ್ಯವಾದವುಗಳೆಂದು ಹೇಳಲಾಗಿದೆ

ಶಕ್ತಿಯುಕ್ತವಾದ್ದೂ ವಿದ್ಯುತ್ ಕಿರಣದ ಅಲೆಗಳು ನಮ್ಮ ಸುತ್ತಮುತ್ತ ಪಸರಿಕೊಂಡಿರುವಾದರೂ ದೇವರ ಸಾನಿಧ್ಯದಿಂದ ದೂರ ಸರಿದಿರುವ ನಮಗೆ ಅದರ ಅಸ್ತಿತ್ವ ತಿಳಿಯದಂತಾಗಿದೆ ಮಿ ರೆವರೆಂಡರು ತಿಳಿಸುತ್ತಾರೆ ಗ್ರ ಥಕರ್ತೆಯಾದ ಶ್ರೀಮತಿ ಸೆನ್ ಫರ್ಡರವರಿಗೆ ಈ ಶಕ್ತಿಯನ್ನು ಉಪಯೋಗಿಸಿ ಕೊಳ್ಳುವ ವಿಧಾನ ತಿಳಿದಿರುವಂತೆ ಆ ಮೂಲಕ ಅಕೆ ಅನೇಕ ಪವಾಡಗಳನ್ನು ಪ್ರದರ್ಶಿಸಿವಳಂತೆ

ಮಗುವನ್ನು ಗುಣಪಡಿಸಿದಳು

"ಈ ಪುಸ್ತಕವು ಸಂಪೂರ್ಣ ತರ್ಕಬದ್ಧವಾಗಿದೆ ದೈವಿಕ ಆರಾಧನೆಯ ಅರ್ಚಕರಾದ ನವ್ಯ ಅಭಿವಾಯಗಳನ್ನು ಗ್ರಂಥಕರ್ತಳು ಸಮರ್ಥವಾಗಿ ನಿರೂಪಿಸಿದ್ದಾಳೆ

"ದೈವಿಕ ಶಕ್ತಿಯ ಪ್ರಭಾವವು ಅವರ್ಣನೀಯವಾದದ್ದು ಜನಳ ಗ್ರಂಥವು ಅತ್ಯಂತ ಮಹತ್ವದ್ದಾಗಿದೆ" ಹೀಗೆಂದು ರೆವರೆಂಡ ಹಾಲ್ಡೆಂಡರು ಪ್ರಶಂಸಿಸುತ್ತಾರೆ

ದೈವಿಕ ಶಕ್ತಿಯಿಂದ ಹೊರ ಸೂಸುವ ಸ್ವರ್ಗೀಯ ವಿದ್ಯುತ್ ಕಿರಣಗಳನ್ನು ಜನರೂ ಕಂಡುಹಿಡಿದಿಲ್ಲ. ಮುಂದಿನ ವಿಜ್ಞಾನಿಗಳ ಸಂಶೋಧನೆಯಾದರೂ ಅದೇ ಆಗಿರಬೇಕು ಒಂದು ನಿದರ್ಶನವನ್ನವಳು ಕೊಡುತ್ತಾಳೆ "ಹೆಣ್ಣು ಮಗುವೊಂದು ಸಿಸೋಸಿಯಾ ಜ್ವರಕ್ಕೆ ತುತ್ತಾಗಿತ್ತು ನಾನು ಅದರ ಬಳಿ ಮೊಣಕಾಲೂರಿ ನನ್ನ ಕೈಗಳನ್ನು ಅದರ ದೇಹದ ಮೇಲಿಂದ ಹಾಯಿಸಿದೆ ಕೂಡಲೇ ಮಗುವಿನಲ್ಲಿ ಹೊಸ ತೊಂದು ಜೀವ ಚೈತನ್ಯವು ಒಳಸುಗ್ಗುವುದು ಪ್ರತ್ಯಕ್ಷ ತೋರಿಬಂತು. ದೇವರೇ ಸ್ವತಃ ಬಂದು ಮಗುವಿನ ರಕ್ಷಣೆಯ ಭಾರ ವಹಿಸಿದ."

ಬ್ರೊಂಕ್ಕಾಟಿಸ್ ಕೆನುಮ್ಮ ಮತ್ತು ಇತರ ಶ್ವಾಸಕೋಶ ಬಾಧೆಗಳಿಗೆ ಪೆಪ್ಸು ಅಗತ್ಯ



ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶ ವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ನುಟ್ಟುತ್ತವೆಂದು ತೋರಿಸುವ ಚಿತ್ರ

ಪೆಪ್ಸಿನ ಒಂದೆ ನಾತ್ರೆಯನ್ನು ಬಾಯಿಯಲ್ಲಿ ಹಾಕಿರಿ ಅದ ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧಿಯ ಸಾರವು ನೀವು ಒಳಸೇರಿಕೊಳ್ಳುವ ನಾಯುವಿನೊಡನೆ ಸೇರಿ ಶ್ವಾಸಕೋಶಗಳನ್ನು ಸೇರುವುದು ಅಲ್ಲಿ ಆದು ನಿಮ್ಮ ಕೆಮ್ಮನ್ನು ನಿವಾರಿಸಿ, ಅಲ್ಲಿ ಸೇರಿರುವ ಕಫವನ್ನು ಹೊರ ಗೆದವಿ ಸುವಿವನ್ನುಂಟುಮಾಡುವುದು

ನಿಷಹಾರಿ ಪೆಪ್ಸನ್ನೇ ಉಪಯೋಗಿಸಿರಿ



PEPS

ಗಂಟಲು ಮತ್ತು ಎದೆ ಗುಳಿಗೆಗಳು

ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ ಅತ್ಯಂತ ಪರಿಣಾಮಕಾರಿ ಔಷಧಿ.

ಸ್ವದೇಶಾಭಿಮಾನಿ

ತಾರೀಕು 12—8—1949

ಸ್ವಾತಂತ್ರ್ಯ ದಿನ

ಎರಡನೆಯ ಬಾರೀಭಾರತದ ಸ್ವಾತಂತ್ರ್ಯ ದಿನವು ನಮ್ಮ ಮುಂದಿದೆ. ಆಗೋಸ್ತು ೧೫ರಂಗಳ ತಾ: ೧೫ನೇ ದಿನವನ್ನು ದೇಶದಾದ್ಯಂತ ವಿಜೃಂಭಣೆಯಿಂದ ಆಚರಿಸುವರು.

ಎರಡು ವರ್ಷಗಳ ಸ್ವಾತಂತ್ರ್ಯದಲ್ಲಿ ಭಾರತವು ಎಷ್ಟು ಪ್ರಗತಿಯನ್ನು ಸಾಧಿಸಿತೆಂದು ವಿಮರ್ಶಿಸಿ ಪರಿಶೀಲಿಸಲು ಇದೊಂದು ಯೋಗ್ಯ ಸಂದರ್ಭ.

ನಮ್ಮದೇ ಆದ ಸರಕಾರಿಗಳನ್ನು ನೂರಾರು ಮಂದಿ ನೂರಾರು ಬಗೆಯಿಂದ ಇಂದು ಟೀಕಿಸುವುದನ್ನು ನಾವು ಕಾಣುತ್ತೇವೆ. ಪ್ರಜಾ ಜನರಲ್ಲಿ ಪ್ರಗತಿಯ ಬಗ್ಗೆ ಇರುವೆ ವಿಶೇಷ ಆತುರತೆಯನ್ನು ಮಾತ್ರ ಇದು ಸೂಚಿಸುತ್ತದೆಯೆಂದು ಧಾರಾಳವಾಗಿ ಹೇಳಬಹುದು. ಅದುದರಿಂದ ಈ ಟೀಕೆಗಳಿಂದಾಗಿ ಬೇಸರಪಡಲು ಕಾರಣವಿಲ್ಲ.

ಎರಡು ವರ್ಷಗಳಲ್ಲಿ ನಮ್ಮವರು ಸಾಧಿಸಿದ ಪ್ರಗತಿಯನ್ನು ಶಾಂತಚಿತ್ತದಿಂದ ಪರಿಶೀಲಿಸಿದರೆ ನಾವಿಂದು ಅತೃಪ್ತಿಪಡಲು ಹೆಚ್ಚಿನ ಕಾರಣವಿಲ್ಲವೆಂಬುದು ಸ್ಪಷ್ಟವಾಗುವುದು.

ಸ್ವಾತಂತ್ರ್ಯದ ಉದಯದೊಡನೆಯೇ ದೇಶದ ವಿಭಜನೆಯಿಂದ ಹುಟ್ಟಿದ ಭಯಂಕರ ಉತ್ಪಾತಗಳು ಈಗ ಹತೋಟಿಗೆ ಬಂದಿರುತ್ತವೆ. ಅಧಿಕಾರ ವಹಿಸಿದವರು ದುರ್ಬಲರಾಗಿದ್ದರೆ ಇದೊಂದೇ ದೇಶದಲ್ಲಿ ಅರಾಜಕತೆ ದುತ್ತು ಅವ್ಯವಸ್ಥೆಗಳನ್ನು ತುಂಬಲು ಸಾಕಿತ್ತು. ಈ ಪರಿಸ್ಥಿತಿಯನ್ನು ಹತೋಟಿಗೆ ತಂದು ಭಾರತ ಸರಕಾರವು ಸಮರ್ಥ ಸರಕಾರವೆಂದು ಎಲ್ಲರೂ ಕೊಂಡುಕೊಳ್ಳುವಂತಾಗಿರುತ್ತದೆ.

ಭಾರತ ಸರಕಾರವು ಸಾಧಿಸಿದ ಎರಡನೆ ಮಹತ್ಕಾರ್ಯವೆಂದರೆ ಇಲ್ಲಿಯ ನೂರಾರು ದೇಶೀಯ ಸಂಸ್ಥಾನಗಳನ್ನು ಭಾರತ ಸರಕಾರದ ಆಶ್ರಯಕ್ಕೆ ತಂದುದು. ಹೈದರಾಬಾದಿನಲ್ಲಿ ಭಾರತ ಸರಕಾರವು ತೋರಿಸಿದ ಕೌಶಲ್ಯ ಮತ್ತು ಕಾಶ್ಮೀರದಲ್ಲಿ ಇದು ತೋರಿದ ಸಾಹಸ ಸರ್ವಾದರಣೀಯವಾಗಿದೆ.

ಪ್ರಜಾ ಜನರಿಗೆ ಅನ್ನ ಬಟ್ಟೆ ಹಾಗೂ ಇತರ ಆವಶ್ಯಕತೆಗಳನ್ನು ಒದಗಿಸಲು ಭಾರತ ಸರಕಾರವು ನೂಡುತ್ತಿರುವ ಯತ್ನಗಳಾದರೂ ಸ್ವಲ್ಪವಲ್ಲ. ಈ ಆವಶ್ಯಕ ವ್ಯಾಪಾರಗಳು ಇನ್ನೂ ಸಾಕಷ್ಟು ಸಿಕ್ಕುತ್ತಿಲ್ಲವಾದರೆ ಅದಕ್ಕೆ ಸರಕಾರ ಜವಾಬ್ದಾರಿಯಲ್ಲ. ಜಗತ್ತಿನಲ್ಲೆಲ್ಲ ನಡೆದ ಮಹಾಯುದ್ಧದ ಪರಿಣಾಮವದೆಂಬುದನ್ನು ಸಾಧಾರಣ ಜನರೂ ತಿಳಿದು ಈ ಕುರಿತು ಹೆಚ್ಚಿನ ತಾಳ್ಮೆ ತೋರಿ ಸರಕಾರೀ ಸೂಚನೆಗಳನ್ನು ಪರಿಪಾಲಿಸಿ ಸರಕಾರದ ಯತ್ನಗಳೊಡನೆ ಸಹಕರಿಸಿದರೆ ಪರಿಸ್ಥಿತಿಯು ಬೇಗನೆ ಸುಧಾರಿಸದೆ ಇರುವಾರದು.

ಈ ಸಂಕ್ಷಿಪ್ತಗಳಿಂದ ಉಂಟಾದ ಅತೃಪ್ತಿಯನ್ನು ನಿವಾರಿಸಿಕೊಂಡು ತಮ್ಮ ಬೇರೆ ಬೇರೆ ಬೇಡಿಕೆಯಿಯ ಹೋರಾಟ ಕಮ್ಯೂನಿಸ್ಟ್ ಮೊದಲಾದ ವಿರುದ್ಧ ಪಂಗಡಿಗರ ಆಟ ನಡೆಯಿಗೊಡದೆ ದೇಶದಲ್ಲಿ ಶಾಂತಿ ಮತ್ತು ಕಾಯಿದೆಗಳನ್ನು ಸರಕಾರ ಪಾಪಾಡುತ್ತಿರುವುದಾದರೂ ಅಭಿನಂದನೀಯ ವಿಚಾರವೇ ಇರುತ್ತದೆ.

ಈ ಏರಿಡು ವರ್ಷಗಳಲ್ಲಿ ಭಾರತದ ಭಾವೀ ರಾಜ್ಯಾಂಗ ಘಟನೆಯನ್ನು ತಯಾರಿಸುವ ಕಾರ್ಯವಾದಾರೂ ಉತ್ತಮ ರೀತಿಯಿಂದ ನಡೆದು ಈ ಘಟನೆಯು ಸದ್ಯದಲ್ಲೆ ಪೂರ್ಣ ರೂಪತಾಳಿ ಬಲು ಬೇಗನೆ ಜಾರಿಗೆ ಬರಲಿದೆಯೆಂಬುದು ಸಂತೋಷದ ವಿಷಯ.

ಕೇಂದ್ರ ಸರಕಾರವು ಈ ರೀತಿ ಮಹತ್ಕಾರ್ಯಗಳನ್ನು ಸಾಧಿಸುತ್ತಲಿರುವಾಗ ನಮ್ಮ ಪ್ರಾಂತಿಕ ಸರಕಾರ್‌ಗಳಾದರೂ ಬಹಳ ಹಿಂದೆ ಬಿದ್ದಂತೆ ಕಾಣುವುದಿಲ್ಲ. ಉದಾಹರಣೆಗಾಗಿ ನಮ್ಮ ಮದ್ರಾಸ್ ಸರಕಾರವನ್ನೇ ತೆಗೆದುಕೊಳ್ಳೋಣ. ಈ ಸರಕಾರವನ್ನು ಕಾರಣಾಂತರಗಳಿಂದ ದೂರುವವರು ಇಲ್ಲವೆಂದಲ್ಲ. ಆದರೆ ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದರೆ ಈ ಸರಕಾರವು ಕೂಡಾ ಅನೇಕ ಮಹತ್ವದ ಸುಧಾರಣೆಗಳನ್ನು ಸಾಧಿಸಿರುತ್ತದೆಂಬುದನ್ನು ಎಲ್ಲರೂ ಒಪ್ಪಲೇ ಬೇಕು.

ಇಡೀ ಪ್ರಾಂತ್ಯದಲ್ಲಿ ಮದ್ಯ ನಿರೋಧ ನನ್ನು ಜಾರಿಗೆ ತಂದ ಮದ್ರಾಸು ಸರಕಾರದ ಸಾಹಸವು ಅತ್ಯಂತ ಅಭಿನಂದನೀಯ ಸಂಗತಿ ಇರುತ್ತದೆ. ಇದೊಂದೇ ಸುಧಾರಣೆಯು ನಮ್ಮ ಸರಕಾರದಲ್ಲಿರಬಹುದಾದ ಸಕಲ ದೋಷಗಳನ್ನು ಮರೆಸಲು ಸಾಕೆಂಬುದನ್ನು ಮರೆಯಬಾರದು.

ಮದ್ಯಪಾನ ನಿರೋಧ ಯಶಸ್ವಿಯಾಗುತ್ತ ಇಲ್ಲವೆಂದು ಗುಲ್ಲೆಬ್ಬಿಸುವವರು ಇದ್ದಾರೆ. ಹಳ್ಳಿಗಳಲ್ಲೆಲ್ಲ ಸಂಗಾಗವಾಗಿ ಮದ್ಯ ತಯಾರಿಸಿ ಕುಡಿಯುತ್ತಿದ್ದಾರೆಂದು ಇವರು ಹೇಳುತ್ತಿದ್ದಾರೆ. ಹಳ್ಳಿಗಳ ಪರಿಚಯ ತಮಗೆ ಮಾತ್ರ ಇದ್ದಂತೆ ಇವರು ತರ್ಕಿಸುತ್ತಿದ್ದಾರೆ. ಈ ಬಗೆಯ ಪ್ರಚಾರ ಕೇವಲ ಅತಿಶಯೋಕ್ತಿಯ ಮೂಲಕ ಅಸತ್ಪ್ರಚಾರವೆಂಬುದು ಸತ್ಯ ಸಂಗತಿ. ಹಿಂದೆ ಕುಡಿಯುತ್ತಿದ್ದವರಲ್ಲಿ ಬಡ ಜನರೇ ಬಹು ಸಂಖ್ಯಾಕರು. ಇಂಥವರಲ್ಲಿ ಶೇಕಡಾ 90 ಮಂದಿಗಿಂತ ಹೆಚ್ಚಿನವರು ಈಗ ಕುಡಿಯುತ್ತಿಲ್ಲ. ಕೆಲವು ಮಂದಿ ಕಳ್ಳಾಟಿಕೆ ನೂಡುತ್ತಿರುವ ಮಾತ್ರಕ್ಕೆ ಇಡೀ ಕಾರ್ಯಕ್ರಮವನ್ನು ದೂರುವುದು ನ್ಯಾಯವಲ್ಲ. ಈ ರೀತಿ ಅಸತ್ಪ್ರಚಾರದ ಸಾಧನೆಗೆ ತಮ್ಮ ಶಕ್ತಿ ಉಪಯೋಗಿಸುವುದಕ್ಕಿಂತ ಇಂಥ ಜನರು ಈ ಕಳ್ಳಾಟಿಕೆಯ ನಿವಾರಣೆಗಾಗಿ ತಮ್ಮ ಸಾಮರ್ಥ್ಯ ವಿನಿಯೋಗಿಸಿದರೆ ತುಂಬಾ ಪ್ರಯೋಜನವಿರುತ್ತದೆಂದು ಈ ಸಂದರ್ಭದಲ್ಲಿ ಸೂಚಿಸಬೇಕಾಗಿದೆ.

ನಮ್ಮ ಸರಕಾರದ ಗ್ರಾಮಾಭಿವೃದ್ಧಿ ಯೋಜನೆಯಾದರೂ ತುಂಬಾ ಶ್ಲಾಘನೀಯ ಯತ್ನವೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈ ಯೋಜನೆಯಂತೆ ಪ್ರತ್ಯಕ್ಷ ಕಾರ್ಯರೂಪದ ಫಲ ದೊರೆತುದು ಸ್ವಲ್ಪ ಮಾತ್ರವೆಂಬುದು ನಿಶ್ಚಯವಾದರೂ ಅಷ್ಟು ಸುಲಭ ಕಾರ್ಯವಲ್ಲವೆಂಬುದರಿಂದಲೇ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಮಹತ್ವ ವಿದ್ದಿಯೆನ್ನಬೇಕು.

ಕಳೆದ ಇನ್ನೂರು ವರ್ಷಗಳಲ್ಲಿ ನಮ್ಮ ಗ್ರಾಮಗಳನ್ನು ಸೂರೆ ಸುಲಿಗೆಗಳಿಗೆ ಒಳಪಡಿಸುವುದೇ ನಡೆಯುತ್ತಲಿದ್ದು ಇಂದು ಇದನ್ನು ತಡೆಗಟ್ಟಿ ಗ್ರಾಮಾಭಿವೃದ್ಧಿ ಸಾಧಿಸ ಹೊರಟಿರುವರೆಂಬುದೇ ಮಹತ್ವದ ವಿಚಾರ. ಇಂದಲ್ಲ ನಾಳೆ ಇದು ಫಲ ಕೊಟ್ಟೇ ಕೊಡುವ ಕಾರ್ಯವೆಂಬ ಬಗ್ಗೆ ಸಂಶಯ ವಿರುತ್ತದೆಯೆ?

ಮದ್ರಾಸು ಸರಕಾರವು ಈಗ ತಾನೇ ಶಾಸನ ಸಭೆಯ ಮುಂದಿಟ್ಟಿರುವ ಗ್ರಾಮ ಪಂಚಾಯತು ಮಸೂದೆಯಾದರೂ ಅತ್ಯಂತ ಪರಿಣಾಮಕಾರಿಯಾದ ವಿಷಯ. ಸರಕಾರದ ಯೋಜನೆಯಂತೆ ನಮ್ಮಲ್ಲಿಯ ಗ್ರಾಮಗಳು ಸ್ವತಂತ್ರ ಗ್ರಾಮ ಸಮಾಜಗಳಾದರೆ ಈಗಿನ ಸರಕಾರದ ಕೀರ್ತಿ ಶಾಶ್ವತವಾಗಿ ಉಳಿಯುವಂತಾದೀತು.

ಹರಿಜನರ ಉನ್ನತಿ ಹಾಗೂ ಅಸ್ಪೃಶ್ಯತಾ ನಿವಾರಣೆಯ ಕಡೆಗೆ ಮದ್ರಾಸು ಸರಕಾರವು ಧೈರ್ಯದಿಂದ ಮುಂದರಿದಿರುತ್ತದೆಂಬುದು ಸ್ಪಷ್ಟ. ದಕ್ಷಿಣ ಭಾರತದಲ್ಲಿ ದೇವಸ್ಥಾನಗಳಲ್ಲೆಲ್ಲ ಹರಿಜನರಿಗೆ ಪ್ರವೇಶ ಸಿಕ್ಕುವಂತೆ ಕಾಯಿದೆ ಮಾಡಿ ಜಾರಿಗೆ ತರುವುದು ಸುಲಭ ಕೆಲಸವಲ್ಲ. ಈ ಜನರ ಉನ್ನತಿ ಬಗ್ಗೆ ಸರಕಾರವು ಒಂದು ಕೋಟಿ ರೂಪ್ಯಿಗಳನ್ನೇ ತೆಗೆದಿಟ್ಟಿದೆ ಎಂದರೆ ಇಂಥ ಉತ್ತಮ ಸರಕಾರನನ್ನು ಏತಕ್ಕೆ ದೂರುವರೋ ಎಂದು ಆಶ್ಚರ್ಯವಾಗುವಂತಾಗುತ್ತದೆ.

ಖಾದಿ ಹಾಗೂ ಗ್ರಾಮಕೈಗಾರಿಕೆಗಳಿಗೆ ನಮ್ಮ ಸರಕಾರ, ಯೋಗ್ಯ ಪ್ರೋತ್ಸಾಹ ಕೊಡುತ್ತಿದೆ. ಇದು ಎಷ್ಟರ ಮಟ್ಟಿಗೆ ಕೊಡಬೇಕಾಗಿತ್ತೊ ಅಷ್ಟರ ಮಟ್ಟಿಗೆ ನಮ್ಮ ಸರಕಾರ ಹೋಗಿಲ್ಲವೆಂಬುದೇನೋ ನಿಜ. ಆದರೂ ಅದು ಮಾಡುತ್ತಿರುವ ಕೆಲಸವನ್ನು ಆದರಿಸಬಾರದೇಕೆ?

ಜವಿನಾನ್ವಿಲ್ ನಿವಾರಣೆ, ಮೋಟಾರು ಕಂಪೆನಿಗಳ ರಾಷ್ಟ್ರೀಯೀಕರಣದ ಯತ್ನ, ವಿದ್ಯುತ್‌ಶಕ್ತಿ ಸರಬರಾಯಿಯನ್ನು ಸರಕಾರವೇ ಕೈಕೊಳ್ಳುವ ನಿರ್ಧಾರ ಇವೆಲ್ಲ ನಮ್ಮ ಸರಕಾರವು ತುಂಬಾ ಪ್ರಗತಿಪರ ಧೋರಣೆಯನ್ನು ಅನುಸರಿಸುತ್ತಿದೆಯೆಂಬುದಕ್ಕೆ ಸಾಕಷ್ಟು ರುಜುವಾತುಗಳಾಗಿರುತ್ತವೆ.

ಮದ್ರಾಸು ಸರಕಾರ ಜಾತೀಯತೆಯ ಧೋರಣೆ ಕಟ್ಟಿಕೊಂಡಿದೆಯೆಂಬ ದೂರಿನ ಕುರಿತು ಒಂದು ಮಾತು ಹೇಳದೆ ನಿವೃತ್ತಿ ಇಲ್ಲ. ಈ ದೂರಿನಲ್ಲಿ ಸ್ವಲ್ಪ ಸತ್ಯಾಂಶವುಂಟು ಆದರೆ ಇದಕ್ಕಾಗಿ ನಮ್ಮ ಸರಕಾರವನ್ನೆ ಪೂರ್ಣ ದೂರಿ ಫಲವಿಲ್ಲ. ಹಿಂದುಳಿದವರನ್ನು ಮುಂದೆ ತರಲೆಚ್ಚಿಸಬೇಕೆಂಬ ತರ್ಕದಲ್ಲಿ ತುಂಬಾ ಸತ್ಯಾಂಶವುಂಟು ಮಾತ್ರವಲ್ಲ ಈ ಜಾತೀಯ ಧೋರಣೆ ಪ್ರಜಾಭಿಪ್ರಾಯದಿಂದಾಗಿ ನಮ್ಮ ಸರಕಾರ ಬಿಟ್ಟುಬಿಡಲು ಸಮರ್ಥವಾಗಿಲ್ಲವೆಂಬುದರಲ್ಲಿಯೂ ಸತ್ಯಾಂಶವುಂಟು.

ಒಟ್ಟಾರೆ ನೋಡಿದರೆ ನಮ್ಮ ಪ್ರಾಂತಿಕ ಸರಕಾರ ನಿಜವಾಗಿಯೂ ಕೃಷ್ಟಿಕರವಾಗಿಯೇ ನಡೆಯುತ್ತಿದೆಯೆಂಬುದು ನಿಜ ಸಂಗತಿ ಇರುತ್ತದೆ.

ಇದೇ ರೀತಿ ವಿಲ್ಲ ಪ್ರಾಂತಿಕ ಸರಕಾರಿಗಳೂ ತಾನು ಮುಂದೆ ತಾನು ಮುಂದೆ ಎಂಬ ಉತ್ಸಾಹದಿಂದ ಅನೇಕ ಸುಧಾರಣೆಗಳನ್ನು ಜಾರಿಗೆ ತರುತ್ತಿವೆ.

ಸ್ವಾತಂತ್ರ್ಯ ಸಿಕ್ಕಿ ಎರಡೇ ವರ್ಷಗಳ ಒಳಗೆ ಇಷ್ಟು ಪ್ರಗತಿ ಸಾಧಿಸಲ್ಪಟ್ಟಿದು ಖಂಡಿತವಾಗಿಯೂ ಕಡಮೆಯಲ್ಲ ಮಾತ್ರವಲ್ಲ ಈ ಪರಿಸ್ಥಿತಿ ಭವಿಷ್ಯದ ಮಟ್ಟಿಗೆ ತುಂಬಾ ಆಶಾದಾಯಕವಿರುತ್ತದೆ.

ನಮ್ಮ ಸರಕಾರಗಳು ತಪ್ಪುಗಳನ್ನು ಮಾಡುವುದೇ ಇಲ್ಲವೆಂದಲ್ಲ. ಅನೇಕ ತಪ್ಪುಗಳನ್ನು ಮಾಡುತ್ತಿವೆ. ತಪ್ಪು ಮಾಡಿಯೇ ಸರಿದಾರಿ ಕಲಿಯಬೇಕೆಂಬುದು ಪ್ರಜಾತಂತ್ರದ ಒಂದು ಮುಖ್ಯ ಲಕ್ಷಣವೆಂಬುದನ್ನು ಮರೆಯಲಾಗದು.

ನೂರಾರು ಮಂದಿ ನೂರಾರು ಬಗೆಯ ಟೀಕೆಗಳನ್ನು ಮಾಡುತ್ತಿರುವುದು ಪ್ರಗತಿಯ ಬಗ್ಗೆ ಪ್ರಜಾ ಜನರಿಗೆ ಇರುವ ಆತುರತೆ ತೋರುವುದೆಂದು ಆರಂಭದಲ್ಲಿ ಹೇಳಿದೆವು. ಬಹಳ ಮಟ್ಟಿಗೆ ಇದು ನಿಜವಾದ ಮಾತು. ಆದರೂ ಪ್ರಜಾ ಜನರು ಸರಕಾರಗಳ ಮೇಲೆ ಟೀಕೆ ಮಾಡುವುದರಲ್ಲಿ ಕೃಪ್ತರಾಗಿ ಕಾಲಹರಣ ಮಾಡಿದರೆ ಇದೊಂದು ದುಶ್ಚಟ ಮಾತ್ರವಾಗಬಲ್ಲುದು.

ಸರಕಾರಗಳು ಕೈಕೊಳ್ಳುತ್ತಿರುವ ಸತ್ಕಾರ್ಯಗಳು ಪೂರ್ಣ ಯಶಸ್ವಿಯಾಗುವಂತೆ ಪ್ರಜೆಗಳು ತಮ್ಮ ಕರ್ತವ್ಯ ನಿರ್ವಾಹಿಸಬೇಕು. ಹೀಗೆ ಮಾಡುತ್ತ ತಮಗೆ ಸರತೋರದ ವಿಚಾರಗಳಲ್ಲಿ ಟೀಕಿಸುವುದರಿಂದ ದೋಷವಿಲ್ಲ.

ಸ್ವಾತಂತ್ರ್ಯದ ಉಪಯೋಗ ಮಾಡಿಕೊಳ್ಳಲು ಈಗ ಕೇವಲ ಆರಂಭ ಮಾತ್ರವಾಗಿರುತ್ತದೆ. ಮುಂದೆ ಸಾಧಿಸಲಿರುವ ಕಾರ್ಯಗಳಿಗೆ ಲೆಕ್ಕವಿಲ್ಲ. ಎಲ್ಲಕ್ಕೂ ಮುಖ್ಯವಾಗಿ ಈಗಲೇ ಸಾಧಿಸಬೇಕಾದ ಕಾರ್ಯವೆಂದರೆ ಆಹಾರ ಸ್ವಾವಲಂಬನದ ಸಾಧನೆ. ಇದರಲ್ಲಿ ಮುಂದಿನ ಸ್ವಾತಂತ್ರ್ಯ ದಿನದ ತನಕ ಪ್ರತಿಯೊಬ್ಬರೂ ತನ್ನ ಯಥಾಗಬೇಕಾಗಿದೆ. ಇದು ಸ್ವಾತಂತ್ರ್ಯದ ಮೂರನೆಯ ವರ್ಷದ ಮುಖ್ಯ ಕಾರ್ಯಕ್ರಮ. ಇದನ್ನು ಪ್ರತಿಯೊಬ್ಬರೂ ಮನಃಪೂರ್ವಕ ಸಾಧಿಸಲು ನಿರ್ಧಾರ ಮಾಡಿದರೆ ಈ ಎರಡನೆಯ ಸ್ವಾತಂತ್ರ್ಯ ದಿನವನ್ನು ಸರಿಯಾಗಿ ಆಚರಿಸಿದಂತಾಗುವುದು.

ಸಾದರ ಸ್ವೀಕಾರ

ಮುಂದಿನ ಜನಾಂಗ– ಲೇಖಕರು ಶ್ರೀ ಕೆ. ವಿಠಲ ಕೆಕ್ಕೆ, ಬಿ. ಎ. ಎಲ್. ಟಿ., ಟೋರ್ಡೂರ್ ಹೈಸ್ಕೂಲ್ ಉಡುಪಿ–ಬೆಲೆ ೩–೪ ೦.

ವೇಣುಮಾಧವ– ಬರೆದವರು – ಶ್ರೀಮತಿ ಸ. ಸೀತಾದೇವಿ–ಪ್ರಕಾಶಕರು: ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ–ಕ್ರೌನ್ ಅಷ್ಟಾಕಾರದ ೬೧ ಪುಟಗಳು–ಬೆಲೆ ೦–೧೨–೦.

ಬಹುಮಾನ ಪಡೆದ ಬರೆಹಗಳು– ಬೇರೆ ಬೇರೆ ಬರೆಹಗಾರರು. ಪ್ರಕಾಶಕರು. ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ. ಕ್ರೌನ್ ಅಷ್ಟಾಕಾರದ ೧೫೨ ಪುಟಗಳು–ಬೆಲೆ ೦–೧೨–೦.

ಮುನಿಯನ ಮೂಡರಿ– ಲೇಖಕರು ಶ್ರೀ ಕೆ. ಎ. ಎನ್. ರಾವ್, ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ ಕ್ರೌನ್ ಅಷ್ಟಾಕಾರದ ೨೨೬ ಪುಟಗಳು ಬೆಲೆ ೨–೧೨–೦.

ದಿಮರ್ತೆ ಮುಂದಿನ ಸಂಚಿಕೆಗಳಲ್ಲಿ

ಟೀಕೆ-ಟಿಪ್ಪಣಿಗಳು

ಡಾ। ಹಟ್ಟಾ ಇವರ ಆಗಮನ

ಇಂಡೋನೇಶಿಯದ ಮುಖ್ಯ ಮಂತ್ರಿ ಶಾಕ್ಪರ್ ಮಹಮ್ಮದ ಹಟ್ಟಾ ಇವರು ಪೆಗಿನಲ್ಲಿ ಇದೇ ಆಗೋಸ್ತು 22ರಲ್ಲಿ ಆರಂಭಿಸುವ ದುಂಡು ಮೇಜಿನ ಪರಿಷತ್ತಿಗೆ ಹೋಗುವವರು ಹೊಸ ಥಿಲ್ಲಿಗೆ ಆಗಮಿಸಿ ಭಾರತದ ಫೆಟನಾ ಸಮಿತಿಯ ಮುಂದೆ ಭಾಷಣ ಮಾಡಿದರು.

ಇಂಡೋನೇಶಿಯದಲ್ಲಿಯ ಎಲ್ಲ ರಾಜಕೀಯ ಪಕ್ಷಗಳೂ ದೇಶಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡಲೇ ಸಿಕ್ಕಬೇಕೆಂಬ ಮಟ್ಟಿಗೆ ಒನ್ಮನಸ್ಸಿನಿಂದಿದ್ದಾರೆಂದು ವಿವರಿಸಿದರು

ಹೇಗ್ ಪರಿಷತ್ತಿನಲ್ಲಿ ಇಂಡೋನೇಶಿಯದ ಸ್ವಾತಂತ್ರ್ಯಕ್ಕೆ ವಿಜಯವಾಗಲೆಂದು ಪಂಡಿತ ಜವಾಹರಲಾಲರು ಹಾರೈಸಿದರು ಇಂಡೊನೇಶಿಯದಲ್ಲಿ ಡಾ। ಹಟ್ಟಾರವರ ರಾಷ್ಟ್ರೀಯ ಸರಕಾರ ಕುಸಿದು ಬೀಳುವಂತಾದರೆ ಇಡೀ ಆಗ್ನೇಯ ಏಷಿಯಕ್ಕೂ ಅದರಿಂದ ಭಾರತಕ್ಕೂ ಗಂಡಾಂತರವುಂಟೆಂಬುದರಿಂದ ಇವರ ಶ್ರೇಯಸ್ಸೂ ನಮ್ಮ ಶ್ರೇಯಸ್ಸೂ ಒಂದೇ ಎಂದರು.

ಡಾ। ಹಟ್ಟಾರವರು ಥಿಲ್ಲಿಯಲ್ಲಿದ್ದಾಗ ರಾಜಘಾಟಿಗೆ ಹೋಗಿ ಮಹಾತ್ಮಾಗಾಂಧಿಯವರ ಸಮಾಧಿಯ ಮೇಲೆ ಪುಷ್ಪಮಾಲೆಯೊಂದನ್ನು ಅರ್ಪಿಸಿದರು.

ಮೈಸೂರಲ್ಲಿ ದಿವಾನ್ ಪದವಿಯ ಮುಕ್ತಾಯ

ಇದೇ ಆಗೋಸ್ತು ತಾ 7ರಿಂದ ಮೈಸೂರಲ್ಲಿ ದಿವಾನರ ಪದವಿಯನ್ನು ಮುಕ್ತಾಯಗೊಳಿಸಿ ಮಹಾರಾಜರು ಒಂದು ಪ್ರಕಟಣೆ ಹೊರಡಿಸಿದ್ದಾರೆ ಸರಕಾರದ ಫೆಟನೆಯಲ್ಲಿ ಅವಶ್ಯವುಳ್ಳ ತಿದ್ದುಪಡಿ ಮಾಡಲಾಗಿದೆ ಈ ಪದವಿಯ ಹೆಚ್ಚಿನ ಅಧಿಕಾರಗಳೆಲ್ಲ ಮುಖ್ಯ ಮಂತ್ರಿಯವರಿಗೇನೆ ಬರುತ್ತವೆ ಇವರ ಮಂತ್ರಿ ಮಂಡಲವೇ ಸಂಪೂರ್ಣ ಆಡಳಿತೆಯ ಜವಾಬ್ದಾರಿ ಹೊರುವರು

ಮಹಾರಾಜರ ಪ್ರಕಟಣೆಯಲ್ಲಿ ಮೈಸೂರಿನ ಕೊನೆಯ ದಿವಾನರಾದ ಸರ್ ಎ. ರಾಮು ಸ್ವಾಮಿ ಮುದಲಿಯಾರರು ಮೈಸೂರಿಗೆ ಸಲ್ಲಿಸಿದ ಸೇವೆಯನ್ನೂ ಇವರ ದಕ್ಷತೆಯನ್ನೂ ಕೊಂಡಾಡಲಾಗಿದೆ.

ಮದ್ರಾಸು ಮಂತ್ರಿಗಳ ಮೇಲಿನ ಆರೋಪ

ಈ ಆರೋಪಗಳನ್ನು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕುಮಾರ ಸ್ವಾಮಿ ರಾಜರೇ ಸ್ವತ: ತನಿಖೆ ನಡೆಸುತ್ತಿದ್ದಾರೆ. ಶ್ರೀ ವ್ಯಕಾಶವ್ ಮೊದಲಾದವರ ಜೊತೆಯಲ್ಲಿ ಸಂಬಂಧಪಟ್ಟ ಸರಕಾರೀ ದಾಖಲೆಗಳೆಲ್ಲ ಪರಿಶೀಲಿಸಲ್ಪಡುತ್ತಿವೆ.

ಈ ರೀತಿ ಆರೋಪ ಹೊರಿಸಿದವರೊಡನೆ ಅವಶ್ಯವುಳ್ಳ ದಾಖಲೆಗಳನ್ನೆಲ್ಲ ಪರಿಶೀಲಿಸುವ ಈ ಕ್ರಮದಿಂದಲಾದರೂ ಹೀಗೆ ಆರೋಪ ಹೊರಿಸಿದವರಿಗೆ ಕೈಸ್ತಿಯಾಗಲೇ ಬೇಕು. ಈ ಪರಿಶೀಲನದ ಪರಿಣಾಮವೇನೆಂದು ಮುಂದೆ ನೋಡಲಿಕ್ಕಿದೆ. ಅಂತೂ ಈಗಿನ ತನಿಖೆ ನ್ಯಾಯಕ್ಕೆ ತೃಪ್ತಿಕರವಿರುತ್ತದೆಂಬ ಬಗ್ಗೆ ಸಂಶಯವಿಲ್ಲ.

ಕಾಸಿಮ್ ರಜ್ವಿಯ ತನಿಖೆ

ಹೈದರಾಬಾದಿನ ರಜಾಕರ ಮುಖಂಡ ಕಾಸಿಮ್ ರಜ್ವಿಯವರ ಮೇಲೆ ಶಿಂಬುಲ್ಲಾ ಖಾನರ ಕೊಲೆಯ ಆರೋಪ ಹೊರಿಸಿ ತನಿಖೆ ಆರಂಭವಾಗಿರುತ್ತದೆ

ಈ ಬಗ್ಗೆ ನೇಮಕವಾಗಿರುವ ಸ್ಪೆಶಲ್ ಟ್ರಿಬ್ಯೂನಲಿನ ಅಧ್ಯಕ್ಷತೆಗೆ ಜಿ. ಎ ಏಂಟೊ ಎಂಬ ಮಂಗಳೂರಿನವರೇ ನೇಮಿಸಲ್ಪಟ್ಟು ಇವರ ಕೋರ್ಟು ಈಗ ಈ ತನಿಖೆಯ ಕಾರ್ಯ ಆರಂಭಿಸಿರುತ್ತದೆ.

ಕಾಶಿಮ್ ರಜ್ವಿ ಕಡೆಯಿಂದ ವಕಾಲತು ನಡೆಸಲು ನವಾಬ್ ಅಸ್ಗರ್ ಯಾರ್ ಜಂಗ್ ಬಹದ್ದೂರ್ ಎಂಬ ವಕೀಲರನ್ನು ನೇಮಿಸಲಾಗಿದೆ. ಬೇಗಮ್ ರಜ್ವಿಯವರ ವಿನಂತಿ ಮೇರೆಗೆ ಬಂದ ಲಂಡನಿನ ಬೆರಿಸ್ಟರ್ ರಿಬ್ಬರಿಗೆ ಇವರ ಕಡೆಯಿಂದ ವಾದಿಸಲು ಇನ್ನೂ ಕೋರ್ಟಿನ ಅನುಮತ್ತಿ ದೊರೆತಿಲ್ಲ.

ಶೋಬುಲ್ಲಾಖಾನರು ಇಮ್ರೋಜ್ ಎಂಬ ಹೈದರಾಬಾದಿನ ಪತ್ರಿಕೆಯ ಸಂಪಾದಕರಿದ್ದರು. ಇವರು ರಜಾಕರೆ ಅತ್ಯಾಚ್ಚಾರ ಖಂಡಿಸುತ್ತಿದ್ದರು. ಇವರನ್ನು ರಜಾಕರರು ಕೊಲೆಮಾಡಿದ್ದರು ಈ ಕೊಲೆಯ ಆರೋಪಕ್ಕಾಗಿ ಈಗ ರಜ್ವಿಯವರ ತನಿಖೆ ನಡೆಯುತ್ತಿದೆ

ಪಾಕಿಸ್ತಾನ ಮತ್ತು ಭಾರತ

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರು ತಮ್ಮ ಈದ್ ಸಂದೇಶದಲ್ಲಿ ಭಾರತದಲ್ಲಿ ಮುಸ್ಲೀಮರು ಇನ್ನೊಗುಲಾಮಗಿರಿಯಲ್ಲಿ ಸಂಕಷ್ಟ ಪಡುತ್ತಿರುವ ಬಗ್ಗೆ ಸಂತಾಪ ಸೂಚಿಸಿದರು.

ಭಾರತದ ಮುಸ್ಲೀಮ ಮುಂದಾಳುಗಳೆಲ್ಲರೂ ಲಿಯಾಖತ ಅಲಿಯವರ ಈ ಉದ್ಧಟತನವನ್ನು ಖಂಡಿಸಿರುವರು ಪಂಡಿತ ನೆಹರುರವರು ಭಾರತ ಸರಕಾರದ ಪರವಾಗಿ ಈ ಬಗೆಯ ಪ್ರಚಾರವನ್ನು ಆಕ್ಷೇಪಿಸಿ ಪಾಕಿಸ್ತಾನ ಸರಕಾರಕ್ಕೆ ಒಂದು ಪತ್ರ ಕಳುಹಿಸಿರುತ್ತಾರೆ ಉತ್ತರವಿಲ್ಲ.

ಈ ಬಗೆಯ ಅಪಪ್ರಚಾರಕ್ಕೆ ಭಾರತದ ಮುಸ್ಲೀಮರು ಇನ್ನು ಬಲಿ ಬೀಳುವಂತಿಲ್ಲವೆಂದು ಲಿಯಾಖತ್ ಅಲಿಯವರಿಗೆ ಈಗಲಾದರೂ ಮುಂದಟ್ಟಾಗಿರಬೇಕೆಂದು ಭಾವಿಸಬೇಕಾಗಿದೆ.

ವಿದ್ಯಾಭ್ಯಾಸ ಪದ್ಧತಿ ಸುಧಾರಣೆ

ರಾಜಾಜಿಯವರ ಸೂಚನೆಗಳು

ಭಾರತದ ಗವರ್ನರ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರ್ಯರವರು ಭೊಂಬಾಯಿಯನ್ನು ಪುನ�ಃ ಸಂದರ್ಶಿಸುತ್ತಿದ್ದಾರೆ. ಶ್ರೀ ಮುನ್ಶಿಯವರ ನೇತೃತ್ವದಲ್ಲಿ ಇಲ್ಲಿ ನಡೆಯುವ ಭಾರತೀಯ ವಿದ್ಯಾಭವನವೆಂಬ ಸಂಸ್ಥೆಯ ಹೊಸ ಕಟ್ಟಡವೊಂದರ ಉದ್ಘಾಟನಾ ಸಮಾರಂಭವನ್ನು ಜರಗಿಸುತ್ತ ರಾಜಾಜಿಯವರು ಮಾಡಿದ ಅಮೂಲ್ಯಭಾಷಣವೊಂದು ವಿದ್ಯಾಭಿಮಾನಿಗಳೆಲ್ಲರೂ ಮನಸ್ಸಿಗೆ ತೆಗೆದುಕೊಳ್ಳತಕ್ಕ ಮಹತ್ವದ ವಿಚಾರಗಳಿಂದ ಪರಿಪ್ಲುತವಾಗಿರುತ್ತದೆ ಈ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಇವರು ಚರ್ಚಿಸಿದ ಮೊದಲ ಪ್ರಶ್ನೆ ಪ್ರಾಥಮಿಕ ವಿದ್ಯಾಭ್ಯಾಸದ ಕುರಿತು ಇದ್ದು ಇವರ ಮುಖ್ಯ ಸೂಚನೆಯೆಂದರೆ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಾರಕ್ಕೆ ಮೂರು ದಿನ ಮಾತ್ರ ಶಾಲೆ ನಡೆಸಿ ಉಳಿದ ನಾಲ್ಕು ದಿನಗಳಲ್ಲಿ ಇವರಿಗೆ ತಮ್ಮ ತಮ್ಮ ಹಿರಿಯರ ಕಸಬು ಕಲಿಯಲು ಇವರನ್ನು ಬಿಡಬೇಕು ಎಂಬುದು

ಸಾಗುವಳಿ ಮಾಡುವವರ ಮಕ್ಕಳು ತಾಯ್ತಂದೆಯರ ಜೊತೆ ಸೇರಿ ಸಾಗುವಳಿ ಕೆಲಸದಲ್ಲಿ ಸಹಾಯ ಮಾಡುತ್ತ ಜಾಣ. ವಾರುಗಳ ಆರೈಕೆ ನೋಡುತ್ತ ಈ ಕಸಬಿನ ಮೋಹಿತಿ ಚಿಕ್ಕಂದಿನಲ್ಲಿ ನಾಡಿಕೊಳ್ಳುವುದಿಲ್ಲವಾದರೆ ನಂತರ ಈ ಕಸಬು ಹೇಗೆ ನಡೆದೀತು? ಇದೇ ರೀತಿ ಕಮ್ಮಾರರ ಮಕ್ಕಳು ಕಮ್ಮಾರ ಕಸಬನ್ನು ಬಡಗಿಯ ಮಕ್ಕಳು ಬಡಗಿ ಕೆಲಸವನ್ನು ವ್ಯಾಪಾರಿಗಳ ಮಕ್ಕಳು ವ್ಯಾಪಾರವನ್ನು ಇತ್ಯಾದಿ ಎಲ್ಲ ಯವರು ಹಿರಿಯರ ಜೊತೆಯಲ್ಲಿದ್ದು ಕಲಿಯುವ ಪ್ರಾಚೀನ ಪದ್ಧತಿ ಉಳಿಸಿಕೊಳ್ಳದೆ ನಿವೃತ್ತಿ ಇಲ್ಲ. ಈ ಪದ್ಧತಿ ಇನ್ನೂ ಉಳಿದಿದೆಯೆಂಬುದರಿಂದ ಮಾತ್ರ ನಮ್ಮ ಜೀವನ ಈಗ ನಡೆಯುತ್ತಿದೆ. ಇದನ್ನು ಹಾಳು ಮಾಡಲು ಹೋಗುವುದೆಂದರೆ ಶುದ ಮೂರ್ಖತನವಾದೀತು.

ಈ ಹಳ್ಳಿಯ ಮಕ್ಕಳನ್ನೆಲ್ಲ ಕಡ್ಡಾಯ ಶಿಕ್ಷಣದ ಹೆಸರಲ್ಲಿ ಒತ್ತಾಯದಿಂದ ಶಾಲೆಗೆ ತಂದು ಮನೆಕೆಲಸದ ಮಾಹಿತಿ ಇವರಿಗೆ ತಪ್ಪಿಸುವುದರಲ್ಲಿ ಯಾವ ನ್ಯಾಯವೂ ಇಲ್ಲ.

ಆದುದರಿಂದ ವಾರದಲ್ಲಿ ಮೂರು ದಿವಸಗಳ ಮಟ್ಟಿಗೆ ಇವರು ಶಾಲೆ ಕಲಿಯಲಿ. ಉಳಿದ ನಾಲ್ಕು ಜನ ಇವರನ್ನು ಮನೆ ಕೆಲಸಕ್ಕೆ ಬಿಟ್ಟುಬಿಡೋಣ.

ಕಸಬಿಲ್ಲದೆ ಪರೋಪಜೀವಿಗಳಾಗಿ ಬಡುಕುವವರ ಮಕ್ಕಳು ಈ ನಾಲ್ಕು ದಿನ ಬೇಕಾದಂತೆ ಉಪಯೋಗಿಸಿಕೊಳ್ಳಲಿ. ಅದಕ್ಕಾಗಿ ಯೋಚಿಸಬೇಕಾಗಿಲ್ಲ.

ಈ ಏರ್ಪಾಡಿನಿಂದ ಇನ್ನೂ ಒಂದು ಉಪಯೋಗವುಂಟು ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಮೂರು ದಿನ ಒಂದು ತಂಡಕ್ಕೆ ಇನ್ನು ಮೂರು ದಿನ ಬೇರೊಂದು ತಂಡಕ್ಕೆ ವಿದ್ಯೆಕೊಡುವ ಏರ್ಪಾಡು ಮಾಡುವುದರಿಂದ ಈಗ ನಮ್ಮ ಶಾಲೆಗಳು ಎಷ್ಟು ಮಕ್ಕಳಿಗೆ ಸಾಕಾಗುತ್ತವೆಯೋ ಅದರ ಎರಡು ಪಾಲು ಮಕ್ಕಳ ಶಿಕ್ಷಣಕ್ಕೆ ಏರ್ಪಾಡು ಮಾಡಿದಂತಾಗುತ್ತದೆ. ಉಳಿದ ಏಳನೆಯ ದಿನವೊಂದು ಉಪಾಧ್ಯಾಯರಿಗೆ ರಜವಾಗಿ ಬಿಡಲಿ. ನನ್ನ ಸಂಸ್ಕೃತಿಯ ಅಭಿಮಾನ ಇವರಲ್ಲಿ ಉಂಟಾಗುವಂತೆ ಸಾಧಿಸಲೆ ಇವರು ನಮ್ಮ ದೇಶಕ್ಕೆ ಅಗತ್ಯವಿರುವ ಮುಂದಾಳುಗಳ ವಾತ್ರ ವಹಿಸಲು ಸಾಧ್ಯವಿಲ್ಲ

ಈಗಿನ ವಿದ್ಯಾಭ್ಯಾಸ. ಈಗಿನ ವಿಶ್ವವಿದ್ಯಾಲಯದ ಶಿಕ್ಷಣ ಎಷ್ಟುಮಾತ್ರಕ್ಕೂ ತೃಪ್ತಿಕರವಾಗಿ ಇಲ್ಲ. ನೂರಾರು ವಿಷಯಗಳನ್ನು ಥಳುವಳಿ ಯುವತಿಯರ ತಲೆಯೊಳಗೆ ತುಂಬಿಸಿದರೆ ಉಪಯೋಗವೇನು?

ದೇಶದಲ್ಲಿ ಮುಂದೆ ಜನಸಾಮಾನ್ಯರ ಮುಂದಾಳಾಗಬಲ್ಲ ಸಾವಿರಾರು ಯುವಕರ ಆವಶ್ಯಕತೆ ಇದೆ. ಇಂಥವರನ್ನು ಅಂದರೆ ಇದಕ್ಕೆ ಬೇಕಾದ ವ್ಯಕ್ತಿತ್ವ ಸಹಾಗೂ ನಡತೆ ಯುಳ್ಳವರನ್ನು ತಯಾರಿಸುವುದು ನಮ್ಮ ಕಾಲೇಜುಗಳ ಉದ್ದೇಶವಿರಬೇಕು.

ನಮ್ಮ ಪೂರ್ವ ಸಂಸ್ಕೃತಿ ಸರಿಯಾಗಿ ಉಳಿದಿದ್ದರೆ ಈಗ ಯೋಚನೆಪಡುವ ಅಗತ್ಯ ನಿರಲಿಲ್ಲ ಆದರೆ ಆ ಸಂಸ್ಕೃತಿಯು ಜನರು ಈಗ ಕೇವಲ ವಿರಳರಾಗಿದ್ದಾರೆ.

ನಮ್ಮ ಕಾಲೇಜು ವಿದ್ಯಾರ್ಥಿಗಳಲ್ಲಿ ನೈತಿಕ ಹಾಗೂ ಧಾರ್ಮಿಕ ಭಾವನೆಗಳು ಬೇರೂರುವಂತೆ ಹೇಗೆಸಾಧಿಸಲಹುದು?

ಭಿನ್ನಮತಗಳ ಈ ದೇಶದಲ್ಲಿ ಮತ ಸಂಬಂಧ ಶಿಕ್ಷಣದ ಏರ್ಪಾಡು ಸರಿಹೊಂದುವುದಿಲ್ಲವೆಂಬುದೇನೊ ನಿಜ ಆದರೆ ಇದಕ್ಕೆ ಉಪಾಯವೇನು?

ಜಗತ್ತಿನ ಎಲ್ಲ ತಾತ್ವಿಕ ದರ್ಶನಗಳ ಹಾಗೂ ಸಂಸ್ಕೃತಿಗಳ ಪರಿಚಯ ಈ ವಿದ್ಯಾರ್ಥಿಗಳಿಗೆ ಮಾಡಿಕೊಡಲು ಯತ್ನಿಸುವುದು ಒಂದೇ ದಾರಿಯೆಂದು ಕಾಣುತ್ತದೆ. ವಿವಿಧ ದರ್ಶನಗಳ ಅಭ್ಯಾಸ ಮಾಡುವಾಗ ನಮ್ಮ ಸಂಸ್ಕೃತಿಯ ಮೇಲ್ಮೆಯ ಅರಿವು ಇವರಲ್ಲಿ ತಾನಾಗಿ ಉಂಟಾಗುತ್ತದೆಂಬ ಬಗ್ಗೆ ಸಂಶಯವಿಲ್ಲ. ನನ್ನ ಸಂಸ್ಕೃತಿಯ ಅಭಿಮಾನ ಇವರಲ್ಲಿ ಉಂಟಾಗುವಂತೆ ಸಾಧಿಸಬೆ ಇವರು ನಮ್ಮ ದೇಶಕ್ಕೆ ಅಗತ್ಯವಿರುವ ಮುಂದಾಳುಗಳ ವಾತ್ರ ವಹಿಸಲು ಸಾಧ್ಯವಿಲ್ಲ

ರಾಜಾಜಿಯವರು ತಮ್ಮ ಈ ಭಾಷಣದಲ್ಲಿ ಎತ್ತಿದ ಎರಡನೆ ವಿಚಾರವೆಂದರೆ ಕಾಲೇಜು ವಿದ್ಯಾಭ್ಯಾಸ. ಈಗಿನ ವಿಶ್ವವಿದ್ಯಾಲಯದ ಶಿಕ್ಷಣ ಎಷ್ಟುಮಾತ್ರಕ್ಕೂ ತೃಪ್ತಿಕರವಾಗಿ ಇಲ್ಲ. ನೂರಾರು ವಿಷಯಗಳನ್ನು ಥಳುವಳಿ ಯುವತಿಯರ ತಲೆಯೊಳಗೆ ತುಂಬಿಸಿದರೆ ಉಪಯೋಗವೇನು?

ದೇಶದಲ್ಲಿ ಮುಂದೆ ಜನಸಾಮಾನ್ಯರ ಮುಂದಾಳಾಗಬಲ್ಲ ಸಾವಿರಾರು ಯುವಕರ ಆವಶ್ಯಕತೆ ಇದೆ. ಇಂಥವರನ್ನು ಅಂದರೆ ಇದಕ್ಕೆ ಬೇಕಾದ ವ್ಯಕ್ತಿತ್ವ ಸಹಾಗೂ ನಡತೆ ಯುಳ್ಳವರನ್ನು ತಯಾರಿಸುವುದು ನಮ್ಮ ಕಾಲೇಜುಗಳ ಉದ್ದೇಶವಿರಬೇಕು.

ನಮ್ಮ ಪೂರ್ವ ಸಂಸ್ಕೃತಿ ಸರಿಯಾಗಿ ಉಳಿದಿದ್ದರೆ ಈಗ ಯೋಚನೆಪಡುವ ಅಗತ್ಯ ನಿರಲಿಲ್ಲ ಆದರೆ ಆ ಸಂಸ್ಕೃತಿಯು ಜನರು ಈಗ ಕೇವಲ ವಿರಳರಾಗಿದ್ದಾರೆ.

ನಮ್ಮ ಕಾಲೇಜು ವಿದ್ಯಾರ್ಥಿಗಳಲ್ಲಿ ನೈತಿಕ ಹಾಗೂ ಧಾರ್ಮಿಕ ಭಾವನೆಗಳು ಬೇರೂರುವಂತೆ ಹೇಗೆಸಾಧಿಸಲಹುದು?

ಭಿನ್ನಮತಗಳ ಈ ದೇಶದಲ್ಲಿ ಮತ ಸಂಬಂಧ ಶಿಕ್ಷಣದ ಏರ್ಪಾಡು ಸರಿಹೊಂದುವುದಿಲ್ಲವೆಂಬುದೇನೊ ನಿಜ ಆದರೆ ಇದಕ್ಕೆ ಉಪಾಯವೇನು?

ಜಗತ್ತಿನ ಎಲ್ಲ ತಾತ್ವಿಕ ದರ್ಶನಗಳ ಹಾಗೂ ಸಂಸ್ಕೃತಿಗಳ ಪರಿಚಯ ಈ ವಿದ್ಯಾರ್ಥಿಗಳಿಗೆ ಮಾಡಿಕೊಡಲು ಯತ್ನಿಸುವುದು ಒಂದೇ ದಾರಿಯೆಂದು ಕಾಣುತ್ತದೆ. ವಿವಿಧ ದರ್ಶನಗಳ ಅಭ್ಯಾಸ ಮಾಡುವಾಗ ನಮ್ಮ ಸಂಸ್ಕೃತಿಯ ಮೇಲ್ಮೆಯ ಅರಿವು ಇವರಲ್ಲಿ ತಾನಾಗಿ ಉಂಟಾಗುತ್ತದೆಂಬ ಬಗ್ಗೆ ಸಂಶಯವಿಲ್ಲ. ನನ್ನ ಸಂಸ್ಕೃತಿಯ ಅಭಿಮಾನ ಇವರಲ್ಲಿ ಉಂಟಾಗುವಂತೆ ಸಾಧಿಸಬೆ ಇವರು ನಮ್ಮ ದೇಶಕ್ಕೆ ಅಗತ್ಯವಿರುವ ಮುಂದಾಳುಗಳ ವಾತ್ರ ವಹಿಸಲು ಸಾಧ್ಯವಿಲ್ಲ

ರಾಜಾಜಿಯವರು ಈ ಎರಡು ಸೂಚನೆಗಳ ಪರಿಶೀಲನ ದೇಶದಲ್ಲಿ ಸರಿಯಾಗಿ ನಡೆಯುವಂತಾಗಲೆಂದು ಹಾರೈಸಬೇಕಾಗಿದೆ.

ಉದ್ಘಾಟನಾ ಸಮಾರಂಭ:

ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿವಿಧ ಸಂಸ್ಥೆಗಳ ಉದ್ಘಾಟನಾ ಸಮಾರಂಭವು ಕಳೆದ ತಾ ೩ರಂದು ಜಿಲ್ಲಾ ಕಲೆಕ್ಟರರ ಮತ್ತು ಮತ್ತು ಗವರ್ನಮೆಂಟ್ ಕಾಲೇಜ್ ಪ್ರಿನ್ಸಿಪಾಲರ ನೇತೃತ್ವದಲ್ಲಿ ಜರಗಿತ್ತು.

ಪುತ್ತೂರು – ಮಣ್ಣು ಜರಿದು ಮರಣ

ಇಲ್ಲಿಯ ೭ ಮೈಲು ದೂರದಲ್ಲಿದ್ದ ಎಳಯ ಎಂಬಲ್ಲಿ ಬ್ರಾಹ್ಮಣ ಜಾತಿಯ ಒಬ್ಬ ತಂದೆ ಮತ್ತೆ ಇಬ್ಬರು ಅವರ ಹುಡುಗರು ಮಣ್ಣಿನ ಕೆಲಸ ಮಾಡುತ್ತಿರುವಾಗ ಮೇಲಿನ ಮಣ್ಣು ಜರಿದು ೩ ಜನರೂ ಮಣ್ಣಿನ ಅಡಿಯಲ್ಲಿದ್ದರೆಂದೂ ತಂದೆ ಮತ್ತು ಒಬ್ಬ ಮಗ ನನ್ನು ಉಳಿಸಲಾಯಿತೆಂದೂ ಇನ್ನೊಬ್ಬ ಮಗನು ಸ್ವಲ್ಪ ದೂರ ಇದ್ದುದರಿಂದ ಮತ್ತು ಮಣ್ಣನ್ನು ತೆಗೆಯಲು ಸ್ವಲ್ಪ ವಿಳಂಬವಾದುದರಿಂದ ಶ್ವಾಸಕಟ್ಟಿ ಮೃತನಾದನೆಂದೂ ವಿಷಾದಕರ ಸುದ್ದಿ ಪ್ರಕಟವಾಗಿದೆ.



ಆಹಾರ ಮಂತ್ರಿಗಳ ನಿರ್ಧಾರ

ಸಂಯುಕ್ತ ಸರಕಾರದ ಆಹಾರ ಮಂತ್ರಿ ಶ್ರೀಮಾನ್ ಮೂನ್ಶಿ ರೋಡಿ ವಿಕ್ಟೋರಿಯಾ ಅವರು ಇದೇ ಬರುವ ತಾ. ೧೯-೬-೪೯ಕ್ಕೆ ಮಂಗಳೂರಿಗೆ ದಯಮಾಡಿಸಿ ತಾ. ೨೦ ರವರೆಗೆ ಉಡುಪಿಗೆ ತೆರಳಿ ಅದೇ ದಿನ ಮಂಗಳೂರಿಗೆ ಹಿಂತಿರುಗುವರೆಂದು ತಿಳಿದು ಬರುತ್ತದೆ. ಅವರು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವರು.

ಸ್ವಾತಂತ್ರ್ಯ ದಿನಾಚರಣೆ

ತಾ. ೧೫-೮-೪೯ನೇ ಸೋಮವಾರ ಬೆಳಿಗ್ಗೆ ಏಳು ಗಂಟೆಗೆ ಮಂಗಳೂರು ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ನಡೆಯುವುದು. ಮೂನ್ಶಿ ಜಿಲ್ಲಾ ಕಲೆಕ್ಟರರು ಧ್ವಜಾರೋಹಣ ಸಮಾರಂಭವನ್ನು ನೆರವೇರಿಸುವರು. ಆನಂತರ ಸಶಸ್ತ್ರ ಪೋಲೀಸ್ ದಳದ ಕವಾತು ನಡೆಯುವುದು. ಕಲೆಕ್ಟರರು ವಂದನೆಯನ್ನು ಸ್ವೀಕರಿಸುವರು.

ಉಚಿತ ಸಸಿ ಸಪ್ತಾಹ-೧೯೪೯ರಿಂದ ೨೧ರ ತನಕ

ಈ ತಿಂಗಳಲ್ಲಿ ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಸಸಿ ಸಪ್ತಾಹವು ಆಚರಿಸಲ್ಪಡಬೇಕೆಂದು ಜಿಲ್ಲಾ ಕಲೆಕ್ಟರರು ಒಂದು ಸೂಚನೆ ಹೊರಡಿಸಿರುವರು. ಈ ಸಂಬಂಧ ಸಕಲ ಏರ್ಪಾಡುಗಳನ್ನು ಮಾಡಲು ನಗರ ಪ್ರಭಾಧ್ಯಕ್ಷೆ ಶ್ರೀ ಎಲ್. ಪಿ. ಪ್ಯಾಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯು ರಚಿತವಾಗಿದೆ. ಇದರ ಕಾರ್ಯಕ್ರಮವೇನೆಂದರೆ: ತಾ. ೧೪ರ ಸಂಜೆ ಅಥವಾ ೧೫ರ ಪ್ರಾತಃಕಾಲ ಈ ನಗರದ ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಯಾವುದಾದರೂ ಉಪಯುಕ್ತ ಫಲವೃಕ್ಷ ಅಥವಾ ಇತರ ವೃಕ್ಷಜಾತಿಯಲ್ಲಿ ಉಪಯುಕ್ತವಾಗಿರುವ ಸಸಿಗಳನ್ನು ನೆಡುವುದು. ಆನಂತರ ಕೇಂದ್ರ ಮೈದಾನದಲ್ಲಿ ಪ್ರಾತಃ ೮ ಗಂಟೆಗೆ ಧ್ವಜ ವಂದನೆಯಾಗಿ ಮೆರವಣಿಗೆ ಹೊರಟು ನಗರದ ಪ್ರಾಮುಖ್ಯ ಸ್ಥಳಗಳಲ್ಲಿ ಸಸಿಗಳನ್ನು ನೆಡಲಾಗುವುದು. ಈ ಸದುದ್ದೇಶದಲ್ಲಿ ಹಿಂಗಿನ, ಬಾಳೆಯ, ಪಪ್ಪಾಯಿ, ಮೊದಲಾದ ಸಸಿಗಳು ಕೃಷಿ ಇಲಾಖೆಯ ತಿರುವನಲ್ಲಿಯೂ ಗಾಳಿ ಸಸಿ ಇತ್ಯಾದಿಗಳು ಅರಣ್ಯ ಶಾಖಾ ಅಧಿಕಾರಿಗಳಲ್ಲಿಯೂ ಬೆಲೆಗೆ ದೊರಕುವವು.

ಪ್ರಾಂತಿಕ ಕ್ಷೇಮ ಚಿಂತನೆಯ ಜಿಲ್ಲಾ ಶಾಖೆ

ಈ ಜಿಲ್ಲಾ ಶಾಖೆಯ ಸಭೆ ಈಚೆಗೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಡಾ॥ ಯು. ಎಲ್ಲಪ್ಪ ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರುಗಿ ಇದೇ ತಾ. ೧೫ನ್ನು "ಧ್ವಜ ಮಾರಾಟ ದಿನ"ವಾಗಿ ಆಚರಿಸಿ ಆ ಮೂಲಕ ಆ ನಿಧಿಗೆ ಧನ ಸಂಗ್ರಹ ಮಾಡಬೇಕೆಂದು ನಿರ್ಧರಿಸಲಾಯಿತು.

ಖೂನಿ ಆರೋಪ-ಟಾಪು ಸಜೆ

ಪೆರ್ಡಾಲ್ ಕಡೆಯ ಪುಟ್ಟಡ್ಕ ಗ್ರಾಮದ ಕುಞಪ್ಪ ಎಂಬಾತನು ಕುಜಿರಾಮ ಮಣಿಯಾಣಿ ಎಂಬಾತನ ಕೊಲೆಗೆ ಕಾರಣನಾದುದಕ್ಕೆ ಇದಕ್ಕೆ ಮೃತನಿಗೂ ಆರೋಪಿಯ ಹೆಂಡತಿಗೂ ಅನೈತಿಕ ಬಾಂಧವ್ಯವಿತ್ತೆಂಬ ಸಂಶಯವೇ ಕಾರಣ;—ಎಂಬ ಆರೋಪದ ಮೊಕದ್ದಮೆ ನಮ್ಮ ಸೆಶನ್ಸ್ ಜಡ್ಜರಲ್ಲಿ ವಿಚಾರಣೆಯಾಗಿ ಆರೋಪಿಗೆ ಜೀವಾವಧಿ ಟಾಪು ಶಿಕ್ಷೆ ವಿಧಿಸಲಾಗಿದೆ.

ಮೋಸದ ಆರೋಪ ಸಜೆ

ತನಿಯ ಎಂಬ ಹರಿಜನ ವರ್ಗದವನು ಸಂಯುಕ್ತ ಹರಿಜನ ಸಂಘ ಬಾಳೆಬೈಲು ಹರಿಜನ ಸುಧಾರಕ ಸಂಘ, ಈಶ್ವರಾನಂದ ಹರಿಜನ ಸೇವಾ ಸಂಘ, ಕೊಡ್ಡೆಬೈಲು ಮತ್ತು ಸಂಯುಕ್ತ ಹರಿಜನ ಸೇವಾ ಸಂಘ ಬಿಜ್ಜೆ ಎಂಬೀ ಆಸ್ಥಿತ್ವದಲ್ಲೇ ಇಲ್ಲದ ಸಂಘಗಳಿಗೆ ಮಂತ್ರಿಗೆ ಎಂದು ನಂಬಿಸಿ ನಮ್ಮ ಮುನಿಸಿಪಲ್ ಚಮರ್ಮೇನರೇ ಮೊದಲಾದವರಿಂದ ಹಣ ಪಡೆದ ಮೋಸ ಕೃತ್ಯದ ಆಪಾದನೆಗಾಗಿ ಒಟ್ಟು ಒಂದು ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದ್ದಾನೆ.

ಸಿಲೋನ್ ಕಡೆಯಿಂದ ಇಲ್ಲಿಗೆ ಬಂದು ತಾನು ಹುಟ್ಟಿನ ವ್ಯಾಪಾರ ನಡೆಸುವವನೆಂದು ನಂಬಿಸಿ ಇಲ್ಲಿನ ಕೆಲವರಿಂದ ಹಣ ಪಡೆದ ವಿಜಯ ನಾಯಕ ಎಂಬಾತನ ಮೇಲಿನ ಮೋಸ ಕೃತ್ಯದ ಆಪಾದನೆಗಾಗಿ ೯ ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದ್ದಾನೆ.

ವರ್ಗಾವರ್ಗಿ

ನಮ್ಮ ಟ್ರಿಜರಿ ಡೆಪ್ಯೂಟಿ ಕಲೆಕ್ಟರ್ ಶ್ರೀ ವಿ. ಎನ್. ಶೇಖರನ್ ಇವರಿಗೆ ಮಲಬಾರಿಗೆ ವರ್ಗವಾಗಿದ್ದು ಅವರ ಸ್ಥಾನಕ್ಕೆ ಇಲ್ಲಿಗೆ ಶ್ರೀ ಆರ್. ಸುಬ್ಬಯ್ಯ ಪಿಳ್ಳೆಯವರೂ ನಮ್ಮ ಸಬ್ ಡಿವಿಜನಲ್ ಆಫೀಸರ್ ಜನಾಬ್ ಎಸ್. ಅಬ್ದುಲ್ ರಹಿಮಾನ್ ಸಾಹೇಬರು ರಜೆ ಮೇಲೆ ತೆರಳಿದ್ದರಿಂದ ಅವರ ಸ್ಥಾನಕ್ಕೆ ಶ್ರೀಯುತ ವರದರಾಮ ನಾಯ್ಕರು ವರ್ಗಾಯಿಸಲ್ಪಟ್ಟಿರುವರು.

ಸಮಾಜ ಸೇವಾ ಸಮಿತಿ ಜಿಪ್ಪು

ಇದರ ಹತ್ತನೆ ವಾರ್ಷಿಕೋತ್ಸವ ಸ್ಥಳೀಯ ಸೈಂಟ್ ಜೋಸ್ ಹಾ ಎ ಶಾಲೆಯಲ್ಲಿ ಕಾಸ್ಸಿಯಾ ಹ್ಯಾಸ್ಕೂಲ್ ಹೆಡ್ ಮಾಸ್ಟರ್ ಶ್ರೀ ಪುರುಷೋತ್ತಮ ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ ಅಧ್ಯಕ್ಷ ಭಾಷಣಗಳಾದ ಮೇಲೆ ವಿವಿಧ ವಿನೋದಾವಳಿಗಳಿದ್ದುವು.

ಹಿಂದುಸ್ತಾನಿ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದುಸ್ತಾನೀ ಪ್ರಚಾರ ಸಭೆಯ ಪರೀಕ್ಷಾ ಕಾರ್ಯಕ್ರಮವು ಈ ಕೆಳಗಿನಂತಿದೆ:

ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳು ೨೧ ಜೂ ೪೯ರಂದು; ಪ್ರವೇಶಿಕಾ ೨೨, ೨೧ ೮-೪೯, ವಿಶಾರದ ಮತ್ತು ಮತ್ತು ಪ್ರವೀಣ ೨೨, ೨೧, ೨೨-೮-೪೯ರಂದು. ಮಂಗಳೂರಲ್ಲಿ ಪರೀಕ್ಷೆಗಳು ಬಿಸೆಂಟ್ ನೀಕಸಲ್ ಗರ್ಲ್ಸ್ ಸ್ಕೂಲಿನಲ್ಲಿ ನಡೆಯುವವು.

ಬೋಳೂರು-ಸೇವಾ ಸಂಘ

ಸರಕಾರದ ಗ್ರಾಮಾಭಿವೃದ್ಧಿ ಯೋಜನೆಯ ಸಹಾಯ ಪಡೆದು ಗ್ರಾಮವನ್ನು ಉದ್ಧರಿಸಲು ಪ್ರಯತ್ನ ನಡಾಡುವ ಉದ್ದೇಶದಿಂದ ಒಂದು ಸೇವಾ ಸಂಘವನ್ನು ಸ್ಥಾಪಿಸಲು ಕಳೆದ ತಾ. ೩೧ರಂದು ಸ್ಥಳೀಯ ಸಿವಾಸಿಗಳ ಒಂದು ಸಭೆಯು ಇಲ್ಲಿಯ ರೂರಲ್ ಎಲಿಮೆಂಟರಿ ಶಾಲೆಯಲ್ಲಿ ಸೇರಿತ್ತು. ಗ್ರಾಮಾಭಿವೃದ್ಧಿ ಅಧಿಕಾರಿ ಶ್ರೀ ಯಂ. ಕಾಂತಪ್ಪನವರು ಭಾಷಣ ಮಾಡಿದರು. ನಂತರ ಒಂದು ಕಾರ್ಯಕಾರಿ ಸಮಿತಿಯ ರಚನೆಯಾಯಿತು.

ಕಾರ್ಕಳ ಪುಣ್ಯ ದಿನಾಚರಣೆ

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ಹೆಮ್ಮಕ್ಕಳ ಪ್ರೌಢ ಶಾಲೆಯಲ್ಲಿ ದಿವಂಗತ ಅಮ್ಮೆಂಬಳ ಸುಬ್ಬಾರಾಯ ಸೈಗಳ ಪುಣ್ಯ ದಿನಾಚರಣೆಯು ಕಳೆದ ತಾ. ೩ರಂದು ನಿಧ್ಯಂಭಣೆಯಿಂದ ಆಚರಿಸಲ್ಪಟ್ಟಿತು. ದಿವಾನ ಸೈಯವರು ಶಾಲೆಯ ಅಸ್ತಿವಾರವನ್ನಿಟ್ಟವರು. ದುಃಖೋಪಾಧ್ಯಾಯಿನಿ ಮುತ್ತಿತರರು ಕೀರ್ತಿಶೇಷ ಸೈಯವರ ಉದಾತ್ತ ಜೀವನ ಗುಣಗಾನವನ್ನು ಮಾಡಿದ್ದರು. ಇತರ ವಿವಿಧ ವಿನೋದಾವಳಿಗಳ ಕಾರ್ಯಕ್ರಮವೂ ಇದ್ದಿತು.

ಬೈಲೂರಲ್ಲಿ ಅಹಿಂಸಾತ್ಮಕ ದೇವಿಪೂಜೆ

ಸುಧಾರಕರ ಮತ್ತು ಸ್ಥಳೀಯ ಮಹಿಸೀಯರ ಸಾಹಸ ಮತ್ತು ಪೋಲೀಸ್ ಅಧಿಕಾರಿಗಳ ನೆರವಿನಿಂದ ಬೈಲೂರಿನಲ್ಲಿ ಇದೇ ತಾ. ೭ರಂದು ನಡೆದ ವರ್ಷಾವಧಿ ಮಾರಿ ಪೂಜೆಯು ಹಿಂದಿನ ವರ್ಷಗಳಂತೆ ಪ್ರಾಣಿ ಪಕ್ಷಿಗಳ ಬಲಿದಾನವಿಲ್ಲದೆ ಕೇವಲ ಅಹಿಂಸಾತ್ಮಕ ರೀತಿಯಿಂದ ಯಶಸ್ವಿಯಾಗಿ ನಡೆಯಿತು. ಈ ಸಂಬಂಧ ಪೂಜಾರಿಗುಡಿಯ ವೊಕ್ಕೇಸರರು ಅಭಿನಂದನೀಯರಾದರು.



ಕೂಸಿನ ಮೈ ತಂಪಗಿಡುವ
ದದ್ದುಗಳನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸಬಹುದಾದ.
ಸುಗಂಧಿತ ರಿಕ್ಕಿ ನುಣ್ಣಗಿರುವ ಈ ಪೌಡರು ಎಳೆ ಚರ್ಮವನ್ನು ಸ್ನಿಗ್ಧವಾಗಿ ಮತ್ತು ಶುಭ್ರವಾಗಿಡುತ್ತದೆ. ಆಲಂಕಾರಿಕಾಲಯದ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ.
558
ಕ್ಯುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

ಭಾರತದ ಸ್ವಾತಂತ್ರ್ಯವು ರಕ್ತಪಾತವಿಲ್ಲದೆ
ಗಳಿಸಲ್ಪಟ್ಟಿತು

ಇದು ಜಾಗತಿಕ ಇತಿಹಾಸದಲ್ಲೊಂದು
ಅಪೂರ್ವ ಘಟನೆ

ಮದ್ಯಪಾನಕ್ಕೆ ದುರಾಗಿ
ನಮ್ಮ ಹೋರಾಟವೂ ಅದರಂತೇ

ಈ ಜಾಹೀರಾತಿನ ಸ್ಥಳ:

ಕೆನರಾ ಬೇಂಕ್, ಲಿಮಿಟೆಡ್.

ಇದರ ಸೇವಾದಾನ.

ಕೊಂಗ್ರೆಸ್ ಕಷ್ಟಗಳ ಕುರಿತು ಬ್ರಿಟಿಷ್ ಪತ್ರಿಕೆಯ ವಿವರ

"ನೆಹರುಗಳ ಪ್ರತಿನಿಷ್ಠೆಯಿಂದ ಪರಿಸ್ಥಿತಿ ಸುಧಾರಿಸಿತು"

ಕಲ್ಕತ್ತವು ಅಪಾಯದ ಪ್ರದೇಶ

ಲಂಡನಿನ "ಸ್ಪೆಕ್ಟೇಟರ್" ಪತ್ರಿಕೆ "ಕೊಂಗ್ರೆಸ್ ತೊಂದರೆಗಳು" ಎಂಬೆಂದು ಅಗ್ರಲೇಖದಲ್ಲಿ ಹೀಗೆಬರೆದಿದೆ:

ಬ್ರಿಟಿಷರು ಅಧಿಕಾರವನ್ನು ಕೊಂಗ್ರೆಸಿಗೆ ಬಿಟ್ಟುಕೊಟ್ಟಾಗ ಅನೇಕ ತೊಂದರೆಗಳುದ್ಭವಿಸುವುದೆಂದು ಮೊದಲೇ ಭಾವಿಸಲಾಗಿತ್ತು. ಅವುಗಳನ್ನು ಮುಂದಾಗಿ ಸರಿಪಡಿಸಿಕೊಳ್ಳುವುದೂ ಅಸಾಧ್ಯವೆನ್ನೋಣ. ಕಳೆದ ಕೆಲವು ವಾರಗಳಲ್ಲಿ ಕೊಂಗ್ರೆಸ್ಸನ್ನೆದುರಿಸಿದ ಸಂಕಷ್ಟಗಳು ನೆಹರುಗಳ ಅಪ್ರತಿಮ ವ್ಯಕ್ತಿತ್ವ ಶಕ್ತಿಯಿಂದಲೇ ಸುಧಾರಿಸಿದವೆನ್ನಬೇಕು. ಬ್ರಿಟಿಷ್ ಅಧಿಕಾರ ಮುಕ್ತಾಯವಾದಾಗ ಕೊಂಗ್ರೆಸು ದೇಶಭಕ್ತಿಯು ತನ್ನ ಸ್ವಂತ ಸೊತ್ತನ್ನಾಗಿ, ತನ್ನ ವ್ಯಯುಕ್ತೀಕ ಹಕ್ಕನ್ನಾಗಿ ಮಾಡಿಕೊಂಡಿತು (ಮುಸ್ಲಿಮರು ಬಹು ಸಂಖ್ಯಾಕರಾಗಿರುವ ಪ್ರದೇಶಗಳಲ್ಲಿನು ಸ್ಥಿಂಲೀಗೂ ಅದೇ ತರ ವರ್ತಿಸಿದೆ). ಕೊಂಗ್ರೆಸಿನ ಅವರಣದೊಳಗೆ ಕೊಮ್ಯುನಿಸ್ಟರಿಂದ ಹಿಡಿದು ಮಿಲಿಯಾಧಿಶ ಇಂಡಸ್ಟ್ರೀಗಿಕ ಧುರೀಣರೆಲ್ಲರೂ ಸೇರಿಕೊಂಡಿದ್ದರು ಬ್ರಿಟಿಷರ ವಿರುದ್ಧವಾದ ಬಾವನೆಯು ಸೂತ್ರವು ಈ ಬಿಡಿ ಮುತ್ತುಗಳನ್ನು ಜೋಡಿಸಿ ಹಿಡಿದಿತ್ತು. 1935ರ ಇಂಡಿಯಾ ಎಕ್ಟಿನ ಪ್ರಕಾರ ಕೊಂಗ್ರೆಸು ಪ್ರಾಂತ್ಯಗಳಲ್ಲಿ ಅಧಿಕಾರ ವಹಿಸಿದ್ದಾಗ ಅದು ತನ್ನ ಲೋಪದೋಷಗಳಿಗೆ ಅಸಂಪೂರ್ಣ ಅಧಿಕಾರವೇ ಕಾರಣವೆಂದು ಹೇಳುತಿತ್ತು. ಒಂದು ಕ್ಷಣದಲ್ಲಿ ಅದ ಅಧಿಕಾರ ತ್ಯಜಿಸಿ ಬ್ರಿಟಿಷ್ ಆಡಳಿತಾಧಿಕಾರಿಗಳಿಂದ ಜೈಲಿನಿಂದ ಬಿಟ್ಟು ಹೋಗುತಿತ್ತು.

ನೆಹರುಗಳ ಕಲ್ಕತ್ತಾ ಭೇಟಿ

ಈಗ ಇವೆಲ್ಲವೂ ಬದಲಾಗಿದೆ. ಈಗಿನ ಲೋಪದೋಷಗಳಿಗೆ ಯಾವ ಕಾರಣಗಳು ಸಿಗುವುದಿಲ್ಲವೇನೊ! ಸ್ವಯಂ ಶಿಸ್ತನ್ನೂ ಆಭಿವೃದ್ಧಿಪಡಿಸಿಕೊಳ್ಳುವುದಲ್ಲದೆ ಅನ್ಯನ್ನೆಲ್ಲ ಬೇರೆ ಮದ್ದಿಲ್ಲದಾಗಿದೆ ಜನತಾನಾಯಕರಿಗೆ ಈ ಬದಲಾವಣೆಯ. ಆರ್ಥವು ಇನ್ನೂ ಸರಿಯಾಗಿ ಆಗಿಲ್ಲ ಸ್ಥಳೀಕ ಕೊಂಗ್ರೆಸ್ ಸಂಸ್ಥೆಗಳು ಇನ್ನೂ ಕೇಂದ್ರಸರಕಾರವು ಬ್ರಿಟಿಷರದೇ ಆಗಿದೆಂಬ ಭಾವನೆಯುಂದೆಂಬಂತೆ ವರ್ತಿಸುತಿದ್ದುವು ಸ್ಥಳೀಕ ಆಡಳಿತದಲ್ಲಿ ಕೈಯಾಡಿಸುವ, ಸ್ವೇಚ್ಛೆಯ ಟೀಕೆಗಳನ್ನು ಮಾಡುವ ಸುಖಸಂದರ್ಭಗಳನ್ನು ಅದು ತನಗೇ ಇಟ್ಟುಕೊಂಡಿತ್ತು.

ಈಗ ಈ ತಪ್ಪು ಕಲ್ಪನೆಯನ್ನು ಸರಿಪಡಿಸಲಾಗಿದೆ ಸರಕಾರದ್ದು ಮತ್ತು ಕೊಂಗ್ರೆಸಿನ ಕಾರ್ಯಕ್ಷೇತ್ರಗಳನ್ನು ವಿಭಾಗಿಸಲಾಗಿದೆ. ಕಲ್ಕತ್ತದಲ್ಲಿನ ಪರಿಸ್ಥಿತಿಯು ಕಠಿಣವೂ, ಅಪಾಯಕಾರಕವೂ ಆಗಿದೆ ಕಾರಣ ಅಲ್ಲಿನ ಕೊಂಗ್ರೆಸ್ ಸಾಂಪ್ರದಾಯವು ಬೋಸ್ ಕುಟುಂಬದೊಡನೆ ನಿಕಟಸಂಬಂಧ ಬೆಳೆದ್ದಾಗಿದೆ ಆ ನಗರದ ಕಳವಳವು ಇನ್ನೂ ಶಾಂತವಾಗಿಲ್ಲ. ನೆಹರುಗಳ ಇತ್ತೀಚೆಗಿನ ಕಲ್ಕತ್ತಾ ಭೇಟಿಯಿಂದ ಸ್ವಲ್ಪಮಟ್ಟಿನ ಶಿಸ್ತು ಉಂಟಾಗಿದೆ. ಈಗ ಕಂಡುಬರುವ ಅತೃಪ್ತಿಯು ತೆಲ್ಲಂಗಾಣದ ರಾಜಕೀಯ ವಿದ್ಯೋಧವಾಗಿ ಮಾರ್ಪಟ್ಟು ಅರಾಜಕತೆಯಲ್ಲಿ ಅಂತ್ಯವಾಗಬಹುದಾದರಿಂದ ಜಾಗರೂಕತೆಯ ಧೋರಣೆಯು ಅವಶ್ಯಕವಿದೆ.

(ಇಸೀ ಪುಟದಿಂದ)

ಆದುದರಿಂದ ಈ ಸಂಬಂಧದಲ್ಲಿ 1945ರ ಆಗಸ್ಟ್ 14ರಿಂದ 26ರ ತನಕದ ಆ ತಾರೀಕು ಅತ್ಯಂತ ಮಹತ್ವದ್ದಾಗಿದೆ. ತಮ್ಮ ಶತ್ರುಗಳನ್ನು ಮಂಕುಬಡಿಸಲು ಇಚ್ಛಿಸಿದ್ದರೆ ನೇತಾಜಿಯವರು ಶರಣಾಗತಿಯ ದಿನದಿಂದ ಆಕ್ರಮಣದ ದಿನದ ವರೆಗಿನ ಯಾವುದಾದರೊಂದು ದಿನವನ್ನು ತಮ್ಮ ಸುಳ್ಳು ಕತೆಗಾಗಿ ಚುನಾಯಿಸುತಿದ್ದರು. ಆದರೆ ನಿರ್ದಿಷ್ಟವಾಗಿ ಆಗಸ್ಟ್ 22ರಂದು ಜಪಾನಿ ಸುದ್ದಿ ಸಂಸ್ಥೆಯೊಂದು ಫೊರ್ಮೊಸಾದಲ್ಲಿ ತ್ಸಾ. 18ರಂದು ಸಂಭವಿಸಿದ ಒಂದು ವಿಮಾನ ಅವಘಡದಲ್ಲಿ ನೇತಾಜಿಯವರು ಮೃತಪಟ್ಟರೆಂದು ಸಾರಿತು.

ಪ್ರತ್ಯಕ್ಷ ಸಾಕ್ಷ್ಯಗಳಿಲ್ಲ

ಹೀಗೆ ನೇತಾಜಿಯವರು ಯುದ್ಧ ಮುಗಿದ 4 ದಿನಗಳ ನಂತರವೂ, ಅಕ್ರಮಣದ 8 ದಿನಗಳ ಮುಂಚಿತವಾಗಿಯೂ "ಸತ್ತರು." ಅವರ ಮೃತ ಶರೀರವನ್ನು ನೋಡಿದವರಾರೂ ಇಲ್ಲ. ಪ್ರತ್ಯಕ್ಷವಾದ ಇತರ ಸಾಕ್ಷ್ಯಗಳೂ ಇಲ್ಲ ಈ ಮೃತಪಟ್ಟರೆಂದು ಪ್ರಕಟವಾದ ತಾರೀಕೇ ಅವರು ಜೀವಂತರಾಗಿರುವರೆಂಬುದನ್ನು ತೋರಿಸುವ ಸಂಗತಿಯಾಗಿದೆ.

ಭಾರತ ಸರಕಾರದವರು ಈ ಕುರಿತು ಸವಿಸ್ತಾರವಾದ ವಿಚಾರಣೆ ನಡೆಸಿ ಅದರ ಫಲಿತಾಂಶವನ್ನು ಪ್ರಕಟಿಸಬೇಕು. ನೇತಾಜಿಯವರು ಈ ದೇಶಕ್ಕೆ ಬಾಧದಂತೆ ಕೆಲವೊಂದು ಕಾಯಿದೆಯ ನಿರ್ಬಂಧಗಳೂ ಇಪೆಯೆಂಬ ಒಂದು ಕಲ್ಪನೆಯು ಸಾರ್ವಜನಿಕರಲ್ಲಿದೆ. ಅಂತಹ ಯಾವ ನಿರ್ಬಂಧವೂ ಇಲ್ಲವೆಂದೂ, ಶಾಪ್ಪಿಂರನು ಸ್ವದೇಶಕ್ಕೆ ಬರುವುದಾದರೆ ಸ್ವಾಗತಾರ್ಹನೆಂದೂ ಸಾರಬೇಕು. ಜನತೆಯ ಹೃದಯದಲ್ಲಿ ನೇತಾಜಿಯವರ ಕುರಿತು ಆಳವಾದ ಭಕ್ತಿ ಮೆಚ್ಚುಗೆಗಳಿರುವುದರಿಂದ ಸರಕಾರದವರು ಈ ಕುರಿತು ಶೀಘ್ರವಾಗಿ ಕಾರ್ಯಕ್ರಮಗಳನ್ನು ಕೈಗೆದುಕೊಳ್ಳುವುದು.

ಉಡುಪಿ ನಗರ ಸಭೆ

ಕಳೆದ ತಾ ೩೧ರಂದು ಸೇರಿದ ನಗರ ಸಭೆ ವಿಂಟಿಂಗಿನಲ್ಲಿ ಸಿಸಿ ಸಪ್ತಾಹ ಮತ್ತು ಸ್ವಾತಂತ್ರ್ಯ ದಿನಾಚರಣೆಗಾಗಿ ರೂ ೨೦೦ ರನ್ನು ಮತ್ತು ರೂ ೭೫ನ್ನು ಮಂಜೂರು ಮಾಡಲಾಯಿತು ಖಾಲಿ ಜಾಗದ ಮೇಲೆ ವಸೂಲು ಮಾಡಿದ ತೆರಿಗೆಯನ್ನು ವಾಪಾಸು ಕೊಡಬೇಕಾಗಿಯೂ, ಆ ಕಾನೂನನ್ನು ಕೀಳಬೇಕಾಗಿಯೂ ಶ್ರೀ ವಿ ಎಸ್ ಕುಡ್ವ ಮತ್ತು ವಕೀಲ್ ಶ್ರೀ ನರಸಪ್ಪಯ್ಯನವರು ಕೊಟ್ಟ ನೋಟಿಸನ್ನು ಓದಲಾಯಿತು ನಗರ ರಕ್ಷೇತ್ರದಲ್ಲಿ ಗೋವಧೆ ನಿಷೇಧಿಸಬೇಕೆಂದು ಕಲ್ಕತ್ತಾ ಗೋರಕ್ಷಣಾ ಸಮಿತಿಯ ವಿನಂತಿಯನ್ನು ರಿಕಾರ್ಡ್ ಮಾಡಲಾಯಿತು



ಚರ್ಮ ಮತ್ತು ತಲೆಭಾಗದ ವ್ಯಾಧಿಗಳು

ವಿಶ್ವವಿಖ್ಯಾತ ಜಾಂಬಕಿನಿಂದ ನಿವಾರಿಸಲ್ಪಡುವುವು

ಜಾಂಬಕಿನಲ್ಲಿರುವ ಅದ್ಭುತ ಔಷಧ ಸತ್ವಗಳು ಚರ್ಮದೊಳಗೆ ಆಳಕ್ಕೆ ಹೋರಲ್ಪಡುತ್ತವೆ. ಜಾಂಬಕ್ಕು ತುರಿತನನ್ನೂ ಉರಿಯುವಿಕೆಯನ್ನೂ ಶೀಘ್ರ ಶಮನಿಸಿ ಕೀವನ್ನು ನಿಲ್ಲಿಸಿ ವಿಷಾಣುಗಳನ್ನು ನಾಶಮಾಡಿ ಘಾತಗೊಂಡ ಚರ್ಮವನ್ನು ಗುಣಪಡಿಸುವುದಕ್ಕೆ ಇದೇ ಕಾರಣ ಖಂಡಿತವಾಗಿ ವ್ಯಾಣಕೊಬ್ಬು ರಹಿತವಾದುದು

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು

ಚರ್ಮ ವ್ಯಾಧಿಗಳಿಗೂ, ಗಾಯಗಳಿಗೂ, ಅಲ್ಲದೆ ಕ್ರಿಮಿ ಕೀಟ ಕಡಿತ, ನೋವಾಗುವ ಕಾಲು, ಮೂಲಂಖಂಡ ವೇದನೆ ಮತ್ತು ಶೀರಂದೆಲ್ಲ ವೇದನೆಗಳಿಗೂ ಅತ್ಯುತ್ತಮ

ಬಸ್ಸು ಪ್ರಯಾಣಿಕರ ಅವಗಾಹನೆಗೆ

ಪ್ರತಿದಿನ ಮಂಗ್ಳೂರಿಂದ ಬೆಳಿಗ್ಗೆ ಘಂಟೆ **5** ಮತ್ತು **5-30**ಕ್ಕೂ, ಮುಲ್ಕಿಯಿಂದ ಕೂಡಾ ಬೆಳಿಗ್ಗೆ **5** ಘಂಟೆಗೂ, ಮುಂಬ್ಯಾಗೆ ಬರೇ **36** ಘಂಟೆ ಸಮಯದಲ್ಲಿ ತಲ್ಪುವಂತೆ ಮಂಗ್ಳೂರು ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಯವರು ನವ್ರಿಸುಗಳನ್ನು ಕ್ಷಿಪ್ರ ಸಮಯದಲ್ಲಿ — ಮಂಗ್ಳೂರು ಮತ್ತು ಮೂಲ್ಕಿಯಿಂದ ಹೊರಡಿಸಿ ಕಡೂರಿಗೆ ಮಧ್ಯಾಹ್ನ **2-30**ರೊಳಗೆ ತಲ್ಪಿ ಅಲ್ಲಿಂದ ಕೂಡೇ ಹೊರಡುವ ರೆಲ್ವೆಯಲ್ಲಿ ಮುಂಬ್ಯಾಗೆ ಸೀದಾ ತಲ್ಪುವ ವಿರ್ಪಾಡು ಮಾಡಿರುತ್ತದೆ. ಟಿಕೇಟುಗಳು ಮಂಗ್ಳೂರು ಮತ್ತು ಮೂಲ್ಕಿ ಆಫೀಸಿನಲ್ಲಿ ಸರ್ವಿಸು ಬಿಡುವ ಎರಡು ದಿವ್ಸಕ್ಕೆ ಮುಂಚಿತವಾಗಿಯೇ ದೊರಕುವಂತೆ ರಿಜರ್ವೆಶನ್ ಆಫೀಸು ಕೂಡಾ ಪ್ರತೀ ದಿವಸ ಬೆಳಿಗ್ಗೆ ಘಂಟೆ **9**ರಿಂದ ಶ್ಯಾಮ **6** ಘಂಟೆ ವರೆಗೂ ತೆರೆಯಲ್ಪಟ್ಟಿದೆ. ಜಿಲ್ಲೆಯ ಇತರ ಲ್ಯಾನುಗಳಿಗೆ ಕೂಡಾ ಮಂಗ್ಳೂರಿನಲ್ಲಿ ಒಂದು ದಿವ್ಸಕ್ಕೆ ಮುಂಚಿತವಾಗಿ — ಟಿಕೇಟುಗಳು ಸಿಗುವ ವಿರ್ಪಾಡು ಕೂಡಾ ಉಂಟು.

ವಿ. ಸೂಚನೆ:— ಪ್ರಯಾಣಿಕರು ತಮ್ಮೊಂದಿಗೆ ಆದಷ್ಟು ಸಾಮಾನನ್ನು ಕಡಿಮೆ ಒಯ್ಯೋಣ್ಣಾಗಬೇಕಾಗಿ ವಿನಂತಿ.

ಮಂಗಳೂರು,
24-6-49

ಪ್ರೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed . . .	Rs. 20,00,000
Capital Paid up	Rs. 19,99,800
Reserves	Rs 8,91,000

(Regd)

ಅಮೃತಾಂಜನ

ತಲೆವೇಧನೆ, ಶಿರೋವೇದನೆ, ಜುಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ವಕ್ಕವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪನಿಯಲ್ಲಿ ದೊರೆಯುವುದು

ದಿ ಬೊಂಬೇ ಲಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ

ಇವರ ಆಫೀಸುಗಳು:

ಬೊಂಬಾಯಿ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನವ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the "puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depots: Maharata Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ನಿಪುಣಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡಿಮೆಗೊಳಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಜಾಧಿ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮಹಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 19—8—1949 [ಸಂಚಿಕೆ 33]

ನಮಗೆ ಯಾವ ಪಕ್ಷ ಸರಿಹೊಂದುವುದು

ಕಾಂಗ್ರೆಸ್ಸೊ ಸಮಾಜವಾದವೊ

ಒಂದು ವಿಚಾರಾರ್ಹ ಸಮಸ್ಯೆ

ಕಾಂಗ್ರೆಸೊ ಇಲ್ಲವೆ ಸಮಾಜವಾದವೊ? ಈ ಪ್ರಶ್ನೆ ಇಂದು ಪ್ರತಿಯೊಬ್ಬ ವಿದ್ಯಾವಂತನ ಮನಸ್ಸನ್ನು ವಿಚಾರಕ್ಕೊಳಪಡಿಸಿದೆ. ಸತ್ಯಸ್ಥಿತಿಯನ್ನು ಗ್ರಹಿಸಿಕೊಳ್ಳುವುದೂ ಸ್ವಲ್ಪ ಕಷ್ಟತರವೇ ಎನಿಸುತ್ತದೆ. ಆದರೂ ಎರಡೂ ಪಕ್ಷಗಳ ಧ್ಯೇಯ ಧೋರಣೆಗಳ ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸಿದರೆ ಇತ್ಯರ್ಥಕ್ಕೆ ಬರಲು ಸ್ವಲ್ಪ ಸುಲಭವಾಗುವುದು. ಈ ಸಂದರ್ಭದಲ್ಲಿ ಇಡೀ ದೇಶದ ನೋಟವನ್ನು ದೃಷ್ಟಿಯಲ್ಲಿರಿಸಿ ಸಾಂಸ್ಕೃತಿಕವಾಗಿಯೂ ಸಾಂವತ್ತಿಕವಾಗಿಯೂ ಅದು ಯಾವ ಪಕ್ಷವನ್ನು ಸರಿಸಿದರೆ ಸರ್ವತೋಮುಖ ಅಭಿವೃದ್ಧಿಯಾಗುವುದೆಂದೂ ನಾವು ಸ್ಪಷ್ಟವಾಗಿ ಧೃಢೀಕರಿಸಿ ಕೊನೆಯ ತೀರ್ಪನ್ನು ಕೊಡಬೇಕಾಗುವುದು.

ನಗರವೊಂದರ ಮಜೂರ ವರ್ಗವು ಬಲಗಳಂತಿರುವ ವಸತಿಗಳಲ್ಲಿ ವಾಸಿಸುತ್ತಿರುವುದನ್ನು, ನೆರಿಬಿದ್ದ ರೈತನ ಮುಖವನ್ನು ನಾವು ಸರಿಯಂತರ ಸುಖೋಪಭೋಗದ ಸದನಗಳೊಡನೆ, ಹರ್ಷದಿಂದುಬ್ಬಿದ ಗುಂಡು ಮುಖಗಳೊಡನೆ ಹೋಲಿಸುವಾಗ ತೋರುವ ತಾರತಮ್ಯವೂ, ದೇಶಿರಾಜರುಗಳ (ಈಗ ಹೆಚ್ಚಿನವರು ಮಾಯವಾಗಿರುವರು) ಅವಿವೇಕದ ಅನಾವಶ್ಯಕ ವೆಚ್ಚದ ಧೋರಣೆಯನ್ನು ಮನಗಂಡಾಗಲೂ ಸಮಾಜವಾದವು ಅತ್ಯಗತ್ಯವೆಂದು ಭಾಸವಾಗುತ್ತದೆ. ಮಜೂರರೂ ರೈತರೂ ಜನಸಂಖ್ಯೆಯ ಬಹು ಭಾಗವಾಗಿರುತ್ತಾರೆ. ಪ್ರಜಾಪ್ರಭುತ್ವ ತತ್ವ ಪ್ರಕಾರವಾದರೊ ಬಹುಸಂಖ್ಯಾಕರ ಹಿತವನ್ನೇ ಸಾಧಿಸಲು ಪ್ರಯತ್ನಗಳಾಗಬೇಕಾದುದು ಪ್ರತಿಷ್ಠಿತ ಸರಕಾರದ ಕರ್ತವ್ಯವಾಗಿರುತ್ತದೆ. ಏಗಿನ ದುರ್ದೆಶೆಯ ಪರಿಸ್ಥಿತಿಯನ್ನು ಮುಂದರಿಸಲು ನಾಗರಿಕತೆಯನ್ನು ಯಾವ ಸರಕಾರವೂ ಇಚ್ಛಿಸದು. ಈಗಿನ ಕೊಂಗ್ರೆಸ್ ಸರಕಾರ್ರವಾದರೊ ಸುಸಂಸ್ಕೃತವಾದ ಸರಕಾರ-ಬಡವರ ಪರಿಸ್ಥಿತಿಯನ್ನು ಸುಧಾರಿಸಲು ಅದು ಪಣತೊಟ್ಟಿರುವುದು.

ಈ ಸುಧಾರಣೆಗಳನ್ನು ಹೇಗೆ ಶೀಘ್ರವಾಗಿ ಕಾರ್ಯರೂಪಕ್ಕೆ ತರಬಹುದೆಂಬುದೇ ಚರ್ಚಾಸ್ಪದವಾದ ವಿಷಯ. ನೆಲ ಹೊಲಗಳನ್ನು ಸಮಾನವಾಗಿ ಹಂಚಿ ಹಾಕಿ ಇಲ್ಲವೆ ಕೈಗಾರಿಕೆಗಳನ್ನು ಸರಕಾರದ ವಶವಡಿಸಿ ಇದನ್ನು ಮಾಡಲು ಸಾಧ್ಯವೆ? ಇಲ್ಲವೆ ಆಸ್ತಿ ಪಾಸ್ತಿಗಳ ಹಕ್ಕನ್ನು ಅಧಿಕಾರವನ್ನು ಒಂದು ರೀತಿಯ ನಿಯಂತ್ರಣಕ್ಕೊಳಪಡಿಸಿ ಇದನ್ನು ಮಾಡಲು ಸಾಧ್ಯವಿದೆಯೆ? ಅದೇ ಸಮಯಕ್ಕೆ ಎಲ್ಲರಿಗೂ ಲಾಭದಾಯಕವೂ ಪ್ರೋತ್ಸಾಹ್ಯವೂ ಆಗುವಂತೆ ಸ್ವತಂತ್ರ ಉದ್ಯಮಗಳ ಆಕರ್ಷಣೆಯನ್ನು ನಾಶ ಮಾಡದೆ ಅವುಗಳನ್ನು ಹಾಗೇ ಬಿಟ್ಟು ಬಿಡಬಹುದೆ? (ರಾಷ್ಟ್ರೀಕರಣ ಮಾಡಿದರೆ ಸ್ವತಂತ್ರ ಉದ್ಯಮವನ್ನು ಅಭಿವೃದ್ಧಿಪಡಿಸುವ ಆಕರ್ಷಣೆ ಕಡಿಮೆಯಾಗುತ್ತದೆ.) ಕೊಂಗ್ರೆಸ್ ಸರಕಾರವು ಕೊನೆಯದನ್ನು ಮಾಡಲು ಪ್ರಯತ್ನಿಸುತ್ತದೆ. ರೈತರಿಗೆ ಮಜೂರರಿಗೆ ಅತೀ ಹೆಚ್ಚಿನ ಸ್ವತಿಫಲ ಸಿಗುವಂತೆ ಮಾಡುವುದು, ಅದೇ ಸಮಯಕ್ಕೆ ಸ್ವತಂತ್ರ ಉದ್ಯಮ, ಕೈಗಾರಿಕೆಗಳನ್ನು ರಾಷ್ಟ್ರೀಕರಿಸದೆ ಊರ್ಜಿತಗೊಳಿಸುವುದು.

ಒಂದು ವಿಷಹಾವಿನ ಅವಾಯನ್ನು ಅಹಿಂಸಾತ್ಮಕರೀತಿಯಲ್ಲಿ ತಪ್ಪಿಸುವುದೆಂದರೆ ಅದರ ನಂಜಿನ ಹಲ್ಲುಗಳನ್ನು ಇಲ್ಲವೆ ವಿಷದ ಚೀಲವನ್ನು ಕಳಚುವುದು. ಅದನ್ನು ಬಡಿಗೆಯಿಂದ ಹೊಡೆದು ಕೊಲ್ಲುವುದು ಹಿಂಸಾತ್ಮಕವಾಯಿತು. ಪುನಃ ಕಟ್ಟಿಸುವ ಜವಾಬ್ದಾರಿಯಿಲ್ಲದಿದ್ದರೆ ಒಂದು ಕಟ್ಟಡವನ್ನು ಸುಲಭವಾಗಿ ನೆಲಸಮಗೆಯ್ಯಬಹುದು. ಸಾಂಪ್ರತಿಕ ಸಂಪ್ರಗಳನ್ನೂ ಅದೇ ರೀತಿ ಸುಲಭವಾಗಿ ನ್ಯವಸ್ಥೆಗೊಳಿಸಬಹುದು. ಇಲ್ಲವೆ ಶಾಲಾ ವಿದ್ಯಾರ್ಥಿಗಳನ್ನು ಒಂದು ದಿವಸದ ಮಟ್ಟಿಗೆ ಶಾಲೆಯಿಂದ ಹೊರ ಉಳಿಯುವಂತೆ ಮಾಡಬಹುದು. ಇದು ಇನ್ನಷ್ಟು ಸುಲಭವಾದುದು. ಅದೇ ರೀತಿ ರೈತರು ಇತರರ ಹೊಲಗಳನ್ನು ಆಕ್ರಮಿಸಿಗೇಣಿ ಕೊಡದೆ ಇರುವಂತೆ ಅವರನ್ನು ಕದರುವುದು ಸುಲಭ. ಮತ್ತೆ ದಢೋಡೆ ಕೊಟಗಳನ್ನು ನರ್ವಹಿಸಿ ಹಣವಂತರನ್ನು ಸುಲಿಗೆ ಮಾಡಿಸಲೂ ಬಹುದು. ಸಮಾಜವಾದವಾದರೂ ಈವೊಂದು ರೀತಿಯ ಮೇಲೆ ಅಭಿವೃದ್ಧಿ ಮಾಡಲ್ಪಟ್ಟೊಂದು ವಿಧಾನವಾಗಿದೆ. ಆದರೆ ಇಂದಿನ ರಾಷ್ಟ್ರೀಯ ಅವಶ್ಯಕತೆಯ ಕಾಲದಲ್ಲಿ ಸಮಾಜವಾದಿಗಳು ತಮ್ಮ ಅನುಯಾಯಿಗಳಾದ ಕೆಲಸಗಾರರಿಂದ ಹೆಚ್ಚಿನ ಶ್ರದ್ಧವನ್ನು ಮಾಡಿಸಲೂ, ತನ್ಮೂಲಕ ಹೆಚ್ಚು ಉತ್ಪಾದನೆಯನ್ನುಂಟು ಮಾಡಿಸಲು ಸಮರ್ಥರಿರುವರೆ?

ಎಲ್ಲಾ ಆಸ್ತಿ ಪಾಸ್ತಿಗಳು ಕಳವಿನ ಸೊತ್ತುಗಳಲ್ಲ; ಬಡತನವು ಬಂಡವಾಳಶಾಹಿಯ ಪರಿಣಾಮವೇ ಅಲ್ಲ. ಅವಶ್ಯಕತೆಯಿರುವ ವಸ್ತುಗಳನ್ನು ತಯಾರಿಸಿ ಮೂರಿಪುದರ ಪರಿಣಾಮವಾಗಿ ಬಂದ ಲಾಭವೇ ಸೊತ್ತಾಗುವುದು. ಸಮಾಜವು ಆ ವಸ್ತುಗಳಿಗೆ ಕೇಳಿದ ಬೆಲೆ ಕೊಡುವುದು. ಸಮಾಜದ ಅವಶ್ಯಕತೆಗಳನ್ನು ತಿಳಿಕೊಳ್ಳಲಾಗದೆ ಇರುವುದರ ಫಲವೇ ಬಡತನ; ಒಂದು ನೇಳಿ ಅದನ್ನು ತಿಳಿಕೊಂಡರೂ ಅಂತಹ ಅನಾವಶ್ಯಕ ವಸ್ತುಗಳನ್ನು ತಯಾರಿಸಲು ಶ್ರಮ ನಿಹಸದೆ ಇರುವುದರಿಂದ ಬಡತನವು ಪರಿಣಮಿಸುತ್ತದೆ. "ಇದ್ದವರ" ಸೊತ್ತನ್ನು "ಇಲ್ಲದವರಿಗೆ" ಹಂಚುವುದರಿಂದ ಬಡತನವನ್ನು ನೀಗಿಸಲು ಸಾಧ್ಯವಿಲ್ಲ. ಎಲ್ಲರಿಗೂ ಸರಾಸರಿಯಾಗಿ ಹಂಚಿ ಬರುವ ಐಶ್ವರ್ಯವು ಈಗಿನ ಆವಶ್ಯಕತೆಗಳನ್ನು ತೃಪ್ತಿಪಡಿಸುವಷ್ಟಿರಲಾರದು. ಆದುದರಿಂದ ಈಗಿನ ಮಹತ್ವದ ವಿಷಯವೆಂದರೆ: ಬಡವರು ತಮ್ಮ ಶ್ರಮ ಚಾತುರ್ಯದಿಂದ ಸಾಕಷ್ಟನ್ನು ಗಳಿಸಲು ಇರುವ ಅಭ್ಯಂತರಗಳನ್ನು ಹೇಗೆ ಹೋಗಲಾಡಿಸುವುದು? ಬಂಡವಾಳಶಾಹಿಗಳ ಬಳಿ ಕೇವಲ ಬಂಡವಾಳವಿರುವ ವಸ್ತುಕ್ಕೇ ಅವರಲ್ಲಿ ಹಣವು ಹೆಚ್ಚಿಬ್ಬಾಗಿ ಶೀಘ್ರವಾಗದಂತೆ ಏನು ಮಾಡಬಹುದು?

ಈ ಸಮಸ್ಯೆಯನ್ನು ನಿವಾರಿಸುವುದೇ ಇಂದಿನ ಕೊಂಗ್ರೆಸ್ ಸರಕಾರಗಳ ಪ್ರಯತ್ನವಾಗಿದೆ.

ಬಡವರು ತಮ್ಮ ಕೈಗೆ ಬರುವ ಹಣದಲ್ಲಿ ಬಹು ಅಂಶವನ್ನು ಉಳಿಸಿಕೊಳ್ಳಲೆಂದು ಮದ್ಯಪಾನ ನಿಷೇಧವನ್ನು ಜಾರಿಗೆ ತರಲಾಯಿತ್ತು.

ಕೈಗಾರಿಕೆಯಲ್ಲಿರುವ ಮಜೂರರಿಗೆ ಯೋಗ್ಯ ವಸತಿ ಗೃಹಗಳನ್ನು ಕಲ್ಪಿಸಲೂ ಪ್ರಯತ್ನಗಳಾಗುತ್ತಿವೆ. ಕೈಗಾರಿಕೆಯ ಸಾಮರ್ಥ್ಯಕ್ಕನುಗುಣವಾಗಿ ಮಜೂರಿಯನ್ನು ಒಂದು ನಿರ್ದಿಷ್ಟ ಪ್ರಮಾಣಕ್ಕೆ ತರಲು ಪ್ರಯತ್ನಗಳಾಗುತ್ತಿವೆ.

ಮಜೂರ ಶ್ರೇಯೋಭಿವೃದ್ಧಿ ಸಂಸ್ಥೆಗಳೂ, ಆಸ್ಪತ್ರೆಗಳೂ, ಕೆಂಟೀನುಗಳೂ, ಪ್ರೊವಿಡೆಂಟ್ ಫಂಡ್ ಸೌಕರ್ಯಗಳೂ, ಪೊಡಲಾಡುವನ್ನು ನಿರ್ವಹಿಸಲಾಗಿದೆ.

ಸಾಲ ನಿವಾರಣಾ ಮಸೂದೆಯಿಂದ ಕೃಷಿಕರ ಸಾಲದ ಹೊರೆಯನ್ನು ಕಡಿಮೆ ಮಾಡಲಾಗಿದೆ. ಒಕ್ಕಲುತನ ಮಸೂದೆಯಿಂದ ಆಸ್ತಿ ಒಡೆತನದಲ್ಲಿ ಒಂದು ಪಾಲು ಗೇಣಿಹುಲ್ಲಿದೆ ರೈತನಿಗೆ ಸಿಗುವಂತೆ ಮಾಡಲಾಗಿದೆ. ಕಡ್ಡಾಯಶಿಕ್ಷಣ ಜಾರಿಗೆ ತರಲಾಗುತ್ತಿದೆ. ಆಪಾಯ್ಯಸ್ಥರನ್ನು ಮುಕ್ಕಳನ್ನು ಮಜೂರರನ್ನಾಗಿ ಕೆಲಸಕ್ಕಿಡಬಾರದೆಂದು ನಿಷೇಧಿಸಿ ಭಾವಿ ಜನಾಂಗದ ಸರಂಕ್ಷಣೆ ಮಾಡಲಾಗಿದೆ. ಮಜೂರರ ಪ್ರಾತಿನಿಧಿಕ ಸಭೆಗಳ ಸ್ಥೀಪಡಿಸಿ ಕಾರ್ಖಾನೆ ಆಡಳಿತದಲ್ಲಿ ಅವರಿಗೆ ಭಾಗವಹಿಸುವ ಸೌಕರ್ಯ ಕೊಡಲಾಗಿದೆ: ಸಂಸ್ಥಾನಗಳೂ ಜಾಗೀರು, ಜಮೀನ್ದಾರಿಗಳೂ ಪ್ರಾಂತ್ಯಗಳಲ್ಲಿ ವಿಲಯನ ಹೊಂದುವಂತೆ ಮಾಡಲಾಗಿದೆ, ಮಾತ್ರವಲ್ಲ ಕೈಗಾರಿಕೆಯಲ್ಲಿ ಹಂಚಿಲ್ಲುಡುವ ಲಾಭಾಂಶಕ್ಕೆ ಒಂದು ಮಿತಿಯನ್ನು ಕಲ್ಪಿಸಲಾಗಿದೆ.

ಹೀಗೆ ಭಾರತ ದೇಶವು ಶ್ರೇಯಸ್ಕರವಾಗಿ ಅಭಿವೃದ್ಧಿ ಹೊಂದುವಂತೆ ಸಮೆತಿಸಿವಾದದ ತಳಹದಿಯನ್ನೇ ಇಡಲಾಗಿದೆನ್ನಬಹುದು. ಇನ್ನು ಕಟ್ಟಡವು ಮೇಲಕ್ಕೆ ಬರುವ ಕೆಲಸವು ಮೆಲ್ಲಗಾಗುತ್ತಿದೆಯಾದರೆ ಆ ತಪ್ಪು ಸರಕಾರದ ಯೋಜನೆಯದಲ್ಲ. ಮಜೂರರ, ವಸ್ತುಗಳ ಮಕ್ಕು ಬಂಡವಾಳದೆ ಕೊರತೆಯೇ ಅದಕ್ಕೆ ಕಾರಣ.

(ತಿರುಗು ನೋಡಿ)

ಸತ್ಯಮೇವ ಜಯತೇ ನ ಅನೃತಮ್

ಭಾರತ ಸರಕಾರದ ರಾಜ್ಯಭಾರ ನೀತಿ

"ಸತ್ಯವು ಮಾತ್ರ ಜಯಿಸುವುದು, ಅನೃತವೆಂದಿಗೂ ಜಯಿಸದು" ಎಂಬುದು ಉಪನಿಷದ್ವಾಕ್ಯ. ಇದೇ ನೊದಲಭಾಗವು ಹೊಸದಾಗಿ ಉದಯಿಸಿದ ಭಾರತದ ನೀತಿ ಸೂತ್ರವಾಗಿಬೆಳಕಿಗೆಬಂದಿದೆ.

ಪುರಾತನ ವೇದ ಶಾಸ್ತ್ರಗಳಿಂದ ತೆಗೆದ ಈ ನೀತಿ ರತ್ನದ ಆರಿಸುವಿಕೆಯ ಕುರಿತು ಅನೇಕ ಸಮಸ್ಯಾತ್ಮಕ ಪ್ರಶ್ನೆಗಳು ಉದ್ಭವವಾಗಿವೆ. ಜಾತ್ಯಾತೀತವಾದ ರಾಷ್ಟ್ರ ಸರಕಾರವು ಇಂತ ಧರ್ಮಭಾವನೆಗೆ ಸಂಬಂಧಪಟ್ಟ ನೀತಿ ಸೂತ್ರವನ್ನು ತನ್ನ ರಾಜಕಾರಣದಲ್ಲಿ ಬಳಸಲೊಪ್ಪಬಹುದೆ? ಸತ್ಯವೊಂದು ಮಾತ್ರ ಜಯಿಸುವುದೆಂಬ ವಿಷಯದ ಮೇಲೆ ನಾವು ನಮ್ಮೆಲ್ಲ ವ್ಯವಹಾರವನ್ನು ನಡೆಸಲು ಪ್ರಯತ್ನಿಸಬಹುದೆ? ಸತ್ಯವು ನಿಜವಾಗಿ ಜಯಿಸುವುದೇ? ನಿಜವಾಗಿ ಸ್ವತಂತ್ರ ಮತ್ತು ವ್ಯಕ್ತಿಕ ಜೀವನದಲ್ಲಿ ಅದನ್ನೂ ನಿಜವೆಂದು ಹೇಳಲಿಕ್ಕಾಗುವುದಿಲ್ಲ. ಒಳ್ಳೆಯ ಮನುಷ್ಯನು, ಸತ್ಯವಂತನು ಯಾವಾಗಲೂ ವಂಚನೆಮಾಡುವ ಅಸತ್ಯಾಚರಣೆಯ ಮನುಷ್ಯನೆದುರು ಸೋತು ಹೋಗುವನು. ಆರ್ಥಿಕ ಲಾಭವಾಗುವಲ್ಲಿ ಸತ್ಯ ತತ್ವವು ಜಯಿಸುವಾಗ ಹೆಚ್ಚು ಸಂದರ್ಭಗಳಲ್ಲಿ ಕಾಲವು ಮಿಗುವುದು. ಸಮಾಜದ ಸಾಮುಯಿಕ ಜೀವನದಲ್ಲಾದರೂ ಸತ್ಯವು ಜಯಿಸುವುದೆ? ಸತ್ಯವನ್ನೇ ಅನುಸರಿಸುವವ ದೇಶವನ್ನು ಆಳಲಾರ್ಹ ಸತ್ಯದ ಮಿತಿಯನ್ನರಿತವನಿಗೆ ರಾಜಸೂತ್ರವು ಸಲ್ಲುವುದು. ಅವನೇ ರಾಜಕೀಯ ಮುತ್ಸದ್ದಿಯೆನಿಸುವನು. ಖಂಡಿತವಾಗಿ ಸತ್ಯವನ್ನನುಸರಿಸಿದರೆ ವಾಣಿಜ್ಯ ವ್ಯವಹಾರವು ಸ್ವಲ್ಪ ಹೊಂದುವುದು, ಸಾಮಾಜಿಕ ಅಂತರ್ ವ್ಯವಹಾರಗಳು ಕೇವಲ ಕೊಳ್ಳು ಕೊಡುವಿಕೆಯ ಮಟ್ಟಕ್ಕಿಳಿಯುವವು, ರಾಜಕೀಯ ಜೀವನವು ಹಾಸ್ಯಾಸ್ಪದ ರೂಪದ್ದಾಗುವುದು.

✠

ಅಂತರ್ರಾಷ್ಟ್ರೀಯ ವ್ಯವಹಾರದಲ್ಲೂ ಈ ತರದ ತತ್ವವನ್ನು ಸ್ವೀಕರಿಸಿ ವರ್ತಿಸಲು ಸಾಧ್ಯವಾಗುವಂತಹ ವರಿಷ್ಠಿತಿಯಾದರೂ ಇದೆಯೆ? ಇತಿಹಾಸವಾದರೂ ಸುಳ್ಳು ವಂಡನೆಗಳಿಗಿಂತ ಸತ್ಯವೇ ಮೇಲೆಂಬುದನ್ನು ತೋರಿಸುತ್ತದೊ? ನಿಜಸಂಗತಿಯು ನಾವು ಕಲ್ಪಿಸಿದುದಕ್ಕೆ ತೀರ ವಿರುದ್ಧವಾಗಿದೆನ್ನಬೇಕು. ಕುರುಕ್ಷೇತ್ರದ ಯುದ್ಧವಾದರೂ ಹೇಗೆ ಜಯಿಸಲ್ಪಟ್ಟಿತು? ಧರ್ಮರಾಜ್ಯವನ್ನು ಸಂಸ್ಥಾಪಿಸಲೋಸುಗ ಪಾಂಡವರು ಸಂದಿಗ್ಧ ಸಮಯದಲ್ಲಿ ಅಸಕ್ಯದ ವಂಚನೆಗಳನ್ನಾಚರಿಸಿಯೇ ಅಲ್ಲವೆ ಜಯಸೀಲರಾದರು? ಆ ಉನ್ನತ ನೀತಿ ಶೂರತೆಯ ಕರ್ಣನನ್ನು ಬೀಳಿಸಲಾ ದೇವತೆಗಳೇ ಒಳಸಂಚು ನಡೆಸಲಿಲ್ಲವೆ? ದೇಶಕ್ಕೆ ತನ್ನ ದ್ರೋಹ ಬಗೆದ ವಿಭೀಷಣನು ಮರೆಹೊಕ್ಕಾಗ ಅವನಿಗೆ ಆಶ್ರಯವಿತ್ತು ಅವನಿಂದ ಶತ್ರುದೇಶದ ರಹಸ್ಯಗಳನ್ನು ತಿಳಿದ ರಾಮನು ಜಯಶೀಲನಾದುದು ಯಾವ ಪ್ರಾಮಾಣಿಕತೆ ಮತ್ತು ಸತ್ಯ ಸಂಧತೆಯಿಂದೆನ್ನಬೇಕು? ಇತ್ತೀಹಾಸವೆ ಹೇಳುತ್ತಿದೆಯಲ್ಲಾ! ಮೊದಲನೇ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳು ಕೊನೆಕೊನೆಗೆ ಕೈಕೊಂಡ ವಂಚನಾಸ್ಪದವಾದ ಪೈಚಾರಿ ನೀತಿಯ ಪರಿಣಾಮವಾಗಿ ಜರ್ಮನರ ಅಖಂಡತೆಯಲ್ಲಿ ಬಿರುಕುಂಟಾಗಿ ಸೋಲಿನಲ್ಲಿ ಸರಣಿಮಿಡಿತೆಂದು ಹೇಳಲಾಗಿದೆ. ಕೇವಲ ಬಾಯಿ ಹೇಳಿಕೆಯ ಮಟ್ಟಿಗಾದರೂ ಸಿದ್ಧಾಂತವಾಗಿ ಹೇಳಲಾಗದ ನೀತಿ ತತ್ವವನ್ನು ರಾಜಕಾರಣದ ಬೀಜ ಮಂತ್ರವಾಗಿ ಸ್ವೀಕರಿಸುವುದು ಎಷ್ಟರ ವಿವೇಕ? ಒಳ್ಳೆದು, ಸಾಮಾನ್ಯ ಮನಸ್ಸುಗಳಿಗೆ ಹೊಳೆಯುವ ಈ ವಿಚಾರಗಳಿಲ್ಲಿ ಒಂದು ಕಡೆಯವು.

✠

ಮೇಲಿನ ತರ್ಕವೆಲ್ಲವೂ ನಿಜವೆ? ಎಂದು ನುತ್ತೆ ಪ್ರಶ್ನಿಸಬೇಕಾಗುತ್ತದೆ. ಕಾಲಕಾಲಗಳಲ್ಲಿ ಇನ್ನವೆತ್ತಿದ ವಿವೇಕಿಗಳೂ ಜ್ಞಾನಿಗಳೂ ಯಾವ ಸತ್ಯಕ್ಕೆ ನಿರ್ವಾಜ್ಯವಾದ ಶಕ್ತಿಯಿಟ್ಟಿ, ಅದಕ್ಕೆ ವಿಜಯವು ದೊರೆಯಬೇಕಾದುದು ಅನಿವಾರ್ಯವೆಂದು ನಿರೂಪಿಸಿದ್ದು ತಪ್ಪೇನು? ಸತ್ಯವು ಶಾಲಾ ಪಾಠ ಪುಸ್ತಕಗಳಲ್ಲಿ ಮಾತ್ರ ಜಯಿಸುವುದೇನು?

ನಾವು ಹಾಗೆಂದಿಗೂ ಎಣಿಸುವುದಿಲ್ಲ. ನೀತಿಗಳು ಎಷ್ಟೊ ಇವೆ. ಮಾನವನ ವಶ ಸ್ವಭಾವದತ್ತದ ಒಲುಮೆಯನ್ನು ಸಾಮ್ಯಗೊಳಿಸಿ ಸಮಾಜದ ಸತ್ಸಂಬಂಧತ್ವ ಅವನನ್ನು ಮಾರ್ದವಿಸಲು ನಿರ್ದೇಶಿಸಲ್ಪಟ್ಟ ಅದೆಷ್ಟೊ ನೀತಿಸೂತ್ರಗಳೂ ಕಟ್ಟು ಕಟ್ಟಳೆಗಳೂ ಇವೆ. ಕಾಲ ಕಾಲಕ್ಕನುಗುಣವಾಗಿ ಈ ನೀತಿ ಸೂತ್ರಗಳಲ್ಲಿ ಮಾರ್ಪಾಡುಗಳೂ ಆಗಿವೆ. ಆದರೆ ಕೆಲವು ಮೂಲಭೂತ ಸಿದ್ಧಾಂತಗಳು ಯಾವ ಕಾಲಕ್ಕೂ ಬದಲಾಗದಂತವುಗಳಾಗಿ, ಧೃಡವಾಗಿ ನಿಂತಿರುತ್ತವೆ. ಅವು ಎಲ್ಲಾ ಜನರಿಗೂ ಜನಾಂಗಗಳಿಗೂ ತಕ್ಕದಾದವುಗಳು.

ಕೆಲವು ತತ್ವಗಳು ಪ್ರಕೃತಿಯ ನಿಜ ಸ್ವಭಾವಕ್ಕನುಗುಣವಾಗಿವೆ. ಅವುಗಳ ತಳಹದಿಯ ಮೇಲೇ ಜೀವನದ ಚಲನವಲನಗಳೂ ಸಾಮಾಜಿಕ ಸಂಸ್ಥೆಗಳೂ ಅಧರಿಸಿಕೊಂಡಿರುವವು ಕೆಲವು ತತ್ವಗಳು ಶಾಶ್ವತವಾಗಿ ನಿಂತಿವೆ. ಈ ತತ್ವಗಳು ಸೃಷ್ಟಿಯ ಎಲ್ಲಾ ಚರಾಚರಾ ಸೃಜನೆಗಳ ಏಕ ರೂಪತೆಯನ್ನು ತೋರಿಸುತ್ತವೆ. ಸೃಷ್ಟಿಯಲ್ಲಿನ ವಸ್ತುಗಳು ಪರಸ್ಪರ ಸಾಮರಸ್ಯದಿಂದ ವರ್ತಿಸುವುದು ಒಂದು ವಿಷಯ. ಬಿಸಿಲಿನಿಂದ ನೋಡವಾಗುವುದು, ನೋಡ ತಣಿದು ನಿರಾಗುವುದು ಇತ್ಯಾದಿ ಸಂಗತಿಗಳು. ಈ ಸಾಮ್ಯರಸ್ಯತೆಯ ಶಿಶುವೇ ಸೌಂದರ್ಯವೆಂಬುದು. ಇದು ಇನ್ನೊಂದು ಶಾಶ್ವತ ವಿಷಯ. ಸತ್ಯವೇ ಈ ಶಾಶ್ವತ ತತ್ವಗಳ ಆತ್ಮರೂಪನವಾದುದು. ಈ ಕಾರಣಕ್ಕಾಗಿಯೇ ಅದನ್ನು ವಿಶ್ವದಲ್ಲೆಲ್ಲೂ ಜೀವಂತವಾದ ಧ್ಯೇಯವನ್ನಾಗಿ ಸ್ವೀಕರಿಸಲಾಗಿದೆ. ಎಲ್ಲಾ ಧರ್ಮಸಂಸ್ಥಾಪಕರೂ, ತತ್ವಜ್ಞಾನಿಗಳೂ ಅದರ ಮಹಿಮೆಗೆ ತಲೆವಾಗಿರುತ್ತಾರೆ.

✠

ಈಗ ಈ ಸತ್ಯವೆಂದರೇನೆಂಬುದನ್ನು ವರ್ಯಾಲೋಚಿಸೋಣವೆ? ಇತರ ಅಳವಾದ ಕರ್ತವ್ಯಾರ್ಥಕ್ಕೆ ತೈಯಿಕ್ಕದೆ ನಾವದನ್ನು ಸರಿಯಾದ ವಿಚಾರವೆಂದೂ, ಸರಿಯಾದ ಜ್ಞಾನವೆಂದೂ ಮತ್ತು ಸ್ಥಿರವಾದ ಜೀವನದ ಒಂದು ರೂಪವೆಂದೂ ವರ್ಣಿಸಬಹುದು. ನಾವು ಸತ್ಯವನ್ನನುಸರಿಸುತ್ತೇವೆ, ಕಾರಣ ಅದು ನೇರವಾದುದೂ, ಪ್ರಕೃತಿ ಸಹಜವಾದುದೂ ಆದ ಮಾರ್ಗವು; ಸರಿಯಾದುದನ್ನೇ ಮಾಡಬೇಕಾದುದು ಮಾನವ ಘನತೆಗೆ ಯೋಗ್ಯವಾದುದು. ಸತ್ಯವು ಸ್ವಯಂಶಕ್ತಿ ಗರ್ಭಿತವಾದುದು. ಅದರ ಸರಿಪೂರ್ಣತೆಗೆ ಯಾವ ಕೃತ್ರಿಮ ವಿಷಯಗಳ ಸಹಾಯವೂ ಬೇಕಾಗಿಲ್ಲ. ಅದು ನೈತಿಕ ಇಲ್ಲವೆ ಅನೈತಿಕವಾದುದಲ್ಲ. ಆದರೆ ಅದೊಂದು ನೀತಿ. ಅದಕ್ಕೆ ಧಾರ್ಮಿಕ ಬೆಂಬಲವಿಲ್ಲದಿದ್ದರೂ ಆಗುವುದು. ಆದುದರಿಂದಲೇ ವ್ಯಾಪಾರಿ ಜನಾಂಗವೆನಿಸಿದ ಆಂಗ್ಲರು ಕೂಡ "ವ್ಯಾಪಾರಾಣಿಕತೆಯೇ ಕೊನೆಯಲ್ಲಿ ಸತ್ಫಲವನ್ನು ಕೊಡುವುದು" ಎಂಬ ಸೂತ್ರವನ್ನು ತಮ್ಮ ಜನಾಂಗದ ನೀತಿಯಾಗಿ ಬೋಧಿಸಿದರು. ಈ ದೃಷ್ಟಿಕೋನದಲ್ಲಿ ಯಾವ ಲೌಕಿಕ ಇಲ್ಲವೆ ಲಾಭಾರ್ಥದ ವಿಷಯಗಳ ನಿಜಾರಕ್ಕೆ ಯಾವ ಪ್ರಾಧಾನ್ಯತೆಯಿಲ್ಲ. ಲಾಭದೃಷ್ಟಿಯು, ಹೊರತೋರುವಿಕೆಯು ಪ್ರಾಮಾಣಿಕತೆಯು ಅರೆ ಪಶುತ್ವವಿರುವ ಮಾನವನಿಗೆ ಸಲ್ಲುವುದು. ಆದರೆ ಮಾನವನು ಮನೋ ವಿಕಾಸಹೊಂದಿದವನಾಗುವಾಗ ಅವನಲ್ಲಿ ಉದಾತ್ತವೂ ಹೆಚ್ಚು ಘನವೂ ಆದ ಧ್ಯೇಯಭಾವನೆಗಳಿಗೆಡೆಯಾಗುವುದು.

✠

ಭಾರತದಲ್ಲಿನ ಜನತೆಯ ನಾಡಿಯಲ್ಲಿ ಘನೋನ್ನತ ಧ್ಯೇಯ ಧೋರಣೆಯ ಸಾಂವುದಾಯವು ಹರಿಯುತ್ತಿದೆ. ಸತ್ಯಸಾಧಕನಿಗೇ ಇಲ್ಲಿ ಹೆಚ್ಚಿನ ಗೌರವವು ಸಲ್ಲುವುದು. ಕಳೆದ ಅರ್ಧ ಶತಮಾನದಲ್ಲಿ ಅನೇಕಾನೇಕ ಭಾರತೀಯರು-ಸ್ತ್ರೀ ಪುರುಷರು-ಈ ಮಹೋನ್ನತ ತತ್ವಾದರ್ಶವನ್ನನುಸರಿಸಿ ಬಂಧವಿಮೋಚನೆಗಾಗಿ ಹೋರಾಟವೆಸಗಿರುವರು.

ಸತ್ಯವೆಂಬುದು ಅವ್ಯಕ್ತವಾದೊಂದು ಶಕ್ತಿ, ಅದು ಚೈತನ್ಯಾತ್ಮಕ ಸ್ಫೂರ್ತಿ ಹುಟ್ಟಿಸುವುದು, ಜೀವನವನ್ನು ಅರಳಿಸಿ ಶೋಭಿಸುವುದು, ಅದರ ವಿರುದ್ಧವಾದ ಅಸತ್ಯವು ಸತ್ಯದ ಶಕ್ತುವಾಗಿದೆ. ಅದು ಅಂಧಕಾರಕ್ಕೆ ಸರಿಸವೂನವಾದುದು. ತಾತ್ಕಾಲಿಕವಾಗಿ ಅಸತ್ಯ ಮತ್ತು ಅದರ ಬಳಗಕ್ಕೆ ಸೇರಿದ ಇತರ ಅವಲಕ್ಷಣದ ಅನತಾರಗಳು ಯಶಸ್ಸನ್ನು ಪಡೆದುದನ್ನು ನಾವು ಕಾಣಬಹುದು. ಮಾನವನ ಅಸರಿಪೂರ್ಣ ವಿಕಾಸದ ವರಿಷ್ಠಿತಿಯಲ್ಲಿ ಇದು ಸರಿದೋರಬಹುದು. ಆದರೆ ಅದು ಮಾನವನನ್ನು ಖಂಡಿತಸೋಲಿಸುವುದು. ಮನುಷ್ಯ ತನ್ನ ವ್ಯಕ್ತಿತ್ವದ ಗೌರವವನ್ನೇ ಇದರಿಂದ ಕಳಕೊಳ್ಳುತ್ತಾನೆ. ಬಲಿಷ್ಠ ವ್ಯಕ್ತಿ ಹೇಗೊ ಹಾಗೆ ಬಲಿಷ್ಠ ಜನಾಂಗವೊಂದು ಮಾತ್ರ ಸತ್ಯದ ದೀವಿಗೆಯನ್ನೆತ್ತಿ ಹಿಡಿಯಬಲ್ಲುದು.

(ಗನೇ ಪುಟದಿಂದ)

ಇಷ್ಟಾದರೂ ಈ ಯೋಜನೆಯನ್ನು ಯಶಸ್ವಿ ಮಾಡಲು ಸರಕಾರವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಈಗಿನ ಬಿರುಸು ಬಿರುಗಾಳಿಯ ವರಿಸ್ಥಿತಿಯಲ್ಲಿ ಸರಕಾರದ ಶಕ್ತಿಯನ್ನು ಹೆಚ್ಚು ಮಾಡಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕಾದುದು ಅತ್ಯಂತ ಮಹತ್ವದ ಕರ್ತವ್ಯವಾಗಿದೆ. ಆಗಲೇ ಸರಕಾರಕ್ಕೂ ಧೈರ್ಯದಿಂದ ತನ್ನ ಯೋಜನೆಗಳಲ್ಲಿ ಮುಂದುವರಿಯಲು ಸಾಧ್ಯವಾಗುವುದು.

ಪ್ರಸ್ತುತದ ಸರಕಾರಕ್ಕೆ ವಿರೋಧವನ್ನು ಕಲ್ಪಿಸುವುದರಿಂದ ಸಮಾಜವಾದಿ ಪಕ್ಷಕ್ಕೆ ಯಾವ ಲಾಭವೂ ಆಗದು. ಅದರಿಂದ ಸಮಾಜವಾದಕ್ಕೆ ಸಹಾನುಭೂತಿಯಿರುವ ಪಕ್ಷಗಳೂ ಅದಕ್ಕೆ ವಿರುದ್ಧವಾಗಿ ಸಂಸ್ಥಿತವಾಗುವಂತೆ ಮಾಡಿದ ಹಾಗಾಗುವುದು. ಕೊಂಗ್ರೆಸ್ ವಿರೋಧಿಗಳಾದ ಎಲ್ಲಾ ಪಕ್ಷಗಳೊಡನೆ ಕಣ್ಣು ಕಟ್ಟಿನ ಮೈತ್ರಿ ಬೆಳೆಸಿ ಐಕ್ಯ ಮಾಡ ನೋಡುವುದು ಸುಲಭ. ಆದರೆ ತಮ್ಮ ತಮ್ಮ ಧ್ಯೇಯಗಳನ್ನು ಕಾರ್ಯರೂಪಕ್ಕಿಳಿಸುವಾಗ ನಿಜವಾದ ಕೊಂದರೆಗಳುದ್ಭವಿಸುವವು. ಈಗಿನ ಸೋಶಲಿಸ್ಟ್ ಪಕ್ಷದವರಿಗೆ ಜನತಾ ಸಂಪರ್ಕ ಮಾಡಲು ಅಪಿಷ್ಟು ಕಷ್ಟನಾಗುತ್ತಿದೆಯೆಂಬ ಒಂದೇ ಸಂಗತಿಯು ಧಾರಾಳವಾದ ನಿದರ್ಶನವಾಗಿದೆ. ಮತ್ತೂ ಹಟ ಸಾಧನೆ ಮಾಡ ಹೊರಟರೆ ದೇಶದಲ್ಲಿ ಅರಾಜಕತೆಯೂ ಅವ್ಯವಸ್ಥೆ ಅಶಾಂತಿಗಳೂ ಉಂಟಾಗುವವು. ಇದನ್ನು ಯಾವ ಶಾಂತಪ್ರಿಯ ಪ್ರಜೆಯೂ ಇಚ್ಛಿಸುವುದಿಲ್ಲ. ಮನೆ, ಮಡದಿಮಕ್ಕಳನ್ನು, ಸೊತ್ತು ಸಂಸಾರವನ್ನು ಅಪಾಯದಲ್ಲಿ ದಬ್ಬಲು ಯಾರಿಗೆ ಮನಸ್ಸಿದೆ?

ಸೋಶಲಿಸ್ಟರು ಇಲ್ಲವೆ ಸಮಾಜವಾದಿಗಳು ಕೊಂಗ್ರೆಸಿನ ಹಿಂದಂಗವಾಗಿ ಸಂಘಟಿತರಾದರೆ ತುಂಬಾ ಕೆಲಸಗೆಯ್ಯಬಹುದು. ರಚನಾತ್ಮಕ ಸಲಹೆಗಳಿಂದ ಸರಕಾರದ ಮೇಲೆ ಅವರು ಸತ್ಪ್ರಭಾವವನ್ನು ಬೀರಬಹುದು. ಈ ಪಕ್ಷವನ್ನು ಸಹಕರಿಸುವ ಬಂಧುವಿನಂತೆ ಕೊಂಗ್ರೆಸ್ ಪಕ್ಷವು ಸ್ವೀಕರಿಸಿದರೂ ತುಂಬಾ ಅನುಕೂಲವಿದೆ. ಸೋಶಲಿಸ್ಟರಿಗೆ ಇತರ ಎಲ್ಲಾ ಪಕ್ಷಗಳಿಗಿಂತ ಕೊಂಗ್ರೆಸಿನೊಡನೆ ತುಂಬಾ ಮೇಳಾಮೇಳಿಯೂ ಇದೆ. ಎರಡೂ ಪಕ್ಷಗಳ ಗುರಿಯೂ ಒಂದೇಯಾಗಿದೆ. ಸೋಶಲಿಸ್ಟರು ಅನುಭವದಲ್ಲಿ ತರುಣರೂ, ತಾಳ್ಮೆಯಿಲ್ಲದವರೂ ಆಗಿರುತ್ತಾರೆ. ಕೊಂಗ್ರೆಸ್ಸು ಹಳೆಯದು – ಆದುದರಿಂದ ಅಹಿಂಸಾತ್ಮಕವೂ ವಿಚಾರವರವೂ ಆಗಿದೆ.

ಜನಾಂಗದಲ್ಲಿ ಎಲ್ಲರೂ ಮಜೂರರೂ, ರೈತರೂ ಅಲ್ಲ. ಎಲ್ಲರ ಹಿತ ರಕ್ಷಣೆಯು ಸರಕಾರದ ಕರ್ತವ್ಯವಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬನಿಗೆ ನಿರ್ದಿಷ್ಟವಾದ ಸ್ಥಾನ ಮಾನಗಳಿವೆ. ಸುಖಪ್ರದವಾದ ರಾಷ್ಟ್ರವನ್ನು ರಚಿಸಲೂ ಎಲ್ಲರೂ ಸಹಕರಿಸಬೇಕು. ದೇಶದಲ್ಲಿ ಎಲ್ಲರಿಗೆ ಭದ್ರತೆಯಿರಬೇಕು.

ಇಂದಿನ ಭಾರತ ದೇಶಕ್ಕೆ ಶ್ರೇಷ್ಠ ತರದ ಸರಕಾರವು ಅವಶ್ಯವಿದೆ. ಅದಕ್ಕೆ ಎಲ್ಲಾ ಪಕ್ಷಗಳ ಬೆಂಬಲ ಸಹಕಾರಗಳೂ ಅವಶ್ಯವಿವೆ.

ವಿವಿಧ ವೃತ್ತಪತ್ರಿಕೆಗಳಿಂದ

ಸಾವರ್‌ಕರರು ಪುನಃ ರಾಜಕೀಯಕ್ಕೆ

ಹಿಂದೂ ಮಹಾ ಸಭೆಯ ನಾಯಕತ್ವ

ಹಿಂದೂ ಮಹಾಸಭಾ ದುರೀಣರಾದ ಶ್ರೀ ವಾಮನ್ ದಾಮೋದರ ಸಾವರ್‌ಕರರು ಪುನಃವೂಮ್ಮೆ ರಾಜಕೀಯ ರಂಗವನ್ನು ಪ್ರವೇಶಿಸುವರೆಂದು ತಿಳಿದು ಬರುತ್ತದೆ ಮಹಾತ್ಮಾಗಾಂಧಿ ಕೊಲೆಕಟ್ಟಿಯಲ್ಲಿ ಸಿರಪ್ರಾಧಿಗಳೆಂದು ಬಿಡಲ್ಪಟ್ಟ ನಂತರ ಅವರು ರಾಜಕೀಯದಿಂದ ವಿಮುಕ್ತರಾಗುವೆನೆಂದು ಸಾರಿದ್ದರು ಆದರೆ ಹಿಂದೂ ಮಹಾಸಭೆಯ ದುರೀಣರು ಅವರನ್ನು ಪುನ ತಮ್ಮನಾಯಕತ್ವ ವಹಿಸಬೇಕೆಂದು ಒತ್ತಾಯಪೂರ್ವಕ ವಿನ್ನವಿಸಿಕೊಂಡದ್ದರಿಂದ ಅವರು ಒಪ್ಪಿಕೊಂಡಿರುವರೆಂತೆ ಆದರೆ ತಾನು ನಿರ್ದೇಶಿಸಿದ ಕಾರ್ಯ ಧೋರಣೆಯನ್ನು ಮಹಾಸಭೆಯು ಸ್ವೀಕರಿಸಬೇಕೆಂದು ಅವರು ಶರ್ತ ಹಾಕಿರುವರು ಅವರ ಧೋರಣೆಗೆ ಸಭೆಯ ಕಾರ್ಯಕರ್ತರು ತಪ್ಪದೆ ಅಂಟಿಕೊಳ್ಳುವ ನಿರ್ಧಾರವನ್ನೂ ನಿರೂಪಿಸುವರೆಂದು ಗೊತ್ತಾಗಿದೆ ಬರುವ ಅಕ್ಟೋಬರದಲ್ಲಿ ಕಲ್ಕತ್ತಾದಲ್ಲಿ ಸೇರುವ ಹಿಂದೂ ಮಹಾಸಭೆಯ ಅಧಿವೇಶನಕ್ಕೆ ಅವರು ಅಧ್ಯಕ್ಷರಾಗುವರು

ಜಯಪ್ರಕಾಶಕರು ಉಪವಾಸ ಕೈಕೊಳ್ಳುವರು?

ಕಳೆದವಾರ ದಿಲ್ಲಿಯಲ್ಲಿ ಕೊಂಗ್ರೆಸ್ ವರ್ಕಿಂಗ್ ಕಮಿಟಿಯು ಸೇರಿದ್ದಾಗ ಜಯಪ್ರಕಾಶ ನಾರಾಯಣ್‌ರವರು ತಾವು ನಿರಶನ ವೃತವನ್ನು ಕೈಕೊಳ್ಳುವೆನಾಗಿ ತಿಳಿಸಿ ಒಂದು ಸಂಗತಿಯ ಕುರಿತಾಗಿ ಪರಾಮರ್ಶೆ ಚೆನೆ ನಡೆಯಿತಂತೆ-ಹೀಗೆಂದು ಟ್ರಿಬ್ಯೂನ್ ಪತ್ರಿಕೆಯ ದಿಲ್ಲಿ ಬಾತ್ಮಿದಾರರು ಪ್ರಕಟಿಸಿದ್ದಾರೆ ಅವರು ಹೀಗೆ ಬರೆದಿದ್ದಾರೆ

ಬಿಹಾರದ ರೊಟಾಸ್ ಗಿರಣಿ ಮಜೂರರ ಸಂಪು ಅಯಶಸ್ವಿಯಾಗಿ ಸಮತಾವಾದಿ ದುರೀಣರಾದ ಬಿಸ್ವನ್‌ಸಿಂಗರು ತತ್ಸಂಬಂಧ ಕೈಕೊಂಡ ಅನ್ನ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಬೇಕಾಯಿತು ಈ ಕುರಿತು ಜಯಪ್ರಕಾಶರು ಬಿಹಾರ ಮುಖ್ಯ ಮಂತ್ರಿಗಳೊಡನೆಯೂ ಅಲ್ಲದೆ ಆ ಪ್ರಾಂತ್ಯದ ಹಿತಾಧಿಲಾಷಿಗಳಾದ ರಾಜೆಂದ್ರ ಬಾಬುಗಳೊಡನೆಯೂ ಪತ್ರ ವ್ಯವಹಾರ ನಡೆಸಿ "ಈ ಮಜೂರ ಕೆಲಸವು ತೃಪ್ತಿಕರವಾಗಿ ಇತ್ಯರ್ಥವಾದಿದ್ದರೆ ಮರಣಾಂತ ನಿರಶನ ಕೈಕೊಳ್ಳುವೆ"ನೆಂದು ತಿಳಿಸಿದ್ದರು ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಈ ಕುರಿತು ಪರಿಶೀಲನೆ ನಡೆಸಿ ಸಮತಾವಾದಿ ದುರೀಣರಿಗೆ ಯೋಗ್ಯ ಉತ್ತರ ಕೊಡಲು ರಾಜೆಂದ್‌ಬಾಬುಗಳಿಗೆ ನಿರ್ದೇಶಿಸಲಾಗಿದೆ.

ಪಶ್ಚಿಮ ಬಂಗಾಲದಲ್ಲಿ ನಿರುದ್ಯೋಗದ ಕೋಟಲೆ

ಬಿ. ಎ. ಗಳು ಬಸ್ ಕಂಡಕ್ಟರ್ ಕೆಲಸಕ್ಕೆ

ಬಿ ಎ. ಪದವೀಧರರು ಬಸ್ ಕಂಡಕ್ಟರ್ ಕೆಲಸಕ್ಕೆ ಅರ್ಜಿ ಹಾಕುವುದರಲ್ಲಿ ದೋಷವಿದೆಯೆ?

ಹರಿಜನರಲ್ಲಿ ಮುಶ್ಶುವಾಲರು ಹೀಗೆ ಬರೆಯುತ್ತಾರೆ:

ಒಬ್ಬರ ಪ್ರಶ್ನೆ: ಪಶ್ಚಿಮ ಬಂಗಾಲದ ವಾಹನಸಾರಿಗೆ ಖಾತೆಯವರು 300 ಬಸ್ ಡ್ರೈವರ್ಸ್ ಮತ್ತು ಕಂಡಕ್ಟರರುಗಳ ಸ್ಥಾನಗಳು ಖಾಲಿ ಇವೆಯೆಂದು ಪ್ರಕಟಿಸಿದ್ದರು ಸುಮಾರು 50 ಸಾವಿರ ಜನರು ಈ ಕೆಲಸಗಳಿಗೆ ಅರ್ಜಿಮಾಡಿಕೊಂಡರು! ಅರ್ಜಿದಾರರಲ್ಲಿ ಕೆಲವರು ವಿಶ್ವವಿದ್ಯಾಲಯದ ಪದವೀಧರೂ ಇದ್ದರು. 50 ಸಾವಿರ ಅರ್ಜಿಗಳಲ್ಲಿ ಕೆಲಸ ಸಿಗುವುದು 300 ಜನರಿಗೆ - ನಿರಾಶೆಪಡುವವರು 49,700 ಜನ! ಪದವೀಧರರು ಕೆಲವರೂ ನಿರಾಶೆಗೊಳಗಾಗಬಹುದು ಇದು ವಿಶ್ವವಿದ್ಯಾಲಯ ಶಿಕ್ಷಣದ ನಿರರ್ಥಕತೆಯನ್ನು ಕೋರುವ ಉದ್ವಲ ಸಾಕ್ಷ್ಯವಲ್ಲವೆ? ನಾನೊಬ್ಬ ಕೊಲೆಜ್ ವಿದ್ಯಾರ್ಥಿ ನನ್ನ ಶಿಕ್ಷಣವನ್ನು ನಾನು ಮುಂದರಿಸಲೆ ಬೇಡವೆ?

ಉತ್ತರ: ಈಗಿನ ವಿಶ್ವವಿದ್ಯಾಲಯ ಶಿಕ್ಷಣ ನಿಜವಾಗಿ ಕೊಲೇಜನ್ನು ತುಂಬುವವರೆಲ್ಲರಿಗೂ ತಕ್ಕುದಾದದ್ದಲ್ಲವೇನೊ ಖಂಡಿತ ಆದರೆ ಪದವೀಧರರು ಡ್ರೈವರ್ ಕಂಡಕ್ಟರರೇಕಾಗಬಾರದೆ? ಸಾರ್ವರ್ಗ ಸ್ವಚ್ಛಮಾಡುವ ಕೆಲಸವಾದರೂ ನಾಚಿಕೆಯೇತರದು? ಶಿಕ್ಷಣಪದವಿ ಎಂಕ ಪದೆ ಇರಲಿ, ಪ್ರಾಮಾಣಿಕತನದ ಯಾವ ಕೆಲಸ ಮಾಡಲೂ ಸಂಕೋಚವೇಕೆ? ಕಲೀರನು ನೇಕಾರನೂ, ರಾಮದೇವ ದರ್ಜಿಯೂ, ರಾಮದಾಸ ಸಮಗಂರನೂ ಆಗಿರಲಿಲ್ಲವೆ? ಅವರ ಜ್ಞಾನಾನುಭವವು ಮಾತ್ರ ಶ್ರೇಷ್ಠತರಗತಿಯದಾಗಿತ್ತು. ಪದವೀಧರನಾದನಸಿಗೆ ಇಂತಿಪ್ಪೇ ಸಂಬಳ ದೊರೆಯಬೇಕು ಅವನ ಜೀವವಿಧಾನಗಳು ಇಂತಹ ರೀತಿಯದೇ ಇರಬೇಕು ಎಂದು ನಾವು ಕೆಲವು ತಪ್ಪು ಕಲ್ಪನೆಗಳನ್ನು ವಶಪಡಿಸಿಕೊಂಡಿರುತ್ತೇವೆ ಇವನ್ನು ಬಿಟ್ಟು ಬೇರೆ ಕೆಲಸ ಮಾಡಿದರೆ ಅವನ ಘನತೆಗೆ ಕುಂದು ಎಂದು ನಾವು ತಿಳಿಯುತ್ತೇವೆ ನಮ್ಮ ಸ್ವಂತ ವೋಟಾರಾದರೆ ತಲಂಪಿಸುವುದಿಲ್ಲವೆ? ಸಂಪಾದನೆಗಾಗಿ ಇತರರ ವಾಹನ ಚಾಲಕರಾಗಿರುವುದರಲ್ಲಿ ನಾಚಿಕೆ ಕೇಡೇನಿದೆ?

ಪಾಕಿಸ್ತಾನ ಪ್ರಧಾನರ ಅಪ ಪ್ರಲಾಪ

ಈದ್ ಸುದಿನದಂದು ಆಬದ್ಧ ನಿರೂಪ

ಹಿಂದೀ ಮುಸಲ್ಮಾನರಿಂದ ಖಂಡನೆ

ಹಿಂದೂಸ್ತಾನ ಸರಕಾರವು ಹಿಂದೀ ಮುಸಲ್ಮಾನರಿಗೆ ಪಕ್ಷಪಾತ ತೋರುತಿದೆಯೆಂದೂ, ಅವರ ಮೇಲೆ ದಬ್ಬಾಳಿಕೆ ನಡೆಸಲ್ಪಡುತ್ತಿದೆಯೆಂದೂ, ಅವರ ಜೀವವಿತ್ತಗಳಿಗೆ ಅಪಾಯವುಂಟಾಗಿದೆಂದೂ, ಧರ್ಮ ಸಂಸ್ಥೆಗಳಿಗೆ ಧಕ್ಕೆ ತಗಲಿದೆಯೆಂದೂ ಮುಂತಾಗಿ ಆರೋಪಗಳನ್ನು ಪಾಕಿಸ್ತಾನದ ಮುಖ್ಯ ಪ್ರಧಾನರು ತಮ್ಮ ಈದ್ ಸಂದೇಶದಲ್ಲಿ ನಿರೂಪಿಸಿರುವರು. ಈದ್ ಸುದಿನದಂದು ಇಂತಹ ಅಬದ್ಧಗಳನ್ನುಚ್ಚರಿಸಲು ಅವರಿಗೆ ಬಾಯಿ ಹೇಗೆ ಬಂತೆಂದು ಇಲ್ಲಿನ ಒಂದು ಪತ್ರಿಕೆ ಪ್ರಶ್ನಿಸಿದೆ. ಹಿಂದೀ ಮೊವಿನ್ ಪರಿಷತ್ತಿನ ಅಧ್ಯಕ್ಷರು ಪಾಕಿಸ್ತಾನ ಪ್ರಧಾನರ ಈ ಮಾತುಗಳನ್ನು ಖಂಡಿಸುವುದಕ್ಕಾಗಿ ಅಖಿಲ ಹಿಂದೀ ಮುಸಲ್ಮಾನರು ವಿರೋಧ ದಿನವನ್ನಾಚರಿಸಬೇಕೆಂದು ಅವರು ವಿನಂತಿಸುತ್ತಾ, ಹಿಂದೀ ಒಕ್ಕೂಟದಲ್ಲಿನ ಮುಸಲ್ಮಾನರು ಸಕಲ ಸಂತೃಪ್ತಿಯಿಂದಲೂ ಸುಭದ್ರತೆಯಿಂದಲೂ ಇರುವರೆಂದು ಸಾರಿರುವರು

ಕಾಶ್ಮೀರದಲ್ಲಿನ ಗಡಿ ಒಪ್ಪಂದ

ಹಿಂದೂಸ್ತಾನದ ಸರಕಾರದವರು ಧೃಡ ಪಡಿಸಿದ ಜಮ್ಮು ಹಾಗು ಕಾಶ್ಮೀರದಲ್ಲಿನ ಮಿಲಿಟರಿ ಯುದ್ಧ ನಿಲ್ಲಿಸುವಿಕೆಯ ಗಡಿರೇಖೆಯಲ್ಲಿ ರಾಜಕೀಯ ಮಹತ್ವವೇನೂ ಇಲ್ಲೆಂದೂ ರಾಷ್ಟ್ರಸಂಘದ ಕಾಶ್ಮೀರ್ ಸಮಿತಿಯು ಗೊತ್ತುವಳಿಗೂ ಅವಕ್ಕೂ ಏನೂ ಸಂಬಂಧವಿಲ್ಲವೆಂದೂ ಅಧಿಕೃತವಾಗಿ ಸ್ಪಷ್ಟಪಡಿಸಲಾಗಿದೆ ಕಳೆದ ಮಾರ್ಚಿ ತಿಂಗಳಿಂದ ಈ ಗಡಿಪ್ರದೇಶದಿಂದ ಒಳನುಗ್ಗುವಿಕೆಯು ಸಂಭವಿಸಿದ್ದರಿಂದ ಅದನ್ನು ತಡೆಯುವ ಉದ್ದೇಶದಿಂದ ಈ ಒಪ್ಪಂದದ ಇತ್ಯರ್ಥವನ್ನು ಮಾಡಲಾಗಿದೆಂದೂ ವಿವರಣೆ ಕೊಡಲಾಗಿದೆ

ಸಮತಾವಾದಿಗಳು ಕೊಂಗ್ರೆಸ್ಸಿನೊಡನೆ ಸೇರಲು ಸಿದ್ಧರಿದ್ದಾರೆ

"ಆಮಂತ್ರಣ ಬರಲಿ"

ಡಾ ರಾಮಮನೋಹರ ಲೋಹಿಯಾರವರು ಮುಂಬಯಿಯಲ್ಲಿ ಪತ್ರಿಕಾಪ್ರತಿನಿಧಿಗಳ ಪ್ರಶ್ನೆಗಳಿಗುತ್ತರ ಕೊಡುತ್ತ "ದೇಶದ ಸಾಮಾನ್ಯ ಹಿತದ ದೃಷ್ಟಿಯಿಂದ ಆಹಾರ, ಒಕ್ಕಲತನ ಮೊದಲಿಂದ ವಿಷಯಗಳಲ್ಲಿ ಕೊಂಗ್ರೆಸಿನೊಡನೆ ಸಹಕರಿಸಲು ನಾವು ಸದಾ ಸಿದ್ಧರಿದ್ದೇವೆ ಆದರೆ ಬಹುಮತ ಪಕ್ಷವಾದ ಕೊಂಗ್ರೆಸಿನ ದಯೆಯನ್ನು ಆಮಂತ್ರಣ ಬರಬೇಕು" ಎಂದು ತಿಳಿಸಿದರು

ಸಮಾಜವಾದಿ ಪಕ್ಷದ ಶ್ರೀ ಸರತ್ ಬೋಸರೊಡನೆ ಸೇರುವುದು ಸಾಧ್ಯವಿದೆಯೆ ಎಂಬ ಪ್ರಶ್ನೆಗೆ ಡಾ ಲೋಹಿಯಾರವರು "ಒಂದುಪಕ್ಷವು ಒಬ್ಬ ವ್ಯಕ್ತಿಯೊಡನೆ ಸಮಾಗಮವಾಗುವುದು ಹೇಗೆ ಸಾಧ್ಯ ಹಿಂದೂಸ್ಥಾನದಲ್ಲಿ ಒಂದೆರಡು ರಾಜಕೀಯ ಪಕ್ಷಗಳಿದ್ದರೆ ಸಾಕು ಅನೇಕ ಪಕ್ಷಗಳಿದ್ದರೆ ಫ್ರಾನ್ಸಿನಲ್ಲಿನ ಅನಿಶ್ಚಿತ ಪರಿಸ್ಥಿತಿ ಮುಂಟಾದೀತು" ಎಂದು ಉತ್ತರಿಸಿದರು

ಕ್ರಿಪ್ಪರಿಗೆ ಯೋಗ ವಿಧಾನದ ಶುಶ್ರೂಷೆ

ಭಾರತದಿಂದ ಆಹ್ವಾನ

ಇತ್ತೀಚೆಗೆ ಬ್ರಿಟಿಷ್ ಅರ್ಧ ಸಚಿವರಾದ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಆರೋಗ್ಯ ಸುಧಾರಣೆಗಾಗಿ ಸ್ವಿಜರ್ಲೇಂಡಿಗೆ ಹೋಗಿದ್ದಾರೆ ಅಜೀರ್ಣವು ಕುತ್ತಿಕ್ಕಾಗಿ ಅಲ್ಲಿನವರು ವಿಶೇಷ ಚಿಕಿತ್ಸೆಯನ್ನು ಪಡೆಯಲಿದ್ದಾರೆ ಅಲ್ಲಿಂದವರು ಸದ್ಯದಲ್ಲೇ ಮುಂಬಾಯಿಗೂ ಬರಬಹುದೆಂದು ನಿರೀಕ್ಷಿಸಲಾಗಿದೆ ಪ್ರಖ್ಯಾತ ಪ್ರಕೃತಿ ಚಿಕಿತ್ಸಕರಾದ 'ಮುಂಬಯಿಯ ಡಾ। ದಿವಾನ್ ವರ್ಮಾರವರು ಅವರಿಗೆ ಆಹ್ವಾನವನ್ನೂ ಕಳುಹಿಸಿರುವರಂತೆ ಡಾ। ವರ್ಮರು ಕ್ರಿಪ್ಸರ ಆಪ್ತ ಸ್ನೇಹಿತರಾಗಿಯೂ ಇರುವರು ಇತ್ತೀಚೆಗಿನ ತನಕ ಡಾ। ವರ್ಮಾರವರು ಲಂಡನ್ ಪೆರಿಸ್ ನಗರಗಳಲ್ಲಿ ವೈದಕೀಯ ವೃತ್ತಿಯನ್ನೂ ಮಾಡುತ್ತಲಿದ್ದು ಪ್ರಖ್ಯಾತರಾಗಿದ್ದಾರೆ. ಅವರ ಚಿಕಿತ್ಸಾ ವಿಧಾನಗಳು ಯೋಗಾಸನ ವ್ಯಾಯಾಮಾಭ್ಯಾಸಗಳಿಗನುಗುಣವಾಗಿವೆ.

ಹೊಸಜೀವನ ವಿಧಾನದ ಮಾರ್ಪಾಟು

ಒರಿಸ್ಸಾ ಮುಖ್ಯ ಮಂತ್ರಿಗಳ ನಿರ್ಧಾರ

ಒರಿಸ್ಸಾದ ಮುಖ್ಯ ಮಂತ್ರಿಯಾದ ಹರಿಕೃಷ್ಣ ಮೆತಾಬ್‌ರವರು ಇದೇ ಬರುವ ನವೆಂಬರ್ 26ರಿಂದ ತಮ್ಮ ಜೀವನ ವಿಧಾನಗಳನ್ನು ಸಂಪೂರ್ಣ ಮಾರ್ಪಡಿಸಿಕೊಳ್ಳಲು ನಿರ್ಧರಿಸಿರುವರೆಂದು ತಿಳಿದುಬರುತ್ತದೆ. ಆ ದಿನದಂದು ಅವರು ತಮ್ಮ 50ನೇ ವಯಸ್ಸನ್ನು ದಾಟುವರು. ತಮ್ಮ 51ನೇ ವರ್ಷದಿಂದ ಅವರು ಬೇರೊಂದು ತರದ ಜೀವನ ಕ್ರಮವನ್ನು ಅನುಸರಿಸಲು ಬಯಸುವರು. ತಮ್ಮ ರಾಜಕೀಯ ಚಟುವಟಿಕೆಗಳನ್ನು ಅವರು ಬಿಟ್ಟು ಬಿಡುವರೊ ತಿಳಿದಿಲ್ಲ. ಇದೇ ರೀತಿಯಲ್ಲಿ ನಡೆಯಬೇಕೆಂದು ಅವರು ಮಂತ್ರಿಗಳಿಗೂ ಬರೆದಿರುವರಂತೆ

ಕೊಚ್ಚಿ ಸಂಸ್ಥಾನದ ಆದರ್ಶ ಅಧಿಕಾರಿ

ಸರಕಾರಿ ಲೇಖನಿಯನ್ನೂ ಉಪಯೋಗಿಸರು

"ನನ್ನ ವೃತ್ತ ಪತ್ರಿಕೆಗಳಲ್ಲಿ ಸರಕಾರಿ ಅಧಿಕಾರಿಗಳ ಲಂಚವಂಚನೆಗಳ ಕುರಿತು ಬರುವ ಲೇಖಗಳನ್ನು ವಿದೇಶೀಯರಾರಾದರೂ ಓದಿದರೆ ದೇಶದ ಆಡಳಿತವು ಸಂಪೂರ್ಣ ಲಂಚಮಯವಾಗಿದೆಂಬಭಿಪ್ರಾಯವನ್ನು ಮಾಡಿಕೊಳ್ಳಬಹುದು ನಿಜಸಂಗತಿ ನೋಡ ಹೋದರೆ ಪ್ರಾಮಾಣಿಕರೆ ಬಹು ಸಂಖ್ಯೆಯಲ್ಲಿರುವರು ಕೆಲವು ಉಜ್ವಲ ನಿದರ್ಶನಗಳೂ ಇವೆ" ಹೀಗೆಂದು ನಾಗ್ಪೂರ್ ಟ್ಯಾವ್ಸ್ ಪತ್ರಿಕೆಯಲ್ಲಿ ಒಬ್ಬ ಲೇಖರು ಕೊಚ್ಚಿ ಸಂಸ್ಥಾನದ ಒಬ್ಬ ಅಧಿಕಾರಿಯ ಆದರ್ಶವನ್ನು ಹೀಗೆ ವಿವರಿಸುತ್ತಾರೆ

ಅಲ್ಲೆಪ್ಪಿ ಇಂಡಿಯರಿದ್ದಾರೆ ಪ್ರಾಮಾಣಿಕತನಕ್ಕೆ ತುಂಬಾ ಪ್ರಖ್ಯಾತಿ ಪಡೆದನರವರು ಈಗವರು ವೃತರಾಗಿದ್ದರೂ ಅವರ ನಿರ್ವಂಚನೆಯ ಆದರ್ಶವು ಇಂದೂ ಜನಜನಿತವಾಗಿದೆ ಅವರು ಅದೆಷ್ಟು ನಿಷ್ಠ ಲಂಕರಾಗಿರಲು ಇಚ್ಛಿಸುತ್ತಿದ್ದರೆಂದರೆ ಸಂಚಾರಕ್ಕೆ ಹೋದಾಗ ಅವರು ಎರಡು ಮಸಿಯ ಬುರ್ಡೆಗಳನ್ನು ಒಯ್ಯುತ್ತಿದ್ದರು ಒಂದು ಸರಕಾರಿ ವತ್ತಗಳನ್ನು ಬರೆಯಲಿಕ್ಕೆ ಇನ್ನೊಂದು ತಮ್ಮ ಸ್ವಂತ ಪತ್ರ ಲಿಖಿತಕ್ಕೆ ಸ್ವಭಾವತಃ ಇವರು ಹರ್ಷಚಿತ್ತರೂ ವಿನೋದಪರರೂ ಆಗಿದ್ದರೂ ಇತರರಿಗೆಲ್ಲರಿಗೂ ಇವರು ನಡುಕ ಹುಟ್ಟಿಸುವವರಾಗಿದ್ದರು ಸಹಜವಾಗಿ ಇಷ್ಟೊಂದು ಕಟ್ಟುನಿಟ್ಟಿನ ಪ್ರಾಮಾಣಿಕರಿಗೆ ವೈರಿಗಳೂ ಬಹಮಂದಿ ಗಳಿದ್ದರು.

ಒಂದು ಸಲ ಅವರ ಸೂಚನೆಗಳಿಗನುಸಾರವಾಗಿ ಒಂದು ಸೇತುವೆ ಕಟ್ಟಲ್ಪಟ್ಟಿತು. ಆಗ ಇವರಿಂದ ನೊಂದ ಅನೇಕರು ಒಟ್ಟು ಸೇರಿ ಆ ಸೇತುವೆಯ ರಚನಾಕ್ರಮದಲ್ಲಿನ ಕುಂದುಕೊರತೆಗಳನ್ನು ತೆಗೆದು ಟೀಕಿಸಪತ್ರಿದರು. ಸೇತುವೆಯು ನಿರ್ಬಲವಾಗಿದೆಂದೂ, ಅದು ಬಹುಕಾಲ ಬಾಳಲಾರದೆಂದೂ ಪ್ರಚಾರ ಮಾಡಲಾಯಿತು. ಅದಕ್ಕುತ್ತರವಾಗಿ ಅವರು ಸ್ಥೈರ್ಯದ ಕಾರ್ಯವೊಂದನ್ನು ಮಾಡಿ ತೋರಿಸಿದರು. ಸಕುಟುಂಬವಾಗಿ ಅವರು ಒಂದು ದೋಣಿಯಲ್ಲಿ ಆ ಸೇತುವೆಯ ಅಡಿಯಲ್ಲಿ ನಿಂತರು ಭಾರದ ಆರು ಆನೆಗಳನ್ನು ಮೇಲಿಂದ ಸಾಲಾಗಿ ಸೇತುವೆಯನ್ನು ದಾಟುವಂತೆ ಏರ್ಪಡಿಸಿದರು. ಸೇತುವೆಗೆ ಏನೂ ಧಕ್ಕೆಯುಂಟಾಗಲಿಲ್ಲ. ಟೀಕೆಗಳೆಲ್ಲವೂ ಮೌನವಾದುವು.

ಸ್ವದೇಶಾಭಿಮಾನಿ

ತಾರೀಕು 19—8—1949

ಆಂಧ್ರ ಮುಂದಾಳುವಿನ ಅಂತಿಮ ಸಂದೇಶ

ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರು ಇದೇ ಆಗೋಸ್ತು ತಾರೀಕು 15ನೇ ಸ್ವಾತಂತ್ರ್ಯ ದಿನದಂದು ಪ್ರಾತಃಕಾಲ ಗಂಟೆ 8·30ಕ್ಕೆ ತಮ್ಮ ಗುಂಟೂರಿನಲ್ಲಿಯ ಸ್ವಂತ ಗೃಹದಲ್ಲಿ ತಮ್ಮ 83ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರೆಂಬ ವಾರ್ತೆ ಪ್ರಕಟವಾಗಿರುತ್ತದೆ. ಪ್ರಾತಃಕಾಲ ಗಂಟೆ 4·30ಕ್ಕೆ ತಮ್ಮ ಮಗಳಾದ ಪಾರ್ವತಿಯನ್ನು ಕರೆದು ತಾನು ಇನ್ನು ಹೆಚ್ಚು ಸಮಯ ಬದುಕುವುದಿಲ್ಲವೆಂದು ತಿಳಿಸಿದರಂತೆ. ಸಾಯುವ ಸ್ವಲ್ಪ ಮೊದಲು ದೇಶಕ್ಕೆ ತನ್ನ ಅಂತಿಮ ಸಂದೇಶವೊಂದನ್ನು ಹೇಳಿ ಬರೆಸಿದರಂತೆ, ಸ್ವಾತಂತ್ರ್ಯ ದಿನದ ಈ ದ್ವಿತೀಯ ಸಮಾರಂಭದ ಸಂದರ್ಭದಲ್ಲಿ ಅನೇಕ ಮುಂದಾಳುಗಳು ತಮ್ಮ ತಮ್ಮ ಸಂದೇಶಗಳನ್ನು ದೇಶಕ್ಕೆ ಕೊಟ್ಟಿರುವರು. ಅವುಗಳಲ್ಲೆಲ್ಲ ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರ ಈ ಅಂತಿಮ ಸಂದೇಶದ ಕಡೆಗೆ ಪ್ರಜಾಜನರು ಹೆಚ್ಚಿನ ಗಮನಕೊಡಬೇಕೆಂದು ವಿನಂತಿ ಮಾಡಿದರೆ ಅನುಚಿತವಿರಲಾರದು. ಆ ಕೊನೆಯ ಸಂದೇಶವು ಈ ರೀತಿ ಇರುತ್ತದೆ.

"ಮಹಾ ಜ್ಞಾನಿಯೂ ರಾಜಕೀಯ ಮುತ್ಸದ್ದಿಯೂ ಆದ ಮಹಾತ್ಮಾ ಗಾಂಧಿಯವರ ಸಮರ್ಥ ನೇತೃತ್ವದಲ್ಲಿ ನಮಗೆ ಸ್ವಾತಂತ್ರ್ಯವು ಸ್ವಲ್ಪ ಅಗ್ಗವಾಗಿಯೇ ದೊರೆಯಿತು. ಇದರಿಂದಾಗಿಯೇ ಇದರ ನ್ಯಾಯವಾದ ಬೆಲೆಯನ್ನು ತಿಳಿಯಲು ನಮಗೆ ಕಷ್ಟವಾಗುತ್ತಿದೆ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕದ ಪರಿಸ್ಥಿತಿಗಳು ಬಹಳ ಶೋಚನೀಯವಿರುತ್ತವೆ. ಕೊಲೆಪಾತಕಿಯೊಬ್ಬನಿಂದ ಮಹಾತ್ಮರ ಮರಣವಾದುದು ಇವುಗಳಲ್ಲೆಲ್ಲ ಅತ್ಯಂತ ದುಃಖಕರ ಘಟನೆ. ಮಹಾತ್ಮಾ ಗಾಂಧಿಯವರು ನಾವು ಯಾವ ರೀತಿ ವರ್ತಿಸಬೇಕೆಂದು ಆಶಿಸುತ್ತಿದ್ದರೊ ಆ ರೀತಿ ಜನರು ವರ್ತಿಸುವುದು ಅತ್ಯಗತ್ಯ. ಮಹಾತ್ಮಾಜಿಯವರು ನಮಗೆ ಕೊಟ್ಟ ಉಪದೇಶದಿಂದ ಭಾರತವು ಜಗತ್ತಿನಲ್ಲಿ ಒಂದು ಪ್ರಮುಖ ಜನಾಂಗವಾಗಿ ಅಭಿವೃದ್ಧಿ ಹೊಂದುವುದೆಂದು ನಾನು ಆಶಿಸುತ್ತೇನೆ.

ದೇಶಭಕ್ತರ ಈ ಕೊನೆಯ ಸಂದೇಶ ಭಾರತದ ಪ್ರಜೆಗಳ ಹೃದಯಕ್ಕೆ ನಾಟಬೇಕಾಗಿದೆ.

ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರು ಮಹಾತ್ಮಾ ಗಾಂಧಿಯವರ ಉಪದೇಶಗಳಂತೆ ವರ್ತಿಸುತ್ತಿದ್ದ ದೇಶದ ಪ್ರಥಮ ಶ್ರೇಣಿಯ ಮುಂದಾಳುಗಳಲ್ಲಿ ಒಬ್ಬರು. ಮಹಾತ್ಮಾಜಿಯವರ ಅಸಹಕಾರ ಚಳವಳಿ ಆರಂಭವಾಗುವ ಮೊದಲೇ ತನ್ನ ವಕಾಲತನ್ನು ಬಿಟ್ಟು ಸಾರ್ವಜನಿಕ ಸೇವೆಗಾಗಿ ತನ್ನ ಪೂರ್ಣ ಸಮಯವನ್ನು ಅರ್ಪಿಸಿಬಿಟ್ಟಿದ್ದರು. ಭಾಷಾವಾರು ಪ್ರಾಂತ್ಯರಚನೆ ಆದರಲ್ಲೂ ಆಂಧ್ರಪ್ರಾಂತ್ಯರಚನೆಯ ಚಳವಳಿ ಆರಂಭಿಸಿದವರು ಇವರು. ಗಾಂಧೀಜಿಯವರ ಚಳವಳಿದ ಆರಂಭದಿಂದ ಅವರ ಕಾರ್ಯಕ್ರಮಗಳನ್ನು ಆಂಧ್ರದಲ್ಲಿ ನಡೆಸಲು ಇವರೇ ಮುಂದಾಳುಗಳಿದ್ದರು. ವಿಧಾಯಕ ಕಾರ್ಯಕ್ರಮದಲ್ಲಿ ಇವರಿಗೆ ವಿಶೇಷ ಪ್ರೀತಿ ಇತ್ತು. 1921ರಿಂದ 1942ರ ತನಕದ ಎಲ್ಲ ಸತ್ಯಾಗ್ರಹಗಳಲ್ಲಿ ಕಾರಾಗೃಹವಾಸವನ್ನು ಅನುಭವಿಸಿದವರು, ಭಾರತ ರಾಷ್ಟ್ರಸಭೆಯ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಹಲವು ವರ್ಷ ದುಡಿದವರು. ಅತ್ಯಂತ ಸರಳಸ್ವಭಾವದವರೂ ಸಜ್ಜನಿಕೆಯೂ ಇದ್ದು ತನ್ನ ಜೀವನವನ್ನು ದೇಶಸೇವೆಗೆ ಸಂಪೂರ್ಣವಾಗಿ ಅರ್ಪಿಸಿದುಡಿಯುತ್ತಿದ್ದ ಇವರ ಮೇಲೆ ಮಹಾತ್ಮಾ ಗಾಂಧಿಯವರಿಗೆ ವಿಶೇಷ ಪ್ರೀತಿ ವಿಶ್ವಾಸಗಳಿದ್ದವು.

ಜೀವನಮಾನವಿಡೀ ಯಾವುದಕ್ಕಾಗಿ ಅರ್ಪಿಸಿ ಇವರು ದುಡಿದರೊ ಆ ಭಾರತ ಸ್ವಾತಂತ್ರ್ಯ ಪ್ರಾಪ್ತಿಯನ್ನು ಕಾಣುವ ಭಾಗ್ಯವು ಇವರಿಗೆ ದೊರೆತುದು ತೃಪ್ತಿಕರವಾದ ವಿಷಯ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಮಹಾತ್ಮಾ ಗಾಂಧಿಯವರು ಯಾವ ರೀತಿ ಕಳವಳ ಪಡುತ್ತಿದ್ದರೊ ಅದೇ ರೀತಿ ಇವರ ಸ್ಥಿತಿಯೂ ಆದುದು ಸಹಜ. ಕಾಂಗ್ರೆಸಿಗರಲ್ಲಿ ಕಂಡುಬರುತ್ತಿದ್ದ ದೋಷಗಳನ್ನು ಕಂಡು ಅವನ್ನು ನಿವಾರಿಸಲು ಇವರು ಕಾತರಪಡುತ್ತಿದ್ದರು. ಇವರ ನಿಧನದ ಕೆಲವು ದಿನಗಳ ಹಿಂದೆ ಕಾಂಗ್ರೆಸಿನಲ್ಲಿ ಸೇರಿಕೊಂಡಿರುವ ಕೆಡುಕುಗಳೊಡನೆ ಹೋರಾಡಲು ನನಗೆ ಬೇಕಾದ ತ್ರಾಣ ದೇವರು ಕೊಟ್ಟಿದ್ದರೆ ಆಗುತ್ತಿತ್ತೆಂದು ಇವರು ಆಸೆಯನ್ನು ವ್ಯಕ್ತ ಪಡಿಸಿದ್ದರು.

ಇವರ ಅಂತಿಮ ಸಂದೇಶದಂತೆ ಭಾರತದ ಪ್ರಜಾಜನರು ಗಾಂಧೀಜಿ ಆಶಿಸುತ್ತಿದ್ದಂತೆ ವರ್ತಿಸಿ ಭಾರತವು ಜಗತ್ತಿನ ಮಾರ್ಗದರ್ಶಕ ಜನಾಂಗಗಳಲ್ಲಿ ಒಂದಾಗುವಂತಾಗಲೆಂದು ನಾವೂ ಹಾರೈಸಿ ಈ ದೇಶಭಕ್ತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿದೆ.

ಉಡುಪಿ

ವರ್ಧಂತಿ: ಇಲ್ಲಿಯ ಸಂಸ್ಕೃತ ಕಾಲೇಜಿನ ವರ್ಧಂತಿ ಕಳೆದ ತಾ. ೧೦ರಂದು ಸೋದೆ ಮಠಾಧೀಶರ ಅಧ್ಯಕ್ಷತೆಯಲ್ಲಿ ಜರಗಿತು. ಇತರ ಮಠಾಧಿಪರೂ ಚಿತ್ತೈಸಿದ್ದರು.

ದುರ್ಮರಣ: ಕಳೆದ ತಾ. ೮ರಂದು ಇಲ್ಲಿಯ ಮಿಶನ್ ಕಂಪೌಂಡಿನ ಬಳಿಯ ಕೆರೆಯಲ್ಲಿ ಈಜಾಡಲು ಹೋದ ಇಬ್ಬರು ವಿದ್ಯಾರ್ಥಿಗಳಲ್ಲಿ ರತ್ನಾಕರ ಶೆಣೈ ಎಂಬಾತ ಅಕಾಲ ಮೃತ್ಯುವಿಗೆ ತುತ್ತಾದನೆಂದು ತಿಳಿಸಲು ವಿಷಾಧಿಸುತ್ತೇವೆ.

ತೆರಿಗೆ: ವ್ಯವಸಾಯದ ಉದ್ದೇಶಗಳಿಗಾಗಿಯೇ ಉಪಯೋಗಿಸಲ್ಪಡದ ಮತ್ತು ಕಟ್ಟಡಗಳಿಗೆ ಸಂಬಂಧಿಸದ ಯಾ ಅವುಗಳಿಗೆ ನೆರೆಯಲ್ಲಿದ್ದು ಸೇರಿರದ ಜಮೀನುಗಳ ಮೇಲೆ ತೆರಿಗೆ ಹೊರಿಸಲು ಉಡುಪಿ ನಗರ ಸಭೆಯವರು ನಿರ್ಧರಿಸಿದ್ದಾರೆ.

ಟೀಕೆ-ಟಿಪ್ಪಣಿಗಳು

ಕಮ್ಯೂನಿಸ್ಟರ ಉಪಟಳ

ಕಮ್ಯೂನಿಸ್ಟರಿಗೆ ಈ ದೇಶದಲ್ಲಿ ನಿಜವಾದ ಬೆಂಬಲ ದೊರೆಯುತ್ತ ಇಲ್ಲವೆಂಬುದು ಸ್ವಲ್ಪವಾದಂತೆ ಈ ಚಳವಳಿಕ್ಕೆ ಸೇರಿದವರು ನಿರಾಶರಾಗಿ ವರ್ತಿಸುತ್ತಿರುವ ಚಿಹ್ನೆಗಳು ಅಲ್ಲಲ್ಲಿ ಕಾಣುತ್ತಿವೆ. ಇತ್ತೀಚೆ ಹಲವು ಜೈಲುಗಳಲ್ಲಿ ವೆಲ್ಲೂರಲ್ಲಿ ಕಡಲೂರಿನಲ್ಲಿ ಇತ್ಯಾದಿ, ಕೈದಿನಲ್ಲಿರುವ ಕಮ್ಯೂನಿಸ್ಟರು ಜೈಲು ಅಧಿಕಾರಿಗಳೊಡನೆ ಹೊಡೆದಾಡಲು ಆರಂಭಿಸಿರುವುದನ್ನು ಕಂಡರೆ ಇದು ಕೇವಲ ನಿರಾಶೆಯ ವರ್ತನೆವೆನ್ನದೆ ನಿವೃತ್ತಿ ಇಲ್ಲ. ಬಹಿರಂಗ ಹಿಂಸಾತ್ಮಕ ವರ್ತನೆಯನ್ನು ನಡೆಸುವ ಇವರಿಗೆ ದೇಶದಲ್ಲಿ ಯಾರ ಸಹಾನುಭೂತಿಯೂ ದೊರೆಯದಿದ್ದರೆ ಅವರಲ್ಲಿ ಆಶ್ಚರ್ಯವಿಲ್ಲ. ಇಷ್ಟು ಸ್ವಲ್ಪ ವಿಷಯ ಇವರಿಗೆ ಅರ್ಥವಾಗುತ್ತ ಇಲ್ಲವೆಂಬುದು ಮಾತ್ರ ಶೋಚನೀಯ.

ನಮ್ಮ ಆಹಾರ ಖಾತೆಯ ಮಂತ್ರಿ ಶ್ರೀ ರೋಶೆ ವಿಕ್ಟೋರಿಯಾ ಇವರು ಇದೇ ಸ್ವಾತಂತ್ರ್ಯ ದಿನದಂದು ಕೊಯಮುತ್ತೂರಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ವಿತ್ತು ಪುನಃ ಬಂದು ಕಾರು ಹತ್ತಿದಾಗ ಚಲಿಸುತ್ತಿರುವ ಇವರ ಕಾರಿಗೆ ಸಿಡಿಮದ್ದನ್ನು ಎಸೆದರಂತೆ. ಭಾಗ್ಯ ವಶಾತ್ ಇದು ಕಾರಿನ ಬಾಗಿಲಿಗೆ ಮಾತ್ರ ತಾಗಿ ಅದಕ್ಕೆ ಸ್ವಲ್ಪ ಪೆಟ್ಟನ್ನು ಮಾಡಿ ಮುಗಿಯಿತು. ಕೆಲವು ಮಂದಿಯನ್ನು ಕೈದು ಮಾಡಲಾಗಿದೆಯಂತೆ.

ಮಂಗಳೂರಲ್ಲಿಯ ಕಮ್ಯೂನಿಸ್ಟರು ಅಷ್ಟು ದೂರ ಹೋಗುವವರಲ್ಲ. ಸ್ವಾತಂತ್ರ್ಯ ದಿನದಂದು 144ನೇ ಸೆಕ್ಶನ್ ಅಜ್ಞೆ ಉಲ್ಲಂಘಿಸಿ ಮೆರವಣಿಗೆ ಮಾಡಲೆತ್ನಿಸಿ ಲಾಠಿ ಚಾರ್ಜು ಆನೊಡನೆ ಚದರಿದರವರು. ಇಷ್ಟರಲ್ಲೆ ಇವರು ತೃಪ್ತರಾದರೆ ಆಶ್ಚರ್ಯವಿಲ್ಲ. ಆದರೆ ದೇಶದ ಇತರ ಕಡೆಯ ಕಮ್ಯೂನಿಸ್ಟರು ಹಿಂಸೆಗೇನೆ ಮನಸ್ಸು ಕೊಡುವರೆಂಬುದರಿಂದ ನಮ್ಮಲ್ಲಿಯವರು ಈ ವಂಗಡ ಬಿಟ್ಟು ಕೊಡುವುದೇ ಹೆಚ್ಚು ಶ್ರೇಯಸ್ಕರವಲ್ಲವೆ ಎಂದು ವಿಚಾರಿಸುವುದು ಒಳ್ಳೆಯದು.

ಕರಾಚಿಯಲ್ಲಿ ಭಾರತ ರಾಷ್ಟ್ರ ಧ್ವಜಕ್ಕೆ ಆಕ್ಷೇಪ

ಪಾಕಿಸ್ತಾನದಲ್ಲಿರುವ ಭಾರತದ ಹೈ ಕಮಿಶನರರ ಶಿಬಂದಿ ವರ್ಗದವರಲ್ಲಿ ಭಾರತ ಸ್ವಾತಂತ್ರ್ಯ ದಿನದಂದು ಭಾರತದ ರಾಷ್ಟ್ರ ಧ್ವಜ ಏರಿಸಲ್ಪಟ್ಟಿತು. ಸಾವಿರಾರು ಮುಸ್ಲಿಮರು ಗುಂಪು ಸೇರಿ ಇದಕ್ಕೆ ವಿರುದ್ಧ ಭಾವ ವ್ಯಕ್ತಪಡಿಸಲು ಇವರನ್ನು ಚದರಿಸಲು ಪೋಲೀಸರು ಗುಂಡು ಹಾರಿಸಬೇಕಾಗಿ ಬಂತು. ಪಾಕಿಸ್ತಾನದ ಮಂತ್ರಿ ಖ್ವಾಜಾ ಶಹಾಬುದ್ದೀನರು ಜನಸ್ತೋಮವನ್ನು ಶಾಂತಗೊಳಿಸಲು ಎಷ್ಟು ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಗುಂಡು ಹಾರಿಸಿದ್ದರಿಂದ ಜನರಲ್ಲಿ ಒಬ್ಬರು ಸತ್ತರು. ಐದು ಮಂದಿಗೆ ಪೆಟ್ಟಾಗಿದೆ. ಪೋಲೀಸರಲ್ಲಿ ಐದು ಮಂದಿಗೆ ಪೆಟ್ಟಾಗಿದೆ.

ಭಾರತದ ರಾಷ್ಟ್ರಧ್ವಜ ಮಾತ್ರ ಏರಿಸಿದ್ದರಿಂದ ಜನರು ಉದ್ರೇಕಗೊಂಡರಂತೆ. ಇದನ್ನು ಕಂಡು ಜೊತೆಯಲ್ಲಿ ಪಾಕಿಸ್ತಾನ ಧ್ವಜವನ್ನೂ ಏರಿಸಿದರಂತೆ. ಪಾಕಿಸ್ತಾನದ ಧ್ವಜ ಸಣ್ಣದಾಯಿತೆಂದು ಆಕ್ಷೇಪವೆತ್ತಲಾಯಿತು. ಕೊನೆಗೆ ಸಾವಿರಾರು ಜನರು ಬಲಾತ್ಕಾರಿಸುವ ಲಕ್ಷಣ ಸ್ಪಷ್ಟವಾದಾಗ ಭಾರತದ ಧ್ವಜ ಇಳಿಸಲಾಯಿತು. ಅಂತೂ ಪೋಲೀಸರು ಕೊನೆಗೆ ಜನರನ್ನು ಚದರಿಸಿದರು.

ಇಲ್ಲಿದ್ದ ಭಾರತೀಯ ಪ್ರಜೆಗಳೆಲ್ಲರೂ ಸುರಕ್ಷಿತವಾಗಿದ್ದಾರೆಂದು ಪಾಕಿಸ್ತಾನ ಸರಕಾರ ತಿಳಿಸಿರುತ್ತದೆ. ಇಪ್ಪತ್ತನಾಲ್ಕು ಗಂಟೆಗಳ ಕರ್ಫ್ಯೂ ಆಜ್ಞೆ ನಗರದಲ್ಲಿ ಜಾರಿ ಮಾಡಲಾಗಿದೆ.

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಅಲ್ಲೀಖಾನರು ಗಲಾಟೆ ನಡೆದಲ್ಲಿಗೆ ಬಂದು ಜನರಿಗೆ ಶಾಂತ ರೀತಿಯಲ್ಲಿ ಚದರಲು ವಿನಂತಿ ಮಾಡಿದರಂತೆ. ಪೋಲೀಸ್ ಗುಂಡಿನಿಂದ ಸತ್ತವನ ವಿಚಾರವೆತ್ತಿ ಈತನು ಪಾಕಿಸ್ತಾನ ಧ್ವಜದ ಗೌರವ ಕಾಪಾಡಲು ಜೀವದಾನ ಕೊಟ್ಟವನೆಂದು ವರ್ಣಿಸಿ ಆತನ ಬಗ್ಗೆ ಪ್ರಾರ್ಥಿಸುವಂತೆ ಹೇಳಿದರಂತೆ. ಪಾಕಿಸ್ತಾನದ ಧ್ವಜದ ಗೌರವ ಕಾಪಾಡುವ ಇಂಥ ವೀರನನ್ನು ಪಾಕಿಸ್ತಾನ ಪೋಲೀಸರೇ ಎತಕ್ಕೆ ಕೊಂದರೊ? ಅಂತೂ ಮೃತನ ಆತ್ಮ ಶಾಂತಿಗೆ ಪ್ರಾರ್ಥಿಸಿರೆಂದುದು ಆಕ್ಷೇಪಕರವ್ವವೆನ್ನೋಣ.

ಸೀರಿಯಾದಲ್ಲಿ ಕ್ರಾಂತಿ

ಸೀರಿಯ ಸರಕಾರದ ಪ್ರೆಸಿಡೆಂಟ್ ಹುಸ್ನಿ ಜೈಮ್ ಮತ್ತು ಮುಖ್ಯ ಮಂತ್ರಿ ಬಾರಾಜಿ ಇವರನ್ನು ಕೊಂದು ಇಲ್ಲಿ ಹೊಸ ಸರಕಾರವೊಂದು ಸ್ಥಾಪಿಸಲ್ಪಟ್ಟಿತು. ತಾ. 14ನೇ ರಾತ್ರೆ ಮೂರು ಗಂಟೆಗೆ ಮೂರು ಸಶಸ್ತ್ರ ಕಾರುಗಳು ಬಂದು ಪ್ರೆಸಿಡೆಂಟ್ ಜೈಮರ ಮನೆಯನ್ನು ಸುತ್ತಿದವು. ದೊಡ್ಡ ಅಧಿಕಾರಿಯೊಬ್ಬನು ಬಲಾತ್ಕಾರದಿಂದ ಒಳ ಹೊಕ್ಕಿ ಹುಸ್ನಿ ಜೈಮರನ್ನು ಬಲಾತ್ಕಾರದಿಂದ ಕರೆದೊಯ್ದರು. ಕರ್ನಲ್ ಸಾವಿ ಹಿನ್ನಾವಿಯೆಂಬ ಸೈನ್ಯಾಧಿಕಾರಿಯವರು ಒಂದು ವರಿಷ್ಠ ಯುದ್ಧ ಕೌನ್ಸಿಲು ಸ್ಥಾಪಿಸಿದ್ದು ಇವರು ಪ್ರೆಸಿಡೆಂಟ್ ಜೈಮ್ ಮತ್ತು ಮುಖ್ಯ ಮಂತ್ರಿಯವರ ತನಿಖೆ ನಡೆಸಿ ಇವರಿಗೆ ಮರಣದಂಡನೆ ವಿಧಿಸಿದರು. ಕೂಡಲೆ ಗುಂಡು ಹೊಡೆದು ಈ ಶಿಕ್ಷೆ ಜಾರಿ ಮಾಡಲಾಯಿತು.

ಸೀರಿಯದ ಮಾಜಿ ಪ್ರೆಸಿಡೆಂಡ್ ಹಾಶೆಮ್ ಅಟಾಸ್ಸಿ ಪಾಶಾ ಇವರು ಹೊಸ ಮಂತ್ರಿ ಮಂಡಲ ಸ್ಥಾಪಿಸಿದರು. ಕರ್ನಲ್ ಹಿನ್ನಾವಿಯವರು ಬಲಾತ್ಕಾರದಿಂದ ಹಿಡಿದ ಅಧಿಕಾರ ಈ ಮಂತ್ರಿ ಮಂಡಲಕ್ಕೆ ಬಿಟ್ಟು ಕೊಟ್ಟಿದ್ದಾರೆ.

ಈ ಕ್ರಾಂತಿಯಿಂದ ಇರಾಕಿಗೆ ಸಂತೋಷವಾಗಿದೆಯಂತೆ. ಈಜಿಪ್ಟಿನಲ್ಲಿ ಮೂರು ದಿನ ದುಃಖ ಪ್ರದರ್ಶನಕ್ಕೆ ಆಜ್ಞೆಯಾಗಿದೆ.

ಈ ಕ್ರಾಂತಿಯ ಬುಡದಲ್ಲಿ ಪರಕೀಯ ಶಕ್ತಿ ಇರಬಹುದೆಂದು ಈಜಿಪ್ಟಿನಲ್ಲಿ ಊಹಿಸಲಾಗುತ್ತಿದೆ. ಸೀರಿಯದವರು ಇದರಲ್ಲಿ ಪರಕೀಯ ಕೈ ಇಲ್ಲವೆನ್ನುತ್ತಾರೆ.

ಕ್ವೀನ್ ಮೇರೀಸ್ ಕಾಲೇಜಿನಲ್ಲಿ

ಮದ್ರಾಸಿನ ಕ್ವೀನ್ ಮೇರೀಸ್ ಸ್ತ್ರೀಯರ ಕಾಲೇಜಿನವರು ಕಾಲೇಜಿನ ಸಮಾಜ ಸೇವಾ ಸಂಘದ ಸಹಾಯಾರ್ಥವಾಗಿ

ಒಂದು ಪ್ರದರ್ಶನ ಏರ್ಪಡಿಸಿದ್ದರು. ಇಲ್ಲಿ ಗಂಡು ವಿದ್ಯಾರ್ಥಿಗಳು ಪ್ರೇಕ್ಷರಾಗಿ ಹೋದವರು ಕೆಲವರು ವಿದ್ಯಾರ್ಥಿನಿಗಳೊಡನೆ ಅಸಭ್ಯ ರೀತಿ ವರ್ತಿಸತೊಡಗಿದ್ದರಂತೆ. ಪೋಲೀಸರು ಇವರ ವರ್ತನೆ ಪರಿಶೀಲಿಸುತ್ತಿದ್ದರು. ಒಬ್ಬ ಹೆಡ್‌ಕಾನ್‌ಸ್ಟೇಬಲನು ಒಬ್ಬ ಹುಡುಗನನ್ನು ಹಿಡಿದು ಹೊರ ದೂಡಲು ಯತ್ನಿಸಿದನು. ಅಲ್ಲಿ ಸೇರಿದ ಸುಮಾರು 500 ಮಂದಿ ಹುಡುಗ ವಿದ್ಯಾರ್ಥಿಗಳು ಇದರಿಂದ ರೇಗಿದರು. ಆ ಕಾನ್‌ಸ್ಟೇಬಲನು ಕೂಡಲೆ ಮಾಫಿ ಬೇಡಬೇಕೆಂದು ಕೇಳಲಾಯಿತು. ಆಗ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರರು ನಡೆದ ಘಟನೆ ಬಗ್ಗೆ ವಿಷಾದ ಸೂಚಿಸಿ ಆ ಕುರಿತು ಕಳ್ಳ ವಿಚಾರಣೆ ಮಾಡಲಾಗುವುದೆಂದು ಹೇಳಿದರು. ಪ್ರೆಸಿಡೆನ್ಸೀ ಕಾಲೇಜು ಮತ್ತು ಕ್ವೀನ್ ಮೇರೀಸ್ ಕಾಲೇಜಿನ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ಶಾಂತರಾಗುವಂತೆ ತಿಳಿಯ ಹೇಳಿದರು ವಿದ್ಯಾರ್ಥಿಗಳ ಗಲಾಟೆ ಹೆಚ್ಚಿತು ಒಬ್ಬ ವಿದ್ಯಾರ್ಥಿ ಧ್ವನಿವಾದಕದಲ್ಲಿ ಆ ಕಾನ್‌ಸ್ಟೇಬಲನು ಐದು ನಿಮಿಷಗಳ ಒಳಗೆ ಬಂದು ಮಾಫಿ ಬೇಡುವುದಿಲ್ಲವಾದರೆ ಪೋಲೀಸರಿಗೆ ಹೊಡೆಯುವುದಾಗಿ ಹೇಳಿದನು ಕಾನ್‌ಸ್ಟೇಬಲನು ಬರಲಿಲ್ಲ ಹುಡುಗರು ಕಲ್ಲು ಹೊಡೆಯಲು ತೊಡಗಿದರು. ಕಾಲೇಜಿನ ದೀಪಗಳು ಹಲವು ಒಡೆದವು ವಿಳಂಬವಿಲ್ಲದೆ ಸಶಸ್ತ್ರ ಪೋಲೀಸ್ ಪಡ ಧಾವಿಸಿ ಬಂದಿತು ವಿದ್ಯಾರ್ಥಿಗಳ ಮೇಲೆ "ಕೇನ್ ಚಾರ್ಜ್" ಮಾಡುವ ಆಜ್ಞೆಯಾಯಿತು ಛಿತ್ರದಿಂದ ಹೊಡೆದರು ವಿದ್ಯಾರ್ಥಿಗಳಿಗೂ ಇತರ ಕೆಲವು ಪ್ರೇಕ್ಷಕರಿಗೂ ಪೆಟ್ಟು ಬಿದ್ದವು ಪೋಲೀಸರಲ್ಲಿ ಐದು ಮಂದಿಗೆ ಕಲ್ಲಿನ ಪಟ್ಟುಗಳಾಗಿವೆ ಈಗ ಪೋಲಿಸರು ಕೆಲವು ಮಂದಿಯ ಮೇಲೆ ನಂಬ್ರ ಮಾಡಿದ್ದಾರೆ.

ಈ ಘಟನೆಯ ಮೇಲೆ ಪ್ರತ್ಯೇಕ ಟೀಕೆಯ ಅಪಶ್ಯಕತೆ ಇಲ್ಲ

ಸ್ವಾತಂತ್ರ್ಯ ದಿನದ ಸಮಾರಂಭದ ದಿನ ಆಸಿಗಳಲ್ಲಿ ಹುಡುಗರನ್ನು ಅಥವಾ ಹುಡುಗಿಯರನ್ನು ತುಂಬಿಸಿ ಬೊಬ್ಬೆ ಹೊಡೆದು ಮೆರವಣಿಗೆ ಮಾಡಿಸುವಾಗ ಇಂಥವರ ವರ್ತನೆಯ ಕುರಿತು ಸಭ್ಯತೆಯ ಮೇರೆ ಮೀರದಂತೆ ಎಲ್ಲರೂ ಲಕ್ಷ್ಯ ತೆಗೆದುಕೊಳ್ಳುವುದು ಜಾಣತನವೆಂದು ಈ ಸಂದರ್ಭದಲ್ಲಿ ಒಂದು ಮಾತು ಸೇರಿಸಿದರೆ ಅನುಚಿತವೇನೂ ಇರಲಾರದು

ಕಾರ್ಕಳ

ತಿಲೆ ಕಲ್ಲಿನ ಪ್ರತಾಪಃ ದುರ್ಗ ಗ್ರಾಮದಲ್ಲಿ ಪ್ರಾಚೀನ ಜೈನ ಅರಸರ ಸೈನ್ಯ ನಿರ್ವಾಣವಾದ ಕೋಟೆಯ ಸವಿವರದ ಒಂದು ಮಹಾಶಿಲೆಯು ಕೆಲವಿನಗಳ ಹಿಂದೆ ಇದ್ದ ಸ್ಥಳದಿಂದ ಜಾರಿ ಒಂದು ಫರ್ಲಾಂಗ್ ಕೆಳಗಿಳಿಯಿತು. ಇದು ಕೆಳಗಿಳಿಯುವಾಗ ೬ ಗಜ ಅಗಲ ೩ ಗಜ ಆಳವೂ ಆದ ಕಂದಕವನ್ನು ೧ ಫರ್ಲಾಂಗ್ ದೂರದ ವರೆಗೆ ತೆಗೆದು ಬಂದಿರುತ್ತದೆ. ಇದು ಕೆಳಗಿಳಿಯುವ ಕಾಲದಲ್ಲಿ ಸುತ್ತಮುತ್ತಲೂ ಸಾಮಾನ್ಯ ೨ ಫರ್ಲಾಂಗ್ ದೂರವಿರುವ ಮನೆಗಳು ೧೧ ನಿಮಿಟು ಅಲುಗಾಡಿದಂತಾಗಿ ಜನರೆಲ್ಲರೂ ಗಾಬರಿಗೊಂಡರು.

ಮದ್ರಾಸು ಪ್ರಾಂತ್ಯದ ರಾಜಕವಿಗಳಿಗೆ ಸನ್ಮಾನ

ಮದ್ರಾಸು ಸರಕಾರದವರು ಸಂಸ್ಕೃತ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳ ಭಾಷೆಗಳಲ್ಲಿ ಅತೀ ಶ್ರೇಷ್ಠ ಕವಿಗಳನ್ನು ಆರಿಸಿ ಇವರಿಗೆ ರಾಜಕವಿಗಳೆಂಬ ಬಹುಮಾನ ಸಲ್ಲಿಸಿರುವರಷ್ಟೆ? ಈ ಪದವಿದಾನದ ಸಮಾರಂಭವು ದ್ವಿತೀಯ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ರಾಜಾಜಿ ಸಭಾ ಭವನದಲ್ಲಿ ನಡೆಯಿತು ಮದ್ರಾಸಿನ ಗವರ್ನರಾದ ಭಾವ ನಗರದ ಮಹಾರಾಜರು ನಡೆಸಿದ ಈ ದರ್ಬಾರು ಸಭೆಯಲ್ಲಿ ಮದ್ರಾಸು ಸರಕಾರದ ಮಂತ್ರಿಗಳೂ ಹೈ ಕೋರ್ಟು ಜಡ್ಜರೂ ದೊಡ್ಡ ವಿದ್ವಾಂಸರೂ ಆಪ್ತ ಗೃಹಸ್ಥರೂ ನೆರೆದಿದ್ದರು

ಭಾವ ನಗರದ ಮಹಾರಾಜರೂ ಮಹಾರಾಣಿಯವರೂ ಆಸನ ಸ್ವೀಕಾರ ಮಾಡಿದ ಬಳಿಕ ಸೇವಾದಳದ ಸ್ವಯಂಸೇವಿಕೆಯರು ಪ್ರಾರ್ಥನಾ ಗೀತಹಾಡಿದರು

ಮದ್ರಾಸು ಸರಕಾರದ ವಿದ್ಯಾಖಾತೆಯ ಮಂತ್ರಿ ಮಾನ್ಯ ಮಾಧವ ಮೆನೋನರು ರಾಜಕವಿ ಪದ್ಧತಿ ಏರ್ಪಾಡ ಮಾಡಿದ ಉದ್ದೇಶ ವಿವರಿಸಿದರು ದೇಶ ಬಾಷೆಗಳಿಗೆ ಸ್ಫೂರ್ತ್ಯುತ್ಸಾಹಕೊಡುವ ಆವಶ್ಯಕತೆ ತಿಳಿಸಿದರು

ಈ ಬಾರಿ ರಾಜಕವಿಗಳಾಗಿ ಆರಿಸಲ್ಪಟ್ಟವರೆಲ್ಲರೂ ರಾಷ್ಟ್ರೀಯ ಚಳವಳಿಕ್ಕೆ ಸಹಾಯ ಮಾಡಿದವರೇ ಇದ್ದಾರೆ ಆದರೆ ಆ ಕಾರಣದಿಂದಾಗಿಯೇ ಇವರನ್ನು ಆರಿಸಿದ್ದಲ್ಲ ಇವರ ಕವಿತಾ ಶಕ್ತಿಗಾಗಿಯೇ ಆರಿಸಲಾಗಿದೆ ಎಂದರು

ಈ ರಾಜಕವಿ ನೇಮಕದ ಜೊತೆಯಲ್ಲಿ ವರ್ಷದ ಅತ್ಯುತ್ತಮ ಗ್ರಂಥಗಳಿಗೆ ಬಹುಮಾನ ಕೊಡುವ ಏರ್ಪಾಡನ್ನೂ ಮಾಡಲಾಗಿದೆಯೆಂದು ವಿವರಿಸಿದರು

ರಾಜಕವಿಕಳಿಗೆ ಒಂದು ಜಿರುದಿನ ಸನ್ನದು, ಒಂದು ಮೆಡಲ್, ಒಂದು ಶಾಲು ಮತ್ತು ಐದು ವರ್ಷಗಳ ತನಕ ವರ್ಷಕ್ಕೆ ರೂ. 1000/-ದಂತೆ ಕೊಡಲಾಗುವುದೆಂದು ಹೇಳಿದರು

ಮೊದಲಾಗಿ ತಮಿಳು ರಾಜಕವಿ ನಮಕ್ಕಲ್ ರಾಮಲಿಂಗನಾರ್ ಪಿಳ್ಳೆ ಇವರಿಗೆ ಸನ್ನದು ಕೊಡಲಾಯಿತು ಇವರು ಸೇಲಂ ಜಿಲ್ಲೆಯ ಮೋಹನೂರಿನಲ್ಲಿ 1888ರಲ್ಲಿ ಜನಿಸಿದರು ಬಾಲ್ಯದಲ್ಲಿಯೇ ಇವರಿಗೆ ತಮಿಳಿನ ಮೇಲೆ ವಿಶೇಷ ಪ್ರೀತಿ ಕಂಡು ಬರುತ್ತಿತ್ತು ಇವರು ಚಿತ್ರಕಾರರಾಗಿ ಕಲಾಸೇವೆ ಆರಂಭಿಸಿದರು ಮಹಾತ್ಮಗಾಂಧಿ ಚಳವಳಿಂದ ಉಂಟಾದ ಹೊಸ ವಾತಾವರಣದಲ್ಲಿ ಇವರು ಕವಿತೆಯನ್ನು ರಚಿಸತೊಡಗಿ ಶ್ರೇಷ್ಠ ಕವಿಗಳಾದರು. ಈ ರೀತಿ ಇವರ ಮಾಹಿತಿ ಓದಿ ಹೇಳಲಾಯಿತು

ಸಂಸ್ಕೃತ ರಾಜಕವಿ ಮಹಾ ಮಹೋಪಾಧ್ಯಾಯ ಕೆ. ಎಸ್ ಕೃಷ್ಣಮೂರ್ತಿ ಶಾಸ್ತ್ರಿಗಳಿಗೆ ಎರಡನೆಯದಾಗಿ ಸನ್ನದು ಕೊಡಲಾಯಿತು. ಇವರು ತಿರುಚಿನಾಪಳ್ಳಿ ಜಿಲ್ಲೆಯ ಕುಟ್ಟುವುಕ್ಕೂರು ಎಂಬಲ್ಲಿ ಹುಟ್ಟಿದವರು. ಇವರು ಶಾಸ್ತ್ರವಾಕ್ಯಶಾಲೆಯಲ್ಲಿ ವಿದ್ಯೆಕಲಿತರು. ಇವರು ಮುಂದೆ ಸಂಸ್ಕೃತ ಕವಿಗಳಾಗಿ ವಿದ್ವಾಂಸರ ಆದರಕ್ಕೆ ಪಾತ್ರರಾದರು. ಇವರು ಉಪಾಧ್ಯಾಯ ವೃತ್ತಿಯಲ್ಲಿಯೇ ಜೀವನ ಕಳೆದವರು.

ನೂರನೆಯದಾಗಿ ಸನ್ನದು ಪಡೆದವರು ತೆಲುಗು ರಾಜಕವಿ ಶತಾವಧಾನಿ ಕಲಾಪ್ರಪೂರ್ಣ ಶ್ರೀ ಬೆಲ್ಲಾಪಿಲ್ಲ ವೆಂಕಟ ಶಾಸ್ತ್ರಿಯವರು. ಇವರು ಅಸ್ಸಾಂದ ಸಂಬಂಧ ಸಭೆಗೆ ಬರಲಿಲ್ಲ. ಇವರ ಸನ್ನದು ಇತ್ಯಾದಿ ಇವರ ಬಗ್ಗೆ ಶ್ರೀ ಗೋಪಾಲರೆಡ್ಡಿಯವರು ಸ್ವೀಕರಿಸಿದರು ಇವರು ಯೆನಾಮಿನಲ್ಲಿ ಹುಟ್ಟಿದರೂ ಪೂರ್ವ ಗೋದಾವರೀ ಜಿಲ್ಲೆಗೆ ಸೇರಿದವರು ಇಲ್ಲಿ ನೆಲೆಸಿ ಇವರು ಸಂಸ್ಕೃತ ಅಭ್ಯಾಸ ಮಾಡಿದ್ದರು ಇವರು ಕಾವ್ಯ ಹಾಗೂ ನಾಟಕ ಬರೆದಿದ್ದಾರೆ. ಇವರ ಮುಖ್ಯ ಗ್ರಂಥಗಳು ಶ್ರೀ ತಿರುವತಿ ಶಾಸ್ತ್ರಿಯವರ ಜೊತೆಯಲ್ಲಿ ಬರೆದವುಗಳು ಇವರ ಮಹಾಭಾರತದ ನಾಟಕಗಳನ್ನು ಆಂಧ್ರ ದೇಶದಲ್ಲೆಲ್ಲ ಆಡುತ್ತಾರೆ ಇವರಿಂದಾಗಿ ತೆಲುಗು ಸಾಹಿತ್ಯದ ಮಟ್ಟ ಉನ್ನತಿ ಪಡೆದಿದೆ

ನಾಲ್ಕನೆಯದಾಗಿ ಸನ್ನದು ಪಡೆದವರು ಶ್ರೀ ಮಂಜೇಶ್ವರ ಗೋವಿಂದ ಸೈಯನರು ಕನ್ನಡ ರಾಜಕವಿಯಾದ ಇವರು ಮಂಜೇಶ್ವರದಲ್ಲಿ 1883ರಲ್ಲಿ ಜನ್ಮವೆತ್ತಿದರು ಇವರು ಹೊಸಮಾರ್ಗದ ಆಕರ್ಷಕ ಕವಿತೆ ಬರೆಯುವವರೆಂದು ಹೇಳಲಾಯಿತು

ಕೊನೆಯದಾಗಿ ಸನ್ನದು ಪಡೆದವರು ಮಲಯಾಳ ರಾಜಕವಿ ಮಹಾಕವಿ ವಲ್ಲತ್ತೋಳ ನಾರಾಯಣ ಮೆನೊನರು ಇವರು ದಕ್ಷಿಣ ಮಲಬಾರಿನ ಮಂಗಲಮ್ ಎಂಬಲ್ಲಿ ಹುಟ್ಟಿದರು ಇವರು ವಾಲ್ಮೀಕಿ ರಾಮಾಯಣ ಭಾಷಾಂತರಿಸಿ ತುಳಸಿದಾಸರು ಹಿಂದಿಗೆ ಸಲ್ಲಿಸಿದ ಸೇವೆ ಇವರು ಮಲೆಯಾಳ ಭಾಷೆಗೆ ಸಲ್ಲಿಸಿದ್ದಾರೆ "ನನ್ನ ಗುರು" ಎಂಬ ಕವಿತೆಯಲ್ಲಿ ಗಾಂಧಿಯವರ ಜೀವನದ ದಾರಿ ವಿವರಿಸಿದ್ದಾರೆ

ಈ ಸನ್ನದುಗಳನ್ನು ಕೊಡುವ ಕಾರ್ಯವಾದ ಬಳಿಕ ಒಬ್ಬೊಬ್ಬರೇ ರಾಜಕವಿಗಳು ಮುಂದೆ ಒಂದು ತಮ್ಮ ಕೃತಜ್ಞತೆ ತಿಳಿದರು ತಮಿಳು ರಾಜಕವಿಗಳು ಸರಕಾರವು ಪ್ರಜಾಜನರ ನೈತಿಕ ಜೀವನದ ಕಡೆಗೆ ಕೂಡಾ ಗಮನ ಕೊಡಬೇಕೆಂದು ಸೂಚಿಸಿದರು ಸಂಸ್ಕೃತ ರಾಜಕವಿಗಳು ಈ ಸಂದರ್ಭಕ್ಕಾಗಿ ರಚಿಸಿದ ಹತ್ತೆರಡು ಸಂಸ್ಕೃತ ಶ್ಲೋಕಗಳನ್ನು ಹಾಡಿದರು ಮಲಯಾಳ ರಾಜಕವಿಗಳು ತನ್ನ ಸನ್ನದು ಭಾವ ನಗರದ ಮಹಾರಾಜರಿಂದ ದೊರೆತ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಇವರು ಹೇನುಚಂದ್ರನ "ಶ್ರೀಶಷ್ಠಿ ಶಲಾಕ ಪುರುಷ ಚರಿತ್ರ"ವೆಂಬ ಒಂದು ಸಾವಿರ ವರ್ಷ ಹಿಂದಿನ ಗ್ರಂಥ ಪ್ರಕಟನೆಗೆ ಸಹಾಯ ಮಾಡಿದವರು ಎಂದರು.

ಶ್ರೀ ಗೋವಿಂದ ವೈಯವರು ವಂದನೆಗಳನ್ನರ್ಪಿಸಿ ಕನ್ನಡದೊಂದು ಸೊನ್ನೆಟ್ ಪದ್ಯ ಓದಿ ಹೇಳಿ ಇಂಗ್ಲೀಷಿನಲ್ಲಿ ಅರ್ಥ ವಿವರಿಸಿದರು

ರಾಷ್ಟ್ರಗೀತೆಯೊಡನೆ ಈ ಸಮಾರಂಭ ಮುಕ್ತಾಯವಾಯಿತು.

ಸರಕಾರದ ಪ್ರಚಾರ ಖಾತೆಯವರು ನಮ್ಮ ರಾಜಕವಿಗಳು ಎಂಬ ಚಿಕ್ಕ ಪುಸ್ತಕ ಪ್ರಕಟಿಸಿರುತ್ತಾರೆ.

ನಿವಿಷ್ಟ ಭಾರತೀಯ ವೈದ್ಯ ಸಂಘ

ಮೇಲ್ಕಂಡ ಸಂಘದ ಆದಕ್ಷಿಣ ಮಂಡಿಯ ಸಭೆಯೊಂದು ಈಚಿಗೆ ವೈದ್ಯ ಕೆ. ಎನ್. ಶೇಖರನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆಸನ ಆರಿಷ್ಟಗಳನ್ನು ಪಾನ ನಿರೋಧ ಕಾನೂನಿಗೆ ಒಳಪಡಿಸಿದ್ದರಿಂದ ಸಾರ್ವಜನಿಕರಿಗಾದ ತೊಂದರೆಗಳನ್ನು ವಿವರಿಸಿ ಸರಕಾರದ ಧೋರಣೆಯನ್ನು ಖಂಡಿಸುವು ತರಾವು ಮಂಜೂರಾಯಿತು. ಅವುಗಳನ್ನು ಮದ್ಯಪಾನ ನಿಷೇಧದ ಶಾಸನದಿಂದ ವಿರಹಿತಗೊಳಿಸಬೇಕೆಂದು ಸರಕ್ಕಾರವನ್ನು ಒತ್ತಾಯಪೂರ್ವಕ ಕೇಳಿಕೊಳ್ಳಲಾಯಿತು.

ಪ್ರಬುದ್ಧ ಬಂದರದ ವಿಚಾರ

ಇದು ತನಕ ಪಶ್ಚಿಮ ಕರಾವಳಿಯಲ್ಲಿ ಗೋವೆ ಕೊಚ್ಚಿಗಳ ನಡುವೆ ಒಂದು ಪ್ರಬುದ್ಧ ಬಂದರನ್ನಾರಿಸುವುದರ ಕುರಿತಾದ ಪ್ರಕಟಣೆಗಳೆಲ್ಲ ನಿರಾಧಾರವಾದುವುಗಳೆಂದು ಅಧಿಕೃತ ಪ್ರಕಟಣೆಯೊಂದರಲ್ಲಿ ತಿಳಿಸಲಾಗಿದೆ ಮಲ್ಪೆಯೇ ಬಂದರನ್ನಾಗಿ ಆರಿಸಬಹುದೆಂದು ಊಹಾಪೋಹಯ. ಸುದ್ದಿಗಳು ಪ್ರಕಟವಾಗಿದ್ದುವು. ಬಂದರು ಪರಿಶೀಲನಾ ಸಮಿತಿಯು ಕೇಂದ್ರ ಸರಕಾರಕ್ಕೆ ಮುಟ್ಟಿದ್ದು ಆ ಕುರಿತು ವರ್ಯಾಲೋಚನೆ ಪ್ರಾರಂಭವಾಗಿದೆಯಷ್ಟೆ ಎಂದು ತಿಳಿಯುತ್ತದೆ ಈ ಸಂಬಂಧ ರೈಲ್ವೆ ಸಾರಿಗೆ ಮಂತ್ರಿಗಳಾದ ಸರ್ ಗೋಪಾಲಸ್ವಾಮಿ ಅಯ್ಯಂಗಾರರವರು ನಮ್ಮ ಜಿಲ್ಲೆಗೆ ಮಂಗಳೂರು. ಮಲ್ಪೆಗಳ ಪರಿಶೀಲನಾರ್ಥವಾಗಿ ಬರುವ ಅಕ್ಟೋಬರಲ್ಲಿ ಬರಲಿರುವರೆಂದು ತಿಳಿದು ಬರುತ್ತದೆ

ಪೌರ ಸಭೆ

ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಕೆಲ ದಿನಗಳ ಹಿಂದೆ ಜರಗಿದ ಸಭೆಯಲ್ಲಿ ನಗರದ ೧೫ ರಸ್ತೆಗಳಿಗೆ ತಾರು ಹಾಕಲು ತಯಾರಿಸಿದ ೩,೧೦,೨೫೫ ರೂಪಾಯಿಗಳ ಬಜೆಟಿನ ತಿದ್ದಿದ ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಯಿತು ಮಂಗಳೂರಲ್ಲಿ ತಯಾರಿಸಲ್ಪಟ್ಟ ಮಲಗೊಬ್ಬರವನ್ನು ಈಗೆರಡು ವರ್ಷಗಳಿಂದ ಕೊಳ್ಳುವವರಿಲ್ಲವಾದ್ದರಿಂದ ಇನ್ನುಮುಂದೆ ಅದನ್ನು ತಯಾರಿಸುವುದು ಬೇಡವೆಂದು ನಿರ್ಣಯವಾಯಿತು ಬಾವಟೆಗುಡ್ಡೆ, ಪಂಪ್ವೆಲ್‌ಗಳಲ್ಲಿ ಉದ್ಯಾನಗಳಲ್ಲಿ ಮೂರು, ಬೋಳೂರಿನ ಸ್ಮಶಾನ ಬಳಿಯಲ್ಲಿ ಸ್ವಯಾಣಿಕರ ನಿಲ್ದಾಣ ಒಳಿಯಲ್ಲಿ ಒಂದೊಂದು ವಿದ್ಯುತ್‌ದೀವನ್ನು ಹಾಕುವುದಕ್ಕೆ ಮಂಜೂರಾತಿ ಕೊಡಲಾಯಿತು.

ರೇಡಿಯೋ ಕಾರ್ಯಕ್ರಮ

ತಾ. ೨೫-೮-೪೯ರಲ್ಲನೇ ಗುರುವಾರ ಸಾಂ. ಘಂಟೆ ೫-೫೦ರಿಂದ ೬ರ ವರೆಗೆ ಕಾರ್ಕಳ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿರುವ ನಾಗಸ್ವರ ಭೂಷಣ ವಿದ್ವಾನ್ ಪಿ ನಾರಾಯಣ ಸ್ವಾಮಿಯವರ ನಾಗಸ್ವರ ಕಚೇರಿಯು ಮದ್ರಾಸು ಆಲ್ ಇಂಡಿಯಾ ರೇಡಿಯೋದಲ್ಲಿ ಜರಗಲಿರುವುದು.

ಹವಾಮಾನ

ಮಳೆಯ ಭರಭ್ರ ಬಹಳ ಮಟ್ಟಿಗೆ ಕಡಿಮೆಯಾಗಿದೆ. ಬಿಸಿಲುಗಳು ಬೀಳುತ್ತಲಿವೆ. ಮಧ್ಯ ಮಧ್ಯದಲ್ಲಿ ಕೆಲವೊಂದು ಬಿರುಸು ಸುರುಯುವಿಕೆಯೂ ಉಂಟಾಗುತ್ತದೆ.

ಸ್ವಾತಂತ್ರ್ಯ ದಿನಾಚರಣೆ

ಜಿಲ್ಲೆಯ ಎಡೆಗಳಲ್ಲಿ ಸಾರ್ವಜನಿಕ ಸಂಸ್ಥೆಗಳಲ್ಲಿ, ವಿದ್ಯಾ ಸಂಸ್ಥೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ದೇಶ ದುರೀಣರ ಆಶಯಕ್ಕನುಸಾರ ಸರಳ ವಿಧ್ಯುಕ್ತತೆಯಿಂದ ಗಂಭೀರವಾಗಿ ಆಚರಿಸಲ್ಪಟ್ಟಿತು.

ಮಂಗಳೂರಲ್ಲಿ ಅಂದು ಬೆಳಿಗ್ಗೆ ಎಂಟು ಗಂಟೆ ಸರಿಯಾಗಿ ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಲ್ಲೆಕ್ಟರು ರಾಷ್ಟ್ರ ಧ್ವಜವನ್ನು ಅರಳಿಸಿ ಸಶಸ್ತ್ರ ಪೋಲಿಸ್ ಪಡೆಯ ಕವಾತನ್ನು ಅವಲೋಕಿಸಿದರು. ನಂತರ ಸಸಿ ನೆಡುವ ಸಂಬಂಧದ ಒಂದು ಮೆರವಣಿಗೆಯು ಪುರ ಪ್ರಮುಖರಿಂದೊಡಗೂಡಿ ನಗರದ ಕೇಂದ್ರ ಸ್ಥಳಗಳಲ್ಲಿ ಉಪಯುಕ್ತ ಸಸಿಗಳನ್ನು ನೆಡುವ ಕಾರ್ಯಕ್ರಮವು ಜರಗಿತು. ನಂತರ ಶಾಲಾ ಕೊಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರ ಸ್ಪೋರ್ಟ್ಸ್ ಪಂದ್ಯಾಟಗಳು ಜರಗಿದುವು. ತತ್ಸಂಬಂಧವಾಗಿ ನಡೆದ ಫೆನ್ಸಿ ಡ್ರೆಸ್ ವೇಷಗಳ ಪ್ರದರ್ಶನವೂ ಇತ್ತು.

ಅಂದು ಸಾಯಂಕಾಲ ಮೈದಾನಿನಲ್ಲಿ ಬಹಿರಂಗ ಸಭೆಯು ಡಾ। ಯು. ಪಿ. ಮಲ್ಯ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೇರಿ ಸ್ವಾತಂತ್ರ್ಯ ದಿನಾಚರಣೆ ಸಂಬಂಧದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಅನೇಕ ಪ್ರಮುಖರು ಕನ್ನಡ, ಹಿಂದಿ, ತುಳು, ಮಲೆಯಾಳಿ ಭಾಷೆಗಳಲ್ಲಿ ಮಾತನಾಡಿದರು. ಆರುವರೆ ಗಂಟೆಗೆ ಜನಗಣಮನದೊಂದಿಗೆ ಸಭೆ ಮುಕ್ತಾಯವಾಯಿತು.

ನಗರದ ಶಾಲಾ ಕೊಲೇಜುಗಳಲ್ಲೂ ವ್ಯಯಕ್ತೀಕ ರೀತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಯಿತು. ಧ್ವಜವಂದನೆ, ಸಂದೇಶ ವಾಚನ, ಮಿಠಾಯಿ ಹಂಚೋಣ ಗಳಿದ್ದುವು.

ಸತ್ಕಾರ ಕೂಟ

ಸ್ಥಳೀಯ ಕೆನರಾ ಹ್ಯಾಸ್ಕೂಲಿನ ಉಪಾಧ್ಯಾಯ ಸಂಘದ ಆಶ್ರಯದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೊಸಬೆಟ್ಟು ರಾಮರಾಯರಿಗೂ ಅವರ ಸಹಾಯಕ ವಿದ್ಯಾಧಿಕಾರಿಗಳಿಗೂ ಕಳೆದ ತಾರೀಕು 13-8-49ರಲ್ಲು ಶನಿವಾರ ಶಾಲೆಯ ಭುವನೇಂದ್ರ ಸಭಾಸದನದಲ್ಲಿ ಒಂದು ಸತ್ಕಾರ ಕೂಟವೇರ್ಪಡಿಸಲ್ಪಟ್ಟಿತು. ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಶ್ರೀಯುತ ರಾಯರು ನೂತನ ಶಿಕ್ಷಣ ವಿಧಾನವನ್ನು ಪರಿಪೂರ್ಣಗೊಳಿಸಲು ಸಮರ್ಥರಾಗುವ ತನಗೆ ಜಿಲ್ಲೆಯ ಶಿಕ್ಷಣ ಚಟುವಟಿಕೆಗಳ ನಿರ್ದೇಶಾಧಿಕಾರಿಗಳಾಗಿರಲೆಂದು ಸಂಘದ ಕಡೆಯಿಂದ ಹಾರೈಸಲಾಯಿತು. ಮಾನ್ಯ ಅತಿಥಿಗಳು ವಿದ್ಯಾರ್ಥಿಗಳನ್ನು ಉಪಯುಕ್ತ ನಾಗರೀಕನನ್ನಾಗಿ ಮಾಡುವರಿ ಉಪಾಧ್ಯಾಯ ವರ್ಗವು ಶ್ರಮಿಸಬೇಕೆಂದೂ ಕಿವ್ಯ ತರವಾದ ತಮ್ಮ-ಹೊಸ ಹೊಣೆಗಾರಿಕೆಯೊಡನೆ ಸಂವರ್ಧನೀಯಿಸಿಕೊಳ್ಳಬೇಕಾದ ಅವಶ್ಯಕತೆ, ಸ್ಕೌಟ್ ಚಟುವಟಿಕೆಗಳನ್ನು ನಡೆಸಬೇಕಾದ ಅವಶ್ಯಕತೆಗಳನ್ನು ಒತ್ತಿಹೇಳಿದರು.

ಮಾರುತಿ ಕಟ್ಟೆದಲ್ಲಿ ಸಂದರ್ಶನ

ಕಳೆದ ತಾ. ೧೫ರಂದು ಸಾಯಂಕಾಲ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಚ್. ರಾಮರಾಯರು ಕೆನರಾ ಹ್ಯಾಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿನ ಬಾಲವಾರುತಿ ಕಟ್ಟೆಯನ್ನು ಸಂದರ್ಶಿಸಿದರು. ಕಟ್ಟೆ ಮಾಸ್ತರರಾದ ಶ್ರೀ ಪಿ. ವಿಠಲ್ ಕಾಮತರು ಬಾಲವೀರದಳದ ಚಟುವಟಿಕೆಗಳನ್ನು ಅತಿಥಿಗಳಿಗೆ ತೋರಿಸಿದರು. ಸಂದರ್ಶಕರು ದಳದ ಕಾರ್ಯಕಲಾಪಗಳ ಕುರಿತು ಮೆಚ್ಚುಗೆಯನ್ನು ತೋರ್ಪಡಿಸಿದರೆಂದು ತಿಳಿದು ಬರುತ್ತದೆ.

ಭಗಿನೀ ಸೇವಾ ಸಮಾಜ

ಈ ಸಂಸ್ಥೆಯ ವಾರ್ಷಿಕೋತ್ಸವವು ಈಚೆಗೆ ಶ್ರೀಮತಿ ಎಂ. ಬುಕಾರ್ದರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿ. ಎಸ್. ಲೀಲಾಬಾಯಿಯವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಣಿ ಶ್ರೀ ಶಾರದಾ ತಲ್ವಾರರು ವರದಿಯೋದಿದರು. ಪ್ರಬಂಧ, ನೂಲುವಿಕೆ, ಸಂಗೀತ ಇತ್ಯಾದಿಗಳಲ್ಲಿ ಸ್ಪರ್ಧೆ ಬಹುಮಾನಗಳಿದ್ದುವು. ಸಭಿಕರ ಮತ್ತು ಅಧ್ಯಕ್ಷ ಭಾಷಣಗಳಾದ ಮೇಲೆ ನಾಟಕ ನೃತ್ಯಗಳ ವಿವಿಧ ವಿನೋದಾವಳಿಗಳಿದ್ದುವು.

ಮೊನು ಶಿಭಾರಿ

ಹತ್ತು ಹನ್ನೆರಡು ಫೀಟು ಉದ್ದದ ದೊಡ್ಡ ಗಾತ್ರದ ಎರಡು ಮೊನುಗಳು ಕುರ್ಚಿಪಳ್ಳದ ಬಳಿಯ ಸಮುದ್ರ ತೀರದಲ್ಲಿ ಹಿಡಿಯಲಾಗಿದೆಂದು ನರ್ತಮಾನವಿದೆ. ಶಾರ್ಕ್ ಎಂಬ ಉಗ್ರ ಜಾತಿಯ ಮೊನುಗಳು ಅವಾಗಿರುತ್ತವೆಯಂತೆ. ಕೆಲವು ಸಮಯದ ಹಿಂದೆ ಉಳ್ಳಾಲದ ಬಳಿ ನಡೆದ ದೋಣಿ ಅವಘಡವು ಅಲಿನೆ ಮೂಲಕ ನಡೆದೊಳಗೆ ಬಂದ ಈ ಮೊನುಗಳ ಉಪಟಳದಿಂದೆಂದು ಊಹಿಸಲಾಗಿತ್ತು.

ಕರ್ನಾಟಕ ಸಂಘ ಮದ್ರಾಸು

ಅತ್ಯುತ್ತಮ ಕನ್ನಡ ಪುಸ್ತಕಗಳಿಗೆ ಬಹುಮಾನ ಕೊಡಲು ಪುಸ್ತಕಗಳನ್ನು ಆರಿಸಲು ಮದ್ರಾಸ್ ಸರಕಾರವು ಕಳೆದ ವರ್ಷದಂತೆ ಈ ವರ್ಷವೂ ಕರ್ನಾಟಕ ಸೇವಾ ಸಂಘಕ್ಕೆ ಅಧಿಕಾರವಿತ್ತಿದೆ. ಇನ್ನು ಮುಂದೆ ಬಹುಮಾನ ಕೊಡುವಾಗ ಮದ್ರಾಸು ಪ್ರಾಂತ್ಯದಲ್ಲಿರುವ ಕನ್ನಡಿಗರ ಮತ್ತು ಪ್ರಾಂತದೊಳಗೆ ಪ್ರಕಟವಾಗುವ ಪುಸ್ತಕಗಳಿಗೆ ಮಾತ್ರ ಬಹುಮಾನ ಕೊಡಬಹುದೆಂದು ಸರಕಾರವು ಸೂಚಿಸಿದೆ. ಕಳೆದ ಮೇ ತಿಂಗಳ ಮನವಿಯಂತೆ ಪ್ರತಿ ವಿಭಾಗದ ಉತ್ತಮ ಪುಸ್ತಕಗಳಿಗೆ ಕೊಡುವ ರೂ. ೨೫೦ನ್ನು ಮುಂದಿನ ವರ್ಷದಿಂದ ರೂ. ೫೦೦ರಂತೆ ಕೊಡಲಾಗುವುದೆಂದು ಸರಕಾರವು ತಿಳಿಸಿದೆ.

ಸದ್ಯದಲ್ಲೇ ಮದ್ರಾಸಿನ ಎಗ್ಮೋರಿನಲ್ಲಿ ಒಂದು ಕನ್ನಡ ಪ್ರಾಥಮಿಕ ಶಾಲೆಯೂ ಆರಂಭವಾಗಲಿದೆ.

ಬರುವ ಸಪ್ಟೆಂಬರ್ ತಿಂಗಳಲ್ಲಿ ದಿಲ್ಲಿಯಲ್ಲಿ ನಡೆಯುವ "ಭಾರತ ಸಾಹಿತ್ಯಸಮ್ಮೇಳನದ" ಆಮಂತ್ರಣದಂತೆ ಕರ್ನಾಟಕ ಸೇವಾ ಸಂಘದ ಪ್ರತಿನಿಧಿಗಳಾಗಿ ಶ್ರೀ ಎಂ. ಮರಿಯಪ್ಪ ಭಟ್ಟರವರು ಹೋಗಲಿರುವರೆಂದು ತಿಳಿಯತ್ತದೆ.

ಮಂಜನಾಡಿ ಬೋರ್ಡು ಶಾಲೆ

ಇಲ್ಲಿ ತಾ. ೧೫ರಂದು ಪೂರ್ವಾಹ್ನ ೪ಂಟೆ ೮ಕ್ಕೆ ರಾಷ್ಟ್ರಧ್ವಜಾರೋಹಣ ಮತ್ತು ಧ್ವಜವಂದನೆಯೂ ಅಪರಾಹ್ನ ೪ಂಟೆ ೮ಕ್ಕೆ ಮಾ. ರಾ. ಸಾರೆ ಮೈದಿನೆ ಬ್ಯಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ ಜರಗಿತು. ಮುಖ್ಯೋಪಾಧ್ಯಾಯರಿಂದ ಸಭೆಯ ಉದ್ದೇಶ ವಿವರಣೆ ಮತ್ತು ಶ್ರೀಗಳಾದ ಬಿ. ರುಕ್ಮಯ್ಯ ಪೂಜಾರಿ, ಕೆ. ಸಿ. ಅಬ್ದುರ್ರಹ್ಮಾನ್ ಮೊದಲಾದವರ ಭಾಷಣವಾದ ತರುವಾಯ, ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಇಸ್ಕೇಲಿಯದ ಸಿದ್ನಿ ನಗರದ ಮೃಗಾಲಯದ ಗಂಡಾನೆಯೊಂದು ಹೊಟ್ಟೆಕಿಚ್ಚಿನಿಂದ ತನ್ನ ಅರ್ಧಾಂಗಿಯನ್ನು ಕೊಂದಿತು. ಕಾರಣ ಪ್ರೇಕ್ಷಕರ ಮಕ್ಕಳು ಚೊಕಲೇಟನ್ನು ಹೆಣ್ಣಾನೆಗೇ ಅರ್ಪಿಸಿದರು. ರೋಷಗೊಂಡು ಸಿಡಿದು ಗಂಡಾನೆ ಹೆಣ್ಣಾನೆಯ ಹೊಟ್ಟೆಗೆ ತಲೆಹೊಡೆದುಬಿಟ್ಟಿತು. ಹೆಣ್ಣಾನೆ 20 ಅಡಿ ಕೆಳಗಿನ ಕಂದಕದಲ್ಲಿ ಬಿದ್ದು ಬೆನ್ನೆಲುಬು ಮೃತಪಟ್ಟಿತು.



ಚರ್ಮ ವ್ಯಾಧಿಗಳಿಂದ
ಶೀಘ್ರ ಗುಣಹೊಂದಲಿಕ್ಕೆ
ತ್ವರೆಯೆ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯದ ಪುನರ್ಸ್ಥಿತಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳಟೀನೆಯನ್ನು ಹಗಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

ಕಡಿತ, ಘಾತ, ಕುರುಗಳಿಗೆ

557

ಕುಟಿಕೂರಾ ಮುಲಾಮು
CUTICURA OINTMENT

ಭಾರತದ ಸ್ವಾತಂತ್ರ್ಯವು ರಕ್ತಪಾತವಿಲ್ಲದೆ
ಗಳಿಸಲ್ಪಟ್ಟಿತು

✱

ಇದು ಜಾಗತಿಕ ಇತಿಹಾಸದಲ್ಲೊಂದು
ಅಪೂರ್ವ ಘಟನೆ

ಮದ್ಯಪಾನಕ್ಕೆದುರಾಗಿ
ನಮ್ಮ ಹೋರಾಟವೂ ಅದರಂತೇ

✱

ಈ ಜಾಹೀರಾತಿನ ಸ್ಥಳ:

ಕೆನರಾ ಬೇಂಕ್, ಲಿಮಿಟೆಡ್.

ಇದರ ಸೇವಾದಾನ.

WANTED

A librarian for the Canara High School of the minimum eligible S. S. L. C. qualification. Person selected must be prepared to go to Madras for Library Training. Decent salary will be given.

Canara High School, Mangalore, 17-8-'49. } M. MADHAVA RAO Manager.

ವಾರದ ವಿಜ್ಞಾನ ವರದಿಗಳು

ಮತ್ತೂ ಭೀಕರದ ಅಣು ಅಸ್ತ್ರಗಳು

ಅಮೇರಿಕದಲ್ಲಿ ಏಸು ಮಾತು

ವೊಶಿಂಗ್ಟನ್ನಿನಲ್ಲಿ ಅತ್ಯಂತ ನಿಗೂಢವಾಗಿ ಜರಗಿದ ಎಂಗ್ಲೊ-ಅಮೇರಿಕನ್ ಯುದ್ಧಾಧಿಕಾರಿಗಳ ಸಮಿತ್ತಿನಲ್ಲಿ ಅಣು ಬೊಂಬಿಗಿಂತಲೂ ಭೀಕರವಾದ ಕೆಲವು ಅಣು ಅಸ್ತ್ರಗಳ ಕುರಿತು ಚರ್ಚೆ ನಡೆಯಿತೆಂದು ಊಹಿಸಲಾಗಿದೆ.

"ಕೆನಡವು ಈ ಮಾತುಗಳಲ್ಲಿ ಭಾಗವಹಿಸಲಿಲ್ಲ. ಕಾರಣ-ನಮ್ಮವರು ಅಣು ಶಕ್ತಿಯನ್ನು ಶಾಂತಿಕಾಲದ ಯೋಜನೆಗಳಿಗೆ ಉಪಯೋಗಿಸುವ ವಿಧಾನಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ. ಹೀಗೆಂದು ಕೆನಡದ ಹಂಗಾಮಿ ಮುಖ್ಯ ಪ್ರಧಾನಿ ಹೊವೆಯವರು ತಿಳಿಸಿದರು. ಸಂಯುಕ್ತ ಅಮೇರಿಕದ ಸರಕಾರದವರು ಅಣು ಬೊಂಬನ್ನು ತಯಾರಿಸುವ ವಿಧಾನವನ್ನು ಕೆನಡದವರಿಗೂ ತಿಳಿಸಲು ಸಮ್ಮತಿ ಪಡುವುದಿಲ್ಲವಂತೆ. "ಪ್ರಯತ್ನಪಟ್ಟರೆ ನಾವು ಅಡನ್ನು ಮಾಡಬಲ್ಲೆವು. ಆದರೆ ಅವು ಸಂಯುಕ್ತ ಅಮೇರಿಕದವುಗಳಷ್ಟು ಶ್ರೇಷ್ಠ, ತರಗತಿಯವುಗಳಾಗಲಿಕ್ಕಿಲ್ಲ" ಹೀಗೆಂದೂ ಅವರು ತಿಳಿಸುವವರಾದರು.

ಮೋಟಾರು ಯಂತ್ರ ಚಲಿಸಲು ಶೇಂದಿ ಸಾರಗಳು

ಈಗಿನ ಪೆಟ್ರೋಲಿನೊಡನೆ ಶೇಂದಿ ಸೆರೆಗಳ ಸಾರವನ್ನು ಮಿಶ್ರಮಾಡಿದರೆ ಯಶಸ್ವಿಯಾಗಿ ಮೋಟಾರು ಯಂತ್ರಗಳನ್ನು ಚಲಾಯಿಸಬಹುದೆಂದು ಸಂಯುಕ್ತ ಅಮೇರಿಕದ ಕೃಷಿ ಇಲಾಖೆಯವರು ಮಾಡಿದ ಪ್ರಯೋಗಗಳಿಂದ ತಿಳಿದುಬಂದಿದೆ. ಕೃಷಿ ವೆಸ್ತು ಉಪವಸ್ತುಗಳಿಗೆ ಹೊಸ ಉಪಯೋಗಗಳನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನಗಳಲ್ಲಿ ಇದೂ ಸೇರಿದೆ ಎಂದು ಹೇಳಲಾಗಿದೆ. ಇದುತನಕ ಸಾಮಾನ್ಯ ಕಳ್ಳು ಸಾರಾಯಿಗಳು ನಿಷ್ಪ್ರಯೋಜಕವೆಂದು ಪರಿಗಣಿಸಲಾಗಿತ್ತು. ಈಗ ಇವನ್ನು ಮೇಲ್ಶುದ್ಧಿಯಂತೆ ಉಪಯೋಗಿಸಬರುವುದರಿಂದ ಧಾನ್ಯಗಳ ಹೊಟ್ಟಿನಿಂದ ತಯಾರಿಸಲಾಗುವ ಸಾರಾಯಿಗಳ ತಯಾರಿಯನ್ನು ದ್ವಿಗುಣಿತಗೊಳಿಸಲಾಗುವುದು.

ಹಲ್ಲು ವಾಧ್ಯಿಗಳಿಗೆ ಸನ್ಯ ಚೈತನ್ಯ

ಬಿಸಿಲಿನ ಶಕ್ತಿಯನ್ನು ಚೈತನ್ಯನನ್ನಾಗಿ ಮಾರ್ಪಡಿಸಿಕೊಳ್ಳುವ ಸನ್ಯಗಳಲ್ಲಿನ ಹಸರು ಪದಾರ್ಥವನ್ನು ಕೆಲವೊಂದು ರಾಸಾಯನಿಕ ಧಾತುಗಳೊಡನೆ ಮಿಶ್ರಮಾಡಿ ಹಲ್ಲು ಕೊಳೆತು ಹೋಗುವ ವ್ಯಾಧಿಗಳನ್ನು ತಡೆಗಟ್ಟುವ ಔಷಧಿಯಾಗಿ ಉಪಯೋಗಿಸಬಹುದೆಂದು ಸಂಯುಕ್ತ ಅಮೇರಿಕದ ವಿಜ್ಞಾನಿಗಳು ಕಂಡುಹಿಡಿದಿರುವರು.

ಮಲೇರಿಯಕ್ಕೆ ಹೊಸ ಔಷಧಿಗಳು

ಇದುತನಕ ಕ್ವಿನೀನ್ ಮಲೇರಿಯಾ ಜ್ವರ ಬಾಧೆಗೆ ರಾಮಬಾಣದಂತಿರುವ ಔಷಧಿಯೆಂದು ಪರಿಗಣಿಸಲಾಗಿತ್ತು. ಆದರೆ ಕಳೆದ ಹತ್ತು ವರ್ಷಗಳಲ್ಲಿ ಕಂಡುಹಿಡಿಯಲ್ಪಟ್ಟ ಬೇರೆ ಕೆಲವು ಔಷಧಿ ಸತ್ವಗಳು ಮಲೇರಿಯಾ ಜ್ವರವನ್ನು ನಿರ್ಮೂಲ ಮಾಡುವುದರಲ್ಲಿ ಕ್ವಿನೀನಿಗಿಂತಲೂ ಉತ್ತಮವಾಗಿ ಪರಿಣಾಮಕಾರಿಯಾಗಿರುತ್ತವೆಂದು ಡಾ॥ ಕ್ಲಾರ್ಕ್ ಕೂಪರ್ ಎಂಬ ಅಮೇರಿಕನ್ ತಜ್ಞರು ತಿಳಿಸುತ್ತಾರೆ. "ಆದರೆ ಈ ಔಷಧಿಗಳು ಮಲೇರಿಯಾದ ಬೇರೆ ಬೇರೆ ಪರಿಸ್ಥಿತಿ, ಪರಿಮಾಣದ ಸಂದರ್ಭಗಳಲ್ಲಿ ಪರೀಕ್ಷೆ ಮಾಡಿ ನೋಡಲ್ಪಟ್ಟಿಲ್ಲ"ವೆಂದೂ ಅವರು ತಿಳಿಸುತ್ತಾರೆ. ಕ್ಲೊರೊಕ್ಯಾನ್, ಸಮಿನೊ ಕ್ವಿನೋಲ್ಯಾನ್ ಎಂಬಿವು ಹೊಸ ಮಲೇರಿಯಾ ನಿವಾರಕಗಳ ಹೆಸರುಗಳು.

ಗ್ರೀನ್ ವಿಚ್ ಕಾಲ ಸೂಚನೆಗೆ ಧಕ್ಕೆ

ಅಣುಶಕ್ತಿಯ ಗಡಿಯಾರದಿಂದ

ಜಗತ್ತಿನ ಸಮಯ ಸೂಚಿಗಳು ಸೊನ್ನೆ ಡಿಗ್ರಿ ರೇಖಾಂಶದಲ್ಲಿರುವ ಗ್ರೀನ್‌ವಿಚ್‌ದಲ್ಲಿನ ವಿಶ್ವ ಸಮಯ ನಿಯಂತ್ರಣ ವೇಳೆಯನ್ನು ತಳಹದಿಯಾಗಿ ಅನುಸರಿಸುತ್ತವೆ. ಈಗ ಅಣುಶಕ್ತಿಯಿಂದ ಚಲಾಯಿಸಲ್ಪಡುವ ಗಡಿಯಾರಗಳು ಕಂಡುಹಿಡಿಯಲ್ಪಟ್ಟಿರುವುದರಿಂದ ಗ್ರೀನ್‌ವಿಚ್‌ನ ಈ ಕಾಲ ಪ್ರಾಮುಖ್ಯತ್ವಕ್ಕೆ ಧಕ್ಕೆ ತಗಲುವಂತಿದೆ ಎಂಬ ಸಂಗತಿಯು ಅನೇಕರಿಗೆ ಕೌತುಕವನ್ನುಂಟು ಮಾಡಬಹುದು. ಈ ಸಂಬಂಧ ಕೆಲವೊಂದು ವ್ಯವಸ್ಥೆಗಳು ಸಂಪೂರ್ಣಗೊಳಿಸಲ್ಪಟ್ಟಾಗ ಜಗತ್ತಿನ ಸರಿಯಾದ ಸಮಯ ಸೂಚಿಯ ಕೇಂದ್ರವು ವೊಶಿಂಗ್ಟನ್ನಿನಲ್ಲಾಗುವುದು. ಆದರೆ ಬ್ರಿಟಿಷ್ ಗಡಿಯಾರ ಯಂತ್ರಿಕರು ಅಂತಹ ಸಮಯ ಸೂಚಿಯನ್ನು ರಚಿಸಿ ಗ್ರೀನ್‌ವಿಚ್ಚಿನಲ್ಲೇ ಇರಿಸಬಹುದೆಂದೂ, ಅಂತಹ ಸಂದರ್ಭದಲ್ಲಿ ಗ್ರೀನ್‌ವಿಚ್ಚಿನ ಭೌಗೋಳಿಕ ಮಹತ್ವವು ಕಡಿಮೆಯಾಗದಂತಾಗುವುದೆಂದೂ ತಿಳಿಸುತ್ತಾರೆ. ಅಮೇರಿಕನ್ನೇತರರೊ ಬ್ರಿಟಿಷ್ ರಾಜಜ್ಯೋತಿರ್ಗಣಿತಜ್ಞರಾದ ಸರ್ ಹೆರೊಲ್ಡ್ ಸ್ಪೆನ್ಸರ್ ಜೋನ್ಸ್‌ರನ್ನು ಸಲಹೆಗಾಗಿ ಆಮಂತ್ರಿಸಿದ್ದರು. ಅಣು ಗಡಿಯಾರವು ಮಿಡಿಯಹತ್ತಿದಂದಿನಿಂದ ಜಗತ್ತಿನ ಕಾಲ ಕೇಂದ್ರವು ವೊಶಿಂಗ್ಟನ್ ಇಲ್ಲವೆ ಗ್ರೀನ್ ವಿಚ್ ಇವೆರಡುಗಳಲ್ಲಿ ಒಂದಾಗುವುದು ಎಂದನರು ಅಭಿಪ್ರಾಯ ಪಟ್ಟಿರುವರು.

ಒಂದಡಿ ಉದ್ದದ ಮೊಟ್ಟೆ

ಎಕ್ಸ್‌ರೇ ಪರೀಕ್ಷೆಗೊಳಪಡಿಸಲ್ಪಡುವುದು

1862ರಲ್ಲಿ ಆಫ್ರಿಕದ ನುಡಗಾಸ್ಕರ್ ದ್ವೀಪದಲ್ಲಿ ಸಿಕ್ಕಿದ ಒಂದು 12 ಇಂಚು ಉದ್ದದ ಮೊಟ್ಟೆಯು ಆಸ್ಟ್ರೇಲಿಯದ ಮೆಲ್‌ಬೋರ್ನ್ ವಸ್ತುಪ್ರದರ್ಶನಾಲಯದಲ್ಲಿದೆ. ಅದನ್ನಿಟ್ಟ ವಕ್ಷಿವರ್ಗವು ಈಗೆರಡು ಶತಮಾನಗಳಿಂದ ಸಂಪೂರ್ಣ ನಿರ್ನಾಮವಾಗಿದೆ. ಆ ಮೊಟ್ಟೆಯು ಇದು ತನಕ ಒಡೆದಿಲ್ಲವಾದುದರಿಂದ ಅದರೊಳಗೆ ಪಿಂಡಾವಶೇಷಗಳು ಇರಬಹುದೆಂದು ಊಹಿಸಲಾಗಿದೆ. ಆಸ್ಟ್ರೇಲಿಯನ್ ತಜ್ಞರು ಆ ಮೊಟ್ಟೆಯ ಸ್ಥೀಗ ಎಕ್ಸ್‌ರೇ ಪರೀಕ್ಷೆಗೊಳಪಡಿಸುವರಂತೆ. ಒರ್ವ ಡಚ್ ಪಕ್ಷಿ ವೈಜ್ಞಾನಿಕನು ಆದರ ಕುರಿತು ಸವಿಸ್ತಾರ ಸಂಗತಿಗಳನ್ನು ಕೊಡಬೇಕೆಂದು ಸಸ್ತು ಪ್ರದರ್ಶನಾಧಿಕಾರಿಗಳಿಗೆ ಬರಕೊಂಡಾಗ ಈ ನಿರ್ಣಯವನ್ನು ಕೈಕೊಳ್ಳಲಾಯಿತು. ಮೊಟ್ಟೆಯು 9½ ಇಂಚು ಎತ್ತರವಿದ್ದು ಳಳ ಇಂಚು ಸುತ್ತಳತೆಯುಳ್ಳದಾಗಿದೆ. ಅದರ ಭಾರ 2 ರಾತ್ಲ್ ಗಳಷ್ಟಿದೆ.

ಅಣುಶಕ್ತಿಯ ಔಷಧಿ

ಸಂಯುಕ್ತ ಅಮೇರಿಕದ ಪರಿಶೋಧನಾ ಕಾರ್ಯಕರ್ತರ ಅಭಿವ್ಯಾಯದಲ್ಲಿ ಅಣುಶಕ್ತಿಯಿಂದ ತಯಾರಿಸಬಹುದಾದ ಔಷಧಿಯನ್ನು ಸಲೋಗಿಸಿದ್ದರೆ ಹಿರೋಶಿಮಾ, ನಾಗಸಾಕಿಗಳಲ್ಲಿ ಜ್ವಾಲೆಗಳ ಸುಡತದಿಂದ ಸಕ್ತವರಲ್ಲಿ ಶೇಕಡಾ 66ರಷ್ಟು ಮಂದಿಗಳನ್ನು ಬದುಕಿಸಬಹುದಿತ್ತು ಎಂದಿದೆ. ಈಗ ಇಂತಹ ಔಷಧಿಗಳನ್ನು ತಯಾರುಮಾಡಿ ಅವುಗಳನ್ನು ಉಪಯೋಗಿಸುವ ವಿಧಾನಗಳನ್ನು ಹಂಚಲಾಗುವುದು.

ಕುಳ್ಳ ದಂಪತಿಗಳಿಗೆ ಪುತ್ರ ಜನನ

ಮೆಕ್ಸಿಕೋದಲ್ಲಿನ ಒಂದು ಸರ್ಕಸ್ ಕಂಪೆನಿಯಲ್ಲಿ ಕೆಲಸ ಮಾಡುವ ಈರ್ವ ಕುಳ್ಳ ದಂಪತಿಗಳಿಗೆ ಒಂದು ಸರ್ವ ಸಾಮಾನ್ಯ ಆಕೃತಿಯ ಗಂಡು ಶಿಶು ಹುಟ್ಟಿದೆ. ತಾಯಿಯ ಎತ್ತರ 29 ಇಂಚು, ತಂದೆದ್ದು 30! ತಾಯಿಯ ವಯಸ್ಸು 27, ತಂದೆದೂ 28. ಮೊದಲು ಅವರು ಬೇರೆ ಬೇರೆ ಸರ್ಕಸ್ ಕಂಪೆನಿಗಳಲ್ಲಿ ಕೆಲಸಕ್ಕಿದ್ದರು. ಮತ್ತೆ ಒಂದೇ ಕಡೆ ಸೇರಿದರು. ಅಲ್ಲಿ ಅವರೊಳಗೆ ಪ್ರಣಯ ಬೆಳೆದು ವಿವಾಹವಾಯಿತು. ಅವರು ವೈದ್ಯರನ್ನು ಕೇಳಿದರು: "ನಮಗೆ ಮಕ್ಕಳಾಗುವುದು ಸಾಧ್ಯವೆ?" ಎಂದು. "ಅಪಾಯಕರ" ವೆಂದರು ವೈದ್ಯರು. ಆದರೂ ಪ್ರೇಮದ ದಂಪತಿಗಳು ಅಪಾಯವನ್ನೆದುರಿಸಲು ನಿರ್ಧರಿಸಿದರು. ಹೆರಿಗೆಯ ಕಾಲದಲ್ಲಿ ನಿಪುಣ ವೈದ್ಯರು ಹಾಜರಿದ್ದು ಯಶಸ್ವಿಯಾದ ಶಸ್ತ್ರಕ್ರಿಯೆಯ ಮೂಲಕ ಮಗುವನ್ನು ಬೆಳಕಿಗೆ ತಂದರು. ಅಮೇರಿಕದ ಎಲ್ಲಾ ಕಡೆಗಳಿಂದ ಕುಳ್ಳ ದಂಪತಿಗಳಿಗೆ ಸಕಿತೋಪಹಾರ್ಥದ ಬಹುಮಾನಗಳು ಕಳುಹಿಸಲ್ಪಟ್ಟಿದ್ದು ಅವುಗಳ ಮೌಲವು ಲಕ್ಷಾಂತರ ಡಾಲರುಗಳಷ್ಟಾಗಿದೆ. ಅದರಿಂದವರು ತಮ್ಮ ಸ್ವಂತ ಸರ್ಕಸ್ ಸಂಸ್ಥೆಯನ್ನು ಕೊಳ್ಳುವರಂತೆ.

ಬಸ್ಸು ಪ್ರಯಾಣಿಕರ ಅವಗಾಹನೆಗೆ

ಪ್ರತಿದಿನ ಮಂಗ್ಳೂರಿಂದ ಬೆಳಿಗ್ಯೆ ಘಂಟೆ **5** ಮತ್ತು **5-30**ಕ್ಕೂ, ಮುಲ್ಕಿಯಿಂದ ಕೂಡಾ ಬೆಳಿಗ್ಯೆ **5** ಘಂಟೆಗೂ, ಮುಂಬ್ಯಾಗೆ ಬರೇ **36** ಘಂಟೆ ಸಮಯದಲ್ಲಿ ತಲ್ಪುವಂತೆ ಮಂಗ್ಳೂರು ದಿ. ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಯವರು ಸರ್ವಿಸುಗಳನ್ನು ಕ್ಷಿಪ್ರ ಸಮಯದಲ್ಲಿ — ಮಂಗ್ಳೂರು ಮತ್ತು ಮೂಲ್ಕಿಯಿಂದ ಹೊರಡಿಸಿ ಕಡೂರಿಗೆ ಮಧ್ಯಾಹ್ನ **2-30**ರೊಳಗೆ ತಲ್ಪಿ ಅಲ್ಲಿಂದ ಕೂಡೇ ಹೊರಡುವ ರೆಲ್ವೆಯಲ್ಲಿ ಮುಂಬ್ಯಾಗೆ ಸೀದಾ ತಲ್ಪುವ ಏರ್ಪಾಡು ಮಾಡಿರುತ್ತದೆ. ಟಿಕೇಟುಗಳು ಮಂಗ್ಳೂರು ಮತ್ತು ಮೂಲ್ಕಿ ಆಫೀಸಿನಲ್ಲಿ ಸರ್ವಿಸು ಬಿಡುವ ಎರಡು ದಿವ್ಸಕ್ಕೆ ಮುಂಚಿತವಾಗಿಯೇ ದೊರಕುವಂತೆ ರಿಜರ್ವೇಶನ್ ಆಫೀಸು ಕೂಡಾ ಪ್ರತೀ ದಿವಸ ಬೆಳಿಗ್ಯೆ ಘಂಟೆ **9**ರಿಂದ ಶ್ಯಾಮ **6** ಘಂಟೆ ವರೆಗ್ಗೂ ತೆರೆಯಲ್ಪಟ್ಟಿದೆ. ಜಿಲ್ಲೆಯ ಇತರ ಟ್ಯಾನುಗಳಿಗೆ ಕೂಡಾ ಮಂಗ್ಳೂರಿನಲ್ಲಿ ಒಂದು ದಿವ್ಸಕ್ಕೆ ಮುಂಚಿತವಾಗಿ — ಟಿಕೇಟುಗಳು ಸಿಗುವ ಏರ್ಪಾಡು ಕೂಡಾ ಉಂಟು.

ವಿ.- ಸೂಚನೆ:— ಪ್ರಯಾಣಿಕರು ತಮ್ಮೊಂದಿಗೆ ಅದಷ್ಟು ಸಾಮಾನನ್ನು ಕಡಿಮೆ ಇಯ್ಯೋಣವಾಗಬೇಕಾಗಿ ವಿನಂತಿ.

ಮಂಗಳೂರು
24-6-49

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,91,000

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ತ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನನ್ನು ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: Maharaja Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ಕೃಷ್ಟವಾ ಗಿದಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಪರಿಹರಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ಶುಕ್ರವಾರ 26—8—1949 [ಸಂಚಿಕೆ 34]

ವಿವಿಧ ವೃತ್ತನ್ಯೆನಿಧ್ಯ

ಭಾರತದ ಅಂತರ್ರಾಷ್ಟ್ರೀಯ ಸ್ಥಾನಮಾನ

ಹದಿನೆರಡು ಜಾಗತ್ತಿಕ ಸಂಸ್ಥೆಗಳ ಸದಸ್ಯತ್ವ

ಸ್ವತಂತ್ರ ಭಾರತದ ಅಂತರ್ರಾಷ್ಟ್ರೀಯ ಸ್ಥಾನಮಾನವು ಉನ್ನತಿಗೇರಿರುವುದರ ನಿದರ್ಶನವೆಂಬಂತೆ ಅದು ಈ ಕೆಳಗಿನ ವಿಶ್ವ ಪ್ರತಿನಿಧಿಕ ಸಂಸ್ಥೆಗಳ ಸದಸ್ಯ ರಾಷ್ಟ್ರವಾಗಿರುವುದು ಒಂದು ಗಣನೀಯ ಸಂಗತಿ. ಅವು ಯಾವುದೆಂದರೆ:

1. ಅಂತರಾಷ್ಟ್ರೀಯ ಮಜೂರ ಸಂಘ. 2. ಯುಕ್ತರಾಷ್ಟ್ರಗಳ ಶೈಕ್ಷಣಿಕ, ನೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘ. 3. ಅಂತರಾಷ್ಟ್ರೀಯ ಆಹಾರ ಮತ್ತು ಕೃಷಿ ಸಂಸ್ಥೆ. 4. ಅಂತರಾಷ್ಟ್ರೀಯ ವಿಮಾನ ಸಂಸ್ಥೆ. 5. ಅಂತರಾಷ್ಟ್ರೀಯ ಪುನರ್ರಚನೆ ಮತ್ತು ಅಭಿವೃದ್ಧಿ ಸಹಾಯಕ ಬೇಂಕು. 6. ಅಂತರಾಷ್ಟ್ರೀಯ ಧನ ಸಹಾಯಕ ನಿಧಿ. 7. ವಿಶ್ವ ಟಪಾಲು ಸಂಘ. 8. ಅಂತರಾಷ್ಟ್ರೀಯ ಟೆಲಿಗ್ರಾಫ್ ಸಂಸ್ಥೆ. 9. ಜಾಗತಿಕ ಆರೋಗ್ಯ ಸಂಸ್ಥೆ. 10. ಅಂತರಾಷ್ಟ್ರೀಯ ವಾಣಿಜ್ಯ ಸಂಸ್ಥೆಯ ತಾತ್ಕಾಲಿಕ ಸಮಿತಿ. 11. ಅಂತರಾಷ್ಟ್ರೀಯ ಹವಾಮಾನ ನಿರೀಕ್ಷಕ ಸಂಸ್ಥೆ. 12. ಅಂತರ್ ಸರಕಾರಗಳ ಹಡಗು ವ್ಯವಹಾರ ಸಲಹಾ ಸಮಿತಿ.

ಪಾಕಿಸ್ತಾನ ಸೈನ್ಯದ ಅಧಿಪತಿ ಬ್ರಿಟನಿಗೆ ಹಿಂದಕ್ಕೆ ಕರೆಯಲ್ಪಟ್ಟರು

ಪಾಕಿಸ್ತಾನ ಸೈನ್ಯದ ಮುಖ್ಯ ಸೇನಾಪತಿಗಳಾಗಿದ್ದ ಜನರಲ್ ಗಾರ್ಸೆ ಅವರು ತಮ್ಮ ಹುದ್ದೆಗೆ ರಾಜೀನಾಮೆಕೊಟ್ಟು ಬ್ರಿಟನಿಗೆ ಹಿಂತಿರುಗುವರೆಂದು ತಿಳಿದುಬರುತ್ತದೆ. ಹೀಗೆ ಬರಲು ಅವರಿಗೆ ಬ್ರಿಟಿಷ್ ಸರಕಾರದ ಹುಕುಮು ಬಂದಿರುವುದಾಗಿಯೂ ತಿಳಿದುಬರುತ್ತದೆ. ಇದಕ್ಕೆ ಕಾರಣ: ಪಾಕಿಸ್ತಾನ ಹಿಂದು ಸ್ಥಾನಗಳೊಳಗೆ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿಯಾದರೂ ಯುದ್ಧ ನಡೆಯುವ ಸಂದರ್ಭದಲ್ಲಿ ತಮ್ಮ ದೇಶದ ಸೈನಾಧಿಕಾರಿಗಳು ಅಲ್ಲಿರಬಾರದೆಂದು ಬ್ರಿಟಿಷ್ ಸರಕಾರದ ಆಶಯವಿರುತ್ತದೆ.

ಭಾರತಕ್ಕೆ ಸ್ವೀಡನಿನ ಗೃಹ ನಿರ್ಮಾಪಕ ತಜ್ಞರು

ಭಾರತ ಸರಕಾರಕ್ಕೆ ವಸತಿ ನಿರ್ಮಾಣ ಸಮಸ್ಯೆಯ ಕುರಿತು ಸಲಹೆಗಳನ್ನು ಕೊಡಲು ಸ್ವೀಡನಿನಿಂದ ತಜ್ಞರ ಒಂದು ಕೂಟವು ಆಹ್ವಾನಿಸಲ್ಪಟ್ಟಿದೆ.

ದಿಲ್ಲಿಯ ಬಳಿಯ ನಿಜಾಮುದ್ದಿನ ಬಡಾವಣೆಯಲ್ಲಿ ಸ್ಥಾಪಿಸಲ್ಪಟ್ಟ ಇಂಡಿಯಾ ಸರಕಾರದ ಕಾರ್ಖಾನೆ ರಚಿತ ಮನೆ ತಯಾರಕ ಸಂಸ್ಥೆಯು ಬರುವ ನವೆಂಬರ್ ತಿಂಗಳಿಂದ ಕಾರ್ಯಾರಂಭವನ್ನು ಮಾಡುವುದೆಂದು ತಿಳಿದುಬರುತ್ತದೆ.

ಲಂಚದ ಕುರಿತು ಕಳಕಳಿಬೇಡ

ಜನತೆಗೆ ಮಂತ್ರಿಯ ಹಿತವಾದ

"ದೇಶದಲ್ಲಿನ ಆಡಳಿತದಲ್ಲಿ ಲಂಚವಂಚನೆಯಿರುವುದರ ಕುರಿತು ಬೆರಳಿನಷ್ಟನ್ನು ಬೆಟ್ಟದಷ್ಟು ಮಾಡಿ ಪ್ರಚಾರ ಮಾಡುವವರು ದೇಶದ ಮತ್ತು ಕಾಂಗ್ರೆಸಿನ ದ್ರೋಹಿಗಳು" ಹೀಗೆಂದು ಯುಕ್ತ ಪ್ರಾಂತ್ಯದ ಶಿಕ್ಷಣ ಮತ್ತು ಸುಜೂರ ಶಾಖಾ ಮಂತ್ರಿಗಳಾದ ಶ್ರೀ ಸಂಪೂರ್ಣಾನಂದರು ಒಂದು ಭಾಷಣದಲ್ಲಿ ತಿಳಿಸುವವರಾದರು. ಮತ್ತೂ ಅವರು ಹೀಗೆಂದರು.

"ನಿಜವಾದ ಮತ್ತು ಮಹತ್ವದ ಸಮಸ್ಯೆಗಳನ್ನು ಮರೆಮಾಚಲು ಕೆಲವರು ಚಿಕ್ಕ ಪುಟ್ಟ ಕಿರುಕುಳಗಳನ್ನು ಬೃಹದಾಕಾರದವಾಗಿ ಮಾಡಿ ಪ್ರಕಟನೆ ಕೊಡುತ್ತಾರೆ. ಹೀಗೆ ಲಂಚವಂಚನೆಯ ವಿರುದ್ಧ ಬೊಬ್ಬೆ ಹೊಡೆಯುವವರನ್ನು ಬಿಟ್ಟರೆ ಮತ್ತೆಲ್ಲರೂ ವಂಚಕರೆಂದೂ ತತ್ಕಾರಣವಾಗಿ ಇಡೀ ದೇಶವೇ ಕಳ್ಳಕಾಕರಿಂದಲೂ. ದರೋಡೆ ಬೋರರಿಂದಲೂ ಮತ್ತು ಸೀಚರಿಂದಲೂ ತುಂಬಿದೆಂದೂ ಭಾಸವಾಗಹತ್ತಿದೆ. ಈ ಪ್ರಚಾರದಿಂದ ಅಂತರ್ರಾಷ್ಟ್ರೀಯ ದೃಷ್ಟಿಯಲ್ಲಿ ಭಾರತದ ವರ್ಚಸ್ಸು ಶಿಥಿಲವಾಗುವುದು. ಇಂಥ ದೇಶ ದ್ರೋಹಿ ಅಪಸ್ವಾರಕದ ವಿಷಯ ಜನತೆ ಎಚ್ಚರ ತಾಳಬೇಕು.

ಗೋವೆಯ ಗೃಹಸ್ಥರಿಗೆ ಗವರ್ನರ್ ಪದ

ಪೋರ್ತುಗೀಸರ ಇತ್ತೀಚೆಗಿನ ತಂತ್ರ

ಈಗ ಗೋವೆಯ ನಾಗರಿಕ ಆಡಳಿತ ವಿಭಾಗದ ಮುಖ್ಯಾಧಿಕಾರಿಗಳಾಗಿರುವ ಡಾ। ಅಲ್ವಾರೊ ದಿ ಮೆಲೊ ಅವರನ್ನು ಪೋರ್ತುಗೀಸ್ ಸರಕಾರದವರು ತಮ್ಮ ಪೂರ್ವ ಆಫ್ರಿಕದ ವಸಾಹತಿನ ಗವರ್ನರರಾಗಿ ನೇಮಿಸಿರುವರೆಂದು ವದಂತಿಯಿದೆ. ಗೋವೆಯಲ್ಲಿ ಉಕ್ಕೇರುತ್ತಿರುವ ಶಾಶ್ವೇಯ ಭಾವನೆಯನ್ನು ತಣಿಸಲು ಇದೊಂದು ಚತುರೋಪಾಯವೆಂದೆನ್ನಲಾಗಿದೆ. ಗೋವೆಯ ಜನರನ್ನು ಪೋರ್ತುಗಾಲಿನ ಜನರ ಸರಿಸಮಾನತೆಯಿಂದ ಕಾಣುತ್ತಿರುವೆವೆಂಬಿಕೋರಿಸುವ ಕುಹಕವಿದೆಂದೂ ಆದರೆ ಪೋರ್ತುಗೀಸರ ಈ ನಿರೀಕ್ಷೆ ಮಾತ್ರ ತದ್ವಿರುದ್ಧ ಅಭಿಪ್ರಾಯವನ್ನು ಗೋವೆಯ ಜನರಲ್ಲುಂಟುಮಾಡಿದೆಂದೂ ಆ ಕಡೆಯ ವರದಿಗಳು ತಿಳಿಸುತ್ತವೆ.

ಮೋಸದ ಮುದ್ದು ತಯಾರಿಗಳು ದಿಲ್ಲಿಯಲ್ಲಿ ವಂಚಕರನ್ನು ಹಿಡಿದರು

ಪ್ರಖ್ಯಾತ ತಯಾರಿಗಳಾದ ಗ್ಯಾಸ್ ಹೋಟರ್, ಸಿಡ್ಲಿಸ್ ಪೌಡರ್, ಕೆನ್ಸೋಫಿನ್ ಮಾತ್ರೆಗಳು, ಮೊದಲಾದ ಕೆಲವು ಔಷಧಿ ಮತ್ತು ಆರೋಗ್ಯ ಸತ್ವಗಳನ್ನು ನಕಲಿಯಾಗಿ ತಯಾರಿಸಿ ಪ್ರಖ್ಯಾತ ಔಷಧಿಯ ಖಾಲಿ ಬಾಟ್ಲಿಗಳಲ್ಲೂ, ಡಬ್ಬಿಗಳಲ್ಲೂ, ತುಂಬಿಸಿ ಮೋಸದ ಮುಚ್ಚಳ ಹೊದಿಕೆಗಳಿಂದ ಸಿದ್ಧ ಮಾಡಿ ಕವ್ವಿ ಕ್ರಯಕ್ಕೆ ಮಾರುವ ಒಂದು ತಂಡವನ್ನು ದಿಲ್ಲಿಯಲ್ಲಿ ಹಿಡಿಯಲಾಗಿದೆ. ಒಬ್ಬ ವೈದ್ಯರು ಮತ್ತು ಒಂದು ಕೆಮಿಸ್ಟ್ ಅಂಗಡಿಯವರು ಈ ಸಾರ್ವಜನಿಕ ಮೋಸದಲ್ಲಿ ಭಾಗಿಗಳಾಗಿದ್ದರೆಂದು ತಿಳಿದುಬರುತ್ತದೆ.

THE UNITED INDIA LIFE ASSURANCE COMPANY LIMITED.

MADRAS.

"UNITED INDIA"

UNITED INDIA is one of the soundest of insurance concerns.

It is the custodian of more than 40 millions of rupees belonging the Policy holders.

It has more than 100,000 Policy holders.

It has assured sums of more than Rs. 200 millions.

It has constituted a TRUST—the Official Trustee of Madras is the Trustee for the Policy—holders' Fund.

UNITED INDIA is a household word in South India and is well Known throughout India, Ceylon, Malaya and East Africa.

For particulars please apply to—

The Branch Manager,

K. S. Rao Road, Mangalore.

ಹರ್ಷಾನಂದವನ್ನು ಹೇಗೆ ಗಳಿಸಬಹುದು?

[ಶಿಕ್ಷಣ ಸ್ವರೂಪದ ತಜ್ಞರೆನೆಸಿರುವ ಸೌಂದರ್ಯವಂತಳೂ, ಅರಿವುಗೆಟ್ಟವಳೂ, ಆದರ್ಶವಂತಳೂ, ಸಂತೋಷದಿಂದ ಕುಣಿದಾಡುವ ಮಕ್ಕಳು ಅಲ್ಲದೆ ಸುಖ ಸಾಧನೆಗಳನ್ನು ಸಡಿಲು ಬಾಹುವಾದ ಹಣ ಇವುಗಳನ್ನು ಹೊಂದುವುದರಿಂದ ಮನುಷ್ಯನು ಹರ್ಷದಿಂದಿರಬಲ್ಲನೆ? ಶ್ರೀ ಪಿ. ನಟೇಸಂಗಂರವ್ ಎಂಬ ವಿದ್ವತ್ ಮುಖ್ಯೋಪಾಧ್ಯಾಯರೊಬ್ಬರು ತಮ್ಮ ಪಾಶ್ಚಾತ್ಯ ಪೌರ್ವಾತ್ಯ ಸಾಹಿತ್ಯಗಳ ಅಭ್ಯಾಸದಿಂದ ಪಡೆದ ಅನುಭವಗಳ ಆಧಾರದ ಮೇಲೆ ಈ ಕುರಿತು ಬರೆದ ಒಂದು ಲೇಖದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.]

ನಾವು ನಮ್ಮ ಸುತ್ತಲೂ ಏನನ್ನು ನೋಡುತ್ತೇವೆ? ಬೆಟ್ಟ ಕಣಿವೆಗಳನ್ನೂ ನದಿ ಸರೋವರಗಳನ್ನೂ ಮನೆ ಮಕ್ಕಳನ್ನು ಮನುಷ್ಯರನ್ನು ಜೀವ ಜಂತುಗಳನ್ನೂ, ಅಚ್ಚಿದೆ ಸೂರ್ಯ ಚಂದ್ರ ನಕ್ಷತ್ರಾದಿ ಗ್ರಹ ಸಮೂಹಗಳನ್ನೂ ಮತ್ತು ಇತರ ಅನೇಕ ವಿಧದ ಸುಂದರವಾದ ವಸ್ತುಗಳನ್ನೂ ನಾವು ಕಾಣುತ್ತೇವೆ. ಕೆಲವು ಸಮಯ ಭೀಕರ ದೃಶ್ಯಗಳನ್ನೂ ನೋಡುತ್ತಿರುತ್ತೇವೆ-ಯುದ್ಧಗಳು, ರಕ್ತಪಾತ, ಭೂಕಂಪ, ಬಿರುಗಾಳಿ ಅನಾಹುತ ಮೊದಲಾದುವುಗಳು. ಇವು ಮಾನವ ಸಾಮರ್ಥ್ಯವನ್ನು ವಿಂಗಡಿಸಂತವುಗಳು. ನಾವಿದನ್ನು ಪ್ರಕೃತಿ ಎನ್ನುತ್ತೇವೆ. ಈ ಆಕೃತಿಗಳು ಚಲಿಸುತ್ತ ಕಾರ್ಯಗೆಯ್ಯುತ್ತವೆ. ಆದರೆ ಅವುಗಳಲ್ಲಿ ಯಾವುದಾದ ರೊಂದಿನ್ನು ಶಕ್ತಿಯಿಲ್ಲದೆ ಅವು ಚಲಿಸಲಾರವು. ಉಗಿಬಂಡಿಯು ನೀರಿನ ಆವಿಯ ಶಕ್ತಿಯಿಂದ ಕಬ್ಬಿಣ ಪಟ್ಟಿಗಳ ಮೇಲೆ ಚಲಿಸುವುದು, ವಿಮಾನಕ್ಕೆ ಪೆಟ್ರೋಲ್ ಎಣ್ಣೆಯ ಶಕ್ತಿ ಬೇಕು. ವಿದ್ಯುಚ್ಛಕ್ತಿಯಿಂದ ಅನೇಕ ಯಂತ್ರಗಳು ಕೆಲಸ ಮಾಡುತ್ತವೆ. ಅದೇ ರೀತಿ ಈ ಪ್ರಕೃತಿಯು ತನ್ನ ಕೆಲಸಗೈಯಲು ಅದ್ಯಾವ ಶಕ್ತಿಯು ಸಹಾಯ ಮಾಡುತ್ತದೆ? ಅದೇ ಜೀವ ಶಕ್ತಿ. ಅದು ಸರ್ವತ್ರವೂ ವ್ಯಾಪಿಸಿಕೊಂಡಿದ್ದು ಅದಕ್ಕೆ ಎರಡು ಸ್ಥಿತಿ ಸ್ವರೂಪಗಳಿವೆ. ಒಂದು ಸ್ತಬ್ಧವಾದುದು ಇನ್ನೊಂದು ಚಲನಾತ್ಮಕವಾದುದು. ಪರದೆಯ ಮೇಲೆ ಚಲಚಿತ್ರಗಳು ನಟಿಸುವಂತೆ ಸ್ತಬ್ಧ ಶಕ್ತಿಯ ಹಿನ್ನೆಲೆಯ ಮೇಲೆ ಚಲನಾತ್ಮಕ ಶಕ್ತಿಯು ಕಾರ್ಯಗೆಯ್ಯುತ್ತಿದೆ.

✠

ನಾವು ನಾಟಕ ರಂಗದ ನಟರಂತೆ ಜೀವಿಸುತ್ತಲೂ ಚಲಿಸುತ್ತಲೂ ಇರುತ್ತೇವೆ. ಮಕ್ಕಳು ಗೊಂಬೆಗಳೊಡನೆ ಆಟವಾಡುವುದನ್ನು ನೋಡುತ್ತೇವೆ, ಅದುಅವರಿಗೆ ಅತ್ಯಂತ ಮಹತ್ವದ ವಿಷಯವಾಗಿದೆ. ಅವರಿಗೂ ಸುಖ ದುಃಖಗಳಿವೆ. ನಾವು ಈ ಗೊಂಬೆಯಾಟದ ಸ್ಥಿತಿಯಿಂದ ಮುಂದಕ್ಕೆ ಬಳೆದಿದ್ದೇವೆ. ಮಕ್ಕಳ ಆಟವು ಮಹತ್ವದ್ದಲ್ಲವೆಂದೂ ಆ ವಿಷಯ ಅವುಗಳ ಶೃದ್ಧೆಯು ಕಾಲಾಸ್ಪದವೆಂದೂ ನಾವೂ ಭಾವಿಸುತ್ತೇವೆ. ಹೀಗೆ ಅವರ ಗೊಂಬೆಗಳಿಗೆ ಏನಾದರೂ ಧಕ್ಕೆ ಸಂಭವಿಸಿದರೆ ಇಲ್ಲವೆ ಅವು ಕಳೆದು ಹೋದರೆ ಕೂಗುವ ಅವರನ್ನು ನಾವು ಸಮಾಧಾನ ಪಡಿಸುತ್ತೇವೆ, ಅದೇ ರೀತಿ ನಾವೆಲ್ಲರೂ ಬೇರೆ ತರದ ಗೊಂಬೆಗಳೊಡನೆ ಆಟವಾಡುತ್ತಿರುತ್ತೇವೆ. ನಮ್ಮ ಗೊಂಬೆಗಳು ಜೀವ ಶಕ್ತಿಯಿಂದ ಚಲಿಸುತ್ತ ಕಾರ್ಯ ಗೆಯ್ಯುವಂತಹುಗಳು; ಅಂತೇ ನಮ್ಮ ಆಟದಲ್ಲಿ ನಾವು ಗಂಭೀರವಾದ ಶ್ರದ್ಧೆಯನ್ನು ತೋರಿಸುತ್ತೇವೆ; ನಮಗೂ ಸುಖ ದುಃಖಗಳಿವೆ; ನಾವವನ್ನು ಭೋಗಿಸುವಾಗ ಹರ್ಷವನ್ನು ಪಡೆಯುತ್ತೇವೆ: ಅವುಗಳಿಗೆ ಏನಾದರೂ ಅನಾಹುತ ಸಂಭವಿಸಿದರೆ ಇಲ್ಲವೆ ಅವು ಕಳೆದು ಹೋದರೆ ನಾವೂ ಅಳುತ್ತೇವೆ.

✠

ನಮ್ಮೊಳಗೂ ಈ ಸ್ಥಿತಿಯನ್ನು ವಿಕ್ಷಿಬಳೆದವರೂ ಇದ್ದಾರೆ. ಅವರು ಜೀವನ ಶಿಖರದ ತುಟ್ಟ ತುದಿಯನ್ನು ಮುಟ್ಟಿದವರು, ಅಲ್ಲವರು ನಿಜವಾದ ಹರ್ಷಾನಂದ ವನ್ನನುಭವಿಸುತ್ತಾರೆ. ಮಕ್ಕಳ ಗೊಂಬೆಯಾಟವನ್ನು ನಾವು ಯಾವ ದೃಷ್ಟಿಯಿಂದ ಕಾಣುತ್ತೇವೊ ಅದೇ ದೃಷ್ಟಿಯಿಂದ ಇವರು ನಮ್ಮ ಈ ಆಟವನ್ನು ಕಾಣುವರು; ನಾವು ನಮ್ಮ ಸಂಕಷ್ಟಗಳಿಗಾಗಿ ಅಳುತ್ತಿರುವಾಗ ಅವರು ನಮಗೆ ಸಮಾಧಾನ ಹೇಳಬೇಕು- "ಇವೆಲ್ಲ ಕಾಲ್ಪನಿಕ ಸಂಗತಿಗಳು, ಅವು ಮಾಯವಾಗುತ್ತವೆ." ನಾವು ನಮ್ಮ ಸಖೋನಭೋಗಗಳ ಕುರಿತು ಸಂತೋಷಿಸುತ್ತಿರುವಾಗಲೂ ಅವರು ನಮಗೆ "ಇವು ತಾತ್ಕಾಲಿಕವಾದುವುಗಳು, ಮಾತ್ರವಲ್ಲ ಅವುಗಳು ಕೇವಲ ಕಾಲ್ಪನಿಕವಾದವು. ಇವುಗಳು ಕೂಡ ಮಾಯವಾಗುವವು." ಎಂದು ಸ್ಮರಣೆ ಮಾಡಿಸುತ್ತಾರೆ. ಈ ರೀತಿಯಲ್ಲಿ ನಾವು ಹೆಚ್ಚಿಚ್ಚು ವಿವೇಕವಂತರಾದ ಹಾಗೆ ಜಗತ್ತಿನ ವಿಷಯಗಳ ಕುರಿತು ನಮ್ಮ ದೃಷ್ಟಿಕೋನವೂ ಬದಲಾಯಿಸುತ್ತದೆ. ಮತ್ತೆ ನಾವು ವಿವೇಕದ ಉನ್ನತ ಶಿಖರವನ್ನು ತಲ್ಪಿದಾಗ ಜಗತ್ತು ಅದೆಷ್ಟು ಸುಂದರವಾಗಿದೆಂದು ನಾವು ಉದ್ಗರಿಸುತ್ತೇವೆ. ದುಃಖಕ್ಕಿಯು ಅದಕ್ಕೆ ಅದೆಷ್ಟು ಅದ್ಭುತವಾದ ರೀತಿಯಲ್ಲಿ ಅದರೊಡನೆ ಸಂಬಂಧ ಬೆಳೆಸಿಕೊಂಡಿದೆ. ಎಂಬ ಸಂಗತಿಯನ್ನು ನಾವು ಕಾಣುತ್ತೇವೆ. ವಿವೇಕದ ಶಿಖರವು ಹರ್ಷಾನಂದದ ಶಿಖರವೂ ಆಗಿದೆ.

✠

ಒಬ್ಬನ ಕಣ್ಣಿಗೆ ಸುಂದರವೆಂದು ಕಾಣುವಂತಹುದು ಇನ್ನೊಬ್ಬನ ಕಣ್ಣಿಗೆ ಹಾಗೇ ಕಾಣುವುದಿಲ್ಲವೆಂಬ ಸಂಗತಿಯು ಸಾಮಾನ್ಯ ಅನುಭವದ್ದು. ಪ್ರಕೃತಿ ಸೌಂದರ್ಯವನ್ನು ಕವಿಗಳ ಇಲ್ಲವೆ ತತ್ವಜ್ಞಾನಿಗಳ ಹಾಗೆ ಸಾಮಾನ್ಯರಾದ ನಾವು ಆನಂದಿಸಲಾರೆವು. ಒರ್ವ ಪ್ರಬುದ್ಧನೂ ವಿದ್ಯಾವಂತನೂ ಆದವನು ಪ್ರಾಕೃತಿಕ ದೃಶ್ಯಗಳ ಸವಿಯನ್ನುಣ್ಣುವಂತೆ ಒಬ್ಬ ಹೆಳ್ಳಿಗನಿಗೆ ಸಾಧ್ಯವಾಗುವುದಿಲ್ಲ. ಆದರೆ ಬಣ್ಣ ಬೆಡಗುಗಳಿಂದ ಬರೆದ ಚಿತ್ರವಾಗಲಿ, ಮೂರ್ತಿಯಾಗಲಿ ಅವನ (ಹಳ್ಳಿಗನ) ಮನಸ್ಸಿನ ಮೆಚ್ಚಿಗೆಯನ್ನು ಪಡೆಯುವವು. ಈ ವೈತ್ಯಾಸಕ್ಕೆ ಮನಸ್ಸಿನ ಪ್ರಬುದ್ಧತೆ ಅಪ್ರಬುದ್ಧತೆಗಳೇ ಕಾರಣ. ಹರ್ಷಾನಂದದ ವಿಷಯವಾದ ಲ್ಲಾದರೂ ಅದೇ ರೀತಿ. ವಿಕ್ಷಿದಲ್ಲಿ ಜೀವದ ಸ್ಥಿತಿ ಸ್ಥಾನಗಳನ್ನು ನಾವು ಅರಿತುಕೊಂಡರೆ ಯಾರೊಡನೆಯೂ ನಮಗೆ ಜಗಳವಾಡುವ ಸಂದರ್ಭವುಂಟಾಗಲಾರದು, ಯಾರೊಡನೆಯೂ ನಮಗೆ ದ್ವೇಷ ಇಲ್ಲವೆ ಸಂಕುಚಿತ ಭಾವನೆಯುಂಟಾಗದು. ಈ ರೀತಿ ನಾವು ವಿಶ್ವ ಪ್ರೇಮವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

ಇದುತನಕ ಹರ್ಷಾನಂದದ ಸ್ವರೂಪವನ್ನು ನಿರ್ದಿಷ್ಟವಾಗಿ ಹೀಗೇ ಎಂದು ಯಾರೂ ಹೇಳಿಲ್ಲ. ಒಬ್ಬನಿಗೆ ಆನಂದವನ್ನುಂಟು ಮಾಡುವ ಸಂಗತಿ ಇನ್ನೊಬ್ಬನಿಗೆ ಸಂಕಷ್ಟವನ್ನುಂಟು ಮಾಡುತ್ತದೆಂಬುದು ಸರ್ವ ಸಾಮಾನ್ಯ ಅನುಭವದ ಸಂಗತಿ. ಒಬ್ಬನ ತುತ್ತು ಇನ್ನೊಬ್ಬನಿಗೆ ಕುತ್ತಾಗಿ ಪರಿಣಮಿಸುವುದು. ಹಣವನ್ನು ಗಳಿಸಲು ಇಚ್ಛೆ ಪಡುವವನಿಗೆ ಅದು ಹೇರಳವಾಗಿ ದೊರಕಿದರೆ ಪರಮಾನಂದವಾಗುತ್ತದೆ. ಕೆಲವರಿಗೆ ತಿನ್ನಲು ಉತ್ಕೃಮವಾದ ವಸ್ತುಗಳು ಸಿಕ್ಕಿದಲೇ ಆನಂದವಾಗುವುದು. ಕೆಲವರು ಸ್ತ್ರೀಯರಿಂದ ಆನಂದ ಪಡೆಯುತ್ತಾರೆ. ಬೇರೆ ಕೆಲವರಿಗೆ ಬೌದ್ಧಿಕ ವಿಚಾರವೇ ಆನಂದ. ಕೆಲವರು ಲಲಿತ ಕಲೆಗಳಲ್ಲಿ ಆನಂದ ಹೊಂದುತ್ತಾರೆ. ಕೆಲವರಿಗೆ ದಾನ ಧರ್ಮಾದಿಗಳಲ್ಲಿಯೇ ಚರ ಆನಂದವುಂಟಾಗುತ್ತದೆ. ಹೀಗೆ ಪ್ರತಿಯೊಬ್ಬನೂ ತನ್ನ ಅಭಿರುಚಿಗೆ ತಕ್ಕಂತೆ ಕಾರ್ಯಗೆಯ್ದರೆ ಆನಂದದ ಅನುಭವವಾಗುತ್ತದೆ. ಅದೇ ಸಮಯಕ್ಕೆ ಈ ಎಲ್ಲ ಆನಂದವು ಅಲ್ಪಾನಧಿಯದೆಂದೂ, ಅದೇ ಸಂಕಷ್ಟದ ಮೂಲವೆಂದೂ ನಮ್ಮ ಅನುಭವವಿರುತ್ತದೆ.

ಉದಾಹರಣೆಗಾಗಿ: ಪ್ರತಿಯೊಬ್ಬನು ಒಳ್ಳೆ ಹೆಂಡತಿ, ಮಕ್ಕಳು, ತುಂಬಾ ಹಣ ಸಿಕ್ಕಿದರೆ ಆನಂದವನ್ನನುಭವಿಸಬಹುದೆಂಬ ಕಲ್ಪನೆಯಿರುತ್ತದೆ. ಆದರೆ ಇವೆಲ್ಲ ತೊಂದರೆಯ ಮೂಲಕಾರಣಗಳೆಂದೂ ನಾವು ಬಲ್ಲೆವಷ್ಟೆ? ತಿನ್ನುವುದರಲ್ಲಿ ಕುಡಿಯುವುದರಲ್ಲಿ ತುಂಬಾ ಆನಂದವಿದೆಯೆಂದು ಕೆಲವರು ತಿಳಿಯುತ್ತಾರೆ. ಆದರೆ ಶೀಘ್ರದಲ್ಲೇ ಅವರು ಈ ಸುಖದ ಮಿತಿಯನ್ನು ಮೀರಿ ಸಂಕಷ್ಟ ಅನಾರೋಗ್ಯಗಳಿಗೆ ತುತ್ತಾಗುವರು---ಬಾಹ್ಯ ಜಗತ್ತು ಯಾರಿಗೂ ತನ್ನ ಸ್ವೇಚ್ಛೆಯಂತೆ ನಡೆಯಲು ಬಿಡುವುದಿಲ್ಲ. ಆಗಲೇ ದ್ವೇಷ ಜೋರಾಟಗಳಿಗಾರಂಭವಾಗುವುದು. ಜನರು ಒಬ್ಬರೊಡನೊಬ್ಬರು ಜಗಳವಾಡುವರು. ಜನಾಂಗಗಳೂ ಒಂದರೊಡನೊಂದು ಯುದ್ಧ ಮಾಡುವವು. ಎಲ್ಲವೂ ಸುಖೋಪಭೋಗಕ್ಕಾಗಿ. ಹೊರ ಕಾಣುವಸ್ತುಗಳಿಂದುಂಟಾಗುವ ಹರ್ಷಾನಂದವು ತಾತ್ಕಾಲಿಕವಾದುದೆಂದು ನಮ್ಮಲ್ಲಿ ಹಲವರಿಗೆ ತಿಳಿದಿದೆ. ಹೀಗೆ ಸಂಕಷ್ಟಗಳು ಇಲ್ಲದಂತೆ ಮಾಡಬೇಕಾದರೆ ನಾವು ಸುಖ ಸಂತೋಷಗಳೆರಡನ್ನು ತ್ಯಜಿಸಬೇಕು. ಕಾರಣ ಈ ಎರಡೂ ಸಂಗತಿಗಳು ಒಂದೇ ನಾಣ್ಯದೆರಡು ಬದಿಗಳಾಗಿವೆ.

(ಮುಂದರಿಯುವುದು)

ಮಂಗಳೂರು--ಪ್ರಬುದ್ಧ ಬಂದರವಾಗಿ

1 ಮರ್ಮಗೋವಾ ಮತ್ತು ಕೊಚ್ಚಿ ಬಂದರುಗಳ ನಡುಮುದ್ಯಂತರದಲ್ಲಿ ಮಂಗಳೂರು ಬಂದರು ನೆಲೆಸಿರುತ್ತದೆ.

2 ಈ ಮೂರು ಬಂದರುಗಳಲ್ಲಿ ಮಂಗಳೂರಿನ ಜನಸಂಖ್ಯೆಯೇ ಹೆಚ್ಚಿನದಾಗಿರುತ್ತದೆ.

3 ಮರ್ಮಗೋವೆಯ ದಕ್ಷಿಣದಲ್ಲಿಯೂ, ಕೊಚ್ಚಿಯ ಉತ್ತರದಲ್ಲಿಯೂ ಇರುವ ಎಲ್ಲಾ ಬಂದರುಗಳಿಂತಲೂ ಮಂಗಳೂರಿಗೆ ಇಂಡಿಯದ ಇತರ ಭಾಗಗಳೊಡನೆ ಉತ್ತಮ ವ್ಯವಹಾರ ಸೌಕರ್ಯಗಳಿವೆ.

4 ಮೈಸೂರು ಸಂಸ್ಥಾನಕ್ಕೆ ಮಂಗಳೂರೇ ನೈಸರ್ಗಿಕ ಸಮುದ್ರ ಮುಖವಾಗಬಲ್ಲುದು.

5 ಮಂಗಳೂರು ವ್ಯಾಪಾರ, ಉದ್ಯಮ, ಮತ್ತು ಸಂಸ್ಕೃತಿಗಳಲ್ಲಿ ಅತಿಶಯವಾದ ಪ್ರಗತಿಯನ್ನು ಹೊಂದಿದೆ.

ಎಲ್ಲಾ ದೃಷ್ಟಿಕೋನಗಳಿಂದ ಪರ್ಯಾಲೋಚಿಸಿದರೆ ಮಂಗಳೂರೇ ಪ್ರಬುದ್ಧ ಬಂದರವಾಗಲು ಯೋಗ್ಯವೆಂದು ನಮಗನಿಸುತ್ತದೆ.

ಹಿಂದುಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ಸದಾ ಸೇವೆಗೈಯುತ್ತಿರುವ.

ಕೆನರಾ ಬೇಂಕ್, ಲಿಮಿಟೆಡ್.

ಇವರಿಂದ ಪ್ರಕಟಿಸಲ್ಪಟ್ಟಿದ್ದು.

CANARA BANK LIMITED.

Estd: 1906

ಸಾಕಷ್ಟು ಡೊಲರುಗಳನ್ನು ಗಳಿಸಲು ಅಮೇರಕದಲ್ಲಿರುವ ಬ್ರಿಟಿಷರು ತಮ್ಮ ರಕ್ತವನ್ನು ಪ್ಯಾಂಟಿಗೆ 25 ಡಾಲರುಗಳಂತೆ ಮಾರುತ್ತಿರುವರು.

✠

ಪ್ರಖ್ಯಾತ ಬ್ರಿಟಿಷ್ ವಿಯಾನೊ ವಾದ್ಯ ಗಾರನಾದ ಆರ್ಥರ್ ಬೆಂಜಮಿನನ ನಾಯಿಯೂ ತನ್ನ ಒಡೆಯನ ಉವಕರಣದಲ್ಲಿ ತುಂಬಾ ಅಭಿರುಚಿ ವಹಿಸುತ್ತದೆ. ಅದು ತನ್ನ ಬಲಗಾಲಿನಿಂದ ಕೆಲವು ಗೀತಗಳನ್ನು ಬಾರಿಸುವುದಂತೆ.

✠

ಪೌಷ್ಟಿಕಗಳುಳ್ಳ ಸಮತೂಕ ಆಹಾರ ಪ್ರಮಾಣ

ಗಾಂಧಿಜೀಯ ಪ್ರಶಸ್ತ ಅನುಭವ

ಯುದ್ಧ ವರಿಸ್ಥಿತಿಗನುಗುಣವಾಗಿ ಆಹಾರ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಗಳಾಗುತ್ತಿವೆ ಮಾತ್ರವಲ್ಲ ಹೆಚ್ಚು ಬೆಳೆಸಲೂ, ನೈರ್ಥವ್ಯವನ್ನುಳಿಸಲೂ ಮಿತಿಮೀರಿದ ತಿನ್ನುವಿಕೆಯನ್ನು ಮಿತಿಗೊಳಿಸಲೂ, ಪ್ರಚಾರಗಳಾಗುತ್ತಿರುವಾಗ ಮಹಾತ್ಮಾ ಗಾಂಧಿಯವರು ತಾವು ಸ್ವಂತ ಮಾಡಿದ ಪ್ರಯೋಗಗಳಿಂದ ಪಡೆದ ಅನುಭವಗಳ ನಿರೂಪಣೆಗಳ ಸಂಗ್ರಹವು ಅತೀ ಹೆಚ್ಚಿನ ಮೌಲ್ಯದಾಗಿರುವುದು

ಆಹಾರ ಸೇವನೆಯ ಕುರಿತು ಮಹಾತ್ಮಾಜೀಯವರು ಬಹಳ ಹಿಂದೆಯೇ ಪ್ರಯೋಗಗಳನ್ನಾರಂಭಿಸಿದ್ದರು ತಮ್ಮ ಮತ್ತು ತಮ್ಮ ಅನುಯಾಯಿಗಳ ಆಧ್ಯಾತ್ಮಿಕ ಹಾಗೂ ಮಾನಸಿಕ ಅಭಿವೃದ್ಧಿಗೆ ಅತ್ಯಾವಶ್ಯಕವಿರುವ ಶಾರೀರಿಕ ಸುಸ್ಥಿತಿಯು ಪರಿಪೂರ್ಣವಾಗಿರುವಂತೆ ಎಂತಹ ಆಹಾರ ಸೇವನೆಯನ್ನು ಅನುಕ್ರಮಿಸಬೇಕೆಂಬ ಧ್ಯೇಯವನ್ನು ದೃಷ್ಟಿಯಲ್ಲಿಟ್ಟೇ ಅವರು ಈ ಪ್ರಯೋಗಗಳನ್ನು ತಮ್ಮ ಜೀವನದಲ್ಲಿ ಹೆಚ್ಚೆಚ್ಚು ವ್ಯಾಪಕವಾಗಿ ಮುಂದುವರಿಸಿದರು ಜನರಿಗೆ ತಮ್ಮ ಅನುಭವಗಳ ಸದುಪಯೋಗವಾಗಲೆಂದವರು ಯಂಗ್ ಇಂಡಿಯಾ ಮತ್ತು ಹರಿಜನ ಪತ್ರಿಕೆಗಳಲ್ಲಿ ಅವನ್ನು ಆಗಾಗ್ಗೆ ಪ್ರಕಟಿಸಿದ್ದರು

ಶ್ರೀಮಂತರಿಗೊಂದು ಸೂತ್ರ

ಮಹಾತ್ಮಾಜಿಯವರು ಸಮಪೌಷ್ಟಿಕ ಪ್ರಮಾಣಗಳುಳ್ಳ ಆಹಾರ ಸೇವನೆಯನ್ನೇ ಅನುಮೋದಿಸುತ್ತಿದ್ದರು. ಶರೀರ ಬೆಳವಣಿಗೆ, ಚಟುವಟಿಕೆಗಳಿಗೆ ಎಷ್ಟು ಬೇಕೊ ಅಷ್ಟನ್ನೇ ನಾವು ಸೇವಿಸಬೇಕು, ಅತಿ ಪುಷ್ಟಿ ಗೈಯ್ಯುವ ಇಲ್ಲವೆ ಪೌಷ್ಟಿಕ ಜೀವನಾತುಗಳಿಗೆ ಕೊರತೆಯಿರುವ ಆಹಾರ ಪ್ರಮಾಣಗಳನ್ನು ತೆಗೆದುಕೊಳ್ಳಬಾರದು ದೇಶದೊಳಗಣ ಅತೀ ಬಡವರಿಗೂ ಸಿಗುವಂತ ಹಸೂ ಆದರೆ ಅದೇ ಸಮಯಕ್ಕೆ ನೈಪುಣ್ಯ ಶಾರೀರಿಕ ಅವಶ್ಯಕತೆಗೆ ಸಾಕಾಗುವಷ್ಟು ಪೌಷ್ಟಿಕ ಪದಾರ್ಥಗಳುಳ್ಳದ್ದೂ ಆದ ಆಹಾರ ಮಿಶ್ರಗಳ ಕುರಿತೇ ಅವರು ಪ್ರಚಾರ ಮಾಡುತಿದ್ದರು.

"ಕನಿಷ್ಠ ಆಹಾರ ಪ್ರಮಾಣ" ಎಂಬ ಶಿರೋನಾಮೆಯಿಂದ ಮಹಾತ್ಮರು ಒಂದು ಲೇಖನದಲ್ಲಿ ಹೀಗೆ ಬರೆದಿದ್ದರು

"ಒಂದು ಸಲದ ಊಟಕ್ಕೆ ಒಂದೇ ಧಾನ್ಯವನ್ನುವಯೋಗಿಸಬೇಕು ಸಾಮಾನ್ಯರ ಮನೆಗಳಲ್ಲಿ ಚಪಾತಿ, ಅನ್ನ ಮತ್ತು ಧಾನ್ಯವದಾರ್ಥಗಳನ್ನೂ, ಹಾಲು ತುಪ್ಪ, ಬೆಲ್ಲ ಮತ್ತು ಎಣ್ಣೆಗಳನ್ನು ಮಾತ್ರವಲ್ಲದೆ ಕಾಯಿಪಲ್ಯ, ಹಣ್ಣುಹಂಪಲುಗಳನ್ನೂ ಉಪಯೋಗಿಸುತ್ತಾರೆ. ಇದನ್ನು ನಾನು ಅನಾರೋಗ್ಯಕರವಾದ ಆಹಾರ ಮಿಲನವೆನ್ನುತ್ತೇನೆ. ಹಾಲು, ಬೆಣ್ಣೆ, ಮೊಟ್ಟೆ ಇವ್ಲಿವೆ ಮಾಂಸಗಳ ಮೂಲಕ ಪ್ರಾಣಿಜ ಪೌಷ್ಟಿಕ ಸತ್ವಗಳನ್ನು ಪಡೆಯುವವರು ಧಾನ್ಯಗಳನ್ನುಪಯೋಗಿಸುವ ಅವಶ್ಯಕತೆಯಿಲ್ಲ ಬಡ ಜನರಿಗೆ ಸಸ್ಯಜನ್ಯ ಪೌಷ್ಟಿಕ ಸತ್ವಗಳು ಮಾತ್ರವೆ ಸಿಗುವವು

"ಅನುಕೂಲಸ್ಥರೆಲ್ಲ ಧಾನ್ಯಗಳನ್ನು ಎಣ್ಣೆ ಗಳನ್ನು ತ್ಯಜಿಸಿಬಿಟ್ಟರೆ ಬಡವರಿಗೆ ಅವಶ್ಯವಾಗಿರುವ ಈ ಎರಡು ವಸ್ತುಗಳು ತುಂಬಾ ಪ್ರಮಾಣದಲ್ಲಿ (ಅಗ್ಗವಾಗಿಯೂ) ಸಿಗುವಂತಾಗುವುದು ಬಡವರು ಪ್ರಾಣಿಜನ್ಯ ಪೌಷ್ಟಿಕ ಸತ್ವಗಳನ್ನಾಗಲಿ, ಕೊಬ್ಬು ಸತ್ವ ಗಳನ್ನಾಗಲಿ ಕೊಂಡುಕೊಳ್ಳಲಾರರು"

ಅಕ್ಕಿಯನ್ನು ಯಂತ್ರದಲ್ಲಿ ಶುದ್ಧೀಕರಿಸುವುದಕ್ಕೆ ವಿರೋಧವಾಗಿ ಗಾಂಧಿಜೀಯವರು ಒಂದು ಸಮಂಜಸವಾದ ಸೂಚನೆಯನ್ನೇ ಹೊಡಿದ್ದರು ಯಂತ್ರ ಕುಟ್ಟುವಿಕೆಯಲ್ಲಿ ಅಕ್ಕಿಯ ಪೌಷ್ಟಿಕ ಸತ್ವಗಳು ನಷ್ಟವಾಗುವವು ಎಂಬುವುದನ್ನು ಸ್ಪಷ್ಟೀಕರಿಸಲು ಅವರು ತಜ್ಞರ ಅಭಿಪ್ರಾಯಗಳನ್ನು 'ಹರಿಜನ'ದಲ್ಲಿ ಅನೇಕ ಸಲ ಪ್ರಕಟಿಸಿದ್ದರು ಅವರು ಹೀಗೆ ಬರೆದಿದ್ದರು "ಹಿಂದಿನ ಕಾಲದ ವದ್ಧತಿಯಂತೆ ಅಕ್ಕಿಯು ಹಳ್ಳಿಗಳಲ್ಲೆ ಕುಟ್ಟಲ್ಪಟ್ಟರೆ ಅದರ ಮಜೂರಿಯಿಂದ ಅ ಕೆಲಸ ಮಾಡುವ ನಮ್ಮ ಗ್ರಾಮ ಭಗಿನಿಯರ ಕೈಯಲ್ಲಿ ತುಂಬಾ ಕಾಸುಗಳು ಳಿಯುವವು ಮತ್ತು ಅನ್ನ ತಿನ್ನುವ ಮಿಲಿಯಾವಧಿ ಜನರಿಗೆ ಕೈಕುಟ್ಟುವಿಕೆಯ ನಾಜೂಕ ಗೊಳಿದ ಅಕ್ಕಿಯ ಗಂಜಿಯಿಂದ ಸತ್ವಭರಿತವಾದ ಆಹಾರ ಸಾರವು ಸಿಗುವುದು ಯಂತ್ರದಲ್ಲಿ ಸಫಾಯಿ ಮಾಡಲ್ಪಟ್ಟ ಅಕ್ಕಿಯಿಂದ ಅದು ದೊರೆಯುವುದಿಲ್ಲ

"ಸಾರ್ವಜನಿಕ ಅಭಿಪ್ರಾಯವು ಬಲವತ್ತರವಾಗಿದ್ದರೆ ಅಕ್ಕಿ ಗಿರಣಿಗಳ ಸ್ಥಾಪನೆಯನ್ನೆ ಅನಾವಶ್ಯಕಗೊಳಿಸಬಹುದು ಇದಿ ಜನಾಂಗದ ಆರೋಗ್ಯಕ್ಕೆ ಕಂದನ್ನುಂಟುಮಾಡುವ ಮತ್ತು ಒತಜನರಿಗೆ ಪ್ರಾಮಾಣಿಕತನದ ಜೀವನೋಪಾಯವನ್ನು ಕಲ್ಪಿಸಿ ಕೊಡುವ ಉದ್ಯಮವನ್ನು ಸೂರೆಗೊಳ್ಳುವ ಈ ದುರ್ವ್ಯಾಪಾರವನ್ನು ನಿಲ್ಲಿಸಬೇಕೆಂದು ಜನರು ಗಿರಣಿ ಮ್ಯಾಲಕರಿಗೆ ವಿನಂತಿಸಿಕೊಳ್ಳಬಹುದು"

ವನಸ್ಪತಿ ತುಪ್ಪಗಳು

ಮಹಾತ್ಮಾಜಿಯವರು ತರಕಾರಿಗಳ, ಕಾಯಿಪಲ್ಯಗಳ, ಬೆಳ್ಳ, ಜೇನು ಮತ್ತು ಹಾಲುಗಳ ಪೌಷ್ಟಿಕ ಮೌಲ್ಯಗಳ ಕುರಿತು ಒತ್ತೊತ್ತಿ ಸಾರುತಿದ್ದರು. ತೆನೆತೆಗೆದ ಹಾಲಿನ ಕುರಿತು ಅವರ ವಿರೋಧವಿರಲ್ಲಿ, ಆದರೆ ಕೃತ್ರಿಮ ಸದಾರ್ಥಗಳು ಮಿಶ್ರವಾಗಿರುವ ಹಾಲುಗಳಿಗಾ ಅವರು ವಿರೋಧ ಸೂಚಿಸಿದ್ದರು. ಅದೇ ರೀತಿ ಕೃತ್ರಿಮ ತುಪ್ಪಗಳ ಕುರಿತೂ ಅವರು ವಿರೋಧಭಿಪ್ರಾಯವುಳ್ಳವರಾಗಿದ್ದರು. ಮುಖ್ಯವಾಗಿ ತುಪ್ಪವೆಂದೇ ಮಾರಲ್ಪಡುವ ವನಸ್ಪತಿ ಕೊಬ್ಬುಗಳ ವಿಷಯವಾಗಿ ಅವರು ಬದ್ಧ ವಿರೋಧಿಗಳಾಗಿ ಸಮ

ಹೆಚ್ಚಿದ ಆಡಳಿತ ವೆಚ್ಚ

ಟೋಕಿಯೊದಲ್ಲಿ ಒಂದು ತೆರಿಗೆ ಯೋಜನೆ

ಸಾರ್ವಜನಿಕದಲ್ಲಿ ಕೈ ಕ್ಕೆ ಹಿಡಿದು ನಡೆಯುವ ದಂಪತಿಗಳ ಮೇಲೆ ತೆರಿಗೆ ಹೊರಿಸಲು ಟೋಕಿಯೊ ನಗರಸಭಾಧಿಕಾರಿಗಳು ಯೋಚಿಸುತ್ತಿರುವರು ಜಪಾನಿಯರು ಹೀಗೆ ಮಾಡುವರೆ ಎಂದು ಅಕ್ರಮಿತ ಸೈನ್ಯದ ಆಡಳಿತಾಧಿಕಾರಿಗಳು ವಿವರಣೆ ಕೇಳಿದಾಗ "ಪಾಶ್ಚಿಮಾತ್ಯರ ಅನುಕರಣೆಯ ಹುಮ್ಮಸ್ಸು ನಮ್ಮ ಜನರೊಳಗೆ ಹೆಚ್ಚುತ್ತಿದೆ" ಎಂದು ಜಪಾನಿ ಅಧಿಕಾರಿಗಳು ತಿಳಿಸಿದರಂತೆ "ಮಿತ್ರ ಸೈನ್ಯಾಕ್ರಮಣಕ್ಕೆ ಮುಂಚೆ ನಮ್ಮ ಜನರು ಈ ರೀತಿ-ಗಂಡ ಹೆಂಡಿರು-ಕೈ ಕೈ ಹಿಡಿದು ತಿರುಗಾಡುವ ಹವ್ಯಾಸದವರಾಗಿರಲಿಲ್ಲ ಸಾರ್ವಜನಿಕರಲ್ಲಿ ದಾಂಪತ್ಯ ಪ್ರೇಮವನ್ನು ಪ್ರದರ್ಶಿಸುವುದು ಜಪಾನಿ ಶಿಷ್ಟವಲ್ಲ ಈಗಿನ ಕಾಲದಲ್ಲಿ ಕೆಲವೊಂದು ಪಾಶ್ಚಿಮಾತ್ಯ ರೂಢಿಗಳನ್ನು ನಾವು ಸ್ವೀಕರಿಸಲೇಬೇಕಾಗುತ್ತದೆ ಈ ಸಮಸ್ಯೆಯನ್ನು ನಿಗಲು ನಗರ ಸಭೆಯ ತೆರಿಗೆ ಯೋಜನೆಯೂ ಯಥಾಯೋಗ್ಯವಾಗಿದೆ" ಎಂದು ಟೋಕಿಯೊ ನಗರದ ವಿಷ್ಯ ಪೋಲಿಸ್ ಅಧಿಕಾರಿ ಟರಾವೊ ಟಾನಕಾ ಅವರು ತಿಳಿಸಿದರು ಟೋಕಿಗೆ ಸುತ್ತು ಮುತ್ತು ಮನುಷ್ಯಾಶಿ ಎಂಬ ಜಪಾನಿ ನಗರಗಳಲ್ಲಿನ ಮುನಿಸಿಪಾಲಿಟಿಯವರು ವೇಶ್ಯೆಯರನ್ನು ಇಟ್ಟುಕೊಂಡಿರುವ ನಾಗರಿಕರು ವರ್ಷಕ್ಕೆ 7500 ಯೆನ್

ಅನರೆಂದಿದ್ದರು "ವನಸ್ಪತಿಯೆಂದು ಕರೆಯಲ್ಪಡುವಂತಹವುಗಳು ಎಂದೆಂದಿಗೂ ತಿನ್ನದಂತಿರಲಾರವು ಅವು ತುಪ್ಪದ ಗುಣಗಳುಳ್ಳವುಗಳಾಗುತ್ತಿದ್ದರೆ ನಾನೇ ಮೊದಲು ತಿನ್ನುಗಳ ಅವಶ್ಯಕತೆಯಿಲ್ಲವೆಂದು ಸುಟಾ ಸೋಷವಾಗಿ ಸಾರುತಿದ್ದೆ ಜೆಣ್ಣೆ ತುಪ್ಪಗಳು ಪ್ರಾಣಿಜನ್ಯವಾದ ಹಾಲಗೆಂದ ತೆಗೆಯಲ್ಪಡುವ ಕೆ ಬ್ಬ ಸತ್ವಗಳು ವನಸ್ಪತಿ ಎಣ್ಣೆ ಇಜ್ಜಿನೆ ಗಿಣ್ಣುಗಳನ್ನು ತಿನ್ನದ ಹೆಸರ ರೂಪಗಳನ್ನಿಟ್ಟವಾರುವುದೆಂದರೆ ಹಿಂದೆ ಜನತೆಯನ್ನು ವಂಚನೆಗೆಳೆಸಿದಂತೆ ಸರಿ ಆದ ಅವಮಾನಕರತೆಯ ನೈಹಾರವೂ ಎಸುವುದು ವರ್ತಕರು ತುಪ್ಪದ ವೇಷದಲ್ಲಿ ಇವನ್ನು ಮಾರಾಟ ಇರುವುದುಶವನ್ನು ಕರ್ತವ್ಯವೆಂದು ತಿಳಿಯಬೇಕು ಸರಕಾರವಾದರೂ ಇಂತಹ ಮೂರು ವಿಳೆಯನ್ನೆಂದಿಗೂ ಸಹಿಸಬಾರದ

(4 ಪವನು) ತೆರಿಗೆ ತೆರಬೇಕೆಂದೂ ನಿರ್ಣಯಿಸಿರುವರು.

ಮುಂಬಯಿಯಲ್ಲಿ ಪೋರ್ತುಗೀಸ್ ಸೈನಿಕರು

ಗೋವೆಯನ್ನು ಭದ್ರಗೊಳಿಸುವುದು

ಪೋರ್ತುಗೀಸರ ಪೂರ್ವ ಆಫ್ರಿಕದ ವಸಾಹತಿನಿಂದ ಬಂದ ಒಂದು ಹಡಗು ಕೆಲ ದಿನಗಳ ಹಿಂದೆ ಮುಂಬಯಿ ಬಂದರಲ್ಲಿ ತಂಗಿತು ಅದರಲ್ಲಿ ತುಂಬ ನಿಗ್ರೊ ಸೈನಿಕರು ಸಂಪೂರ್ಣ ಯುದ್ಧ ಸಿದ್ಧತೆಯಲ್ಲಿದ್ದರು ಅಲ್ಲಿನ ಒಂದು ದೊಡ್ಡ ಹೊಟೇಲಿನಲ್ಲಿ ಅವರ ನಿವಾಸಕ್ಕೆ ವಿಪರ್ಯಾಡು ಮಾಡಲಾಗಿತ್ತು ಗೋವೆಯಲ್ಲಿನ ಸೈನ್ಯ ರಾಣ್ಯಗಳನ್ನು ಸುಭದ್ರಗೊಳಿಸಲು ಪೋರ್ತುಗೀಸ ಸರಕಾರವು ತಮ್ಮ ವಸಾಹತುಗಳಲ್ಲಿ ಸೈನ್ಯ ಭರ್ತಿ ಮಾಡಿ, ಸೈನಿಕರನ್ನು ತರಬೇತು ಗೊಳಿಸಿ ಗೋವೆಯತ್ತ ಕಳುಹಿಸುವ ವ್ಯವಸ್ಥೆ ಮಾಡುತ್ತಲಿರುವಂತೆ "ಗೋವೆಯಲ್ಲಿ ತಲೆಯೆತ್ತಿದ್ದ ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕುವುದಕ್ಕೆ ಇದೊಂದು ಬೆದರಿಕೆಯ ಪ್ರದರ್ಶನ

ಬ್ರಿಟನಿನಲ್ಲಿ ಮಿಲಿಯಾಧೀಶರು ಹೆಚ್ಚುತ್ತಲಿದ್ದಾರೆ

ಯುದ್ಧಾನಂತರ ಬ್ರಿಟನಿನೊಳಗಿನ ಮಿಲಿಯಾಧೀಶರ ಸಂಖ್ಯೆ ಹೆಚ್ಚುತ್ತ ಈಗ ಅವರ ಒತ್ತವು 282ಕ್ಕೆ ಬಂದು ಕಲ್ಪಿದೆ ತಮ್ಮ ಎಲ್ಲಾ ತೆರಿಗೆಗಳನ್ನು ಕೊಟ್ಟ ಮೇಲೂ ವರ್ಷಕ್ಕೆ 13 ಸಾವಿರ ರೂಪ್ಯಾ ಆದಾಯ ಪಡೆದವರ ಸಂಖ್ಯೆ ಅಲ್ಲಿ 382000 ರಷ್ಟಿದೆ. ಮೇಲ್ಕಂಡ ಮಿಲಿಯಾಧೀಶರಲ್ಲಿ 70 ಮಂದಿಗಳಿಗೆ ಮಾತ್ರ ವರ್ಷಕ್ಕೆ 78 ಸಾವಿರ ರೂಪಾಯಿಗೂ ಹೆಚ್ಚಿಗೆ ಸಂಪಾದನೆ ಕೈಗೆ ತಗಲಿದೆ ವರ್ಷಕ್ಕೆ 1660ರಿಂದ 3260 ರೂಪ್ಯಾಗಳ ತನಕ ಸಂಪಾದನೆಯಿರುವವರು ಅಲ್ಲಿ 9 ಲಕ್ಷ ವಂದಿಗಳಿದ್ದಾರೆ

ಮೊಸ್ಕೋದಲ್ಲಿ ಗಗನಚುಂಬಿಗಳು

ಸ್ಯಾಟೆಲೈಟಿನಂತೆ ಮೊಸ್ಕೋದಲೂ 50-60 ಮಹಡಿಗಳುಳ್ಳ ಗಗನಚುಂಬಿ ಕಟ್ಟಡಗಳನ್ನು ಕಟ್ಟಿಸಲಾಗುವುದೆಂದು ಸೋವಿಯೆಟ್ ರೆಡಿಯೋವು ಸಾರಿದೆ ಆದರೆ ಇಲ್ಲಿ ಕಟ್ಟಿಸಲ್ಪಡುವಂತಹ ಸ್ಯಾಟೆಲೈಟಿನವುಗಳಿಗಿಂತ ಇವ್ಮಡಿಬಲಿಷ್ಠವೂ ಬಾಳ್ವಿಕೆಯೂ ಆಗಿರುತ್ತವೆಯಂತೆ ಮೊಸ್ಕೋವನ್ನು ಜಗತ್ತಿನಲ್ಲೇ ಅತ್ಯಾಧುನಿಕವೂ ಅತ್ಯಂತ ಸುಂದರವೂ ಆದ ನಗರವನ್ನಾಗಿಮಾಡುವ ಉದ್ದೇಶದಿಂದ ಈ ಯೋಜನೆ ಕೈಗೊಳ್ಳಲಾಗಿದೆಯಂತೆ.

ಸ್ವದೇಶಾಭಿಮಾನಿ

ಕಾರ್ಕೀಕು 26—8—1949

ಜಿಲ್ಲಾ ಬೋರ್ಡು ಚುನಾವಣೆಗಳು

ಜಿಲ್ಲಾ ಬೋರ್ಡು ಚುನಾವಣೆಯು ತಿಳ್ಳಿಯ ಮುಂದಿರುವ ಪ್ರಮುಖ ಪ್ರಚಲಿತ ಪ್ರಶ್ನೆಯಾಗಿದೆ. ಇದೇ ತಾ. 22 ಮತ್ತು 23ನೇ ದಿನಗಳಲ್ಲಿ ಉಮೇದ್ವಾರರ ನಾಮನಿರ್ದೇಶನಗಳು ಆಯಾ ತಾಲೂಕಿನ ಕಾರ್ಯಾಲ್ಯಾರರ ಮುಂದೆ ದಾಖಲು ಮಾಡಲ್ಪಟ್ಟಿರುತ್ತವೆ. ಬೋರ್ಡಿನ ನಲ್ವತ್ತನಾಲ್ಕು ಸ್ಥಾನಗಳಲ್ಲಿ ಯುರೋಪಿಯನ್ ಕಾದಿಟ್ಟ ಸ್ಥಾನ ಒಂದಕ್ಕೆ ಬಿಟ್ಟು ಉಳಿದ ಎಲ್ಲಾ ಸ್ಥಾನಗಳಿಗೆ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸಲಾಗಿದೆ. ಸೋಶಿಯಲಿಷ್ಟರು ತಮ್ಮ ಪಂಗಡದ ಪರವಾಗಿ ಸುಮಾರು ಹದಿನೆರಡು ಮಂದಿಯನ್ನು ನೇಮಿಸಿರುವರೆಂದೂ ಕಮ್ಯೂನಿಸ್ಟರು ತಮ್ಮ ಕಡೆಯಿಂದ ನಾಲ್ಕು ಸ್ಥಾನಗಳಿಗೆ ಉಮೇದ್ವಾರರನ್ನು ನಿಲ್ಲಿಸಿರುವರಾಗಿಯೂ ತಿಳಿದು ಬರುತ್ತದೆ ಹಲವು ಕಡೆಗಳಲ್ಲಿ ಸ್ವತಂತ್ರ ಉಮೇದ್ವಾರರೂ ಮುಂದೆ ಬಂದಿರುವರು ಕುಂದಾಪುರ ದತ್ತಕಡೆಯಲ್ಲಿ ಹೆಚ್ಚಿನ ಸ್ಥಾನಗಳು ಕಾಂಗ್ರೆಸಿಗರಿಗೆ ಅವಿರೋಧವಾಗಿ ದೊರಕಿವೆಯೆಂದೂ ಉಳಿದೆಡೆಗಳಲ್ಲಿ ಕೆಲವೇ ಕಡೆಗಳಲ್ಲಿ ಅಲ್ಲದೆ ಬೇರೆ ಕಡೆಗಳಲ್ಲೆಲ್ಲಾ ಚುನಾವಣೆಯ ಸ್ಪರ್ಧೆ ನಡೆಯಲಿದೆಯೆಂದೂ ತಿಳಿದುಬರುತ್ತದೆ ಮಾತ್ರವಲ್ಲ ಕಾಸರಗೋಡು ತಾಲೂಕಿನಲ್ಲಿ ಸ್ಪರ್ಧೆ ಸ್ವಲ್ಪ ಜೋರಾಗಿಯೇ ಇದೆಯೆಂದೂ ಕೇಳಿಬರುತ್ತಿದೆ ಇದನ್ನು ಬರೆವಾಗ ನಮಗೆ ಈ ಕುರಿತು ಸಿಕ್ಕಿದ ಮಾಹಿತಿ ಇಷ್ಟೇ ಇರುತ್ತದೆ

ಈ ಮೊದಲು ಉಪಯೋಗಿಸುತ್ತಿದ್ದ ಜಿಲ್ಲಾ ಬೋರ್ಡು ಮತದಾರರ ಪಟ್ಟಿಗಳ ಮೂಲಕವೇ ಈ ಬಾರಿಯ ಚುನಾವಣೆ ನಡೆಯುತ್ತಿದೆಯಲ್ಲದೆ ಸ್ವಾಯತ್ತಶಾಸನ ಮತದಾನದಿಂದಲ್ಲ

ಈ ಸಂದರ್ಭದಲ್ಲಿ ಮತದಾರರ ಕರ್ತವ್ಯಗಳ ಕುರಿತು ಎಂದಿರಡು ವಿಚಾರಗಳನ್ನು ವಿವೇಚಿಸಿದರೆ ಅನುಚಿತವಿಲ್ಲ ಈ ಬಾರಿಯ ಉಮೇದ್ವಾರರಲ್ಲಿ ನಾಲ್ಕು ವರ್ಗಗಳಿವೆ ಕಾಂಗ್ರೆಸಿಗರು, ಸೋಶಿಯಲಿಸ್ಟರು, ಕಮ್ಯೂನಿಸ್ಟರು ಮತ್ತು ಸ್ವತಂತ್ರ ಉಮೇದ್ವಾರರು—ಈ ರೀತಿ ಇವರನ್ನು ವಿಭಾಗಿಸಬಹುದು. ಮೂರು ರಾಜಕೀಯ ಪಂಗಡಗಳ ಪರವಾಗಿ ನಿಂತ ಉಮೇದ್ವಾರರಿಗೆ ಅವರವರ ಪಂಗಡಗಳ ಸ್ಪಷ್ಟ ಧೋರಣೆ ಇರುತ್ತದೆಂಬುದನ್ನು ವ್ಯಕ್ತೇಕ ಹೇಳಬೇಕಾಗಿಲ್ಲ. ಸ್ವತಂತ್ರ ಉಮೇದ್ವಾರರಾಗಿ ನಿಂತವರು ಮಾತ್ರ ತಮ್ಮ ತಮ್ಮ ಧೋರಣೆಗಳನ್ನು ಸ್ಪಷ್ಟಪಡಿಸುವಂತೆ ಕೇಳುವುದು ಅಗತ್ಯವಿರುತ್ತದೆ. ತಾನೂ ಒಬ್ಬ ಜಿಲ್ಲಾ ಬೋರ್ಡ ಮೆಂಬರನಾಗಬೇಕೆಂಬ ಉಮೇದು ಮಾತ್ರ ಈ ಸ್ವತಂತ್ರ ಉಮೇದ್ವಾರರು ಚುನಾವಣೆಗೆ ನಿಂತ ಕಾರಣವೆಂದಾದರೆ ಇಂಥವರಿಗೆ ಸ್ವತಂತ್ರ ಹಿಂದೂಸ್ಥಾನದಲ್ಲಿ ನಡೆಯುವ ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನ ವಿಲ್ಲವೆಂಬುದನ್ನು ತಿಳಿಯುವಂತೆ ಮಾಡುವುದು ಮತದಾರರ ಆದ್ಯ ಕರ್ತವ್ಯವಿರುತ್ತದೆ.

ಉಳಿದ ರಾಜಕೀಯ ಪಂಗಡಗಳ ಉಮೇದ್ವಾರರ ಮಟ್ಟಿಗೆ ಈ ಉಮೇದ್ವಾರರ ವ್ಯಕ್ತಿತ್ವದ ಕಡೆಗೆ ಪ್ರಾಧಾನ್ಯತೆ ಕೊಡಬೇಕಾಗಿಲ್ಲ. ಆಯಾ ಪಂಗಡಗಳ ಧೋರಣೆ ಮತ್ತು ಕಾರ್ಯಕ್ರಮಗಳು, ಇವುಗಳೊಳಿಗಿನ ಭೇದಗಳು, ಈಗಿನ ದೇಶದ ಪರಿಸ್ಥಿತಿ, ಈ ಪರಿಸ್ಥಿತಿಯಲ್ಲಿ ಯಾವ ಧೋರಣೆಗೆ ಬೆಂಬಲಕೊಡುವುದು ಅಗತ್ಯ ಇವನ್ನು ತಿಳಿದುಕೊಂಡು ಮತದಾರರು ತಮ್ಮ ಮತ ಕೊಡಲು ಈಗಿನ ಚುನಾವಣೆಯಲ್ಲಿ ಅಭ್ಯಾಸವಾಗಬೇಕು

ಆಯಾ ಪಂಗಡಗಳ ಧೋರಣೆ ಮತ್ತು ಕಾರ್ಯಕ್ರಮಗಳೆಂದು ಮೇಲೆ ಕಾಣಿಸುವಾಗ ಜಿಲ್ಲಾ ಬೋರ್ಡಿನಲ್ಲಿ ನಡೆಯಲಿರುವ ಕಾರ್ಯದ ವಿಚಾರವೆಂದು ಮಾತ್ರ ತಿಳಿಯತಕ್ಕದ್ದಲ್ಲ ದೇಶದ ಸಾರ್ವಜನಿಕ ಜೀವನದ ಎಲ್ಲಾ ವಿಶೇಷಗಳಲ್ಲಿಯು ಕುರಿತು ಧೋರಣೆ ಮತ್ತು ಕಾರ್ಯಗಳ ಪರಿಶೀಲನವನ್ನು ಮಾಡಬೇಕಾಗುತ್ತದೆ ಯಾಕೆಂದರೆ ಇಂಥ ಸ್ಥಳೀಕ ಸಂಸ್ಥೆಯ ಚುನಾವಣೆಗಳು ದೇಶದಲ್ಲಿ ಆಯಾ ರಾಜಕೀಯ ಪಂಗಡಗಳಿಗೆ ಜನಮತದ ಬೆಂಬಲ ಎಷ್ಟಿದೆಯೆಂಬುದರ ಪ್ರಮಾಣವೆಂಬುದಾಗಿ ತಿಳಿಯಲ್ಪಡುತ್ತದೆ. ಬುದನ್ನು ಮರೆಯಲಾಗದು

ಉಮೇದ್ವಾರರ ವ್ಯಕ್ತಿತ್ವದ ಕಡೆಗೆ ಮಹತ್ವ ಕೊಡುವ ಅವಶ್ಯಕತೆ ಇಲ್ಲವೆಂದು ಹೇಳಲಾಯಿತು ಉದಾಹರಣೆಗೆ ಮಂಗಳೂರು ಸರ್ಕಲಿಗೆ ಶ್ರೀ ಗಂಗಾಧರ ದಾಸರು ಕಾಂಗ್ರೆಸ್ ಕಡೆಯ ಉಮೇದ್ವಾರರು ಮತ್ತು ಶ್ರೀ ಬಾಲಪ್ಪನವರು ಸೋಶಿಯಲಿಸ್ಟ ಪಂಗಡದ ಉಮೇದ್ವಾರರು ಇವರಲ್ಲಿ ಹೆಚ್ಚು ಪ್ರಾಧಾನ್ಯತೆ ಇರುವ ವ್ಯಕ್ತಿ ಯಾರು? ಅಥವಾ ಹೆಚ್ಚು ಸಮರ್ಥ ವ್ಯಕ್ತಿ ಯಾರು? ಎಂಬುದು ಮತದಾರರು ನಿರ್ಣಯಿಸಬೇಕಾದ ಪ್ರಶ್ನೆಯಲ್ಲ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡಬೇಕೋ ಅಥವಾ ಸೋಶಿಯಲಿಸ್ಟ್ ಪಕ್ಷಕ್ಕೆ ಬೆಂಬಲ ಕೊಡಬೇಕೊ ಎಂಬುದು ಮತದಾರರು ನಿಜವಾಗಿ ತೀರ್ಮಾನಿಸತಕ್ಕ ಸಂಗತಿ ಇರುತ್ತದೆಂದು ತಿಳಿದುಕೊಳ್ಳಬೇಕು ಯಾಕೆಂದರೆ ಆಯಾ ಪಂಗಡದ ಪರವಾಗಿ ಉಮೇದ್ವಾರರಾಗಿ ನವರು ತಮ್ಮ ಮನಸ್ಸಿಗೆ ಬಂದಂತೆ ಕೆಲಸ ಮಾಡುವುದಲ್ಲ ಅವರವರ ಪಕ್ಷದವರು ಹಾಕಿಕೊಡುವ ಧೋರಣೆ ಮತ್ತು ಕಾರ್ಯಕ್ರಮಗಳಂತೆಯೇ ಕೆಲಸಮಾಡಬೇಕಾಗುತ್ತದೆ ಎಂಬುದನ್ನು ತಿಳಿಯಬೇಕು ಯಾವ ವ್ಯಕ್ತಿಯನ್ನು ಆರಿಸಿ ಉಮೇದ್ವಾರನ್ನಾಗಿ ನಿಲ್ಲಿಸಿದರೆ ತಮ್ಮ ಪಕ್ಷದ ಕಾರ್ಯ ಸುಗಮವಾಗಿ ನಡೆದೀತು ಎಂದು ವ್ಯಕ್ತಿಗಳ ಪರಿಶೀಲನೆ ನಡೆಸಬೇಕಾದುದು ಆಯಾ ಪಕ್ಷದ ವರಜವಾಬ್ದಾರಿಯಲ್ಲದೆ ಇದು ಮತದಾರರ ಕರ್ತವ್ಯವಲ್ಲ ಮತದಾರರ ಮಟ್ಟಿಗೆ ಆಯಾ ಕಾರ್ಯಕ್ರಮ ನಡೆಸುವ ಜವಾಬ್ದಾರಿಯನ್ನು ಇವರು ಆಯಾ ಪಂಗಡಗಳ ಮೇಲೆಯೇ ಹೊರಿಸಬಹುದು. ಆಯಾ ಪಂಗಡದವರು ಸಲ್ಲದ ವ್ಯಕ್ತಿಗಳನ್ನು ಆರಿಸಿ ತಮ್ಮ ಕಾರ್ಯ ಹಾಳು ಮಾಡಿಕೊಂಡರೆ ಆಯಾ ಪಂಗಡಕ್ಕೆ ಜನಮತದ ಬೆಂಬಲ ತಾನಾಗಿ ಕಡಮೆಯಾಗುವುದಷ್ಟೆ.

ಸ್ವತಂತ್ರ ಭಾರತದ ಅಳಿಕೆ ಪ್ರಜಾಸತ್ತಿಗೆ ಕೈನುದಲ್ಲಿ ನಡೆಯಲಿದೆ. ಮುಂದೆ ಶಾಸನ ಸಭೆಗಳ ಚುನಾವಣೆಗಳು ಪ್ರಾಯಸ್ಥರೆಲ್ಲರ ಮತದಾನದಿಂದ ನಡೆಯಲಿವೆ. ಈ ಬಗೆಯ ಚುನಾವಣೆಗಳಲ್ಲಿ ಮತದಾರರು ಹೇಗೆ ವರ್ತಿಸತಕ್ಕದೆಂಬ ಬಗ್ಗೆ ಅವಶ್ಯವುಳ್ಳ ಮಾಹಿತಿ ಪಡೆಯುವುದು ದೇಶದ ಭಾವೀ ಕಲ್ಯಾಣದ ದೃಷ್ಟಿಯಿಂದ ಅತೀ ಮಹತ್ವದ ಪ್ರಶ್ನೆ ಇರುತ್ತದೆ. ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆ ಈ ಬಗೆಯ ಶಿಕ್ಷಣ ಕೊಡಲು ಒಂದು ಸಂದರ್ಭವೆಂದು ಎಲ್ಲಾ ರಾಜಕೀಯ ಪಂಗಡಗಳೂ ತಿಳಿದು ಚುನಾವಣೆಗಳು ಕ್ರಮವಾಗಿ ಮತ್ತು ಸರಿಯಾದ ದಾರಿಯಲ್ಲಿ ನಡೆಯುವಂತೆ ಯತ್ನಿಸಬೇಕಾದುದು ಎಲ್ಲ ಪಂಗಡದವರ ಕರ್ತವ್ಯವಿರುತ್ತದೆ ಮಾತ್ರವಲ್ಲ ಈಗಿನ ರಾಜಕೀಯ ಪಂಗಡಗಳಲ್ಲಿ ಪ್ರಧಾನ ಪಂಗಡವಾದ ಕಾಂಗ್ರೆಸಿನವರ ಹೆಚ್ಚಿನ ಜವಾಬ್ದಾರಿಯೆಂದು ಹೇಳಿದರೆ ತಪ್ಪಿಲ್ಲ

ಈ ದೃಷ್ಟಿಯಿಂದ ಆಯಾ ಪಂಗಡದಿಂದ ಉಮೇದ್ವಾರರಾಗಿ ನಿಂತವರು ಅದರಲ್ಲೂ ಸ್ಪರ್ಧೆಯುಳ್ಳ ಕಡೆಗಳಲ್ಲಿಯು ಉಮೇದ್ವಾರರು ತಮ್ಮ ಪಕ್ಷದ ಮಹತ್ವ ಈ ರೀತಿಯದು ವಿರುದ್ಧ ಪಕ್ಷದ ಧೋರಣೆ ಈ ರೀತಿ ಇದೆ ನಮ್ಮ ಧೋರಣೆಯೇ ಸರಿಯಾದುದ ಆದುದರಿಂದ ನಮಗೇನೆ ಮತದಾನ ಮಾಡಿರಿ ಎಂದು ಮತದಾರರೊಡನೆ ಕೇಳಬೇಕಲ್ಲದೆ ನಾನು ನಿಮಗೆ ಬೇಕಾದವರು ಎಂಬುದರಿಂದ ಮತ ಕೊಡಬೇಕಾಗಿಲ್ಲವೆಂಬುದನ್ನು ಮತದಾರರಿಗೆ ಸ್ಪಷ್ಟವಾಗುವಂತೆ ತಿಳಿಯಹೇಳಬೇಕು

ನಮ್ಮ ಪ್ರಧಾನ ರಾಜಕೀಯ ಪಂಗಡವಾದ ಕಾಂಗ್ರೆಸ್ ಸಂಸ್ಥೆಯವರು ತಮ್ಮ ಉಮೇದ್ವಾರರನ್ನು ಆರಿಸಿದ ಒಕ್ಕೆ ಈ ಉಮೇದ್ವಾರರ ಯೋಗ್ಯತೆ ಇತ್ಯಾದಿಗಳನ್ನು ಸ್ವಲ್ಪಮಟ್ಟಿಗೆ ವಿವೇಚಿಸಿದರೆ ಅದರಲ್ಲೂ ಅನುಚಿತವೇನೂ ಇರುವುದಿಲ್ಲ ಈ ಬಾರಿ ಕಾಂಗ್ರೆಸಿನವರು ನಿಲ್ಲಿಸಿರುವ ಉಮೇದ್ವಾರರ ಪಟ್ಟಿಯನ್ನು ಪರಿಶೀಲಿಸಿದರೆ ಮೊದಲಾಗಿ ಹೇಳಿಬರುವ ವಿಚಾರವೆಂದರೆ ಇದರಲ್ಲಿ ಹಲವು ಜಿಲ್ಲಾ ಬೋರ್ಡಿನ ಸದಸ್ಯರೇ ಇರುವ ಬದಲು ಆ ತಲಾಂತರದವರನ್ನೇ ಬಿಟ್ಟು ಪೂರ್ಣ ಹೊಸ ತಲಾಂತರವನ್ನು ಆರಿಸುವುದು ಕಂಡುಬರುತ್ತದೆ ಈ ಒಕ್ಕೆ ಸ್ಥಳೀಕ ಕಾಂಗೆಸ್ ಅಧಿಕಾರಿಗಳನ್ನು ನಿಜವಾಗಿಯೂ ಅಭಿನಂದಿಸಬೇಕಾಗಿದೆ

ಕಾಂಗ್ರೆಸಿನವರು ಆರಿಸಿದ ತಮ್ಮ ಉಮೇದ್ವಾರರಲ್ಲಿ ಹೆಚ್ಚಿನವರು ಕಾಂಗ್ರೆಸಿನವರೇ ಅಲ್ಲವೆಂದು ಹೇಳುವವರು ಕೆಲವರಿದ್ದಾರೆ. ಚುನಾವಣೆಗಳ ಮಟ್ಟಿಗೆ ಮಾತ್ರ ಅವರನ್ನು ಕಾಂಗ್ರೆಸಿಗರೆಂದು ಹೇಳಲಾಗಿದೆ ಎಂಬ ತ್ಯಾದಿ ಟೀಕೆಗಳು ಅಲ್ಲಲ್ಲಿ ಕೇಳಿಬರುತ್ತವೆ ಕಾಂಗ್ರೆಸ್ ಉಮೇದ್ವಾರರ ಪಟ್ಟಿಯನ್ನು ಪರಿಶೀಲಿಸಿದಲ್ಲಿ ಇದರಲ್ಲಿ ಹಲವರು ಈ ಮೊದಲು ಕಾಂಗ್ರೆಸ್ ಕೆಲಸಗಾರರಾಗಿ ಜೈಲಿಗೆ ಹೋದವರು ಅಥವಾ ಕಾಂಗ್ರೆಸ್ ಸಂಸ್ಥೆಗಳಲ್ಲಿ ಕೆಲಸಗಾರರಿದ್ದವರು ಇರುವುದನ್ನು ಕಾಣಬಹುದು ಉದಾಹರಣೆಗೆ ಶ್ರೀಗಳಾದ ಸರ್ವೋತ್ತಮ ಪೈ, ಎನ್. ಎಸ್. ಪರಮೇಶ್ವರಯ್ಯ, ಮುದ್ದಾಡಿ ಕೃಷ್ಣಯ್ಯ ಶೆಟ್ಟಿ, ಪದ್ಮಯ್ಯ ಆಳ್ವ, ಅನಂತ ರೈ, ಕೇಶವ ಬಾಳಿಗ, ದೇವಪ್ಪ ಆಳ್ವ, ವಿಟ್ಲಲ ದಾಸ ಶೆಟ್ಟಿ, ಉಮೇಶರಾವ್ ಇತ್ಯಾದಿ. ಇವರೆಲ್ಲಿ ಕಾಂಗ್ರೆಸಿಗರಲ್ಲವೆನ್ನುವವರ್ಯಾರು? ಈ ಮೊದಲು ಕಾಂಗ್ರೆಸ್ ಪರವಾಗಿ ನಡೆದ ಬೋರ್ಡು ಚುನಾವಣೆಗಳಲ್ಲಿ ಇಷ್ಟು ಮಂದಿ ಕಾಂಗ್ರೆಸ್ ಕೆಲಸಗಾರರನ್ನು ಸೇರಿಸಿದ್ದಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಮಾತ್ರವಲ್ಲ ಕಾಂಗ್ರೆಸ್ ಉಮೇದ್ವಾರರ ನ್ನಾಗಿ ಕಾಂಗ್ರೆಸಿನಲ್ಲಿ ಇದ್ದವರನ್ನೇ ಆರಿಸಬೇಕೆಂಬ ತರ್ಕ ಸರಿಯಲ್ಲ ಈ ಬಗೆಯ ತರ್ಕ ಮಾಡಿದರೆ ಕಾಂಗ್ರೆಸಿಗೆ ಹೊಸಬರು ಯಾರೂ ಸೇರಕೂಡದೆಂದು ಹೇಳಿದಂತಾದೀತು. ಕಾಂಗ್ರೆಸು ಬಾಗಿಲು ಮುಚ್ಚಿಕೊಂಡಿರುವ ಸಂಸ್ಥೆಯಲ್ಲ ಹೊಸ ಹೊಸ ಉತ್ಸಾಹಿಗಳು ಕಾಂಗ್ರೆಸಿನ ಆಶ್ರಯ ಪಡೆಯಲು ಬಂದಂತೆ ಕಾಂಗ್ರೆಸಿನ ಬಲ ಹೆಚ್ಚುವುದೆಂಬುದರಿಂದ ಇಂಥವರನ್ನು ಸೇರಿಸಲು ಯತ್ನಿಸುವುದೇ ನಿಜವಾದ ಶ್ರೇಯಸ್ಸಿನ ದಾರಿ

ಕಾಂಗ್ರೆಸ್ ಉಮೇದ್ವಾರರ ಆಯ್ಕೆಯ ಕುರಿತು ಮುಂದೆ ಬಂದಿರುವ ಇನ್ನೊಂದು ಟೀಕೆಯೆಂದರೆ ಜಾತೀಯ ಪ್ರಶ್ನೆ ಇದು ನಮ್ಮ ಜಿಲ್ಲೆಯ ಮಾತ್ರವಲ್ಲ ಇಡೀ ದಕ್ಷಿಣ ಭಾರತದ ಒಂದು ಜಟಿಲ ಸಮಸ್ಯೆಯೆಂಬುದನ್ನು ಮೊದಲಂಗಿ ತಿಳಿದುಕೊಳ್ಳುವುದು ಅಗತ್ಯ ಬಂಟರ ಯಾನೆ ನಾಡವ ಜಾತಿಯವರಿಗೇನಿ ಹೆಚ್ಚಿನ ಸ್ಥಾನಗಳನ್ನು ಕೊಡಲಾಗಿದೆಯೆಂಬುದು ಟೀಕಾಕಾರರ ಅಭಿಪ್ರಾಯವೆಂಬುದು ಸ್ಪಷ್ಟ ಈಗ ಉಮೇದ್ವಾರರಾಗಿ ಆರಿಸಲ್ಪಟ್ಟಿರುವ ಈ ಜಾತಿಯವರ ಸಂಖ್ಯೆಗಿಂತ ಹಿಂದೆ ಇದ್ದ ಜಿಲ್ಲಾ ಬೋರ್ಡಿನಲ್ಲಿ ಇವರ ಸಂಖ್ಯೆ ಹೆಚ್ಚಿಗಿದ್ದಿತೆಂಬ ಸಂಗತಿ ನಾವು ಮರೆಯುವುದು ಉಚಿತವಲ್ಲ ಈ ಜಿಲ್ಲೆಯಲ್ಲಿ ಹಿಂದರಲ್ಲೂ ಗ್ರಾಮಗಳಲ್ಲಿ ಇದು ಅತ್ಯಂತ ಪ್ರಧಾನ ಸಮಾಜವೆಂಬುದನ್ನು ಅಲ್ಲಗಳೆಯುವಂತಿಲ್ಲ ಈ ಸಮಾಜದ ಯುವಕರ ಕಾಂಗ್ರೆಸಿಗರಾಗಿ ದುಡಿಯಲು ಮುಂದೆ ಬಂದರೆ ಅದಕ್ಕಾಗಿ ಬೇಸರವಪಡತಕ್ಕ ವಿಚಾರವೇನೂ ಇರುವುದಿಲ್ಲ ಹೀಗೆ ಮುಂದೆ ಒಂದವರಲ್ಲಿ ಜಾತೀಯತಾ ಭಾವನೆ ಇರಲಾರದು, ಇದ್ದರೂ ಕಾಂಗ್ರೆಸಿನಲ್ಲಿ ದುಡಿದಂತೆ ಅದು ತಾನಾಗಿ ಹೋಗುವುದು. ಉಮೇದ್ವಾರರನ್ನು ಆರಿಸಹೋದವರು ಸಾಧ್ಯವಿದ್ದಷ್ಟು ಮಂದಿ ಪ್ರಶ್ನಿಯಾಗಿ ಸ್ಪರ್ಧಿಸಬಲ್ಲ ತರುಣರನ್ನು ಆರಿಸಹೋದಂತೆ ಕಾಣುತ್ತದಲ್ಲದೆ ಜಾತೀಯ ಭಾವನೆಯಿಂದ ಪ್ರೇರಿತರಾದಂತೆ ಕಾಣುವುದಿಲ್ಲ ಅದಕ್ಕೆ ಒದಲು ಎಲ್ಲ ಜಾತಿಯವರಿಗೂ ಸ್ಥಾನ ಕಲ್ಪಿಸಿಕೊಡಬೇಕೆಂಬ ಹವ್ಯಾಸ ಕಟ್ಟಿಕೊಂಡಂತೆ ಕಾಣುತ್ತದೆ.

ಕಾಂಗ್ರೆಸಿನವರು ಉಮೇದ್ವಾರರ ಆಯ್ಕೆಯಲ್ಲಿ ಏನಾದರೂ ತಪ್ಪಿರುವುದಾದರೆ ಸ್ಪರ್ಧೆಯಲ್ಲಿ ಯಶಸ್ವಿಯಾಗುವುದು ಕಷ್ಟ ಕಾಣಬಹುದಾದ ಪ್ರಸಂಗದಲ್ಲಿಯೂ ತಮ್ಮ ಕೆಲಸಗಾರರೆಂಬ ಅಭಿಮಾನದಿಂದ ಕೆಲವರನ್ನು ಆರಿಸಿದುದರಲ್ಲಿಯೂ ಎನ್ನಬಹುದು. ಇದರಿಂದಾಗಿ ಕೆಲವೆಡೆ ಕಾಂಗ್ರೆಸು ಸೋಲುವ ಪ್ರಸಂಗ ಬರಬಹುದು ಇದರಲ್ಲಿ ಆಯ್ಕೆ ಮಾಡಿದವರನ್ನು ದೂರುವುದಕ್ಕೇನೂ ಇಲ್ಲ. ನ್ಯಾಯವಾಗಿ ಇದಕ್ಕಾಗಿ ಅವರನ್ನು ಅಭಿನಂದಿಸಬೇಕು.

ಟೀಕೆ-ಟಿಪ್ಪಣಿಗಳು

ಕಾಶ್ಮೀರ ಸಮಸ್ಯೆ

ಯುನ್ಯಾಟೆಡ್ ನೇಶನ್ಸ್ ಕಮಿಶನರನವರು ಇತ್ತಂಡದೊಳಗೆ ರಾಜಿಪಂಚಾಯತಿಕೆ ನಡೆಸಲು ಕರೆದ ವರಿಷತ್ತನ್ನು ವರಿಷತ್ತು ಸೇರುವ ಮೊದಲೇ ನಿಲ್ಲಿಸಿರುತ್ತಾರೆ. "ಅಜಾದ್" ಕಾಶ್ಮೀರ ಸೈನ್ಯಗಳನ್ನು ಅಂತ್ಯಪಡಿಸದೆ ಜನಮತಗಣನೆ ಶಾಂತರೀತಿಯಲ್ಲಿ ನಡೆಸಲು ಸಾಧ್ಯವಿಲ್ಲವೆಂಬುದು ಭಾರತ ಸರಕಾರದ ನಿಶ್ಚಿತ ಅಭಿಪ್ರಾಯ. ಹಿಂದಿನಿಂದಲೂ ಹೇಳಲ್ಪಟ್ಟಿದ್ದು ನಡೆಯಲಿಕ್ಕಿದ್ದ ವರಿಷತ್ತಿನಲ್ಲಿ ಈ ಪ್ರಶ್ನೆಯನ್ನು ಚರ್ಚೆಗೆ ಇಡಲಿಕ್ಕೆ ಕೂಡ ಕೂಡದೆಂಬುದು ಪಾಕಿಸ್ತಾನದ ಆಗ್ರಹ. ವರಿಷತ್ತು ಉಪಯೋಗವಿಲ್ಲವೆಂದು ಕಮಿಶನಿಸನನವರು ತಿರ್ಮಾನಿಸಿದ್ದು ಸಹಜವೇ ಇದೆ.

ಮುಂದೇನು? ಏಂಬುದೇ ಮುಖ್ಯ ಪ್ರಶ್ನೆಯನ್ನು ಮೂರನೆಯನನೊಬ್ಬನ ಪಂಚಾಯತಿಗೆ ಒಪ್ಪಿಸಬಹುದೆಂದು ಕಮಿಶನರನವರು ಸೂಚಿಸಲಿರುವರೆಂದು ಕೇಳಿ ಬರುತ್ತಿದೆ. ಬೇರೆ ದಾರಿ ಯಾರಿಗೂ ಹೊಳೆಯುವುದಿಲ್ಲ. ಪಂಚಾಯತರ ತೀರ್ಪಾನಕ್ಕಾದರೂ ಪಾಕಿಸ್ತಾನ ಒಪ್ಪಬಹುದೇ ನೋಡಲಿಕ್ಕಿದೆ.

ಭಾರತದ ರಾಷ್ಟ್ರಭಾಷೆ

ಶಟನಾ ಸಮಿತಿಯ ಈ ಪ್ರಶ್ನೆಯ ಕುರಿತು ಇಡಲು ತಯಾರಾದ ನಿಯಮದಲ್ಲಿ ಹಿಂದೀ ಭಾಷೆ ದೇವನಾಗರಿ ಬರಹದಲ್ಲಿ ಬರೆಯಲ್ಪಟ್ಟು ಇದೇ ಭಾರತದ ರಾಷ್ಟ್ರ ಭಾಷೆಯಾಗಿಬೇಕೆಂದೂ ಆದರೆ ಹೊಸ ಶಟನೆ ಜಾರಿಗೆ ಬಂದಂದಿನಿಂದ ಹದಿನೈದು ವರ್ಷಗಳ ತನಕ ಇಂಗ್ಲಿಷ್ ಭಾಷೆಯೇ ಸರಕಾರದ ಭಾಷೆಯಾಗಿರಬೇಕೆಂದೂ ಹೇಳಲಾಗಿದೆ. ಯಾವ ಬಗೆಯ ಅಂಕೆಗಳನ್ನು ಉಪಯೋಗಿಸಬೇಕೆಂಬ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಅಂತೂ ಈ ಕುರಿತು ಶಟನಾ ಸಮಿತಿ ಹೇಗೆ ತೀರ್ಮಾನಿಸಲಿಕ್ಕಿದೆಯೆಂದು ನೋಡಬೇಕಷ್ಟೆ. ಅಂತೂ ಭಾವೀ ಭಾರತದ ರಾಷ್ಟ್ರ ಭಾಷೆ ಹಿಂದೀ ಅಥವಾ ಹಿಂದುಸ್ಥಾನೀ ಎಂಬುದು ನಿರ್ವಿವಾದ.

ಕರ್ನಾಟಿಕ ಪ್ರಾಂತ್ಯರಚನೆ

ಹೊಸ ಶಟನೆಯಲ್ಲಿ ಪ್ರಾಂತ್ಯಗಳ ಪಟ್ಟಿ ಕೂಡುವಾಗ ಆಂಧ್ರ ಪ್ರಾಂತ್ಯ ಹೆಸರಿಸಬೇಕೆಂದು ಆಂಧ್ರರು ಬಹಳ ಯತ್ನಿಸುತ್ತಿದ್ದಾರೆ. ಕರ್ನಾಟಿಕ ಪ್ರಾಂತ್ಯವನ್ನೂ ಪಟ್ಟಿಯಲ್ಲಿ ಕಾಣಿಸಬೇಕೆಂದು ಕನ್ನಡಿಗರೂ ಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ಭಾರತ ಸರಕಾರದವರು, ಶಟನಾ ಸಮಿತಿಯವರಿಗೂ ಇವರೊಡನೆಲ್ಲ ಭೇಟಿಮಾಡಲು ಎರಡು ಕಡೆಗಳಲ್ಲಿಯ ಪ್ರತಿನಿಧಿ ಮಂಡಲಗಳೂ ಹೊರಡುತ್ತಿವೆ. ಆಂಧ್ರ ಕನ್ನಡಿಗರಿಬ್ಬರೂ ಈ ಯತ್ನಗಳಲ್ಲಿ ಯಶಸ್ವಿಗಳಾಗಲೆಂದು ಹಾರೈಸುತ್ತೇನೆ.

ಕಾಂಗ್ರೆಸ್ ಉಮೇದ್ವಾರರಿಗೇನೆ ಮತ ಕೊಡಬೇಕೆಂಬ ಬಗ್ಗೆ ಇಲ್ಲಿ ವಿವರಿಸಿಲ್ಲ. ಯಾಕೆಂದರೆ ಆ ಕುರಿತು ಎಷ್ಟೋ ಬಾರಿ ಈ ಮೊದಲೇ ಪ್ರತಿಪಾದಿಸಲಾಗಿದೆಯಷ್ಟೆ!

ಆಹಾರ ಮಂತ್ರಿಗಳ ಜಿಲ್ಲಾ ಸಂಚಾರ

ಮದ್ರಾಸು ಸರಕಾರದ ಆಹಾರ ಖಾತೆಯ ಮಂತ್ರಿ ಮಾನ್ಯ ರೊಶೀ ವಿಕ್ಟೋರಿಯಾರವರು ಇದೇ ತಾರೀಕು 19ರ ಬೆಳ್ಗೆ ಕಣ್ಣಾನೂರಿನಿಂದ ಮಂಗಳೂರಿಗೆ ಬಂದರು. ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾ ಕಲೆಕ್ಟರರೇ ಮೊದಲಾದ ಅಧಿಕಾರಿಗಳೂ ಶ್ರೀಗಳಾದ ಎಲ್. ಸಿ. ವ್ಯಾಸ್, ಡಾ। ಯು. ಪಿ. ಮಲ್ಯ, ವಿ. ಎಸ್. ಕುಡ್ವ, ರಂಗನಾಥ ಪುಂಜರೇ ಮೊದಲಾದವರು ಇವರನ್ನು ಸ್ವಾಗತೀ ಕರಿಸಿದರು.

ಅಂದು ಬೆಳಿಗ್ಗೆ ಮಂತ್ರಿಯವರ ಮೊದಲ ಕಾರ್ಯಕ್ರಮ ಸೈಂಟ್ ಎಲೋಶಿಯಸ್ ಕಾಲೇಜು ಸಂದರ್ಶನ. ಇವರು ಈ ಕಾಲೇಜಿನಲ್ಲಿ 33 ವರ್ಷಗಳ ಕೆಳಗೆ ಮೂರು ವರ್ಷ ವಿದ್ಯಾರ್ಥಿಗಳಾಗಿ ಇದ್ದರಂತೆ. ಕಾಲೇಜಿನ ವ್ಯಾಸ್ ಪ್ರಿನ್ಸಿಪಾಲರಾದ ಫಾದರ್ ಸಿಕೇರರು ಮಂತ್ರಿಯವರನ್ನು ಸ್ವಾಗತಿಸಿ ಮಾತನಾಡಿದರು. ಮಂತ್ರಿಯವರು ವಿದ್ಯಾರ್ಥಿಗಳನ್ನು ಕುರಿತು ಆಹಾರ ಸಮಸ್ಯೆ ಬಿಡಿಸಲು ವಿದ್ಯಾರ್ಥಿಗಳು ಹೇಗೆ ಸಹಾಯ ಮಾಡಬಹುದೆಂದು ವಿವರಿಸಿ ಭಾಷಣಮಾಡಿದರು. ಕಾಲೇಜು ಯೂನಿಯನಿನ ಅಧ್ಯಕ್ಷ ವಿಶ್ವನಾಥನರು ವಂದನಾರ್ಪಣೆ ಮಾಡಿದರು.

ಅಲ್ಲಿಂದ ಮಂತ್ರಿಯವರು ಹ್ಯೂಗೆ ಬಜಾರಿನ ಸರಕಾರದ ಫಿಶರೀಸ್ ಜ್ಞಾನೋದಯ ಶಾಲೆ ಸಂದರ್ಶಿಸಿದರು. ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಶ್ರೀ ಎಮ್. ಕೆ. ಬಸಪ್ಪನವರೂ ಮುಖ್ಯ ಉಪಾಧ್ಯಾಯರಾದ ಶ್ರೀ ಉಚ್ಚಿಲ ವೀರಪ್ಪನವರೂ ಮಂತ್ರಿಯವರನ್ನು ಸ್ವಾಗತೀಕರಿಸಿದರು. ಶಾಲಾ ಮಕ್ಕಳು ವಿವಿಧ ಗೀತ ನೃತ್ಯ ಕೈಕೆಲಸಗಳನ್ನು ಪ್ರದರ್ಶಿಸಿದರು.

ಆ ಬಳಿಕ ಕಾಂಗ್ರೆಸ್ ಕಚೇರಿಗೆ ಬಂದು ಹಲವರಿಗೆ ಭೇಟಿ ಇತ್ತರು. ಮೂಹಿನ್ ಶಮ್ಮಾದರು, ಪುತ್ತೂರು ಹುಸೇನ ಸಾಹೇಬರು ನೋಹನರಾಯರೇ ಮೊದಲಾದವರು ಭೇಟಿ ಮಾಡಿದರು. ಫಿಶರೀಸ್ ಶಾಲಾ ಉಪಾಧ್ಯಾಯರು ಮತ್ತು ಮೀನು ವ್ಯಾಪಾರಿಗಳು ತಮ್ಮ ಹಾಲಹವಾಲೆ ಹೇಳಿಕೊಂಡರು.

ಅಂದು ಮಧ್ಯಾಹ್ನ ಗಂಟೆ 2½ಕ್ಕೆ ಕಲೆಕ್ಟರರ ಆಫೀಸಿನಲ್ಲಿ ಆಹಾರ ಸಮಿತಿಯ ವಿಶೇಷ ಅಧಿವೇಶನ ಮಂತ್ರಿಯವರ ಸಮಕ್ಷಮ ನಡೆಯಿತು. ಆಹಾರ ಪರಿಸ್ಥಿತಿ ತಿಳಿಯಲು ಬಂದಿರುವರೆಂದೂ ಅವರಿಗೆ ಬೇಕಾದ ಮಾಹಿತಿ ಹೇಳಬಹುದೆಂದೂ ಕಲೆಕ್ಟರರು ತಿಳಿಸಿದರು. ಶ್ರೀ ಕೆ. ಬಿ. ಜನರಾಜ ಹೆಗ್ಡೆಯರು ವರ್ಗದಾರರ ಸಂಘದ ಪರವಾಗಿ ಒಂದು ಮನವಿ ಒಪ್ಪಿಸಿ ಮಲ್ಪೆ ನಾಡಿನ ಅಭಿವೃದ್ಧಿಯಿಂದ ಜಿಲ್ಲೆಯ ಆಹಾರ ಪ್ರಶ್ನೆ ಬಿಡಿಸಬಹುದೆಂದು ಸೂಚಿಸಿದರು. ಜಿಲ್ಲಾ ಕಲೆಕ್ಟರರೂ ಆಹೆವರ ಪರಿಸ್ಥಿತಿ ಮತ್ತು ನಿರಾವರಿ ಭಾವಿಕೆರೆಗಳಿಗೆ ಸಹಾಯಧನ ಕೊಡುವ ಯೋಜನೆಯ ಪ್ರಗತಿ ವಿವರಿಸಿದರು. ಆಹಾರ ಪ್ರಶ್ನೆ ಬಿಡಿಸಲು ಮಂತ್ರಿಗಳು ಎಲ್ಲರ ಸಹಕಾರವೇಕೆಂದರು.

ಬಳಿಕ ಕಲೆಕ್ಟರರ ಆಫೀಸಿನಲ್ಲಿಯೇ ಮಹಾತ್ಮಾ ಗಾಂಧಿಯವರ ಭಾವಚಿತ್ರದ ಅನಾವರಣ ಎಲ್. ಸಿ. ವ್ಯಾಸರ ಅಧ್ಯಕ್ಷತೆಯಲ್ಲಿ ನಡೆಯಿತು. ಕಲೆಕ್ಟರರೂ ಅವರ ಶಿಬಂದಿಯವರೂ ಈ ಚಿತ್ರಕೊಟ್ಟವರು. ಅನಾವರಣ ಮಾಡುತ್ತ ಮಂತ್ರಿಯವರು ಹೀಗೆ ಹೇಳಿದರು. ಗಾಂಧೀಜಿಯವರನ್ನು ಆಹಾರ ಖಾತೆಯ ಕಮಿಶನರ್ ಮಾಡಿದರೆ ಎಲ್ಲಾ ಕಂಟ್ರೋಲುರದ್ದು ಮಾಡುತ್ತಿದ್ದರು. ಅವರು ಇದ್ದಿದ್ದರೆ ಜನರ ನಡತೆ ತಿದ್ದಿ ಕಂಟ್ರೋಲು ಇಲ್ಲದೆ ಈ ಪ್ರಶ್ನೆ ಬಿಡಿಸಲು ಸಾಧ್ಯವಾಗುತ್ತಿತ್ತು. ಈಗ ಕಂಟ್ರೋಲು ಹೋಗಲು ಹೆಚ್ಚು ಆಹಾರ ಬೆಳೆಸುವುದೊಂದೇ ದಾರಿಯೆಂದರು. ಕಲೆಕ್ಟರರು ವಂದನಾರ್ಪಣೆ ಮಾಡಿದರು.

ಆ ಮೇಲೆ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಮಂತ್ರಿಯವರು ಭಾಗವಹಿಸಿದರು. ಕಾಂಗ್ರೆಸ್ ಕೆಲಗಾರರು ಆಹಾರ ಹೆಚ್ಚಿಸುವುದರಲ್ಲಿ ಭಾಗಿಗಳಾಗಲು ಆತುರದಿಂದಿರುವರೆಂದು ಡಾ। ಮಲ್ಯರು ತಿಳಿಸಿದರು. ಶ್ರೀಗಳಾದ ಮೋಹನ್ ರಾಯರು, ನರ್ಸಪ್ಪಯ್ಯನವರು ಜಿನರಾಜ ಹೆಗ್ಡರು, ಜಿ. ಕೆ. ಗೋವಿಂದ ಭಟ್ಟರೇ ಮೊದಲಾದವರು ಹಲವು ಸೂಚನೆಗಳನ್ನು ಮುಂದಿಟ್ಟರು. ಆಹಾರ ಪ್ರಶ್ನೆ ಬಿಡಿಸಲು ಸರಕಾರ ಮಾಡುವ ಯತ್ನಗಳನ್ನು ಜನರಿಗೆ ತಿಳಿಸಿ ಅವರು ಸಹಕರಿಸುವಂತೆ ಮಾಡುವುದು ಕಾಂಗ್ರೆಸಿಗರು ಮಾಡಬಲ್ಲ ಕೆಲಸವೆಂದು ಮಂತ್ರಿಯವರು ಹೇಳಿದರು. ಶ್ರೀ. ಕೆ. ಕೆ. ಶೆಟ್ಟರು ಧನ್ಯವಾದ ಅರ್ಪಿಸಿದರು.

ತದನಂತರ ಗವರ್ನಮೆಂಟು ಕಾಲೇಜಿನಲ್ಲಿ ಮಂತ್ರಿಯವರ ಸಾರ್ವಜನಿಕ ಭಾಷಣವಾಯಿತು. ಕಾಲೇಜು ಯೂನಿಯನಿನ ಅಧ್ಯಕ್ಷರು ಇವರಿಗೆ ಸ್ವಾಗತವಿತ್ತರು. ಸಭೆಯು ಸಸಿ ನೆಡುವ ಕಮಿಟಿಯ ಆಶ್ರಯದಲ್ಲಿ ಎಲ್. ಸಿ. ವ್ಯಾಸರೆ ಅಧ್ಯಕ್ಷತೆಯಲ್ಲಿ ನಡೆದಿತ್ತು.

ಮಂತ್ರಿಯವರು ಗವರ್ನಮೆಂಟು ಕಾಲೇಜಿನಲ್ಲಿ, ತಾಲೂಕು ಆಫೀಸಿನಲ್ಲಿ ಮತ್ತು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಕೆಲವು ಸಭೆಗಳನ್ನು ನೆಟ್ಟರು.

ಅಲ್ಲಿಂದ ಬೋಳಾರಕ್ಕೆ ಹೋಗಿ ಸ್ತ್ರೀಯರ ಹಿತಸಾಧಕ ಖಾತೆಯ ಕೇಂದ್ರ ಸಂದರ್ಶನ ಮಾಡಿದರು. ಮಂಗಳೂರಿನಲ್ಲಿ ಈ ಖಾತೆಯ ಅಧ್ಯಕ್ಷೆ ಶ್ರೀಮತಿ ಶಾಂಭವೀ ಪೂಜರು ಮಂತ್ರಿಯವರನ್ನು ಸ್ವಾಗತಿಸಿ ಸಂಸ್ಥೆಯ ಚಟುವಟಿಕೆಗಳನ್ನು ತೋರಿಸಿದರು. ಇದ್ದ ಆಹಾರ ಉತ್ಪನ್ನೀತಿ ಉಪಯೋಗಿಸಿ ಕೆಲಸ ಸ್ತ್ರೀಯರು ಸೌಖ್ಯ ಮಾಡಬಹುದೆಂದು ಮಂತ್ರಿಯವರು ಹೇಳಿದರು.

ಆ ದಿನದ ಕೊನೆಯ ಕಾರ್ಯಕ್ರಮವಾಗಿ ಮಂತ್ರಿಯವರು ಕೆನರಾ ಕ್ಲಬ್ಬಿನಲ್ಲಿ ಮಂಗಳೂರಿಗೊಂದು ರೋಟರೀ ಕ್ಲಬ್ಬನ್ನು ಸ್ಥಾಪಿಸುವ ನೆಲೆಸ್ಟೆ ಮಾಡಿದರು.

ನಾರನೆ ದಿನೆ ಕಾರ್ಕಳಕ್ಕೆ ಹೋಗುತ್ತ ನೀರು ಮಾರ್ಗದಲ್ಲಿ ಕೈತಾನ ಲೋಬೋರ ಸಾಗು ಭೂಮಿ ಸಂದರ್ಶಿಸಿದರು. ಕಾರ್ಕಳದಲ್ಲಿ ತಾಲೂಕು ಆಫೀಸಿನಲ್ಲಿ ಸಸಿನೆಡುವ ಕಾರ್ಯಕ್ರಮವಾಯಿತು. ಶ್ರೀ ವಿ. ಬಿ. ಶಿಜ್ಯಯವರು ಮಂತ್ರಿಯವರಿಗೆ ಸ್ವಾಗತವಿತ್ತರು. ಶ್ರೀ ಇಡ್ಯ ರಾಮಮೂರ್ತಿಯವರು ಧನ್ಯವಾದ ಕೊಟ್ಟರು. ಶ್ರೀ ಕಾಬೆಟ್ಟು ಓಬಯ್ಯ ಹೆಗ್ಡೆಯವರು ಒಂದು ಮನವಿ ಒಪ್ಪಿಸಿದರು.

ಮುಂದೆ ಮಂತ್ರಿಯವರು ಮಣಿಪಾಲಿನಲ್ಲಿ ನೈತ್ರಿ ಶಿಕ್ಷಣದ ಏರ್ಪಾಡು ಪರಿಶೀಲಿಸಿ ಉಡ್ಡಿಗೆ ಹೋಗಿ ಅಲ್ಲಿ ಸಸಿನೆಡುವ ಕಾರ್ಯಕ್ರಮ ಪೂರೈಸಿ ನಗರ ಸಭೆಯ ಮಾನವಕ್ರಸ್ವೀಕರಿಸಿ ಮರಳಿ ಮಂದು ಮಂಗಳೂರಿನಿಂದ ಮಾರನೆ ದಿನ ಹಿಂತೆರಳಿದರು.

ದ. ಕ. ಜಿಲ್ಲಾ ಬೋರ್ಡು ಚುನಾವಣೆ ಕಾಂಗ್ರೆಸ್ ಉಮೇದುವಾರರು

ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ ವತಿಯಿಂದ ಹುರಿಯಾಳುಗಳನ್ನಾಗಿ ಈ ಕೆಳಗಿನವರನ್ನು ಆರಿಸಲಾಗಿದೆಂದು ತಿಳಿದುಬರುತ್ತದೆ. ಮಂಗಳೂರು: ಶ್ರೀ ಬಿ. ಗಂಗಾಧರದಾಸ್, (ಜನರಲ್ ಸೀಟಿಗೆ); ಶ್ರೀ ಎಫ್. ಎಕ್ಸ್. ಡಿ. ಸಿಂಟೊ (ಕ್ರಿಶ್ಚನ್). ಮೂಡಬಿದ್ರೆ: ಶ್ರೀ ಕೆ. ಕೃಷ್ಣ ಸೆಟ್ಟಿ, ವೇಣೂರು: ಶ್ರೀ ಧರಣಪ್ಪ ಅಧಿಕಾರಿ. ಬೈಂದೂರು: ಶ್ರೀ ವೈ. ಮಂಜಯ್ಯ ಸೆಟ್ಟಿ. ಕುಂದಾಪುರ: ಶ್ರೀ ಎಚ್. ಎಸ್. ಸರ್ವೋತ್ತಮ ಶೆಟ್ಟಿ; ಶ್ರೀಮತಿ ಪ್ರಭುಲ್ಲ ಎಸ್. ಆರ್. ಹೆಗ್ಡೆ (ಸ್ತ್ರೀಯರ ಸ್ಥಾನಕ್ಕೆ). ಕಾರ್ಕಳ: ಶ್ರೀ ಕೆ. ಸುಂದರ (ಹರಿಜನರಕಾದಿಟ್ಟ ಸ್ಥಾನಕ್ಕೆ) ಕೋಟ: ಶ್ರೀ ಎಸ್. ಎಸ್. ಪರಮೇಶ್ವರಯ್ಯ. ಬಸ್ರೂರು: ಶ್ರೀ ಬಿ. ಮಂಜಯ್ಯ ಹೆಗ್ಡೆ. ಬ್ರಹ್ಮಾವರ: ಶ್ರೀ ಇರ್ವಾಡಿ ಆನಂದ ಶೆಟ್ಟಿ. ಹಿರಿಯಡ್ಕ: ಡಾ। ಕೆ. ಕೆ. ಹೆಗ್ಡೆ. ಕಾಪು: ಶ್ರೀ ಬಿ. ಬಾಲಕೃಷ್ಣ ಶೆಟ್ಟಿ. ಮೂಲ್ಕಿ: ಡಾ। ಎಸ್. ಚಂವಾ. ಗುರುಪುರ: ಶ್ರೀ ವಜ್ರಯ್ಯ ಆಳ್ವ. ಬಂಟ್ವಾಳ: ಶ್ರೀ ಬಿ. ಕೇಶವ ಬಾಳಿಗಾ. ವಾಣಿನುಂಗಳೂರು. ಡಾ। ಕೆ. ನಾಗಪ್ಪ ಆಳ್ವ. ಕೋಟೆಕ್ಕಾರ್: ಶ್ರೀ ಬಿ. ಅನಂತ ರೈ; ಜನಾರ್ದನ. ಎ. ಖಾದರ್ (ಮುಸ್ಲಿ ಕಾದಿಟ್ಟ ಸ್ಥಾನ). ಮಂಜೇಶ್ವರ: ಶ್ರೀ ಬಾಲಕೃಷ್ಣ ಅಡ್ಯಂತಾಯ. ಕುಂಬಳೆ: ಶ್ರೀ ಬಿ. ದೇನಪ್ಪ ಆಳ್ವ. ಕಾಸರಗೋಡು: ಶ್ರೀ ಎಂ. ಉಮೇಶರಾವ್. ಮುಳಿಯಾರು: ಶ್ರೀ ಬಿ. ಎಸ್. ಕಕ್ಕಿಲ್ಲಾಯ. ನಿಟ್ಟೆ: ಶ್ರೀ ಬಿ. ವಿಠಲದಾಸ್ ಸೆಟ್ಟಿ. ಪುತ್ತೂರು: ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿ (ಸ್ತ್ರೀಯ ಕಾದಿಟ್ಟ ಸ್ಥಾನ). ಕೊಕ್ಕಡ ಮತ್ತು ಸುಳ್ಯ: ಶ್ರೀ ಕೆ. ನೆಂಕಟ್ರಮಣ ಗೌಡ. ಉಪ್ಪಿನಂಗಡಿ: ಡಾ। ಕೆ. ಬಾಲಪ್ಪ ಶೆಟ್ಟಿ. ಕಟಪಾಡಿ: ಶ್ರೀಯಂ. ಜಿ. ನಜರೆತ್ (ಕ್ರಿಶ್ಚನ್). ಬೆಳ್ಮಂಗಡಿ: ಶ್ರೀ ಡಿ. ಪುಟ್ಟಸ್ವಾಮಿ.

ರೆ॥ ಡಿ॥ ಆಫೀಸರರು

ರಜೆಯ ಮೇಲೆ ತೆರಳಿದ ಮಂಗಳೂರು ರೆ॥ ಡಿ। ಆಫೀಸರ್ ಜಿ. ಎಸ್. ಅಬ್ದುಲ್ ರೈಮನ್ ಸಾಹೇಬರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟ ಶ್ರೀ। ಯು. ಪರಶುರಾಮ ನ್ಯಾಕ್ ಅವರು ಆಗಲೇ ಚಾರ್ಜು ವಹಿಸಿಕೊಂಡಿರುತ್ತಾರೆ.

ಮದ್ಯವಿಧಿಗಳ ಮೊಳಕ್ಕಮೆ-ದಂಡನೆ

ಮದ್ಯವಿಧಿ ಉಲ್ಲಂಘನೆಗಾಗಿ ನಮ್ಮ ಸಬ್ ಮೆಜಸ್ಟೇಟರವರು ಈ ಕೆಳಗಿನಂತೆ ದಂಡನೆಗಳನ್ನು ವಿಧಿಸಿದ್ದಾರೆ: ಕೊಂಪದವು ಬಾಬು ಗೌಡನ ವಶ ೨॥ ಗೆಲನ್ ವಾಶ್ ಇತ್ತೆಂದು ರೂ. ೧೦೦; ಬಾನ್ತಿನ ನರೋನನ ಬಳಿ ಶರಾಬ್ ಇತ್ತೆಂದು ರೂ. ೩೫; ರೋಸೀನಾ ಫೆರ್ನಾಂಡೀಸಳ ಬಳಿ ಮದ್ಯ ವಿತ್ತೆಂದು ರೂ. ೩೫; ಅಮಲುಪೋರ ಕನಸಿದ್ದ ಆರೋಪಕ್ಕಾಗಿ ಮಂಗಳೂರಿನರಾಮ ನಂಬಯನಿಗೆ ರೂ. ೪೦; ಅದೇ ಆರೋಪಕ್ಕಾಗಿ ಕುಪ್ಪೆಪದವಿನ ಮಾರ್ಸೆಲ್ ನೋಜ, ಮಂಗಳೂರು ಗೂಡ್ಸ್ ಶೆಡ್ಡಿನ ಬಳಿಯ ಆನಂದ ಸೆಟ್ಟಿ ಇವರಿಗೆ ತಲಾ ರೂ. ೫೦; ಅದೇ ಆರೋಪಕ್ಕಾಗಿ ಇಲ್ಲಿಯ ಬೀಸಿಲ್ ಲೋಬೊ ಮತ್ತು ಗುರುವಪ್ಪ ಇವರಲ್ಲಿ ಪ್ರತಿಯೊಬ್ಬರಿಗೆ ರೂ. ೪೦; ಸ್ಯಾಂಡರ್ಸ್ ಹಂಚಿನ ಕಾರ್ಖಾನೆಯ ಎ. ಬಿ. ಪೊಂಕೆ ರೊರಿಗೆ ಅದೇ ಆರೋಪ ಸಂಬಂಧ ರೂ. ೫೦; ಹೀಗೆ ಜುಲ್ಮಾನೆಗಳು ವಿಧಿಸಲಾಗಿವೆ.

ಕೆಲ ಸಮಯದ ಹಿಂದೆ ಹಂವನ ಕಟ್ಟೆಯ ಬಳಿ ಒಂದು ಜಡ್ಡದಲ್ಲಿರಿಸಿ ೩ ಗೆಲನ್ ಶರಾಬನ್ನು ಗುಪ್ತವಾಗಿ ಸಾಗಿಸುವಾಗ ಹಿಡಿಯಲ್ಪಟ್ಟ ಹರೇಕಳ ದಾಸ ಸೆಟ್ಟಿ ಎಂಬವರಿಗೆ ೪ ತಿಂಗಳ ಕ. ಸಜೆ ಮತ್ತು ರೂ. ೧೦೦ ಜುಲ್ಮಾನೆ, ತಪ್ಪಿದರೆ ಮತ್ತೆ ೬ ವಾರಗಳ ಕಠಿಣ ಸಜೆ ವಿಧಿಸಲಾಗಿದೆ. ಇದರಲ್ಲಿ ಅಪೀಲ್ ಇದೆ ಎನ್ನಲಾಗಿದೆ.

ಆಹಾರ ಪದಾರ್ಥಗಳ ಬೆರಿಕೆಗೆ

ಹಾಲು ನೀರಿನ ಬೆರಿಕೆ ಆರೋಪದ ಸಂಬಂಧ ಪೇಜಾವರ ಲಕ್ಷ್ಮೀನಾರಾಯಣ ರಾಯರಿಗೆ ರೂ. ೬೦/-ಮತ್ತು ಗುರ್ಪುರ ಚಂದು ಮೂಲ್ಯನಿಗೆ ರೂ. ೩೫, ಹೀಗೆ ಜುಲ್ಮಾನೆಗಳನ್ನು ವಿಧಿಸಲಾಗಿದೆ.

ಕಳವಿನ ತೋಫ

ಹಂಪನಕಟ್ಟೆಯಲ್ಲಿನ "ಶಾರದಾ ಜುವೆಲರಿ ಮಾರ್ಟ್"ನಿಂದ ಕೆಲಸಮಯದ ಹಿಂದೆ ಸುಮಾರು ೭೫೦೦ ರೂ.ಗಳ ನಗನಾಣ್ಯವನ್ನೂ, 'ನಿವಾಸ್' ವಾಚ್ ಕಂಪೆನಿಯ ಜಿಂಗಡಿಯಿಂದ ಸುಮಾರು ೫೨೦೦ ರೂ.ಗಳ ಮೌಲ್ಯದ ಗಡಿಯಾರಗಳನ್ನೂ ಕಳವು ಮಾಡಿದವರ ತಂಡವನ್ನು ಕ್ರೈಮ್ ಶಾಖೆಯ ಸಃ ಇನ್‌ಸ್ಪೆಕ್ಟರ್ ಶ್ರೀ ಆರ್. ಎಸ್. ಅಮ್ಮಣ್ಣಾ ಮತ್ತು ಪೊ॥ ಸಃ ಇನ್‌ಸ್ಪೆಕ್ಟರ್ ಶ್ರೀ ಪಿ. ಕೆ. ನಾಯರ್ ಇವರು ಪತ್ತೆಮಾಡಿರುವರೆಂದು ತಿಳಿದುಬರುತ್ತದೆ. ಸುಮಾರು ೫ ಸಾವಿರದ ಸೊತ್ತುಗಳಾಗಲೇ ಸಿಕ್ಕಿವೆ. ಮುಖ್ಯ ಆರೋಪಿ ಇದರಲ್ಲಿ ಮಲಬಾರಿನ ಫೆರೋಕಿನ ಅಬ್ದುಲ್ ಕರೀಂನ್ ಎಂಬಾತ; ಇವನ ದಸ್ತಗಿರಿಯಾಗಿದೆ. ಇವನ ಸಂಗಾತಿಗಳಾದ ಕಲ್ಲೇರಿಯ ಉಸ್ಮಾನ್ ಮತ್ತು ಅಬ್ಬುವನ್ನೂ ಹುಡುಕುತಿದ್ದಾರೆ. ಈ ಮೂವರು ಬೆಂಗಳೂರು, ಊಟಿ, ಮದ್ರಾಸ್ ಮತ್ತು ಪಾಲ್ಘಾಟುಗಳಲ್ಲಿಯೂ ಕನ್ನ ಕಳವುಗಳನ್ನು ಮಾಡಿರುವರೆಂದು ತಿಳಿದು ಬರುತ್ತದೆ.

ಶರಣಾರ್ಥಿ ಸೌಕರ್ಯ

ಮಂಗಳೂರಲ್ಲಿ ಇರುವಂತೆ ಸರಕಾರದ ವರಿಷ್ಠ ನಿರ್ದೇಶಿಸಲ್ಪಟ್ಟ ೧೨ ಮಂದಿ ವಂಜಾವೇ ನಿರಾಶ್ರಿತರಿಗೆ ಪದವಿನಲ್ಲಿ ಸೌಕರ್ಯಗಳನ್ನೂ ಇಲ್ಲಿನ ಅಧಿಕಾರಿಗಳು ವಿವರ ವಿಸಿದ್ದಾರೆಂದು ತಿಳಿದುಬರುತ್ತದೆ.

ನ್ಯಾಜಿ ಪ್ರೊಫೇಸರರ ಸ್ಮರಣೆಗೆ

ಸೈಂಟ್ ಎಲೋಶಿಯಸ್ ಕಾಲೇಜಿನ ಮಾಜಿ ಫಿಜಿಕ್ಸ್ ಪ್ರೊಫೆ॥ ವಿ. ಜೆ. ಜೋಸೆಫ್ ಮತ್ತು ಗಣಿತ ಶಾಸ್ತ್ರ ವ್ಯಾಧ್ಯಾಪಕರಾಗಿದ್ದ ದಿ॥ ರಾಮಚಂದ್ರ ಅಯ್ಯರ್ ಅವರ ಸೇವೆಯ ಸ್ಮಾರಕವಾಗಿ ಕಾಲೇಜಿನಲ್ಲಿ ಎರಡು ಭಾಷಣ ಭವನಗಳನ್ನು ಕಟ್ಟಿಸುವಂತೆ ಶ್ರೀ ಎ. ಶಂಕರ ಪಿಳ್ಳರ ಅಧ್ಯಕ್ಷತೆಯಲ್ಲಿ ನೆರೆದ ಕಾಲೇಜಿನ ಹಳೇ ವಿದ್ಯಾರ್ಥಿಗಳು ತಮ್ಮ ದೊಂದು ವಿಷಯದಲ್ಲಿ ನಿರ್ಧರಿಸಿ ಹಣ ಸಂಗ್ರಹಿಸುವ ಬಗ್ಗೆ ಶ್ರೀ ಕೆ. ಎಸ್. ಹೆಗ್ಗಡೆ ಅವರು ಅಧ್ಯಕ್ಷರಾಗಿ ಉಳ್ಳ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಜಿಲ್ಲಾ ಮುಸ್ಲಿಮ್ ಲೀಗ್ "ಎಡ್ ಹೋಕ್" ಕಮಿಟಿ ತೀರ್ಮಾನ

ಬರುವ ಜಿಲ್ಲಾ ಬೋರ್ಡ್ ಚುನಾವಣೆಗೆ ಉಮೇದ್ವಾರರನ್ನು ನಿಲ್ಲಿಸಲು ಮುಸ್ಲಿಂ ಲೀಗಿನ "ಎಡ್ ಹೋಕ್" ಕಮಿಟಿ ಈಚೆಗೆ ಮಂಗಳೂರಲ್ಲಿ ಜ॥ ಯು. ಅಹಮ್ಮದ್ ಹುಸೇನರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೋಟೆಕಾರ್ ಸರ್ಕಲಿಗೆ ಜ॥ ಯು. ಅಹಮ್ಮದ್ ಹುಸೇನರನ್ನು, ಕಾಸರ್‌ಗೋಡ್ ಸರ್ಕಲಿಗೆ ಜ॥ ಎಚ್. ಶಮ್ಮಾದ್‌ರನ್ನೂ ಮೂಡಬಿದ್ರೆ ಸರ್ಕಲಿಗೆ ಜ॥ ಯು. ಎಂ. ಇಬ್ರಾಹಿಂ ಅವರನ್ನು ಆರಿಸಿದೆ.

ಉತ್ತಮ ಗ್ರಂಥಗಳಿಗೆ ಬಹುಮಾನ ಕರ್ನಾಟಕ ಸೇವಾ ಸಂಘದ ವಿನಂತಿ

ಮದ್ರಾಸು ಸರಕಾರದವರು ಕನ್ನಡದಲ್ಲಿ ಉತ್ತಮ ಗ್ರಂಥಗಳಿಗೆ ಬಹುಮಾನ ಕೊಡಿಸುವ ನ್ಯಸ್ಥೆ ಮಾಡಿರುವ ಸಂದರ್ಭದಲ್ಲಿ 1949ರ ಬಹುಮಾನಗಳಿಗೆ ಮದ್ರಾಸು ಕರ್ನಾಟಕದ ಗ್ರಂಥಕರ್ತರು ತಮ್ಮ ಕೃತಿಗಳ ನಾಲ್ಕು ಪ್ರತಿಗಳನ್ನು "ಕಾರ್ಯದರ್ಶಿ, ಕರ್ನಾಟಕ ಸಂಘ, 18 ವೀರ ಸ್ವಾಮಿ ಪಿಳ್ಳೆ ಬೀದಿ, ಮದ್ರಾಸು 8." ಎಂಬಿ ವಿಳಾಸಕ್ಕೆ 30 9-49ರ ಮೊದಲೆ ಸೇರುವಂತೆ ಕಳುಹಿಸಬೇಕಾಗಿ ಸಂಘದ ಕಡೆಯಿಂದ ವಿನಂತಿಸಲಾಗಿದೆ. 1940ರ ಈಚೆಗೆ ಈ ಕೆಳಗಿನ ವಿಷಯಗಳಲ್ಲಿ ರಚಿತವಾದ ಗ್ರಂಥಗಳು ಇದಕ್ಕೆ ಅರ್ಹತೆಯುಳ್ಳವು: ಸಣ್ಣಕತೆ, ಜೀವನ ಚರಿತ್ರೆ, ನಾಟಕ, ಸಂಶೋಧನೆ, ವೈದ್ಯ ಮತ್ತು ಆರೋಗ್ಯ ಶಾಸ್ತ್ರ, ಕೃಷಿ ಮತ್ತು ಪ್ರಕೃತಿಶಾಸ್ತ್ರ.

ಸ್ವಾತಂತ್ರ್ಯ ದಿನಾಚರಣೆಗಳು

ಮಂಜೇಶ್ವರ, ಎಡನೀರು, ಸುಳ್ಯ, ಉಜಿ ಕಾರು, ಕಾರ್ಕಳ, ಉಜಿರೆ, ಉಡುಪಿ, ಮಂಗಿ, ಕೋಳಾಲಗಿರಿ, ಪೆರ್ಡೂರು, ಸಂಪಿಗೆ, ನೆಕ್ರಾಜೆ, ನಾರಾವಿ, ಅನಂತಾಡಿ, ಮಲಾರು ಪದವು, ಮುನಿಯಾಲು, ಪಡುಬಿದ್ರಿ, ಕಾವು, ಕಟಪಾಗಿ, ಪುತ್ತೂರು ಮೊದಲಾದ ಕಡೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನಾಚರಿಸಿದ ವರದಿಗಳು ನಮಗೆ ಬಂದಿರುತ್ತವೆ. ಈ ಎಲ್ಲಾ ಕಡೆಗಳಲ್ಲಿಯೂ ಅಂದಿನ ಉತ್ಸವವನ್ನು ಸರಳ ಗಂಭೀರ ವಿಷ್ಯಂಭಣೆಯಿಂದ ಯಶಸ್ವಿಯಾಗಿ ಆಚರಿಸಲಾಗಿದೆ. [ಸ್ಥಳಾಭಾವದಿಂದ ಸವಿವರಗಳನ್ನು ಪ್ರಕಟಿಸಲಾಗದಕ್ಕೆ ವಿಶಾದಿಸುತ್ತೇವೆ. ಸಂ.ಸ್ವ].

ಅಳಿಕದ ನಿಗ್ರೋ ಜನರಲ್ಲಿ ಧಾರ್ಮಿಕ ಭಾವನೆಯು ಹೆಚ್ಚು ಪ್ರಿದೆಯೆಂಬುದಕ್ಕೆ ಒಂದು ನಿದರ್ಶನವು ಗಮನಕ್ಕೆ ಬಂದಿದೆ. ಅಲ್ಲಿನ ರೈಲ್ವೆ ಸ್ಟೇಶನಿನಲ್ಲಿ ಕೆಲಸಕ್ಕಿದ್ದ ಒಬ್ಬ ನಿಗ್ರೊ ಕೆಲಸಗಾರನು ಅಲ್ಲಿನ ಒಂದು ಗಂಟೆಯನ್ನು ಕದ್ದ. ಅದನ್ನು ತನ್ನ ಹಳ್ಳಿಯ ದೇವಾಲಯಕ್ಕೆ ಕಾಣಿಕೆ ಕೊಡಲು ತಾನ ದನ್ನು ತೆಗೆದೆನೆಂದು ಕೋರ್ಟಿನಲ್ಲಿ ಅವನು ತಿಳಿಸಿದ.

ಶ್ವಾಸನಾಳ ತೊಂದರೆಗಳಿಗೆ
ಉಳ್ಳವ ಕೆಮ್ಮು, ಶ್ವಾಸತೊಂದರೆ
ಇವಕ್ಕೆ
ನಿಮಗೆ ಪೆಪ್ಸ್ ಅವಶ್ಯ

ರುಚಿಕರವಾದ ಪೆಪ್ಸ್ ಮಾತ್ರೆಗಳು ಶ್ವಾಸಕೋಶ ಮತ್ತು ನಾಳಗಳ ಬಾಧೆ ಶಮನಿಸಲು ಅತ್ಯುತ್ತಮ. ಪೆಪ್ಸನ್ನು ನೀವು ಹೀರುವಾಗ ಅದರೊಳಗಿನ ಅಮೂಲ್ಯ ವಿಷಹಾರಿ ಸತ್ವಗಳು ನಿಮ್ಮ ಶ್ವಾಸದೊಂದಿಗೆ ನೇರವಾಗಿ ಬಾಧೆಗೊಳಗಾದ ಭಾಗಗಳಿಗೆಯ್ಯಲ್ಪಡುತ್ತವೆ. ಪೆಪ್ಸ್ ಕೆಮ್ಮನ್ನು ನಿಲ್ಲಿಸುತ್ತದೆ, ಗಂಟಲನ್ನು ವಿಷಾಣುರಹಿತವಾಗಿಡುತ್ತದೆ, ಕಫವನ್ನು ಸಡಿಲಿಸಿ, ಊದುವಿಳೆಯನ್ನು ಕಮ್ಮಿ ಮಾಡಿ ರೋಗಾಣುಗಳನ್ನು ನಾಶಮಾಡುತ್ತದೆ.

ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ.

ವಿಷಹಾರಿ ಪೆಪ್ಸನ್ನೇ
ಉಪಯೋಗಿಸಿರಿ

PEPS
ವಿಷಹಾರಿ
ಗಂಟಲು ಮತ್ತು ಎದೆ ನುಳಿಗೆಗಳು
ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ
ಅತ್ಯಂತ ಪರಿಣಾಮಕಾರಿ ಔಷಧ.

ಏಜಂಟ್: ಮೆಸರ್ಸ್ ದಾಧಾ ಎಂಡ್ ಕೊ., ಮದ್ರಾಸು.

The Canara Banking Corporation Ltd.

ಏಲಂ ನೋಟೀಸು

ಈ ಕೆಳಗಿನ ಹೆಸರು ಕಾಣಿಸಿದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನೀವು ನಮ್ಮ ಬೆಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಅಸಲು ಏನೇಜು ಮತ್ತು ಬಡ್ಡಿಯನ್ನು ಕೂಡಾ ಬಹಳ ಕಾಲ ಬಾಕಿ ಮಾಡಿಕೊಂಡಿರುವುದಲ್ಲದೆ, ನಿಮಗೆ ಕ್ರಮದಂತೆ ನೋಟೀಸು ವಗೈರೆ ಕೊಟ್ಟಾಗ್ಯೂ ನೀವು ಪದ್ರಿ ಏನೇಜನ್ನು ಪಾವತಿ ಮಾಡದೆ ಇನ್ನೂ ಬಾಕಿ ಮಾಡಿಕೊಂಡಿರುವುದರಿಂದ ನಿಮ್ಮಿಂದ ಬರಕಕ್ಕೆ ಅಸಲು ಬಡ್ಡಿ ವಗೈರೆ ಎಲ್ಲಾ ಪಾವತಿಗಳನ್ನು ನೀವು ತಾ. 8-9-'49ನೇ ಶನಿವಾರದೊಳಗೆ ಬೆಂಕಿಗೆ ಪಾವತಿ ಮಾಡಿ ಪದ್ರಿ ಲೋನಿನ ನಗಗಳನ್ನು ಬಿಡಿಸಿಕೊಂಡು ಹೋಗುವರೆ ಕಷ್ಟಪಡ್ಲಿ, ನಿಮ್ಮ ಬಾಬ್ತು ಲೋನಿನ ಆಧರಣಗಳನ್ನು ತಾ. 8-9 '49ನೇ ಗುರುವಾರ ಸಂಜೆ ಘಂಟೆ 3ಕ್ಕೆ ಯಾ ಆ ದಿವಸ ಮುಂದರಿಸಬಹುದಾದ ವ್ಯಾಜೆಗಳಲ್ಲಿ ಬೆಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಲೋನಿನ ಬಾಬ್ತು ಬೆಂಕಿಗೆ ಬರುವ ಏನೇಜಿಗೆ ಏಲಂನಲ್ಲಿ ಹುಟ್ಟಿಬರುವ ಹಣವು ಕಡಿಮೆಯಾದ ಪಕ್ಷದಲ್ಲಿ ನಿಮ್ಮ ದೇಹ ವ ಸ್ಥಿರ ಚರ ಸೊತ್ತುಗಳ ಜವಾಬ್ದಾರಿಯಿಂದ ವಸೂಲು ಮಾಡಿಕೊಳ್ಳಲಾದೀತು – ತಿಳಿದಿರಲಿ.

ಸಾಲ ನಂಬ್ರ
108/46.
ಹೆಸರು
ಧನ್ನು ಶೆಟ್ಟಿ, ರಾಮಯ್ಯ ಶೆಟ್ಟಿಯ ಅಳಿಯ,
ಬೋಳಾರ, ಮಂಗಳೂರು.
ಅಸಲು ಏನೇಜು
110-0-0.

ಬ್ಯಾಂಕಿನ ಆಫೀಸು, ರಥಬೀದಿ, ಮಂಗಳೂರು. ತಾ. 22-8-48.

K. VITTAL BHANDARY.
ಏಜಂಟ.

ಶ್ರೀಕೃಷ್ಣ ಜನ್ಮಾಷ್ಟಮಿಯ ಸಂದೇಶ

ಗೀತೆಯೂ ಅದರ ತತ್ವವೂ

ಸ್ವಾಮಿ ಶಿವಾನಂದರ ಸಂದೇಶ

ಧ್ಯೇಯ ಬದ್ಧವಾದ ಉನ್ನತ ಜೀವನವನ್ನು ನಿರ್ವಹಿಸುವುದು ಹೇಗೆಂಬುದನ್ನು ಭಗವಾನ್ ಶ್ರೀ ಕೃಷ್ಣನ ಜೀವನ ಚರಿತ್ರವು ತಿಳಿಸುತ್ತದೆ. ಭಗವದ್ಗೀತೆಯ ತತ್ವಗಳನ್ನು ಆಚರಣೆಯಲ್ಲಿ ಕಾಣಬೇಕಾದರೆ ಶ್ರೀ ಕೃಷ್ಣನ ಜೀವನವನ್ನೇ ಅಭ್ಯಸಿಸಬೇಕು ತಾನು ಬೋಧಿಸಿದನ್ನೇ ಅವನು ಜೀವನದಲ್ಲಾಚರಿಸಿದನು. ಅತೀ ಉನ್ನತವೂ ಅತೀ ಶ್ರೇಷ್ಠವೂ ಆದ ಮೌಲ್ಯದ ಸಂಗತಿಗಳನ್ನು ಅವನು ಬೋಧಿಸಿದನು. ಕೃಷ್ಣನು ದೃಢ ನಿರ್ಧಾರದ ವ್ಯಕ್ತಿ, ದೃಢವಾದ ಸಂಕಲ್ಪಶಕ್ತಿಯಿದ್ದವನು, ಲೌಕಿಕ ವಾರಮಾರ್ಥಿಕ ಸಂಬಂಧದ ಪರಿಪೂರ್ಣ ಸತ್ಯಾರ್ಥವನ್ನು ಬೋಧಿಸಿದನು. ಅವನು ಅವಿಶ್ರಾಂತ ಕರ್ಮಯೋಗಿ, ಅದ್ವಿತೀಯ ರಾಜ ನೀತಿಜ್ಞ, ಸರ್ವ ಕಲಾ ಭಿಜ್ಞನೂ ಆಗಿದ್ದನು, ಅವನ ಜೀವನವಿವಿಧ ಮನುಷ್ಯ ಸ್ವಭಾವಗಳ ನಡುವಿನಲ್ಲಿ ಜಗತ್ತಿನೊಳಗಿನ ದುಷ್ಟ ಶಕ್ತಿಯನ್ನು ನಾಶವಡಿಸಿ ಅಧಃಪತನ ಹೊಂದಿದ ಧರ್ಮವನ್ನು ಉದ್ಧರಿಸಿ ಶಾಂತಿಯನ್ನು ಸ್ಥಾಪಿಸಲು ಅವನು ಸಂಧಾನಗಳನ್ನು ಕೈಕೊಂಡನು ಇಷ್ಟೊಂದು ಬಹುಮುಖವಾದ ಚಟುವಟಿಕೆಗಳಲ್ಲಿ ನಿರತನಾಗಿದ್ದರೂ ಅವನು ಸರ್ವಾಂತರ್ಯಾಮಿಯಾದ ಶಕ್ತಿಯಲ್ಲಿ ಅವನು ದೃಢನಾಗಿ ನೆಲೆಗೊಂಡಿದ್ದನು, ಪ್ರಬುದ್ಧ ವಿಚಾರ ಜ್ಞಾನದಿಂದ ಕೂಡಿದವನಾಗಿದ್ದನು ಅವನು ವಿಶ್ವರೂಪಿಯಾಗಿದ್ದಂತೆ ಬಹುಸ್ವರೂಪಿಯೂ ಆಗಿದ್ದನು, ಪ್ರತ್ಯಕ್ಷನೂ ಅಪ್ರತ್ಯಕ್ಷನೂ ಆಗಿದ್ದನು, ಶಾಶ್ವತವೂ ತಾತ್ಕಾಲಿಕವೂ ಆದ ವಿಷಯಗಳೊಡನೆ ಅವನು ಬೆರೆತಿದ್ದನು ಅವನ ಮಟ್ಟಿಗೆ ಗಳಿಸಿಕೊಳ್ಳಲಿಕ್ಕೂ ತ್ಯಾಗಮಾಡಲಿಕ್ಕೂ ಎಂತಹದೂ ಇರಲಿಲ್ಲ ಕಾರಣ ಈ ಎರಡು ಪರಸ್ಪರ ವಿರೋಧ ವಿಷಯಗಳ ನಡುವಿನಂತರದ ಅಪಾರ ಸತ್ಯವೇ ಅವನಾಗಿದ್ದನು ಈ ಜಗತ್ತಿನಲ್ಲಿ ಅವನು ತನ್ನ ವ್ಯಯಕ್ತಿಕ ಉದ್ದೇಶಕ್ಕಾಗಿ ಏನನ್ನು ಮಾಡಲಿಲ್ಲ? ಎಲ್ಲವನ್ನು ಎಲ್ಲರ ಸರ್ವ ಸಾಮಾನ್ಯ ಹಿತಕ್ಕಾಗಿ ಯಾವ ನೊಬ್ಬನು ಸಂಪೂರ್ಣನೂ ಪರಿಪೂರ್ಣನೂ ಆಗುವುದೆಂದರೆ ಕೃಷ್ಣನೇ ಆಗುವುದೆಂದರ್ಥ

ಪ್ರತಿಯೊಬ್ಬನಲ್ಲೂ ಕೃಷ್ಣನ ಈ ಧ್ಯೇಯವು ಸುಸೂಪ್ತವಾಗಿ ಅಡಗಿಕೊಂಡಿದೆ ಪ್ರತಿಯೊಬ್ಬನೂ ಕೃಷ್ಣನಾಗಬಲ್ಲನು ನಮ್ಮಲ್ಲಿ ಶ್ರೀ ಕೃಷ್ಣನ ಚೇತನ ಭಾವವು ಇದ್ದೇ ಇದೆ ಸ್ವಯಂ ಶಿಸ್ತಿನಿಂದಲೂ ಧ್ಯಾನದಿಂದಲೂ ನಾವದನ್ನು ಹೊರತರ ಬೇಕಾಗಿದೆ ಇಂದಿನ ಜಗತ್ತಿನ ಜರ್ಝರಿತ ನಸ್ಥೆಯಲ್ಲೂ ನಮ್ಮಲ್ಲಿ ಪ್ರತಿಯೊಬ್ಬನಲ್ಲಿ ಆ ವ್ಯಕ್ತಿತ್ವ ಪರಿಪೂರ್ಣತೆಯನ್ನು ಪಡೆಯುವ, ಅದೇ ಸಮಯಕ್ಕೆ ಪರಮಾತ್ಮ ಶಕ್ತಿಯಲ್ಲಿ ಲೀನವಾಗುವ ಆಶಯವು ಕುಬಿಕೊಂಡಿದೆ. ಕೃಷ್ಣನಂತ ಶ್ರೇಷ್ಠ ದೈವೀಕ ಶಕ್ತಿಯ ಮತ್ತು ಅವನಷ್ಟು ಶ್ರೇಷ್ಠಮಾನವೀ ಶಕ್ತಿಯು ಮನುಷ್ಯನು ಈ ಜಗತ್ತಿನಲ್ಲಿ ಬೇರೊಬ್ಬನಿಲ್ಲ. ಸರಳ ಗೋಪಾಲರ ಮಿತ್ರನೂ ಅವನೆ, ಯಧಿಷ್ಠಿರನ ಆಜ್ಞಾಕಾಲದಲ್ಲಿ ಅತಿಥಿಗಳ ಕಾಲು ತೊಳೆದ ನಮ್ರ ಸ್ನೇಹಿತನೂ ಅವನೆ, ನರನಾದ ಅರ್ಜುನನಿಗೆ ವಿರಾಟ್ ರೂಪದ ವಿಶ್ವದರ್ಶನವನ್ನು ತೋರಿದ ಕೃಷ್ಣನು ಅವನೆ, ಪರಿಪೂರ್ಣತೆ ಹೊಂದಿದ ವ್ಯಕ್ತಿಯೆಂದಾಗಲಿ, ಪರಿವರ್ತನ ಹೊಂದಿದ ನರಮಾತ್ರ ಶಕ್ತಿಯೆಂದಾಗಲಿ ಗಣಿಸಿದರೂ ಕೃಷ್ಣನಂತಹ ಸಮಾನ ವ್ಯಕ್ತಿಯು ಬೇರೊಬ್ಬರಿಲ್ಲಾರ

ಆತ್ಮಜ್ಞಾನಕ್ಕಾಗಿ ಪ್ರತಿಯೊಬ್ಬನೂ ಕೃಷ್ಣನಂತೆ ಎಲ್ಲವನ್ನು ಪರಿತ್ಯಜಿಸಬೇಕಾದುದು ಕರ್ತವ್ಯ ಜಗತ್ತಿನಲ್ಲಿದ್ದು ಇಲ್ಲದಂತೆ ಇರುವುದು, ಮನುಷ್ಯನಾತ್ಮದ್ದೂ ತನ್ನೊಳಗಿನ ದೈವೀಕ ಶಕ್ತಿಯನ್ನು ಅರಿತುಕೊಳ್ಳುವುದು, ಜಗತ್ತಿನಲ್ಲಿ ಸೇವೆಗೈದೂ ವಿಷಯ ಲಾಲಸೆಯಿಂದ ಭ್ರಷ್ಟನಾಗದಿರುವುದು, ಒಡೆಯನಂತೆ ಕೆಲಸ ಮಾಡಿ ದೇವರಂತೆ ಜೀವಿಸುವುದು, ನಶ್ವರ ಲೋಕದಲ್ಲಿ ಸಂಬಂಧಿಕನಂತೆ ಸೇವೆ ನೀಡಿಯೂ ಶಾಶ್ವತ ಸತ್ಯ ಲೋಕದಲ್ಲಿ ಸದಾ ಇರುವುದು, ಇದೇ ಪಾರವನ್ನು ಶ್ರೀ ಕೃಷ್ಣನು ಜಗತ್ತಿಗೆ ತಿಳಿಸುವವನಾಥನು

ಜಗತ್ತಿನಲ್ಲಿ ಸಂಚರಿಸಿದ ಈಶ್ವರನಂತೆ ನಾವು ಕೃಷ್ಣನಂತಾಗೋಣ ಯೋಗ ಸಾಧನೆಯ ಸಂಪಟನೆಯನ್ನು ಸಾಧಿಸೋಣ ಅದೇ ಅಮರ ಗೀತೆಯ ಘೋಷ?

ನೀವೆಲ್ಲರೂ ಕೃಷ್ಣನಂತೆ ಶೋಭಿಸುವವರಾಗಿರಿ

ಬಂಗಾರಕ್ಕೆ ಜೆಲೆ ಏರಿರುವುದರಿಂದ ಜೈಪುರದ ಮಹಿಳಾ ಕೊಲೆಜಿನ ವಿದ್ಯಾರ್ಥಿನಿಯರಿಗೆ ಗಿಲಿಟು ಬಂಗಾರದ ಪದಕಗಳನ್ನು ಕೊಡಲಾಗುತ್ತದೆ.

✠

ಅಮೇರಿಕದ ಸೇಕಡಾ 98ರಷ್ಟು ಮನೆಗಳಲ್ಲಿ ವಿದ್ಯುತ್ ಸರಬರಾಯಿಯ ಅನುಕೂಲತೆಯಿದೆ. ಅಲ್ಲಿನ ನಗರವಾಸಿಗಳ ಸೇಕಡಾ 97 ಮಂದಿಯ ಮನೆಗಳಲ್ಲಿ ರಿಫ್ರಿಜರೇಟರುಗಳಿವೆ, ಅಲ್ಲಿನ ಸೇಕಡಾ 93ರಷ್ಟು ಜನರು ವಿದ್ಯುತ್ ಮಾಡಿ ಉಪಕರಣಗಳನ್ನೂ, 58ರಷ್ಟು ವಿದ್ಯುತ್ ಕಸಬರಿಕೆಗಳನ್ನೂ, 53ರಷ್ಟು ವಿದ್ಯುತ್ ಬಟ್ಟೆ ತೊಳೆಯುವ ಯಂತ್ರಗಳನ್ನೂ ಉಪಯೋಗಿಸುತ್ತಾರೆ.

✠

ಮೂಂಸಖಂಡ ಜೀನೆ
ಮತ್ತು
ನೋವುಗಳು

ಜಗತ್ಪ್ರಖ್ಯಾತ ಜಾಂಬಕ್ ನಿಂದ ಪರಿಹರಿಸಲ್ಪಡುವುದು.

ಜಾಂಬಕ್ನನ್ನು ಮೆಲ್ಲನೆ ತಿಕ್ಕಿರಿ ಪರಿಹಾರವು ತೀಕ್ಷ್ಣದಲ್ಲಿ ಉಂಟಾಗುವುದು ಈ ಅಪ್ಯುತ ವನಸ್ಪತಿ ಮುಲಾಶಿನೊಳಗಿನ ಔಷಧೀಯ ಎಣ್ಣೆಗಳು ಚರ್ಮದೊಳಗೆ ನೀರವಾಗಿ ಇಂಗಿ ನೆಲೆತುಗೊಂಡ ದನೆದು ವೇದನೆ ಕೂಡುವ ಒರಟಾದ ಗಂಟುಗಳಿಗೂ ಮೂಂಸಖಂಡಗಳಿಗೂ ಪರಿಣಾಮಕಾರಿ ಪರಿಹಾರವನ್ನು ಕೊಡುತ್ತವೆ ಖಂಡಿತ ಪ್ರಾಡೆಕೊಬ್ಬು ವಿರಹಿತವಾದುದು

Zam-Buk

ಜಾಂಬಕನ್ನೇ ಉಪಯೋಗಿಸಿರಿ.

ಚರ್ಮ ವ್ಯಾಧಿಗಳಿಗೂ, ಗಾಯಗಳಿಗೂ ಅಲ್ಲದೆ ಕ್ರಿಮಿ ಕೀಟ ಕಡಿತ ನೋವಾಗುವ ಕಾಲು, ಮೂಂಸಖಂಡ ವೇದನೆ ಮತ್ತು ಕರೀರದೆಲ್ಲ ವೇದನೆಗಳಿಗೂ ಅತ್ಯುತ್ತಮ

ಬಸ್ಸು ಪ್ರಯಾಣಿಕರ ಅವಗಾಹನೆಗೆ

ಪ್ರತಿದಿನ ಮಂಗ್ಳೂರಿಂದ ಬೆಳಿಗ್ಗೆ ಘಂಟೆ **5** ಮತ್ತು **5-30**ಕ್ಕೂ, ಮುಲ್ಕಿಯಿಂದ ಕೂಡಾ ಬೆಳಿಗ್ಗೆ **5** ಘಂಟೆಗೂ, ಮುಂಬ್ಯಾಗೆ ಬರೇ **36** ಘಂಟೆ ಸಮಯದಲ್ಲಿ ತಲ್ಪುವಂತೆ ಮಂಗ್ಳೂರು ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಯವರು ಸರ್ವಿಸುಗಳನ್ನು ಕ್ಲಪ್ತ ಸಮಯದಲ್ಲಿ — ಮಂಗ್ಳೂರು ಮತ್ತು ಮೂಲ್ಕಿಯಿಂದ ಹೊರಡಿಸಿ ಕಡೂರಿಗೆ ಮಧ್ಯಾಹ್ನ **2-30**ರೊಳಗೆ ತಲ್ಪಿ ಅಲ್ಲಿಂದ ಕೂಡೇ ಹೊರಡುವ ರೆಲ್ವೆಯಲ್ಲಿ ಮುಂಬ್ಯಾಗೆ ಸೀದಾ ತಲ್ಪುವ ಏರ್ಪಾಡು ಮಾಡಿರುತ್ತದೆ. ಟಿಕೇಟುಗಳು ಮಂಗ್ಳೂರು ಮತ್ತು ಮೂಲ್ಕಿ ಆಫೀಸಿನಲ್ಲಿ ಸರ್ವಿಸು ಬಿಡುವ ಎರಡು ದಿವ್ಸಕ್ಕೆ ಮುಂಚಿತವಾಗಿಯೇ ದೊರಕುವಂತೆ ರಿಜರ್ವೆಶನ್ ಆಫೀಸು ಕೂಡಾ ಪ್ರತೀ ದಿವಸ ಬೆಳಿಗ್ಗೆ ಘಂಟೆ **9**ರಿಂದ ಶ್ಯಾಮ **6** ಘಂಟೆ ವರೆಗೂ ತೆರೆಯಲ್ಪಟ್ಟಿದೆ ಜಿಲ್ಲೆಯ ಇತರ ಊರುಗಳಿಗೆ ಕೂಡಾ ಮಂಗ್ಳೂರಿನಲ್ಲಿ ಒಂದು ದಿವ್ಸಕ್ಕೆ ಮುಂಚಿತವಾಗಿ — ಟಿಕೇಟುಗಳು ಸಿಗುವ ಏರ್ಪಾಡು ಕೂಡಾಲು ಂಟು.

ವಿ. ಸೂಚನೆ — ಪ್ರಯಾಣಿಕರು ತಮ್ಮೊಂದಿಗೆ ಅದಷ್ಟು ಸಾಮಾನನ್ನು ಕಡಿಮೆ ಒಯ್ಯೋಣಾಗಬೇಕಾಗಿ ವಿನಂತಿ.

ಮಂಗಳೂರು
24-6-49

ಜಿಯಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,99,800
Reserves	Rs. 8,91,000

(Regd)

ಅಮೃತಾಂಜನ

ತಲೆನೋವನ್ನು, ತಿರೋನೋವನ್ನು, ಉಳುಕು, ಉತ್ತಿಗೆ, ಭುಜ, ಹಲ್ಲುನೋವನ್ನಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಕ್ಕವಾತ, ವೊಡಿಮೆ ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಸ್ಯಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾಯಿ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವನ್ಯಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭವೃದ್ಧಿಗೆ ಸಲ್ಲಿಸಿದ ನಮ್ಮ ನನ್ನು ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿನೆ ಇಲಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharaja Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಉಂಟಾ ಸುರಿತ ಅನುಭವಸ್ಥರಿಂದ ಉತ್ತಮರಿಂದ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಪರಿಹರಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಜ್ವರ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ರಾಮರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 43] ತಾರೀಕು 2—9—1949 [ಸಂಚಿಕೆ 35]

ಹಿಂದಿನ ಮತ್ತು ಇಂದಿನ ಹೈದರಾಬಾದು

ಜಾಗೀರದಾರರ ರಾಜ್ಯದಲ್ಲಿ ಬಳಲಿದ ರೈತರು

ಐದು ದಿನಗಳ ಪೋಲೀಸ್ ಕಾರ್ಯಕ್ರಮಾನಂತರ

ಈಚೆಗೆ ಹೈದರಾಬಾದಿನ ರಾಜಕಾರಣ ರಾಷ್ಟ್ರೀಯ ಮಹತ್ವವನ್ನು ತಳೆದಿದೆ. ಕಾಶ್ಮೀರ್ ಸಮಸ್ಯೆಯನ್ನು ಬಿಟ್ಟರೆ ನಮ್ಮ ದುರೀಣರ ರಾಜಕೀಯ ಮುತ್ಸದ್ದಿತನ ಮತ್ತು ಸ್ಥೈರ್ಯಗಳನ್ನು ಪರೀಕ್ಷೆಗೊಳ ಪಾಡಿದ ಸಮಸ್ಯೆಯೆಂದರೆ ಹೈದರಾಬಾದಿನದು. ಇಂದು ಪೋಲೀಸ್ ಕಾರ್ಯ ಕ್ರಮದ ಒಂದು ವರ್ಷದ ನಂತರ ಹೈದರಾ ಬಾದಿನ ಜನತೆ ನೆಮ್ಮದಿಯ ಪರಿಸ್ಥಿತಿಯ ನ್ನನುಭವಿಸಹತ್ತಿದೆ. ಅದರ ಭವಿಷ್ಯನನ್ನು ಸದ್ಯದಲ್ಲೇ ಹಿಂದೂಸ್ತಾನ ಘಟನಾ ಸಮಿ ತಿಯು ಇತ್ಯರ್ಥಿಸಲಿಕ್ಕಿದೆ.

ಹೈದರಾಬಾದು ಬ್ರಿಟಿಷ್ ರಾಜನೀತಿ ತಂತ್ರದ ಸೊಗಸಾದ ನಿದರ್ಶನ. ವಿಭಾಗಿಸಿ ಆಳುವ ನೀತಿಯು ಬೇರೆ ಕಡೆಗಳಿಗಿಂತ ಅತೀ ಹೆಚ್ಚಾಗಿ ಇಲ್ಲಿ ಬಹಳ ಯಶಸ್ವಿಯಾಗಿ ನಿರ್ವಹಿಸಲ್ಪಟ್ಟಿತು. ಸ್ಥಾನ ವೈಶಿಷ್ಟ್ಯದಿಂದ ಹೈದರಾಬಾದು ಅತ್ಯಂತ ಮಹತ್ವದ್ದು. ಹೈದ ರಾಬಾದನ್ನು ಹಿಡಕೊಂಡೆವರು ಹಿಂದೂ ಸ್ಥಾನವನ್ನೇ ಹಿಡಿಯಬಲ್ಲರು. ಆದುದರಿಂದ ತಮ್ಮ ಭಾರತ ಸಾಮ್ರಾಜ್ಯದ ಗುರುತ್ವಾ ಕರ್ಷಣ ಕೇಂದ್ರವಿದೆಂದು ಬ್ರಿಟಿಷರು ತಿಳಿ ಕೊಂಡಿದ್ದರು.

ಆದುದರಿಂದ ಹೈದರಾಬಾದಿನ ಮೇಲೆ ಎಷ್ಟು ಕಾಲ ತಮ್ಮ ಹಿಡಿತವಿರಬಹುದೊ ಅಷ್ಟು ಕಾಲವೂ ಭಾರತದಲ್ಲಿ ತಮ್ಮ ರಾಜ್ಯ ಕೆಯು ದೃಢವಾಗಿ ಬಾಳುವುದೆಂದು ಅವರು ಲೆಕ್ಕ ಹಾಕಿದ್ದರು. ಆದಕ್ಕಾಗಿಯೆ ಮೊತ್ತ ಮೊದಲಾಗಿ ಅವರು ನಿಜಾಮರನ್ನು ತಮ್ಮ "ನಿಶ್ವಾಸನೀಯ ಸಾಮಂತ"ರಾಗಿ ಮಾಡಿ ಕೊಂಡರು. ಹೀಗೆ ಭಾರತದೊಳಗಿನ ಇತರ ಎಲ್ಲಾ ಸಂಸ್ಥಾನಿಕರಿಗಿಂತ ನಿಜಾಮರಿಗೇ ಪ್ರಥಮ ಗೌರವದ ಸ್ಥಾನಮಾನವು ಕೊಡ ಲ್ಪಟ್ಟಿತು.

ಅದು ಅಲ್ಲದೆ ನಿಜಾಮರು ಮುಸಲ್ಮಾ ನರು. ಹಾಗಿದ್ದುದರಿಂದ ಹೈದರಾಬಾದನ್ನು ಒಂದು ಮತೀಯ ಕಚ್ಚಾಟದ ಹುಚ್ಚುರಂಗ ವಾಗಿ ಇರಿಸುವುದು ಸುಲಭದ ಕಾರ್ಯ. ತಲ್ಲೂಲಕ ಭಾರತದಲ್ಲೆಲ್ಲ ಅಲ್ಲಿನ ಕಲಹದ ಕಿಡಿಗಳನ್ನು ಹಾರಿಸಲು ಸುಲಭ.

ಹೈದರಾಬಾದನ್ನು ಮುಸ್ಲಿಂ ಸಂಸ್ಕೃತಿ ಯ ಕೇಂದ್ರವನಾಗಿಯೂ, ಮುಸ್ಲಿಮ್ ರ ವಲಸೆ ಪ್ರದೇಶವಾಗಿಯೂ ಮಾಡಬೇ ಕೆಂಬರ್ಥದ ಒಂದು ಮನವಿಯನ್ನು ಲಾರ್ಡ್ ಮಿಂಟೊರವರು ವೈಸ್‌ರಾಯರಾಗಿರುವಾಗ ಆಗಾ ಖಾನರ ಮುಖಂಡತ್ವ ದಲ್ಲಿ ಒಂದು ಮುಸ್ಲಿಂ ಶಿಷ್ಟಮಂಡಳಿದವ ರಿಂದ ಅರ್ಪಿಸಲ್ಪಟ್ಟಿತು. ಆ ಮನವಿಯ ಮೂಲಲೇಖಕರು ಒರ್ವ ಪ್ರಖ್ಯಾತ ಹೈದ ರಾಬಾದಿ ನವಾಬರೇ ಆಗಿದ್ದರೆಂಬ ಸಂಗ ತಿಯು ಗಣನೀಯ.

ಆನಂತರ ಹೈದರಾಬಾದ್ ಪ್ರಜಾನಿಯ ಬಹು ಅಂಶವನ್ನು ಮುಸ್ಲಿಮೀಕರಿಸಿ ಅಭಿ ವೃದ್ಧಿಗಾಗಿ ವ್ಯವಸಿಸಲಾದ ಸಂಗತಿಯನ್ನು ಗಮನಿಸಬೇಕು. ಈ ಸಂಸ್ಥಾನವನ್ನು ಒಂದು ವಿಶಿಷ್ಟ ಮತದವರ ಧಾರ್ಮಿಕ ರಾಜ್ಯವಾಗಿ ಮಾಡುವ ಗೂಢ ಉದ್ದೇಶವು ಅದರ ಆಡಳಿತ ವ್ಯವಹಾರದಲ್ಲಿ ಸ್ಪಷ್ಟವಾಗಿ ತೋರುತಿತ್ತು. ಪರಿಣಾಮವಾಗಿ ತುದಿ ಯಿಂದ ಬುಡದ ತನಕ ಆಡಳಿತ ವರ್ಗವನ್ನು ಮುಸಲ್ಮಾನೀಯನ್ನಾಗಿ ಮಾಡುವ ಕಾರ್ಯವು ಭರದಿಂದ ಸಾಗಿತು. ಹಿಂದೂ ಗಳಿಗೆ ಅದರಲ್ಲಿ ಯಾವ ಗಣನೀಯ ಸ್ಥಾನವೂ ಇಲ್ಲದಾಯಿತು.

ಆದೊಂದು ಮುಸ್ಲಿಂ ಸರಕಾರ; ಮುಸ್ಲಿಂ ಆಡಳಿತವಾಗಿತ್ತು. ಮುಸ್ಲಿಮರ ಸಂಖ್ಯೆ ಅಲ್ಲಿ ಶೇಕಡಾ ಹದಿನೈದರಷ್ಟಿತ್ತಾದರೂ ಬ್ರಿಟಿ ಷರು ಮತಾಂಧರಾದ್ದು ಅಲ್ಲಿ 36 ವರ್ಷ ಗಳಿಂದ ಆಳಿದ ಸಂಸ್ಥಾನಿಕರ ಕೃಪೆಗೆ ಗುಣವಾಗಿ ಎಲ್ಲವನ್ನೂ ನಿರ್ದೇಶಿಸಿದರು.

ಇದರಿಂದ ಜನತೆಯ ಜೀವನವು ಉಸಿ ರುಗಟ್ಟುವಂತಾಯಿತು. ಹೇಳಿಕೊಳ್ಳಬಹು ದಾದ ಸ್ವಾತಂತ್ರ್ಯವೆಂತಹುದೂ ಕನಸಿನಲ್ಲಿ ಕೂಡ ಯೋಚಿಸುವಂತಿಲ್ಲ. ಸಭೆ ಗೆ ನಿರ್ಬಂಧ, ಭಾಷಣಕ್ಕೆ ನಿಷೇಧ, ವೃತ್ತ ಪತ್ರಿ ಕೆಗಳಿಗೆ ಮಟ್ಟುಗೋಲು. ಭಾರತದಲ್ಲಿ ಒರ್ವ ಪ್ರಮುಖ ದುರೀಣನು ಮೃತಪಟ್ಟರೆ ಸಂತಾ ಪಸೂಚಕ ಸಭೆಯನ್ನೂ ಮಾಡುವ ಹಾಗಿ ಲ್ಲ. ವ್ಯಾಯಾಮ ಶಾಲೆಗಳ ಮೇಲೂ ರಾಜ ಕೀಯ ದೃಷ್ಟಿ ಬೀರಲ್ಪಡುತಿದ್ದು ಅವುಗಳ ಸ್ಥಾಪನೆಗೆ ನಿಷೇಧ ಹಾಕಲ್ಪಟ್ಟಿತ್ತು. ಈ ರೀತಿ ಒಂದುವರೆ ಕೋಟಿ ಮಾನವ ಜೀವಗಳನ್ನು ರಾಜಕೀಯವಾಗಿ ಮಾತ್ರ ವಲ್ಲ ಎಲ್ಲಾ ವಿಧಗಳಿಂದಲೂ ದಬ್ಬಾಳಿಕೆ ಗೊಳಪಡಿಸಲಾಗಿತ್ತು. ಆರ್ಥಿಕ ಜೀವನವೂ ಭರದಿಂದ ಕುಗ್ಗಿಸಲ್ಪಟ್ಟಿತು. ಎಲ್ಲಾ ಕ್ಷೇತ್ರ ಗಳಲ್ಲೂ ಮುಸ್ಲಿಮರ ಒಡೆತನವೇ ಕಂಡು ಬರುತಿತ್ತು.

ಈ ಘೋರಣೆಯ ಪರಿಣಾಮದಿಂದ ಸಹ ಜವಾಗಿ ಒಂದು ವಿರೋಧಕ ಜಾತೀಯ ಸಂಸ್ಥೆಯು ಹೈದರಾಬಾದಿನಲ್ಲಿ ತಲೆಯೆತ್ತ ಬೇಕಾಗಿತ್ತು. ಆದರೆ ಸಂಸ್ಥಾನದಲ್ಲಿ ರಾಜ ಕೀಯ ಜೀವನವನ್ನು ರಚಿಸಿದವರ ದೂರ ದರ್ಶಿತ್ವದಿಂದ ಹೈದರಾಬಾದ ಸಂಸ್ಥಾನಿ ಕಾಂಗ್ರೆಸು ಮಾತ್ರ ಜನತೆಯಲ್ಲಿ ಜನಪ್ರಿಯ ತೆ ಪಡೆಯುವಂತಾಯಿತು. ನುಧ್ಧ ಕಾಲೀನ ಪಾಳೆಯಗಾರ ಸರ್ವಾಧಿಕಾರ್ತದ ವಿರುದ್ಧ ಈ ಸಂಸ್ಥೆ ನಸ್ಯತ್ರ ಚೈತನ್ಯದಿಂದಲೂ ಸ್ಥೈರ್ಯದಿಂದಲೂ ಜನತೆಯನ್ನು ಸರಿ ದಾರಿಯಲ್ಲಿ ನಡೆಸಲರ್ಹವಾಯಿತು. ಇಂದು ಹೈದರಾಬಾದಿನ ಜನತೆ ಸಂಸ್ಥಾನಿ ಕಾಂಗ್ರೆ ಸಿನ ಬೆಂಬಲಕ್ಕೆ ಬಲವಾಗಿ ನಿಂತಿರುವುದು. ಹಿಂದಿನಂತೆ ಮುಂದೂ ಅದು ಸಂಸ್ಥಾನದ ಭವಿಷ್ಯದ ರೂವರೇಷನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದೆ.

ಹೈದರಾಬಾದು ಒಂದು ಸ್ವತಂತ್ರ ಭೌಗೋಳಿಕ ಲಕ್ಷಣದಲ್ಲ. ಅದರ ಪ್ರದೇಶ ಗಳು ಅಸುಪಾಸಿನ ತೆಲುಗು, ಮರಾಠಿ ಮತ್ತು ಕನ್ನಡ ಪ್ರಾಂತ್ಯಗಳ ಭಾಗಗಳು. ನಿಜಾಮರ ಧೋರಣೆಯಿಂದ ಈ ಜನತೆ ತಮ್ಮ ಪ್ರಾಂತ್ಯಪ್ರೇಮಗಳನ್ನು ಒಂದಿಷ್ಟೂ ಬಿಡಲಾಂತಾಗಲಿಲ್ಲ. ಇದರಿಂದ ಹೈದರಾ ಬಾದಿಗಳೆಂಬ ಪ್ರತ್ಯೇಕ ಭಾವನೆಯುಂಟಾಗ ದಿದ್ದುದು ಒಂದು ಸುದೈವವೆನ್ನಬೇಕು. ಎಂಟು ಜಿಲ್ಲೆಗಳಲ್ಲಿನ 84 ಲಕ್ಷ ಆಂಧ್ರರೂ, ೫ ಜಿಲ್ಲೆಗಳೊಳಗಿನ 46 ಲಕ್ಷ ಮರಾಟರೂ, 3 ಜಿಲ್ಲೆಗಳೊಳಗಿನ 30 ಲಕ್ಷ ಕನ್ನಡಿಗರೂ ಇಂದಲ್ಲ ನಾಳೆಯಾದರೂ ಮುಂಜಿ ಖಂಡಿತ ವಾಗಿ ರಚನೆಯಾಗಲಿರುವ ತಮ್ಮ ತಮ್ಮ ಮಾತೃ ಭಾಷೆಯ ಸ್ವಾಂತಕ್ಕೇ ಸೇರುವ ರೆಂಬುದು ನಿಸ್ಸಂದೇಹ. ಯಾವುದಕ್ಕೂ ಜನತೆಯ ನಿರ್ಣಯವೇ ಕೊನೆಯದಾಗಿರು ವುದು. ಆಗಲೇ ಹೈದರಾಬಾದಿನ ಕುರಿತ್ತು ಸರಿಯಾದ ಇತ್ಯರ್ಥವು ನಡೆಯುವುದು.

ಭಾರತ ಸರಕಾರದ ಪೋಲೀಸ್ ಕಾರ್ಯಕ್ರಮಾನಂತರ ಅಲ್ಲಿನ ಜಾಗೀರ ದಾರರ ಗುಲಾಮಗಿರಿಯಲ್ಲಿದ್ದ ಸಂಸ್ಥಾನದ ಅರ್ಧಾಂಶದಷ್ಟು ಪ್ರದೇಶಗಳ ಜನರು ಸ್ವಲ್ಪ ಮಟ್ಟಿಗೆ ಉಸಿರು ಬಿಡುವಂತಾಗಿದೆ. ಇಂದು ಆ ಜನರಲ್ಲಿ ಹೊಸ ಚೈತನ್ಯ ಸೂರ್ತಿಗಳು ತುಂಬಿವೆ. ಜಾಗೀರದಾರರ ಶೋಷಣೆ ಯಿಂದ ಕಂಗಾಲಾದ ರೈತ ಜನತೆ ಸಹಜ ವಾಗಿ ಕಮ್ಯುನಿಸ್ಟ್ ಪ್ರೇರಣೆಗೆ ಬಲಿ ಬೀಳುವಂತಾಯಿತು. ಈ ಜನತೆಯನ್ನು ಯೋಗ್ಯ ನಿದರ್ಶನದಿಂದಲೂ, ಪ್ರೋತ್ಸಾಹ ದಿಂದಲೂ ಪ್ರಗತಿಪರವಾದ ಮಾರ್ಗಗಳಲ್ಲಿ ಮುನ್ನಡೆಸಬಹುದೆಂಬ ನಿರೀಕ್ಷೆಯಿದೆ.

ಇಂದು ಹೈದರಾಬಾದು ತನ್ನ ಪ್ರತ್ಯೇಕ ತೆಯ ಕತ್ತಲೆಯಿಂದ ಹೊರಬಂದಿದ್ದು ಅಖಿಲ ಭಾರತದ ಆಯಾಮ ಪ್ರಕಾಶದಲ್ಲಿ ಉತ್ಸಾಹದಿಂದ ನಲಿದಾಡುವಂತಾಗಿದೆ. ಮತ್ತೊಂದು ಸಾತ್ಯಿಬೆಳಗಾಗುವುದರೊಳಗೆ ಹಿಂದೂಸ್ತಾನದ ನಕಾಶೆಯಿಂದ ಹೈದರಾ ಬಾದವೆಂಬ ಸಂಸ್ಥಾನವೇ ಪ್ರಣಯವಾಗಿ ಭಾರತ ಒಕ್ಕೂಟದ ಒಂದಗವಾಗುವಂತಾ ದರೆ ಯಾವ ಆಶ್ಚರ್ಯವೂ

ಆನಂದವನ್ನು ಪಡೆಯುವ ವಿಧಾನ

ಆಧಾಸಕ್ತಿ, ಕರ್ಮ ಯೋಗದ ಲಕ್ಷಣ

(ಹಿಂದಿ ಸಂಚಿಕೆಯಿಂದ ಮುಂದುವರಿದದ್ದು)

ಲೌಕಿಕ ಮನುಷ್ಯನಾಗಲಿ, ತತ್ವಜ್ಞಾನಿಯಾಗಲಿ, ಚಿತ್ತ ಶಾಂತಿಯನ್ನು ಪಡೆಯದೆ ಎಂದಿಗೂ "ಪೂರ್ಣಾನಂದವನ್ನನುಭವಿಸಲಾರ"ನೆಂದು ತಮ್ಮ ಸಂತ ಪುರುಷರನ್ನೇಕರು ಹಾಡಿರುವುದನ್ನು ನಾವು ಕೇಳಿರುತ್ತೇವೆ.

ನಿಸ್ವಾರ್ಥತೆಯನ್ನು ಕಲಿಯಬೇಕಾದರೆ ಮೊದಲನೆ ಹೆಜ್ಜೆಯಾಗಿ ದಾನ ಕೊಡುವುದನ್ನು ಕಲಿಯಬೇಕು. ತಾನು ಕೊಟ್ಟ ದಕ್ಕೆ ಪ್ರತಿಫಲವನ್ನು ಇಂದಾಗಲಿ ಮುಂದಾಗಲಿ ಅಪೇಕ್ಷಿಸದಿರುವುದೇ ದಾನ ಕೊಡುವುದರ ಧ್ಯೇಯವಾಗಿರಬೇಕು. ದಾನ ಕೊಡುವ ಸ್ವಭಾವವು ಒಬ್ಬನಲ್ಲಿ ಅಭಿವೃದ್ಧಿಯಾಗುತ್ತಲೆ ಅವನು ಸಹಾನುಭೂತಿವರನೂ, ದಯಾಳುವೂ ಪ್ರೇಮಪೂರ್ಣನೂ ಆಗುವನು

ಪ್ರತಿಫಲಾಪೇಕ್ಷೆಯಿಲ್ಲದೆ, ಅನಾಸಕ್ತತೆಯಿಂದ ಮಾಡಲ್ಪಟ್ಟ ಕಾರ್ಯವು ಪನಸ್ಸಿನಲ್ಲಿ ಯಾವ ನ್ಯೂನತೆಯನ್ನೂ ಉಂಟುಮಾಡುವುದಿಲ್ಲ ಉದಾಹರಣೆಗಾಗಿ ಒಬ್ಬ ಮೋಟಾರು ಚಾಲಕತ್ವದ ಕೆಲಸ ಮಾಡುವವನನ್ನು ತೆಗೆದುಕೊಳ್ಳಿರಿ ಅವನು ಮೋಟಾರನ್ನು ಚಲಾಯಿಸುತ್ತಾನೆ, ಅದನ್ನು ಶುದ್ಧ ವಿಡುತ್ತಾನೆ, ಮತ್ತು ಅದರ ಪ್ರತಿಯೊಂದು ಭಾಗದ ಕುರಿತೂ ಅವನು ಎಚ್ಚರಿಕೆ ವಹಿಸುತ್ತಾನೆ ಈ ಎಲ್ಲ ಕೆಲಸವನ್ನು ಅವರು ಯಾವೊಂದು ಚಿಂತೆ ಇಲ್ಲದೇನೆ ಮಾಡುತ್ತಾನೆ ಕಾರಣ ಮೋಟಾರಿನ ಮಾಲಕನು ಬೇರೊಬ್ಬನೆಂಬ ಸಂಗತಿಯನ್ನು ಅವನು ಒಲ್ಲನು ಏನಾದರೂ ಕೆಟ್ಟು ಹೋದರೆ ಅದರ ನಷ್ಟವು ಮಾಲಕನಿಗೆಂದೂ ಅವನಿಗೆ ತಿಳಿದಿರುತ್ತದೆ ಅವನೊಬ್ಬ ಅನಾಸಕ್ತ ಕೆಲಸಗಾರ ಅದೇ ರೀತಿ ಮನೆಯಲ್ಲಿ ಕೆಲಸಕ್ಕೆ ನಿಲ್ಲಿಸಿದ ಹೆಂಗಸು ಕೂಡ ವಿಷಯಗಳನ್ನು ಅನಾಸಕ್ತ ದೃಷ್ಟಿಯಿಂದ ನೋಡುವನ ವಿಷಯವಾದರೂ ಅದೇ ಸಂಗತಿಯಾಗಿದೆ ತೋಟದ ಸೌಂದರ್ಯದಿಂದ ಅದರ ಮಾಲಕನಿಗಿಂತಲೂ ನಾನು ಹೆಚ್ಚು ಆನಂದ ಪಡೆಯಬಲ್ಲೆ ಹೀಗೆ ಯಾವುದಾದರೂ ಒಡೆತನದ ಹೊಣೆಗಾರಿಗೆಯು ಆಸಕ್ತಿಯನ್ನುಂಟು ಮಾಡುತ್ತದೆ ಆಸಕ್ತಿಯಿಂದ ಮಮತೆ ಹುಟ್ಟುತ್ತದೆ, ಮಮತೆಯು ಸಂಕಲ್ಪವನ್ನುಂ ಮಾಡುತ್ತದೆ

ಯುದ್ಧದಲ್ಲಿ ಲಕ್ಷಾಂತರ ಜನರು ಸತ್ತಿರುವರು ಆದರೆ ನಮ್ಮ ಆಪ್ತರ ಮರಣಕ್ಕೆ ನಾವು ಎಷ್ಟು ದುಃಖಪಡುತ್ತೇವೋ ಆಷ್ಟೇ ದುಃಖವನ್ನು ನಾವೇ ಜನರಿಗಾಗಿ ಎಂದಾದರೂ ಪಟ್ಟಿರುವೆವೆ? ನಾವು ನಮ್ಮ ಹೊಣೆಗಾರಿಕೆಯನ್ನರಿತುಕೊಳ್ಳಬಾರದೆಂದು ಇದರ ಅರ್ಥವಲ್ಲ. ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡುವುದೇ ನಮ್ಮ ಹೊಣೆಗಾರಿಕೆ. ಮಾತ್ರವಲ್ಲ ನಮ್ಮ ಸಾಮರ್ಥ್ಯಕ್ಕೆ ಸರಿಯಾಗಿಯೂ ಅದಕ್ಕೆ ಪ್ರತಿಫಲವನ್ನು ಅಪೇಕ್ಷಿಸದೆಯೂ ಮಾಡುವುದೇ ಉತ್ತಮ ವಿಧಾನ.

ಇದನ್ನು ಬಾಯಿಯಿಂದ ಹೇಳುವುದು ಸುಲಭವೆಂದೂ, ಕಾರ್ಯದಲ್ಲಿ ಮಾಡುವುದು ಕಷ್ಟವೆಂದೂ ನೀವು ಹೇಳಬಹುದು. ಈ ಮಾತು ನಿಜ. ಯಾಕೆ? ಯಾಕೆಂದರೆ: ನಮ್ಮ ಮನಸ್ಸುಗಳು ನಿರ್ಬಲವಾದವುಗಳು. ನಿಯಂತ್ರಣವಿಲ್ಲದ ಕುದುರೆಯಂತೆ ಇಂದ್ರಿಯಗಳು ನಮ್ಮನ್ನು ತಬ್ಬಿಬ್ಬು ಮಾಡುತ್ತವೆ. ಅದಕ್ಕೊಸ್ಕರವಾಗಿಯೆ ನಮ್ಮ ಪ್ರಾಚೀನರು ಮನಸ್ಸನ್ನು ಶಕ್ತಿಯುಕ್ತವಾಗಿ ಮಾಡಲು ಅನೇಕ ತರದ ಮಾನಸೀಕ ವ್ಯಾಯಾಮಗಳನ್ನು ನಿರ್ದೇಶಿಸಿದ್ದರು ಶಾರೀರಿಕವಾಗಿ ನಿರ್ಬಲರಾಗಿದ್ದರೆ ನಾವು ಶರೀರ ವ್ಯಾಯಾಮಗಳನ್ನು ಮಾಡುವುದಿಲ್ಲವೆ? ಅದೇ ರೀತಿ ನಿರ್ಬಲ ಮನಸ್ಸನ್ನು ಬಲಿಷ್ಟಗೊಳಿಸಲು ನಾವು ಮಾನಸಿಕ ವ್ಯಾಯಾಮವನ್ನು ಮಾಡಬೇಕು. ಬಲಿಷ್ಟವಾದ ಮನಸ್ಸಿನಿಂದಲೇ ನಾವು ಇಂದ್ರಿಯ ವ್ಯಾಪಾರಗಳನ್ನು ನಿಯಂತ್ರಿಸಬಹುದು. ಮತ್ತದರಿಂದಲೆ ಪ್ರೇಮ, ಸಹಾನುಭೂತಿ, ದಯೆ, ಕ್ಷಮೆ, ತಾಳ್ಮೆ, ಸತ್ಯಸಂಧತೆ, ಪ್ರಾಮಾಣಿಕತೆ ಮೊದಲಾದ ಸತ್ ಶೀಲಗಳನ್ನು ಬೆಳೆಸಿಕೊಳ್ಳಬಹುದು ಆ ವ್ಯಾಯಾಮಗಳು ನಮ್ಮ ಮನಸ್ಸನ್ನು ಪರಿಶುದ್ಧಗೊಳಿಸುತ್ತವೆ ಧ್ಯಾನ ಮತ್ತು ಕೇಂದ್ರೀಕರಣಗಳೇ ಮನಸ್ಸಿಗೆ ಯೋಗ್ಯವಾದ ಆ ವ್ಯಾಯಾಮಗಳು ಸದ್ಗುಣಗಳ ಕುರಿತು ನಾವು ಧ್ಯಾನವನ್ನು ಮಾಡುತ್ತ ಅವನ್ನು ಹೊಂದಲು ಮನಸ್ಸನ್ನು ಕೇಂದ್ರೀಕರಿಸಿದರೆ ಸುಲಭವಾಗಿ ನಾವದನ್ನು ಗಳಿಸಬಹುದು ಅದೇ ರೀತಿ ಸಂತ ಪುರುಷರೊಡನೆ ಮಾನಸೀಕ ಮತ್ತು ಶಾರೀರಿಕ ಸಂಬಂಧವನ್ನರಿಸಿಕೊಳ್ಳುವುದರ ಮೂಲಕವೂ ನಾವು ಅವುಗಳನ್ನು ಗಳಿಸಬಹುದು ಇದು ಹೆಚ್ಚಿನ ಮಹತ್ವದ ಅಭ್ಯಾಸ ಕೇಂದ್ರೀಕರಣದಿಂದಲೇ ಹೆಚ್ಚಾಗಿ ಎಲ್ಲಾ ಜ್ಞಾನವನ್ನು ನಾವು ಪಡಯಬಹುದು ಒಂದು ವರ್ತಮಾನ ಪತ್ರಿಕೆ ಓದವಾಗಲೂ, ಓದುತ್ತಿರುವ ವಿಷಯದ ಕುರಿತು ಮನಸ್ಸು ಕೇಂದ್ರೀಕರಿಸಲ್ಪಡದಿದ್ದರೆ ಏನಿದನ್ನು ತಿಳಿದುಕೊಳ್ಳಲಾರಿರಿ ಅಮರವಾದ ಜೀವನಾನಂದವನ್ನು ಗಳಿಸಲು ಮಾನಸೀಕ ವ್ಯಾಯಾಮವು ಅದೆಷ್ಟು ಅವಶ್ಯಕವೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ ಅದರಿಂದ ಶ್ರೇಷ್ಟ ಜ್ಞಾನವನ್ನೂ ನಾವು ಪಡೆಯಬಹುದು ಉಸಿರಾಟದ ವ್ಯಾಯಾಮಗಳನ್ನು ಮಾಡುತ್ತ ಪ್ರಾಣವಾಯುವನ್ನು ನಿಯಂತ್ರಣದಲ್ಲಿಡುವುದರ ಮೂಲಕ ನಾವು ಮನಸ್ಸಿನ ಮೇಲಿನ ಒಡೆತನವನ್ನು ಹೆಚ್ಚಿಸಿಕೊಳ್ಳಬಹುದು ಇದೇ ಪ್ರಾಣಾಯಾಮವೆಂದೆನಿಸಲ್ಪಡುವುದು ಕೆಲವರು ಇದರ ಸಹಾಯಕ್ಕಾಗಿ ಯೋಗಾಸನಗಳನ್ನು ಅಭ್ಯಸಿಸುವರು.

ವಿಶ್ವದೊಳಗಿನ ಪ್ರತಿಯೊಂದು ಕಣವೂ ಕಂಪನಗೊಳ್ಳುತ್ತಿದೆಂಬ ಸಂಗತಿಯನ್ನು ನಾವು ಬಲ್ಲೆವು. ಸದ್ಗುಣಗಳಿಂದ, ಮಾನಸೀಕ ಕಂಪನಗಳನ್ನು ತಮಗನುಗೊಳಿಸಿ ಮನಸ್ಸನ್ನು ಶುದ್ಧಿಗೊಳಿಸಬೇಕು. ಬಯಸಿದ್ದ ಫಲವನ್ನು ಹೊಂದುವುದರ ಮೂಲಕವೇ ಮನಸ್ಸನ್ನು ಶಾಂತಗೊಳಿಸಬಹುದು.

ವಾರದ ವಿಜ್ಞಾನ ವರದಿಗಳು

ಲಕ್ಷಾಂತರ ವರ್ಷ ಹಿಂದಿನ ಪ್ರಾಣಿಗಳು

ಲಕ್ಷ ವರ್ಷಗಳಿಗೂ ಹಿಂದೆ ಈ ಭೂಮಿಯಲ್ಲಿದ್ದು ಕ್ರಮೇಣ ನಾಮಾವಶೇಷವಾದ ಹಲವು ವಿಚಿತ್ರ ಪ್ರಾಣಿಗಳ ಅವಶೇಷಗಳನ್ನು ಇತ್ತೀಚೆಗೆ ಸ್ಯೂಯೋರ್ಕಿನ ಪ್ರಕೃತಿ ಇತಿಹಾಸದ ವಸ್ತು ಪ್ರದರ್ಶನಾಲಯದಲ್ಲಿ ಸಾರ್ವಜನಿಕ ನೋಟಕ್ಕಿಡಲಾಗಿತ್ತು. ಇಂತಹ ಕೆಲವು ಪ್ರಾಣಿಗಳ ಚರ್ಮ ಮತ್ತು ರೋಮಗಳು ಕೂಡ ಇದ್ದಕ್ಕಿದ್ದ ಹಾಗೆ ಇದ್ದುವು. ಲಕ್ಷಾಂತರ ವರ್ಷ ಹಿಂದಿನ ಒಂದು ಗಜವರ್ಗದ ಪ್ರಾಣಿಯ ಕೂದಲುಗಳು ಇಂದೂ ಕೆಂಪು ಬಣ್ಣದವಾಗಿದ್ದಾವೆ ಅವು ಹಾಗೆ ಉಳಿಯಲು ಕಾರಣ ಅವುಗಳ ಅವಶೇಷಗಳು ಅತ್ಯಂತ ಶೀತದ ತುಂದ್ರಾ ಪ್ರದೇಶದಲ್ಲಿ ಸಿಕ್ಕಿದವು ಅಲ್ಲಿ ಅವು ಲಕ್ಷಾಂತರ ವರ್ಷಗಳಿಂದ ಹಿಮಗಡ್ಡೆಗಳಡಿಯಲ್ಲಿ ಹುದುಗಿಕೊಂಡಿದ್ದುವು ಪರಿಶೋಧಕರು ಇವನ್ನು ಕಂಡುಹಿಡಿದು ಹಿಮ ತುಂಬಿದ ಡಬ್ಬಿಗಳಲ್ಲಿ ತುಂಬಿ ನ್ಯೂಯೋರ್ಕಿಗೆ ಕಳುಹಿಸಿದ್ದರು ಅಲ್ಲಿಯೂ ಅವು ಹಿಮಕರಡಿಗೆಗಳಲ್ಲಿಡಲ್ಪಟ್ಟಿದ್ದುವು

ಸಿಗರೇಟಿನ ಮನೋಶಾಸ್ತ್ರ

ಸಿಗರೇಟು ಸೇದುವವರು ಅದರ ಕೊನೆಯ ಅಂತವನ್ನು ಆರಿಸುವ ವಿಧಾನವು ಸಾಮಾನ್ಯ ನೋಟಕ್ಕೆ ಮಹತ್ವದ್ದೆಂದು ಕಾಣದಿದ್ದರೂ ಮನೋಶಾಸ್ತ್ರಜ್ಞರೊಬ್ಬರ ದೃಷ್ಟಿಯಲ್ಲಿ ಅಡರಲ್ಲಿ ಮಾನಸಿಕ ಲಕ್ಷಣದ ಚಿಹ್ನೆಗಳನ್ನು ಕೋರಿಸುವಂತಹದಿದೆ

ಇದರಲ್ಲಿನ ಐದು ವಿಧಾನಗಳಲ್ಲಿ ಏದು ತರದ ಸ್ವಭಾವ ಲಕ್ಷಣಗಳನ್ನು ತಿಳಿಯಬಹುದು

ಸಿಗರೇಟ್ ಕೊಟ್ಟಿಯನ್ನು ಒತ್ತಿ ಒರಸುತ್ತ ಆರಿಸುವವರು ಮನಸ್ಸಿನಲ್ಲಿ ಯಾರ ಮೇಲೊ ಆಳವಾದ ಹಗೆಯುಳ್ಳವರೆಂಬುದನ್ನು ತೋರಿಸುತ್ತದೆ

ಅಗಲೇ ಮನುಷ್ಯನು ಪೂರ್ಣಾನಂದವನ್ನನುಭವಿಸುವನು ನಿಜವಾದ ಆತ್ಮಾನಂದದ ಒಂದು ಮಸಕು ಪ್ರತಿಬಿಂಬ ರೂಪವಿದು ಶುದ್ಧವಾದ ಅನಾಸಕ್ತ ಮನಸ್ಸು ಮಾತ್ರ, ನಶ್ವರ ಸುಖಕ್ಕೆ ಬಯಸದ ಮನಸ್ಸು ಮಾತ್ರ ಶಾಂತವಾಗಿರಬಲ್ಲುದು ಅದನ್ನು ಧ್ಯಾನ ಮತ್ತು ಕೇಂದ್ರೀಕರಣಗೊಳಿಸುವುದರಿಂದ ಹೊಂದಬಹುದು ಲೌಕಿಕ ವಿಷಯ ಸುಖ ಕ್ಕಾಗಿ ಹಾತೊರೆಯುವ ಮನಸ್ಸು ಎಂದಿಗೂ ಶುದ್ಧವಿರಲಾರದು ಇಂತಹ ಮನಸ್ಸು ಶಕ್ತಿಯು ಗುಣನಿಯೆಂದಿನಿಸುವ ಆ ಜೀವ ಶಕ್ತಿಯನ್ನು ಹೊಂದಲು ಅಸಮರ್ಥವಾಗಿರುವುದು ದವ್ಯವಾದ ಬಟ್ಟೆಯಲ್ಲಿ ಸುತ್ತಿದ ಕಬ್ಬಿಣದ ತುಂಡು ಸೂಜಿಕಲ್ಲಿನಿಂದ ಹೇಗೆ ಆಕರ್ಷಿಸಲ್ಪಡುವುದಿಲ್ಲವೊ ಹಾಗೆ. ಮನಸ್ಸು ಶುದ್ಧವಾದ ಹಾಗೆ ಅದು ಜೀವ ಶಕ್ತಿಯ ಹತ್ತಿರ ಹತ್ತಿರ ಸರಿಯುವಂತಾಗುವುದು. ಕೊನೆಯಲ್ಲಿ ಅಂತಹ ಮನಸ್ಸು ಜೀವ ಸಾಗರದಲ್ಲಿ ದುಮುಕಿ ಪೂರ್ಣಾನಂದ ಸುಖದಲ್ಲಿ ಓಲಾಡುವುದು.

ಮೇಜಿನ ಮೇಲಿಡಲ್ಪಡುವ ಸಿಗರೇಟ್ ಕಟ್ಟೆಯಲ್ಲಿ ಆಲಸ್ಯದಿಂದ ಉತ್ಪಾಯನ್ನು ಸಂಪೂರ್ಣ ಸುಟ್ಟು ಹೋಗುವಂತೆ ಹಾಗೇ ಬಿಡುವವರು "ಲಾಭವಿಲ್ಲದ ಸ್ನೇಹಿತರು ಪ್ರಯೋಜನವಿಲ್ಲ"ವೆಂಬ ಭಾವನೆಯವರಾಗಿರುತ್ತಾರೆ.

ಸಿಗರೇಟ್ ಕೊನೆಯನ್ನು ನೆಲದ ಮೇಲೆ ಬಿಸಾಡುವವರು "ದಂಗೆ ಏಳುವ, ಎಲ್ಲರನ್ನು ವಿರೋಧಿಸುವ" ಸ್ವಭಾವವುಳ್ಳವರು.

ಸೇದುವಾಗಲೆ ಸಿಗರೇಟಿನ ಕೊನೆಯನ್ನು ಕಚ್ಚಿ ಕಚ್ಚಿ ತುಂದರಿಸುವವರು ತುಂಬಾ ಮನೋಭಗ್ನರಾಗಿದ್ದ ವರೆಂದು ತಿಳಿಸುತ್ತವೆ.

ವಿನೋದಕ್ಕಾಗಿ ಸಿಗರೇಟಿನ ಉರಿಯುವ ತುದಿಯನ್ನು ಕುಡಿಯುವ ಕಾಫಿಯಲ್ಲಿ ಮುಳುಗಿಸುವವರು ನೀಚ ಮನೋಭಾವನೆಯನ್ನು ವ್ಯಕ್ತಪಡಿಸುತ್ತಾರೆ ಅಂಥವರು ಸ್ವತಃ ತಮ್ಮನ್ನೂ ಇತರರನ್ನೂ ಜಗುಪ್ಸೆಯಿಂದ ಕಾಣುವರು.

ಹೊಸ ಮೃತ್ಯುಕಿರಣ

ರಶ್ಯನ್ ವಿಜ್ಞಾನಿಯ ಪ್ರಯತ್ನ

ಒಂದು ಫರಂಗಿ ವಾಹನದ ಮೇಲೆ ಜೋಡಿಸಬಹುದಾದ ಗಾತ್ರದ ಮೃತ್ಯು ಕಿರಣವನ್ನು ಪಸರಿಸುವ ಉಪಕರಣವೊಂದನ್ನು ರಶ್ಯನ್ ವಿಜ್ಞಾನಿಯೊಬ್ಬನು ಕಂಡು ಹಿಡಿದಿರುವನೆಂದು ಪ್ರಚಾರ ಮಾಡಲ್ಪಟ್ಟಿದೆ ಪ್ರೊಫೆಸರ್ ಪೀಟರ್ ಕಾಪಿಟ್ಜಾ ಎಂಬೀ ರಶ್ಯನ್ ಸಂಶೋಧಕನು ಕೆಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಲಾರ್ಡ್ ರುತರ್ ಫರ್ಡ್‌ರ ಕೈಕೆಳಗೆ ಕೊಸ್ಮಿಕ್ ಕಿರಣಗಳ ಕುರಿತು ಸಂಶೋಧನೆಗಳನ್ನು ಮಾಡಿದ್ದನು. ಈ ಹೊಸ ಶೋಧವು ಯುದ್ಧವಿಧಾನದಲ್ಲಿ ಕ್ರಾಂತಿಯನ್ನುಂಟುಮಾಡುವಂತಹದೆಂದು ಹೇಳಲಾಗುತ್ತಿದೆ

ದೂಮಕೇತುಗಳ ಕುರಿತು

ಪದೇ ಪದೇ ಗಗನ ಪಟದಲ್ಲಿ ಕಾಣಬರುವ ಉಜ್ವಲ ಧೂಮಕೇತುಗಳ ಕುರಿತು ಮಾನವನಿಗೆ ಬೆವ್ವು ಹಿಡಿಯುವಂತಾಗಿದೆ– ಆ ವಿಚಿತ್ರವಾದ ಪ್ರಜ್ವಲ ಪ್ರಕಾಶ, ಬಾಲದಂತೆ ಕಾಣಿಸುವಂತಹುದು ಹಿಂದಿನ ಕಾಲದಿಂದಲೂ ಇವುಗಳ ಕಾಣಿಸುವಿಕೆಯು ಅನಿಷ್ಟಕಾರಕವೆಂದು ಪರಿಗಣಿಸಲಾಗುತ್ತಿತ್ತು ಕಾಗೆ ಕೂತುಕೊಳ್ಳಲಿಕ್ಕೂ ಗೆಲ್ಲು ಮುರಿಯಲಿಕ್ಕೂ ಸರಿಯಾಯಿತೆಂಬ ಕಾಕತಾಳ ನ್ಯಾಯಕ್ಕನುಗುಣವಾಗಿ ಧೂಮಕೇತುಗಳು ಕಾಣಿಸುವಾಗಲೇ ಯಾವನೊಬ್ಬ ರಾಜನಾಗಲಿ, ಪ್ರಖ್ಯಾತ ಪುರುಷನಾಗಲಿ, ಮೃತವಾಗುತ್ತಿದ್ದನು ಆದರೆ ಇಂದಿನ ವಿಜ್ಞಾನಿಗಳು ಅಂತಹ ನಂಬಿಕೆಗಳಿಗೆ ಯಾವ ಆಧಾರವಿಲ್ಲವೆಂದೂ, ಕೆಲವೊಂದು ನಕ್ಷತ್ರಗಳು ತಮ್ಮ ಸುತ್ತಲಿನ ಅನಿಲದ ಆವರಣವನ್ನು ಹೊತ್ತಿಸಿ ಉರಿದು ಭರದಿಂದ ಚಲಿಸಿ ಹೊಂದುವಾಗ ಆ ರೀತಿ ಕಾಣಿಸುವುದೆಂದೂ ವಿವರಣೆ ಕೊಡುತ್ತಾರೆ. ಹರ್ವಾರ್ಡ್ ವಿಶ್ವವಿದ್ಯಾಲಯದ ಪ್ರೊ. ವಿಪ್ಪಲ್ ಅವರು ಈ ಸಿದ್ಧಾಂತದ ಕುರಿತು ಸವಿಫರವಾದ ವಾದ ಸಂಶೋಧನೆಗಳನ್ನು ನಡೆಸುತ್ತಿರುವರು.

ಸತ್ತವರು ಬದುಕಿಬಂದ ಕೆಲವು ವಿಚಿತ್ರ ಘಟನೆಗಳು

ಸತ್ತಿರುವನೆಂದು ಸರಕಾರಿ ದಾಖಲೆಗಳಲ್ಲಿ ಕಾಣಿಸಲ್ಪಟ್ಟ ಒಬ್ಬ ಮನುಷ್ಯನು ಈಗ ಒಂದು ವರ್ಷದ ಕೆಳಗೆ ತಾನು ಸಂಪೂರ್ಣ ಜೀವಂತವಿರುವೆನೆಂದು ಇಂಗ್ಲೆಂಡಿನ ಡರ್ಬಿ ಶಾಯರ್ ಪ್ರಾಂತ್ಯದಲ್ಲಿ ಕಾಣಿಸಿಕೊಂಡನು. ಒಂದು ವರ್ಷದ ಕೆಳಗೆ ಅಲ್ಲಿನ ಜಂದು ಕೊಳದಲ್ಲಿ ಒಂದು ಹೆಣವು ಸಿಕ್ಕಿದಾಗ ಪಂಚರು ಅದು ಅಲೆಕ್ಸಾಂದರ್ ರೈನಿ ಎಂಬವನದೆಂದು ಸಿದ್ಧ ಪಡಿಸಿದರು. ಅವನೊಬ್ಬ ಸ್ಥಳೀಕ ಕಬ್ಬಿಣ ಕೆಲಸಗಾರ. ಇತ್ತೀಚೆಗೆ ಯಾವುದೊ ಒಂದು ಕಟ್ಟೆ ಸಂಬಂಧ ನ್ಯಾಯಾಲಯದಲ್ಲಿ ಅಲೆಕ್ಸಾಂದರನ ಹೆಸರು ಕರೆಯಲ್ಪಟ್ಟಾಗ ಅವನು ಸ್ವತಃ ಅಲ್ಲಿ ಹಾಜರಾಗಿ ಎದುರು ಬಂದು ನಿಂತನು. ಅಲೆಕ್ಸಾಂದ್ರನು ಸತ್ತಿರುವನೆಂದು ಒಬ್ಬ ಪೋಲೀಸನು ಅವನಿಗೇ ಆ ಸಂಗತಿಯನ್ನು ತಿಳಿಸಿದಾಗ ರೈನಿಯು ವಿನೋದಕ್ಕಾಗಿ ಹಾಗೆ ಹೇಳುವಷ್ಟೆಂದು ತಿಳಿದನು. ಕಡೆಗೆ ಹಿಂದೆ ಶವ ಪರೀಕ್ಷೆ ಮಾಡಿದ ವೈದ್ಯನು ಅವನನ್ನು ನೋಡಿ ಪಂಚನಾಮೆ ತೆಗೆವಾಗ ಸಾಕ್ಷಿಗಳು ತಪ್ಪು ಮಾಡಿರುವರೆಂದು ಒಪ್ಪಿಕೊಂಡನು. ಆದುದರಿಂದ ಪುನಃ ಅಲೆಕ್ಸಾಂದರನು ಜೀವಂತವಿರುವನೆಂಧು ಡಾಕಲೆ ಪುಸ್ತಕಗಳಲ್ಲಿ ತಿದ್ದುಪಡಿ ಮಾಡುವಂತೆ ನ್ಯಾಯಧೀಶರು ನಿರ್ದೇಶಿಸಿದರು.

✠

ಸತ್ತವರು ಜೀವಂತವಾಗಿ ಬಂದ ವಿಚಿತ್ರ ಘಟನೆಗಳು ಅನೇಕವಿವೆ. ಇಂಗ್ಲೆಂಡಿನ ಮಧ್ಯ ಪ್ರಾಂತ್ಯದ ಒಂದು ಪಟ್ಟಣದಲ್ಲಿ ನಡೆದ ಸಂಗತಿಯು ಅತೀ ಆಶ್ಚರ್ಯದ್ದಾಗಿದೆ. ಒಕ್ಕೆಯ ಹಡಗದಲ್ಲಿ ಒಬ್ಬನು ಕಲಾಸಿಯಾಗಿದ್ದ. ಇವನು ಸತ್ತನೆಂದು ಅವನ ಹೆಂಡತಿಗೆ ತಿಳಿಸಿದಾಗ ಅವಳು ಬಹಳ ದುಃಖಪಟ್ಟಳು. ಕೆಲವು ವರ್ಷಗಳ ನಂತರ ಒಂದು ದಿನ ಅವಳ ಮನೆಗೆ ಒಬ್ಬ ಕಲಾಸಿಯು ಬಂದ. ಬಾಗಿಲು ತೆಗೆಯಲು ಅವನೇ ತನ್ನ ಗಂಡನೆಂದು ಅವಳು ಅವನನ್ನು ತಬ್ಬಿದಳು, ಉಕ್ಕೇರುವ ದುಃಖದಿಂದಲೂ, ಗಂಡನು ಬದುಕಿ ಬಂದ ಸಂತೋಷದಿಂದಲೂ ಅವಳು ಕಣ್ಣೀರು ಸುರಿಸಿದಳು. ಅವನು ಅವಳ ನಿಜವಾದ ಗಂಡನಾಗಿರಲಿಲ್ಲ. ಆದರೂ ಅವಳನ್ನು ನಿರಾಶೆ ಪಡಿಸಬಾರದೆಂದು ಅವನು ಒಪ್ಪಿಕೊಂಡ. ಮೂರು ವರ್ಷ ಕಾಲ ಅವರು ಸುಖ ಸಂತೋಷದಿಂದ ವಾಸಿಸಿದ್ದರು.

ಆ ಮೇಲೆ ಒಂದು ದಿನ ಇನ್ನೊಬ್ಬ ಕಲಾಸಿಯು ಅವಳ ಮನೆಗೆ ಬಂದ. ಅವನು ಅವಳನ್ನು ತಬ್ಬಿಕೊಂಡು ಅವಳ ಹೆಸರನ್ನೂ ಕರೆದು ಅವ್ಯ ಸಂಗತಿಗಳನ್ನು ಕುರಿತು ವಿಚಾರಮಾಡಿದ. ಅವನೇ ಅವಳ ನಿಜವಾದ ಗಂಡನಾಗಿದ್ದ. "ನೀನು ನನ್ನ ಆಶೆಯನ್ನು ಬಿಟ್ಟು ಬಿಟ್ಟಿದ್ದಿಯೆ?" ಎಂದು ಪ್ರಶ್ನಿಸಿದಾಗಂತೂ ಅವಳಿಗೆ ಅವನ ಗುರುತು ಹತ್ತಿತು. ಆದರೆ ಮೊದಲಿನವನು ಮನೆಗೆ ಬಂದಾಗ ಅವರೊಳಗೆ ಸ್ವಲ್ಪ ಮನಸ್ತಾಪ ಪುಂಟಾಯಿತು. ಕೊನೆಗೆ ಹೇಗೂ ಅವರೊಳಗೆ ರಾಜಿಯಾಯಿತು. ಮೊದಲಿನವನು ಪುನಃ ಕಲಾಸಿಯಾಗಿ ಹಡಗು ಕೆಲಸಕ್ಕೆ ತೆರಳಿದನು ಪುನಃ ಕಾಣಿಸಿಕೊಳ್ಳಲಿಲ್ಲ.

✠

1860ರಲ್ಲಿ ವಿಲಿಯಂ ಹೆರಿಸ್ ಎಂಬ ಶ್ರೀಮಂತ ವ್ಯಾಪಾರಿಯೊಬ್ಬ ತನ್ನ ಸೇವಕ ನೊಡನೆ ಜನಸಂಚಾರವಿಲ್ಲದ ಮಾರ್ಗ ವೊಂದರಲ್ಲಿ ನಡೆದು ಹೋಗತಿದ್ದ. ಕೆಲವು ಗಂಟೆಗಳ ನಂತರ ಸೇವಕನು ಮಾತ್ರ ಏಕಾಂಗಿಯಾಗಿ ಮನೆಗೆ ಬಂದ. ಹೆರಿಸನ್ನನು ಕಾಣೆಯಾಗಿದ್ದ. ಒಂದು ವರ್ಷದ ನಂತರ ಆ ಸೇವಕನು ಪೋಲೀಸ್ ಸ್ಟೇಶನಿಗೆ ಹೋಗಿ ತಾನು ತನ್ನ ತಮ್ಮ ಮತ್ತು ತಾಯಿ, ಈ ಮೂವರು ಹೆರಿಸನ್ನನನ್ನು ಕೊಲೆಮಾಡಿರುವುದಾಗಿ ಹೇಳಿಕೆ ಕೊಟ್ಟ. ಮೂವರ ವಿಚಾರಣೆಯಾಗಿ ಅವರನ್ನು ಗಲ್ಲಿಗೇರಿಸಲಾಯಿತು. ಹೆರಿಸನ್ನನ ಶವವು ಒಂದು ಕೊಳದಲ್ಲಿ ಹಾಕಲ್ಪಟ್ಟಿದೆಂದು ವಿಚಾರಣೆಯಲ್ಲಿ ತಿಳಿದುಬಂದಿದ್ದು. ಆದರೆ ಹುಡುಕಲ್ಪಟ್ಟಾಗ ಅಲ್ಲಿ ಅದು ದೊರೆಯಲಿಲ್ಲ. ಕೆಲವು ವರ್ಷಗಳ ನಂತರ ಹೆರಿಸನ್ನನು ಪುನಃ ತನ್ನ ಮನೆಗೆ ಹಿಂತಿರುಗಿ ಬಂದಾಗ ಎಲ್ಲರಿಗೂ ಆಶ್ಚರ್ಯವಾಯಿತು. ತನಗೆ ಕೆಲವ ರೋಡಗಾರರು ಕದ್ದೊಯ್ದರೆಂದೂ, ಒಂದು ಹಡಗವಲ್ಲಿ ತುರ್ಕಿ ದೇಶಕ್ಕೆ ಕೊಂಡೊಯ್ದು ಅಲ್ಲಿ ಗುಲಾಮನಾಗಿ ಮಾರಿದರೆಂದೂ, ಅಲ್ಲಿಂದ ತಾನು ಹೇಗೊ ತಪ್ಪಿಸಿಕೊಂಡು ಬಂದೆನೆಂದೂ ಹೇಳಿದ. ಸ್ಥಳೀಕ ಪೋಲೀಸರಿಗೆ ಈ ಕತೆಯ ಕುರಿತು ಸಂದೇಹವಿತ್ತಾದರೂ, ಹೆರಿಸನ್ನನು ತನ್ನ ಶರೀರದ ಮೇಲಿದ್ದ ಗುರುತುಗಳನ್ನು ತೋರಿಸಿ ಎಲ್ಲರನ್ನು ಸಮಾಧಾನ ಪಡಿಸಿದನಂತೆ.

ಕಡಿತ ಘಾಯ ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಘಾಸಿಯನ್ನು ಕುಟಿಕೂರಾ ಮುಲಾಮು ನಿಂದ ಲೇಪಿಸಿರಿ. ಆದರೆ ವಿಷಕಾರಿ ಕರ್ಮ ನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ. ಊದುಬತ್ತಿ ನೋವನ್ನು ಕಡಿಮೆ ಮಾಡುತ್ತದೆ.

ಕುಟಿ ಕೂ ರಾ ಮುಲಾಮು
CUTICURA OINTMENT

ವಿವಿಧ ವೃತ್ತಮೈವಿಧ್ಯ

ಆಹಾರ ವಸ್ತುಗಳ ಬೆಲೆ ಇಳಿಸುವ ಪ್ರಯತ್ನ

ಸ್ವಾತಂತ್ರ್ಯ ರಕ್ಷಣೆಯ ಮಾರ್ಗ

ಹೊಸತಾಗಿ ಹೊಂದಿದ ಸ್ವಾತಂತ್ರ್ಯವನ್ನು ರಕ್ಷಿಸಲೂ ಮತ್ತು ಅದರ ಅನುಕೂಲತೆಯ ಮೂಲಕ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ತನ್ಮೂಲಕ ತಮ್ಮ ಅಧ್ಯಾತ್ಮಿಕ ಮತ್ತು ಜೀವನದ ಪರಿಸ್ಥಿತಿಗಳನ್ನು ಉನ್ನತಿ ಪಡಿಸಿಕೊಳ್ಳುವಂತೆ ಮತ್ತು ಸದ್ಯದ ಆರ್ಥಿಕ ಬಿಕ್ಕಟ್ಟನ್ನು ಸುಗಮವಾಗಿ ದಾಟಲು ಸಾಧ್ಯವಾಗುವಂತೆ ಎಲ್ಲಾ ಅವಶ್ಯಕ ವಸ್ತುಗಳ ಬೆಲೆಗಳನ್ನು ತಗ್ಗಿಸಲು ಪ್ರಯತ್ನ ಮಾಡಬೇಕಾಗಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವರವರು ಒಂದು ಸ್ಮರಣ ಪತ್ರಿಕೆಯೊಂದರಲ್ಲಿ ಹೃದ್ಪರ್ಶಿಯಾದ ಲೇಖನವನ್ನು ಬರೆದಿದ್ದಾರೆ. ಈ ಕಾರ್ಯಕ್ಕಾಗಿ ಕೊಂಗ್ರೆಸಿನ ರಾಜಕೀಯ ಮತ್ತು ಆರ್ಥಿಕ ಶಾಖೆಗಳೂ ಪ್ರಯತ್ನ ವೆಸಗುವುವೆಂದೂ ಹೇಳಲಾಗಿವೆ.

ಭಾರತದಲ್ಲಿ ಶಿಕ್ಷಣ ಪ್ರಚಾರ

ಅಮೇರಿಕನ್ ತಜ್ಞರ ಕೃತಿ

ಜಗತ್ತಿನ ಹಲವು ಕಡೆಗಳಲ್ಲಿ ಶೈಕ್ಷಣಿಕ ಪ್ರಚಾರಗಳನ್ನು ಮಾಡಿದ ಡಾ. ಫ್ರೆಂಕ್ ಲಾಬಾಕ್‌ರವರು ಈಚೆಗೆ ತಮ್ಮ ಅಸ್ಸಾಖಂಡದ ಸಂಚಾರ ಮುಗಿಸಿ ಅಮೇರಿಕಕ್ಕೆ ಹಿಂತಿರಿಗಿರುವರು. ಆಸ್ಸದ ಜನರು ತಮ್ಮ ಸಾಕ್ಷರತೆಯನ್ನುಹೋಗಲಾಡಿಸಲುಸರ್ಧಾರಬದ್ಧರಾಗಿರುವರೆಂಬ ಸಂಗತಿಯು ಅವರನ್ನು ಉತ್ಸಾಹಭರಿತರನ್ನಾಗಿ ಮಾಡಿದೆ. "ಆಸ್ಯಾ ದೇಶಗಳಲ್ಲೆಲ್ಲಾ ಭಾರತವು ತನ್ನ ಶೈಕ್ಷಣಿಕ ಕೊರತೆಯ ಕುರಿತು ತುಂಬಾ ಆಸಕ್ತಿ ವಹಿಸುತ್ತಿದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಶಿಕ್ಷಣ ಪ್ರಚಾರವು ಅತ್ಯವಶ್ಯವೆಂದು ಅಲ್ಲಿಯ ಜನರು ಮನಗಂಡಿರುವರು."

ಪ್ರಿವಿ ಕೌನ್ಸಿಲಿಗೆ ಗೋಡ್ಸೆ ವಕಾಲತು

ಸ್ವತಃ ವಾದಿಸುವನು

ಪ್ರಿವಿ ಕೌನ್ಸಿಲಿನ ಅಪೀಲು ವಿಚಾರಣೆಯಲ್ಲಿ ನಾಥುರಾಮ ಗೋಡ್ಸೆಗೆ ಸ್ವತಃ ವಾದಿಸಲು ಅನುಮತಿ ಈಯುವ ಸಂಭವವಿದೆಯೆಂದು ತಿಳಿದುಬರುತ್ತದೆ. ಹಿಂದೀ ನ್ಯಾಯಾಲಯಗಳ ಇತಿಹಾಸದಲ್ಲಿ ಒಬ್ಬ ನ್ಯಕ್ತಿಗೆ ಪ್ರಿವಿ ಕೌನ್ಸಿಲಿನೆದುರು ಸ್ವಯಂವಾದ ನಡೆಸಲು ಅನುಮತಿ ಪ್ರಸಂಗ ಇದೇ ಮೊದಲನೆಯದು.

ಲಂಡನಿನ ಗೋಡ್ಸೆ ನ್ಯಾಯ ಸಲಹಾ ಸಂಸ್ಥೆಯವರು ಅವನಿಗೆ ಈ ಕುರಿತು ವಿಶೇಷ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದೂ, ಅವನು ಒಳಸಂಚು ಪ್ರಕರಣದ ಸಂಬಂಧವಾಗಿ ವಾದಿಸುವನೆಂದೂ ಹೇಳಲಾಗಿದೆ. ಈ ಐತಿಹಾಸಿಕ ಕೊಲೆ ಅಪಾದನೆಯಲ್ಲಿ ಆರೋಪಿಯಾಗಿದ್ದು ಮರಣದಂಡನೆ ವಿಧಿಸಲ್ಪಟ್ಟವನಿಗೆ ಅವನ ಈ ಕೊನೆಯ ಇಚ್ಛೆಯನ್ನು ಸಲ್ಲಿಸಲಾಗುವುದೆಂದೂ ನಿರೀಕ್ಷಿಸಲಾಗಿದೆ. ಇದೀ ಜಗತ್ತಿನ ದೃಷ್ಟಿಯು ಇದರ ಇತ್ಯರ್ಥವನ್ನು ಆಸಕ್ತಿಯಿಂದ ಹಾರೈಸುತ್ತಿದೆ.

ಮಧ್ಯ ಪ್ರಾಂತ್ಯದ ಶಾಸನ ಸಭೆಯ ಭಾಷೆ

ಹಿಂದೀ ಮರಾಠಿಗಳಲ್ಲೇ ವ್ಯವಹಾರ

ಮಧ್ಯ ಪ್ರಾಂತ ಹಾಗೂ ವಂಹ್ಹಡ ಶಾಸನ ಸಭೆಯ ಶಾಖೆಯವರು ಶಾಸನ ಸಭೆಯ ಸದಸ್ಯರಿಗೆಲ್ಲಿ ಒಂದು ಪರಿವತ್ರ ಕಳುಹಿಸಿ ಶಾಸನ ಸಭೆಯಲ್ಲಿ ಹಿಂದೀ ಇಲ್ಲವೆ ಮರಾಠಿಯಲ್ಲಿಯೇ ಪ್ರಶ್ನೆಗಳನ್ನು ಕೇಳಬೇಕೆಂದೂ ಇಂಗ್ಲಿಷಿನಲ್ಲಿ ಪ್ರಶ್ನೆಗಳನ್ನು ಸ್ವೀಕರಿಸುವು ದಿಲ್ಲವೆಂದೂ ತಿಳಿಸಿದ್ದಾರೆ. ಅಲ್ಲಿನ 112 ಶಾಸನ ಸಭಾ ಸದಸ್ಯರಲ್ಲಿ 16 ಸಭಾಸದರಿಗೆ ಮಾತ್ರ ಪ್ರಾಂತದ ಎರಡೂ ಮನ್ನಣೆ ಹೊಂದಿದ ಭಾಷೆಗಳನ್ನೂ ಮಾತಾಡಲು ಬರುವದಿಲ್ಲೆಂದು ತಿಳಿದುಬರುತ್ತದೆ. ಇದು ತನಕಸದಸ್ಯರಿಗೆ ಅಲ್ಲಿ ಇಂಗ್ಲಿಷಿನಲ್ಲಿ ಪ್ರಶ್ನೆ ಕೇಳಲು ಅಧ್ಯಕ್ಷರು ಅವಕಾಶ ಕೊಡುತಿದ್ದರು.

ಕಮ್ಯುನಿಸ್ಟರ ನಿರ್ಬಂಧ ತೆಗೆಯಬೇಕು

ಸೋಶಲಿಸ್ಟ್ ದುರೀಣರ ಅಭಿಪ್ರಾಯ

ಕಲ್ಕತ್ತೆಯ ಸಾರ್ವಜನಿಕ ಭಾಷಣವೊಂದರಲ್ಲಿ ಸಮಾಜವಾದಿ ಪಕ್ಷದ ದುರೀಣ ಜಯ.ಪ್ರಕಾಶ ನಾರಾಯಣರು ತಮ್ಮ ಪಕ್ಷವು ಹಿಂಸಾ ಧೋರಣೆಯನ್ನು ನಿಷೇಧಿಸುತ್ತಿದೆಂದು ಸ್ಪಷ್ಟಪಡಿಸಿದರು. ಮತ್ತು ಅವರು ಹೀಗೆಂದರು: "ಇಂಥ ಕೃತಿಗಳಿಂದ ದೇಶಕ್ಕಾವ ಹಿತವೂ ಆಗದು. ಕಮ್ಯುನಿಸ್ಟ್ ಪಕ್ಷದ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿ ಬಹಿರಂಗವಾಗಿ ಕೆಲಸ ಮಾಡಲು ಅವರಿಗೆ ಸರಕಾರವು ಅವಕಾಶವನ್ನೊದಗಿಸಿಕೊಡಬೇಕು. ಆಗ ಆ ಪಕ್ಷದ ನರಿಂದ ತನಗೆ ಹಿತವಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಜನರಿಗೆ ಸಾಧ್ಯವಾಗುವುದು."

ಭಾರತಕ್ಕೆ ಸ್ಟೆಲಿನರ ಕುಂದುನುಡಿ

ಇನ್ನೂ ಗುಲಾಮ ದೇಶವೆಂದು ಭಾವನೆ

ಸ್ವಾತಂತ್ರ್ಯ ದಿನಾಚರಣೆ ಸಂಬಂಧ ರಷ್ಯದ ಸ್ಟೆಲೀನರು ಮುಖ್ಯ ಪ್ರಧಾನ ನಿಹರುಗಳಿಗೆ ಒಂದು ತಂತಿ ಕಳುಹಿಸಿ "ನಿಮ್ಮ ರಾಷ್ಟ್ರೀಯ ರಜಾದಿನದಂದು. . . . . " ಎಂದು ನಿರೂಪಿಸಿರುವರು. "ನಿಮ್ಮ ಸ್ವಾತಂತ್ರ್ಯ ದಿನಾಚರಣೆಯಂದು. . . . " ಎಂದವರು ಬರೆಯಲಿಲ್ಲ. ಇದು ಗಮನೀಯವಾದ ಸಂಗತಿಯೆನ್ನಲಾಗಿದೆ. ಮೊಸ್ಕೋ ರೇಡಿಯೊವು ಅದೇ ಧಾಟಿಯನ್ನನುಸರಿಸಿದೆ. ಆಗಸ್ಟ್ 15ರಂದು ಅದು ಹೀಗೆ ಸಾರಿತ್ತು:

"ಬ್ರಿಟನ್ನು ತನ್ನ ಸ್ವಂತ ಇಚ್ಛೆಯಿಂದ ಇನ್ನೂರು ವರ್ಷಗಳ ತನ್ನ ಒಡೆತನವನ್ನು ಭಿಟ್ಟಿದೆ ಎಂಬ ಲೇಬ್ಲರ್ ಮಂತ್ರಿಮಂಡಳದ ಮಾತುಗಳ ಪೊಳ್ಳುತನವನ್ನು ಕಳೆದು ಎರಡು ವರ್ಷಗಳ ಹಿಂದೆ ಹೊಸತಾಗಿ ಕಚ್ಚಿ ಸಲ್ಪಟ್ಟ ಸರಡು ಸಂಸ್ಥಾನಗಳದಾಖಲೆಯು ಸ್ಪಷ್ಟಪಡಿಸುತ್ತದೆ. ಆದಾಖಲೆಯು ಊಹನೇಗೆ ಬಿಟ್ಟಿರುತ್ತ

ಸ್ವದೇಶಾಭಿಮಾನಿ

ಕಾರೀಕು 2—9—1949

ಕಾಂಗ್ರೆಸಿಗರಿಗೆ ಪಂಡಿತ ನೆಹರುರವರ ಹಿತೋಕ್ತಿ

ಕಾನ್‌ಪುರದಲ್ಲಿ ಭಾಷಣ ಮಾಡುತ್ತ ಭಾರತದ ಪ್ರಧಾನ ಸಚಿವ ಪಂಡಿತ ಜವಾಹರಲಾಲರು ಕಾಂಗ್ರೆಸಿಗರು ತಮ್ಮ ಅಂತಃಕಲಹಗಳನ್ನು ನಿಲ್ಲಿಸುವಂತೆ ವಿನಂತಿ ಮಾಡಿಕೊಂಡರು. ಹಿಂದೆ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಕಾದಾಡುವಾಗ ಯಾವ ಬಗೆಯ ನಿಸ್ವಾರ್ಥ ಉತ್ಸಾಹ ಕಾಣುತ್ತಿತ್ತೊ ಅದೇ ಭಾವನೆಯಿಂದ ತಮ್ಮ ಸೇವೆ ಮುಂದುರಿಸುವ ಆವಶ್ಯಕತೆ ಒತ್ತಿ ಹೇಳಿದರು. ಅದೇ ಭಾವನೆಯಿಂದ ನಾವು ಕೆಲಸವನ್ನು ಮುಂದೆ ಸಾಗಿಸುವುದಿಲ್ಲವಾದರೆ ಜನರು ನಮ್ಮಲ್ಲಿ ವಿಶ್ವಾಸವಿಡಲಾರರೆಂದೇ ಎಚ್ಚರಿಕೆಯನ್ನು ಕೊಟ್ಟರು.

ಹಿಂದೆ ಕಾಂಗ್ರೆಸಿಗರು ಜನರ ಪ್ರೀತಿಯನ್ನು ಸಂಪಾದಿಸಿದ್ದಾರೆ. ಆದರೆ ಈ ಪ್ರೀತಿಯನ್ನು ಅವಲಂಬಿಸಿ ಹೆಚ್ಚು ಕಾಲ ಬದುಕುವುದು ಸಾಧ್ಯವಿಲ್ಲ. ಈಗ ಹೊಸ ತಲಾಂತರದವರು ಮುಂದೆ ಬರುತ್ತಿದ್ದಾರೆ. ಹಿಂದಿನ ಕಥೆಯೆಲ್ಲ ಓದಿ ತಿಳಿದಿರಬಹುದಲ್ಲದೆ ಇವರು ಕಾಂಗ್ರೆಸಿನ ಹಿಂದಿನ ಕೀರ್ತಿಗಿಂತ ಈಗಿನ ನಡತೆಯಿಂದಲೇ ಅದರ ಕುರಿತು ತಮ್ಮ ಅಭಿಪ್ರಾಯ ದೂರಿಸಿದರೆ ಅನ್ಯಾಯವಿಲ್ಲ ಮಾತ್ರವಲ್ಲ ಅದು ಸಹಜವೇ ಇರುತ್ತದೆ. ಎಂಬ ಅಭಿಪ್ರಾಯವನ್ನು ಪಂಡಿತಜೀಯವರು ವಿವರಿಸಿದರು.

ಕಾಂಗ್ರೆಸಿಗರ ವಿರುದ್ಧ ಈಗ ಹೇಳಲ್ಪಡುವುದರಲ್ಲಿ ತುಂಬಾ ಅತಿಶಯೋಕ್ತಿ ಇದೆಯೆಂದು ಪಂಡಿತಜೀಯವರು ಅಭಿಪ್ರಾಯ ಪಡುತ್ತಾರೆ. ಆದರೂ ಕೆಲವು ಮುಂದಿ ಸ್ವಾರ್ಥ ಸಾಧಕರದುಷ್ಕಾರ್ಯಗಳಿಂದಾಗಿ ಕಾಂಗ್ರೆಸಿನ ಹೆಸರು ಹಾಳಾಗುತ್ತಿದೆಯೆಂಬುದು ನಿಜವಿರುತ್ತದೆ. ಕಾಂಗ್ರೆಸಿನವರು ಅಧಿಕಾರ ಪಡೆದುದು ಕೆಲವು ಮುಂದಿಗೆ ಸಹಾಯ ಅಥವಾ ಆಶ್ರಯ ಒದಗಿಸಲಿಕ್ಕಲ್ಲ; ಈ ದೇಶದಲ್ಲಿ ಶತಮಾನಗಳಿಂದ ದುಃಖ ಕ್ಲೇಶಾಡಾಗಿರುವ ಸಾಮಾನ್ಯ ಪ್ರಜಾ ಜನರ ಮೇಲ್ಮೆಗಾಗಿ ಎಂಬುದನ್ನು ಕಾಂಗ್ರೆಸಿಗರಿಂದಿಗೂ ಮರೆಯಲಾಗದು.

ಪಶ್ಚಿಮ ಬಂಗಾಳ ಮಂತ್ರಿಗಳ ಮೇಲೆ ಹೊರಸಿದ ಆರೋಪಗಳನ್ನು ಕುರಿತು ಪಂಡಿತಜೀಯವರು ಸ್ವತಃ ಪರಿಶೀಲಿಸಿದರು. ಈ ಆರೋಪಗಳಲ್ಲಿ ಹೆಚ್ಚಿನದಕ್ಕೆ ಯಾವ ಆಧಾರವೂ ಇಲ್ಲವೆಂದು ಅವರಿಗೆ ಕಂಡು ಬಂದಿರುತ್ತದೆ. ಆದರೂ ಮುಂದಾಳುಗಳು ಆರೋಪಗಳ ವಿಚಾರಣೆಗಳಲ್ಲಿ ನಿರ್ದೋಷಿಗಳೆಂದು ನಿರ್ಣಯವಾದರೆ ಸಾಲದು. ಇಂಥ ಆರೋಪಗಳಿಗೆ ಒಳಗಾಗದಂತೆ ಜಾಗರೂಕರಿರಬೇಕು.

ಕಾಂಗ್ರೆಸಿಗರು ತಮ್ಮ ಸಂಸ್ಥೆಯನ್ನು [illegible] ಕೆಂದೂ ಇಲ್ಲದಿದ್ದರೆ ಈ ಸಂಸ್ಥೆ ಉಳಿಯಲಾರದೆಂದೂ ಪಂಡಿತಜೀಯವರು ಹೇಳಿದ ಎಚ್ಚರಿಕೆಯ ಮಾತನ್ನು ಮನಸ್ಸಿಗೆ ತೆಗೆದುಕೊಳ್ಳಬೇಕು.

ಕಾನ್‌ಪುರದಲ್ಲಿಯೇ ಇನ್ನೊಂದೆಡೆ ಮಾತನಾಡುತ್ತ ಪಂಡಿತಜೀಯವರು ಕಾಂಗ್ರೆಸ್ ಸರಕಾರಗಳು ಎಷ್ಟೇ ವರ್ಷಗಳ ಅಲ್ಪ ಅವಧಿಯಲ್ಲಿ ಮಹತ್ಕಾರ್ಯಗಳನ್ನು ಸಾಧಿಸಿರುವೆಂದು ಪ್ರಶಂಸೆಯನ್ನು ಮಾಡಿದರು ಜಗತ್ತಿನ ಯಾವ ಸರಕಾರದವರೂ ಇಷ್ಟು ಪ್ರಗತಿ ಸಾಧಿಸುವಂತಿರಲಿಲ್ಲವೆಂದರು.

ಕಾಂಗ್ರೆಸಿಗರ ಮೇಲೆ ನಾನಾ ಟೀಕೆ ಮಾಡುತ್ತಾರೆ. ಆದರೆ ಇವರು ವಿಧಾಯಕ ಸೂಚನೆ ಒಂದೂ ಕೊಡಲಾರರು. ಈ ಬಗೆಯ ಟೀಕೆ ನಿಷ್ಫಲವೆಂದರು.

ಕಮ್ಯೂನಿಸ್ಟರ ಕುರಿತು ಮಾತನಾಡುತ್ತ ಇವರು ಹಿಂಸಾತ್ಮಕ ದಾರಿ ಹಿಡಿದರೆ ದೇಶದ ಅಧಃಪತನ ಖಂಡಿತವೆಂದರು.

ಆರ್. ಎಸ್. ಎಸ್. ಕುರಿತು ಹೇಳುತ್ತ ಈ ಸಂಸ್ಥೆ ಸಂಕುಚಿತ ಮನೋವೃತ್ತಿಯನ್ನು ಪ್ರೇರೇಪಿಸುತ್ತಿದೆಯೆಂದೂ ಹಿಂದೂ ಸಂಸ್ಕೃತಿಯ ಹೆಸರಲ್ಲಿ ತದ್ವಿಪರೀತ ಆಚರಣೆ ಬೋಧಿಸುತ್ತಿದೆಯೆಂದೂ ಪಂಡಿತ ನೆಹರೂರವರು ತಮ್ಮ ಅಭಿಪ್ರಾಯ ಹೇಳಿದರು.

ದೇಶದ ಪರಿಸ್ಥಿತಿಯನ್ನು ಕುರಿತು ಮಾತನಾಡುತ್ತ ಇನ್ನು ಪರಕೀಯ ಧಾಳಿಗಳಿಗೆ ನಾವು ಹೆದರುವ ಆವಶ್ಯಕತೆ ಇಲ್ಲವೆಂಬುದನ್ನು ಸ್ಪಷ್ಟಪಡಿಸಿದರು. ದೇಶದ ಒಳಗಿನ ದೌರ್ಬಲ್ಯವೇ ನಿಜವಾದ ಯೋಚನೆಯನ್ನುಂಡುಮಾಡುತ್ತಿದೆ. ಮುಖ್ಯವಾಗಿ ಆರ್ಥಿಕ ದೌರ್ಬಲ್ಯ ಹೋಗಲಾಡಿಸುವುದು ಅಗತ್ಯವೆಂದರು.

ದೇಶಪಲ್ಲಿ ಸಾಕಷ್ಟು ಆಹಾರ ಇತ್ಯಾದಿ ಇರುವಲ್ಲಿ ತನಕ ಕಂಟ್ರೋಲುಗಳನ್ನು ತೆಗೆಯುವುದು ಸಾಧ್ಯವಿಲ್ಲವೆಂದರು. ಎಲ್ಲರೂ ಸೇರಿ ಉತ್ಪತ್ತಿ ಹೆಚ್ಚಿಸುವುದು ಎಲ್ಲಕ್ಕೂ ಮುಖ್ಯ ಕಾರ್ಯವೆಂದರು.

ಈ ಭಾಷಣಗಳಲ್ಲಿ ನಮ್ಮ ಪ್ರಧಾನ ಸಚಿವರು ಕಾಂಗ್ರೆಸಿಗರಿಗೂ ದೇಶದ ಪ್ರಜೆಗಳಿಗೂ ಉದ್ದೇಶಿಸಿ ಹೇಳಿದ ಮಾತುಗಳ ಕಡೆಗೆ ಎಲ್ಲರೂ ಗಮನ ಕೊಡುವರೆಂದು ನಿರೀಕ್ಷಿಸುತ್ತೇವೆ.

ಸೋಷಿಯಲಿಸ್ಟ್ ಪಾರ್ಟಿಗೆ ಎಂ. ಡಿ. ಅಧಿಕಾರಿಗಳ ರಾಜೀನಾಮೆ

೧೯೪೨ರ ಸ್ವಾತಂತ್ರ್ಯ ಚಳವಳಿಯ ಆರಂಭದಲ್ಲಿ ಜಿಲ್ಲೆಯಲ್ಲಿ ಪ್ರಮುಖ ಭಾಗವಹಿಸಿ, ಹೆಚ್ಚಿನ ತ್ಯಾಗ ಮಾಡಿದ ಮತ್ತು ಅನಂತರವೂ ಕೆಲ ವರ್ಷ ಅವಿಶ್ರಾಂತವಾಗಿ ಮಡಿದು ಕಾಂಗ್ರೆಸ್ ಕೆಲಸನಾಡಿ ಕೊಂಡು ಬಂದಿದ್ದ ಶ್ರೀ ಎಂ. ಡಿ. ಅಧಿಕಾರಿಗಳು, ಕಾಂಗ್ರೆಸಿನ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸೋಷಿಯಲಿಸ್ಟ್ ಪಾರ್ಟಿಗೆ ಸೇರಿದರಷ್ಟೆ. ಈ ಸಲದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿರೋಧವಾಗಿ ನಿಂತು ಪ್ರತಿಸ್ಪರ್ಧಿಸಲು ಶ್ರೀ ಅಧಿಕಾರಿಗಳನ್ನು ಪಾರ್ಟಿಯವರು ಒತ್ತಾಯವಡಿಸಿದರೆಂದೂ, ಆದರೆ ಅವರು ಆದ ಕೂಡಲೆ ಸೋಷಿಯಲಿಸ್ಟ್ ಪಾರ್ಟಿಗೇನೇ ರಾಜೀನಾಮೆಯಿತ್ತು, ಅಜೀಕಾರ್ ಸರ್ಕಾರಿನ ಕಾಂಗ್ರೆಸ್ ಉಮೇದ್ವಾರರಿಗೆ ತನ್ನ ಬೆಂಬಲ

ಟೀಕೆ-ಟಿಪ್ಪಣಿಗಳು

ನ್ಯೂಯಾರ್ಕಿನಲ್ಲಿ ವರ್ಣ ದ್ವೇಷ

ಪೊಲ್ಲ್ ರೋಬಸನ್ ಎಂಬವನು ನೀಗ್ರೊ ಜಾತಿಯ ಸಂಗೀತಗಾರ; ಈತನು ಒಂದು ಸಂಗೀತ ಕಚೇರಿ ನಡೆಸುವ ಏರ್ಪಾಡಾಗಿತ್ತು. ಇದೇ ಆಗೋಸ್ತು ೫ಕ್ಕೂ, ೨೪ರಂದು ಈ ಕಚೇರಿ ಕಡೆಗಟ್ಟಲು ಯುದ್ಧದಿಂದ ಮರಳಿ ಬಂದ ಹಲವು ಬಿಳಿಯ ಜನರ ತಂಡವೊಂದು ನಿರ್ಧರಿಸಿತು.

ಕಚೇರಿ ನಡೆಯುವ ಒಂದು ಗಂಟೆಗೆ ಮುಂಚಿತವಾಗಿಯೇ ಐದು ಸಾವಿರಕ್ಕೆ ಮಿಕ್ಕಿದ ಜನಸ್ತೋಮ ಕಲ್ಲು ಎಸೆಯುವುದು, ದೊಣ್ಣೆ ಮೊದಲಾದ ಆಯುಧಗಳಿಂದ ಹೊಡೆಯುವುದು ಇತ್ಯಾದಿ ಉಪಟಳ ಆರಂಭಿಸಿದರು. ಗಾಯ ಗೊಂಡವರಿಗೂ ಹೊಡೆಯುತ್ತಿದ್ದರು. ಕಚೇರಿ ನಡೆಯಲಿದ್ದ ಸ್ಥಳಕ್ಕೆ ಬೆಂಕಿ ಹಚ್ಚಲಾಯಿತು, ಕುರ್ಚಿ ನೊದಲಾದವು ಸುಟ್ಟು ಭಸ್ಮವಾದವು. ಅನೇಕ ಮೋಟರುಗಳನ್ನು ಮಗಚಿ ಹಾಕಲಾಯಿತು.

ರೋಬಸನ್ನನಿಗೆ ಮುಂಜಾಗ್ರತೆ ಕೊಟ್ಟುದರಿಂದ ಅವನು ಹತ್ತಿರಕ್ಕೆ ಬರಲೇ ಇಲ್ಲ. ಈ ಬಗೆಯ ಘಟನೆಯ ದೇಲೆ ಬೇರೆ ಟೀಕೆಯ ಅಗತ್ಯನೇ ಇಲ್ಲವಷ್ಟೆ?

ಯುಗೋಸ್ಲಾವಿಯಾ

ಯುಗೋಸ್ಲಾವಿಯಾದ ಮಾರ್ಷಲ್ ಟೀಟೊ ಕಮ್ಯೂನಿಸ್ಟನಾದರೂ ಮೊಸ್ಕೋ ಹೇಳಿದಂತೆ ಕೇಳಲು ನಿರಾಕರಿಸಿದನು. ಈಗ ರಸ್ಯಾ ಇವನಿಗೆ ಬುದ್ಧಿ ಕಲಿಸಲು ಹೊರಟಂತೆ ಕಂಡುಬರುತ್ತದೆ. ಟೀಟೊವನ್ನು ಕೊಂದವರಿಗೆ ಒಂದು ಮಿಲಿಯ ಡಾಲರು ಬಹುಮಾನ ಕೊಡುವುದಾಗಿ ಚಾಜೀರು ನಾಡಿರುವರೆಂದು ಲಂಡನಿನ ಪೀನಲ್ ಎಂಬ ಪತ್ರಿಕೆ ಹೇಳುತ್ತದೆ. ಟೀಟೊ ಒಂದು ದ್ವೀಪದಲ್ಲಿ ಭದ್ರತೆಯ ಏರ್ಪಾಡುಗಳನ್ನು ಮಾಡಿ ವಾಸಿಸುತ್ತಿದ್ದಾನಂತೆ.

ಯುಗೋಸ್ಲಾವಿಯಾದ ಗಡಿಯಲ್ಲಿ ರಶ್ಯದ ಸೈನ್ಯಗಳು ಶೇಖರಿಸಲ್ಪಡುತ್ತಿವೆಯೆಂದೂ ಹೇಳಲಾಗುತ್ತಿದೆ. ಇದು ಎಷ್ಟು ಸತ್ಯವೆಂದು ಗೊತ್ತಿಲ್ಲ. ಅಂತೂ ರಸ್ಯಾದ ಪ್ರಚಾರ ಖಾತೆಯವರು ಟೀಟೊವಿನ ವಿರುದ್ಧ ಬಹಳ ಪ್ರಬಲ ಪ್ರಚಾರ ಕೈಕೊಂಡಿದೆಯೆಂಬುದೇನೋ ನಿಜ.

ಅಂತೂ ಇನ್ನು ಸ್ವಲ್ಪ ಸಮಯದಲ್ಲೆ ರಸ್ಯಾ ಯುಗೋಸ್ಲಾವಿಯದ ಮೇಲೆ ಬೀಳಬಹುದು. ಬಿದ್ದರೆ ಪಾಶ್ಚಾತ್ಯ ರಾಷ್ಟ್ರಗಳು ಸುಮ್ಮನೆ ನೋಡಿ ಕುಳಿತುಕೊಳ್ಳುವರೆ? ಅಥವಾ ಇದೇ ಲೋಕ ಶಾಂತಿಯ ಭಂಗಕ್ಕೆ ಕಾರಣವಾಗಬಹುದೆ?

ನಮ್ಮ ಜಿಲ್ಲಾ ಬೋರ್ಡಿನ ಆಡಳಿತೆಯ ವರದಿ

ದ. ಕ. ಜಿಲ್ಲಾ ಬೋರ್ಡಿನ ಆಡಳಿತೆಯ ವರದಿ ಈಗ ತಾನೇ ಪ್ರಕಟವಾಗಿರುತ್ತದೆ. ಇದು ೧೯೪೮-೪೯ರ ವರದಿ. ಈಗ ಎರಡು ವರ್ಷಗಳಿಂದ ಬೋರ್ಡಿನ ಆಡಳಿತೆ ಜಿಲ್ಲಾ ಕಲೆಕ್ಟರು ಸ್ಪೆಶಲ್ ಆಫೀಸರರಾಗಿ ನಡೆಸುತ್ತಿದ್ದರು. ಈಗ ಬೋರ್ಡಿಗೆ ಹೊಸ [illegible] ಸ್ಪೆಶಲ್ ಆಫೀಸರರ ಆಡಳಿತೆಯ ಕೊನೆಯ ವರೆಗಿ ಇರಬಹುದು.

ಈ ವರದಿಯಲ್ಲಿ ಬೋರ್ಡಿನ ಕೈಕೆಳಗಿರುವ ರಸ್ತೆಗಳು, ವಿದ್ಯಾಖಾತೆ, ಪ್ರಾಥಮಿಕ ಹಾಗೂ ಸೆಕಂಡರಿ ಶಾಲೆಗಳು, ಆರೋಗ್ಯ ಖಾತೆ, ಹಣಕಾಸಿನ ವಿಚಾರ ಇತ್ಯಾದಿ ಎಲ್ಲ ವಿಷಯಗಳಿಗೆ ಬಹಳ ಚೆನ್ನಾಗಿ ಮಾಹಿತಿ ಲಭಿಸಲಾಗಿದೆ. ಜಿಲ್ಲಾ ಬೋರ್ಡಿಗೆ ಹೊಸತಾಗಿ ಮೆಂಬರರಾಗಿ ಬರುವವರು ಈ ವರದಿಯ ಒಂದು ಪ್ರತಿಯನ್ನು ಪಡೆದು ಇದರಲ್ಲಿ ಮಾಹಿತಿ ಕಲಿತರೆ ಮುಂದೆ ತಾವು ಮಾಡಬೇಕಾದ ಕೆಲಸದ ಅಭಿಪ್ರಾಯ ಮಾಡಿಕೊಳ್ಳಲು ಬಹಳ ಅನುಕೂಲವಾಗುವುದು.

ಈ ವರದಿಯ ಕೊನೆಯಲ್ಲಿ ಸ್ಪೆಶಲ್ ಆಫೀಸರರು ತಮ್ಮ ವರ್ಷನಲ್ ಎಸ್ಸೆಂಟ್ ರಾಗಿ ದುಡಿದ ಶ್ರೀ ಎಮ್. ಸುಂದರ ರಾಯರನ್ನು ಚೆನ್ನಾಗಿ ಪ್ರಶಂಸಿಸಿರುತ್ತಾರೆ. ಶ್ರೀ ಸುಂದರರಾಯರು ಈ ಎರಡು ವರ್ಷಗಳ ಆಡಳಿತೆ ನಡೆಸಿದ ಅಧಿಕಾರಿಗಳಲ್ಲಿ ಮುಖ್ಯಸ್ಥರಿದ್ದು ತಮ್ಮ ಕೆಲಸವನ್ನು ಬಹಳ ಚೆನ್ನಾಗಿ ನಿರ್ವಹಿಸಿರುವರೆಂಬ ಬಗ್ಗೆ ಸಂಶಯವಿಲ್ಲ. ಆದುದರಿಂದ ಸ್ಪೆಶಲ್ ಆಫೀಸರರು ಇವರಿಗೆ ಕೊಟ್ಟಿರುವ ಪ್ರಶಂಸೆಗೆ ಇವರುಪಾತ್ರರೇ ಇರುವರೆಂದು ನಾವೂ ಹೇಳಬಲ್ಲೆವು.

ಚರಖಾ ಜಯಂತಿ ಮಹೋತ್ಸವ (19-9-49ರಿಂದ 2-10-49ರವರೆಗೆ)

ಪೂಜ್ಯ ಗಾಂಧೀಜಿಯವರ ಅಪೇಕ್ಷೆ ಮೇರೆಗೆ ಹಿಂದೆ ಆಚರಣೆಯಲ್ಲಿದ್ದ ಗಾಂಧಿ ಜಯಂತಿಯು ಇನ್ನು ಮುಂದೆ "ಚರಖಾ ಜಯಂತಿ" ಎಂದು ಆಚರಿಸಲ್ಪಡುವುದು. ಅಖಿಲ ಭಾರತ ಚರಖಾ ಸಂಘದವರು ಜಯಂತಿಯನ್ನು ನೂಲುವ ಮಂತ್ರ ಸ್ಥಾಪನೆ- ನಸ್ಯ ಸ್ವಾವಲಂಬನೆ, ಸಾಮೂಹಿಕ ಸೂತ್ರಯಜ್ಞ ಇತ್ಯಾದಿಗಳಿಂದ ಆಚರಿಸಲು ಕಾರ್ಯಕ್ರಮ ಸಿದ್ಧಗೊಳಿಸಿರುತ್ತಾರೆ. ನಮ್ಮ ಜಿಲ್ಲೆಯಲ್ಲಿಯೂ ಜಯಂತಿಯನ್ನು ಯಶಸ್ವಿಯಾಗಿ ಆಚರಿಸಲು ದ. ಕ. ಗ್ರಾಮ ಕೈಗಾರಿಕಾ ಸಂಘದವರು ಈ ಕೆಳಗಿನ ಕಾರ್ಯಕ್ರಮವನ್ನು ಕೈಕೊಳ್ಳಲು ನಿರ್ಧರಿಸಿದ್ದಾರೆ.

ಕಾರ್ಯಕ್ರಮಃ 1. ಖಾದಿ ಹುಂಡಿಗಳ ನಾಂಗಾಟ. 2. ನೂಲುವ ಮತ್ತು ಹಿಂಜುವ ಯಜ್ಞಗಳು. 3. ಸನಾಜದಲ್ಲಿ ನೆಲೆಗೊಂಡ ವಿಷಮತೆಯನ್ನು ಕಿತ್ತೊಗೆಯಲು ಪ್ರಚಾರ ಸಭೆಗಳು. 4. ಸಮಗ್ರಗ್ರಾಮ ಸೇವಾ ಯೋಜನೆಯು ಪ್ರಚಾರ ಕಾರ್ಯ. 5. ಸ್ವಾವಲಂಭೀ ನೂಲುವನರ ಮತ್ತು ಸತತ ಖಾದೀ ದಾರಿಗಳ ಪಟ್ಟಿ ತಯಾರಿಸುವುದು.

ನೂಲಿನ ಪರತ್ವಿನ ಸಂಬಂಧ ಖಾದಿ ಧಾರಿಗಳಿಗೆ ಇದ್ದ ಅಡಚಣೆಯನ್ನು ಹೋಗಲಾಡಿಸಿ, ಖಾದಿ ಬೇಕಾದವರಿಗೆ ಒದಗಿಸುವ ವ್ಯವಸ್ಥೆಯನ್ನು ಸಂಸ್ಥೆದವರು ಮಾಡಿರುತ್ತಾರೆ. ಖಾದಿ ಹುಂಡಿಗಳನ್ನು ಸರ್ವರೂ ಕೊಂಡುಕೊಂಡು ಖಾದೀ ಪ್ರಚಾರ ಕಾರ್ಯಕ್ಕೆ ಪ್ರೋತ್ಸಾಹ ಕೊಡಬೇಕಾಗಿ ವಿನಂತಿ. ಇದರಿಂದ ಖಾದಿ ಕಾರ್ಯವು ಜಿಲ್ಲೆಯಲ್ಲಿ ವಿಸ್ತಾರಹೊಂದಲು ಅವಕಾಶ ಉಂಟಾಗುವುದು. ಹೀಗೆಂದು ಮೇಲ್ಕಂಡ [illegible]

ದ. ಕ. ಜಿಲ್ಲಾ ಬೋರ್ಡು ಚುನಾವಣೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಬರುವ ಸಪ್ಟಂಬರ ತಾ. 26ಕ್ಕೆ ನಡೆಯಲಿರುವ ಚುನಾವಣೆಗಳ ಬಗ್ಗೆ ನಾಮನೇಶನ್ ಹಾಕಿ ಸ್ಪರ್ಧಿಸುವ ಉಮೇದ್ವಾರರ ನಾಮಪತಿ ಈ ಕೆಳಗೆ ಕೊಡಲಾಗಿದೆ:-

ಸ್ಪರ್ಧೆ ಇಲ್ಲದೆ ಆರಿಸಲ್ಪಡುವ ಉಮೇದ್ವಾರರು

ಕುಂದಾಪುರ ತಾಲೂಕು

ಶ್ರೀ. ಬಿ. ಮಂಜಯ್ಯ ಹೆಗ್ಗಡೆ (ಬಸ್ರೂರು), ಕೊಳ್ಕೆಬೈಲು ಸೂರಪ್ಪ ಶೆಟ್ಟಿ (ನಂದ್ರಿ), ಯಿಡ್ಡಾರೆ ಮಂಜಯ್ಯ ಶೆಟ್ಟಿ (ಬೈಂದೂರು), ಶ್ರೀಮತಿ ಪ್ರಫುಲ್ಲಾ ಎಸ್. ಆರ್. ಹೆಗ್ಡೆ (ಕುಂದಾಪುರ ಸ್ತ್ರೀಯರ ಸ್ಥಾನ.)

ಉಡುಪಿ ತಾಲೂಕು

ಶ್ರೀ ಡಾ. ಯು. ಹೆಗ್ಡೆ (ಹಿರಿಯಡ್ಕ), ಡಾ. ಯು. ಶೇಷರಾವ್ (ಕಟ್ಪಾಡಿ), ಮಾರ್ಟಿಸ್ ಗ್ರೆಗರಿ ನಾಡದೆತ್ (ಕಟ್ಪಾಡಿ ಕ್ರಿಶ್ಚಿಯನ್ ಸ್ಥಾನ), ಶ್ರೀಮತಿ ಗಿರಿಜಾ ಹೆಗ್ಡಡ್ತಿ (ಕೊಡವೂರು ಸ್ತ್ರೀಯರ ಸ್ಥಾನ).

ಕಾರ್ಕಳ ತಾಲೂಕು

ಶ್ರೀ. ಮುಂದ್ರಾಡಿ ಕೃಷ್ಣಯ್ಯ ಶೆಟ್ಟಿ (ಅಜೆಕಾರು), ಧರ್ಣಪ್ಪ ಅಧಿಕಾರಿ (ವೇಣೂರು).

ಮಂಗಳೂರು ತಾಲೂಕು

ಶ್ರೀ ಡಾ। ಎಸ್. ಚಂಪ (ಮೂಲ್ಕಿ) ಡಾ. ಕೆ. ನಾಗಪ್ಪ ಆಳ್ವ (ಪಾಣೆಮಂಗಳೂರು), ಡೆನಿಸ್ ಪಿಂಟೊ (ನುಂಗಳೂರು ಕ್ರಿಶ್ಚಿಯನ್ ರಿಜರ್ವ್ಡ್), ಜೆ. ಎನ್. ಎ. ಹೊಬ್ಸ್ (ಯುರೋಪಿಯನ್ ರಿಜರ್ವ್ಡ್), ಯು ಅಬ್ದುಲ್ ಖಾದರ್ (ಕೋಟೆಕಾರು ಮುಸ್ಲಿಮ್ ರಿಜರ್ವ್ಡ್)

ಪುತ್ತೂರು ತಾಲೂಕು

ಶ್ರೀ. ಡಿ. ಪುಟ್ಟುಸ್ವಾಮಿ (ಬೆಳ್ತಂಗಡಿ), ಡಾ. ಕೆ. ಬಿ. ಶೆಟ್ಟಿ (ಉಪ್ಪಿನಂಗಡಿ), ಕೆ. ವೆಂಕಟ್ರಮಣ ಗೌಡ (ಸುಳ್ಯ), ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ (ಪುತ್ತೂರು ಸ್ತ್ರೀಯರ ಸ್ಥಾನ).

ಕಾಸರಗೋಡು ತಾಲೂಕು

ಶ್ರೀ ತ್ಯಾಂಪಣ್ಣ ಶೆಟ್ಟಿ (ಮಂಜೇಶ್ವರ).

ಮೇಲೆ ಕಾಣಿಸಿದ ಸ್ಥಾನಗಳಲ್ಲದೆ ಇನ್ನೂ ಒಂದೆರಡು ಕಡೆ ಕೆಲವುಮಂದಿ ಉಮೇದ್ವಾರರು ಹಿಂತೆಗೆದರಬಹುದಾದರೂ ಆ ವಾರ್ತೆ ನಮಗಿದನ್ನು ಬರೆವಾಗ ಅಧಿಕೃತವಾಗಿ ಮುಟ್ಟಿಲ್ಲ. ಮೇಲೆ ಹೆಸರಿಸಿದವರಲ್ಲಿ ಯುರೋಪಿಯನ್ ಸ್ಥಾನದವರು ಸ್ವತಂತ್ರ ಉಮೇದ್ವಾರರು. ಮಂಜೇಶ್ವರ ಸರ್ಕಲಿನ ವರೊಸ್ವತಂತ್ರ ಉಮೇದ್ವಾರರು. ಆದರೆ ಇವರು ಕಾಂಗ್ರೆಸ್ ಪಕ್ಷಕ್ಕೆ ಸೇರುವುದಾಗಿ ಮಾತುಕೊಟ್ಟಿರುವರಂತೆ. ಉಳಿದವರೆಲ್ಲರೂ ಕಾಂಗ್ರೆಸ್ ಪಕ್ಷದ ಉಮೇದ್ವಾರರು.

ಬ್ರಹ್ಮಾವರ ಸರ್ಕಲಿಗೆ ನಾಮನೇಶನ್ ಹಾಕಿದ ಇಬ್ಬರು ಉಮೇದ್ವಾರರೂ ಹಿಂತೆಗೆದು ಇಲ್ಲಿ ಚುನಾವಣೆಯ ನೋಟೀಸನ್ನು ಪುನಃ ಕೊಡಬೇಕಾಗಿ ಬಂದಿದೆ.

ಮುಳಿಯಾರು ಸರ್ಕಲಿಗೆ ನಾಮನೇಶನ್ ಹಾಕಿದ ಶ್ರೀ. ಬಿ. ವಿ. ಕಕ್ಕಿಲ್ಲಾಯ ಮತ್ತು ಕುಂಞಂಬು ಎಂಬ ಕಮ್ಯೂನಿಸ್ಟ ಸ್ನೇಹಿತರು ಸ್ಪರ್ಧೆಯಿಂದ ಹಿಂತೆಗೆದಿರುವುದರಿಂದ ಅಲ್ಲಿ ಕಾಂಗ್ರೆಸ್ ಪಕ್ಷದ ಶ್ರೀ. ಕೆ. ಕೃಷ್ಣ ಶೆಟ್ಟಿ ಅವರು ಸ್ಪರ್ಧೆಯಿಲ್ಲದೆ ಆರಿಸಲ್ಪಡುವರು.

ಸ್ವೀಕಾರ ಮತ್ತು ವಿಮರ್ಶೆ

ಪುಳಿನಾಪುರ ಮಹಾತ್ಮೆ

ಲೇಖಕ ಹಾಗೂ ಪ್ರಕಾಶಕ:-ಎನ್. ಎ. ಶೀನಪ್ಪ ಹೆಗ್ಡೆ-ಪೊಳಲಿ. ಬೆಲೆ 2-8-0.

ಪುಳಿನಾಪುರನೆಂದರೆ ಪೊಳಲಿಯ ಶ್ರೀ ರಾಜರಾಜೇಶ್ವರೀ ಕ್ಷೇತ್ರ. ಈ ಗ್ರಂಥದಲ್ಲಿ ಇಲ್ಲಿಯ ಸ್ಥಳಪುರಾಣಸಾರ, ಮಹಿಮಾಸಾರ .ಮತ್ತು ಚರಿತ್ರೆಸಾರವೆಂಬುದಾಗಿ ಮೂರು ಭಾಗಗಳಿವೆ.

ಶ್ರೀ ಶೀನಪ್ಪ ಹೆಗ್ಡೆಯವರು ಈ ಮೊದಲು ಬರೆದು ಪ್ರಕಟಿಸಿದ "ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ" ಅಥವಾ "ಭೂತಾಳ ಪಾಂಡ್ಯರಾಯನ ಆಳಿಯ ಕಟ್ಟು" ಎಂಬ ಪ್ರಸಿದ್ಧ ಪುಸ್ತಕದಿಂದ ಓದುಗರಲ್ಲಿ ಅನೇಕರಿಗೆ ಪರಿಚಿತರೇ ಇದ್ದಾರೆ.

ಪೊಳಲಿ ಪ್ರಸಿದ್ಧವಾದ ಪ್ರಾಚೀನ ಪುಣ್ಯಕ್ಷೇತ್ರ. ಇಲ್ಲಿಯ ಸ್ಥಳ ಪುರಾಣ ಸಹಜವಾಗಿ ಆಕರ್ಷಕವಾಗಿರುತ್ತದೆ. ಬರೆದವರಾದರೂ ಸ್ಥಳೀಯರೆಂದಿಗರೇ ಇರುವರು ಮಾತ್ರವಲ್ಲ ಈ ಬಗೆಯ ಬರವಣಿಗೆಯ ಮಾಹಿತಿ ಇದ್ದವರು. ಸಾಹಿತ್ಯ ಪ್ರೇಮಿಗಳೂ ಶ್ರದ್ಧಾವಂತರೂ ಮೆಚ್ಚುವ ಬಗೆಯ ಗ್ರಂಥವೆಂದು ಹೇಳಲು ಅಡ್ಡಿ ಇಲ್ಲ.

ಉದ್ಧಾರಃ ಬರೆದವ - ತಿರುಕ, ಪ್ರಕಾಶಕರು - ಅನಾಥ ಸೇವಾಶ್ರಮ, ಮಳ್ಳಾತಿ ಹಳ್ಳಿ ಪೋಸ್ಟು - ಹೊಳಲ್ಕೆರೆ ತಾಲೂಕು. ಬೆಲೆ 1-8-0.

ಈ ಉತ್ತಮ ಲೇಖಕರ ಕರ್ಮಯೋಗೀ ಎಂಬ ಗ್ರಂಥವನ್ನು ಈ ಮೊದಲು ಪರಿಶೀಲಿಸಿದ್ದೆವು. ಉದ್ಧಾರವೂ ಅದೇ ಬಗೆಯ ಉತ್ತಮ ನಾಟಕ. ಕುರಡು ಸಮಾಜದ ಕಟ್ಟುಗೊಳಗಾಗಿ ಶಾಸ್ತ್ರದ ಸೆರೆಯಲ್ಲಿ ಮೌನದಿಂದ ನೊಂದು ಕಣ್ಣೀರಿಡುತ್ತಿರುವ ಅಕ್ಕ ತಂಗಿಯರಿಗೆ ಇದನ್ನು ಸಮರ್ಪಿಸಲಾಗಿದೆ ಎಂಬುದರಿಂದಲೇ ಈ ಗ್ರಂಥದ ವಿಷಯ ಸ್ಪಷ್ಟವಾಗುತ್ತದೆ. ಈ ನಾಟಕವನ್ನು ರಂಗ ಭೂಮಿಯಲ್ಲಿ ಉತ್ತಮವಾಗಿ ಆಡಲು ಅನುಕೂಲವಾಗುವಂತೆ ಬರೆಯಲಾಗಿದೆ. ಹಾಡುಗಳೂ ಮನೋಹರವಾಗಿವೆ. ವಾತ್ಸರಚನೆ, ಕಥಾ ಸಂವಿಧಾನ ಎಲ್ಲವೂ ಉತ್ಕೃಷ್ಟವಾಗಿಯೇ ಇವೆ. ಭಾಷೆ ಮಾತಾಡುವಂತೆ ಬರೆಯಲ್ಪಟ್ಟಿರುವುದರಿಂದ ಓದುಗರಿಗೆ ಸ್ವಲ್ಪ ರಗಳೆಯಾದರೂ ರಂಗಭೂಮಿಯವರಿಗೆ ಹೆಚ್ಚು ಅನುಕೂಲ.

ಮಾಯೂವೀ (ಪತ್ತೆದಾರಿ ಕಾದಂಬರಿ) ಪರಿವರ್ತನಕಾರರು - ಎಂ. ವೆಂಕಟಾದ್ರಿ ಶಾಸ್ತ್ರಿಗಳು. ಪ್ರಕಾಶಕರು - ಸಾಹಿತ್ಯ ಕುಟೀರ, ನಂ 27 ಸಿ ಬೀದಿ ಕೋಟೆ, ಬೆಂಗಳೂರು ಸಿಟಿ. ಬೆಲೆ ರೂ. 3-4-0.

ಇದು ಶ್ರೀ ಪಾಂಡೆಕೊರಿದೇ ಮಹಾಶಯರು ಬಂಗಾಲಿ ಭಾಷೆಯಲ್ಲಿ ಬರೆದ ಒಂದು ಪತ್ತೆದಾರಿ ಕಥೆಯ ಕನ್ನಡ ಪರಿವರ್ತನೆ. ಈ ಗ್ರಂಥದ ಮೂಲ ಲೇಖಕರು ದಿವಂಗತ ಬಿ. ವೆಂಕಟಾಚಾರ್ಯರಿಂದ ಕನ್ನಡಿಸಲ್ಪಟ್ಟ ಪರಿಮಳಾ ಮತ್ತು ಮನೋರಮಾ ಗ್ರಂಥಗಳನ್ನು ಬರೆದವರು.

ಶ್ರೀ ಎಂ. ವೆಂಕಟಾದ್ರಿ ಶಾಸ್ತ್ರಿಯವರು ಒಳ್ಳೆಯ ಪಳಗಿದ ಲೇಖಕರೆಂದು ಅವರ ಭಾಷಾ ಶೈಲಿ ಹೇಳುತ್ತಿದೆ. ತಮ್ಮ ಕಾರ್ಯವನ್ನು ಅವರು ಯಶಸ್ವಿಯಾಗಿ ಪೂರೈಸಿದ್ದಾರೆ. 310 ಪುಟಗಳ ಈ ಕಾದಂಬರಿ ಇಂಥ ಗ್ರಂಥಗಳಲ್ಲಿ ಆಸಕ್ತಿ ಇದ್ದವರಿಗೆ ಒಂದು ಹಬ್ಬದೂಟವನ್ನೇ ಒದಗಿಸುತ್ತಿದೆ.

ಪುಷ್ಪಲತಾ: ಲೇಖಕರು - ಬಿ. ವಿ. ವೆಂಕಟೇಶಯ್ಯ - ಬಿ. ಎ. ಎಂ. ಬಿ. ಬಿ. ಎಸ್. ಪ್ರಕಾಶಕರು - ಸಾಹಿತ್ಯಕುಟೀರ, ಬೆಂಗಳೂರು. ಬೆಲೆ ಸಾದಾ ರೂ. 2-8-0 ಉತ್ತಮ ಪ್ರತಿ 3-0-0.

ಫ್ರೆಂಚ್ ಗ್ರಂಥಕಾರರಲ್ಲಿ ಪ್ರಸಿದ್ಧಿ ಹೊಂದಿದ ಅಲೆಗ್ಸಾಂಡರ್ ಡ್ಯೂಮಸ್ ಎಂಬಾತನ ಪ್ರಖ್ಯಾತ ಗ್ರಂಥಗಳಲ್ಲಿ ಒಂದಾದ "ದಿ ಬ್ಲ್ಯಾಕ್ ಟ್ಯೂಲಿಪ್" ಎಂಬುದರ ಅನುವಾದವಿದು.

ಈ ಲೇಖಕರು ವಿದೇಶ್ಯ ಗ್ರಂಥಕರ್ತರ ಕೃತಿಗಳನ್ನು ಅನುವಾದಿಸಿ ಕನ್ನಡಿಗರಿಗೆ ಒದಗಿಸಲು ಯತ್ನಿಸುತ್ತಿರುವವರಲ್ಲಿ ಒಬ್ಬರು: ಈ ಬಗೆಯ ಪ್ರಯತ್ನ ಇನ್ನೂ ಹೆಚ್ಚು ಆಗತ್ಯವುಂಟು. ನಮ್ಮ ಸಾಹಿತ್ಯ ಇದರಿಂದ ತುಂಬಾ ಅಭಿವೃದ್ಧಿಯಾಗಿತೀರು.

ಈ ಗ್ರಂಥದಲ್ಲಿಯ ಕಥೆ ಒಳ್ಳೆ ಸ್ವಾರಸ್ಯವಾಗಿದೆ. ಕಥೆಯನ್ನು ಓದತೊಡಗಿದರೆ ಅದು ಮುಗಿಯುವವರೆಗೆ ತನಕ ಗ್ರಂಥವನ್ನು ಕೈಯಿಂದ ಬಿಡುವಂತಿಲ್ಲ.

ಪರಿವರ್ತನಕಾರರು ತಮ್ಮ ಕಾರ್ಯವನ್ನಾಗಿ ಮಾಡಿದ್ದಾರೆ 283 ಪುಟಗಳಿವೆ.

ಮಹಾಪುರುಷಃ ಲೇಖಕರು—ಎನ್. ಎಸ್. ನಾರಾಯಣ ಶಾಸ್ತ್ರೀ. ಪ್ರಕಾಶಕರು-ಎಸ್. ಎಸ್. ಎಸ್. ಪುಸ್ತಕ ಪ್ರಕಟನಾಲಯ ಬೆಂಗಳೂರು-ಬೆಲೆ ೨-೪-೦.

ಸುಪ್ರಸಿದ್ಧ ಫ್ರೆಂಚ್ ಸಾಹಿತಿ ವಿಕ್ಟರ್ ಹ್ಯೂಗೋಪಿನ "ಲೇಮಿಸರಬಲ್ಸ್" ಎಂಬ ಜಗತ್ಪ್ರಸಿದ್ಧ ಗ್ರಂಥವನ್ನು ಅನುಲಂಬಿಸಿ ಬರೆದ ಗ್ರಂಥವಿದು.

ಬರೆದವರಾದಕೊ ಡಾ। ಎನ್. ಎಸ್. ನಾರಾಯಣ ಶಾಸ್ತ್ರೀ ಎಂ. ಎ. ಡಿ. ಲಿಟ್. ಇವರು ಮೈಸೂರು ವಿಶ್ವ ವಿದ್ಯಾನಿಲಯದ ಮನಶ್ಶಾಸ್ತ್ರಧ್ಯಾಪಕರು.

ಪಾಶ್ಚಾತ್ಯ ಗ್ರಂಥಗಳನ್ನು ಕನ್ನಡಿಗರಿಗೆ ಕೊಡುವಾಗ ಕಥೆಯನ್ನು ಇಲ್ಲಿಯ ಸಮಾಜಕ್ಕೆ ಹೊಂದಿಸಿ ರೂಪಾಂತರಿಸಿ ಕೊಡಬೇಕೂ ಇದ್ದಕ್ಕಿದ್ದಂತೆ ಕೊಡಬೇಕೂ ಎಂಬ ದೊಂದು ಪ್ರಶ್ನೆ. ಈ ಲೇಖಕರು ಕಥೆಯನ್ನು ಇದ್ದಕ್ಕಿದ್ದಂತೆ ಸಂಗ್ರಹಿಸಿ ಕೊಟ್ಟಿದ್ದಾರೆ. ಇದೇ ಉತ್ತಮ ದಾರಿಯೆಂದು ನಮಗೂ ಅನ್ನಿಸುತ್ತಿದೆ.

ಈ ಗ್ರಂಥದ ಭಾಷಾಶೈಲಿ ಉತ್ತಮ ಶೈಲಿಗೆ ಸೇರಿದ್ದು ಈ ಗ್ರಂಥವನ್ನು ಸಾಹಿತ್ಯ ಪ್ರೇಮಿಗಳೆಲ್ಲರೂ ಅವಶ್ಯ ಸಂಗ್ರಹಿಸಬೇಕು.

ಶಿಕ್ಷಣ ಕಕ್ಷ ದರ್ಶನಃ ಲೇಖಕರು—ಡಾ। ಎಂ. ಸಿದ್ಧಲಿಂಗಯ್ಯ ಎಂ. ಎ., ಬಿ. ಟಿ., ಸಿ. ಎಡ್. ಡಿ. (ಕೊಲಂಬಿಯ) "ಡೈರೆಕ್ಟರ್ ಆಫ್ ರೂರಲ್ ಎಜುಕೇಶನ್" ಡಿಪ್ಲೊಮ ಪ್ರಿನ್ಸಿಪಾಲ್, ಟೀಚರ್ಸ್ ಕಾಲೇಜ್, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಎನ್. ಎಸ್. ವೀರಪ್ಪ, ಬಿ. ಎಸ್. ಸಿ. (ಆನರ್ಸ್), ಬಿ. ಟಿ. ಮೈಸೂರು ಶಿಕ್ಷಣ ಶಾಖೆ. ಪುಸ್ತಕಶಕರು-ಎಸ್. ಎಸ್. ಎನ್. ಪುಸ್ತಕ ಪ್ರಕಟನಾಲಯ, ಬೆಂಗಳೂರು ನಗರ-ಬೆಲೆ ರೂ. 8—0—0.

ನಮ್ಮ ಶಿಕ್ಷಣ ರಂಗವನ್ನು ಪುನರ್ರಚಿಸುವಾಗ ಪಾಶ್ಚಾತ್ಯರು ಸಂಶೋಧಿಸಿ ಅರಿತು ಕೊಂಡಿರುವ ಸತ್ಯಾಂಶಗಳನ್ನು ನಾವೂ ಉಪಯೋಗಿಸಿಕೊಳ್ಳುವುದು ಅಹಿತವಲ್ಲ, ಅಗತ್ಯವೆಂಬ ಲೇಖಕರ ಅಭಿಪ್ರಾಯ ಸರಿಯಾದುದು.

ಕರ್ನಾಟಕದ ಎಲ್ಲಾ ಶಾಖಾ ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮ ಕನ್ನಡವಾಗುವ ದಿನ ಈಗ ದೂರವಿಲ್ಲ. ಇದಕ್ಕೆ ಪೂರ್ವ ಭಾವಿಯಾಗಿ ಎಲ್ಲ ಪಠ್ಯ ವಿಷಯಗಳ ಸ್ಥೂಲ ಅವಶ್ಯವೆನಿಸುವ ಗ್ರಂಥಗಳು ಕನ್ನಡದಲ್ಲಿ ಅವರ್ಭವಿಸಬೇಕೆಂಬ ಆವಶ್ಯಕತೆಯನ್ನು ಲೇಖಕರು ಮುಂದಾಗಿ ಸೂಚಿಸಿದ್ದಾರೆ.

ಈ ಗ್ರಂಥವಂತೂ ಶಿಕ್ಷಣ ಶಾಸ್ತ್ರವನ್ನು ಕುರಿತು ಬರೆಯಲಾಗಿದೆ. ಇಂಥ ಗ್ರಂಥಗಳು ಇಂಗ್ಲಿಷು ಮೊದಲಾದ ಭಾಷೆಗಳಲ್ಲಿ ತುಂಬಾ ಇವೆ. ಆದರೆ ಕನ್ನಡದಲ್ಲಿ ಬಹಳ ಕಡಿಮೆ.

ಶಿಕ್ಷಣ ಶಾಸ್ತ್ರದ ವಿದ್ಯಾರ್ಥಿಗಳಿಗೆ ಉಪಾಧ್ಯಾಯ ವರ್ಗಕ್ಕೆ ಮತ್ತು ವಿದ್ಯಾ ಸಂಸ್ಥೆಗಳ ಪೋಷಕರಿಗೆ ಅತ್ಯುಪಯುಕ್ತ ವಾಪ್ತ ಗ್ರಂಥವಿದು.

ಮುಂದೆ ನಾಡಿನ ಶಿಕ್ಷಣ ರಂಗಕ್ಕನು ಕೂಲಿಸುವ ಇತರ ವಿಷಯಗಳನ್ನು ಕುರಿತ ಪ್ರೌಢ ಶಾಸ್ತ್ರೀಯ ಗ್ರಂಥಗಳು ಕನ್ನಡದಲ್ಲಿ ಬೇಗ ರೂಪುಗೊಳ್ಳಲೆಂದು ಈ ಗ್ರಂಥದ ಲೇಖಕರು ಹಾರೈಸಿದ್ದಾರೆ-ನಾವೂ ಇದನ್ನೇ ಹಾರೈಸುತ್ತೇವೆ.

ದ. ಕ. ಜಿಲ್ಲಾ ಪಂಡಿತ ಸಂಘದ

ವಾರ್ಷಿಕ ಮಹಾಸಭೆಯು ದಿನಾಂಕ ೨೧ರಂದು ಶ್ರೀ। ಸೇದಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳ ಸ್ವಾಗತ, ವರದಿ ವಾಚನಗಳಾದ ಮೇಲೆ ಆಸ್ಥಾನ ಕವಿ ಎಂ. ಗೋವಿಂದ ಸೈಗಳನ್ನು ಅಭಿನಂದಿಸುವ ಮತ್ತು ಬಿ. ಓ. ಎಲ್. ಆಗಿ ಬಿ. ಟಿ. ತರಬೇತಿಯಾದವರು ಬಿ. ಟಿ.ಯಲ್ಲಿ ತಜ್ಞತೆ ಪಡೆದ ವಿಷಯಗಳನ್ನು ಕಲಿಸಲು ಯಾವರೀತಿಯ ಅರ್ಹತಾಂಕ ವಿರಬೇಕೆಂಬುದೇ ಮುಂತಾದ ಠರಾವುಗಳಾದವು. ಕೊನೆಗೆ ಕಳೆದ ವರ್ಷದ ಕಾರ್ಯ ಸಮಿತಿಯೇ ಮುಂದಿನ ವರ್ಷಕ್ಕೂ ಇರಬೇಕೆಂಬ ನಿರ್ಣಯವಾಯಿತು.

ಕಮ್ಯುನಿಸ್ಟರಿಗೆ ದಂಡನೆ

ಸ್ವಾತಂತ್ರ್ಯ ದಿನಾಚರಣೆಯಂದು ಮುಂಜಾನೆ ೬-೩೦ಕ್ಕೆ ಮೈದಾನಿನ ಬಳಿ ಸುಮಾರು ಮೂವತ್ತು ಕಮ್ಯುನಿಸ್ಟ್ ಕೆಲಸಗಾರರು ಒಂದು ಮೆರವಣಿಗೆ ಮಾಡಿ ಕಾಂಗ್ರೆಸ್ ವಿರುದ್ಧ ಮತ್ತು ಸರಕಾರವನ್ನು ಖಂಡಿಸುವ ಘೋಷಣೆ ಮಾಡುತ್ತಾ ಗಲಭೆ ಎಬ್ಬಿಸುವದಕ್ಕಾಗಿ ಪೋಲೀಸರಿಂದ ಲಘು ಶಾಖಿ ಚಾರ್ಜಿಗೊಳಗಾಗಿ ಮತ್ತೆ ಹದಿನಾಲ್ಕು ಮಂದಿಗಳು ಬಂಧಿಸಲ್ಪಟ್ಟಿದ್ದರು. ಶೌನ್ ನುಸೆನ್ಸ್ ಕಾಯಿದೆಯಂತೆ ಸಬ್ ಮಿಜಿಸ್ಟ್ರೇಟರ ಮುಂದೆ ಇವರ ವಿಚಾರಣೆ ಆಗಿ ಪ್ರತಿಯೊಬ್ಬನಿಗೆ ತಲಾ ರೂ. ೧೦ ರಂತೆ ಜುಲ್ಮಾನೆಯಾಗಿದೆ.

ಲಾರಿ ಅಪಘಾತ

ಕಳೆದ ಸ್ವಾತಂತ್ರ್ಯದಿನದಂದು ಸಾಯಂಕಾಲ ಸುಮಾರು ೫ ಘಂಟೆಗೆ ಕಂಕನಾಡಿ ಗೇಟಿನ ಬಳಿಯಲ್ಲಿ ಒರ್ವ ೬ ವರ್ಷದ ಬಾಲಕಿ ಸಿ. ಪಿ. ಸಿ. ಕಂಪೆನಿಯ ಒಂದು ಲಾರಿ ಅಡಿಯಲ್ಲಿ ಬಿದ್ದು, ಆಸ್ಪತ್ರೆಗೆ ಸಾಗಿ ಕೆಲವು ಕಾಲ ಮೃತಪಟ್ಟಳೆಂದು ತಿಳಿದುಬರುತ್ತದೆ. ಡ್ರೈವರ್ ಸೋಮಪ್ಪ ಎಂಬವರನ್ನು ಈ ಸಂಬಂಧ ಬಂಧಿಸಿ ಜಾಮೀನಿನ ಮೇಲೆ ಬಿಡಲಾಗಿದೆ.

ಸ್ವಾತಂತ್ರ್ಯದಿನದಂದು ಸಾವಿರಾರು ಮಕ್ಕಳು ಲಾರಿಯಲ್ಲಿ ಕುಳಿತುಕೊಳ್ಳಲು ಪ್ರಯತ್ನ ಪಡುವುದೂ, ಹದಿಮೂರಿ ತುಂಬಿ ಸಲ್ಪಡುವುದೂ, ಅಪಾಯಕಾರಕ ಸ್ಥಳದಲ್ಲಿ ಕುಳಿತು ಹೋಗುವುದೂ, ಚಲಿಸುವ ವಾಹನಗಳನ್ನು ಹತ್ತಲು ಪ್ರಯತ್ನ ಮಾಡುವುದೂ ಗಮನಕ್ಕೆ ಬಂದಿರುತ್ತದೆ. ಅಪಾಯವನ್ನು ತರುವ ಇಂತಹ ಮಿತಿಮೀರಿದ ಉತ್ಸಾಹದ ಕುರಿತು ಎಲ್ಲರೂ ಎಚ್ಚರಿಕೆ ವಹಿಸುವುದು ಅವಶ್ಯವಿದೆ.

ಮಹಾತ್ಮಾ ಸೇವಾ ಸಂಘ ಜಪ್ಪು

ಮೇಲ್ಕಂಡ ಸಂಘದ ಆಶ್ರಯದಲ್ಲಿ ಸಮಿತಿ ದಿನಾಚರಣೆಯು ಈಚೆಗೆ ಜಪ್ಪಿನ ಮೊಗ್ರು ಗ್ರಾಮದ ತಾರ್ದುಳ್ಳ ಗಂಗಯ್ಯ ಶೆಟ್ಟಿ ಅಧ್ಯಕ್ಷತೆಯಿಂದ ಆಚರಿಸಲ್ಪಟ್ಟಿತು. ಈ ದಿನ ಸೇರಿದ ಸಾರ್ವಜನಿಕ ಸಭೆಯಲ್ಲಿ ಡಾ। ವಾಮನ ಕೊಡಿಯಾಲ್‌ಬೈಲ್ ಇವರು ಸಮಿತಿ ನಡುವ ಉದ್ದೇಶದ ಕುರಿತು ಭಾಷಣ ಮಾಡಿದರು. ಅನಂತರ ಗ್ರಾಮದಲ್ಲಿ ಮೆರವಣಿಗೆ ಹೊರಟು ಅನೇಕ ಜಾತಿಯ ಸಮಿತಿಗಳನ್ನು ಯೋಗ್ಯ ಕೃಷಿಕರಿಗೆ ಧರ್ಮಾರ್ಥ ಹಂಚಿದ್ದಲ್ಲದೆ ಮಕ್ಕಳಿಗೆ ಮಿಠಾಯಿ ಕೂಡಾ ಹಂಚಲಾಯಿತು.

ನಾನಾ ವಿಧದ ಅಪಾದನೆಗಳಿಗೆ ದಂಡನೆ

ಪಡೀಲಿನ ಎಸ್. ಕೆ. ಸಿ. ಸಿ. ದಬ್ಬ್ಲ್ಯು ರೈಲು ಮೂರಾಟದ ದಿಪೋದ ಮೂಟೆ ವೈನೇಜರ್ ಬೆಂಜಮಿನ್ ಪಿಂಟೋ ಎಂಬವರು ಕಳೆದ ವರ್ಷದ ಮಾರ್ಚ್ ತಿಂಗಳಲ್ಲಿ ಪೋಲೀಸಿಗೆ ಒಂದು ಸುಳ್ಳು ಫಿರ್ಯಾದಿ ಕೊಟ್ಟರೆಂಬ ಆರೋಪಕ್ಕೆ ರೂ. ೧೦೦ ಜುಲ್ಮಾನೆ ವಿಧಿಸಲ್ಪಟ್ಟಿದ್ದಾರೆ. ಅಮಲು ಪೋರತನಕ್ಕಾಗಿ ಬಂದರದ ಕುರಿಯನ್ ತೋಟ ಗ್ರಾಮದ ದೇವು ಪಡಕೋಡಿ ಗ್ರೆಗರಿ ಸೋಜ ಇವರಲ್ಲಿ ಪ್ರತಿಯೊಬ್ಬರಿಗೆ ರೂ. ೫೦ ಜುಲ್ಮಾನೆ. ಹಾಲಿನ ಪಾತ್ರೆಗಳಿಗೆ ಕಲಾಯಿ ಮುಚ್ಚಳಗಳಿರಲಿಲ್ಲವೆಂದು ಕುಡುಪಿನ ಮುತ್ತಪ್ಪನಿಗೆ ರೂ. ೫೫ ಜುಲ್ಮಾನೆ.

ಉಳ್ಳಾಲದ ಇದ್ದಿನಬ್ಬ ಬ್ಯಾರಿ ಜನಾರ್ಧನ ಆಚಾರಿಯ ಅಂಗಡಿಯ ಬೀಗ ಮುರಿದು ಒಂದು ಕೊಡಲಿ ಕಳ್ಳನೆಂದು ೨ ತಿಂಗಳ ಕ. ಸಜೆ; ಅಳತೆ ತೂಕಗಳಲ್ಲಿ ಹೆಚ್ಚು ಕಡಿಮೆ ಇತ್ಯೆಂದು ಬನ್ನಾಡಿನ ನಾಗಪ್ಪ ಪೂಜಾರಿಗೆ ರೂ. ೨೦ ಜುಲ್ಮಾನೆ, ಗುದ್ದು ಗುದ್ದು ಆಟದ ಈ ಜುಗಾರಿನ ಸಂಬಂಧ ಮಂಗಳೂರಿನ ಅಮ್ಮದ್ ಬಾವನಿಗೆ ರೂ. ೨೦೦ ಜುಲ್ಮಾನೆ ವಿಧಿಸಲಾಗಿದೆ.

ಎಂ. ವಿ. ಶಾಸ್ತ್ರಿಗಳ ನಿಧನ

ನಮ್ಮ ಜಿಲ್ಲೆಯ ಪ್ರಖ್ಯಾತಿವೆತ್ತ ಆಯುರ್ವೇದ ವೈದ್ಯರಲ್ಲಿ ಒಬ್ಬರಾದ ಆಯುರ್ವೇದ ಭೂಷಣ ಡಾ। ಎಂ. ವಿ. ಶಾಸ್ತ್ರಿಗಳು ಕಳೆದ ತಿಂಗಳ ತಾ. ೨೨ರಂದು ಹೃದಯ ಸ್ತಂಭನದಿಂದ ದಿನಂಗೆತರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಇವರು ಕಾಶಿಯಲ್ಲಿ ಸಂಸ್ಕೃತ ಅಭ್ಯಾಸ ನೂಡಿದ್ದರು. ವಂಡಿತ್, ಡಿ. ಗೋಪಾಲಾ ಚಾರ್ಲು ಅವರ ಕೈಕೆಳಗೆ ಆಯುರ್ವೇದ ಶಾಸ್ತ್ರವನ್ನು ಕಲಿತಿದ್ದರು. ತಮ್ಮ ವೈದ್ಯ ಉದ್ಯೋಗದಲ್ಲಿ ಗಣನೀಯ ಕೀರ್ತಿಯನ್ನು ವಿಶ್ವಾಸವನ್ನು ಪಡೆದಿದ್ದರು. ರೋಗ ನಿರೀಕ್ಷೆಯಲ್ಲಿ ಇವರು ತಜ್ಞರೆಕೊಂಡಿದ್ದರು. ಸಾಹಿತ್ಯದಲ್ಲೂ ತುಂಬಾ ಅಭಿರುಚಿಯುಳ್ಳವರಾಗಿದ್ದರು. ಇವರಿಗೆ ಏಳು ಪುತ್ರರೂ ಏಳು ಪುತ್ರಿಯರೂ ಇದ್ದಾರೆ. ದಿವಂಗತರ ನಿಧನದಿಂದ ಕೋಕಿತವಾದ ಅವರ ವಿಶಾಲ ಕುಟುಂಬಕ್ಕೆ ಸಹಾನುಭೂತಿಯನ್ನೂ ಅವರ ಆತ್ಮಕ್ಕೆ ಶಾಂತಿಯನ್ನೂ ಕೋರುವೆವು.

ಉಮೇದ್ವಾರಿಕೆಯ ಹಿಂತೆಗೆತ

ಕಾಂಗ್ರೆಸ್ ನಾಮಕರಣದ ಶ್ರೀ ಇರ್ಮಾಡಿ ಆನಂದ ಸೆಟ್ಟರ ಉಮೇದುವಾರಿಕೆಯನ್ನು ಆ ಬ್ರಹ್ಮಾವರ ಸರ್ಕಲಿನ ಮತದಾರರು ಒಪ್ಪದೆ ಹೋದದರಿಂದ ಶ್ರೀ ಸೆಟ್ಟರು ಕಾಂಗ್ರೆಸ್ (ಜಿಲ್ಲಾ) ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟರ ಅನುಮತಿಯೊಡನೆ ತಮ್ಮ ಉಮೇದುವಾರಿಕೆಯನ್ನು ಹಿಂದೆಗೆದರೆಂದೂ, ತತ್ಪರಿಣಾಮವಾಗಿ ಅಲ್ಲಿ ಪ್ರತ್ಯೇಕವೊಂದು ಉಪಚುನಾವಣೆ ನಡೆಯಲಿದೆಯೆಂದೂ ತಿಳಿದು ಬರುತ್ತದೆ.

ಚೌತಿ ಉತ್ಸವ ಸಮಾಪ್ತಿ

ರಥಬೀದಿಯ ಶ್ರೀ ಗೋಕರ್ಣ ಮಂಡಲದಲ್ಲಿ ವರ್ತಗಾಳಿ ಮಠದ ಶ್ರೀ ಸ್ವಾಮಿ ವರ್ಯರ ನೇತೃತ್ವದಲ್ಲಿ ಐದು ದಿನಗಳ ತನಕ ಪೂಜಿಸಲ್ಪಟ್ಟ ಶ್ರೀ ಗಣಪತಿ ದೇವರ ವಿಗ್ರಹವನ್ನು ಕಳೆದ ತಾ. ೩೧ರಂದು ಸಾರ್ವಜನಿಕ ಮೆರವಣಿಕೆಯ ಉತ್ಸವಾನಂತರ ಇಲ್ಲಿಯ ಮಾಮ್ಮೊಯಿ ದೇವಸ್ಥಾನದ ಕೆರೆಯಲ್ಲಿ ವಿಸರ್ಜಿಸಲಾಯಿತು.

ಮಂಗಳೂರು--ಪ್ರಬುದ್ಧ ಬಂದರವಾಗಿ

1 ಮರ್ಮಗೋವಾ ಮತ್ತು ಕೊಚ್ಚಿ ಬಂದರುಗಳ ನಡುಮಧ್ಯಂತರದಲ್ಲಿ ಮಂಗಳೂರು ಬಂದರು ನೆಲೆಸಿರುತ್ತದೆ.

2 ಈ ಮೂರು ಬಂದರುಗಳಲ್ಲಿ ಮಂಗಳೂರಿನ ಜನಸಂಖ್ಯೆಯೇ ಹೆಚ್ಚಿನ ದಾಗಿರುತ್ತದೆ.

3 ಮರ್ಮಗೋವೆಯ ದಕ್ಷಿಣದಲ್ಲಿಯೂ, ಕೊಚ್ಚಿಯ ಉತ್ತರದಲ್ಲಿಯೂ ಇರುವ ಎಲ್ಲಾ ಬಂದರುಗಳಿಂತಲೂ ಮಂಗಳೂರಿಗೆ ಇಂಡಿಯದ ಇತರ ಭಾಗಗಳೊಡನೆ ಉತ್ತಮ ವ್ಯವಹಾರ ಸೌಕರ್ಯಗಳಿವೆ.

4 ಮೈಸೂರು ಸಂಸ್ಥಾನಕ್ಕೆ ಮಂಗಳೂರೇ ನೈಸರ್ಗಿಕ ಸಮುದ್ರ ಮುಖವಾಗಬಲ್ಲುದು.

5 ಮಂಗಳೂರು ವ್ಯಾಪಾರ, ಉದ್ಯಮ, ಮತ್ತು ಸಂಸ್ಕೃತಿಗಳಲ್ಲಿ ಅತಿಶಯವಾದ ಪ್ರಗತಿಯನ್ನು ಹೊಂದಿದೆ.

ಎಲ್ಲಾ ದೃಷ್ಟಿಕೋನಗಳಿಂದ ಪರ್ಯಾಲೋಚಿಸಿದರೆ ಮಂಗಳೂರೇ ಪ್ರಬುದ್ಧ ಬಂದರವಾಗಲು ಯೋಗ್ಯವೆಂದು ನಮಗನಿಸುತ್ತದೆ.
ಹಿಂದುಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ಸದಾ ಸೇವೆ ಗೈಯುತ್ತಿರುವ.

ಕೆನರಾ ಬೇಂಕ್, ಲಿಮಿಟೆಡ್.

ಇವರಿಂದ ಪ್ರಕಟಿಸಲ್ಪಟ್ಟಿದ್ದು.

CANARA BANK LIMITED.
Estd: 1906

ಸಹಿಸುದ್ದಿ ಸಂಗ್ರಹ

ಹೊಲಿವುಡ್ ತಾರೆಗಳ ಮೌಲ್ಯ ಈಗಿಗ್ಗೆ ಕಡಿಮೆಯಾಗ್ತಾ ಹತ್ತಿದೆ. ಹಿಂದೆ 200 ಸಾವಿರ ಡಾಲರುಗಳನ್ನಿದ್ದ ಕೆಲಸ ಮಾಡುತ್ತಿರುವ ಚಲ್ಲಚಿತ್ರ ನಟಿಯರೀಗ 75 ಸಾವಿರ ಡಾಲರುಗಳಿಗೆ ತುಂಬಾ ಸಂತೋಷದಲ್ಲಿ ಸಿಗುತ್ತಿದ್ದಾರೆ!

✠

ಸರಕಾರಿ ಕೆಲಸದ ಸಂಬಂಧ ಸಂಚಾರ ಮಾಡುತ್ತಿರುವಾಗ ಪಶ್ಚಿಮ ಬಂಗಾಲದ ಮಂತ್ರಿಗಳಾರೂ ಆಪ್ತೇಷ್ಟರ/ಅಭಿಮಾನಿಗಳಿಂದ ಸತ್ಕಾರವನ್ನು ಸ್ವೀಕರಿಸಕೂಡದೆಂದು ಆಜ್ಞಾಪಿಸಿದ್ದಾರೆ.

✠

ಸಂಯುಕ್ತ ಅಮೇರಿಕದ ಸೈಂಟ್ ಲೂಯಿಸ್ ನಗರದ ಔಷಧಿ ತಯಾರಕ ಸಂಸ್ಥೆಯವರ ಒಂದು ಜಾಹಿರಾತು ಹೀಗಿತ್ತು: "ಮದ್ದು ಮಾರಾಟಕಾರರು ಬೇಕಾಗಿದ್ದಾರೆ; ಅವರು ತಜ್ಞ ಮೋಟಾರ್ ಚಾಲಕರೂ, ನುರಿತ ಮಾತಾಳಿಗಳೂ, ಅನುಭವಸ್ಥ ಸುಳ್ಳುಹೇಳುವವರೂ, ಚತುರ ಬೇಟೆಗಾರರೂ, ನಿಪುಣ ನಾಟ್ಯಗಾರರೂ, ದೀರ್ಘ ಸಂಚಾರಕರೂ, ಅಭಿರುಚಿಯ ಇಸ್ತ್ರೀಟ್ ಆಟಗಾರರೂ, ತುಂಬಾ ಬಂಡ ವಾಳವಿದ್ದವರೂ ಆಗಿರಬೇಕು ಮೂತ್ರವಿದ್ಯೆ ಅವರು ಹಸ್ತ ಸಾಮುದ್ರಿಕ ಶಾಸ್ತ್ರ, ರಸಾಯನಿಕ ಶಾಸ್ತ್ರ, ಮತ್ತು ಶರೀರ ಶಾಸ್ತ್ರವನ್ನೂ ಬಲ್ಲವರು ಆಗಿರಬೇಕು." ಈ ಕೆಲಸಕ್ಕೆ 83 ಜನರ ಅರ್ಜಿಗಳೂ ಬಂದಿದ್ದುವಂತೆ.

✠

ಪಶ್ಚಿಮ ಜರ್ಮನಿಯಿಂದ ರಶ್ಯನ್ ವಿಭಾಗದ ಪೂರ್ವ ಜರ್ಮನಿಯೊಳಗೆ ಬ್ಯಾಬಲ್ ಗ್ರಂಥಗಳ ಕಟ್ಟುಗಳನ್ನು ಒಯ್ಯುತ್ತಿದ್ದ ಒಂದು ವಾಹನವನ್ನು ರಶ್ಯನ್ ಗಡಿ ಅಧಿಕಾರಿಗಳು ಹಿಂದಕ್ಕೆ ಕಳುಹಿಸಿದರು. ಅವರ ಅಭಿಪ್ರಾಯದಲ್ಲಿ ಬ್ಯಾಬಲ್ಲು "ಪ್ರಚಾರ ಸಾಹಿತ್ಯ"ವೆಂದಿದೆ.

✠

ಆಸ್ಟ್ರೇಲಿಯದ ಬಂಗಾರ ಗಣಿಗಳ ಪ್ರದೇಶವಾದ ಇಸಾ ಎಂಬಲ್ಲಿಂದ ಬ್ರಿಸ್‌ಬೇನ್ ನಗರದ ಆಸ್ಪತ್ರೆಗೆ 94 ವರ್ಷದ ಮುದುಕ ನೊಬ್ಬನನ್ನು ತರಲಾಯಿತು. ಅವನ ಕಾಲೊಂದು ಮುರಿದುಹೋಗಿತ್ತು. ಅದೇ ಸಮಯದಲ್ಲಿ ಮುದುಕನ ಕೌಟುಂಬಿಕ ಇತಿಹಾಸ ತುಸು ತಿಳಿಯಿತು. ಅವನು 20 ಮಕ್ಕಳ ತಂದೆ. ಅವನ ಚೇಷ್ಟೆ ಮಗುವಿಗೆ 70 ವರ್ಷ ಪ್ರಾಯ! ಕಿರಿಯ ಕೂಸಿಗೆ 3 ವರ್ಷ – ಇದು ಎರಡನೆ ಹೆಂಡತಿಯಲ್ಲಿ ಹುಟ್ಟಿದ್ದು.

✠

ಮಧ್ಯ ಆಸ್ಯದ ಕಜಾಕಸ್ತೆಂಬ ಸಂಚಾರಿ ನಂಗದ ಜನರ ಸಾಮಾಜಿಕ ನೀತಿಗನುಸಾರವಾಗಿ ಕೊಲೆಯು ಆಷ್ಟೊಂದು ಕಠೋರ ಕೃತ್ಯವಲ್ಲ. ಒಬ್ಬ ಕಜಾಕ್ ಕೊಲೆ ಮಾಡಿದಕ್ಕೆ ಈ ಕೃತ್ಯದಲ್ಲಿ ಶಿಕ್ಷೆ ವಿಧಿಸಲಾಗುವುದು: ತನ್ನ ಹೆಂಡತಿಯಲ್ಲದ ಒಬ್ಬ ಹೆಂಗಸನ್ನು ಕೊಂದರೆ 100 ಕುದುರೆಗಳ ಜುಲ್ಮಾನೆ; 10 ವರ್ಷ ಕೆಳಗಿನ ಮಕ್ಕಳನ್ನು ತೊಂದರೆ 33 ಕುದುರೆಗಳ ಜುಲ್ಮಾನೆ; ಸ್ವಂತ ಹೆಂಡತಿ ಮಕ್ಕಳನ್ನು ಕೊಂದರೆ ಜುಲ್ಮಾನೆಯಿಲ್ಲ; ಅದು ಗಂಡನ ಜನ್ಮಸಿದ್ಧ ಹಕ್ಕು ಎಂದು ಪರಿಗಣಿಸಲಾಗುತ್ತದೆ.

೧೯೬೦ರಲ್ಲಿ ಚಂದ್ರಲೋಕ ಸಂಚಾರದ ಸಿದ್ಧತೆ

ಕೆನಡದ ವಿಜ್ಞಾನಿಗಳ ಯೋಜನೆ

ಕೆನಡದ ರೊಕೆಟ್ (ಆಕಾಶ ಬಾಣ) ಸಂಶೋಧಕರು 1960ರಲ್ಲಿ ಚಂದ್ರಲೋಕ ದತ್ತ ಪ್ರಯಾಣವನ್ನು ಮಾಡಲು ಸಿದ್ಧತೆ ನಡೆಸುತ್ತಲಿರುವರು. ಈ ಕುರಿತು ಇನ್ನೂ ಅನೇಕ ನಿರ್ಣಯಗಳೂ, ಯೋಜನೆಗಳೂ ತಯಾರಾಗಲಿವೆ ಎಂದು ಅವರ ಅಧ್ಯಕ್ಷರಾದ ಮಿ॥ ಮೊರಿಸ್ ಡ್ಯಾಕರವರು ತಿಳಿಸುತ್ತಾರೆ. "ಇದರ ಖರ್ಚಿಗೆ ನೂರಾರು ಮಿಲಿಯ ಡಾಲರುಗಳಷ್ಟಾಗುವುದು. ಮತ್ತು 1960ನೇ ಇಸವಿಯು ಪ್ರಯಾಣದ ನಿಶ್ಚಿತ ವರ್ಷವೆಂದು ಅಂದಾಜು ಮಾಡಲಾಗಿದೆ" ಎಂದೂ ಅವರು ತಿಳಿಸಿದರು.

ಚಂದ್ರಲೋಕ ಯಾತ್ರೆಯ ಈ ಅಗಸ ಹಡಗು ಇನ್ನೂ ರಚಿತವಾಗಲಿದೆ. ಅದು ಬಾಣಾಕೃತಿಯಲ್ಲಿರುವುದು. 200 ಅಡಿ ಉದ್ದವೂ, 50 ಅಡಿ ಸುತ್ತಳತೆಯದೂ ಮತ್ತು 1000 ಟನ್ ಭಾರವುಳ್ಳದ್ದೂ ಆಗಿರುವುದು.

ಪ್ರಯಾಣ ಪ್ರಾರಂಭದ ಸ್ಥಳ

ಭೂಮಿಯ ಸರ್ದಾಸ್ಪನಾಕ್ಷ ಯಾನವು ಪ್ರದೇಶದಿಂದ ಆಕಾಶ ಬಾಣವು ಏಸೆಯಲ್ಪಡಬೇಕೆಂಬ ವಿಷಯವು ಇನ್ನೂ ನಿಶ್ಚಿತವಾಗಿಲ್ಲ. ಆದರೆ ಭೂಮಧ್ಯರೇಖೆಯ ಬಳಿಯ ಯಾವುದಾದರೊಂದು ಸ್ಥಳವು ಹೆಚ್ಚು ಅನುಕೂಲದ್ದೆಂದು ಪರಿಗಣಿಸಲಾಗಿದೆ. ಇದರಿಂದ ಆಕಾಶ ಬಾಣಕ್ಕೆ ಭೂಮಿಯ ತಿರುಗುವಿಕೆಯ ಸಂಪೂರ್ಣ ಅನುಕೂಲ ದೊರೆತು ಪ್ರಯಾಣ ಪ್ರಾರಂಭವು ಸುಲಭವಾಗುವುದು. ಚಂದ್ರಲೋಕದಿಂದ ಹಿಂದಕ್ಕೆ ಬರುವುದು ಇನ್ನೊಂದು ಸಮಸ್ಯೆ. ಆದರೆ ಆಕಾಶ ಬಾಣದ ಹಿಂಭಾಗಕ್ಕೆ ದೂರದರ್ಶಕ ಉಪಕರಣವು ಜೋಡಿಸಲ್ಪಟ್ಟ 'ಕಾಲು'ಗಳನ್ನು ಸಂಯೋಜಿಸುವ ವಿಧಾನವನ್ನು ಕಂಡುಹಿಡಿದಿರುವುದರಿಂದ ಈ ಸಮಸ್ಯೆ ನೀಗಬಹುದು. ಚಂದ್ರಗ್ರಹದ ನೆಲಕ್ಕೆ ಮುಟ್ಟಿದಾಗ ಈ "ಕಾಲು"ಗಳಲ್ಲಿನ ಉಪಕರಣಗಳು ಹಿಂದಕ್ಕೆ ಬರುವ ಕೆಲಸವನ್ನಾರಂಭಿಸುವವು.

ಚಂದ್ರಲೋಕ ಪ್ರಯಾಣಕ್ಕೆ ಎರಡು ಹಾದಿಗಳಿವೆ. ಒಂದು ನೇರವಾದ ಹದಿನೈದು ಗಂಟೆಗಳ ದಾರಿ; ಇನ್ನೊಂದು ಅಡ್ಡ ಸುತ್ತಾಗಿ ಹೊದುಹೋಗುವಂತಹುದು. ಇದಕ್ಕೆ ನಾಲ್ಕು ದಿನಗಳು ಹಿಡಿಯುವವು.

ಬ್ರಿಟಿಷ್ ಗ್ರಹ ವಿಜ್ಞಾನ ತಜ್ಞರಾದ ಮಿ॥ ಕೆನೆತ್ ಗುಟ್ಲೆಂಡರು ಹೀಗೆ ತಿಳಿಸುತ್ತಾರೆ: "ಚಂದ್ರಗ್ರಹದ ನೆಲಸ್ಪರ್ಶವನ್ನು ತಲ್ಪುವುದರಿಂದಲೆ ಯಾವ ವೈಜ್ಞಾನಿಕ ಉದ್ದೇಶ ಸಾಧನೆಯಾಗುವುದಿಲ್ಲ. ನನ್ನ ಆಕಾಶ ಬಾಣದ ಪಯಣವು ಚಂದ್ರಲೋಕದ ಆಕರ್ಷಣ ಶಕ್ತಿಯನ್ನು ವಿಫಲ ಅದರ ಸುತ್ತು ಬಳಸಿಕೊಂಡು ಹೋಗುವಂತಾಗಬೇಕು. ಇದರಿಂದ ಆಕಾಶಬಾಣದೊಳಗಿನ ದೃಶ್ಯ ಪ್ರಸಾರದ ಉಪಕರಣಗಳು ನಾವಿದುವರೆಗೂ ಕಾಣದ ಚಂದ್ರನ ಆ ಕಡೆಯ ಭಾಗದ ನೋಟವನ್ನೂ ಜಗತ್ತಿನ ಕಡೆಗೆ ಕಳುಹಿಸಲು ಸಹಾಯವಾಗುವುದು."

ಹಿಮಾಲಯವನ್ನು ಜಯಿಸುವ ಪ್ರಯತ್ನ

ದಾಲೈಲಾಮನ ಅನುಮತಿಯಿಲ್ಲ

ಹಿಮಾಲಯದ ಕೈಲಾಸ ಶಿಖರವನ್ನೇರಲು ಹೊಸದಾಗಿ ಪ್ರಯತ್ನಗಳಾಗಬಹುದೆಂದಿದ್ದ ಊಹಾಪೋಹದ ಸುದ್ದಿಗಳು ಈಗಿಗ ಹೆಚ್ಚೆಚ್ಚು ಸ್ಪಷ್ಟವಾಗಿ ಕೇಳಿಬರುತ್ತಿವೆ.

1936ರಲ್ಲಿ ಹ್ಯೂಗ್ ರಟ್ಲೆಜ್ ಎಂಬವರು ನಾಡಿದ ದಿಗ್ವಿಜಯಾನಂತರ ಈಗ ಬ್ರಿಟಿಷ್ ಪರ್ವತಾರೋಹಣ ತಜ್ಞರು ಮಾಡುತ್ತಿರುವ ಯೋಜನೆಗಳು ಮೊದಲನೆಯವುಗಳು. ಭೀಕರವೆಂದೆನಿಸಲ್ಪಡುವ ಗೌರಿಶಂಕರ ಶಿಖರದ ಕುರಿತಾಗಿ ಈಗಾಗಲೆ ಹೇರಳವಾದ ವಿಷಯ ಸಂಗ್ರಹವನ್ನು ಮಾಡಲಾಗಿದೆ. ಈ ಮುಂಚೆ ಮಾಡಲ್ಪಟ್ಟ ನಾಲ್ಕು ಅಯಶಸ್ವಿ ಆರೋಹಣಗಳ ಅನುಭವವೂ ಒಟ್ಟುಗೂಡಿಸಲಾಗಿದೆ. 1933ರಲ್ಲಿ ಕೆಲವು ನೈಮಾನಿಕರು ಗೌರಿಶಂಕರದ ಮೇಲಿನಿಂದ ಹಾರಿದ್ದರ ಅನುಭವವನ್ನೂ ಜೊತೆಗೆ ಕಳೆದ ಯುದ್ಧದ ಎತ್ತರ ಹಾರುವಿಕೆಯ ಅನುಭವವನ್ನೂ ಪಡಕೊಂಡ ಹೊಸ ಸಾಹಸಿಗರ ಯತ್ನವು ಫಲಕಾರಿಯಾಗಬಹುದೆಂದು ನಿರೀಕ್ಷೆಯಿದೆ. ಈ ಸಲದ ಪ್ರಯತ್ನದ ಸಲಕರಣೆಗಳೂ ಅತೀ ಹೆಚ್ಚಾಗಿ ಶೇಖರಿಸಲ್ಪಟ್ಟಿವೆ.

ಲಾಮನ ಸಕಾರ

ಇಷ್ಟಾದರೂ ಆರ್ಥೋಡ್ ಟ್ರೆಲರ್ ಎಂಬ ಬ್ರಿಟಿಷ್ ಪತ್ರಿಕಾ ಪ್ರತಿನಿಧಿಗಳೊಬ್ಬರು "ದುರ್ದೈವ ನಶಾತ್ ಹಿಮಾಲಯವನ್ನು ಏರುವ ಯೋಜನೆಯು ಕೆಲವು ವರ್ಷಗಳ ತನಕ ಕಾರ್ಯರೂಪಕ್ಕೆ ಬರುವುದು ಅಸಂಭವ"ವೆಂದು ನಿರಾಶಾವಾದವನ್ನು ಸೂಚಿಸಿದ್ದಾರೆ. ಕಾರಣ ಅನೇಕ ಅಭ್ಯಂತರಗಳು ಬಂದೊದಗಿವೆಯಂತೆ. ಇವುಗಳಲ್ಲಿ ಮುಖ್ಯವಾಗಿ ತಿಬೇಟಿನ ಅಧಿಪತಿಯಾದ ತರುಣ ದಾಲೈಲಾಮನ ಆಕ್ಷೇಪವು ಒತ್ತಿಹೇಳಲಾಗಿದೆ. 1947ರಲ್ಲಿ ಹತ್ತು ವರ್ಷದ ಬಾಲಕನಾಗಿರುವಾಗಲೇ ಲಾಮನು ಒಂದು ಹಿಮಾಲಯ ಆರೋಹಣ ಪಂಗಡಕ್ಕೆ ಅನುಮತಿಯನ್ನು ತಿರಸ್ಕರಿಸಿದನಂತೆ. ಈಗಿನ ಹೊಸ ಪ್ರಯತ್ನಕ್ಕೂ ಆತ ತನ್ನ ಆಕ್ಷೇಪನೆಯನ್ನು ಸೂಚಿಸಿರುವನಂತೆ.

ಅದೂ ಅಲ್ಲದೆ ಸದ್ಯಕ್ಕೆ ಇಂತಹ ಸಾಹಸಕ್ಕೆ ಬೇಕಾದಷ್ಟು ಹಣವೂ ಅನುಭವವೂ ಇರುವ ಆರೋಹಣ ತಜ್ಞರೂ ಇಲ್ಲವಂತೆ. ಹಿಂದೆ ಈ ಸಾಹಸದಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ಮುದುಕರೂ ಆಗಿರುವರು, ಮತ್ತೆ ಕೆಲವರು ಪ್ಯೂತಪಟ್ಟಿರುವರು. ಆಲ್ಪ್ಸ್ ಪರ್ವತಗಳನ್ನು ಏರಿದ ಕೆಲ ತರುಣರಿಗೆ ಹಿಮಾಲಯದಂತಹ ನಗಾಧ ರಾಜನ ಪಟ್ಟವೇರುವ ವಿಧಾನದ ತರಬೇತು ಇನ್ನೂ ಕೊಡಬೇಕಾಗಿದೆ. ಬ್ರಿಟಿಷಿನ ಹಿಮಾಲಯ ಸಂಘದವರು ಈ ಕುರಿತು ಅವಿಶ್ರಾಂತ ಶ್ರಮ ವಹಿಸುತ್ತಿದ್ದು ಇದು ತನಕ ಕೇವಲ ಒಬ್ಬಿಬ್ಬ ಸಮರ್ಥರು ಮಾತ್ರ ಅವರಿಗೆ ದೊರಕಿರುವರು.

ವಿಜ್ಞಾನಿಗಳ ಸಂದರ್ಶನ

ಇತ್ತೀಚೆಗೆ ವಿಜ್ಞಾನಿಗಳ ಕೂಟವೊಂದು ನೇಪಾಲಕ್ಕೆ ಬೇಟಿಯಿತ್ತ ಸಂಗತಿಯು ಹೊಸ ಸಾಹಸದ ಯೋಜನೆಕರ್ತರ ಹಾರೈಕೆಗಳನ್ನು ಪುನಃ ಚಿಗುರಿಸಿದೆ. ದಾಲೆಲಾಮನು ತನ್ನ ಆಕ್ಷೇಪನೆಯನ್ನು ಸಡಿಲಿಸಿರುವನೆಂಬುದಕ್ಕೂ ಈ ಸಂಗತಿಯು ನಿದರ್ಶನವೆಂದು ತರ್ಕವಾಗಿ ಊಹಿಸಲಾಗಿದೆ. ಆದರೆ ನೇಪಾಲದ ಗಡಿದಾಟಿ ತಿಬೇಟಿನ ರಾಜ್ಯದಲ್ಲಿ ಕಾಲಿರಿಸಬೇಕಾಗಿ ಮೇಲ್ಕಂಡ ವಿಜ್ಞಾನಿಗಳಿಂದ ಅವರು ಕೇವಲ ಭೌಗೋಳಿಕ ಮತ್ತು ಸಸ್ಯಶಾಸ್ತ್ರ ಸಂಬಂಧವಾದ ಚಟುವಟಿಕೆಗಳನ್ನಷ್ಟೇ ಕೈಕೊಳ್ಳುವರೆಂಬ ಶರ್ತಕ್ಕೆ ಒಪ್ಪಿಸಲಾಗಿದೆ. ಈ ವಿಜ್ಞಾನಿಗಳಲ್ಲಿ ಕೆಲವರು ಪರ್ವತ ಆರೋಹಣ ತಜ್ಞರೂ ಸಹಜವಾಗಿದ್ದರು. ಕಾರಣ ಅವರು ಪರಿಶೀಲಿಸಲಿಕೆಯಿದ ಪ್ರದೇಶವು ಅಸಾಧಾರಣ ಪರ್ವತ ಶ್ರೇಣಿಯದಾಗಿತ್ತು. ಈ ಎಲ್ಲ ಸಂಗತಿಗಳಿಂದ 29 ಸಾವಿರ ಅಡಿ ಎತ್ತರದ ಹಿಮವತ್ಪರ್ವತದ ಶಿಖರವನ್ನೇರುವ ಸಾಹಸವು ಇನ್ನೂ ಕೆಲವು ವರ್ಷಗಳ ಮಟ್ಟಿಗಾದರೂ ಅಸಾಧ್ಯವೆ ಎಂದು ತೋರುತ್ತದೆ. ಆದರೆ ಯೋಜಕರು ಒಳ್ಳೇ ಸಂದರ್ಭವನ್ನು ನಿರೀಕ್ಷಿಸುತ್ತಲೇ ಇರುವರು. ಮತ್ತು ಅದು ಸಿಕ್ಕಿದಾಗ ಅವರು ಪ್ರಯತ್ನಗಳನ್ನು ಶಿಥಿಲಗೊಳಿಸಲಾರರೆಂದೂ ಹಾರೈಸಲಾಗಿದೆ.

ಬ್ರಿಟಿಸಿನ ಕೆಶ್ಯಾಯರಿನ ಬ್ಯಾಟನ್ ನಗರದಲ್ಲಿ ಪ್ರದರ್ಶನವಾಡುತ್ತಿದ್ದ ಸರ್ಕಸಿನ ಒಂದು ಆನೆ "ಸಂಪು" ಹಿಡಿದಿದೆ. ಕಾರಣ ಅದರ ಪ್ರೀತಿಯ ನಾಪುತನ ಕೈಯನ್ನು ಅದೇ ಸರ್ಕಸಿನ ಸಿಂಹವೊಂದು ವರಚಿ ಘಾಯಗೊಳಿಸಿದಕ್ಕೆ ಅವನನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ಗುಣಹೊಂದಿ ಬರುವ ತನಕ ಸರ್ಕಸಿನ ಕಾರ್ಯಕ್ರಮದಲ್ಲಿ ಆನೆಯಾಟವಿರಲಿಲ್ಲ.

✠

ಬಸ್ಸು ಪ್ರಯಾಣಿಕರ ಅವಗಾಹನೆಗೆ

ಪ್ರತಿದಿನ ಮಂಗ್ಳೂರಿಂದ ಬೆಳಿಗ್ಗೆ ಘಂಟೆ **5** ಮತ್ತು **5-30**ಕ್ಕೂ, ಮುಲ್ಕಿಯಿಂದ ಕೂಡಾ ಬೆಳಿಗ್ಗೆ **5** ಘಂಟೆಗೂ, ಮುಂಬ್ಯಾಗೆ ಬರೇ **36** ಘಂಟೆ ಸಮಯದಲ್ಲಿ ತಲ್ಪುವಂತೆ ಮಂಗ್ಳೂರು ದಿ. ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಯವರು ಸರ್ವಿಸುಗಳನ್ನು ಕ್ರಮಪ್ರ ಸಮಯದಲ್ಲಿ — ಮಂಗ್ಳೂರು ಮತ್ತು ಮೂಲ್ಕಿಯಿಂದ ಹೊರಡಿಸಿ ಕಡೂರಿಗೆ ಮಧ್ಯಾಹ್ನ **2-30**ರೊಳಗೆ ತಲ್ಪಿ ಅಲ್ಲಿಂದ ಕೂಡೇ ಹೊರಡುವ ರೆಲ್ವೆಯಲ್ಲಿ ಮುಂಬ್ಯಾಗೆ ಸೀದಾ ತಲ್ಪುವ ವಿರ್ಪಾಡು ಮಾಡಿರುತ್ತದೆ. ಟಿಕೇಟುಗಳು ಮಂಗ್ಳೂರು ಮತ್ತು ಮೂಲ್ಕಿ ಆಫೀಸಿನಲ್ಲಿ ಸರ್ವಿಸು ಬಿಡುವ ಎರಡು ದಿವ್ಸಕ್ಕೆ ಮುಂಚಿತವಾಗಿಯೇ ದೊರಕುವಂತೆ ರಿಜರ್ವೆಶನ್ ಆಫೀಸು ಕೂಡಾ ಪ್ರತೀ ದಿವಸ ಬೆಳಿಗ್ಗೆ ಘಂಟೆ 9ರಿಂದ ಶ್ಯಾಮ 6 ಘಂಟೆ ವರೆಗೂ ತೆರೆಯಲ್ಪಟ್ಟಿದೆ. ಜಿಲ್ಲೆಯ ಇತರ ಲ್ಯಾನುಗಳಿಗೆ ಕೂಡಾ ಮಂಗ್ಳೂರಿನಲ್ಲಿ ಒಂದು ದಿವ್ಸಕ್ಕೆ ಮುಂಚಿತವಾಗಿ — ಟಿಕೇಟುಗಳು ಸಿಗುವ ವಿರ್ಪಾಡು ಕೂಡಾಲು ಂಟು.

ಎ. ಸೂಚನೆ:— ಪ್ರಯಾಣಿಕರು ತಮ್ಮೊಂದಿಗೆ ಆದಷ್ಟು ಸಾಮಾನನ್ನು ಕಡಿಮೆ ಒಯ್ಯೋಣಾಗಬೇಕಾಗಿ ವಿನ್ಂತಿ.

ಮಂಗಳೂರು
24-8-49

ಜೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

ಎಲ್ಲಾದರೇನೆಂತೆ?

ಗ್ರಾಹಕರ ಹಿತಕ್ಕಾಗಿ, ನೈಸರ್ಗಿಕ ಸೌಕರ್ಯಗಳನ್ನು ಪೂರ್ತಿಯಲ್ಲಿಟ್ಟುಕೊಂಡೇ ಇವುಗಳಲ್ಲಿ ಅತ್ಯುತ್ಕೃಷ್ಟವಾದುದನ್ನು ಧಾರಕ ಶ್ರೇಂದ್ರ ಸರಕಾರವು ಜರಿಸುವುದೆಂಬ ಧೃಢವಾಗಿ ಭರವಸೆ ಇಮಗಿದೆ. ಅದು ಕಾರಣ "ಇದೇ ಪ್ರಬುದ್ಧ ಬಂದರಾಗಬೇಕು, ಇದು ಆಗಬಾರದು" ಎಂದು ಸೂಚಿಸುವವರು ಮಾನಲ್ಲಿ ಸಮಗ್ರ ಬ್ಯಾಂಕಿನ ಜಿತವನ್ನು ವಿಶಾಲ ದೃಷ್ಟಿಯಿಂದ ಪರಿಶೀಲಿಸುವ ಮನೋವೃತ್ತಿ ನಮ್ಮದು.

ಸೂಚನೆ ಪ್ರಬುದ್ಧ ಬಂದರು ಯಾವುದೇ ಇರಲಿ, ಪಶ್ಚಿಮ ಕರಾವಳಿಯಲ್ಲಿರುವ ಕುಂದಾಪುರ, ಮಲ್ಪೆ, ಮಂಗಳೂರು, ಕಾಸರಗೋಡು, ಕಲಬೇರಿ, ಕಲ್ಲಿಕೋಟೆ, ಕೊಚ್ಚಿ ಹಾಗೂ ಅದರಿಂದಾಚೆಗಿನ ಪ್ರದೇಶ ಮುಖ್ಯವಾಗಿ, ಧಾರವಾಡ, ಸಾಗರ, ತೀರ್ಥಹಳ್ಳಿ, ಶಿವಮೊಗ್ಗಾ, ಹಾಸನ, ಸಕಲೇಶಪುರ, ಮಡಿಕೇರಿ, ವಿರಾಜಪೇಟೆಗಳಲ್ಲಿರುವ ನಮ್ಮ ಶಾಖೆಗಳು ಬಂದರಿನ ಆರ್ಥಿಕಅಭಿವೃದ್ಧಿಗೆ ಸದಾ ನೆರವು ನೀಡಲು ಸಿದ್ಧವಿರುವುದನ್ನು ತಿಳಿಸಲು ಬಹಳ ಸಂತೋಷಪಡುತ್ತೇವೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್, ಉಡುಪಿ ದ. ಕ.

The Canara Banking Corporation Ltd.

ESTD. 1906



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳಕಡ್ಡಿ, ವಿಷ್ಟ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದ್ರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ

ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಬೆಂಗಳೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರೆ, ಮಂಗಳೂರು, ಮದ್ರಾಸು ಮತ್ತು ಟ್ರಿವೆಂಡ್ರಂಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharaja Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ಸುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹುವ ವಿಷ್ಟ ಔಷಧಿ. ಗರ್ಭಕೋಶದ ಪಿಡುಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕುಂಟುವುದು. ಸೂತಿಕಾ ರೋಗಗಳನ್ನು ಪರಿಹರಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಜಾಡ್ಯ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮುರಾರಜಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ